ಶೀ:- ತೆಂಲುಗಿಯೊ ಮೊಯಿಲು

ಲೇ:- ಸುಬ್ಬರಾವು

1953

1953

ಪುಸ್ತಕದ ವಿಷಯವಾಗಿ

ಸುಮಾರು ಇನ್ನೂರು ಎಂಬತ್ತು ವರುಷಗಳ ಹಿಂದಿನ ಮಾತು. ಗಂಡು ಸಂತಾನವಿಲ್ಲದ ಪಾಳೆಯಗಾರ ಮದಕರಿನಾಯಕರ ನಿಧನ ದಿಂದ ಚಿತ್ರದುರ್ಗದ ಸಿಂಹಾಸನ ಬರಿದಾಯಿತು. ಅಣ್ಣನ ಮಕ್ಕಳಾದ ಲಿಂಗಣ್ಣನಾಯಕ ಚಿಕ್ಕಣ್ಣನಾಯಕರು ನ್ಯಾಯವಾದ ಹಕ್ಕುದಾರ ರಾಗಿದ್ದರೂ ಗತಿಸಿದ ರಾಜರ ಇಚ್ಛೆಯಂತೆ ರಾಣಿ ಗೌರವ್ವನಾಗತಿಯ ತಮ್ಮ ಓಬಣ್ಣನಿಗೆ ಅರಮನೆಯವರು ಪಟ್ಟ ಕಟ್ಟಿದರು. ಆ ಘಟನೆ ಯಿಂದ ಪ್ರಜೆಗಳಲ್ಲಿ, ಸೈನ್ಯದಲ್ಲಿ ಅಸಮಾಧಾನದ ಅಂಕುರಾರ್ಪಣ ವಾಯಿತು. ಸೈನಿಕರಿಗೆ ಪಟ್ಟಗಾಣಿಕೆ ಪೂರ್ತಿಯಾಗಿ ಸಲ್ಲದುದು ಅಸ ಮಾಧಾನವನ್ನು ಅಪಾಯಪರಿಸ್ಥಿತಿಗೆ ಮಾರ್ಪಡಿಸಿತು. ದಳವಾಯಿ ದೇಸಣ್ಣನ ಕೊಲೆಯೊಂದಿಗೆ ದುರ್ಗದಲ್ಲಿ ಮಾರಣ ಹೋಮ ಮೊದ ಲಾಯಿತು; ರಕ್ತದ ಕಾಲುವೆ ಹರಿಯಿತು. ಸೈನಿಕರಿಂದ ರಾಜ ಓಬಣ್ಣನ ಕಗ್ಗೊಲೆಯಾಯಿತು.

ದಂಗೆಯ ಬಿರುಗಾಳಿಗೆ ಸಿಕ್ಕ ಒಂದು ಚಿಕ್ಕ ಚೊಕ್ಕ ಸಂಸಾರ ಒಡೆಯಿತು. ಅಣ್ಣತಮ್ಮಂದಿರ ಬಾಳು ಇಬ್ಬಗೆಯಾಗಿ, ರಕ್ತದ ಕಾಲುವೆ ಅಲ್ಲಿಗೂ ಹರಿಯಿತು. ರಾಜರ ಅಂಗರಕ್ಷಕನಾಗಿದ್ದ ಅಣ್ಣ ಪ್ರಭುವಿನ ಕೊಲೆಯಾದ ಮೇಲೆ ತನ್ನ ದೇಹವನ್ನು ತನ್ನ ಕತ್ತಿಗೇ ಬಲಿ ಕೊಟ್ಟ. ಸೈನ್ಯದ ಮುಖ್ಯ ಸರದಾರನಾಗಿದ್ದ ತಮ್ಮ ಅಣ್ಣನ ರಕ್ತದೇಹವನ್ನು ಹೊತ್ತು ಮನೆಗೆ ಬಂದ ಹೊಲದಲ್ಲಿ ಪೈರು ಕಾಳು ತುಂಬಿ ಕುಯಿಲಿಗೆ ಸಿದ್ಧವಾಗಿ ತೂರಾಡುತ್ತಿತ್ತು. ಆದರೆ ಯುದ್ಧದ, ವೈಷಮ್ಯದ ರಕ್ತ ದಾಹದ ಫಲವಾಗಿ ಮನೆಗೆ ಬಂದುದು 'ಕಂಬನಿಯ ಕುಯಿಲು'.

Mr. K. Srinivasa Rao
Sundar Cafe Boarding House
HOSPET.

ಕಂಬನಿಯ ಕುಯಿಲು

ಇದೇ ಲೇಖಕರ ಇತರ ಕಾದಂಬರಿಗಳು

ಮನೆಗೆ ಬಂದ ಮಹಾಲಕ್ಷ್ಮಿ
ಜೀತದ ಜೀವ
ಪಾರಿಜಾತ
ಬೇಡದ ಮಗು
ಪುರುಷಾವತಾರ
ಮುಂಜಾವಿನಿಂದ ಮುಂಜಾವು
ಬೆಂಕಿಯ ಬಲೆ
ಹಂಸ ಗೀತೆ
ನೃಪತುಂಗ
ಮಸಣದ ಹೂವು
ಬಿಡುಗಡೆಯ ಬೇಡಿ
ರಕ್ತರಾತ್ರಿ
ಕೇದಿಗೆ ವನ
ಮೊದಲ ನೋಟ

ತ. ರಾ. ಸು.

ಕಂಬನಿಯ ಕುಯಿಲು

ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್
ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಮೊದಲನೆಯ ಮುದ್ರಣ ೧೯೫೩
ಎರಡನೆಯ ಮುದ್ರಣ ೧೯೫೮

ಬೆಲೆ: ರೂ. ೧—೮—೦

ಮುದ್ರಕರು:
ಜಿ. ಎಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,
ಮೈಸೂರು

ಮುನ್ನುಡಿ

'ಕಂಬನಿಯ ಕುಯಿಲು' ಕಾದಂಬರಿಯನ್ನು ನನ್ನ ಅಭಿಮಾನೀ ವಾಚಕ ವೃಂದಕ್ಕೆ ಅರ್ಪಿಸುವ ಅವಕಾಶ ದೊರೆತಿರುವುದು ನನಗೆ ಇಬ್ಬಗೆಯಲ್ಲಿ ಸಂತೋಷಕ್ಕೆ ಕಾರಣವಾಗಿದೆ.

ಈ ಕಾದಂಬರಿಯ ಕಥಾವಸ್ತು ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದುದು. ಚಿತ್ರದುರ್ಗದ ಇತಿಹಾಸದ ಆಕರಗ್ರಂಥಗಳಲ್ಲಿ ಈ ಘಟನೆಯ ಬಗ್ಗೆ ದೊರೆಯುವಂಥ ವಿವರ ತೀರಾ ಅಲ್ಪ. ದಿವಂಗತ ಶ್ರೀ ಎಂ. ಎಸ್. ಪುಟ್ಟಣ್ಣನವರು "ಚಿತ್ರದುರ್ಗದ ಪಾಳೆಯಗಾರರು" ಎಂಬ ಗ್ರಂಥದಲ್ಲಿ ದೊರೆಯುವುದು ಕೇವಲ ನಾಲ್ಕು ಸಾಲು. "ಚಿತ್ರದುರ್ಗದ ಬಖೈರು" ಎಂಬ ಕೈಬರೆಹದ ಪುಸ್ತಕದಲ್ಲಿ ದೊರೆತುದೂ ಇಷ್ಟೆ.

ಅಷ್ಟು ಕಥಾವಸ್ತುವಿಗೆ, ಇತಿಹಾಸದಲ್ಲಿ ದೊರಕುವ ಬೇರಷ್ಟು ವಿವರವನ್ನು ಬೆರೆಸಿ, ಅದರೊಂದಿಗೆ ನನ್ನ ಕಲ್ಪನೆಯನ್ನು ಧಾರಾಳವಾಗಿ ಬೆರೆಸಿ ಈ ಕಾದಂಬರಿಯನ್ನು ಹೆಣೆದಿದ್ದೇನೆ. ಈ ಪಾಕ ಎಷ್ಟರಮಟ್ಟಿಗೆ ರುಚಿಯಾಗುವುದೋ ಬಿಡುವುದೋ ವಾಚಕರು ಹೇಳಬೇಕು.

ಇದು ಚಿತ್ರದುರ್ಗದ ಇತಿಹಾಸ ಭಿತ್ತಿಯ ಮೇಲೆ ರಚಿಸಲೆಳಸಿರುವ ಕಾದಂಬರಿ ಮಾಲೆಯಲ್ಲಿ ಮೊದಲನೆಯದು. 'ಕಂಬನಿಯ ಕುಯಿಲು'ಗೆ ಪೂರಕವಾಗಿ, ದಳವಾಯಿ ಮುದ್ದಣ್ಣನ ಕೊನೆಯ ದಿನಗಳನ್ನು ಚಿತ್ರಿಸುವ "ರಕ್ತರಾತ್ರಿ" ಎಂಬ ಕಾದಂಬರಿಯನ್ನು ಇಷ್ಟರಲ್ಲೇ ವಾಚಕರ ಮುಂದಿಡುತ್ತೇನೆ.

ಸುಲಭ ಬೆಲೆಯಲ್ಲಿ ಸರ್ವರಿಗೂ ಸಾಹಿತ್ಯ ದೊರಕುವಂತೆ ಮಾಡುವ ಉದ್ದೇಶದಿಂದ ಆರಂಭವಾದ, ತಮ್ಮ ವಿದ್ಯಾನಿಧಿ ಪ್ರಕಾಶನದಲ್ಲಿ ಈ ಕಾದಂಬರಿಯನ್ನು ಪ್ರಕಟಿಸುತ್ತಿರುವ, ಮೆ|| ಎಚ್. ವೆಂಕಟರಾಮಯ್ಯ ಅಂಡ್ ಸನ್ಸ್ ಅವರಿಗೂ, ಇದು ಬರೆದ ಮೊದಲಿನಿಂದ ಮುಕ್ತಾಯವಾಗುವ ವರೆಗೂ ಇದರಲ್ಲಿ ಆಸಕ್ತಿಯನ್ನು ತೋರಿಸಿದ ರಾ. ವೆಂ. ಶ್ರೀನಿವಾಸರಿಗೂ, ಈ ಕಾದಂಬರಿಯನ್ನು ರಚಿಸುವಲ್ಲಿ ಅಗತ್ಯವಾದ ಕೆಲವು

ಪುಸ್ತಕಗಳನ್ನು ದೊರಕಿಸಿಕೊಟ್ಟ ನನ್ನ ಮಾನ್ಯ ಮಿತ್ರ ಶ್ರೀ ಹೆಚ್. ದೇವೀರಪ್ಪ ಮತ್ತು ಶ್ರೀ ಹುಲ್ಲೂರು ಶ್ರೀನಿವಾಸಜೋಯಿಸರಿಗೂ ನಾನು ಋಣಿ.

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್. ರಾಮರಾಯರ ಉತ್ಸಾಹ ಈ ಪುಸ್ತಕ ಬಹು ಬೇಗ ಹೊರಬರಲು ಕಾರಣ ವಾಗಿದೆ. ಅವರಿಗೂ ನನ್ನ ವಂದನೆಗಳು.

ಮೈಸೂರು
೧–೧೦–೧೯೫೩

ತ. ರಾ. ಸು.

ಅರಮನೆಯಲ್ಲಿ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಗಳು ಸಾವಿರದ ಐದುನೂರು ತೊಂಭತ್ತಾರನೆಯ ಆನಂದ ಸಂವತ್ಸರ ಪುಷ್ಯ ಶುದ್ಧ ಪೌರ್ಣಮಿಯ ದಿನ—

ಮುಗಿಲಂಗಳದ ಮೇಘಸರೋವರದಲ್ಲಿ ಬಿಳಿ ನೈದಿಲೆಯಂತೆ ಅರಳಿದ ತುಂಬು ಚಂದಿರನ ತಿಂಗಳ ಕಾಂತಿ ಚಿತ್ರದುರ್ಗದ ಬೆಟ್ಟದ ಸಾಲಿನ ಸಪ್ತ ಶೃಂಗಗಳನ್ನೂ ಧವಳ ಕಾಂತಿಯಲ್ಲಿ ಮೀಯಿಸಿ, ಕೋಡುಗಲ್ಲು, ಬುರುಜು, ಬತೇರಿ, ಕೋಟೆ, ಕೊತ್ತಲ, ದೇವಾಲಯದ ಶಿಖರಗಳಿಗೆ ಹೊಳೆವ ಬೆಳ್ಳಿಯ ರಸಲೇಪ ಮಾಡಿರಲು—

ಅರಮನೆಯ ಪಂಚಕಲಶಗಳು ಬೆಳುದಿಂಗಳ ಬೆಳಕಿನಲ್ಲಿ ಥಳಥಳಿಸಿ ಹೊಳೆಯುತ್ತಿರಲು—

ಇದ್ದಕ್ಕಿದ್ದಂತೆಯೇ ಅರಮನೆಯ ಹೃದಯಾಂತರಾಳದಲ್ಲಿ ಕಗ್ಗತ್ತಲು ಕವಿಯಿತು.

ನೆರೆಗಾಲದ ಹೊಳೆಯಂತೆ ಭೋರೆಂದು ಉಕ್ಕಿಬಂದ ಅಂತಃಪುರಸ್ತ್ರೀ ಜನದ ರೋದನದ ನೀಳ್ದನಿಯ ಉರಿ ಸೋಕಿದಂತೆ, ಬಾವುಟದ ಬತೇರಿಯ ಮೇಲೆ ಆಡುತ್ತಿದ್ದ ಬಾವುಟ ಬಾಡಿ ಕೆಳಗಿಳಿಯಿತು.

ಛಾವಣಿಯ ಅಡಿಯಲ್ಲಿ, ಬಂಡೆಗಳ ಮರೆಯಲ್ಲಿ ಹುದುಗಿಕೊಂಡ ಕತ್ತಲೆಯಂತೆ, ಪೇಟೆ ಕೋಟೆಯಲ್ಲಿ ಆಡುತ್ತಿದ್ದ ಸದ್ದಡಗಿ ಮೌನ ಕವಿಯಿತು.

ಶೋಕ ಸೂಚಕ ಕಹಳೆ, ಭೇರಿಗಳು ಮೊಳಗಿ ಮೌನವನ್ನು ಮಥಿಸಿ, ಮತ್ತಷ್ಟು ಗಾಢವಾದ ಮೌನವನ್ನು ಹರಡಿದುವು.

ಲಾಯದಲ್ಲಿ ಬಿಗಿದ ಆನೆ, ಕುದುರೆಗಳೂ ಕಂಬನಿಗರೆದುವು.

ಶ್ರೀಮನ್ಮಹಾನಾಯಕಾಚಾರ್ಯ, ಕಾಮಗೇತಿ ಕಸ್ತೂರಿ, ವೀರ ಮತ್ತೀ ಕುಲತಿಲಕ, ಹಗಲುಕಗ್ಗೊಲೆ ಮಾನ್ಯ, ಗಾದ್ರಿಮಲೆ ಹೆಬ್ಬುಲಿ,

ಗಂಡುಗೊಡಲಿ, ಸರ್ಜ ಸಂಸ್ಥಾನ ಚಿತ್ರದುರ್ಗ, ರಣವೀರ ಇಮ್ಮಡಿ ಮದ ಕರಿ ನಾಯಕರು ದಿವಂಗತರಾದರು.

ಸಿಡಿಲೇಟಿಗೂ, ಕೋಟಿ ಪಟುಭಟರ ಬಲಕ್ಕೂ ಬಗ್ಗದಂಥ ಪ್ರಬಲ ವಾದ ದುರ್ಗ ಇದ್ದಕ್ಕಿದ್ದಂತೆಯೇ ಅನಾಥವಾಯಿತು.

ಲಕ್ಷವರಹದ ಸೀಮೆ ಪರದೇಶಿಯಂತೆ ಭವಿಷ್ಯದ ಮುಖನೋಡಿತು.

ಗಂಡು ಸಂತಾನವಿಲ್ಲದೆ ದೊರೆ ಮಡಿದ.

ಮುಂದಾರು ದಿಕ್ಕು ದುರ್ಗಕ್ಕೆ?

೨

ಇಹದ ಚಿಂತೆಯನ್ನು ತೊರೆದ ನಾಯಕರ ದೇಹ, ಬೆಳ್ಳಿಯ ಮಂಚದ ಮೇಲೆ, ಜರತಾರಿಯ ಕುಸುರಿಗೆಲಸದ ಶಾಲನ್ನು ಹೊದ್ದು ಮಲಗಿತ್ತು.

ಅರಸನನ್ನು ನೆಚ್ಚಿ ಕೈಹಿಡಿದ ಮೂವತ್ತು ಮಂದಿ ನಾಗತಿಯರು, ಕತ್ತರಿಸಿದ ಹೂಮಾಲೆಯ ತುಂಡುಗಳಂತೆ, ದುಃಖದ ಭಾರಕ್ಕೆ ಕಾಲು ಕುಸಿದಲ್ಲಲ್ಲಿ ಕೆಡೆದಿದ್ದರು-ಅರಿವು ತಪ್ಪಿದ್ದರೂ ಕಣ್ಣಿಂದ ಹರಿವ ಕಂಬನಿಯು ನೆಲಕ್ಕೆ ಹಾಸಿದ ರತ್ನ ಗಂಬಳಿಯ ಮೇಲೆ ಹರಿದು, ಗಂಧದೆಣ್ಣೆಯ ದೀಪ ಗಳ ಬೆಳಕಿನಲ್ಲಿ ಹೊಳೆದು ಕರಗುತ್ತಿರಲು.

ಅರಮನೆಯಿಂದ ಅವಸರದ ಕರೆ ಕೇಳಿ, ಉಟ್ಟ ಉಡುಪಿನಲ್ಲೇ ಓಡಿ ಬಂದ ಮಂತ್ರಿಗಳು, ದಳವಾಯಿಗಳು, ಕರಣಿಕರು, ಅರಸರ ಆಪ್ತೇಷ್ಟರು, ದುಃಖ ಚಿಂತೆಯ ಹತ್ತಾರು ರೂಪಗಳಂತೆ ಮಂಚದ ಸುತ್ತ ನಿಂತಿದ್ದರು. ಕೆಲವರ ಕಣ್ಣು ಇಂದಿನ ದುಃಖದ ಕಂಬನಿದುಂಬಿ ಕುರುಡಾಗಿದ್ದರೆ, ಹಲವರ ಕಣ್ಣು ಮುಂದಿನ ಚಿಂತೆಯ ಭಾರದಲ್ಲಿ ಜಡವಾಗಿ, ಮಂಕಾಗಿ, ಶಯ್ಯಾಗೃಹದ ಚಿತ್ರಗೆಲಸದ ಚಾವಣಿಯನ್ನು ದಿಟ್ಟಿಸುತ್ತಿವೆ. ಸಣ್ಣ ಗಾಳಿಗೆ ಸಿಲುಕಿ ಚಲಿಸುವ ದೀಪದ ಕುಡಿಯ ಹೊಯ್ದಾಟಕ್ಕೆ ಅನುಗುಣ ವಾಗಿ ಚಲಿಸುವ ನೆರಳುಗಳು, ಎಲ್ಲರ ಮನದಲ್ಲಿಯೂ ಸುಳಿದಾಡುತ್ತಿರುವ ಯಾವುದೋ ಅಶುಭಚಿಂತೆಗೆ ಹತ್ತಾರು ಮೈ ಬಂದು ಒಮ್ಮೆ ಹುದುಗಿ, ಒಮ್ಮೆ ಹರಡಿ ಅಡ್ಡಾಡುತ್ತಿರುವಂತಿದೆ.

ಅಂತಃಪುರವನ್ನು ಸುತ್ತಿದ್ದ ದುಃಖದ ಕೋಟೆಯನ್ನು ಯಾರೂ ಭೇದಿಸಿ ಒಳಬರದಿರಲು ಕಟ್ಟಿದ ಪಡೆಯಂತೆ, ಶಸ್ತ್ರಧಾರಿಗಳಾದ, ನಾಯಕರ ಅಂಗರಕ್ಷಕರ ಪಡೆ ಸುತ್ತಲೂ ಕಾವಲು ನಿಂತಿದೆ—ಒಮ್ಮೊಮ್ಮೆ ತಟಕ್ಕನೆ ಜಿನುಗುವ ಕಣ್ಣೀರನ್ನು ಒರಸಿಕೊಳ್ಳುವುದನ್ನೂ ಮರೆತು.

ಎಲ್ಲಿ ಮಾತನಾಡಿದರೆ, ಸುತ್ತ ಕವಿದ ಗಾಢಗಂಭೀರ ಮೌನದಲ್ಲಿ ಅಲೆಯುತ್ತಿರುವ ರೋದನ ಧ್ವನಿಯ ಶೋಕ ಪಿಶಾಚಿ ಕೆರಳಿ ತಮ್ಮ ಮೇಲೆ ಕವಿಯುವುದೋ ಎಂದು ಬೆದರಿದಂತೆ ಎಲ್ಲರೂ ಮೌನವಾಗಿದ್ದಾರೆ. ಯಾರಿಗೂ, ಯಾವ ಮಾತೂ ಆಡಲು ಧೈರ್ಯವಿಲ್ಲ. ಆದರೆ ಆ ಮೌನವನ್ನು ಮುರಿಯದಿದ್ದರೆ, ಮೂಕಶೋಕ ತಮ್ಮನ್ನೇ ಕಬಳಿಸಿಬಿಡುವುದೇನೋ ಎನ್ನುವಂತಿದೆ, ಎಲ್ಲರಿಗೂ. ಮಾತಾಡಬೇಕು, ಆದರೆ ಯಾರು ಮಾತನಾಡಬೇಕು ? ಏನು ಮಾತಾಡಬೇಕು ? ಮಾತಾಡಲು ಅಧಿಕಾರವಿದ್ದವರೆಲ್ಲರೂ ಅಲ್ಲಿ ನೆರೆದಿದಾರೆ—ನಾಯಕರ ಅಣ್ಣನ ಮಕ್ಕಳು ಲಿಂಗಣ್ಣನಾಯಕ, ಚಿಕ್ಕಣ್ಣನಾಯಕರು, ಪ್ರಧಾನ ಮಂತ್ರಿ ಭುವನಪ್ಪನವರು, ಹೊಟ್ಟೆ ಗುರುಕಣ್ಣ, ಅಬ್ಬಿಗೆರೆ ಮಲ್ಲಣ್ಣ, ಕರಣೀಕ ಅಪ್ಪಣ್ಣ, ದಳವಾಯಿಗಳು ದೇಸಣ್ಣ, ರಂಗಪ್ಪ, ಕಾಟೇಹಳ್ಳಿ ಚಂದಣ್ಣ, ಪಂಚಮ ಮುದ್ದಣ್ಣ, ರಾಯಣ್ಣ, ನಾಯಕರು ಮಗನಂತೆ ಸಾಕಿದ ಓಬಣ್ಣನಾಯಕ, ವಿರೂಪಾಕ್ಷ ಜೋಯಿಸರು,—ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಾ, ಒಬ್ಬರು ಮತ್ತೊಬ್ಬರ ಮೊಗದಲ್ಲಿ ತಮ್ಮ ಚಿಂತೆಯ ಛಾಯೆಯನ್ನೇ ಕಾಣುತ್ತಾ ಕುಳಿತಿದ್ದಾರೆ.

ಕಡೆಗೆ, ಅದುವರೆಗೂ ಸದ್ದು ಮಾಡದಂತೆ ಶಿವರಕ್ಷಾ ಸ್ತೋತ್ರವನ್ನು ಪಠಿಸುತ್ತಿದ್ದ ಅರಮನೆಯ ಪುರೋಹಿತರಾದ ವಿರೂಪಾಕ್ಷ ಜೋಯಿಸರೇ, ಮೌನವನ್ನು ಮುರಿದು, ಒಳಗೊಳಗೇ ಹುದುಗುವ ಧ್ವನಿಯನ್ನು ಹೊರಗೆಳೆದು ಹೇಳಿದರು—

“ ಎಲ್ಲರೂ ಹೀಗೆ ಸುಮ್ಮನೆ ಕುಳಿತರೇನಾಯಿತು ? ಆಗಬಾರದ್ದು ಆಗಿಹೋಯಿತು. ಇನ್ನು ಮುಂದಿನ ಕೆಲಸದ ಚಿಂತೆ ಮಾಡಬೇಕು ”

ಮುಂದಿನ ಕೆಲಸವೇನು ? ಒಂದು ಬಗೆಯ ಚಿಂತೆಯೇ ? ಒಬ್ಬೊಬ್ಬರಿಗೆ ಒಂದೊಂದು ಬಗೆಯ ಚಿಂತೆ, ಹಲವಾರು ಬಗೆಯ ಆತಂಕ.

ಮಕ್ಕಳೂ, ಪ್ರಭುಗಳಿಗೆ ಮಕ್ಕಳೇ. ಆದ್ದರಿಂದ ಎಲ್ಲರೂ ಒಪ್ಪುವುದಾದರೆ, ಲಿಂಗಣ್ಣನಾಯಕರೇ ಅಂತ್ಯಕ್ರಿಯೆಗಳನ್ನು ನಡಸಬಹುದು. "

ದಳವಾಯಿ ಮುದ್ದಣ್ಣನ ಮಾತು, ಅಷ್ಟುಹೊತ್ತೂ ಮೌನವಡಿಯಲ್ಲಿ ಹುದುಗಿದ್ದ ಕೆಂಡವನ್ನು ಕಲಕಿತು.

ಆ ಮಾತು ಕೇಳಿದ ಕೂಡಲೆ, ನಾಯಕರ ಪಾದದಡಿಯಲ್ಲಿ ಮೊಗ ಮುಚ್ಚಿಮಲಗಿದ್ದ, ನಾಯಕರ ಕಿರಿಯ ಹೆಂಡತಿ ಗೌರವ್ವನಾಗತಿ ಕೆರಳಿದ ಸರ್ಪದಂತೆ ಮೇಲೆದ್ದು ಹೇಳಿದಳು—

" ದಳವಾಯಿಗಳಿಗೆ ತಾವು ಆಡುವ ಮಾತಿನ ಅರ್ಥ ಏನೆಂಬುದು ಗೊತ್ತಿದೆಯೆಂದೇ ನಾನು ನಂಬಿದೇನೆ. "

" ನಾಗತಿಯವರು ನನ್ನ ಮಾತಿಗೆ ಹೆಚ್ಚಿನ ಅರ್ಥ ಕಲ್ಪಿಸಬಾರದು. ಒಂದು ವೇಳೆ ನನ್ನ ಮಾತು ತಮಗೆ ಸರಿಬರದಿದ್ದರೆ ತಮ್ಮ ಮನಸ್ಸಿನ ಮಾತನ್ನು ಬಿಚ್ಚಿ ಹೇಳಬಹುದು. ಪುರೋಹಿತರ ಮಾತಿಗೆ ಹಿರಿಯರಾರೂ ಉತ್ತರ ಕೊಡದಿದ್ದುದರಿಂದ, ದೊರೆಗಳ ಊಳಿಗದವರಲ್ಲೊಬ್ಬನಾದ ನಾನು, ನನಗೆ ಸರಿತೋಚಿದ ಮಾತನ್ನು ಹೇಳಿದೆ. ಅದನ್ನು ಒಪ್ಪುವುದು, ಬಿಡುವುದು ಹಿರಿಯರೆಲ್ಲರಿಗೂ ಸೇರಿದ ಮಾತು. ಆದರೂ ನಾನು ಆಡಿದ ಮಾತಿನಲ್ಲಿ ಅನ್ಯಾಯವೇನೂ ಇಲ್ಲ. "

ಮುದ್ದಣ್ಣ ಗೌರವವಾಗಿಯೇ ನಾಗತಿಯ ಮಾತಿಗೆ ಉತ್ತರ ಹೇಳಿದರೂ, ಅವರಲ್ಲಿ ಪ್ರತಿಸ್ಪರ್ಧಿಯೊಂದಿಗೆ ಸೆಣಸುವ ಬಿಗಿಯಿತ್ತು.

" ತಮ್ಮ ಮಾತಿನಲ್ಲಿ ವಿಶೇಷಾರ್ಥ ಸೂಚಿಸುವ ಕೊಂಕು ಇಲ್ಲ ಎನ್ನುವುದಾದರೆ, ಸಚಿವರು ಆಡಬೇಕಾದ ಮಾತನ್ನು ದಳವಾಯಿಗಳೇ ಮೊದಲು ಆಡಬೇಕಾದ ಅಗತ್ಯವಿರಲಿಲ್ಲ. ಪ್ರಭುಗಳ ಮನಸ್ಸಿನಲ್ಲಿ ಏನಿತ್ತು ಎನ್ನುವುದು ಅವರ ಅಂತರಂಗವನ್ನು ಅರಿತವರೆಲ್ಲರಿಗೂ ತಿಳಿದಿದೆ. ಅವರು ಬದುಕಿದ್ದಾಗ ಆ ಮಾತನ್ನು ಬಿಚ್ಚಿ ಆಡಿದ್ದರೆ ರಾಣೀವಾಸದವರು ಕಂಡವರು ಪ್ರಶ್ನೆಗೆ ಉತ್ತರ ಕೊಡಬೇಕಾದ ದುಃಸ್ಥಿತಿ ಬರುತ್ತಿರಲಿಲ್ಲ. ಈಗಲೂ ದೊರೆಗಳ ಮನಸ್ಸು ತಿಳಿದವರು ನಿಸ್ಸಂಕೋಚವಾಗಿ ಮಾತನಾಡಬೇಕು. "

—ಎಂದು ನಾಗತಿ ಸುತ್ತಲಿದ್ದವರೆಲ್ಲರನ್ನು ನೋಡಿ ಕೇಳಿದಳು.

ಎರಡುಗಳಿಗೆ ಯಾರೂ ಆಕೆಯ ಮಾತಿಗೆ ಉತ್ತರ ಕೊಡಲಿಲ್ಲ. ಅದು ವರೆಗೂ ಅಲ್ಲಿ ಸರ್ವಾಧಿಕಾರಮಾಡುತ್ತಿದ್ದ ಶೋಕದ ಸ್ಥಾನವನ್ನು ನಿಧಾನ ವಾಗಿ ಜೀರಾವುದೋ ಭಾವನೆ ಆಕ್ರಮಿಸುತ್ತಿದ್ದಂತಿತ್ತು. ಗೌರವ್ವನಾಗತಿ ಕೊಂಚ ಏರಿದ ಸ್ವರದಲ್ಲಿ ಆಡಿದ ಮಾತು ಕೇಳಿ ಉಳಿದ ನಾಗತಿಯರೂ ತಲೆ ಎತ್ತಿ ನೋಡಿದರು. ನಾಯಕರ ಪಟ್ಟದ ರಾಣಿ ಬಾಣದ ಮನೆ ಓಬವ್ವನಾಗತಿ ಕಂಬನಿಯ ಕರೆಗಟ್ಟಿ ಕಳೆಗುಂದಿದ ಮುಖದ ಮೇಲೆ ಸೆರಗೆಳೆದುಕೊಂಡು, ಕೇಳಿಯೂ ಕೇಳಿಸದಷ್ಟು ಮೃದುವಾದ ಧ್ವನಿಯಲ್ಲಿ ಗೌರವ್ವನಾಗತಿಯನ್ನು ಉದ್ದೇಶಿಸಿ ಹೇಳಿದಳು.

" ರಾಜ್ಯದ ಚಿಂತೆ ನಮಗೇಕೆ ತಂಗಿ, ಇನ್ನು ಈ ಲೋಕದ ಚಿಂತೆ ಯಾಕೆ ? ಇಲ್ಲಿರುವವರು ಆ ಮಾತಾಡಿಕೊಳ್ಳಲಿ, ಇಲ್ಲಿನ ಚಿಂತೆ ಮಾಡಲಿ. ನಮಗೆ ಆದಷ್ಟು ಬೇಗ ದೊರೆಗಳ ಪಾದದಲ್ಲಿ ಮಣ್ಣಾಗಲು ದಾರಿ ಮಾಡಿ ಕೊಟ್ಟರೆ ಸಾಲದೆ ? "

" ಅಕ್ಕನವರು ಈ ಲೋಕದ ಚಿಂತೆ ಮರೆತು ಮಾತಾಡುತ್ತಿದ್ದೀರ. "

ಗೌರವ್ವನಾಗತಿ ಹಿರಿಯ ನಾಗತಿಗೆ ಉತ್ತರಕೊಟ್ಟು ಹೇಳಿದಳು.

" ನಮಗಿನ್ನು ಈ ಚಿಂತೆ ಉಳಿದಿದೆಯೇ ಗೌರಕ್ಕ. ಸೂರ್ಯ ಮುಳುಗಿದ ಮೇಲೆ ಬೆಳಕಿನ ಯೋಚನೆಯೇಕೆ ? ಆ ಮಾತು ಅವರಿಗೆ ಬಿಡು. ಪ್ರಭುಗಳ ಉಪ್ಪುತಿಂದವರಿಗೆ ಅದರ ಋಣ ತೀರಿಸುವ ಭಾರ ಇರಲಿ. ನಾವು ದೊರೆಗಳು ಕೊಟ್ಟ ಅರಸಿನ ಕುಂಕುಮ ಸೂರೆ ಮಾಡುವ ಚಿಂತೆ ಮಾಡೋಣ. ಆಳುವವರು, ಆಳಿಸಿಕೊಳ್ಳುವವರು ಆಳ್ವಿಕೆಯ ಆಲೋಚನೆ ಮಾಡಲಿ. "

" ಅಕ್ಕನವರ ಚಿತ್ತ ಎತ್ತಕಡೆ ಒಲೆದಿದೆ ಎಂದು ನಾನು ಬಲ್ಲೆ. ಅವರು ಇದ್ದಷ್ಟು ದಿನ ಅವರನ್ನು ಆಳಿ ನನ್ನ ಮಾತು ನಡೆಯದ ಹಾಗೆ ಮಾಡಿದಿರಿ. ಇಲ್ಲವಾಗಿದ್ದಿದ್ದರೆ ಈಗ ಈ ಪ್ರಶ್ನೆಯೇ ಬರುತ್ತಿರಲಿಲ್ಲಿ. ಈಗಲಾದರೂ ಒಮ್ಮೆ ಮನಸ್ಸಿನಲ್ಲಿರುವುದನ್ನು ಹೇಳಿ ಅಕ್ಕ, ಸೋಗಿನ ಮಾತೇಕೆ ? "

— ಕಿರಿಯ ನಾಗತಿಯ ಮಾತು ಚಾಟಿಯ ಏಟಿನಂತೆ ನೆರೆದವರನ್ನೆಲ್ಲ ಅಪ್ಪಳಿಸಿತು. ಓಬವ್ವನಾಗತಿ ಆ ಮಾತಿನ ಪೆಟ್ಟನಿಂದ ಜರ್ಝರಿತಳಾಗಿ ತಲ್ಲಣಿಸಿದಳು. ಉಕ್ಕಿಬಂದ ದುಃಖವನ್ನು ತುಟಿಕಚ್ಚಿ ತಡೆಹಿಡಿಯುತ್ತಾ—

“ ಗೌರಾ........ಗೌರಾ...........ಅವರಿರುವಾಗಲೇ, ಅವರೆದುರೇ ಈ ಹಗರಣವೇ ”

—ಎಂದು ಮೊಗದ ಮೇಲೆ ಸೆರಗೆಳೆದು, ದುಃಖಭಾರದಿಂದ ಮೈ ಝೋಂಪಿಸುತ್ತಿದ್ದರೂ ಅಲ್ಲಿರಲಾರದೆ ಅಂತಃಪುರದ ಒಳಮನೆಗೆ ಸರಿದರು. ಬಹುಮಂದಿ ಉಳಿದ ನಾಗತಿಯರೂ ಏನೋ ಅಪಮಾನವಾದಂತೆ, ಏನೋ ಅಪರಾಧ ಮಾಡಿದವರಂತೆ, ಹಿರಿಯ ನಾಗತಿಯನ್ನು ಹಿಂಬಾಲಿಸಿದರು. ಗೌರವ್ವನಾಗತಿ ಮಾತ್ರ ನಿಂತ ಎಡೆಯಿಂದ ಕದಲಿಲ್ಲ. ತನ್ನನ್ನು ಅಲ್ಲಿ ಬಿಟ್ಟು ತೆರಳಿದ ನಾಗತಿಯರ ಬೆನ್ನಿನತ್ತ ಸಿಟ್ಟು ಬೆರೆತ ತಾತ್ಸಾರದಿಂದ ನೋಡಿ, ಸುತ್ತ ನೆರೆದವರೆಲ್ಲರನ್ನೂ ಸವಾಲು ಹಾಕುವಂತೆ ನೋಡಿದಳು. ಆದರೆ ಎಲ್ಲರೂ ನೆಲದತ್ತ ಮೊಗಮಾಡಿಕುಳಿತಿದ್ದುದರಿಂದ ಯಾರ ಕಣ್ಣನ್ನೂ ಆ ನೋಟ ಕೋರೈಸಲಿಲ್ಲ.

“ ಮಾತನಾಡುವ ಹಿರಿಯರು ಸುಮ್ಮನೆಕುಳಿತು ರಾಣೀವಾಸದವರಿಂದ ಮಾತನಾಡಿಸುವುದು ಸರಿಯಲ್ಲ. ಅರಿತವರು ಇತ್ಯರ್ಥ ಮಾಡಬೇಕು. ”

—ಎಂದು ನಾಗತಿಯೇ ಹೇಳಿದಳು.

ಬಳಿಕ ಎಲ್ಲರಿಗೂ ಹಿರಿಯರಾದ ಭುವನಪ್ಪನವರೇ ಹೇಳಿದರು :

“ ನಾಗತಿಯರ ಮನಸ್ಸಿನ ಮಾತನ್ನು ನಾನು ಬಲ್ಲೆ. ಸಿಂಹಾಸನಕ್ಕೆ ಉತ್ತರಾಧಿಕಾರಿಗಳನ್ನು ನಿರ್ಣಯಿಸುವ ಕೆಲಸ ಕಷ್ಟ ; ಸುಲಭವಾದುದಲ್ಲ ; ಇಷ್ಟು ಅವಸರದಲ್ಲಿ ತೀರ್ಮಾನ ಮಾಡಬಹುದಾದಂಥವಲ್ಲ. ನಾಗತಿ ಯವರು ಈಗ ಹಟ ಹಿಡಿಯುವ ಹೊತ್ತಲ್ಲ. ಪುರೋಹಿತರು ಮುಂದಿನ ಕೆಲಸ ನಡಸಲು ಅಪ್ಪಣೆ ಕೊಡಬೇಕು. ಇದಾದ ಬಳಿಕ ಆ ಮಾತನ್ನು ನಿರ್ಧರಿಸಬಹುದು. ”

“ ಹಾಗಾಗದು, ಅವರು ಬದುಕಿದ್ದಾಗ ಇತ್ಯರ್ಥವಾಗದ ಮಾತು, ಈಗ ದೊರೆಗಳ ಪಾದದಿದಿರು ತೀರ್ಮಾನವಾಗಬೇಕು. ಅಲ್ಲಿಯ ವರೆಗೂ ನಾನು ಅವರ ಕಾಲ ಬಳಿ ಬಿಟ್ಟು ಕದಲುವುದಿಲ್ಲ. ”

ನಾಗತಿ ಆಡಿದ ಮಾತನ್ನು ಕೇಳಿ ದಳವಾಯಿ ದೇಸಣ್ಣನಿಗೆ ತಡೆಯ ಲಾರದಷ್ಟು ಸಿಟ್ಟು ಬಂತು. ಸುತ್ತಲಿದ್ದವರನ್ನು ದುರುಗುಟ್ಟಿ ನೋಡುತ್ತಾ ಹೇಳಿದ—

"ದೊರೆಗಳು ಬದುಕಿದ್ದಾಗ ಹೀಗೆ ಜಕ್ಕಿಸಿ ಮಾತನಾಡುವ ಧೈರ್ಯ ಯಾರಿಗೂ ಇರಲಿಲ್ಲ. ಪ್ರಭುಗಳ ಉಪ್ಪು ತಿಂದ ಮೈ ಅವರು ಕಣ್ಣೆದುರೇ ಮಲಗಿರುವಾಗ ಹೀಗೆ ಮಾತನಾಡುವುದು ಶಿವನಿಗೆ ಒಪ್ಪಿಗೆಯಾಗದ ಮಾತು; ಆದರೂ ಮಾತನಾಡದೆ ಇರಲು ದಾರಿಯೇ ಇಲ್ಲದಂತೆ ಮಾಡಿದಾರೆ ನಾಗತಿಯವರು. ಹೊಟ್ಟೆಯ ಒಳಗೊಂದು ಮಾತಿಟ್ಟುಕೊಂಡು ಇದುರಿಗೆ ಒಂದಾಡುವುದು ನನ್ನಿಂದ ಸಾಧ್ಯವಿಲ್ಲ. ಆಗಬಹುದು ಎಂದು, ಹಿರಿಯರು ಹೇಳಿದರೆ, ಇದ್ದ ಮಾತು ಹೇಳುತ್ತೇನೆ."

"ದಳವಾಯಿಗಳ ಕತ್ತಿಯಷ್ಟೇ ಬಲವೆಂದು ನಾವು ತಿಳಿದಿದ್ದೆವು. ನಾಲಗೆಯೂ ಅಷ್ಟೇ ಬಲ ಎಂದು ಈಗ ಕಾಣುತ್ತಿದೆ. ದಳವಾಯಿಗಳು ನಿರ್ಭಯವಾಗಿ ಇರುವ ಮಾತನ್ನು ಹೇಳಬಹುದು!"

—ನಾಗತಿ ಕೆಣಕಿ ಹೇಳಿದಳು. ಭುವನಪ್ಪನವರೂ ಬೇರಾವ ದಾರಿಯನ್ನೂ ಕಾಣದೆ 'ಹೇಳಿ, ದೇಸಣ್ಣನವರೇ' ಎಂದರು.

"ನಾಗತಿಯವರು ನನ್ನ ನಾಲಗೆ ಬಲ ಎಂದರು. ಬಲವೋ ಇಲ್ಲವೋ ನಾನರಿಯೆ. ಆದರೆ ಅದರಲ್ಲಿ ಕೊಂಕಿಲ್ಲ, ಕವಡಿಲ್ಲ. ಹಿಂದೆ ದೊಡ್ಡ ನಾಯಕರು ಕಸ್ತೂರಿರಂಗಪ್ಪ ದೊರೆಗಳು ಶಿವಪಾದ ಸೇರಿದಾಗ, ಈ ಸಿಂಹಾಸನ ನ್ಯಾಯವಾಗಿ ಶಿವನ ದೊಡ್ಡಮಕ್ಕಳು ಸರ್ಜೇನಾಯಕರದಾಗ ಬೇಕಿತ್ತು. ಆದರೆ ಅವರು ದೊಡ್ಡ ನಾಯಕರಿಗಿಂತ ಮೊದಲೇ ಶಿವಪಾದ ಸೇರಿದ್ದರಿಂದ ಅವರ ಮಕ್ಕಳು ಪಟ್ಟಕ್ಕೆ ಬರಬೇಕಾಗಿತ್ತು. ಹಿರಿಯ ಮಕ್ಕಳ ತಲೆಗೆ ಸಿಂಹಾಸನ ಬರಬೇಕಾದದ್ದು ನ್ಯಾಯ. ಆದರೆ ಆಗ ಸರ್ಜೇನಾಯಕರ ಮಕ್ಕಳು ಚಿಕ್ಕಣ್ಣನಾಯಕರು, ಲಿಂಗಣ್ಣನಾಯಕರು ಸಿಂಹಾಸನಕ್ಕೆ ಬರುವ ವಯಸ್ಸಿನವರಾಗಿರಲಿಲ್ಲವಾದುದರಿಂದ, ಸಿರಾ, ರಾಯದುರ್ಗ, ಹರಪನಹಳ್ಳಿ, ತರೀಕೆರೆಯವರು ಈ ಸಂದು ಕಂಡು ದುರ್ಗದ ಮೇಲೆ ಬೀಳಬಹುದೆಂಬ ಭಯದಿಂದ, ಯಾರು ಸಿಂಹಾಸನಕ್ಕೆ ಬಂದರೇನು, ದುರ್ಗ ಉಳಿಯಲಿ ಎಂದು ನಮ್ಮ ಚಿಕ್ಕನಾಯಕನನ್ನು ಒಪ್ಪಿಸಿ ಅವರನ್ನು ಈ ಸಿಂಹಾಸನಕ್ಕೆ ತಂದೆವು. ದೊರೆಯೆಂದು ಅವರ ಪಾದಕ್ಕೆ ಮೈ ಒಪ್ಪಿಸಿದೆವು. ಹಾಗೇ ತಮ್ಮ ಸಂತಾನಕ್ಕೆ ರಾಜ್ಯಭಾರ ಪ್ರಾಪ್ತಿಯಾಗಬೇಕೆಂಬ ಅವರ ಮಾತಿಗೂ ಒಪ್ಪಿದೆವು. ಗಂಡು ಸಂತಾನವಿದ್ದಿದ್ದರೆ ಬೇರೆ ಮಾತಿಗೆ

ಅವಕಾಶವೇ ಇರುತ್ತಿರಲಿಲ್ಲ. ಆದರೆ ಆ ಮಾತು ಶಿವನ ಮನಸ್ಸಿಗೆ ಬರಲಿಲ್ಲ. ದೊರೆಗಳಿಗೆ ಗಂಡು ಸಂತಾನವಾಗಲಿಲ್ಲ. ಈಗ ಸರ್ಜೇನಾಯಕರ ಮಕ್ಕಳು ಇದಾರೆ. ರಾಜ್ಯ ಆಳುವ ಶಕ್ತಿ ಅವರಿಗಿದೆ. ಈ ಮಾತನ್ನು ಹಿರಿಯರೆಲ್ಲರೂ ಬಲ್ಲಿರಿ. ಅಂದು ಅನಿವಾರ್ಯವಾಗಿ ಆದ ಅನ್ಯಾಯ ಸರಿಹೋಗಬಹುದಾದ ಸಂದರ್ಭ ಈಗ ಒದಗಿದೆ. ಅಣ್ಣನ ಮಕ್ಕಳು ಬೇರೆ ಅಲ್ಲ, ಹೊಟ್ಟೆಯ ಮಕ್ಕಳು ಬೇರೆ ಅಲ್ಲ. ಆದ್ದರಿಂದ ಸರ್ಜೇನಾಯಕರ ಹಿರಿಯ ಮಕ್ಕಳು ಲಿಂಗಣ್ಣನಾಯಕರು ಪ್ರಭುಗಳ ಉತ್ತರ ಕ್ರಿಯೆ ಮಾಡಬೇಕು. ಮುಂದೆ ಸಿಂಹಾಸನಕ್ಕೂ ಅವರೇ ಅಧಿಕಾರಿಗಳಾಗಬೇಕು. ಈ ಮಾತು ತಪ್ಪು ಎನ್ನುವವರು ಇದ್ದರೆ, ಹೇಳಬೇಕು."

—ಎಂದು ನುಡಿದ ದಳವಾಯಿ ದೇಸಣ್ಣ.

ಅವನ ಮಾತನ್ನು ಕೇಳಿ, ಗೌರವ್ವನಾಗತಿ ಮತ್ತಷ್ಟು ಕೆರಳಿ ಹೇಳಿದಳು—

"ದಳವಾಯಿ ದೇಸಣ್ಣನವರು ಹೇಳಿದ ಮಾತನ್ನು ಎಲ್ಲರೂ ಕೇಳಿದೀರ. ಅವರು ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರು. ಸರಿಯೆ. ಅವರು ತಮ್ಮ ನಾಲಿಗೆಯಲ್ಲಿ ಕವಡಿಲ್ಲ, ಕೊಂಕಿಲ್ಲ ಎಂದರು. ಪ್ರಭುಗಳ ಪಾದ ಹಿಡಿದು ಆಣೆ ಮಾಡಿ ಹೇಳುತ್ತೇನೆ—ನನಗೂ ಕವಲು ಮಾತಾಡುವ ಅಭ್ಯಾಸವಿಲ್ಲ. ದೊರೆಗಳ ಅಣ್ಣನ ಮಕ್ಕಳಾದ ಲಿಂಗಣ್ಣನಾಯಕರು, ಚಿಕ್ಕಣ್ಣನಾಯಕರು, ನನಗೂ ಪರಕೀಯರಲ್ಲ, ಮಕ್ಕಳೇ. ಇದೇ ಕೈಯಿಂದ ಅವರಿಗೆ ಹಾಲು ಅನ್ನ ಇಟ್ಟಿದ್ದೇನೆ. ನನ್ನ ಹೊಟ್ಟೆಯ ಮಕ್ಕಳಂತೇ ಅವರನ್ನು ಸಾಕಿದ್ದೇನೆ. ನಾನಾಗಲಿ, ರಾಣೀವಾಸದ ಬೇರೆ ನಾಗತಿಯವರಾಗಲಿ ಅವರನ್ನು ಎಂದೂ ಹೊರಗಿನವರಂತೆ ಕಂಡಿಲ್ಲ. ಈಗಲೂ ಅವರು ನನಗೆ ಮಕ್ಕಳೇ. ಆದರೆ ದೊರೆಗಳ ಮನಸ್ಸಿನಲ್ಲಿದ್ದ ಮಾತು ನೆರವೇರಬೇಕೆಂಬುದಷ್ಟೇ ನನ್ನ ಇಚ್ಛೆ. ತಮ್ಮ ಸಂತಾನಕ್ಕೆ ಸಿಂಹಾಸನ ಪ್ರಾಪ್ತಿಯಾಗಬೇಕೆಂಬ ಬಯಕೆ ಪ್ರಭುಗಳಿಗಿತ್ತೆಂದೂ, ಅದೇ ರೀತಿ ತಾವು ಸಿಂಹಾಸನ ಏರುವ ಮೊದಲು ದಳವಾಯಿಗಳಿಂದಲೇ ವಚನ ಪಡೆದಿದ್ದರೆಂದೂ ದಳವಾಯಿಗಳೇ ಹೇಳಿದಾರೆ. ನಿಜ. ಪ್ರಭುಗಳಿಗೆ ಅದೇ ಬಯಕೆ ಇತ್ತು. ನನ್ನ ಮುಂದೂ ಹೇಳಿದ್ದರು. ಅದಕ್ಕಾಗೇ

ಕೊರಗಿಯೂ ಇದ್ದರು. ಕಡೆಗೆ ಅದಕ್ಕೆಂದೇ ಓಬಣ್ಣನಾಯಕನನ್ನು ಸಾಕಿದರು. ಈ ಮಾತು ಎಲ್ಲರಿಗೂ ಗೊತ್ತಿದೆ........"

"ಪ್ರಭುಗಳು ಓಬಣ್ಣನಾಯಕನನ್ನು ಮಕ್ಕಳಂತೆ ಸಾಕಿದುದನ್ನು ನಾವು ಬಲ್ಲೆವು. ಆದರೆ ಅವರೇ ತಮ್ಮನಂತರ ಪಟ್ಟಕ್ಕೆ ಬರಬೇಕೆಂಬ ಆಸೆ ಪ್ರಭುಗಳಿಗಿದ್ದಿದ್ದರೆ ದತ್ತು ಸ್ವೀಕಾರ ಮಾಡಿಕೊಳ್ಳಲಿಲ್ಲವೇಕೆ?"

—ಅದುವರೆಗೂ ಒಂದೂ ಮಾತನಾಡದೆ ಕುಳಿತಿದ್ದ ದಳವಾಯಿ ಚಂದಣ್ಣ ಕೇಳಿದ.

"ಇಷ್ಟುಬೇಗ, ಇಷ್ಟು ಅನಿರೀಕ್ಷಿತವಾಗಿ ಶಿವನ ಕರೆ ಬರಬಹುದು, ನಮ್ಮ ಓಲೆಯ ಭಾಗ್ಯ ತೀರಬಹುದೆಂದು ಯಾರೂ ತಿಳಿದಿರಲಿಲ್ಲ. ಆದ್ದರಿಂದಲೇ ಪ್ರಭುಗಳು ಆ ಶಾಸ್ತ್ರ ತೀರಿಸಲಿಲ್ಲ. ಆದರೂ ತಮ್ಮ ಮನಸ್ಸಿನಲ್ಲಿದ್ದ ಅಭಿಲಾಷೆಯನ್ನು ಹತ್ತಾರು ಮಂದಿಗೆ ತಿಳಿಸಿದಾರೆ. ಭುವನಪ್ಪನವರು, ಗುರುಕಣ್ಣನವರು, ಮಲ್ಲಣ್ಣನವರು ಪ್ರಭುಗಳ ಬಾಯಿಂದಲೇ ಈ ಮಾತು ಕೇಳಿದಾರೆ. ಹಾಗಲ್ಲವೆಂದು ಅವರು ಪ್ರಭುಗಳ ಪಾದ ಮುಟ್ಟಿ ಆಣೆ ಮಾಡಿ ಹೇಳಲಿ. ನಾನು ಇದಿರು ಮಾತಾಡುವುದಿಲ್ಲ. ನಾನಾಡುತ್ತಿರುವುದು ಸುಳ್ಳುಮಾತೇ ಭುವನಪ್ಪನವರೇ?"

—ನಾಗತಿ ಭುವನಪ್ಪನವರನ್ನು ತೀಕ್ಷ್ಣನೋಟದಿಂದ ನೋಡುತ್ತಾ ಕೇಳಿದಳು.

ಈ ಎಲ್ಲ ಘಟನೆಗಳ ಅನಿರೀಕ್ಷಿತವೇಗದ ಸೆಳವಿನಲ್ಲಿ ಸಿಕ್ಕಿ ದಿಗ್ಭ್ರಾಂತರಾದ ಭುವನಪ್ಪ ಕೊಂಚ ಹೊತ್ತು ಚಿಂತಿಸಿ, ಬಳಿಕ ಹೇಳಿದರು–

"ನಾಗತಿಯವರು ನನ್ನನ್ನು ಕ್ಷಮಿಸಬೇಕು. ಈ ಸಿಡಿಲೇಟಿನಿಂದ ನನ್ನ ಮತಿ ಮಸಣಿಸಿಹೋಗಿದೆ. ಹೀಗೇ ಸರಿ ಎಂದು ನಾನಾವ ಮಾತನ್ನೂ ಈಗ ಹೇಳಲಾರೆ. ನಾಗತಿಯವರು ಆಡುತ್ತಿರುವ ಮಾತು ಸತ್ಯ. ಅಷ್ಟೇ ಮಟ್ಟಿಗೆ ದಳವಾಯಿಗಳ ಮಾತಿನಲ್ಲೂ ಸತ್ಯವಿದೆ. ಆದರೆ ನನಗೀಗ ತೋಚುವುದಿಷ್ಟೆ. ಹೇಳಬಹುದೆಂದರೆ ಹೇಳುತ್ತೇನೆ."

"ಹೇಳಿ"

"ಅರಸರ ಶವವನ್ನು ಇದುರಿಗಿಟ್ಟುಕೊಂಡು ಪಟ್ಟಕ್ಕೆ ಹೊಡೆದಾಡುವುದರಿಂದ ಯಾವ ಸಮಸ್ಯೆಯೂ ಇತ್ಯರ್ಥವಾಗುವುದಿಲ್ಲ. ಅದಕ್ಕೆ ಪ್ರತಿ

ಯಾಗಿ ಕೇಳಿದವರು ನಮ್ಮನ್ನು ಆಡಿಕೊಂಡು ನಗುವುದಕ್ಕೆ ದಾರಿಯಾಗುತ್ತದೆ. ಸಮಾನಸ್ಥರ ಇದುರು ದುರ್ಗದ ಮರ್ಯಾದೆ ಇಳಿಮುಖವಾಗುತ್ತದೆ. ಪ್ರಭುಗಳ ಆತ್ಮವೂ ದುಃಖದಲ್ಲಿ ಬೇಯುತ್ತದೆ. ನಾನು ಇಬ್ಬರಲ್ಲೂ ಬೇಡುವುದಿಷ್ಟೆ—ಮೊದಲು ಪ್ರಭುಗಳ ಉತ್ತರಕ್ರಿಯೆ ಸಾಂಗವಾಗಲಿ. ಹನ್ನೆರಡು ದಿನದ ಕರ್ಮಗಳೂ ಮುಗಿದ ಬಳಿಕ ಎಲ್ಲರೂ ಸಮಾಧಾನವಾಗಿ ಕುಳಿತು ಈ ಸಮಸ್ಯೆಯನ್ನು ತೀರ್ಮಾನ ಮಾಡೋಣ. ಹೀಗೆ ಮಾಡುವುದು ಎಲ್ಲ ದೃಷ್ಟಿಯಿಂದಲೂ ಸೂಕ್ತವೆಂದು ನನಗೆ ತೋರುತ್ತದೆ. ಇದರ ಮೇಲೆ ತಮ್ಮ ಇಚ್ಛೆ"

"ಭುವನಪ್ಪನವರು ಆಡಿದ ಮಾತು ಸೂಕ್ತವಾದುದು ತಾಯಿ. ಹಾಗೆ ಮಾಡುವುದರಲ್ಲಿ ತೊಂದರೆ ಏನೂ ಕಾಣುವುದಿಲ್ಲ. ಅಲ್ಲದೆ, ಈ ದೇಹವನ್ನು ಹೀಗೆ ಬಹಳ ಹೊತ್ತು ಇಟ್ಟಿರಬಾರದು. ಮೃತದೇಹ ಸಂಸ್ಕಾರವಿಲ್ಲದೆ ಇರುವಷ್ಟು ಹೊತ್ತು ಆತ್ಮಕ್ಕೆ ನರಕಶಿಕ್ಷೆಯಾಗುತ್ತಿರುತ್ತದೆ ಎನ್ನುತ್ತಾರೆ. ಆದ್ದರಿಂದ ಇದಕ್ಕೆ ತಾವು ಒಪ್ಪಬೇಕು."—ಎಂದು ಪುರೋಹಿತ ವಿರೂಪಾಕ್ಷ ಜೋಯಿಸರು ಭುವನಪ್ಪನವರ ಮಾತಿಗೆ ಬೆಂಬಲವಿತ್ತು ಹೇಳಿದರು,

ಭುವನಪ್ಪನವರ ಮಾತಿನಲ್ಲಿ ಹುದುಗಿದ್ದ ಸತ್ಯವನ್ನು ಅಲ್ಲಗಳೆಯುವುದು ಇಬ್ಬಣದವರಿಗೂ ಸಾಧ್ಯವಿರಲಿಲ್ಲ.

"ಆದರೂ ಈಗ ಉತ್ತರಕ್ರಿಯೆಗಳನ್ನು ಮಾಡಲು ಯಾರು ಅಧಿಕಾರಿಗಳೆಂಬ ಸಮಸ್ಯೆ ಇತ್ಯರ್ಥವಾಗಲಿಲ್ಲ"—ದಳವಾಯಿ ದೇಸಣ್ಣ ಕೇಳಿದ.

"ಅದರಲ್ಲಿ ತೊಡಕೇನೂ ಇಲ್ಲ. ಓಬಣ್ಣನಾಯಕರ ದತ್ತುಸ್ವೀಕಾರ ನಡೆದಿಲ್ಲವಾದುದರಿಂದ ಅವರು ಉತ್ತರಕ್ರಿಯೆಗಳನ್ನು ಮಾಡಲು ಶಾಸ್ತ್ರ ಪ್ರಕಾರ ಸಾಧ್ಯವಿಲ್ಲ. ಆದುದರಿಂದ ಲಿಂಗಣ್ಣನಾಯಕರೇ ಅದಕ್ಕೆ ಅಧಿಕಾರಿಗಳಾಗುತ್ತಾರೆ. ಅವರೇ ಈ ಕಾರ್ಯ ನಡಸಬೇಕು,"

—ಎಂದು ವಿರೂಪಾಕ್ಷ ಜೋಯಿಸರು ಧರ್ಮಶಾಸ್ತ್ರದ ಬೆಂಬಲದ ಮೇಲೆ ಹೇಳಿದರು. ಆ ಮಾತನ್ನು ಕೇಳಿ ನಾಗತಿಯವರು—

"ಅದಕ್ಕೆ ನಮ್ಮದೇನೂ ಅಡ್ಡಿಯಿಲ್ಲ. ಆದರೆ ಉತ್ತರ ಕ್ರಿಯೆಗಳಿಗೆ

ಅಧಿಕಾರಿಗಳಾದರೆಂಬ ನೆಪದಮೇಲೆ ನಾಳೆ ಲಿಂಗಣ್ಣನಾಯಕರೇ ಸಿಂಹಾಸನಾಧಿಕಾರಿಗಳೆಂದು ಸಾರುವುದಿಲ್ಲವೆಂದು ನಮಗೆ ಭುವನಪ್ಪನವರು ಮಾತು ಕೊಡಬೇಕು.

"ತಾಯಿ, ನಾಳೆ ಹೀಗೆ ಮಾಡುತ್ತೇನೆ, ಹಾಗೆ ಮಾಡುತ್ತೇನೆ ಎಂದು ಮಾತುಕೊಡಲು ಇದು ನನ್ನ ಮನೆವಾರ್ತೆಯ ವಿಷಯವಲ್ಲ. ದೇಶಕ್ಕೆ ಸೇರಿದ ಸಮಸ್ಯೆ ಇದು; ಹತ್ತು ಜನ ಪ್ರಮುಖರು ಕಲೆತು ಇತ್ಯರ್ಥಮಾಡಬೇಕಾದ ಮಾತು. ಇಷ್ಟು ಮಾತ್ರ ಹೇಳಬಲ್ಲೆ—ಎಂದೂ ನಾನು ಸತ್ಯಕ್ಕೆ ವಿರೋಧವಾಗಿ ನಡೆಯುವುದಿಲ್ಲ. ನನ್ನಲ್ಲಿ ನಂಬಿಕೆ ಇದ್ದರೆ ನಾಗತಿಯವರು ಈಗಿನ ಕಾರ್ಯಕ್ಕೆ ಅನುಮತಿ ಕೊಡಬೇಕು."

—ಎಂದರು ಭುವನಪ್ಪ.

"ನಿಮ್ಮಲ್ಲಿ ನಮಗೆ ನಂಬಿಕೆ ಇದೆ ಭುವನಪ್ಪನವರೇ. ನಿಮ್ಮಿಂದ ಇಷ್ಟು ವಚನ ಕೇಳಬೇಕು, ದೊರೆಗಳ ಇಚ್ಛೆಯನ್ನು ಹತ್ತು ಜನಕ್ಕೆ ಖಚಿತವಾಗಿ ತಿಳಿಸಬೇಕು ಎಂಬೊಂದು ಕಾರಣದಿಂದ ಅಂತಃಪುರದ ಹೆಣ್ಣು ಇಷ್ಟು ಮಾತಾಡಬೇಕಾಯಿತು—ತನ್ನೆದೆಯನ್ನು ದಹಿಸುತ್ತಿರುವ ಬೇಗೆಯನ್ನೂ ಮರೆತು. ಹೀಗೆ ಮಾತಾಡಿದೆ ಎಂದು ನೀವು, ಹಿರಿಯರು ಯಾರೂ ನೊಂದುಕೊಳ್ಳಬಾರದು."

—ಎಂದು ಗೌರವ್ವನಾಗತಿ ಭುವನಪ್ಪನವರಿಗೆ ಉತ್ತರವಿತ್ತಳು.

ಗುಡ್ಡದಂತೆ ಕವಿದು ಬಂದ ವಿಘ್ನ ತೊಲಗಿದಂತಾಗಿ, ಎಲ್ಲರ ಮನಸ್ಸೂ ಹಗುರಾಗಿ, ಮುಂದಿನ ಕಾರ್ಯಕ್ರಮವನ್ನು ಚಿಂತಿಸಲು ಅಲ್ಲಿ ನೆರದಿದ್ದವರೆಲ್ಲರೂ ಮಂತ್ರಾಲೋಚನಾ ಗೃಹಕ್ಕೆ ತೆರಳಿದರು.

ಅವರು ಹೋಗುವವರೆಗೂ ಕಂಭದಂತೆ ಸ್ಥಿರವಾಗಿ ನಿಂತಿದ್ದ ನಾಗತಿ, ಅವರು ತೆರಳಿದ ಕೂಡಲೇ ಪತಿಯ ಪಾದದ ಮೇಲೆ ಕುಸಿದು ಬಿದ್ದು—

"ಪ್ರಭೂ, ಪ್ರಭೂ, ನಿಮ್ಮೆದಿರು ಇಷ್ಟು ಮಾತಾಡಿದ ನನ್ನ ಅಪರಾಧವನ್ನು ಮನ್ನಿಸಿ ಪ್ರಭೂ, ನಿಮ್ಮ ಬಯಕೆಯನ್ನು ನೆರವೇರಿಸಲು ಲಜ್ಜೆಗೆಟ್ಟು, ಇಷ್ಟು ಮಾತಾಡಬೇಕಾಯಿತು."

—ಎಂದಳು.

ಅದುವರೆಗೂ ಬೇರಾವುದೋ ಭಾವನೆಯ ಅಡಿಯಲ್ಲಿ ಬಲಾತ್ಕಾರದಿಂದ ತಡೆಹಿಡಿಯಲ್ಪಟ್ಟಿದ್ದ ಉಗ್ರಶೋಕ ಕಟ್ಟೆ ಕಿತ್ತ ನೀರಿನಂತೆ ಚಿಮ್ಮಿ, ಸದ್ದಡಗಿದ ಅಂತಃಪುರವನ್ನು ವ್ಯಾಪಿಸಿತು.

೩

ನಾಯಕರು ಅಳಿದ ಬಳಿಕ ನಾಗತಿಯರು ಯಾರೂ ಉಳಿಯುವ ಚಿಂತೆ ಮಾಡಲಿಲ್ಲ. ಎಲ್ಲರೂ ಸಹಗಮನ ಮಾಡಿ ಅವರನ್ನು ಹಿಂಬಾಲಿಸುವ ನಿರ್ಧಾರ ಮಾಡಿದರು. ಹಿಂತಿನ ರಾತ್ರಿ, ಮುಂದೆ ರಾಜ್ಯಕ್ಕೆ ಉತ್ತರಾಧಿಕಾರಿಗಳು ಯಾರಾಗಬೇಕೆಂದು ನಿರ್ಧರಿಸಲು ಅಷ್ಟು ರಂಪ ಮಾಡಿದ ಗೌರವ್ವನಾಗತಿಗೂ ಅಕ್ಕತಂಗಿಯರನ್ನು ಬಿಟ್ಟು ಒಂಟಿಯಾಗಿ ಅಂತಃಪುರದಲ್ಲುಳಿಯುವ ಮನಸ್ಸಿರಲಿಲ್ಲ. ಆಕೆಗಿದ್ದ ಬಯಕೆಯೊಂದೇ—ಸಾಕುಮಗ ಓಬಣ್ಣ ನಾಯಕರನಂತರ ಪಟ್ಟಕ್ಕೆ ಬರಬೇಕೆಂಬುದು. ಅದನ್ನು ಖಚಿತ ಮಾಡಿಕೊಂಡು, ಸ್ವರ್ಗವನ್ನು ಸೂರೆಮಾಡಹೋಗಲು ಆಕೆಯೂ ಸಿದ್ಧವಾಗಿದ್ದಳು.

ಗೌರವ್ವನಾಗತಿ ಮದಕರಿನಾಯಕರ ಕಡೆಯ ಪತ್ನಿ. ಆಕೆಯ ರೂಪಕ್ಕೆ ಮೋಹಿಸಿ ಮದುವೆಯಾದ ನಾಯಕರು ಕಡೆಗಾಲದಲ್ಲಿ ಒಂದು ದಿನವೂ ಆಕೆಯನ್ನು ಬಿಟ್ಟು ಅಗಲಿರಲಿಲ್ಲ. ಇದ್ದೊಬ್ಬ ಮಗಳು ಕೈಲಾಸವಾಸಿಯಾದ ಬಳಿಕಲಂತೂ, ಅವರಿಗೆ ಆಕೆಯ ಅಂತಃಪುರದಾಚೆಗೆ ಬೇರೆ ಜಗತ್ತೇ ಉಳಿದಿರಲಿಲ್ಲ. ರಾಜ್ಯಚಿಂತೆಯೂ ತಪ್ಪಿಹೋಗಿತ್ತು; ತಮಗೆ ಮಕ್ಕಳಿಲ್ಲದ ಬಳಿಕ ಈ ರಾಜ್ಯ ಯಾರಿಗಾದರೇನು ಎಂಬ ತಾತ್ಸಾರ ಮೂಡಿತ್ತು.

ಗೌರವ್ವನಾಗತಿಗೂ ತನ್ನ ಪತಿಯಲ್ಲಿ ಅಷ್ಟೇ ವ್ಯಾಮೋಹವಿತ್ತಾದರೂ, ಅದರಲ್ಲಿ ಪ್ರಪಂಚದ ಅರಿವು ಮರೆತಿರಲಿಲ್ಲ. ನಾಯಕರ ಬಳಿಕ ಈ ರಾಜ್ಯಕ್ಕೆ ದಿಕ್ಕು ಯಾರು ಎಂಬ ಚಿಂತೆ ಆಕೆಯನ್ನು ಬಾಧಿಸುತ್ತಿತ್ತು. ಎಂತಲೇ ಆಕೆ, ಉಳಿದ ಮಡದಿಯರು ನಾಯಕರಲ್ಲಿ ಹೇಳಲು ಹೆದರಿ ಹಿಂಜರಿಯುತ್ತಿದ್ದ ಮಾತನ್ನುಹೊತ್ತು ಸಾಧಿಸಿ ಹತ್ತಾರು ಬಾರಿ ಆಡಿದ್ದಳು.

"ನೀವು ಇರುವಾಗಲೇ ಈ ರಾಜ್ಯಕ್ಕೆ ಒಂದು ದಿಕ್ಕು ಗೊತ್ತುಮಾಡಬೇಕು ಪ್ರಭು" ಎಂದು.

"ನಮ್ಮ ಬಳಿಕ ರಾಜ್ಯಕ್ಕೆ ಬರುವ ಮಕ್ಕಳಿಲ್ಲವೆಂದಮೇಲೆ, ಈ ರಾಜ್ಯ ಯಾರದಾದರೇನು ಗೌರಾ. ಯಾರಿಗೆ ಈ ರಾಜ್ಯ ಬೇಕೋ ಅವರು ಅದರ ಚಿಂತೆ ಮಾಡಲಿ."

ಉಳಿದವರು ಹಾಗೆ ಹೇಳಬಹುದು, ಆದರೆ ತಾವು ಹಾಗೆ ಹೇಳಿದರೆ ಆಗುತ್ತದೆಯೇ? ನಾಳೆ ರಾಜ್ಯ ಅನಾಯಕವಾದರೆ ಏನು ಗತಿ ? ಒಳ ಜಗಳದಲ್ಲಿ ದುರ್ಗ ಕಂಡವರ ಪಾಲಾಗಲು ನಾವೇ ದಾರಿ ಮಾಡಿಕೊಟ್ಟಂತೆ ಆಗುವುದಿಲ್ಲವೇ ?"

"ನಿನಗೆ ನನ್ನದಕ್ಕಿಂತ ದುರ್ಗದ ಚಿಂತೆಯೇ ಹೆಚ್ಚಾದಂತಿದೆ ಗೌರಾ" ಎಂದು ನಾಯಕರು ಕೊಂಚ ಅಸಮಾಧಾನದಿಂದ ಹುಬ್ಬು ಮುರಿಯುವರು.

"ಈಗಲೇ ಜನ ನಾನು ನಿಮ್ಮನ್ನು ಅಂತಃಪುರದ ಅರಗಿಳಿಯಾಗಿ ಮಾಡಿಕೊಂಡಿದೇನೆ ಎಂದು ದೂರುತ್ತಿದ್ದಾರೆ. ನಾಳೆ ಸೂರ್ಯ ಚಂದ್ರರಿರುವವರೆಗೂ ಈ ಅಪಖ್ಯಾತಿಗೆ ಗುರಿಯಾಗಲೇ ?" ಎನ್ನುವಳು ಗೌರವ್ವ ನಾಗತಿ.

"ನಿನಗಿರುವಷ್ಟು ರಾಜ್ಯದ ಚಿಂತೆ ನನಗಿಲ್ಲವೇ ಗೌರಾ. ನನಗೂ ಇದೆ. ಆದರೇನು ಮಾಡಲಿ. ಮಕ್ಕಳಿಲ್ಲದ ಮನಸ್ಸಿಗೆ ಈ ರಾಜ್ಯ ಬರಿ ಮಸಣದಂತೆ ತೋರುತ್ತದೆ.

"ನಮ್ಮಂಥ ನಿರ್ಭಾಗ್ಯೆಯನ್ನು ಕೈಹಿಡಿದು ಪ್ರಭುಗಳಿಗೆ ಈ ಚಿಂತೆ ಪ್ರಾಪ್ತವಾಯಿತು ಆದರೆ ನಮ್ಮ ದೌರ್ಭಾಗ್ಯದ ಭಾರವನ್ನು ದುರ್ಗದ ಹೆಗಲಮೇಲೂ ಹೇರಿಹೋಗುವುದೇಕೆ ಪ್ರಭು? ನೀವು ಒಪ್ಪಿಸಿಕೊಂಡ ಕತ್ತಿಯನ್ನು ಸರಿಯಾದವರೊಬ್ಬರಿಗೆ ಒಪ್ಪಿಸಿ."

—ಎಂದು ಗೌರವ್ವನಾಗತಿ ಮತ್ತೆ ಮೊದಲಿನ ಮಾತಿಗೆ ಬರುವಳು. ನಾಯಕರಿಗೂ ಆಕೆಯ ಆಲೋಚನೆ ಸರಿ ಎಂದು ತೋರುವುದು.

ಹೀಗನಿಸಿದಾಗಲೇ ಅವರು ಗೌರವ್ವನಾಗತಿಯ ಸೋದರ ಓಬಣ್ಣ ನಾಯಕನನ್ನು ತಂದು ಸಾಕುವ ನಿರ್ಧಾರಮಾಡಿದ್ದು.

ನಾಯಕರ ಈ ನಿರ್ಧಾರವನ್ನು ಮೊಟ್ಟಮೊದಲು ವಿರೋಧಿಸಿದಾಕೆ ಗೌರಮ್ಮನಾಗತಿಯೇ.

"ನಾಯಕರಿಗೆ ಮಕ್ಕಳಿಲ್ಲವೆಂದು ತನ್ನ ತಮ್ಮನನ್ನು ತಂದು ದುರ್ಗದ

ಹೆಗಲಮೇಲೆ ಹೇರಿದಳು ಎಂದು ಜನ ಆಡಿಕೊಳ್ಳುತ್ತಾರೆ. ಇದರಿಂದ ನನಗೂ ಅಪಖ್ಯಾತಿ, ನನ್ನ ತವರಿಗೂ ಅಪಖ್ಯಾತಿ. ನನ್ನ ತವರಿನ ಕಡೆಯವರನ್ನು ಬಿಟ್ಟು ಬೇರೆ ಯಾರನ್ನಾದರೂ ಸಾಕಿಕೊಳ್ಳಿ" ಎಂದಳು.

"ಬೇರೆ ಯಾರು ಇದಾರೆ ?"

"ಏಕಿಲ್ಲ. ಸರ್ಜೇನಾಯಕರ ಮಕ್ಕಳೇ ಇಲ್ಲವೇ? ಹೇಗೂ ಅಣ್ಣಂದಿರ ಮಕ್ಕಳು. ಅವರನ್ನೇ ನಿಮ್ಮ ಮಕ್ಕಳೆಂದುಕೊಂಡರೆ ಯಾರಿಗೂ ಅಸಮಾಧಾನವಾಗುವುದಿಲ್ಲ."

"ಅಸಮಾಧಾನವಾಗುವುದೇನು? ಎಷ್ಟೋ ಜನಕ್ಕೆ ಬೇಕಾಗಿರುವುದೂ ಅದೇ."

"ಹಾಗಾದರೆ ಸರಿಯಾಯಿತಲ್ಲ."

"ಉಹೂ, ಅದೇ ಸರಿಯಾಗದಿರುವುದು."

"ಏಕೆ ?"

"ಎಷ್ಟಾದರೂ ನೀನು ಹೆಣ್ಣು ಗೌರಾ. ನಿನ್ನ ಬುದ್ಧಿ ಎಷ್ಟು ಓಡಿದರೂ ಅದಕ್ಕೆ ರಾಜಕಾರಣದ ಜಾಡು ತಿಳಿಯುವುದಿಲ್ಲ."

"ಏಕೆ?"

"ನಿನಗೆ ಲಿಂಗಣ್ಣನಾಯಕರೆಂದರೆ ವಿಶ್ವಾಸವಲ್ಲವೇ ಗೌರಾ ?"

"ಇಲ್ಲವೇ ? ನನ್ನ ಹೊಟ್ಟೆಯಲ್ಲಿ ಅಂಥ ಮಗ ಹುಟ್ಟಿದ್ದಿದ್ದರೆ ನನ್ನ ಸಮಾನ ಇಲ್ಲ ಎಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದೆ."

"ಅದಕ್ಕೇ ನಿನ್ನದು ಹೆಣ್ಣು ಬುದ್ಧಿ" ಎಂದದ್ದು.

ನಾಯಕರು ಒಣನಗೆ ನಕ್ಕು ಹೇಳಿದರು.

"ಅದಕ್ಕೇ ಎಂದರೆ ಏಕೆ ?"

"ನಿನ್ನ ಕಣ್ಣು ಕಾಣುವುದು ಅಷ್ಟೇ ದೂರ. ಆದರೆ ಈ ನೀರಿನಾಳದಲ್ಲಿ ಆಡುತ್ತಿರುವ ಒಳಸುಳಿಯನ್ನು ನೀನು ಕಾಣೆ. ನೀನು ಕೊಡು ಬಿಡು ಲಿಂಗಣ್ಣನಿಗೇನೋ ಈ ಸಿಂಹಾಸನದ ಮೇಲೆ ಕಣ್ಣಿರುವುದು ಸುಳ್ಳಲ್ಲ. ತಮಗೆ ಬರಬೇಕಾಗಿದ್ದ ಸಿಂಹಾಸನ, ಅನ್ಯಾಯವಾಗಿ ತಮಗೆ ತಪ್ಪಿ ನನ್ನ ಪಾಲಾಯಿತಲ್ಲ ಎಂಬ ಅಸಮಧಾನ ಅವರ ಅಂತರಂಗದಲ್ಲಿ ಕುದಿಯುತ್ತಿದೆ. ಆ ಅಸಮಧಾನಕ್ಕೆ ಗಾಳಿ ಬೀಸುವವರೂ ಕಡಮೆ ಇಲ್ಲ. ದುರ್ಗದಲ್ಲಿ."

"ನಿಮ್ಮ ಕಣ್ಣೆದುರಿನಲ್ಲಿಯೇ ಇಷ್ಟು ನಡೆಯುತ್ತದೆಯೇ?"

—ಅಚ್ಚರಿಯಿಂದ ಕೇಳಿದಳು ಗೌರಮ್ಮ ನಾಗತಿ.

"ನನ್ನ ಕಣ್ಣೆದುರಿನಲ್ಲಿ ನಡೆಯುತ್ತದೆಯೆ ? ಅಷ್ಟು ಧೈರ್ಯ ಇನ್ನೂ ಯಾರಿಗೂ ಬಂದಿಲ್ಲ. ಸಿಂಹಾಸನವೆಂದರೆ ಏನೆಂದುಕೊಂಡಿದೀಯ ಗೌರಾ, ಇದು ಒಳಸಂಚುಗಳ ಮುಳ್ಳು ಪೊದರುಗಳ ನಡುವೆ ಬೆಳೆದ ಹೂವು. ಎಂತಲೇ ಇದರ ಮೇಲೆ ಕೂಡಲು ಮೈಯೆಲ್ಲಾ ಕಣ್ಣಿದ್ದರೂ ಸಾಲದು."

"ಹಾಗಾದರೆ ಓಬಣ್ಣನನ್ನು ಈ ಮುಳ್ಳಿನ ಮಂಚದಮೇಲೇಕೆ ಕೂಡಿಸುತ್ತೀರಾ?"

"ಅದಕ್ಕೆ ಕಾರಣವಿಲ್ಲದೆ ಇಲ್ಲ."

"ಏನು ಕಾರಣ ?"

"ಲಿಂಗಣ್ಣ ಅಧಿಕಾರಕ್ಕೆ ಬಂದರೆ, ಆ ಅಧಿಕಾರ ಆತನ ಕೈಲಿ ಉಳಿಯುವುದಿಲ್ಲವೆಂಬುದು."

"ಅಂದರೆ....?"

—ನಾಯಕರ ಮಾತು ಅರ್ಥವಾಗದವಳಂತೆ ಕೇಳಿದಳು ನಾಗತಿ.

"ದುರ್ಗದಲ್ಲೀಗ ಹೊಸ ಬಲವೊಂದು ಬೆಳೆಯುತ್ತಿದೆ ಗೌರಾ. ಅದನ್ನು ಹಾಗೇ ಬೆಳೆಯಲು ಬಿಟ್ಟರೆ, ನಾಳೆ ನಾಯಕರ ಸ್ಥಾನವನ್ನು ಅದು ಆಕ್ರಮಿಸುವುದು, ಎಂಬ ಭೀತಿ ನನಗಿದೆ."

"ಅದನ್ನು ತಿಳಿದಿದ್ದೂ ಮುರಿಯುವುದಿಲ್ಲವೇಕೆ?"

"ಮುರಿಯುವ ಕೆಲಸ ಅಷ್ಟು ಸುಲಭವಲ್ಲ, ಅಲ್ಲದೆ ಇದು ನಾವೇ ನಿರ್ಮಾಣ ಮಾಡಿಕೊಂಡದ್ದು; ಅದಿಲ್ಲದೆ ನಾವು ಬದುಕುವುದೂ ಸಾಧ್ಯವಿಲ್ಲ. ಎಂತಲೇ ದಿಕ್ಕರಿಯದೆ ಚಿಂತಿಸುತ್ತಿದೇನೆ."

"ನಿಮ್ಮನ್ನು ಇಷ್ಟು ಚಿಂತೆಗೊಳಗುಮಾಡಿದ ಬಲ ಯಾವುದು ಪ್ರಭು?"

"ದಳವಾಯಿಗಳದು."

"ಆ್ಞ?"

–ಗಾಬರಿ, ಆಶ್ಚರ್ಯಗಳೆರಡೂ ಬೆರೆತ ಧ್ವನಿಯಲ್ಲಿ ಕೇಳಿದಳು ನಾಗತಿ.

"ನಿಜ ಗೌರಾ, ದುರ್ಗದ ರಕ್ಷಣೆಗೆಂದು ಕೋಟೆಯಂತೆ ಸೇನೆಯನ್ನು ಕಟ್ಟಿ, ಈ ದಳವಾಯಿಗಳನ್ನು ನಾವೇ ಬೆಳೆಸಿದೆವು. ಈಗೀಗ ದಳವಾಯಿಗಳು ಪ್ರಬಲಿಸಿ ನಮಗೂ ತಲೆನೋವಾಗುವಷ್ಟು ಬೆಳೆದಿದಾರೆ. ಇದನ್ನು ಹೇಗೆ ನಿವಾರಿಸುವುದೆಂಬುದೇ ನನಗೆ ತೋರದಾಗಿದೆ."

"ಅದಕ್ಕಷ್ಟು ಯೋಚಿಸಬೇಕೆ? ಉದ್ಧಟರಾದವರನ್ನು ಕೆಲಸದಿಂದ ಕಿತ್ತು ಒಗೆದರೆ ಸರಿ."

—ನಾಗತಿ ಸಿಟ್ಟಿನಿಂದ ಹೇಳಿದಳು.

"ದಳವಾಯಿಗಳನ್ನು ಕಿತ್ತೊಗೆಯುವುದು, ಅವರನ್ನು ಆ ಕೆಲಸಕ್ಕೆ ನೇಮಿಸಿದಷ್ಟು ಸುಲಭವಲ್ಲ. ದಳವಾಯಿಗಳನ್ನು ಅಧಿಕಾರದಿಂದ ತಳ್ಳಿ ಹಾಕಬಹುದು. ಆದರೆ ಅದರಿಂದ ಸೇನೆಯಲ್ಲೇ ಬಣಗಳಾಗುತ್ತದೆ, ಅಸಂತುಷ್ಟಿ ಬೆಳೆಯುತ್ತದೆ. ಸೇನೆಯನ್ನು ಅಸಂತುಷ್ಟಿಗೊಳಿಸುವುದು, ಶತ್ರುವಿಗೆ ದುರ್ಗದ ಹೆಬ್ಬಾಗಿಲನ್ನು ತೆರೆದಂತೆ. ಈಗ ಲಿಂಗಣ್ಣ ದಳವಾಯಿಗಳಿಗೆ ಬೇಕಾದವನಾಗಿದಾನೆ. ಆದರೆ ದಳವಾಯಿಗಳಿಗೆ ಲಿಂಗಣ್ಣನಲ್ಲಿರುವ ಪ್ರೀತಿ ನಿಜವಾದ ಸ್ವಾಮಿನಿಷ್ಠೆಯೋ, ಅಥವಾ ಅದು ಬೇರೊಂದು ಬಗೆಯ ಆಟಕ್ಕೆ ಮುಖವಾಡವೋ ನನಗೆ ತಿಳಿಯದಾಗಿದೆ. ಅದಕ್ಕಾಗೇ ಲಿಂಗಣ್ಣನನ್ನು ದತ್ತು ತೆಗೆದುಕೊಂಡು ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿ ಮಾಡಲು ಹಿಂಜರಿಯುತ್ತಿದ್ದೇನೆ."

"ಓಬಣ್ಣನನ್ನು ದತ್ತು ತೆಗೆದುಕೊಂಡರೆ ಈ ಸಮಸ್ಯೆ ಪರಿಹಾರವಾಗುವುದೇ? ಅದರಿಂದ ಅವರ ಅಸಮಾಧಾನಕ್ಕೆ ಆಜ್ಯಾಹುತಿ ಮಾಡಿದಂತಾಗುವುದಿಲ್ಲವೇ?"

"ಹಾಗೂ ಆಗಬಹುದು. ಅದಕ್ಕೇ ಈತನನ್ನು ದತ್ತು ಸ್ವೀಕಾರವಿಲ್ಲದೆ ಸಾಕಿಕೊಂಡು, ಮುಂದೆ ಪರಿಸ್ಥಿತಿ ಹೇಗೆ ತಿರುಗುವುದೋ ನೋಡಿಕೊಂಡು, ಅನಂತರ ಯಾವುದನ್ನೂ ನಿರ್ಧರಿಸಬೇಕು. ಅಂತೂ ಒಂದು ಮಾತಂತೂ ನಿಜವಾಯಿತು ಗೌರಾ."

"ಯಾರ ಮಾತು?"

"ಅಪ್ಪಾಜಿಯವರ ಕಾಲದಲ್ಲಿ, ಈಗಿರುವ ವಿರೂಪಾಕ್ಷ ಜೋಯಿಸರ ತಂದೆಯವರಿದ್ದರು. 'ಅವರು ಹೇಳುತ್ತಿದ್ದರು—ರಕ್ತದಲ್ಲಿ ಕಟ್ಟಿದ ಕೋಟೆ ರಕ್ತದಲ್ಲಿ ಮುಳುಗುತ್ತದೆ; ಕತ್ತಿಯಲ್ಲೇ ಬಿತ್ತಿದುದು ಕತ್ತಿಯಲ್ಲೇ ಕೊಯಿಲಾಗುತ್ತದೆ ಎಂತ; ಹಾಗೇ ಆಗುವುದೋ ಏನೋ, ಯಾರು ಬಲ್ಲರು. ಏಕನಾಥೇಶ್ವರಿಯ ಚಿತ್ತದಲ್ಲಿದ್ದಂತಾಗಲಿ."

ಅಂದು ನಾಯಕರು ಆಡಿದ ಆ ಮಾತು ಗೌರವ್ವನಾಗತಿಯ ಚಿತ್ತದಲ್ಲಿ ಶಿಲಾಲಿಖಿತಾಕ್ಷರದಂತೆ ಸ್ಥಿರವಾಗಿ ಮೂಡಿತ್ತು. ಅಷ್ಟೇ ಮಟ್ಟಿಗೆ ನಾಯಕರ ಸುತ್ತುಮುತ್ತ ಓಡಾಡುವವರ ಚಲನವಲನವನ್ನು ಎಚ್ಚರಿಕೆಯಿಂದ ನಿರೀಕ್ಷಿಸತೊಡಗಿದಳು. ಕೆಲವು ದಿನಗಳು ಕಳೆಯುವುದರೊಳಗಾಗಿ ಆಕೆಗೆ ನಾಯಕರಾಡಿದ ಮಾತು ನಿಜವೆಂಬುದು ಮನವರಿಕೆಯಾಯಿತು; ಅಷ್ಟೇ ಮಟ್ಟಿಗೆ ಅವರ ಮುಂಜಾಗರೂಕತೆಯ ರೀತಿ ಒಪ್ಪಿಗೆಯಾಯಿತು.

ದಿನಗಳೆದಂತೆ ಓಬಣ್ಣನಾಯಕರನ್ನೇ ದತ್ತು ತೆಗೆದುಕೊಂಡು, ಪಟ್ಟಾಧಿಕಾರಿಯನ್ನಾಗಿ ಮಾಡಬೇಕೆಂಬ ನಾಯಕರ ನಿರ್ಧಾರ ಬಲವಾಯಿತು. ಆದರೆ ಅದನ್ನು ಅವರು ಕಾರ್ಯರೂಪಕ್ಕೆ ತರುವುದರೊಳಗೆ ಸಾವು ಅವರನ್ನು ಕೊಂಡೊಯ್ದು, ಅವರ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಭಾರ ಗೌರವ್ವನಾಗತಿಯಂಥ ಅವರ ಮನೋಗತವನ್ನು ಅರಿತವರ ಮೇಲೆ ಬಿದ್ದಿತ್ತು.

ನಾಯಕರ ಈ ಅಭಿಲಾಷೆ ಗೌರವ್ವನಾಗತಿಯಂತೆಯೇ ನಾಯಕರ ಮಂತ್ರಿಮಂಡಲದಲ್ಲಿದ್ದ ಭುವನಪ್ಪ, ಗುರುಕಣ್ಣ, ಮಲ್ಲಣ್ಣನವರಿಗೂ ಗೊತ್ತಿತ್ತು. ಅವರಿಗೂ ನಾಯಕರ ಏರ್ಪಾಟು ಒಪ್ಪಿಗೆಯಿತ್ತು. ಆದರೆ ನಾಯಕರ ಅನಿರೀಕ್ಷಿತ ಸಾವಿನಿಂದ ಅವರಿಗೂ ಕೈಕಟ್ಟಿದಂತಾಗಿತ್ತು.

ಆದರೂ ನಾಯಕರ ಅಭಿಲಾಷೆಯನ್ನು ಸಾರ್ಥಕಗೊಳಿಸಲು ನಾಗತಿಯವರಿಗಿದ್ದ ಬಲವಾದ ಆಸರೆ ಭುವನಪ್ಪನವರದೇ; ತಾನು ಸಹಗಮನ ಮಾಡುವ ಮುನ್ನ ಅವರಿಂದ ವಚನ ತೆಗೆದುಕೊಂಡರೆ, ತನ್ನ ಕೆಲಸ ಆದಂತೆಯೇ ಎಂಬುದೂ ನಾಗತಿಗೆ ಗೊತ್ತಿತ್ತು. ಆದುದರಿಂದಲೇ ಬೆಳಕು ಹರಿಯುತ್ತಿದ್ದ ಹಾಗೇ ದಾಸಿಯರನ್ನಟ್ಟಿ ಭುವನಪ್ಪನವರನ್ನು ಅಂತಃಪುರಕ್ಕೆ ಕರಸಿದಳು.

೪

ಭುವನಪ್ಪನವರು ಪ್ರಧಾನಾಮಾತ್ಯರಾಗದೇ ಇದ್ದರೂ ಅವರ ಮಾತೆಂದರೆ ನಾಯಕರಿಂದ ಹಿಡಿದು ಎಲ್ಲರಿಗೂ ಗೌರವ. ಮಂತ್ರಿ ಮಂಡಲದ ಸಭೆಯಲ್ಲೂ ಅವರ ಸಲಹೆಯನ್ನು ತೆಗೆದುಹಾಕುವ ಸಾಹಸ ವನ್ನು ಯಾರೂ ಮಾಡುತ್ತಿರಲಿಲ್ಲ. ಇದಕ್ಕೆ ಭುವನಪ್ಪನವರು ವಯಸ್ಸಿನಿಂದ ಹಿರಿಯರು ಎಂಬುದೊಂದೇ ಕಾರಣವಾಗಿರಲಿಲ್ಲ. ದುರ್ಗದ ಪಾಳೆಯಗಾರರ ಮನೆತನದ ಮೂಲಪುರುಷರಾದ ಮತ್ತಿ ತಿಮ್ಮಣ್ಣನಾಯಕರು ದುರ್ಗದ ಒಡೆಯರಾದಂದು, ಭುವನಪ್ಪನವರ ಮನೆತನದ ಹಿರಿಯರು ನಾಯಕರ ಬಲಗೈಯ ಬಂಟರಾಗಿ, ಸಿದ್ಧನ ವರಪ್ರಸಾದದಿಂದ ಲಭ್ಯವಾದ ಸಿಂಹಾಸನ ಸ್ಥಿರವಾಗಲು ನೆರವಾಗಿದ್ದರು. ಅಂದಿನಿಂದ ಇಂದಿನವರೆಗೆ ಅವರ ಮನೆತನದವರು ಪಾಳೆಯಗಾರ ಮನೆತನದವರಲ್ಲಿ ಇದೇ ಬಗೆಯ ನಿಷ್ಠೆಯನ್ನೇ ತೋರುತ್ತಾ ಬಂದಿದ್ದರು. ಭುವನಪ್ಪನವರೂ ಅದೇ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದರು. ಅವರ ನಿಷ್ಠೆ ಎಷ್ಟು ದೃಢವಾದುದೋ ಅವರ ಹೃದಯ, ಕೈ, ಕಿವಿಗಳು ಅಷ್ಟೇ ಶುದ್ಧ. ದೊರೆಗಳಲ್ಲಿ, ಅರಮನೆಯಲ್ಲಿ ಎಷ್ಟೋ ಸಲಿಗೆಯಿದ್ದರೂ, ಅದನ್ನವರು ದುರುಪಯೋಗ ಪಡಿಸಿಕೊಂಡರೆಂದಾಗಲಿ, ಸ್ವಾರ್ಥಕ್ಕೆ ಬಳಸಿಕೊಂಡರೆಂದಾಗಲಿ ಎಂಬ ಕಲಂಕ ಎಂದೂ ಸೋಂಕಿರಲಿಲ್ಲ; ಎಂತಲೇ ಎಲ್ಲರಿಗೂ ಅವರ ಮಾತೆಂದರೆ ವೇದವಾಕ್ಯ; ಅವರನ್ನು ಕಂಡರೆ ತಮ್ಮ ಮನೆಯ ಹಿರಿಯರನ್ನು ಕಂಡಷ್ಟು ಗೌರವ.

ಆದುದರಿಂದಲೇ ಗೌರವ್ವನಾಗತಿ ಆ ಹೊತ್ತಿನಲ್ಲಿ, ಅವರ ನೆರವು ಬಯಸಿ, ಕರೆ ಕಳಿಸಿದಳು.

ನಾಗತಿಯ ಕರೆ ಬಂದಕೂಡಲೇ ಭುವನಪ್ಪನವರು ತೊಟ್ಟ ಉಡುಪಿನಲ್ಲೇ ಧಾವಿಸಿ ಬಂದರು. ಹಿಂದಿನ ರಾತ್ರಿ ನಾಯಕರು ಶವದಿದಿರು ನಡೆದ ಪ್ರಕರಣದಿಂದ ಅವರ ಚಿತ್ತ ಅಲ್ಲಕಲ್ಲೋಲವಾಗಿತ್ತು. ಬೆಳಗಿನಲ್ಲೇ ಈ ಅವಸರದ ಕರೆ ಬಂದುದನ್ನು ಕಂಡು ಮತ್ತೇನಾಯಿತೊ ಎಂದು ಅವರಿಗೆ ಗಾಬರಿಯಾಯಿತು.

ನಾಯಕರು ಇದ್ದಕ್ಕಿದ್ದಂತೆ ಶಿವಾಧೀನರಾದರೆಂದು ಕೇಳಿದಾಗಿನಿಂದಲೂ ಯಾವುದೋ ಅಸ್ಪಷ್ಟ ಭೀತಿ ಅವರ ಚಿತ್ತಕ್ಕೆ ಮುತ್ತಿಗೆಹಾಕಿತ್ತು. ಆ ಭೀತಿಯ ಸ್ವರೂಪ ಇಂತಹುದೇ ಎಂದು ಖಚಿತವಾಗಿ ಕಂಡಿದ್ದರೆ, ಅವರು ಅಷ್ಟು ಚಿಂತೆ ಮಾಡುತ್ತಿರಲಿಲ್ಲ. ಕೂಡಲೇ ಅದರ ನಿವಾರಣೆಗೆ ಪ್ರಯತ್ನ ಮಾಡುತ್ತಿದ್ದರು. ಆದರೆ ಆ ಭೀತಿ ಮುಖ ತೋರಿಸದೆ, ಸುಳಿದಾಡಿ ಅವರ ಎದೆಯನ್ನು ಹಿಂಡುತ್ತಿತ್ತು. ಹಿಂದಿನ ರಾತ್ರಿ ನಡೆದುದನ್ನೆಲ್ಲವನ್ನೂ ಕಂಡು ಕೇಳಿದ ಬಳಿಕಲಂತೂ ಆ ಭಯ ಹತ್ತಾರು ಬಗೆಯ ಗಂಭೀರ ರೂಪತಳೆದಿತ್ತು. ಎಂದೂ ಪರಪುರುಷರಿದಿರು ಮಾತನಾಡದ ನಾಗತಿ ನಿನ್ನೆ, ಅದೂ ಅಂತಹ ಹೊತ್ತಿನಲ್ಲಿ, ಸಾಮಾನ್ಯವಾಗಿ ಹೆಣ್ಣು ಪ್ರಚಂಡ ದುಃಖದ ಆಘಾತಕ್ಕೆ ಸೋತು ಮಾತು ಸತ್ತು ಕಂಬನಿಯಲ್ಲಿ ಕರಗಬೇಕಾದಂಥ ಹೊತ್ತಿನಲ್ಲಿ, ಅಷ್ಟು ಮಾತನಾಡಿದುದು, ಆ ಬಗೆಯ ಹಟ ಹಿಡಿದುದು, ಇದೆಲ್ಲದರ ಹಿಂದೆ ಬೇರೇನೋ ಇದೆ ಎಂಬುದರ ಕುರುಹುದೋರಿತ್ತು.

ಅದರ ಮೇಲೆ ಈಗ ಈ ಅವಸರದ ಕರೆ!

ಕರೆ ಬಂದ ಕೂಡಲೇ ಮನೆಯಿಂದ ಹೊರಟವರು ಹಾದಿಯಲ್ಲೇ ಹಿಡಂಬೇಶ್ವರನ ದೇವಸ್ಥಾನವನ್ನು ಹೊಕ್ಕು "ಭೂತನಾಥೇಶ್ವರಾ, ಈ ದುರ್ಗದ ಮೇಲೆ ನಿನ್ನ ಕೋಪದ ಕಣ್ಣು ಅರಳಿಸಬೇಡ ಪ್ರಭು!" ಎಂದು ಬೇಡಿ, ನಮಸ್ಕಾರ ಮಾಡಿ ಅರಮನೆಗೆ ಬಂದರು.

ಬಾಗಿಲ ಊಳಿಗದವರಿಂದ ಭುವನಪ್ಪನವರು ಬಂದಿದಾರೆ ಎಂಬ ಸುದ್ದಿಯನ್ನು ಕೇಳಿದ ಕೂಡಲೆ, ನಾಗತಿಯೇ ಬಾಗಿಲವರೆಗೂ ಹೋಗಿ ಅವರನ್ನು ಒಳಗೆ ಕರೆತಂದಳು.

"ಇಷ್ಟರಲ್ಲೇ ಮತ್ತೇನು ವಿಪರೀತ ನಡೆಯಿತು ತಾಯಿ ?"

—ನಾಗತಿಯನ್ನು ನೋಡುತ್ತಿದ್ದಂತೆಯೇ ಭುವನಪ್ಪನವರು ಕೇಳಿದರು.

"ವಿಪರೀತವೇನೂ ಇಲ್ಲ"

"ಸಧ್ಯ ಬದುಕಿದೆ!" ಸಮಾಧಾನದ ಭಾರವಾದ ನಿಟ್ಟುಸಿರಿಟ್ಟು ಹೇಳಿದರು ಭುವನಪ್ಪನವರು. "ಇಷ್ಟು ಅವಸರದ ಕರೆಬಂದುದನ್ನು ಕೇಳಿ

ಮತ್ತೇನಾಯಿತೋ ಎಂದು ಗಾಬರಿಯಾಗಿದ್ದೆ. ಒಂದು ಗಳಿಗೆ ಅವಕಾಶ ವಿತ್ತರೆ ಉಸಿರು ತಿರುಗಿಸಿಕೊಳ್ಳುತ್ತೇನೆ. ಬಳಿಕ ಉಳಿದ ಮಾತನ್ನು ಹೇಳ ಬಹುದು."

"ಅಂಥ ಗಾಬರಿಯ ಮಾತೇನೂ ಇಲ್ಲ, ಭುವನಪ್ಪನವರೇ. ನಮಗೆ ನಿಮ್ಮ ಅಪ್ಪಣೆ ಬೇಕಾಗಿತ್ತು."

"ಅಪ್ಪಣೆ! ನಾನು ಅಪ್ಪಣೆ ಮಾಡುವುದೇ? ಇದೇನು ಮಾತು ತಾಯಿ."

"ನಿಜ ಭುವನಪ್ಪನವರೇ—ಅಪ್ಪಣೆ"

"ಹೇಳಿ ತಾಯಿ ನನ್ನಿಂದ ಏನಾಗಬೇಕು?"

"ನಾಯಕರೊಂದಿಗೆ ಸಹಗಮನ ಮಾಡಲು ನಿಮ್ಮ ಅಪ್ಪಣೆ ಬೇಕಾ ಗಿತ್ತು ಭುವನಪ್ಪನವರೇ."

ಆ ಮಾತನ್ನು ಕೇಳಿ ಭುವನಪ್ಪನವರ ಮೈ ನಡುಗಿತು. ಕಣ್ಣು ಕಂಬನಿದುಂಬಿ ಎದೆಯ ವ್ಯಥೆಯನ್ನು ಸೂಚಿಸಿತು. ಆದರೆ ನಾಲಗೆ ಆ ಮಾತನ್ನು ನುಡಿಯಲು ಹಿಂಜರಿಯಿತು.

ನಾಗತಿಯೇ ಮಾತು ಮುಂದುವರಿಸಿ ಹೇಳಿದರು—

"ನಾಯಕರು ಇಲ್ಲದ ಈ ಅರಮನೆ, ಈ ಲೋಕದಲ್ಲಿ ನಮಗಿನ್ನೇನೂ ಕೆಲಸವಿಲ್ಲ. ಆದಷ್ಟು ಬೇಗ ಸ್ವರ್ಗದಲ್ಲಿರುವ ಸ್ವಾಮಿಯನ್ನು ಕೂಡುವ ಚಿಂತೆಯೊಂದೇ ನಮಗೆ ಉಳಿದಿರುವುದು. ನಿಶ್ಚಿಂತೆಯಾಗಿ ಆ ಕೆಲಸ ಮಾಡಲು ನಿಮ್ಮ ನೆರವು ಬೇಕು. ಅದಕ್ಕೆ ನಿಮ್ಮನ್ನು ಕರೆಸಿದೆ."

"ನನ್ನಿಂದಾಗಬೇಕಾದುದೇನು ಹೇಳಿ ತಾಯಿ, ಸೇವೆಗೆ ಸಿದ್ಧವಾಗಿ ದೇನೆ."

"ಭುವನಪ್ಪನವರೇ—ನಾಯಕರು ನಿಮ್ಮನ್ನು ತಂದೆಯಂತೆ ಕಾಣು ತ್ತಿದ್ದರು. ನನಗೂ ನೀವು ತಂದೆಯೇ. ಎಂತಲೇ ಯಾವ ಮಾತನ್ನೂ ನಾನು ನಿಮ್ಮಿಂದ ಮುಚ್ಚಿಡಬೇಕಾಗಿಲ್ಲ. ನಿನ್ನೆ ರಾತ್ರಿ ನಡೆದುವೆಲ್ಲವೂ ನಿಮಗೆ ಗೊತ್ತಿದೆ. ಪ್ರಭುವಿನ ಮನಸ್ಸೇನಿತ್ತೆಂಬುದನ್ನು ನೀವು ಬಲ್ಲಿರಿ. ನಿಮ್ಮಿಂದ ನಾನು ಬಯಸುವುದಿಷ್ಟೆ—ಸತ್ತು ಸ್ವರ್ಗದಲ್ಲಿರುವ ನಾಯಕರ ಮಾತನ್ನು ನಡಸಿಕೊಡಿ."

"ಆ ವಿಷಯದಲ್ಲಿ ನೀವು ಚಿಂತೆ ಮಾಡಬೇಕಾಗಿಲ್ಲ ತಾಯಿ. ನಿನ್ನೆ ನಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತೇನೆ."

"ಆದರೆ ನಿನ್ನೆ, ಅಲ್ಲಿ, ಎಲ್ಲರೆದುರಿಗೂ ಕೆಲವು ಮಾತುಗಳನ್ನು ಹೇಳಲಾಗಲಿಲ್ಲ. ಹೇಳುವುದು ಸಾಧ್ಯವೂ ಇರಲಿಲ್ಲ. ಅದನ್ನು ಹೇಳಬೇಕೆಂದೇ ನಿಮ್ಮನ್ನು ಕರೆಸಿದ್ದು."

"ಏನು ಹೇಳಿ ತಾಯಿ."

"ನಾನು ಸುಳ್ಳಾಡುವುದಿಲ್ಲ ಎಂದು ನಿಮಗೆ ನಂಬಿಕೆ ಇದೆಯೇ ಭುವನಪ್ಪನವರೇ?"

"ತಾಯಿ ಆ ಮಾತು ಕೇಳಿದರೆ, ಅದು ನಮಗೆ ಅಪಮಾನ."

"ಅದಕ್ಕಲ್ಲ ನಾನು ಹೀಗೆ ಕೇಳುತ್ತಿರುವುದು. ಇದು ನನ್ನ ತವರಿನ ನೆಂಟಿಗೆ ಸೇರಿದ ಮಾತು. ಹೆಣ್ಣಿಗೆ ತವರಿನಮೇಲೆ ಪ್ರೀತಿ ಹೆಚ್ಚು, ಅದಕ್ಕೆ ಬಲಿಯಾಗಿ ನಾನು ಈ ಮಾತಾಡುತ್ತಿದ್ದೇನೆ ಎಂದು ತಾವು ಭಾವಿಸಬಾರದು. ಅದಕ್ಕಾಗಿ ಕೇಳಿದೆ. ಜಡೇಕಲ್ಲು ಬಿಟ್ಟು, ದುರ್ಗದ ಅರಮನೆಯ ಹೊಸಿಲ ಮೇಲಿಟ್ಟ ಅಕ್ಕಿಯನ್ನು ಚಿಮ್ಮಿದಾಗಲೇ ನನಗೆ ಅಲ್ಲಿನ ನಂಟು ಕಡಿದುಹೋಯಿತು. ಅಲ್ಲಿಯ ಯಾವ ವ್ಯಾಮೋಹವೂ ನನಗಿಲ್ಲ. ನಾಯಕರ ಮನೆಯ ನಂದಾದೀಪ ಆರದೆ ಉರಿಯುತ್ತಿರಬೇಕೆಂಬುದೊಂದೇ ನನಗಿರುವ ಬಯಕೆ."

"ಅದನ್ನು ನಾನೂ ಬಲ್ಲೆ ತಾಯಿ. ಸೂರ್ಯನ ಬೆಳಕಿಗೆ ಸಾಕ್ಷಿ ಬೇಕೆ?"

"ಎಂತಲೇ ನಾಯಕರು ನನ್ನ ತಮ್ಮನನ್ನು ಸಾಕಿಕೊಳ್ಳುತ್ತೇನೆ ಎಂದಾಗ ಅದನ್ನು ವಿರೋಧಿಸಿದವಳು ನಾನು. ಈ ಮಾತು ನನಗೆ, ನಾಯಕರಿಗೆ ವಿನಾ ಬೇರಾರಿಗೂ ತಿಳಿದಿರಲಿಲ್ಲ. ಆದರೆ ಈ ಕಾರ್ಯದಲ್ಲಿ ಅವರ ಉದ್ದೇಶವೇನಿತ್ತೆಂಬುದನ್ನು ಅವರ ಬಾಯಿಂದಲೇ ಕೇಳಿದ ಮೇಲೆ ಎಲ್ಲಭಾರವನ್ನು ಅವರ ಮೇಲೆ ಹಾಕಿ ಸುಮ್ಮನಾದೆ. ನಿನ್ನೆ....ನಿನ್ನೆ.... ಅವರು ಕಣ್ಣು ಮುಚ್ಚುವ ಮೊದಲು...."

ಆ ಮಾತನ್ನಾಡುತ್ತಾ ಆಡುತ್ತಾ ಶೋಕ ಮರುಕಳಿಸಿ, ಮಾತಿಗಿಂತ ಅಳು ಮುಂದಾಗಿ ನುಗ್ಗಿತು. ಅದು ಹೊರಬರದಂತೆ ನಾಗತಿ ತುಟಿಯನ್ನು

ಬಲವಾಗಿ ಕಚ್ಚಿದಳು. ಅದನ್ನು ನೋಡಿ, ಭುವನಪ್ಪನವರು ಚಾಟಿಯ ಏಟು ತಿಂದಂತೆ ಮಿಡುಕಿದರು. ಒಂದೆರಡು ಗಳಿಗೆ ಸುಮ್ಮನಿದ್ದು ಉಕ್ಕಿ ಬರುವ ದುಃಖಕ್ಕೆ ಕರ್ತವ್ಯದ ಕಡಿವಾಣ ಬಿಗಿದು ನಾಗತಿ ಹೇಳಿದಳು.

"........ಅವರ ಬಳಿಯಲ್ಲೇ ಇದ್ದ ನನ್ನ ಕೈಯನ್ನು ಹಿಡಿದು 'ಗೌರಾ........ನಾನಿನ್ನು ಬದುಕುವುದಿಲ್ಲ. ನಮ್ಮ ಬಳಿಕ ಓಬಣ್ಣ ಸಿಂಹಾಸನಕ್ಕೆ ಬರಲಿ. ಎಲ್ಲರಿಗೂ ಹೇಳು. ಇದೇ ನಮ್ಮ ಬಯಕೆ' ಎಂದು ಹೇಳಿದರು. ಅವರ ಮಾತನ್ನು ನಿಮಗೆ ಹೇಳಬೇಕೆಂದೇ ನಾನು ಉಳಿದು ಕೊಂಡೆ. ನಿಮ್ಮ ಮುಂದೆ ಈ ವಿಷಯದಲ್ಲಿ ಪ್ರಭುಗಳು ಮಾತಾಡಿದ್ದರೇ ಭುವನಪ್ಪನವರೇ? ನಿಮ್ಮೊಬ್ಬರಲ್ಲಿ ಅವರಿಗೆ ನಂಬಿಕೆ ಇತ್ತು."

"ನಿಮ್ಮ ಮಾತು ಸುಳ್ಳೆನ್ನಲಾರೆ ತಾಯಿ, ಆದರೂ ಈ ವಿಷಯದಲ್ಲಿ ಹೀಗೆ ತಮ್ಮ ಅಭಿಪ್ರಾಯ ಎಂದು ನಾಯಕರು ಎಂದೂ ನನಗೆ ತಿಳಿಸಿರಲಿಲ್ಲ. ಆದರೂ ಲಿಂಗಣ್ಣ ಸಿಂಹಾಸನಕ್ಕೆ ಬರುವುದು ಅವರಿಗೆ ಇಷ್ಟವಿರಲಿಲ್ಲವೆಂಬುದಷ್ಟನ್ನು ನಾನು ಊಹಿಸಿದ್ದೆ. ಆದರೆ ಏಕೆಂದು ಮಾತ್ರ ಅರಿಯೆ. ಎಲ್ಲ ವಿಷಯವನ್ನು ನನ್ನೊಂದಿಗೆ ಬಿಚ್ಚಿ ಹೇಳುತ್ತಿದ್ದ ನಾಯಕರು ಇದೊಂದರಲ್ಲಿ ಮಾತ್ರ ಏಕೋ ಎದೆಬಿಚ್ಚಿ ಮಾತಾಡಲು ಹಿಂಜರಿಯುತ್ತಿದ್ದರು."

"ಅದಕ್ಕೆ ಕಾರಣವಿತ್ತು ಭುವನಪ್ಪನವರೇ."

"ನನಗೆ ಹೇಳಬಹುದಾದಂಥ ಕಾರಣವಾದರೆ........"

"ನಿಮ್ಮಲ್ಲಿ ಹೇಳಬಾರದಂಥಾ ಮಾತು ಯಾವುದೂ ಇಲ್ಲ. ಪ್ರಭುಗಳಿಗೇ ಅವರ ಸಂದೇಹ ಖಚಿತವಾಗದಿದ್ದರೆ ನಿಮಗೆ ತಿಳಿಸುತ್ತಿದ್ದರು. ಆದರೆ ಅವರಿನ್ನೂ ಹೀಗೇ ಎಂದು ನಿರ್ಧಾರಕ್ಕೆ ಬಂದಿರಲಿಲ್ಲ. ನಾನೂ ಪ್ರಭುಗಳ ಮಾತನ್ನು ಸಂದೇಹಿಸಿದ್ದೆ- ಆದರೆ ನಿನ್ನೆ ನಡೆದುದನ್ನು ಕಂಡ ಮೇಲೆ ಅವರ ಅನುಮಾನ ಸತ್ಯವೆಂದು ನನಗೂ ಮನವರಿಕೆ ಆಯಿತು. ಎಂತಲೇ ಆಗ ಅದನ್ನು ನಿಮಗೆ ಹೇಳಬೇಕೆಂದೇ ಕರೆಸಿದೆ."—ಎಂದು ಗೌರವ್ವನಾಗತಿ ದಳವಾಯಿಗಳ ಬಗ್ಗೆ ನಾಯಕರಿಗಿದ್ದ ಭೀತಿ, ಅದಕ್ಕಾಗೇ ಲಿಂಗಣ್ಣ ನಾಯಕರನ್ನು ದತ್ತು ಸ್ವೀಕಾರ ಮಾಡಲು ಹಿಂಜರಿದುದು ಎಲ್ಲವನ್ನೂ ಸಾಂಗವಾಗಿ ವಿವರಿಸಿದಳು. ನಾಗತಿ ಹೇಳಿದು

ದನ್ನು ಕೇಳಕೇಳುತ್ತಾ ಭುವನಪ್ಪನವರ ಮುಖದಲ್ಲಿ ಚಿಂತೆಯ ಕಾರ್ಮೋಡ ಗಳು ದಟ್ಟವಾಗಿ ಕವಿಯಲಾರಂಭಿಸಿದುವು.

"ದಳವಾಯಿಗಳು ಲಿಂಗಣ್ಣ ನಾಯಕನನ್ನು ಎತ್ತಿ ಕಟ್ಟುತ್ತಿರುವುದ ರಲ್ಲಿ ಏನೋ ಸಂಚಿದೆ ಭುವನಪ್ಪನವರೇ, ಇಲ್ಲವಾದಲ್ಲಿ ಅರಮನೆಯವರು, ಮಂತ್ರಿಗಳು ಸಮಾಲೋಚನೆ ಮಾಡಿ ಆಡಬೇಕಾದ ಮಾತನ್ನು ದಳವಾಯಿ ಗಳೇ ಮುಂದಾಗಿ ಆಡಬೇಕಾದ ಅಗತ್ಯವಿರಲಿಲ್ಲ. ಅವರು ಆಡಿದ ಮಾತನ್ನು, ನಮ್ಮೊಂದಿಗೆ ನಡೆದುಕೊಂಡ ಬಗೆಯನ್ನು ನೀವೇ ಎದುರಿಗಿದ್ದು ಅರಿತುಕೊಂಡಿದೀರ. ಈಗ ನೀವೇ ಹೇಳಿ–ಪ್ರಭುಗಳ ಸಂದೇಹ ನಿರಾಧಾರ ವಾದದ್ದೇ ?"

"ತಾಯಿ––ಇದು ನಾನು ಎಂದೆಂದೂ ಕನಸುಮನಸಿನಲ್ಲಿಯೂ ಊಹಿಸದಂಥ ಪರಿಸ್ಥಿತಿ. ಇದು ಎಷ್ಟು ಅನಿರೀಕ್ಷಿತವೋ ಅಷ್ಟೇ ಭಯಂಕರ. ಭೂತನಾಥೇಶ್ವರನೇ ದುರ್ಗವನ್ನು ಈ ವಿಪತ್ತಿನಿಂದ ಕಾಪಾಡ ಬೇಕು ?"

—ನಾಗತಿ ಆಡಿದ ಮಾತು ಕೇಳಿ ಭುವನಪ್ಪನವರು ದಿಗ್ಭ್ರಾಂತ ರಾಗಿ ಹೇಳಿದರು.

"ನಿಜ, ಭುವನಪ್ಪನವರೇ. ದುರ್ಗಕ್ಕೊಂದು ಭೂತನಾಥೇಶ್ವರನೇ ದಿಕ್ಕು. ಆದರೂ ನಾವು ಪರಿಸ್ಥಿತಿಯನ್ನು ಅರಿತವರು ಸುಮ್ಮನಿರುವುದು ಸಾಧ್ಯವೇ ? ಪ್ರಭುಗಳ ಬಯಕೆ ಬರೀ ಗಾಳಿ ಮಾತಾಗಬೇಕೇ ?"

"ಎಲ್ಲಿಯಾದರೂ ಉಂಟೆ ತಾಯಿ, ಜೀವಕೊಟ್ಟಾದರೂ ಅವರ ಮಾತು ನಡಸಿದರೇ ಅವರಿಟ್ಟ ಉಪ್ಪುಂಡುದಕ್ಕೆ ಸಾರ್ಥಕ."

"ಅವರ ಮಾತನ್ನು ನಡೆಸಲು ದಾರಿಯಾರೆಂದು ನನಗಂತೂ ಕಾಣುತ್ತಿಲ್ಲ ಭುವನಪ್ಪನವರೇ—ನೀವೇ ಮಾರ್ಗದರ್ಶಕರಾಗಬೇಕು."

"ತುಂಬಾ ಗಡಚಾದ ಸಮಸ್ಯೆ ಇದು ತಾಯಿ. ಇದನ್ನು ಬಿಡಿಸು ವುದು ಕತ್ತಿಯ ಮೇಲೆ ಸಾಮು ಮಾಡಿದಷ್ಟು ಕಷ್ಟ. ದೊರೆಗಳ ಮನಸ್ಸಿ ನಲ್ಲಿದ್ದ ಭೀತಿಯನ್ನು ಬಾಯಿಬಿಟ್ಟು ಆಡಿದರೆ, ಬರುತ್ತೇನೆ ಎನ್ನುವ ವಿಪತ್ತಿಗೆ ನಾವೇ ಬಾಗಿಲು ತೆಗೆದು ಬಾ ಎಂದಂತಾಗುತ್ತದೆ. ಅದನ್ನು

ಹೇಳದೆ, ದತ್ತು ಸ್ವೀಕಾರವಾಗದ ಓಬಣ್ಣನಾಯಕರನ್ನು ಪಟ್ಟಕ್ಕೆ ಒಪ್ಪಿಕೊಳ್ಳಿ ಎಂದು ಹೇಳಿ ಒಪ್ಪಿಸುವುದೂ ಕಷ್ಟ."

"ಈ ಸಮಸ್ಯೆಯ ನಿವಾರಣೆಗೆ ದಾರಿಯೇ ಇಲ್ಲವೇ ಭುವನಪ್ಪನವರೇ ?"

"ಏನು ಹೇಳಬೇಕೋ ನನಗಂತೂ ತೋಚುತ್ತಿಲ್ಲ ತಾಯಿ."

—ಚಿಂತೆಯ ತೂಕದಿಂದ ಭಾರವಾದ ತಲೆಯಾಡಿಸುತ್ತಾ ಹೇಳಿದರು ಭುವನಪ್ಪನವರು.

"ಅದಕ್ಕೆಂದೇ ನಿನ್ನೆ ನಾನು ಅಷ್ಟು ಹಟ ಹಿಡಿದದ್ದು."

"ಅದೂ ಸರಿಯಾಗುತ್ತಿರಲಿಲ್ಲ. ವೃಥಾ ಹಗರಣವಾಗುತ್ತಿತ್ತು. ಓಬಣ್ಣನಾಯಕರು ನಾಯಕರಾಗಲೇ ಕೂಡದು ಎಂದು ದಳವಾಯಿಗಳು ಹಟ ಹಿಡಿದಿದ್ದರೆ, ಆಗ ಪ್ರಸಂಗ ಪ್ರಕೋಪಕ್ಕೆ ಹೋಗುತ್ತಿತ್ತು. ಆದ್ದರಿಂದ ನಿನ್ನಿನದು ಹಾಗೆ ಮುಕ್ತಾಯವಾದುದೇ ಸರಿ........"

"ಹಾಗಾದರೆ ಮುಂದೆ ದಾರಿ ?"

—ನಿಧಾನವಾಗಿ ನಿರಾಶೆಯ ಆಳದಲ್ಲಿ ಮುಳುಗುತ್ತಾ ನಾಗತಿಯು ಕೇಳಿದಳು. ಅವರ ಪ್ರಶ್ನೆಗೆ ಕೂಡಲೇ ಉತ್ತರ ಕೊಡದೆ ಭುವನಪ್ಪನವರು ಅಷ್ಟು ಹೊತ್ತು ಚಿಂತಿಸುತ್ತಾ ಕುಳಿತರು. ನಾಗತಿಯೂ ಅವರ ಮುಖವನ್ನೇ ನೋಡುತ್ತಾ, ಏನು ಹೇಳುವರೋ ಎಂದು ಕಾದು, ಉಸಿರು ಬಿಗಿಹಿಡಿದು ಕುಳಿತಳು. ಸ್ವಲ್ಪ ಹೊತ್ತಾದ ಮೇಲೆ ಯಾವುದೋ ನಿರ್ಧಾರಕ್ಕೆ ಬಂದವರಂತೆ ಭುವನಪ್ಪನವರು ಹೇಳಿದರು.

"ಈಗ ನನಗೆ ತೋಚುವುದು ಒಂದೇ ದಾರಿ...."

"ಏನು ಹೇಳಿ ?"

"ದೊರೆಗಳಂತೂ ದತ್ತು ಸ್ವೀಕಾರ ಮಾಡಲಿಲ್ಲ. ದೊರೆಗಳ ಅಂತ್ಯಕ್ರಿಯೆಗಳೆಲ್ಲವೂ ಮುಗಿದ ಬಳಿಕ ಆ ಕೆಲಸವನ್ನು ಮಾಡಿದರೆ ಮುಂದಿನದು ಅಷ್ಟು ಕಷ್ಟವಾಗುವುದಿಲ್ಲ."

"ಆದರೆ ದತ್ತು ಸ್ವೀಕಾರ ಯಾರು ಮಾಡಿಕೊಳ್ಳಬೇಕು ಭುವನಪ್ಪನವರೇ ?"

"ನಾಗತಿಯವರು."

“ ನಾನೇ ! ”

“ ಊಹೂ, ನೀವು ದತ್ತು ಸ್ವೀಕಾರ ಮಾಡಿಕೊಂಡರೆ ಅದರಿಂದ ಸಮಸ್ಯೆ ಪರಿಹಾರವಾಗುವುದರ ಬದಲು ಮತ್ತಷ್ಟು ಗಡಚಾಗುತ್ತದೆ. ಈ ಜನದ ಮನಸ್ಸನ್ನು ನಾನು ಬಲ್ಲೆ. ವೃಥಾ ನಿಮ್ಮ ತಲೆಗೆ ಅಪಖ್ಯಾತಿಯನ್ನು ಕಟ್ಟುತ್ತದೆ.”

“ ಅಬ್ಬಾ ! ಬದುಕಿದೆ ! ದೊರೆಯೊಂದಿಗೆ ಹೋಗಲು ಇದೆಲ್ಲಿಯ ಅಡ್ಡಿ ಬಂದಿತೋ ಎಂದು ಹೆದರಿದ್ದೆ. ನನ್ನನ್ನು ಉಳಿಸಿದಿರಿ ಭುವನಪ್ಪ ರವರೇ.”

“ ನಿಮ್ಮಿಂದಲೇ ಈ ಕಾರ್ಯವಾಗಬೇಕಾಗಿದ್ದರೆ ಅಡ್ಡ ಬರುತ್ತಿದ್ದೆ ತಾಯಿ. ಆದರೆ ಇದು ನೀವು ಮಾಡುವಂತಹುದಲ್ಲ.”

“ ಹಾಗಾದರೆ ಮತ್ತೆ ಯಾರು ? ”

“ ಹಿರಿಯ ನಾಗತಿಯವರು.”

“ ಅಕ್ಕನವರೇ ! ”

—ಅಚ್ಚರಿ ನಿರಾಶೆಗಳು ಬೆರೆತ ಧ್ವನಿಯಲ್ಲಿ ಕೇಳಿದಳು ನಾಗತಿ.

“ ಅಹುದು ತಾಯಿ. ಅವರು ದೊರೆಗಳ ಪಟ್ಟ ಮಹಿಷಿ. ದತ್ತು ಸ್ವೀಕಾರದ ಅಧಿಕಾರವಿರುವುದು ಅವರಿಗೆ. ಅವರೇ ಓಬಣ್ಣನಾಯಕರನ್ನು ದತ್ತು ತೆಗೆದುಕೊಂಡರೆ ಆಗ ಯಾರೂ ಯಾವ ಮಾತೂ ಆಡುವುದಕ್ಕೆ ಅವಕಾಶವಿರುವುದಿಲ್ಲ.

“ ಅಕ್ಕನವರು ಈಗಾಗಲೇ ಸಹಗಮನಕ್ಕೆ ಸಿದ್ಧತೆಗಳನ್ನು ಮಾಡಿ ಕೊಳ್ಳುತ್ತಿದ್ದಾರೆ ಭುವನಪ್ಪನವರೇ. ಅವರನ್ನು ತಡೆಯುವುದು ಹೇಗೆ ? ನನ್ನ ತಮ್ಮನಿಗೆ ಪಟ್ಟಮಾಡಿಸುವುದಕ್ಕೋಸ್ಕರ ನೀನು ಬದುಕು ಎಂದು ಯಾವ ಮುಖವಿಟ್ಟುಕೊಂಡು ಹೇಳಲಿ ಭುವನಪ್ಪನವರೇ. ರಾತ್ರಿಯಿಂದ ಅವರು ಶಿವಮಂದಿರ ಬಿಟ್ಟು ಕದಲಿಲ್ಲ. ಸಹಗಮನದ ಹೊತ್ತು ಯಾವಾಗ ಬಂದೀತೋ ಎಂದು ಕಾದು ಕುಳಿತಿದಾರೆ.”

“ ನಿಜ ತಾಯಿ ನಾನೂ ಬಲ್ಲೆ. ಆದರೂ, ಕರ್ತವ್ಯದಿದಿರು ಸ್ವರ್ಗದ ಬಯಕೆಯೂ ತಲೆಬಾಗಬೇಕು.”

“ ಈ ಮಾತನ್ನು ಅಕ್ಕನವರಿಗೆ ಯಾರು ಹೇಳಬೇಕು, ಹೇಗೆ ಹೇಳ

ಬೇಕು? ಪತಿಯೊಂದಿಗೆ ಕಿಚ್ಚಿಗೇರಬೇಕೆಂಬ ಆತುರ ನನಗಿರುವಷ್ಟೇ ಅಕ್ಕ ನಿಗೂ ಇದೆ. ಹೀಗಿರುವಾಗ........"

"ನಿಜ, ಬೇರಾರೂ ಈ ಮಾತನ್ನು ಹಿರಿಯ ನಾಗತಿಯರಿಗೆ ಹೇಳಲು ಸಾಧ್ಯವಿಲ್ಲ."

"ಅಂದರೆ........"

"ಅಂದರೆ....ನಾನೇ ಹೇಳಬೇಕು."

"ನೀವು ? ! "

"ಹೌದು ತಾಯಿ ನಾನು. ನಾನೇ ಹೋಗಿ ಹೇಳುತ್ತೇನೆ—ಪ್ರಭು ವಿನ ಮಡದಿಯಾಗಿ ನೀವು ಸ್ವರ್ಗಕ್ಕೆ ಹೋಗುವುದು ಸಾಧ್ಯವಿಲ್ಲ, ರಾಜ್ಯಕ್ಕೆ ತಾಯಿಯಾಗಿ ಉಳಿಯಲೇ ಬೇಕು ಎಂತ. ಈಗ ಬೇರಾವ ಚಿಂತೆಗೂ ವೇಳೆಯಿಲ್ಲ ತಾಯಿ. ನಾನು ಹೋಗಿ ಹಿರಿಯ ನಾಗತಿಯರನ್ನು ಕಂಡು ಬರುತ್ತೇನೆ, ಚಿಂತೆಮಾಡಬೇಡಿ ತಾಯಿ. ಈ ದುರ್ಗಕ್ಕೆ ಭೂತನಾಥೇಶ್ವರನ ರಕ್ಷೆಯಿದೆ, ಅರಮನೆಗೆ ಸಿದ್ಧರ ಹರಕೆಯಿದೆ."

—ಎಂದು ನುಡಿದು ಭುವನಪ್ಪನವರು ನಾಗತಿಗೆ ನಮಸ್ಕರಿಸಿ, ಹಿರಿಯ ನಾಗತಿಯರ ಅಂತಃಪುರದತ್ತ ತೆರಳಿದರು.

೫

ಭುವನಪ್ಪನವರು ಹಿರಿಯ ನಾಗತಿ ಓಬವ್ವನವರ ಅಂತಃಪುರದ ಬಳಿ ಬಂದಾಗ ಅಲ್ಲಿ ಸಹಗಮನದ ಸಿದ್ಧತೆಗಳು ವೇಗದಿಂದ ನಡೆಯುತ್ತಿದ್ದುದು ಕಾಣಿಸಿತು.

ನಾಗತಿಯರ ಸಜ್ಜೆಯ ನೂರಾರು ದಾಸಿಯರಲ್ಲಿ ಒಬ್ಬರಿಗೂ ಬಾಗಿಲ ಬಳಿ ಬಂದ ಭುವನಪ್ಪನವರನ್ನು ನೋಡಲು ವ್ಯವಧಾನವಿರಲಿಲ್ಲ. ವಿವಾಹ ಮಹೋತ್ಸವಕ್ಕೆಂಬಂತೆ ಸಿದ್ಧತೆಗಳು ನಡೆದಿದ್ದುವು. ಅರಶಿನ, ಕುಂಕುಮ ಗಳಿಂದ ತುಂಬಿದ ನೂರಾರು ಹೊನ್ನು, ಬೆಳ್ಳಿಯ ಹರಿವಾಣಗಳು, ಗಂಗಾ ಪೂಜೆಯ ವೇಳೆಯಲ್ಲಿ ಮುತ್ತೈದೆಯರಿಗೆ ಕೊಡಲು ಸಿದ್ಧವಾದ ಬಾಗಿನ ಮೊರಗಳ ಸಾಲು ಸಾಲು; ಬ್ರಾಹ್ಮಣರಿಗೆ ದಾನಮಾಡಲು ತೆಗೆದಿಟ್ಟ ಪಂಚೆ, ವಸ್ತ್ರ, ಶಾಲುಗಳ ಮೂಟೆಗಳು ; ದಾನಕ್ಕೆಂದು ಹೊರತೆಗೆಯ

ಲ್ಪಟ್ಟ ನಾಗತಿಯರ ವಸ್ತ್ರಾಭರಣಗಳು—ಇದೆಲ್ಲವೂ ಭುವನಪ್ಪನವರ ಕರುಳನ್ನು ಹಿಂಡಿದುವು. 'ತಾಯಿ, ನಿನ್ನ ಉತ್ಸಾಹಕ್ಕೆ ಅಡ್ಡಿ ಬಂದ ಈ ನಿರ್ಭಾಗ್ಯ ಮಗನನ್ನು ಕ್ಷಮಿಸು' ಎಂದು ತಮಗೆ ತಾವೇ ಹೇಳಿಕೊಂಡು ಅಯಾಚಿತವಾಗಿ ಕಣ್ಣಲ್ಲಿ ಮೂಡಿದ ಕಂಬನಿಯನ್ನು ಉತ್ತರೀಯದ ತುದಿಯಿಂದ ಒರಸಿಕೊಂಡು, ತಾವು ಬಂದುದರ ಪರಿವೆಯೂ ಇಲ್ಲದೆ ಕೆಲಸದಲ್ಲಿ ತೊಡಗಿದ್ದ ದಾಸಿಯರಲ್ಲಿ ಒಬ್ಬಳನ್ನು ತಾವೇ ಕರೆದು—

"ನಾಗತಿಯರಿಗೆ, ಅವರನ್ನು ಕಾಣಲು ಬಂದಿದೇನೆ ಎಂದು ಹೇಳು"

—ಎಂದರು.

"ನಾಗತಿಯುವರು ಪೂಜಾಗೃಹದಲ್ಲಿದಾರೆ. ಪೂರೋಹಿತರು ಬರುವವರೆಗೂ ಯಾರೂ ಕರೆಯಕೂಡದು ಎಂದು ಅಪ್ಪಣೆ ಮಾಡಿದಾರೆ ಬುದ್ಧಿ, ಕರೆದರೆ ಸಿಟ್ಟಾದಾರು."

—ಎಂದಳು ದಾಸಿ.

"ನಾಗತಿಯರು ಸಿಟ್ಟಾದರೆ ಅದಕ್ಕೆ ನಾನು ತಲೆಕೊಡುತ್ತೇನೆ. ತುಂಬಾ ಅವಸರದ ಕೆಲಸವಿದೆಯೆಂದು ಹೇಳು....ಬೇಡ....ನೀನು ಹೇಳುವುದು ಬೇಡ, ಪೂಜಾಗೃಹಕ್ಕೆ ದಾರಿತೋರಿಸು. ಹೇಳುವ ಮಾತನ್ನು ನಾನೇ ಹೇಳುತ್ತೇನೆ."

—ಎಂದು ಭುವನಪ್ಪನವರು, ಬೇರೆ ದಾರಿ ತೋರದೆ ಅವರಿಗೆ ಪೂಜಾಗೃಹದ ದಾರಿಯನ್ನು ತೋರಬಂದ ದಾಸಿಯನ್ನು ಹಿಂಬಾಲಿಸಿ ನಡೆದರು.

ಅವರು ಪೂಜಾಗೃಹವನ್ನು ಸಮೀಪಿಸುತ್ತಿದ್ದ ಹಾಗೇ, ನಾಗತಿಯು ಮೃದುಗಂಭೀರ ಕಂಠದಿಂದ ನುಡಿಯುತ್ತಿದ್ದ ಪಾರ್ವತೀ ಸ್ತೋತ್ರ ಕೇಳಿಬಂದು, ಇದೇ ಪೂಜಾಗೃಹವೆಂದು ಸಾರಿ ಹೇಳಿತು. ಅಲ್ಲಿ ನಡೆಯುವ ಪೂಜೆ ಬೇರೆಯವರಿಗೆ ಕಾಣಿಸಬಾರದೆಂದು ನವಿರಾದ ರೇಶಿಮೆಯ ತೆರೆ ಎಳೆದಂತೆ ಪೂಜಾಗೃಹದ ತುಂಬಾ ಅಗರುಚಂದನದ ಪರಿಮಳಮಯ ಧೂಪ ಧೂಮ ಕವಿದಿತ್ತು. ತೊಳೆದು ಥಳಥಳಿಸುವ ಬೆಳ್ಳಿಯ ಮಂಟಪದ ನಡುವಿನಲ್ಲಿ ಸೂತ್ರಹಚ್ಚಿದ ನೂರಾರು ದೀಪಗಳ ಬೆಳಕಿನಲ್ಲಿ, ಹೂವಿನ ರಾಶಿಯಲ್ಲಡಗಿದ ಸುವರ್ಣ ದೇವತಾವಿಗ್ರಹಗಳು ದೀಪದಷ್ಟೇ ಪ್ರಕಾಶ

ಮಾನವಾಗಿ ಹೊಳೆಯುತ್ತಿದ್ದುವು. ಮಂಟಪದ ಇದಿರು, ಶುಭ್ರಶ್ವೇತ ವಸನವನ್ನುಟ್ಟು, ಲಲಾಟದಲ್ಲಿ ಕುಂಕುಮರಹಿತ ವಿಭೂತಿಯನ್ನು ಧರಿಸಿ, ಪದ್ಮಾಸನದಲ್ಲಿ, ಕಣ್ಣುಮುಚ್ಚಿ ಕುಳಿತ ನಾಗತಿಯೂ ಭುವನಪ್ಪನವರ ಕಣ್ಣಿಗೆ ವಿಗ್ರಹದಂತೆಯೇ ತೋರಿದಳು.

ಧ್ಯಾನಮಗ್ನಳಾದ ನಾಗತಿಯನ್ನು ಆ ಧ್ಯಾನದಿಂದ ಕದಲಿಸಲು ಭುವನಪ್ಪನವರಿಗೆ ಮನಸ್ಸಾಗಲಿಲ್ಲ. ಅನಿವಾರ್ಯವಾಗಿ ಹಾಗೆ ಮಾಡಬೇಕಾಗಿ ಬಂದಾಗ, ಬಹು ಸುಂದರವಾದ ವಸ್ತುವೊಂದನ್ನು ಅನಿವಾರ್ಯವಾಗಿ ಕೆಡಿಸುವಾಗ ಉಂಟಾಗುವ ವ್ಯಥೆ ಅವರನ್ನು ಕಲಕಿತು. ಆದರೆ ಆ ಭಾವನೆಯನ್ನು ಹತ್ತಿಕ್ಕಿ 'ತಾಯೀ ತಾಯೀ' ಎಂದು ಎರಡು ಮೂರು ಬಾರಿ ಕೂಗಿದರು.

ಕೂಗನ್ನು ಕೇಳಿ ಕಣ್ಣುತೆರೆದ ನಾಗತಿ ಅನಿರೀಕ್ಷಿತವಾಗಿ ಪೂಜಾಗೃಹದ ಬಾಗಿಲಲ್ಲಿ ಭುವನಪ್ಪನವರನ್ನು ಕಂಡು ಚಕಿತಳಾದಳು. ಅವಳು ಕಣ್ಣು ತೆರೆದುದನ್ನು ಕಂಡಕೂಡಲೇ ಭುವನಪ್ಪನವರ ಬಳಿ ನಿಂತಿದ್ದ ದಾಸಿ ಅವಳ ಕಣ್ಣಿಗೆ ಬೀಳದಂತೆ ಮರೆಯಾದಳು.

"ತಾಯಿಯವರ ಪೂಜೆಗೆ ನನ್ನಿಂದ ವಿಘ್ನವಾಯಿತೇನೋ ಕ್ಷಮಿಸಬೇಕು."

"ಇಲ್ಲಿನ ಪೂಜೆ ಸಾಕೆಂದು ಶಿವನೇ ಹೇಳಿದಮೇಲೆ, ಅದರಲ್ಲಿ ಒಂದು ಗಳಿಗೆ ಹೆಚ್ಚಾದರೇನು, ಕಡಿಮೆಯಾದರೇನು."

—ನಾಗತಿಯ ಸ್ವರದಲ್ಲಿ ಯಾವ ಉದ್ರೇಕವೂ ಇರಲಿಲ್ಲ. ಆ ಮಾತನ್ನಾಡುವಾಗ ಶಾಂತ ಧ್ವನಿಯಲ್ಲಿ ನುಡಿದಳು.

"ತಾಯಿಯವರಲ್ಲಿ ಅವಸರದ ಮಾತಾಡುವುದಿತ್ತು. ಅದಕ್ಕಾಗಿ ಮೊದಲೇ ತಿಳಿಸದೆ, ಪೂಜಾಗೃಹದಲ್ಲಿದ್ದರೂ ಬಂದು ತೊಂದರೆ ಕೊಡಬೇಕಾಯಿತು."

"ಕಾರ್ಯವಿಲ್ಲದೆ ನೀವು ಬರುವುದಿಲ್ಲವೆಂದು ನಾನು ಬಲ್ಲೆ. ಸಂಕೋಚವೇಕೆ ಹೇಳಿ. ಈ ಲೋಕದಲ್ಲಿ ಉಳಿದಿರುವಷ್ಟು ಹೊತ್ತು ನಿಮ್ಮಂಥವರ ಕಾರ್ಯಕ್ಕಾದರೆ ಬದುಕು ಸಾರ್ಥಕವಾಗುತ್ತದೆ.

"ಕ್ಷಮಿಸಬೇಕು, ಇಲ್ಲಿ ಮಾತಾಡಲು ಯಾವ ತೊಂದರೆಯೂ ಇಲ್ಲವಷ್ಟೆ?

—ಪೂಜಾಮಂದಿರದ ಹೊರ—ಒಳಗೆ ಕಣ್ಣಾಡಿಸಿ ಕೇಳಿದರು ಭುವನಪ್ಪನವರು.

“ಇಲ್ಲಿ ಯಾರೂ ಬರುವುದಿಲ್ಲ. ಹೇಳಬೇಕಾದ ಮಾತನ್ನು ಸಂಕೋಚವಿಲ್ಲದೆ ಹೇಳಬಹುದು.”

ವಿಷಯವನ್ನು ತಿಳಿಸಬಹುದೆಂದು ನಾಗತಿಯ ಅಪ್ಪಣೆಯಾದರೂ, ಈ ಲೋಕದ ಚಿಂತೆಯನ್ನು ತೊರೆದು ನಿಂತಿದ್ದ ನಾಗತಿಗೆ ಮತ್ತೆ ಇಲ್ಲಿನ ವ್ಯವಹಾರದ ಬೇಡಿಯನ್ನು ಬಿಗಿಯುವ ಮಾತನ್ನೂ, ಈ ಬಂಧನಕ್ಕೆ ಅವಳು ತಾನಾಗಿಯೇ ಒಪ್ಪಿಕೊಳ್ಳಬೇಕೆಂಬ ಬೇಡಿಕೆಯನ್ನೂ ಹೇಗೆ ಹೇಳುವುದು? ಕೊಂಚ ಹೊತ್ತು ಈ ಚಿಂತೆಯನ್ನೇ ಅಳೆದು ಸುರಿದು ಕೊನೆಗೆ ನೇರವಾದ ಮಾರ್ಗವೇ ಉಚಿತವಾದುದೆಂದು ನಿರ್ಧರಿಸಿ ಭುವನಪ್ಪನವರು ಹೇಳಿದರು.

“ನಾಯಕರೊಂದಿಗೆ ನಾಗತಿಯವರೂ ದುರ್ಗವನ್ನು ತಬ್ಬಲಿ ಮಾಡಲು ನಿರ್ಧರಿಸಿದಂತಿದೆ.”

“ಅದರಲ್ಲಿ ಆಶ್ಚರ್ಯದ ಮಾತೇನಿದೆ? ನಾಯಕರು ಕಣ್ಣು ಮುಚ್ಚಿದಾಗಲೇ ನಮ್ಮ ಪಾಲಿಗೆ ಈ ಲೋಕ ಇಲ್ಲವಾಯಿತು. ಕನಸಿದ್ದ ಹಾಗೆ ನಮ್ಮ ಬಾಳು. ಸೂರ್ಯ ಮುಳುಗಿದರೆ ಇದರ ಕಥೆಯೂ ಮುಗಿದಂತೆಯೇ?”

“ಅದನ್ನು ನಾನು ಬಲ್ಲೆ, ಆದರೆ ತಾಯಿಯವರು ಮಕ್ಕಳ ಚಿಂತೆ ಮಾಡಬೇಡವೇ?”

“ದೇವರು ಕೊಡದ ಮಕ್ಕಳ ಚಿಂತೆ ನಾನೇಕೆ ಹಚ್ಚಿಕೊಳ್ಳಲಿ.”

“ನಾಗತಿಯವರ ಮಾತು ಕೇಳಿದರೆ, ದೇವರು ಮಾಡಿದ ಅನ್ಯಾಯದ ಸಿಟ್ಟನ್ನು ನಮ್ಮ ಮೇಲೆ ತೀರಿಸುವಂತಿದೆ.”

“ಇದೇನು ಮಾತು ಭುವನಪ್ಪನವರೇ, ನನ್ನನ್ನು ಅರಿತ ನಿಮ್ಮಿಂದ ಈ ಮಾತೇ?” ನೊಂದು ಕೇಳಿದಳು ನಾಗತಿ.

“ನಿಜ ತಾಯಿ. ಇರುವ ಮಾತು ಹೇಳುತ್ತಿದ್ದೇನೆ. ಸಿಟ್ಟಾಗಬಾರದು. ನಿಮ್ಮ ಚಿಂತೆಯನ್ನು ಮಾತ್ರ ನೀವು ಮಾಡಿದರೆ ಸಾಕೇ?”

“ನಮ್ಮಿಂದ ಏನು ತಪ್ಪಾಯಿತು ಭುವನಪ್ಪನವರೇ?”

—ಭುವನಪ್ಪನವರು ಹೇಳಿದುದನ್ನು ಕೇಳಿ ಅಳುಕಿ, ಕೇಳಿದಳು ನಾಗತಿ.

" ಇನ್ನೂ ಆ ತಪ್ಪು ಆಗಿಲ್ಲ ತಾಯಿ. ಆಗುವುದರಲ್ಲಿತ್ತು. ಆಗುವ ಮೊದಲು ಅವನ್ನು ತಪ್ಪಿಸಬೇಕೆಂದೇ ನಾನು ಬಂದದ್ದು. "

" ನಾವು ತಪ್ಪು ಮಾಡುವುದರಲ್ಲಿದ್ದೆವೇ ? ಏನು ತಪ್ಪು ? "

" ಅದೇನೆಂಬುದನ್ನು ಹೇಳಿದ ಬಳಿಕ ನನ್ನ ಮಾತು ನಡಸುವುದಾಗಿ ತಾಯಿಯವರು ಮಾತುಕೊಟ್ಟರೆ ಬಳಿಕ ಹೇಳುತ್ತೇನೆ. "

" ನನ್ನಲ್ಲಿ ನಂಬಿಕೆಯೂ ತಪ್ಪಿಹೋಯಿತೇ ನಿಮಗೆ ? "

" ನಿಮ್ಮಲ್ಲಿ ನನಗೆ ನಂಬಿಕೆಯಿದೆ ತಾಯಿ. ಆದರೆ ಏಕೋ ನನಗೆ, ನನ್ನಲ್ಲಿ, ದುರ್ಗದ ಭಾಗ್ಯದಲ್ಲಿಯೇ ನಂಬಿಕೆ ತಪ್ಪುತ್ತಿದೆ. ಇಲ್ಲವಾಗಿದ್ದಿದ್ದರೆ, ಎಲ್ಲರ ರಕ್ಷಣೆಯ ಭಾರ ಹೊತ್ತ ಹಿರಿಯರು, ತಮ್ಮ ಚಿಂತೆಯನ್ನು ಮಾತ್ರ ಮಾಡುತ್ತಿರಲಿಲ್ಲ. "

" ತಾವೇಕೋ ನಮ್ಮ ಮೇಲೆ ಬಹಳ ಸಿಟ್ಟಾಗಿ ಬಂದಂತಿದೆ. ನಮ್ಮಿಂದ ಆದ ತಪ್ಪಾವುದೆಂದಾರೂ ಹೇಳಿ ಭುವನಪ್ಪನವರೇ. "

—ಕಣ್ಣಲ್ಲಿ ಕಂಬನಿದುಂಬಿ ಕೇಳಿದಳು ನಾಗತಿ.

" ಇಂದಿನವರೆಗೂ ಈ ಭುವನಪ್ಪ ಯಾರಲ್ಲಿಯೂ ಭಿಕ್ಷೆಬೇಡಿಲ್ಲ ತಾಯಿ. ಈ ದಿನ ಭಿಕ್ಷುಕನಾಗಿ ನಿಮ್ಮ ಮನೆಬಾಗಿಲಿಗೆ ಬಂದಿದ್ದೇನೆ. ಹೇಳಿ-ಭಿಕ್ಷೆ ಇಡುತ್ತೀರಾ ? ಬರಿಗೈಯಲ್ಲಿ ಕಳಿಸುತ್ತೀರಾ ? "

ಎತ್ತೆತ್ತಲೋ ಹಾರುತ್ತಿರುವ ಭುವನಪ್ಪನವರ ಮಾತಿನ ಜಾಡೇ ನಾಗತಿಗೆ ಸಿಗಲಿಲ್ಲ. ಯಾವುದೋ ಅತಿ ಮಹತ್ತರ ಮಾತನ್ನು ಹೇಳಲು ಕಷ್ಟವಾಗುವ ಮಾತನ್ನು ಹೇಳಲು ಕಷ್ಟಪಡುತ್ತಿರುವುದು ಕಣ್ಣಿಗೆ ಕಾಣುವಂತಿತ್ತು. ಭುವನಪ್ಪನವರ ಈ ರೀತಿ ನಾಗತಿಗೆ ತೀರಾ ಹೊಸದು. ಯಾವುದೋ ವಿಷಯ ತಿಳಿಸಲು ಇಷ್ಟು ಸಂಕೋಚಪಟ್ಟು ಮೂಗುಬ್ಬುಸಪಟ್ಟುದನ್ನು ನಾಗತಿ ಎಂದೂ ನೋಡಿರಲಿಲ್ಲ. ಯಾವ ಮಾತನ್ನಾದರೂ ನಿಸ್ಸಂಕೋಚವಾಗಿ ಹೇಳುವಷ್ಟು ಸಲಿಗೆ ಇತ್ತು ಅವರಿಗೆ, ಎಂತಲೇ ಅವರ ಹೊಯ್ದಾಟವನ್ನು ಕಂಡು ನಾಗತಿಗೆ ಅಯ್ಯೋ ಎನಿಸಿತು. ಈ ಸಂಕಟದಿಂದ ಅವರನ್ನು ಪಾರುಮಾಡಲು ಬೇರೆ ದಾರಿ ಕಾಣದೆ ನಾಗತಿ ಹೇಳಿದಳು.

" ಯಾವ ಮಾತನ್ನು ಸಂಕೋಚವಿಲ್ಲದೆ ಹೇಳಬಹುದೆಂದರೂ, ಏಕೋ ಅನಗತ್ಯವಾದ ಸಂಕೋಚಪಟ್ಟು ವ್ಯಥೆಪಡುತ್ತಿದೀರ ಭುವನಪ್ಪನವರೇ. ಎಂದಿನಿಂದ ನಿಮಗೆ ನಮ್ಮಲ್ಲಿ ಈ ವಿಚಿತ್ರ ಹೊಸತನ ಆರಂಭವಾಯಿತು? ಏನು ಬೇಕಾದದ್ದನ್ನು ಕೇಳಿ. ಹೀಗೆ ಹೊಯ್ದಾಡಿ ನಮ್ಮೆದೆಯನ್ನು ಇರಿಯಬೇಡಿ."

" ಕೇಳಲೇ, ಏನು ಬೇಕಾದದ್ದು ಕೇಳಲೇ? ಏನು ಕೇಳಿದರೂ ಇಲ್ಲವೆನ್ನದೆ ಕೊಡುತ್ತೀರಾ ತಾಯಿ? "

—ಉತ್ಕಂಠಿತಸ್ವರದಲ್ಲಿ ಕೇಳಿದರು ಭುವನಪ್ಪನವರು.

" ಹೂ. ಕೇಳಿ. ಈ ನಾಲಗೆಗೆ ಅನೃತವಾಡಿ ಗೊತ್ತಿಲ್ಲ."

" ಅದನ್ನು ಬಲ್ಲೆ ತಾಯಿ. ಹಾಗೆ ಬೇಡಿದವರಿಗೆ ತಾಯಿ ಎಂದೂ ಇಲ್ಲ ಎಂದು ಹೇಳದುದನ್ನು ಬಲ್ಲೆ. ಅದಕ್ಕೇ ಕೇಳುತ್ತಿದೇನೆ ತಾಯಿ. ನಾನಲ್ಲ. ಇಡೀ ದುರ್ಗವೇ ನನ್ನ ಬಾಯಲ್ಲಿ ಈ ಮಾತಾಡಿಸುತ್ತಿದೆ— ತಾವು ಸಹಗಮನ ಮಾಡಬಾರದು. ಇಂದಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ. ಈ ಹೊತ್ತಿನಲ್ಲಿ ಅವು ನಿಮ್ಮ ಧರ್ಮಕ್ಕೆ ಕಟ್ಟುಬಿದ್ದು ಕಿಚ್ಚೇರಿದರೆ, ದುರ್ಗವನ್ನೇ ಬೆಂಕಿಯಲ್ಲಿ ಹಾಕಿದಂತಾಗುತ್ತದೆ. ದುರ್ಗದಕೋಟೆ ಒಳಜಗಳದ ಸಿಡಿಲು ಬಿದ್ದು ಸಿಡಿದುಹೋಗುತ್ತದೆ. ಅದನ್ನು ತಪ್ಪಿಸಲು ನೀವು ಇರಬೇಕು.

ಭುವನಪ್ಪನವರು ಆಡಿದ ಮಾತು, ಅದನ್ನು ಅವರು ಆಡಿದ ರೀತಿಯನ್ನು ಕೇಳಿ ನಾಗತಿಗೆ ದಿಕ್ಕು ತಪ್ಪಿಸಿದಂತಾಯಿತು.

" ಏಕೋ....ಏಕೋ....ನನಗೆ ನಿಮ್ಮ ಮಾತು ಅರ್ಥವಾಗುತ್ತಿಲ್ಲ. ಅವೇನು ಕೊಂಚ ವಿವರಿಸಿ ಹೇಳಿ ಭುವನಪ್ಪನವರೇ."

" ಈಗ ಯಾವುದನ್ನೂ ವಿವರವಾಗಿ ಹೇಳಲು ಹೊತ್ತಿಲ್ಲ ತಾಯಿ. ತಮ್ಮ ಬಳಿಕ ಪಟ್ಟಕ್ಕೆ ಯಾರು ಎಂಬುದನ್ನು ನಿರ್ಧರಿಸದೆ ನಾಯಕರು ದುರ್ಗವನ್ನು ವಿಪತ್ತಿನಲ್ಲಿ ಕೆಡವಿದ್ದಾರೆ. ಅವರ ಮನಸ್ಸಿನಲ್ಲಿ ಏನಿತ್ತೆಂಬುದನ್ನು ಅವರ ಹತ್ತಿರವಿದ್ದ ನನ್ನಂಥ ಕೆಲವರಿಗೆ ತಿಳಿದಿದೆ. ಆದರೆ ನಾನು ಹೇಳುವ ಮಾತು ಯಾರಿಗೂ ನಂಬಿಕೆಯಾಗದಿರಬಹುದು. ಆದ್ದರಿಂದ ನಾಯಕರ ಬಯಕೆಯನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ, ಅವರ

ಪಟ್ಟಮಹಿಷಿಯರಾದ ನಿಮ್ಮನ್ನೇ ಕೂಡಿದೆ. ನೀವು ಇಲ್ಲಿದ್ದು ಆ ಕಾರ್ಯ ವನ್ನು ನಡಸಿಕೊಡಬೇಕು."

"ನಾಯಕರು ಇದ್ದಷ್ಟು ದಿನ ಯಾವ ರಾಜಕಾರಣದ ಲೇಪವೂ ನಮಗಿರಲಿಲ್ಲ. ಅವರ ಮನಸ್ಸಿನಲ್ಲಿ ಏನಿತ್ತೋ ನಾನರಿಯೆ. ಏನಿತ್ತು ಎಂಬುದನ್ನು ನೀವೇ ಹೇಳಿ."

ಓಬಣ್ಣನಾಯಕನನ್ನು ತಮ್ಮ ಬಳಿಕ ಪಟಕ್ಕೆ ತರಬೇಕೆಂದು ನಾಯ ಕರಿಗಿದ್ದ ವಿಚಾರ, ಆ ನಿರ್ಧಾರದತ್ತ ಅವರನ್ನು ನಡಸಿದ ಪ್ರಸಂಗಗಳು— ಎಲ್ಲವನ್ನೂ ಸೂಕ್ಷ್ಮವಾಗಿ, ಆದರೆ ಖಚಿತವಾಗಿ ವಿವರಿಸಿ, ಹೇಳಿದರು ಭುವಪ್ಪನವರು.

"ನಾಯಕರು ಮಲಗಿದ ಕಿಚ್ಚಿನ ಕುಂಡದಲ್ಲಿ ಮಲಗಲು ನೀವೂ ನಿಶ್ಚಯಮಾಡಿದ್ದೀರಿ ತಾಯಿ, ಆದರೆ ಅದನ್ನು ಬಿಟ್ಟು, ನಾಯಕರ ಅನಿರ್ಧಾರ ನಿರ್ಮಿಸಿದ ಈ ಅಗ್ನಿಕುಂಡದಲ್ಲಿ ತಾವು ಧುಮುಕಬೇಕು. ಅವರ ಹೃದಯ ಬಯಸಿದ ದಾರಿಯಲ್ಲಿ ನಡೆದು ತಾವು ಸಹಗಮನಮಾಡಬೇಕು. ಇದು ನಿಮ್ಮನ್ನುಳಿದು ಬೇರಾರಿಗೂ ಸಾಧ್ಯವಿಲ್ಲ. ಈ ಮಾತನ್ನು ಕೇಳಿ ತಮ್ಮ ಚಿತ್ತಕ್ಕೆ ಎಷ್ಟು ವ್ಯಥೆಯಾಗುತ್ತದೆ ಎಂಬುದನ್ನು ನಾನು ಬಲ್ಲೆ ತಾಯಿ. ನನ್ನನ್ನು ನಂಬಿ. ಅಷ್ಟೇ ವ್ಯಥೆ ನನಗೂ ಆಗುತ್ತದೆ. ಆದರೂ....ಆದರೂ, ಇಂದು ನೀವು ಹೀಗೆ ಮಾಡದೆ ಬೇರೆ ದಾರಿಯೇ ಇಲ್ಲ."

"ಬೇರೆ ದಾರಿಯೇ ಇಲ್ಲವೇ ?"

"ಇಲ್ಲ ತಾಯಿ. ಇದ್ದಿದ್ದರೆ ನಿಮ್ಮನ್ನು ಈ ಧರ್ಮಸಂಕಟಕ್ಕೆ ನಾನು ಸಿಲುಕಿಸುತ್ತಿರಲಿಲ್ಲ."

"ರಾಜಕಾರಣವನ್ನು ನನಗಿಂತ ಗೌರವ್ವನಾಗತಿಯರು ಚೆನ್ನಾಗಿ ಬಲ್ಲರು. ಅವರು ಮಾಡಿದರಾಗದೇ ?"

"ಆಗುವುದಿಲ್ಲ. ಅಷ್ಟೇ ಅಲ್ಲ—ಅವರು ರಾಜಕಾರಣದ ಸೂತ್ರ ಧರಿಸಿನಿಂತರೆ, ಇಂದು ಬರೀ ಸಂಶಯವಾಗಿರುವ ಅಂತಃಕಲಹ ಆಗ ಸತ್ಯ ವಾಗಿ ಅಗುತ್ತವೆ. ಅಂತಃಕಲಹದ ರಕ್ತಪಾತವನ್ನು ತಪ್ಪಿಸಿ, ದುರ್ಗವನ್ನು ಯಾದವೀಕಲಹದ ಭಯಂಕರ ಸಂಕಟದಿಂದ ಪಾರುಮಾಡಲೆಂದೇ ನಾನು ನಿಮ್ಮಲ್ಲಿ ಈ ಭಿಕ್ಷೆ ಬೇಡಲು ಬಂದುದು."

" ಅಂತೂ....ಅಂತೂ....ಇಷ್ಟು ದಿನ ಇಲ್ಲದ ರಾಜಕಾರಣದ ಮಡುವಿನಲ್ಲಿ ಮುಳುಗು ಎನ್ನುತ್ತೀರಾ ? "

" ಹಾಗೆ ಹೇಳಬೇಕಾದ ದುರ್ವಿಧಿ ನನ್ನದು. ನನಗೀಗ ಎಷ್ಟು ವಯಸ್ಸು ಗೊತ್ತೆ ತಾಯಿ ? "

" ಎಪ್ಪತ್ತರ ಹತ್ತಿರವಿರಬೇಕು ? "

" ನಿಜ. ಎಪ್ಪತ್ತರ ಹತ್ತಿರ; ಬಹಳ ಹತ್ತಿರ. ನನಗೂ ಈ ರಾಜಕಾರಣ ಸಾಕಾಗಿದೆ ತಾಯಿ. ಇಷ್ಟು ದಿನ ಈ ಲೋಕದ ಚಿಂತೆಯೇ ಆಯಿತು. ಆ ಲೋಕದ ಕರೆ ಬರುವ ಹೊತ್ತು ಹತ್ತಿರವಾಯಿತು. ಆ ಕೂಗು ಬರುವ ಹೊತ್ತಿಗಾದರೂ ಅಲ್ಲಿಯ ಮಾರ್ಗದ ಚಿಂತೆಮಾಡೋಣ ಎಂದರೆ, ನಿಷ್ಕರುಣಿಯಾದ ದುರ್ಗಮಾತೆ ಅದಕ್ಕೆ ನನ್ನನ್ನು ಬಿಡುವುದಿಲ್ಲವೆಂದು ಹಟ ಹಿಡಿದಿದ್ದಾಳೆ. ತಾನು ಕೆಡುವ ಕೋತಿ ವನವನ್ನೆಲ್ಲಾ ಕೆಡಿಸಿತು ಎಂಬಂತೆ, ಈಗ ನಾನಿದನ್ನು ನಿಮ್ಮ ಮೈಗೂ ಸುತ್ತುತ್ತಿದೇನೆ. ಊಹೂ....ನನಗೂ, ನಿಮಗೂ ಇಬ್ಬರಿಗೂ ಬೇರೆ ದಾರಿಯೇ ಇಲ್ಲ. ಹೇಳಿ, ಏನು ಮಾಡುವಿರಿ ? "

" ಬೇರೆ ದಾರಿಯೇ ಇಲ್ಲವೆಂದಮೇಲೆ ನಾವೇನು ಹೇಳುವುದು ತಾನೇ ಉಳಿದಿದೆ ಭುವನಪ್ಪನವರೇ. ಏಕನಾಥೇಶ್ವರಿಯ ಮನಸಿದ್ದಂತಾಗಲಿ. ಇಂದೇ ಬರುತ್ತೇನೆ ಎಂದಿದ್ದೆ, ಆದರೆ ತಾಯಿ ನಿಮ್ಮ ರೂಪದಲ್ಲಿ ಬಂದು 'ಇಂದು ಬೇಡ' ಎನ್ನುತ್ತಿದ್ದಾಳೆ. ಆಗಲಿ, ಆಕೆಗೆ ಎಂದು ಮನಸು ಬರುವುದೋ ಅಂದು ಕರಸಿಕೊಳ್ಳಲಿ. ಆದರೆ ನಿಮ್ಮಲ್ಲಿ ನಾನು ಕೇಳುವುದಿಷ್ಟೇ...."

" ಈ ಆಶ್ವಾಸನವಿತ್ತು ನನಗೆ ಜೀವದಾನಮಾಡಿದಿರಿ ತಾಯಿ. ಏನು ಬೇಕಾದರೂ ಕೇಳಿ ಮಾಡುತ್ತೇನೆ. "

" ನಾಯಕರು ಇದ್ದಷ್ಟು ದಿನ ಅವರ ನೆರಳಾಗಿ ಬದುಕಿದ ನಮಗೆ ರಾಜ್ಯಭಾರದ ಸುಳಿವುಹೊಳವೊಂದೂ ತಿಳಿಯದು. ನೆಪಕ್ಕೆ ನಾನಿರುತ್ತೇನೆ. ನನ್ನಿಂದ ಏನಾಗಬೇಕೋ ಅದನ್ನು ಮಾಡಿಸಿಕೊಳ್ಳುವುದು ನಿಮಗೆ ಸೇರಿದ್ದು. "

ಆ ಮಾತನ್ನು ಕೇಳಿ ಭುವನಪ್ಪನವರ ಮನಸ್ಸಿಗೆ ನೆತ್ತಿಯ ಮೇಲೆ ಹೊತ ಬೆಟ್ಟದ ಹೊರೆ ಇಳಿದು ಹಗುರವಾದಂತಾಯಿತು. ಅಷ್ಟೇ ಮಟ್ಟಿಗೆ

ಓಬವ್ವ ನಾಗತಿಯ ಮನದ ಹಿರಿಮೆಯನ್ನರಿತು ಮೆಚ್ಚುಗೆಯೂ ಮೂಡಿತು.

"ನನ್ನ ರಾಯಭಾರ ಏನಾಗುವುದೋ ಎಂದು ಹೆದರಿದ್ದೆ ತಾಯಿ. ನನ್ನಷ್ಟೇ ಗೌರವ್ವನಾಗತಿಯರಿಗೂ ಚಿಂತೆಯಾಗಿತ್ತು. ಇನ್ನವರು ನಿಶ್ಚಿಂತರಾಗಿ ನಾಯಕರೊಂದಿಗೆ ಚಿತೆ ಏರಬಹುದು."

"ಅಂದರೆ.... ಇದು ಚಿಕ್ಕನಾಗತಿಯ ಸಂಚು ಅನ್ನಿ."

—ನಾಗತಿಯ ಬಾಯಿಂದ ಅನಿರೀಕ್ಷಿತವಾಗಿ ಬಂದ ಈ ಮಾತನ್ನು ಕೇಳಿ ಭುವನಪ್ಪನವರಿಗೆ ಆಶ್ಚರ್ಯವಾಯಿತು. ಅಷ್ಟೇ ಮಟ್ಟಿಗೆ, ತಾವು ಇಷ್ಟು ಹೊತ್ತು ಶ್ರಮಪಟ್ಟು ಸಾಧಿಸಿದ ಕೆಲಸ, ಇದೊಂದು ಮಾತಿನಿಂದ ವಿಫಲವಾಗುವುದೇನೋ ಎಂದು ದಿಗಿಲೂ ಆಯಿತು.

"ಚಿಕ್ಕನಾಗತಿಯರ ವಿಷಯದಲ್ಲಿ ತಾವು ಅನ್ಯಥಾ ಭಾವಿಸಬಾರದು. ಅವರಲ್ಲಿ ಸ್ವಾರ್ಥದ ಸೋಂಕಿಲ್ಲವೆಂದು ನಾನು ನಿಮಗೆ ವಚನ ಕೊಡುತ್ತೇನೆ."

"ಚೆನ್ನಾಯಿತು, ನನ್ನ ತಂಗಿಯ ವಿಷಯ ನೀವು ನನಗೆ ಹೇಳುವುದೇ ಭುವನಪ್ಪನವರೇ. ಆಕೆಯ ಮಾತು ಗಡುಸೇ ವಿನಾ, ಚಿತ್ತ ಕನ್ನಡಿಯಷ್ಟು ನಿರ್ಮಲ ಎಂದು ನಾನು ಬಲ್ಲೆ. ವೃದ್ಧರಾದ ನಿಮ್ಮನ್ನು ಬಳಲಿಸುವ ಬದಲು, ಆಕೆಯೇ ಈ ಮಾತನ್ನು ನನ್ನಲ್ಲಿ ಹೇಳಿದ್ದರೂ ಆಗಿತ್ತು. ನಾಯಕರ ಕೈಹಿಡಿಯುವಾಗ ನಾನು ಮೊದಲಾಗಿದ್ದೆ. ಈಗ ಅವರನ್ನು ಹಿಂಬಾಲಿಸುವಾಗ ನೀನು ಮೊದಲು ಹೋಗು ಎನ್ನುತ್ತಿದ್ದೆ. ಅಂತೂ ಚಿಕ್ಕ ನಾಗತಿಯ ಮೇಲೆ ನಾಯಕರಿಗೆ ತುಂಬ ಪ್ರೇಮ, ಭುವನಪ್ಪನವರೇ. ಹೋಗುವಾಗ ನನ್ನನ್ನು ಇಲ್ಲಿ ಬಿಟ್ಟು ಆಕೆಯನ್ನು ಕರೆಮೊಯ್ಯುತ್ತಿದಾರೆ."

ನಾಗತಿಯಾಡಿದುದನ್ನು ಕೇಳಿ, ತಮ್ಮ ಭಯ ನಿರಾಧಾರವೆಂದು ಮನವರಿಕೆಯಾಗಿ ಭುವನಪ್ಪನವರು ಹೇಳಿದರು—

"ತಾಯಿ, ನಿಮ್ಮಂಥವರು ಈ ನೆಲದ ಮೇಲೆ ಇರುವವರೆಗೂ, ಈ ದುರ್ಗದ ಕೋಟೆಯ ಒಂದು ಕಲ್ಲೂ ಕದಲುವುದಿಲ್ಲ."

ಯಾವ ಏರಿಳಿವೂ ಇಲ್ಲದೆ, ಹೊಗಳಿಕೆಯ ಅಪಸ್ವರವಿಲ್ಲದ ಭುವನಪ್ಪನವರ ಮಾತನ್ನು ಕೇಳಿ ಓಬವ್ವನಾಗತಿಯ ಕಣ್ಣಲ್ಲಿ ನೀರು ತುಂಬಿತು.

"ಏನೂ ಅರಿಯದವಳು ನಾನು. ಸುಮ್ಮನೆ ಹೊಗಳಿ ನಮ್ಮಂಥವರನ್ನು ದೊಡ್ಡವರನ್ನಾಗಿ ಮಾಡಬಾರದು."

ಈಕೆಯನ್ನು ಪಡೆದ ನಾಯಕರ ಭಾಗ್ಯ ದೊಡ್ಡದೋ, ದುರ್ಗದ ಭಾಗ್ಯ ದೊಡ್ಡದೊ ಎಂದು ಇತ್ಯರ್ಥಮಾಡಲಾಗದೆ, ಅದೇ ಭಾವನೆಯಲ್ಲೇ ನಾಗತಿಯ ಅಪ್ಪಣೆ ಪಡೆದು ಹೊರಟರು ಭುವನಪ್ಪನವರು.

೬

ಆ ದಿನ ಮಧ್ಯಾಹ್ನದ ವೇಳೆಗೆ, ನಾಯಕರ ಅಂತ್ಯ ಸಂಸ್ಕಾರಕ್ಕೆ ಸಿದ್ಧತೆಗಳಾದುವು. ಅರಮನೆಯ ಹೊರಗೆ ಲಕ್ಷಾಂತರ ಜನ ನೆರೆದು, ಅಗಲಿದ ತಮ್ಮ ದೊರೆಗೆ ಅಶ್ರುಕಾಣಿಕೆ ಅರ್ಪಿಸಿದರು.

ಅರಮನೆಯ ಒಳಗೂ ಅದೇ ಗದ್ದಲ, ಕಂಬನಿಯ ಕೋಡಿ. ನಾಯಕರೊಂದಿಗೆ ಸಹಗಮನಕ್ಕೆ ಸಿದ್ಧರಾದ ನಾಗತಿಯರು, ಊರಿಂದ ಊರಿಗೆ ಪಯಣ ಬೆಳಸುವವರಂತೆ, ಒಬ್ಬರು ಮತ್ತೊಬ್ಬರನ್ನು ಕಂಡು, ಉಡುಗೊರೆ ಕೊಟ್ಟು, 'ಹೋಗಿಬರುತ್ತೇನೆ, ಅಪ್ಪಣೆ ಕೊಡು' ಎಂದು ಬೇಡಿ ಕಂಬನಿಗರೆದು ಆಲಿಂಗಿಸಿ, ಎಲ್ಲರೂ ನಾಯಕರನ್ನು ಹಿಂಬಾಲಿಸಲು ಸಿದ್ಧರಾದರು.

ವಿವಾಹವೇದಿಕೆಗೆ ತೆರಳಲು ಶೃಂಗಾರವಾದ ವಧುವಿನಂತೆ, ಸಕಲ ಪವಿತ್ರಾಲಂಕಾರಗಳಿಂದ ಅಲಂಕೃತರಾದ ಅವರು ಕಳಶ, ಕನ್ನಡಿ, ಅರಿಶಿನ ಕುಂಕುಮದ ಹೆಡಿಗೆಗಳನ್ನು ಮತ್ತು ಬಾಗಿನದ ಉಪಕರಣಗಳನ್ನು ಹೊತ್ತ ದಾಸಿಯರ ಪರಿವಾರದ ನಡುವೆ, ಅರಮನೆಯ ಬಳಿಯ ಗೋಪಾಲಸ್ವಾಮಿಯ ಹೊಂಡಕ್ಕೆ ಹೋಗಿ ಗಂಗೆಯ ಪೂಜೆಮಾಡಿ, ಮುತ್ತೈದೆಯರಿಗೆ ಬಾಗಿನ ದಾನವಿತ್ತು, ಅಲ್ಲಿಂದ ಏಕನಾಥೇಶ್ವರಿ, ಹಿಡಂಬೇಶ್ವರ, ಸಂಪಿಗೆಯ ಸಿದ್ಧೇಶ್ವರ, ಗೋಪಾಲಕೃಷ್ಣಸ್ವಾಮಿ, ಅರಮನೆಯ ಬಳಿಯ ಸುಬ್ರಹ್ಮಣ್ಯಸ್ವಾಮಿ ಎಲ್ಲರಿಗೂ ಮನಸ್ಸು ತೃಪ್ತಿಯಾಗುವಷ್ಟು ಪೂಜೆ ಮಾಡಿಸಿ, ಅರಮನೆಗೆ ಹಿಂದಿರುಗಿದರು.

ಆ ವೇಳೆಗೆ ಅರಮನೆಯಲ್ಲಿ ನೆರೆದ ನಾಯಕರು ಮತ್ತು ನಾಗತಿಯರ ನೆಂಟರಿಷ್ಟರೆಲ್ಲರಿಗೂ ಊಟ, ಉಪಚಾರವಾಯಿತು. ನಾಗತಿಯರು ತಾವೇ ಎಲ್ಲರಿಗೂ ಕೈಯಾರ ಉಣಬಡಿಸಿ, ವೀಳ್ಯವಿತ್ತು, ತಮ್ಮ ಆಭರಣ ವಸ್ತ್ರಗಳನ್ನು ಆಪ್ತೇಷ್ಟರಿಗೂ, ದಾಸದಾಸಿಯರಿಗೂ ಹಂಚಿದರು. ನಾಗತಿಯರೇನೋ ನಗುತ್ತಾ ಉಣಬಡಿಸಿ, ಉಡುಗರೆಯಿತ್ತರೂ ಯಾರಿಗೂ ತುತ್ತು ಒಳಗಿಳಿಯಲಿಲ್ಲ. ಉಡುಗರೆಯನ್ನೂ ಸ್ವೀಕರಿಸುವ ಕೈ ಶೋಕದ ಆವೇಗದಿಂದ ಕಂಪಿಸುತ್ತಿತ್ತು.

ಈ ಎಲ್ಲ ಶಾಸ್ತ್ರಗಳೂ ಮುಗಿದ ಬಳಿಕ, ನಾಯಕರ ಶವವನ್ನು ಹೊತ್ತ ಪುಷ್ಪಮಂಟಪ ಅರಮನೆಯಯಿಂದ, ಅರಮನೆಯ ಬಳಿಯ ನಾಗತಿಯರ ಹರವಿನಲ್ಲಿ ನಿರ್ಮಿತವಾದ ಚಿತೆಯತ್ತ ಹೊರಟಿತು. ಅವರ ಹಿಂದೆ ಅಲಂಕೃತವಾದ ಬಿಳಿಯ ಕುದುರೆಗಳನ್ನೇರಿದ ನಾಗತಿಯರು ಹಿಂಬಾಲಿಸಿದರು. ಅರಮನೆಯಿಂದ ಹರವಿನವರೆಗಿನ ದಾರಿಯ ಇಕ್ಕೆಲದಲ್ಲೂ ಕಿಕ್ಕಿರಿದು ನಿಂದ ಜನಕೋಟಿ ಈ ಮೆರವಣಿಗೆಯನ್ನು ಕಂಡು, ಒಂದೆ ಮೈ, ಒಂದೆ ಕಂಠವೆಂಬಂತೆ ಆರ್ತಧ್ವನಿಮಾಡಿತು.

ನಾಗತಿಯರ ಹರವಿನ ನಡುವೆ ಗಂಧದ ಕೊರಡುಗಳಿಂದ ಬಹು ವಿಶಾಲವಾದ ಚಿತೆ ರಚಿತವಾಗಿತ್ತು. ನಾಯಕರ ಶವವನ್ನು ಚಿತೆಯ ಮೇಲಿಟ್ಟ ಬಳಿಕ, ಲಿಂಗಣ್ಣನಾಯಕ ನೀರಿನ ಮಡಕೆ ಹೊತ್ತು, ಚಿತೆಯನ್ನು ಮೂರು ಬಾರಿ ಪ್ರದಕ್ಷಿಣೆಮಾಡಿ, ಅಗ್ನಿ ಸಂಸ್ಕಾರಮಾಡಿ ಹಿಂದಿರುಗಿ ನೋಡದೆಯೇ ಹೋದ.

ಕರ್ಪೂರ, ಘೃತ, ತೈಲಗಳಿಂದ ಕೂಡಿದ ಚಂದನದ ಚಿತಾವೇದಿಕೆಯಲ್ಲಿ ಅಗ್ನಿಪ್ರತ್ಯಕ್ಷವಾಯಿತು. ಚಿತೆಯ ಮಧ್ಯದಲ್ಲಿ ಬೆಂಕಿಯ ಕಿಡಿಯನ್ನು ಕಂಡಕೂಡಲೇ ನೆರೆದ ಜನತೆ 'ಹೋ' ಎಂದು ಚೀರಿತು.

ಆ ಬಳಿಕ ನಾಗತಿಯರು, ಅಲ್ಲಿ ನೆರೆದಿದ್ದ ಮುತ್ತೈದೆಯರಿಗೆ ಅರಿಶಿನ ಕುಂಕುಮ, ಹೂವು ವೀಳೆಯಗಳನ್ನಿತ್ತು, ತಾವು ಧರಿಸಿದ್ದ ಆಭರಣಗಳನ್ನು ದಾನಮಾಡಿ, ಗುರುಹಿರಿಯರ ಅಪ್ಪಣೆ ಪಡೆದು, ಶಿರದಲ್ಲಿ ಘೃತ ಕುಂಭಗಳನ್ನು ಧರಿಸಿ, ಒಬ್ಬೊಬ್ಬರಾಗಿ, ಚಿತೆಯನ್ನೇರಿ, ಮೂರು ಬಾರಿ ಪತಿಯ ಶವವನ್ನು ಪ್ರದಕ್ಷಿಣೆಮಾಡಿ, ಪೂರ್ವಾಭಿಮುಖವಾಗಿ ನಿಂತು,

ಎಲ್ಲರಿಗೂ ನಮಸ್ಕರಿಸಿ ತಲೆಯ ಮೇಲಿದ್ದ ಕುಂಭದಲ್ಲಿದ್ದ ತುಪ್ಪವನ್ನು, ಚಿತಾಗ್ನಿಗೆ ಎರೆದು ಪತಿಯ ಶವದ ಬಳಿ ಕುಳಿತರು. ಕೂಡಲೇ ಚಿತೆಯ ಸುತ್ತಲಿದ್ದವರು ಮುಗಿಲು ಮಾರ್ನೊಳಗುವಂತೆ ಜಯಕಾರಮಾಡಿ, ತಾವು ಹಿಡಿದಿದ್ದ ತುಪ್ಪ, ಎಣ್ಣೆಗಳನ್ನು ಚಿತೆಗೆ ಸುರಿದರು. ಘೃತ, ತೈಲ, ಕರ್ಪೂರಗಳ ಆಹಾರದಿಂದ ಸೊಕ್ಕಿದ ಅಗ್ನಿ ಧಗ್ಗನೆ ಹೊತ್ತಿ ಮುಗಿಲುದ್ದ ನಾಲಗೆ ಚಾಚಿತು.

ತೀವ್ರ ಶೋಕದಿಂದ ಕಂಪಿಸುವ ಕೋಟಿ ಕೋಟಿ ಕಂಠಗಳು ಮಾಸತಿಯರ ಜಯಘೋಷ ಮಾಡಿದುವು. ದುಃಖದ ಆವೇಗದಿಂದ ನಡುಗುವ ಕೋಟಿ ಕೋಟಿ ಕೈಗಳು ಅರಿಶಿನ, ಕುಂಕುಮವನ್ನು ತೂರಿದುವು.

ಕಂಬನಿದುಂಬಿ ಕುರುಡಾದ ಜನ, ತಾಯಗಲಿದ ಕಂದರಂತೆ, ಗುಡ್ಡದ ಕೋಡುಗಲ್ಲುಗಳು ಮಾರ್ದನಿಸುವಂತೆ ರೋದಿಸುತ್ತಿದ್ದರು. ಕೆಲವರು ದುಃಖೋನ್ಮಾದದಲ್ಲಿ ತಾವೂ ಚಿತೆಗೆ ಹಾರಲು ಯತ್ನಿಸುತ್ತಿದ್ದರು ; ಕೆಲವರು ನೆತ್ತಿಯ ಕೂದಲನ್ನು ಕಿತ್ತು ತೂರಿ, ತಾವೂ ಚಿತೆಯ ಮೇಲೆ ಮಲಗಿದವರಂತೆ ಧೂಳಿನಲ್ಲಿ ಹೊರಳಾಡುತ್ತಿದ್ದರು ; ಒಬ್ಬರನ್ನೊಬ್ಬರು, ಹೆಣ್ಣು ಗಂಡು, ಸ್ವಕೀಯರು, ಪರಕೀಯರು ಎಂಬ ಭೇದ ಭಾವವಿಲ್ಲದೆ ತಬ್ಬಿ, ಉಕ್ಕಿ ಬಂದ ದುಃಖವನ್ನು ಹತ್ತಿಕ್ಕಲಾರದೆಯೆ ಚೀರುತ್ತಿದ್ದರು.

ಆದರೆ ಚಿತೆಯಿಂದ ಯಾವೊಂದು ಸದ್ದೂ ಕೇಳಿ ಬರಲಿಲ್ಲ. ಮಾಸತಿಯರ ಕೀರ್ತಿಯನ್ನು ಸಹಸ್ರ ತೋಳುಗಳನ್ನೆತ್ತಿ ಸಾರುವವನಂತೆ ಅಗ್ನಿದೇವ ಉರಿಯುತ್ತಿದ್ದ. ಅವರ ಸತೀತ್ವದ ಪವಿತ್ರ ಕೀರ್ತಿಯನ್ನು ಲೋಕಕ್ಕೆ ಸಾರುವ ಹರಿಕಾರನಂತೆ ಪರಿಮಳಮಯ ಗಂಧ ಧೂಮ ದಿಕ್ಕು ದಿಕ್ಕನ್ನೂ ವ್ಯಾಪಿಸುತ್ತಿತ್ತು.

* * * * *

ಅರಮನೆಯಲ್ಲಿ, ನಾಯಕರ ಶಯ್ಯಾಗೃಹದಲ್ಲಿ, ಅವರ ಶವವಿದ್ದೆಡೆ ಇಟ್ಟ ದೀಪ, ಎಕ್ಕದೆಲೆಗಳ ರಾಶಿಯ ಬಳಿ, ಹಿರಿಯ ನಾಗತಿ ಓಬವ್ವ, ದೇವರೆದುರೆಂಬಂತೆ ಕೈ ಮುಗಿದು, ಕಡೆದ ವಿಗ್ರಹದಂತೆ ಕುಳಿತಿದ್ದಳು. ನಿಶ್ಚಲವಾಗಿ ನಿಂತ ಕೋಡುಗಲ್ಲಿನ ಪದರದಲ್ಲಿ ಜಿನುಗುವ ಜಲದಂತೆ, ಅಲುಗಾಡದೆ ಕುಳಿತ ಅವಳ ಮುಚ್ಚಿದ ಕಣ್ಣುಗಳಿಂದ ಕಂಬನಿ ಹನಿಯು

ತ್ತಿತ್ತು. ಆಕೆಯ ಬಳಿಯುಳಿದ ನಾಲ್ಕಾರು ಮಂದಿ ದಾಸಿಯರು ದುಃಖದಿಂದ ಪ್ರಜ್ಞೆ ತಪ್ಪಿ ಬಳಿಯಲ್ಲಿ ಉರುಳಿದುದೂ ಆಕೆಗೆ ಎಚ್ಚರವಿದ್ದಂತಿರಲಿಲ್ಲ.

ಕಾರ್ಗಾಲದ ಕಡಲ ನೆರೆಯಂತೆ ಶೋಕಧ್ವನಿ ಅರಮನೆಯನ್ನು ಸುತ್ತುವರಿದಿತ್ತು. ದಿಕ್ಕುಗಳನ್ನು ದಿಕ್ಕುಗೆಡಿಸುವ ಆ ದುಃಖದ ಹೊಯ್ಲಿನ ನಡುವೆ ಅಚಲವಾಗಿ, ಕಣ್ಣು ರೆಪ್ಪೆಯೂ ಚಲಿಸದಂತೆ ನಾಗತಿ ಕುಳಿತಿದ್ದಳು.

Mr. A. Srinivasa Rao
S. C. B. H

ದುರ್ಗದಲ್ಲಿ

ನಾಯಕರ ಶವಸಂಸ್ಕಾರವನ್ನು, ನಾಗತಿಯರ ಸಹಗಮನದ ಅಪೂರ್ವ ಭವ್ಯ ದೃಶ್ಯವನ್ನು ನೋಡಲೆಂದು ಜನ ಮೂಲೆ ಮೂಲೆಯಿಂದಲೂ ಕಿಕಿರ್ಕ್ಕಿದಿತ್ತು. ಅದು ಕಳೆದು ನಾಲ್ಕಾರು ದಿನಗಳಾದರೂ ಜನರ ಬಾಯಲ್ಲಿ ಆ ಮಾತನ್ನುಳಿದು ಬೇರೆಯ ಮಾತೇ ಇಲ್ಲ. ತಾವು ಕಂಡದ್ದು, ತಾವು ಕಾಣದೆ ಬೇರೆಯವರು ಹೇಳಿದ್ದು, ಹಾಗೆ ಹೇಳಿ ಕೇಳಿದ್ದಕ್ಕೆ ತಮ್ಮ ಊಹೆ ಬಣ್ಣ ಕಟ್ಟಿದ್ದನ್ನು ಎಷ್ಟು ವರ್ಣಿಸಿ ಹೇಳಿದರೂ ಯಾರಿಗೂ ತೃಪ್ತಿಯಿಲ್ಲ. ದೇವಾಲಯಗಳ ಬಳಿ, ನೀರಿನ ಹೊಂಡದ ಬಳಿ, ತೋಪುಗಳಲ್ಲಿ, ಕೋಟಿ ಪೇಟೆಯಲ್ಲಿ—ಎಲ್ಲೆಡೆಯಲ್ಲೂ ಇದೇ ಮಾತೇ. ನಾಗತಿಯರ ಸೌಂದರ್ಯ, ಅವರ ವಸ್ತ್ರಾಭರಣಗಳ ವೈಭವ, ಅವರ ಸತೀತ್ವದ ಸಾಹಸ—ನಡೆದು ನಾಲ್ಕು ದಿನಗಳು ಕಳೆಯುವಷ್ಟರಲ್ಲೇ ದಂತ ಕಥೆಗಳ ಸ್ವರೂಪ ಪಡೆಯು ವಷ್ಟು ಚರ್ಚಿತವಾಗಿದ್ದುವು.

ಆದರೆ ಈ ಎಲ್ಲ ಮಾತು ಆಡುವಾಗ ಒಂದು ಮಾತು ಬಂದಾಗ ಮಾತ್ರ ಜನರ ಬಾಯಿ ಕಟ್ಟಿದಂತಾಗಿತ್ತು. ನಾಯಕರ ಮೂವತ್ತು ಮಂದಿ ನಾಗತಿಯರಲ್ಲಿ ಉಳಿದವರೆಲ್ಲರೂ ಸಹಗಮನ ಮಾಡಿದರೂ, ವಯಸ್ಸಿನಲ್ಲಿ ಅವರೆಲ್ಲರಿಗಿಂತಲೂ ಹಿರಿಯಳಾಗಿ, ಎಲ್ಲರಿಗೂ ಮೊದಲು, ನಾಯಕರ ಚಿತೆಯೇರ ಬೇಕಾಗಿದ್ದ ಹಿರಿಯ ನಾಗತಿ ಮಾತ್ರ ಸಹಗಮನಮಾಡದೆ ಉಳಿದಿದ್ದಳು. ಏಕೆ?

ಈ ಪ್ರಶ್ನೆ ನೂರಾರು ನಾಲಗೆಗಳ ಮೇಲಾಡಿ, ನೂರಾರು ಮಿದುಳು ಗಳನ್ನು ಕಲಕಿ, ಅಷ್ಟೇ ಬಗೆಯ ಉತ್ತರಗಳಿಗೆ ಕಾರಣವಾಗಿತ್ತು. ಸರಿ ಯಾದ ಕಾರಣ ತಿಳಿಯದಿದ್ದರೂ, ಎಲ್ಲರೂ ಸರಿಯಾದ ಕಾರಣ ತಮ ಗೊಬ್ಬರಿಗೇ ತಿಳಿದಿದ್ದಂತೆ ಮಾತನಾಡುವರು. ಅವರಲ್ಲೂ ಕೊಂಚ ಅರಮನೆಯ ಸಂಬಂಧವಿದ್ದವರು, ತಾವು ಎಲ್ಲವನ್ನೂ ಬಲ್ಲವರಂತೆಯೇ ಗಂಭೀರವಾಗಿ ಉತ್ತರಕೊಡುವಾಗ, ಅವರ ಮಾತಿನಲ್ಲಿ ಸಂದೇಹಪಡಲು ಕಾರಣವೇ ಇಲ್ಲವೆಂದು ತೋರಿದರೂ, ಮರುಗಳಿಗೆಯೇ ಬೇರೊಬ್ಬರ ಹೇಳಿದುದನ್ನು ಕೇಳಿದಾಗ, ಮತ್ತೆ ಸಂದೇಹ ಮೈತಾಳುವುದು.

ಇದರೊಂದಿಗೆ-ಅರಮನೆಯವರು ಮತ್ತು ಆಪ್ತ ಜನ ಎಷ್ಟೇ ಗುಟ್ಟಾಗಿಡಬೇಕೆಂದು ಯತ್ನಿಸಿದರೂ, ನಾಯಕರ ಶವದ ಮುಂದೆ ಉತ್ತರಾಧಿಕಾರದ ವಿಚಾರದಲ್ಲಿ ನಡೆದ ಚರ್ಚೆ, ಹಗರಣ ಹೇಗೋ ಆ ಕಾವಲಿನಿಂದ ನುಸುಳಿಕೊಂಡು ಬಂದು ಜನರ ಸಂದೇಹಕ್ಕೆ ಯಾವುದೋ ಗಭೀರ ರಾಜಕಾರಣದ ಸ್ವರೂಪವನ್ನು ನೀಡಿತ್ತು. ಆ ಮಾತನ್ನಾಡುವಾಗ ಗಟ್ಟಿಯಾಗಿ, ನಾಲ್ಕು ಜನಕ್ಕೆ ಕೇಳಿಸದಂತೆ ಪಿಸುದನಿಯಲ್ಲಿ, ತಾವೂ ಯಾವುದೋ ಪಿತೂರಿಯ ಪಾಲುಗಾರರಂತೆಯೊ ಮಾತನಾಡುವಂತೆ ಮಾಡಿತ್ತು.

"ಕಿರಿಯ ನಾಗತಿ ಗೌರವ್ವ ತನ್ನ ತಮ್ಮನಿಗೇ ಪಟ್ಟವಾಗುವಂತೆ ಹಟ ಹಿಡಿದರಂತೆ. ಹಿರಿಯ ನಾಗತಿ ಅದು ಕೂಡದು, ನಾಯಕರ ಅಣ್ಣನ ಮಕ್ಕಳಿಗೇ ಪಟ್ಟವಾಗಬೇಕು, ಎಂದು ವಾದ ಹೂಡಿದರಂತೆ. ತಾವು ಸಹಗಮನ ಮಾಡಿದರೆ, ಕಿರಿಯ ನಾಗತಿಯ ಕಡೆಯವರು ಎಲ್ಲಿ ಹಟ ಸಾಧಿಸಿ, ಕಿರಿಯ ನಾಗತಿಯ ತಮ್ಮನಿಗೇ ಪಟ್ಟ ಕಟ್ಟುವರೋ ಎಂದು ಹೆದರಿ, ಆವರು ಸಹಗಮನಮಾಡಲು ಹಿಂಜರಿದಳಂತೆ."

—ಎಂದು ಒಬ್ಬ ಹೇಳಿದರೆ, ಮತ್ತೊಬ್ಬ

"ಹಾಗಲ್ಲ, ಇರುವ ವಿಚಾರ ನಾ ಬಲ್ಲೆ. ನನ್ನ ಭಾವಮೈದುನನ ಅಳಿಯನ ಅಕ್ಕನ ಮಗ ಅರಮನೆ ಊಳಿಗದಲ್ಲಿದ್ದಾನೆ. ಅವನು ಹೇಳಿದನಂತೆ, ಹಿರಿಯ ನಾಗತಿ ಸಹಗಮನಮಾಡಿದರೆ, ತಾನು ಉಳಿದುಕೊಂಡು ತನ್ನ ತಮ್ಮನ ಪರ ಕೆಲಸಮಾಡಬೇಕೆಂದು ಕಿರಿಯ ನಾಗತಿ ಯೋಚಿಸಿದ್ದಳಂತೆ. ಆದರೆ ದಕ್ಕಲಿಲ್ಲ. ಕಡೆಗಳಿಗೆಯಲ್ಲಿ ಹಿರಿಯ ನಾಗತಿ ನಾನು ಸಹಗಮನಮಾಡುವುದಿಲ್ಲ ಎಂದು ಹೇಳಿದರಂತೆ. ನಾಯಕರು ಇದ್ದಷ್ಟು ದಿನ ಅವರು ಬೇರೆ ನಾಗತಿಯರಿಗೆ ವಶವಾಗಿ ಇವರನ್ನು ಉರಿಸಿದರಂತೆ. ಅದಕ್ಕೇ ಈಗ ಹೇಗೂ ರಾಜ್ಯಕ್ಕೆ ಉತ್ತರಾಧಿಕಾರಿಗಳಿಲ್ಲದಿರುವುದರಿಂದ ತಾವೇ ಅಷ್ಟು ಕಾಲ ರಾಜ್ಯಭಾರಮಾಡಬಹುದು ಎಂದು ಹಿರಿಯ ನಾಗತಿ ಲೆಕ್ಕಹಾಕಿದಾರಂತೆ."

—ಎಂದು ಹೇಳುವನು,

"ಸರಿ ಸರಿ ಗಂಡು ಮೆಟ್ಟನ್ನು ಹೆಣ್ಣು ಆಳಿದ ಹಾಗೇ ಆಯಿತು.

ಅದೆಲ್ಲಾ ಅಲ್ಲ ಕಣಯ್ಯ ಕಾರಣ. ಹೇಗೂ ಈಗ ನಾಯಕರ ಬಳಿಕ ಸಿಂಹಾಸನಕ್ಕೆ ಯಾರು ದಿಕ್ಕು ಎಂದು ಗೊತ್ತಾಗಿಲ್ಲ. ಮುಂದೆ ನಾಯಕ ನಾದರೆ ಇಲ್ಲ ಲಿಂಗಣ್ಣನಾಯಕರಾಗಬೇಕು, ಇಲ್ಲ ಓಬಣ್ಣನಾಯಕ ರಾಗಬೇಕು. ಆದರೆ ಅವರಿಬ್ಬರಲ್ಲೂ ನಾನು ತಾನು ಎಂದು ಜಗಳ ಹುಟ್ಟಿರುವುದರಿಂದ, ಅವರಿಬ್ಬರ ಜಗಳವನ್ನು ನಾನು ಲಾಭಮಾಡಿಕೊಂಡು ತಮ್ಮ ಕಡೆಯವನೊಬ್ಬನನ್ನು ಪಟ್ಟಕ್ಕೆ ತರಲು ಹಂಚಿಕೆ ಮಾಡಿದಾರಂತೆ ಹಿರಿಯ ನಾಗತಿ. " ಇನ್ನೆರಡು ದಿನ ಕಾದು ನೋಡು. ನಾನು ಹೇಳಿದ್ದು ನಿಜವಾಗುತ್ತದೆಯೋ ಇಲ್ಲವೋ "

—ಎಂದು ಮೂರನೆಯನೊಬ್ಬ ತನಗೊಬ್ಬನಿಗೇ ಖಚಿತವಾದ ವಿಚಾರ ಗೊತ್ತಿದ್ದಂತೆ ಹೇಳುವನು.

" ಅಲ್ಲ–ಮೂರು ಲೋಕವಾಳುವಂಥ ಗಂಡನೇ ಹೋದ. ಇನ್ನು ಮತ್ತೆ ಯಾವ ಸ್ವರ್ಗಸುಖ ಇಲ್ಲಿ ಉಣ್ಣುತ್ತೇನೆಂತ ಉಳಿದುಕೊಂಡಳೋ ಈ ಮುದಿಗೊರಡು "

—ಎಂದು ಕೆಲವರು ಸಹಗಮನಮಾಡದೆ ಉಳಿದುಕೊಂಡ ನಾಗತಿ ಯನ್ನು ನಿಂದಿಸಿದರೆ, ಮತ್ತೆ ಕೆಲವರು—

" ಆಕೆ ಉಳಿದುಕೊಂಡದ್ದೇ ಸರಿಯಾಯಿತು. ಇಲ್ಲದೇ ಹೋದಲ್ಲಿ ಮಾತನಾಡುವ ಹಿರಿಯರೇ ಇಲ್ಲದೆ ಅರಮನೆಯಲ್ಲಿ ತಲೆತಲೆಗೂ ಪಾಳಯ ಪಟ್ಟಾಗಿ ಅನಾಯಕತ್ವವಾಗುತ್ತಿತ್ತು. ಈಗ ಆಕೆ ಇರುವುದರಿಂದ ಯಾರೂ ಸ್ವೇಚ್ಛೆಯಾಗಿ ನಡೆಯುವಂತಿಲ್ಲ. "

—ಎಂದು ನಾಗತಿಯ ನಡೆತೆಯನ್ನು ಸಮರ್ಥಿಸುವರು.

ಒಮ್ಮೊಮ್ಮೆ ಈ ಚರ್ಚೆ ರಾಜಕಾರಣದ ಜಾಡನ್ನು ಬಿಟ್ಟು, ಪತಿ ಯೊಂದಿಗೆ ಸಹಗಮನಮಾಡದ ನಾಗತಿಯ ಚಾರಿತ್ರ್ಯದಲ್ಲಿ ಕಲಂಕವನ್ನು ಕಾಣುವ ಕವಲುದಾರಿ ಹಿಡಿಯುವುದು.

" ನಾಯಕರಿದ್ದಷ್ಟು ದಿನ ನಾಗತಿಗೆ ಬೇಲಿಹಾಕಿದಂತಾಗಿತ್ತು. ಈಗ ನಾಯಕರೂ -ಇಲ್ಲ, ಸಂದೇಹಪಡುವ ಸವತಿಯರೂ ಇಲ್ಲ. ಮನಬಂದ ಹಾಗೆ ಇರಬಹುದು. "

—ಎಂದು ಕೊಂಕು ಮಾತನ್ನು ಕೆಲವರು ನುಡಿದರೆ, ಕೆಲವರು

“ ಮಾಡಿದವರ ಪಾಪ ಆಡಿದವರ ಬಾಯಲ್ಲಿ ಅಂತ, ಯಾರ ಚಿಂತೆ ನಮಗೇಕೆ ? ಅವರ ಧರ್ಮ ಕರ್ಮ ಅವರಿಗೇ ಇರಲಿ ”

—ಎಂದು ತಟಸ್ಥವಾಗಿದ್ದು, ಆ ಆರೋಪವನ್ನು ಸಮರ್ಥಿಸುವರು ಮತ್ತೆ ಕೆಲವರು.

ಹೀಗೆ ನೂರಾರು ಜನ, ನೂರಾರು ಬಗೆಯ ಅಭಿಪ್ರಾಯ. ಆನೆಯನ್ನು ಕಾಣದ ಕುರುಡರು ಒಬ್ಬೊಬ್ಬರೂ ತಾವು ಕಾಣದ ಆನೆ ಹಾಗಿದೆ, ಹೀಗಿದೆ ಎಂದು ವರ್ಣಿಸಿದಂತೆ, ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಆಡಿಕೊಳ್ಳುವರು. ಅಂತೂ ಹಿರಿಯ ನಾಗತಿ ಸಹಗಮನಮಾಡದೆ ಉಳಿದದ್ದು ಎಲ್ಲರಿಗೂ ಸಮಸ್ಯೆಯಾಗಿದೆ.

೨

ರಾಜಕಾರಣದ ನೇರವಾದ ಸಂಪರ್ಕವಿಟ್ಟುಕೊಳ್ಳದ ಜನಕ್ಕೆ ಈ ಸಮಸ್ಯೆ ಇಷ್ಟು ಚಿಂತನೆಗೆ ಕಾರಣವಾಗಿದ್ದರೆ, ರಾಜಕಾರಣದ ಸೂತ್ರಧಾರಿಗಳಿಗೆ, ಇದು ಮತ್ತಷ್ಟು ತೊಡಕಾಗಿದೆ. ಅವರೆಲ್ಲರ ಪಾಲಿಗೂ ದಾಳ ತಾವಾರೂ, ಕನಸುಮನಸ್ಸಿನಲ್ಲಿಯೂ ಊಹಿಸದ ಗರವನ್ನು ಉರುಳಿಸಿದಂತಾಗಿ ಎಲ್ಲರೂ ತಬ್ಬಿಬ್ಬಾಗಿದ್ದಾರೆ.

ಅನಿರೀಕ್ಷಿತವಾಗಿ ಉದ್ಭವಿಸಿದ ಈ ಸಮಸ್ಯೆ ಉಳಿದೆಲ್ಲರಿಗಿಂತಲೂ ಹೆಚ್ಚಾಗಿ ದಳವಾಯಿ ದೇಸಣ್ಣನ ತಲೆಯನ್ನು ತಿನ್ನುತ್ತಿತ್ತು. ಇದನ್ನು ಚರ್ಚಿಸಲೆಂದೇ ಉಳಿದ ದಳವಾಯಿಗಳನ್ನು ಕರೆಕಳಿಸಿದ ದೇಸಣ್ಣ ತನ್ನ ಮನೆಯ ಮೇಲುಪ್ಪರಿಗೆಯ ಹಜಾರದಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಶತಪಥ ಹಾಕುತ್ತಿದ್ದ. ಆತನ ಬಿಗಿದ ಮುಖಮುದ್ರೆ, ಹೆಣೆದುಕೊಂಡ ದಟ್ಟವಾದ ಹುಬ್ಬು, ತುಟಿಗಳ ನಡುವೆ ಸಿಕ್ಕ ಗಂಡುಮೀಸೆ, ಆತನ ಚಿತ್ತದ ಕ್ಷೋಭೆಗೆ ಪ್ರತ್ಯಕ್ಷ ಸಾಕ್ಷಿಗಳಂತಿದ್ದುವು. ಆತನ ಕಣ್ಣುಗಳು ಗೋಡೆಗೆ ಸಾಲಾಗಿ ತೂಗುಹಾಕಿದ್ದ ಕತ್ತಿ, ಗುರಾಣಿ, ಕವಚ, ಭಲ್ಲೆ, ಕಠಾರಿಗಳನ್ನು ದಿಟ್ಟಿಸುತ್ತಿದ್ದರೂ, ಆತನ ಮನಸ್ಸು ಆ ಗೋಡೆಯಾಚೆ ತೂರಿ, ಮತ್ತಾವುದೋ ರಹಸ್ಯವನ್ನು ಭೇದಿಸಲು ತವಕಿಸುತ್ತಿತ್ತು.

ದಳವಾಯಿ ದೇಸಣ್ಣ, ಸರ್ಜೇರಾಯರ ಮಕ್ಕಳ ಪಕ್ಷವನ್ನು ಕಟ್ಟಿದ ಗುಂಪಿನ ಮುಖ್ಯಸ್ಥ. ಕಸ್ತೂರಿ ರಂಗಪ್ಪನಾಯಕರ ಬಳಿಕ ಅವರ ಹಿರಿಯ

ಮಗ ಸರ್ಜೇರಾಯನ ಮಕ್ಕಳು ಪಟ್ಟಕ್ಕೆ ಬರದೆ, ಕೊನೆಯ ಮಗ ಇಮ್ಮಡಿ ಮದಕರಿನಾಯಕ ಪಟ್ಟಕ್ಕೆ ಬಂದುದು, ಆತನಿಗೆ ಅಸಮಾಧಾನ ವಾಗಿತ್ತು. ಅದಕ್ಕೆ ಹೆಚ್ಚಾಗಿ, ಇಮ್ಮಡಿ ಮದಕರಿನಾಯಕರನ್ನು ಪಟ್ಟಕ್ಕೆ ತರುವಾಗ, ಮಂತ್ರಿಮಂಡಲದವರು ಸೇನಾ ಮುಖ್ಯಸ್ಥನಾದ ತನ್ನನ್ನು ಒಂದು ಮಾತೂ ಕೇಳದೆ, ತಾನೇ ಸರ್ವಸ್ವಾತಂತ್ರ್ಯವಹಿಸಿ ಎಲ್ಲ ಕಾರ್ಯವನ್ನು ನಡಸಿದುದ್ದು, ಅಸಮಾಧಾನಕ್ಕೆ ಆಜ್ಯಾಹುತಿಯನ್ನು ನೀಡಿತ್ತು.

"ಈ ದುರ್ಗಕ್ಕೆ ವಿಪತ್ತು ಬಂದಾಗ ರಕ್ತ ಹರಿಸಲು, ಪ್ರಾಣ ಕೊಡಲು, ದಳವಾಯಿಗಳು ಬೇಕು. ಉಳಿದ ಮುಖ್ಯ ವಿಷಯಗಳಲ್ಲಿ ನಾವು ಯಾರಿಗೂ ಬೇಡ; ಬರೀ ಕಾಲ ಕಸ. ಓಲಗಸಾಲೆಯಲ್ಲಿ ಕುಳಿತು ಬಡಾಯಿ ಕೊಚ್ಚುವ ಭುವನಪ್ಪನಂಥವರಿಗೇ ಎಲ್ಲ ಕೆಲಸಕ್ಕೂ ಅಗ್ರ ತಾಂಬೂಲ. ಅರಮನೆಯವರು ಹೀಗೆ ಮಾಡುವುದು ಸೇನೆಯವರಿಗೆ ಅಪಮಾನಮಾಡಿದಂತೆ. ಇದನ್ನು ನಾವು ಪ್ರತಿಭಟಿಸಿ ನಮ್ಮ ಮರ್ಯಾದೆ ಕಾಯ್ದುಕೊಳ್ಳದೆ ಹೋದರೆ, ನಾಳೆ ಯುದ್ಧವಿಲ್ಲದ ಕಾಲದಲ್ಲಿ, ಬೀದಿಯ ನಾಯಿಯೂ ನಮ್ಮನ್ನು ಕಂಡು ಎದ್ದು ನಿಲ್ಲುವುದಿಲ್ಲ."

ಎಂದು ಆಗಲೇ ಇತರ ದಳವಾಯಿಗಳ ಮುಂದೆ ತನ್ನ ಅಸಮಾಧಾನ ವನ್ನು ಸೂಚ್ಯವಾಗಿ ತೋರಿಕೊಂಡಿದ್ದ; ಎಲ್ಲ ದಳವಾಯಿಗಳ ಮರ್ಯಾ ದೆಯ ಹೆಸರಿನಲ್ಲಿ ದೇಸಣ್ಣ ಆಡಿದ ಮಾತು, ಇತರ ದಳವಾಯಿಗಳಿಗೂ ಕೊಂಚ ಮಟ್ಟಿಗೆ ಸರಿ ಕಂಡಿತ್ತು.

"ಅರಮನೆಯವರು ನಾವು ಹೇಳಿದ ಹಾಗೆ ಕೇಳಬೇಕು ಎಂದು ನಾವೂ ಹೇಳುವುದಿಲ್ಲ. ಮಂತ್ರಿಮಂಡಲ ಇರುವುದೇ ಇಂಥ ಕೆಲಸಕ್ಕಾಗಿ. ಅವರ ಕೆಲಸ ಅವರು ಮಾಡಲಿ. ನಾವಿರುವುದು ಕೋಟೆಯ ರಕ್ಷಣೆ ಗಾಗಿ. ನಮ್ಮ ಕೆಲಸ ನಾವು ಮಾಡುತ್ತೇವೆ. ಆದರೆ ಎಲ್ಲರ ಹಾಗೆ ನಮ್ಮನ್ನೂ ಒಂದು ಮಾತು ಕೇಳಿದ್ದರೆ ನಾವು ಬೇಡ ಅನ್ನುತ್ತಿದ್ದೆವೆ? 'ಅರಸು ಯಾರಾದರೂ ತಮ್ಮದು ಕೋಟೆ ಕಾಯುವ ಕೆಲಸ ಆಯಿತು' ಎಂದು ಅವರ ಸಲಹೆಗೇ ನಾವೂ ತಲೆ ಹಾಕುತ್ತಿದ್ದೆವು. ಆಗ ನಮಗೂ ಮರ್ಯಾದೆ ಕೊಟ್ಟ ಹಾಗಾಗುತ್ತಿತ್ತು. ಅವರ ಕೆಲಸಕ್ಕೂ ಅಡ್ಡಿಯಾಗು

ತ್ತಿರಲಿಲ್ಲ. ಈಗ ನಾವು ಇದ್ದೂ ಸತ್ತಂತೆ ಮಾಡಿದರು ಅರಮನೆಯವರು"

—ಎಂದು ಕೆಲವರು ದೇಸಣ್ಣನ ಮಾತಿಗೆ ತಲೆ ತೂಗಿದ್ದರು. ಮತ್ತೆ ಕೆಲವರು,

"ಸೀರ್ಯದ ಕೃಷ್ಣಪ್ಪ ನಾಯಕ ದುರ್ಗದ ಮೇಲೆ ದಂಡೆತ್ತಿ ಬಂದಾಗ ಈ ದುರ್ಗವನ್ನು ಕಾಪಾಡಿದವರು ಸರ್ಜೇರಾಯರು. ತಮ್ಮ ಕೈಯ ಗಂಡುಗೊಡಲಿಯಿಂದಲೇ ನೂರಾರು ಮಂದಿಯನ್ನು ಕಡಿದು ರಾಜ್ಯ ವನ್ನು ರಕ್ಷಿಸಿದ ಪರಾಕ್ರಮ ಅವರದು. ಅವರು ಕಟ್ಟಿದ ರಾಜ್ಯ ಅವರ ದಾಗಬೇಕಾಗಿತ್ತು. ಇಲ್ಲವೇ ಅವರ ಮಕ್ಕಳದಾಗಬೇಕಾಗಿತ್ತು. ಹಿರಿಯ ಮಗನಾಗಿ ಹುಟ್ಟಿಯೂ ರಾಜ್ಯವಾಳುವ ಪುಣ್ಯವನ್ನು ಅವರು ಪಡೆಯಲಿಲ್ಲ. ಅಂಥ ತಂದೆಯ ಮಕ್ಕಳಾಗಿ ಹುಟ್ಟಿಯೂ, ಈ ಇಬ್ಬರು ಕಂಡವರ ಊಳಿಗ ಮಾಡುತ್ತಾ ಬದುಕ ಬೇಕೇ? ಒಮ್ಮೆ ಕೈಗೆ ಬಂದು ತಪ್ಪಿದ ತುತ್ತು ಮತ್ತೊಮ್ಮೆಯೂ ಕಂಡವರ ಪಾಲಾಗಬೇಕೇ?"

—ಎಂದು ಗತಿಸಿದ ಸರ್ಜೇರಾಯರಲ್ಲಿದ್ದ ವಿಶ್ವಾಸ, ಅವರ ಮಕ್ಕಳಿಗಾದ ಅನ್ಯಾಯಕ್ಕಾಗಿ ಮರುಗಿ ಧರ್ಮದೃಷ್ಟಿಯಿಂದ ದೇಸಣ್ಣನ ಮಾತಿಗೆ ಮನಸೋತಿದ್ದರು.

ಹೀಗೇ ಹಲವಾರು ಕಾರಣಗಳಿಂದಾಗಿ ದಳವಾಯಿಗಳ ಗುಂಪಿನಲ್ಲಿ ದೇಸಣ್ಣನ ಪಕ್ಷ ಬಲವಾದುದಲ್ಲದೆ, ಬೇರೆಯವರೂ ಅವನ ಗುಂಪಿಗೆ ಸೇರಿದ್ದರು.

ದೇಸಣ್ಣ ಸುಳಿವುಕೊಡದೆ ಬಂದ ಈ ಸಮಸ್ಯೆಯನ್ನು ಚಿಂತಿಸುತ್ತ ಶತಪಥ ಹಾಕುತ್ತಿರುವಾಗಲೇ ಬಾಗಿಲ ಭಟನು ಬಂದು ದಳವಾಯಿ ಮುದ್ದಣ್ಣ, ರಾಯಣ್ಣ ಬಂದಿದಾರೆಂದು ತಿಳಿಸಿದ.

ಅವರಿಬ್ಬರನ್ನು ಒಳಗೆ ಕರೆತಾರೆಂದು ಭಟನಿಗೆ ಹೇಳಿ ದೇಸಣ್ಣ ಅವರು ಬರುವುದನ್ನು ಕಾಯುತ್ತಾ, ನೆಲಕ್ಕೆ ಹಾಸಿದ್ದ ಮೆತ್ತೆಯ ಮೇಲೆ ದಿಂಬಿಗೆ ಒರಗಿ ಕುಳಿತ. ಸ್ವಲ್ಪ ಹೊತ್ತಿನಲ್ಲೇ ಇಬ್ಬರು ದಳವಾಯಿಗಳೂ ಬಂದರು.

ದಳವಾಯಿ ಮುದ್ದಣ್ಣ ಆ ಕೆಲಸಕ್ಕಾಗಿಯೇ ಹುಟ್ಟಿದಂತಹ ಆಜಾನುಬಾಹು ಆಳು. ಗಲ್ಲಿಮೀಸೆ, ದಟ್ಟವಾದ ಕೂಡು ಹುಬ್ಬುಗಳ,

ಸ್ವಾಭಾವಿಕವಾಗಿಯೇ ಕಠೋರವಾದ ಆ ಮುಖ ಈದಿನವೇಕೋ ಮತ್ತಷ್ಟು ಕಠೋರವಾಗಿ, ಕಣ್ಣುಗಳು ಯಾವುದೋ ಸುಪ್ತರೋಷದಿಂದ ಹೊಳೆಯುತ್ತಿದ್ದುವು. ಒಳಗೆ ಬರುತ್ತಿದ್ದ ಹಾಗೆಯೇ—

"ಹೊಸ ಸುದ್ದಿಯನ್ನು ಕೇಳಿದಿರಾ ದಳವಾಯಿಗಳೇ ?"

—ಎಂದು ಕೇಳಿಕೊಂಡೇ ಬಂದ.

"ಕೇಳಿದೆ, ಅದಕ್ಕಾಗಿಯೇ ನಿಮಗೆ ಹೇಳಿಕಳಿಸಿದ್ದು. ಬನ್ನಿ ನಿಧಾನವಾಗಿ ಮಾತನಾಡೋಣ, ಮಾತನಾಡುವುದು ಗುಡ್ಡದಷ್ಟಿದೆ"

—ಎಂದ ದೇಸಣ್ಣ.

"ನಮ್ಮದೆಲ್ಲಾ ಬರೀ ಮಾತಿನಲ್ಲೇ ಆಗಿಹೋಯಿತು, ಅದಕ್ಕೇ ನಾವಿಷ್ಟು ತಾತ್ಸಾರವಾಗಿದೇವೆ. ನಾವೂ ಒಬ್ಬರು ಬದುಕಿದೇವೆ ಎನ್ನುವುದನ್ನು ಇತರರಿಗೆ ಮನವರಿಕೆ ಮಾಡಿಕೊಟ್ಟ ಹೊರತು, ಈ ಜನಕ್ಕೆ ಎಚ್ಚರವಾಗುವುದಿಲ್ಲ ದೇಸಣ್ಣನವರೇ."

"ನೀನಾಡುವ ಮಾತನ್ನು ಕೇಳಿದರೆ, ಏನೋ ವಿಶೇಷ ಸುದ್ದಿಯಿದ್ದಂತಿದೆ. ಏನು ಸಮಾಚಾರ ಮುದ್ದಣ್ಣ ?"

"ಊರಿನ ಜನ ಆಡುವ ಮಾತು ನಿಮಗೆ ಗೊತ್ತಿಲ್ಲವೆ ?"

"ಜನಕ್ಕೇನು ಸಾವಿರ ಮಾತಾಡುತ್ತಾರೆ. ಜನದ ಮಾತನ್ನೆಲ್ಲಾ ನಾವು ನಂಬುವುದಕ್ಕುಂಟೆ ?"

"ಜನದ ಮಾತನ್ನು ನಂಬದೆ ಹೋದರೂ, ಎಷ್ಟೋ ಬಾರಿ, ಅದು ಗಾಳಿ ಎತ್ತ ಬೀಸುತ್ತಿದೆ ಎನ್ನುವುದಕ್ಕೆ ಕೈಗೋಲಾಗುತ್ತದೆ. ಅದಕ್ಕೇ, ಅವನ್ನು ಗಮನವಿಟ್ಟು ಕೇಳಿದರೆ, ಎಷ್ಟೋ ಬಾರಿ ಅದು ನಿರರ್ಥಕವಾಗುವುದಿಲ್ಲ. ಅಂತೂ, ಈ ಬಾರಿಯೂ ಭುವನಪ್ಪನವರು ಹೊಸ ಸಂಚನ್ನೇನೋ ನೇಯುತ್ತಿರುವಂತಿದೆ ದೇಸಣ್ಣ."

"ಭುವನಪ್ಪನವರ ಸಂಚೇ ?"

—ಆಶ್ಚರ್ಯದಿಂದ ಕೇಳಿದ ದೇಸಣ್ಣ

"ಹೂ, ಭುವನಪ್ಪನವರದೇ. ಯಾರೆಂದರೆ ನೀವು ಪ್ರತ್ಯಕ್ಷ ದೇವರ ಅವತಾರ, ದುರ್ಗದ ಅಭಿಮಾನಿ ದೇವತೆಯೇ ಮೈವೆತ್ತುಬಂದ ಮಹನೀಯ ಎಂದು ನಂಬಿದೀರೋ ಅದೇ ಭುವನಪ್ಪನವರದೇ."

—ಯಾವುದೋ ಆಕ್ರೋಶದ ಒತ್ತಡದಲ್ಲಿ ಹೇಳಿದ ಮುದ್ದಣ್ಣ.

"ನಿನಗೇಕೋ ಯಾವಾಗಲೂ ಭುವನಪ್ಪನವರ ಮೇಲೆ ಕಣ್ಣು ಮುದ್ದಣ್ಣ, ಅವರಿಗೂ ಸಂಚಿನ ಬುದ್ಧಿಗೂ ಬಹಳ ದೂರ. ಅಂಥ ದೂರ್ತ ತನದ ಗಾಳಿಯೂ ಅವರ ಬಳಿ ಸುಳಿಯುವುದಿಲ್ಲ."

"ಹಾಗೆಂದುಕೊಂಡು, ಹೊಳೆಯುವುದೆಲ್ಲಾ ಹೊನ್ನು ಎಂದು ನಂಬಿ ನೀವು ಹೀಗಾದಿರಿ ದೇಸಣ್ಣ; ಇಲ್ಲವಾದರೆ ದುರ್ಗದ ಸೇನೆಯಲ್ಲಿ ಆಯುಸ್ಸನ್ನೆಲ್ಲಾ ಕಳೆದ ನಿಮ್ಮಂಥವರು ಬರೀ ಕೆಲಸಕ್ಕೆ ಬಾರದ ದಳವಾಯಿಗಳಾಗಿಯೇ ಕೊಳೆಯಬೇಕಾಗಿರಲಿಲ್ಲ. ದುರ್ಗಕ್ಕಾಗಿ ನೀವು ಸುರಿಸಿದ ನೆತ್ತರನ್ನು ಲೆಕ್ಕಕ್ಕಿಟ್ಟರೆ, ಈ ದುರ್ಗಾಧಿಪತ್ಯವನ್ನೇ ನಿಮಗೆ ವಹಿಸಿಕೊಟ್ಟರೂ ಸಾಲದು. ಹಾಗಿದ್ದರೂ ನೀವಿನ್ನೂ ಬರೀ ದಳವಾಯಿಗಳೇ. ಯಾವ ಮಾತನ್ನೂ ನಿಮಗೆ ಹೇಳುವುದಿಲ್ಲ, ಯಾವುದಕ್ಕೂ ನಿಮ್ಮನ್ನು ಕೇಳುವುದಿಲ್ಲ. ಹೀಗಾಗಿಯೇ ದುರ್ಗಕ್ಕಾಗಿ ದಿನದಿನವೂ ಸತ್ತು ಬದುಕುವ ನಾವು ಇನ್ನೂ ಕಾಸ್ತಾರರಿಗಿಂತಲೂ, ಬಿಟ್ಟಿ ಆಳುಗಳಿಗಿಂತಲೂ ಕಡೆಯಾಗಿ ಬಿದ್ದಿದೇವೆ. ಈ ಬಾರಿಯಾದರೂ ಭುವನಪ್ಪನವರ ಆಟ ನಡೆಯಲು ಬಿಡಬಾರದು ದೇಸಣ್ಣನವರೇ."

"ಈಗ ಏನಾಯಿತು ಮುದ್ದಣ್ಣ?"

—ಮುದ್ದಣ್ಣ ಆಡಿದ ಮಾತು, ಅದನ್ನು ಆಡಿದ ರೀತಿಯಿಂದ ಚಕಿತನಾದ ದೇಸಣ್ಣ ಕೇಳಿದ.

"ಏನಾಗಬೇಕು. ಹಿರಿಯ ನಾಗತಿಯು ಸಹಗಮನ ಮಾಡದಿದ್ದುದೇಕೆ ಗೊತ್ತೆ ದೇಸಣ್ಣನವರೇ?"

"ಏಕೆಂಬುದು ನನಗಿನ್ನೂ ತಿಳಿಯದು. ಇದರಲ್ಲಿ ಏನೋ ರಹಸ್ಯವಡಗಿದೆ ಎಂದು ಮಾತ್ರ ಊಹಿಸಿದ್ದೇನೆ. ಅದರ ಹಿಂದೆ ಏನು ಅಡಗಿರಬಹುದು, ಮುಂದೆ ಏನಾಗಬಹುದು ಎಂದು ಆಲೋಚನೆ ಮಾಡಬೇಂದೇ ನಿಮಗೆ ಹೇಳಿಕಳಿಸಿದೆ. ಆದರೆ ನಿಮ್ಮ ಮಾತು ಕೇಳಿದರೆ, ನನಗೆ ತಿಳಿದಿರುವುದಕ್ಕಿಂತ ನಿಮಗೇನೋ ಹೆಚ್ಚಿನ ಸುದ್ದಿ ತಿಳಿದಿರುವಂತಿದೆ. ಅದೇನು ಹೇಳಿ."

"ನಾನೇಕೆ ಹೇಳಬೇಕು. ಆ ಸುದ್ದಿಯನ್ನು ನನಗೆ ಯಾರು ತಿಳಿ

ಸಿದರೋ ಅವರನ್ನೇ ಕೇಳಿ. ಅವರ ಬಾಯಿಂದಲೇ ಅದನ್ನು ನೀವು ಕೇಳ ಬೇಕೆಂದು ಅವರನ್ನೇ ಕರೆತಂದಿದ್ದೇನೆ."

"ಯಾರನ್ನು ?"

"ರಾಯಣ್ಣನನ್ನು, ನೀನೇ ಹೇಳು ರಾಯಣ್ಣ."

—ಎಂದು ಮುದ್ದಣ್ಣ ಅದುವರೆಗೂ ಒಂದೂ ಮಾತನಾಡದೆ ಸುಮ್ಮನೆ ಕುಳಿತಿದ್ದ ರಾಯಣ್ಣನ ಮುಖ ನೋಡಿದ.

ರಾಯಣ್ಣ ಮುದ್ದಣ್ಣನ ಖಾಸಾ ಸೋದರ. ಆದರೆ ಆಳು ನೋಡು ವುದಕ್ಕೆ ಮುದ್ದಣ್ಣನಷ್ಟು ಬಲಕಟ್ಟೆಲ್ಲವಾದರೂ, ಚೂಪಾದ ಮೂಗಿನ ಕೋಲು ಮುಖದಲ್ಲಿ, ಎಲ್ಲೋ ಆಳದಲ್ಲಿ ಹೊಳೆಯುವ ಕಣ್ಣುಗಳನ್ನು ನೋಡಿದಾಗ, ನೋಡಿದವರಿಗೆ ಮೈಮೇಲೆ ಜರಿ ಹರಿದಂತಾಗುತ್ತದೆ. ಕೊನೆಯಲ್ಲಿ ಕೊಂಚ ಬಾಗಿದ ತೆಳುವಾದ ಮೂಗು ಇದಿರು ನಿಂತವರ ಎದೆ ಯನ್ನು ಬಗೆದು ಇಣುಕಿ ನೋಡುವಂತಿದ್ದರೆ, ಕಣ್ಣ ನೋಟದ ತೀಕ್ಷ್ಣತೆ ಉಕ್ಕಿನ ತಗಡನ್ನಾದರೂ ಕತ್ತರಿಸುವಷ್ಟು ಹರಿತವಾದುದು. ಆತನನ್ನು ಒಮ್ಮೆ ಕಂಡವರು ಆ ಕಣ್ಣುಗಳನ್ನು ಎಂದೂ ಮರೆಯುವುದು ಅಸಾಧ್ಯ.

ಮುದ್ದಣ್ಣ ಹೇಳಿದುದನ್ನು ಕೇಳಿ, ದೇಸಣ್ಣ, ಸುಮ್ಮನೆ ಚಾವಣಿ ನೋಡುತ್ತಾ ಕುಳಿತಿದ್ದ ರಾಯಣ್ಣನನ್ನು ನೋಡಿ

"ಏನು ಸಮಾಚಾರ ರಾಯಣ್ಣ ?" ಎಂದ.

"ಮತ್ತೇನು ಅಣ್ಣನವರು ಹೇಳಿದುದೇ."

—ಎಂದು ಉತ್ತರ ಕೊಟ್ಟ ರಾಯಣ್ಣ.

"ಅಂದರೆ........?"

"ಎಲ್ಲಾ ಭುವನಪ್ಪನವರ ಕೈವಾಡ."

"ಅದೇನೆಂದು ಕೊಂಚ ವಿವರಿಸಿ ಹೇಳು ರಾಯಣ್ಣ."

"ಹೇಳುವುದೇನಿದೆ ದೇಸಣ್ಣನವರೇ. ಹಿರಿಯ ನಾಗತಿಯು ಸಹ ಗಮನ ಮಾಡುವುದನ್ನು ಇದ್ದಕ್ಕಿದ್ದ ಹಾಗೆ ನಿಲ್ಲಿಸಿದುದರಲ್ಲಿ ಭುವನಪ್ಪನವರ ಕೈವಾಡವಿದೆ."

"ಅದು ಹೇಗೆ ಗೊತ್ತು ನಿಮಗೆ?"

"ಅಂತಃಪುರದ ಹೊರ ತೊಟ್ಟಿಯ ಬಾಗಿಲ ಆಳು ಹೇಳಿದ."

" ಅವನಿಗೂ ನಿನಗೂ ಏನು ಸಂಬಂಧ? "

—ರಾಯಣ್ಣನ ಮಾತನ್ನು ಕೇಳಿ, ಆಶ್ಚರ್ಯದಿಂದ ದೇಸಣ್ಣ ಕೇಳಿದ.

"ಏನೆಂಬುದನ್ನು ನಾನು ಹೇಳುತ್ತೇನೆ" ಅವರಿಬ್ಬರ ನಡುವೆ ಬಾಯಿ ಹಾಕಿ ಹೇಳಿದ ಮುದ್ದಣ್ಣ. " ನಿಮಗೇನೋ ಭುವನಪ್ಪನವರೆಂದರೆ ಪರಮ ವಿಶ್ವಾಸವಿದ್ದರೂ, ನನಗೇನೋ ಮೊದಲಿನಿಂದಲೂ ಅವರಲ್ಲಿ ನಂಬಿಕೆ ಸಾಲದು. ಅರಮನೆಯಲ್ಲಿ ನಡೆಯುವ ಕೆಲಸದಲ್ಲಿ ಬಹುಭಾಗ ಅವರ ಕೈವಾಡವೆಂದೇ ತೋರಿತ್ತು. ಅದಕ್ಕಾಗೇ ಅರಮನೆಯಲ್ಲಿ ಅವರ ಚಲನ ವಲನಗಳ ಮೇಲೆ ಕಣ್ಣಿಟ್ಟುಕೊಂಡಿದ್ದು, ಏನಾದರೂ ವಿಶೇಷವಾದುದು ಸಂಭವಿಸಿದರೆ ನನಗೆ ವರದಿ ಮಾಡಬೇಕೆಂದು, ಅರಮನೆಯ ಆಳುಗಳಲ್ಲಿ ಕೆಲವರನ್ನು ನನ್ನ ಕೈಲಿಟ್ಟುಕೊಂಡಿದೇನೆ."

" ಏನೂ, ಅರಮನೆಯವರ ಮೇಲೆ ಬೇಹುಗಾರವೇ ? "

—ಮುದ್ದಣ್ಣನಾಡಿದ ಮಾತನ್ನು ನಂಬಲಾರದವನಂತೆ ಕೇಳಿದ ದೇಸಣ್ಣ.

" ನಿಜ, ಅಲ್ಲೂ ನಮ್ಮ ಬೇಹುಗಾರವಿಲ್ಲದೆ ನಡೆಯುವುದಿಲ್ಲ ದೇಸಣ್ಣನವರೇ. ಅರಮನೆಯಲ್ಲಿ ಏನೂ ಆಗುವುದಿಲ್ಲವೆಂದು ನಾವು ನಂಬಿ ಕುಳಿತದ್ದಕ್ಕೆ ತಾನೇ, ಕಸ್ತೂರಿ ರಂಗಪ್ಪನಾಯಕರ ಕಾಲದಲ್ಲಿ ಅವರ ಖಾಸಾ ಅಳಿಯ ಸೀರ್ಯದ ಕೃಷ್ಣಪ್ಪನಾಯಕ ದುರ್ಗವ ಬುಡಕ್ಕೇ ನೀರು ತಿದ್ದಲು ಯತ್ನಿಸಿದ್ದು. ಆಗ ಅರಮನೆಯ ಒಳಗಿನವರ ಪಿತೂರಿಯಿಂದಲೇ ದುರ್ಗ ಮುಳುಗುವ ಪರಿಸ್ಥಿತಿ ಬಂದಿತ್ತು. ಏನೋ ದುರ್ಗದ ಪುಣ್ಯ ಚೆನ್ನಾಗಿತ್ತು. ಸರ್ಜೇರಾಯರಂಥ ಗಂಡುಗಲಿಗಳಿದ್ದರು, ಎಂತಲೇ ಗುಡ್ಡದಂತೆ ಬಂದದ್ದು ಗಾಳಿಯಂತೆ ಹಾರಿಹೋಯಿತು. ಅಂದಿನಿಂದಲೂ ನಾನು ಹೊರಗಿನವರ ಮೇಲೆ ಕಣ್ಣಿಟ್ಟಿರುವುದು ಎಷ್ಟು ಅವಶ್ಯಕವೋ ಅಷ್ಟೇ ಮಟ್ಟಿಗೆ ಅರಮನೆಯ ಒಳಗೆ ಏನು ನಡೆಯುತ್ತದೆ ಎನ್ನುವುದನ್ನು ತಿಳಿದುಕೊಂಡಿರಬೇಕಾದುದು ಅಗತ್ಯವೆಂದು ತಿಳಿದುಕೊಂಡು, ಅಂದಿನಿಂದಲೂ ಅಲ್ಲಿ ಕೆಲವರನ್ನು ನನ್ನ ಕೈಯೊಳಗ ಇಟ್ಟುಕೊಂಡಿದೇನೆ. ಆ ಎಚ್ಚರಿಕೆ ಈ ದಿನ ಉಪಯೋಗಕ್ಕೆ ಬಂದಿತು."

" ಹೇಗೆ ? "

" ನಿನ್ನೆಯ ರಾತ್ರಿ ನಾಯಕರ ಶವದಿದುರೇ ಕಿರಿಯ ನಾಗತಿ ಗೌಜು ಮಾಡಿದುದು, ಕಡೆಗೆ ಅವರು ಎಲ್ಲ ಭಾರವನ್ನೂ ಭುವನಪ್ಪನವರ ಮೇಲೆ ಹಾಕಿದಂತೆ ಮಾಡಿದುದನ್ನು ನೋಡಿ, ಇದರಲ್ಲಿ ಏನೋ ಅಂತರಾರ್ಥವಿದೆ ಎಂದು ಊಹಿಸಿ, ಏನಾದರೂ ಹೆಚ್ಚಿನದು ನಡೆದರೆ, ಅದನ್ನು ತಿಳಿದು ಕೊಂಡು ಕೂಡಲೇ ನಮಗೆ ಸುದ್ದಿ ಕೊಡಲು ನಮ್ಮವರು ಒಬ್ಬರು ಅಲ್ಲಿ ಇರಲಿ ಎಂದು, ಆ ದಿನ ಅರಮನೆಯ ಕಾವಲಿನ ಮೇಲ್ವಿಚಾರಣೆಯ ಕೆಲಸಕ್ಕೆ ರಾಯಣ್ಣನನ್ನು ನೇಮಿಸಿದ್ದೆ. ನಾನು ಊಹಿಸಿದುದು ತಪ್ಪಾಗ ಲಿಲ್ಲ."

" ನಿಮ್ಮ ನಿರೀಕ್ಷೆಗೆ ಏನು ಫಲ ದೊರೆಯಿತು ? "

—ದೇಸಣ್ಣ ಕೇಳಿದ.

" ಸರಿಯಾದ ಫಲವೇ ದೊರೆಯಿತು. ಅದೇನೆಂಬುದನ್ನು ನೀನೇ ಹೇಳು ರಾಯಣ್ಣ"

—ಮುದ್ದಣ್ಣ ರಾಯಣ್ಣನತ್ತ ನೋಡಿ ಹೇಳಿದ.

" ಆ ದಿನ ರಾತ್ರಿ ಅಷ್ಟು ನಡೆಯಿತಲ್ಲ, ಮರುದಿದ ಬೆಳಗ್ಗೆಯೇ ಗೌರವ್ವನಾಗತಿಯು ತಮ್ಮ ಸಜ್ಜೆಯ ದಾಸಿಯನ್ನು ಕಳಿಸಿ ಭುವನಪ್ಪನವ ರನ್ನು ಕರೆಸಿಕೊಂಡರು. ಬಹಳ ಹೊತ್ತು ಅವರಿಬ್ಬರಿಗೂ ಏನೋ ಮಾತು ಕತೆ ನಡೆಯಿತು."

" ಏನು ನಡೆಯಿತೆಂಬುದೇನಾದರೂ ತಿಳಿಯಿತೆ ? "

—ಉಕ್ಕಿಬಂದ ಕುತೂಹಲವನ್ನು ಹತ್ತಿಕ್ಕಲಾರದೆಯೇ ದೇಸಣ್ಣ ಕೇಳಿದ."

" ಊಹೂ, ತಿಳಿಯುವುದಕ್ಕೆ ಅಸಾಧ್ಯವಾದಷ್ಟು ರಹಸ್ಯವಾಗಿತ್ತು ಮಾತುಕತೆ. ಅಲ್ಲಿ ಮಾತುಕತೆಗಳನ್ನು ಮುಗಿಸಿಕೊಂಡವರೇ, ಭುವನಪ್ಪ ನವರು ಅಲ್ಲಿಂದ ನೇರವಾಗಿ ಹಿರಿಯ ನಾಗತಿಯರ ಅಂತಃಪುರಕ್ಕೆ ಹೋದರು. ಅವರು ಅಲ್ಲಿಗೆ ಹೋದಾಗ ಹಿರಿಯ ನಾಗತಿಯರು ಸಹ ಗಮನಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು, ಪುರೋಹಿತರನ್ನು ಬಿಟ್ಟು ಬೇರೆ ಯಾರನ್ನೂ ಒಳಗೆ ಬಿಡಬಾರದೆಂದು ಕಟ್ಟಪ್ಪಣೆಮಾಡಿ ಪೂಜಾಗೃಹದಲ್ಲಿದ್ದರು. ಭುವನಪ್ಪನವರು ಅಲ್ಲಿಗೆ ಹೋಗಿ ನಾಗತಿಯವ ರನ್ನು ನೋಡಿದರಂತೆ. ಅಲ್ಲಿಯೂ ಬಹಳ ಹೊತ್ತು ಮಾತುಕತೆಯಾಯಿ

ತಂತೆ. ಆ ಮಾತುಕತೆಗಳಾದ ಮೇಲೆ ಹಿರಿಯ ನಾಗತಿಯರು ಸಹಗಮನ ಮಾಡುವುದಿಲ್ಲವೆಂದು ನಿಶ್ಚಯಿಸಿದ್ದು."

ರಾಯಣ್ಣ ಹೇಳಿದ ಮಾತನ್ನು ಕೇಳಿ ಗಳಿಗೆಗಳಿಗೆಗೂ ದೇಸಣ್ಣನಿಗೆ ಆಶ್ಚರ್ಯ ಹೆಚ್ಚಾಗುತಿತ್ತು. ರಾಯಣ್ಣ ಹೇಳಿದುದೆಲ್ಲವನ್ನೂ ಕೇಳಿ, ಕೇಳಿದ ಮಾತನ್ನು ಮೆಲುಕು ಹಾಕುವಂತೆ ಸ್ವಲ್ಪಹೊತ್ತು ಸುಮ್ಮನಿದ್ದು ಬಳಿಕ ಹೇಳಿದರು—

"ಭುವನಪ್ಪನವರು ಇಷ್ಟು ಆಳದ ಮನುಷ್ಯರೆಂದು ನಾನು ತಿಳಿದಿರ ಲಿಲ್ಲ ಮುದ್ದಣ್ಣ."

"ನಾನಾಗಲೇ ಹೇಳಲಿಲ್ಲವೇ-ಬೆಳ್ಳಗಿದ್ದುದೆಲ್ಲಾ ಹಾಲು, ಕಾವಿ ಯುಟ್ಟವರೆಲ್ಲಾ ಸನ್ಯಾಸಿಗಳು ಎಂದು ನಂಬುವ ಸ್ವಭಾವ ನಿಮ್ಮದು ದೇಸಣ್ಣ" ಅಸಹನೆಯಿಂದ ಕೈಬೆರಳ ಗಂಟನ್ನು ಚಿಟಕಿಮುರಿಯುತ್ತಾ ಮುದ್ದಣ್ಣ ಹೇಳಿದ-"ಈಗಲಾದರೂ ಅವರ ವಿಷಯದಲ್ಲಿ ನಾಲ್ಕು ಕಣ್ಣಾ ಗಿರುವುದು ಮೇಲು."

"ನಿಮ್ಮ ಮಾತನ್ನು ಕೇಳಿದರೆ ನನಗೂ ಹಾಗೇ ಅನ್ನಿಸುತ್ತದೆ. ಅದಿರಲಿ, ಮುದ್ದಣ್ಣ ಈ ಮಾತುಕಥೆಗಳ ರಹಸ್ಯ ಏನಿರಬಹುದು? ಇದ್ದ ಕಿದ್ದ ಹಾಗೇ ಓಬವ್ವ ನಾಗತಿಯರು ಸಹಗಮನ ಮಾಡದೆ ನಿಂತದ್ದೇಕೆ? ಗೌರವ್ವನಾಗತಿಯರು ಸಹಗಮನ ಮಾಡದೆ ಉಳಿದುಕೊಂಡಿದ್ದರೆ—ಅದು ತಮ್ಮನನ್ನು ಪಟ್ಟಕ್ಕೆ ತರುವ ಅಂದಾಜು ಎಂದು ತಟಕ್ಕನೆ ಊಹಿಸಬಹು ದಾಗಿತ್ತು. ಆ ರಾತ್ರಿ ಅವರು ಮಾತಾಡಿದ ರೀತಿಯನ್ನು ನೋಡಿದರೆ ಅವರು ಸಹಗಮನಮಾಡಲಿಕ್ಕಿಲ್ಲ, ಹೇಗಾದರೂ ತಮ್ಮ ತಮ್ಮನನ್ನು ಪಟ್ಟಕ್ಕೆ ತರುವ ಪಟ್ಟು ಹಿಡಿದು ಬದುಕಬಹುದು ಎಂದುಕೊಂಡಿದ್ದೆ. ಆದರೆ ಅವರು ಸಹಗಮನಮಾಡಿ, ಇವರು—ಸಹಗಮನಮಾಡುವುದೇ ನಿಶ್ಚಯ ಎಂದುಕೊಂಡಿದ್ದ ಹಿರಿಯ ನಾಗತಿ ಉಳಿದುಕೊಂಡರು. ಇದರಲ್ಲಿ ಭುವ ನಪ್ಪನವರದೂ ಕೈವಾಡವಿದೆ ಎಂದ ಹಾಗಾಯಿತು. ಇವರ ಹಂಚಿಕೆ ಏನು? ಈ ಇಬ್ಬರೂ ಸೇರಿ, ಮೂರನೆಯವರು ಯಾರನ್ನಾದರೂ ಪಟ್ಟಕ್ಕೆ ತರುವ ಯೋಚನೆ ಮಾಡುತ್ತಿರಬಹುದೇ?"

"ಅದೇನೋ ನನಗೆ ತಿಳಿಯದು. ಆದರೆ ಏನೆಂದು ಖಂಡಿತ ತಿಳಿದು ಕೊಳ್ಳಬೇಕು; ತಿಳಿದುಕೊಳ್ಳಲೇ ಬೇಕು."

" ಹಿರಿಯ ನಾಗತಿಯರು ಯಾವ ಕಡೆ ಇರಬಹುದು ಮುದ್ದಣ್ಣ ? "

" ಹಾಗೆ ನೋಡಿದರೆ-ಸರ್ಜೇರಾಯರ ಮಕ್ಕಳ ಕಡೆಯೇ ಇರುವಂತಿದೆ. ಆ ರಾತ್ರಿ ನಾಯಕರ ಶವದ ಇದಿರೇ ಗೌರವ್ವನಾಗತಿಯರು ಮಾಡಿದ ಹಗರಣ ಸಹನವಾಗದೆ ಉಳಿದ ನಾಗತಿಯರೊಂದಿಗೆ ಎದ್ದು ಹೋಗಿದ್ದರು. ಕಡೆಗಾಲಕ್ಕೆ ನಾಯಕರು ಗೌರವ್ವನಾಗತಿಯರ ಅಂತಃಪುರದಲ್ಲೇ ಕಾಲಹಾಕುತ್ತಿದ್ದುದು ಹಿರಿಯ ನಾಗತಿಯರ ಅಸಮಾಧಾನಕ್ಕೆ ಕಾರಣವಾಗಿತ್ತೆಂದೂ ನಾನು ಕೇಳಿದೇನೆ. "

—ಮುದ್ದಣ್ಣ ಹೇಳಿದ.

" ನಿಜ. ನಾನೂ ಹಾಗೇ ಕೇಳಿದೇನೆ. ಹಿರಿಯ ನಾಗತಿಯರು ಅಡ್ಡವಾದರೆಂದೇ ನಾಯಕರು ಗೌರವ್ವನಾಗತಿಯ ತಮ್ಮನನ್ನು ದತ್ತು ತೆಗೆದುಕೊಳ್ಳುವುದೂ ನಿಂತಿತಂತೆ. ಅವರು ' ಹೂ ' ಎಂದಿದ್ದರೆ, ಎಂದೋ ದತ್ತು ಸ್ವೀಕಾರದ ಶಾಸ್ತ್ರ ಮುಗಿಯುತ್ತಿತ್ತು. ಇದೆಲ್ಲಾ ನೋಡಿದರೆ ಓಬವ್ವನಾಗತಿಯರು ಸರ್ಜೇರಾಯರ ಮಕ್ಕಳ ಪರವಾಗಿಯೇ ಇರಬೇಕು, ನಿನ್ನ ಊಹೆ ಸರಿಯಾಗಿರಬೇಕು ಎನಿಸುತ್ತದೆ. ಹಾಗಿದ್ದರೆ ನಮಗೇನೋ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆಯೇ ಆಯಿತು. ಭುವನಪ್ಪನವರೂ ನಮಗೆ ವೈರಿಗಳಲ್ಲ ಎಂದೇ ಆಯಿತು. "

" ಅಲ್ಲೇ ನಾನು ನಿಮ್ಮ ಮಾತನ್ನು ಒಪ್ಪದೆ ಇರುವುದು. ಹಿರಿಯ ನಾಗತಿಯರು ಸುಮ್ಮನೆ ಸಹಗಮನವನ್ನು ನಿಲ್ಲಿಸಿದ್ದರೆ ಅದನ್ನು ನಾನು ಅಷ್ಟಾಗಿ ಯೋಚಿಸುತ್ತಿರಲಿಲ್ಲ. ವಾರಸುದಾರರಿಲ್ಲದ ರಾಜ್ಯಕ್ಕೆ ವಾರಸುದಾರರನ್ನು ಗೊತ್ತುಮಾಡಲು ಅವರು ಉಳಿದರು ಎಂದುಕೊಂಡು ನಿಶ್ಚಿಂತೆಯಾಗಿರುತ್ತಿದ್ದೆ. ಆದರೆ ಇವರ ಮಧ್ಯೆ ಭುವನಪ್ಪನವರ ನೆರಳು ಬಿದ್ದಿರುವುದೇ ನನಗೆ ಅನುಮಾನಕ್ಕೆ ಕಾರಣ. ಆ ರಾತ್ರಿ ಅವರು ಮಾತನಾಡಿದುದನ್ನು ಕೇಳಿದಿರಲ್ಲ......"

" ಯಾವ ಮಾತು ? "

" ಕಿರಿಯ ನಾಗತಿ ನೀವು ಹೇಳಿ ಎಂದಾಗ ಆಡಿದುದು. ಭುವನಪ್ಪನವರು ನ್ಯಾಯಕ್ಕೆ ಕಟ್ಟು ಬಿದ್ದ ನೇರವಾದ ಮಾರ್ಗದವರಾಗಿದ್ದರೆ, ನಾವು ಹೇಳಿದ ಮಾತಿಗೆ ಒಪ್ಪಿ, ಲಿಂಗಣ್ಣನಾಯಕರೇ ನ್ಯಾಯವಾದ ವಾರಸು

ದಾರರು ಎನ್ನುತ್ತಿದ್ದರು. ಇಲ್ಲದಿದ್ದರೆ ಗೌರವ್ವನಾಗತಿಯು ಹೇಳಿದುದಾದರೂ ಸರಿ ಎನ್ನುತ್ತಿದ್ದರು. ಅವರು ಹಾಗೆ ಮಾಡದೆ, ಉಭಶುಭ ಎನ್ನದೆ, ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಿ 'ನೀವು ಹೇಳಿದುದೂ ಸರಿ, ಅವರು ಹೇಳಿದುದೂ ಸರಿ, ಆಗಲಿ ನೋಡೋಣ' ಎಂದು ಇಬ್ಬರಿಗೂ ಹಿರಿಯವರಂತೆ ಮಾತನಾಡಿದುದರಲ್ಲಿ ಏನೋ ಮರ್ಮವಿದೆ. ಅದರ ಮೇಲೆ ಈ ಅವಸರದ ಭೇಟಿ, ರಹಸ್ಯದ ಮಾತುಕತೆ........ನೀವು ಏನೇ ಹೇಳಿ ದೇಸಣ್ಣನವರೇ—ನನಗಂತೂ ಇದರಲ್ಲಿ ಏನೋ ಅಡ್ಡವಾಸನೆ ಬರುತ್ತಿದೆ; ಅದೇನೆಂಬುದನ್ನು ಪತ್ತೆ ಹಚ್ಚಲೇ ಬೇಕು."

"ಹೇಗೆ ಪತ್ತೆ ಹಚ್ಚುವುದು?"

"ನೀವು ನನಗೇ ಬಿಟ್ಟರೆ ಒಂದು ಗಳಿಗೆಯೊಳಗಾಗಿ ಪತ್ತೆ ಹಚ್ಚಬಲ್ಲೆ."

"ಹೇಗೆ?"

"ಹೇಗೆಂದರೆ-ಮಂತ್ರಕ್ಕೆ ಮಾವಿನ ಕಾಯಿ ಉದುರುವುದಿಲ್ಲ ದೇಸಣ್ಣನವರೇ! ಕಲ್ಲು ಮಾತಾಡಬೇಕೆಂದರೆ ಕೊಡತಿಯ ಪೆಟ್ಟು ಬೀಳಬೇಕು."

—ಕಠೋರತೆ ತುಂಬಿ ತುಳುಕುವ ಧ್ವನಿಯಲ್ಲಿ ಹೇಳಿದ ಮುದ್ದಣ್ಣ.

"ಛೆ! ಛೆ! ನಿನ್ನ ವಿಷಯದಲ್ಲಿ ನನಗೆ ಅದೇ ಗಾಬರಿ ಮುದ್ದಣ್ಣ. ಮಾತೆತ್ತಿದರೆ ತಲೆ ಕತ್ತರಿಸು ಎಂದು ಕತ್ತಿಗೇ ಕೈ ಹಾಕುತ್ತೀಯ. ನನಗದು ಸರಿಬೀಳುವುದಿಲ್ಲ."

"ನಿಮ್ಮ ದಾರಿಯಲ್ಲೇ ಬಿದ್ದ ಮುಳ್ಳಿನ ಮೇಲೂ ಇಷ್ಟು ಕನಿಕರವೇ ದೇಸಣ್ಣ. ಸೇನೆಯಲ್ಲೇ ದುಡಿದು ಮುಪ್ಪಾಗಿಯೂ ಇನ್ನೂ ನಿಮ್ಮ ಹೃದಯ ಬಹಳ ಮೃದು."

"ಸೇನೆಯಲ್ಲಿರುವುದು, ಯುದ್ಧದಲ್ಲಿ ಕೊಲ್ಲುವುದು—ಅದು ಉಪ್ಪಿನ ಋಣ ತೀರಿಸುವ ಮಾತು. ಇಲ್ಲಿ ಅಂಥ ಶತ್ರುಗಳು ಯಾರೂ ನಮಗಿಲ್ಲ. ನನಗಿರುವ ದುಃಖವೆಲ್ಲಾ ಇಷ್ಟೆ. ನ್ಯಾಯ ಸಲ್ಲಬೇಕಾದ ಕಡೆ ಅನ್ಯಾಯವಾಗಬಾರದು; ದುರ್ಗಕ್ಕೆ ತಲೆ ಕೊಡಲು ಸಿದ್ಧರಾದ ನಮ್ಮನ್ನು, ರಾಜ್ಯದ ವಿಷಯ ಬಂದಾಗ ಒಂದು ಮಾತು ಕೇಳಬೇಕು."

"ಅಂದರೆ—ನಮ್ಮ ರಕ್ತಕ್ಕಷ್ಟೇ ಅಲ್ಲ, ಮಾತಿಗೂ ಬೆಲೆ ಇರಬೇಕು.

ಬೆಲೆ ಕೊಡಬೇಕು. ಅರಮನೆಯವರೇ, ಮಂತ್ರಿಗಳೇ ಸರ್ವಾಧಿಕಾರಿಗಳಾಗಿ ವರ್ತಿಸಬಾರದು ಎಂದು, ಅಲ್ಲವೇ ? ”

“ ಊಹೂ—ಹಾಗಲ್ಲ.”

“ ಅಂದರೆ........? ”

“ ನಮ್ಮ ಮಾತಿನಂತೆಯೇ ಅರಮನೆ, ಮಂತ್ರಿಮಂಡಲ ಕೇಳ ಬೇಕೆಂದು ನನ್ನ ಇಚ್ಛೆಯಿಲ್ಲ. ಹಾಗೆ ಕೇಳುವುದಕ್ಕೆ ನಾನು ಯಾರು. ಎಷ್ಟಾದರೂ ನಾವು ಸಂಬಳದವರು. ನಾವು ಸತ್ತಾಗೆ ನಮ್ಮ ಮಕ್ಕಳಿಗೆ ಹಾಲು ಬೆಣ್ಣೆ ಕೊಡುವ ಧಣಿಗಳು ಅರಮನೆಯವರು. ಈ ರಾಜ್ಯ ನಾಯಕರಿಗೆ ಸಿದ್ಧರು ವರವಾಗಿ ಕೊಟ್ಟದ್ದು. ಇದನ್ನು ಯಾರಿಗೆ ಬೇಕಾ ದರೂ ಕೊಡಲಿ. ಧಣಿ ಎಂದು ಸಿಂಹಾಸನದ ಮೇಲೆ ಕುಳಿತವರ ಮಾತು ನಡಸಬೇಕಾದ ಕರ್ತವ್ಯ ನಮ್ಮದು. ನಿಷ್ಠೆಯಿಂದ ಅವರ ಸೇವೆ ಮಾಡುವ ಭಾರ ನಮ್ಮದು. ನಮ್ಮ ಕೊರಗು ಇಷ್ಟೆ—ನಾವು ಎಷ್ಟು ನಿಷ್ಠೆಯಿಂದ ಇವರ ಸೇವೆ ಮಾಡಿದರೂ ಇವರ ಅಂತರಂಗಕ್ಕೆ ನಮ್ಮನ್ನು ಸೇರಿಸುವುದಿಲ್ಲ ವಲ್ಲ ಎಂಬುದು.”

—ದೇಸಣ್ಣ ತನ್ನೆದೆಯೊಳಗೆ ಬಹುಕಾಲದಿಂದಲೂ ಹುದುಗಿಟ್ಟು ಕೊಂಡಿದ್ದ ಅಸಮಾಧಾನವನ್ನೆಲ್ಲಾ ತೋಡಿಕೊಳ್ಳುವವನಂತೆ ಹೇಳಿದ.

“ ಅಳದ ಮಕ್ಕಳಿಗೆ ಹಾಲು ಹಾಕುವ ಪುಣ್ಯಾತ್ಮಗಿತ್ತಿ ತಾಯಂದಿ ರನ್ನು ಇದುವರೆಗೂ ಈ ಲೋಕ ಕಂಡಿಲ್ಲ ದೇಸಣ್ಣನವರೇ.”

“ ನನಗೂ ಅದು ಗೊತ್ತು. ಅದಕ್ಕೇ ಆವತ್ತು ರಾತ್ರಿ ಸ್ವಲ್ಪ ಗಟ್ಟಿ ಯಾಗೇ ಮಾತನಾಡಿದೆ.”

“ ಗಟ್ಟಿಯಾಗಿ ಮಾತನಾಡಬೇಕು ನಿಜ. ಆದರೆ ಗಟ್ಟಿಯಾಗಿ ಮಾತನಾಡುವುದು ಎಂದರೆ ಏನೆಂಬುದರಲ್ಲೇ ನನಗೂ ನಿಮಗೂ ವ್ಯತ್ಯಾಸ ಇರುವುದು.”

“ ಅಂದರೆ ? ”

“ ಯಾರಿಗೆ ಯಾವ ರೀತಿಯ ಗಟ್ಟಿಯ ಮಾತು ಅರ್ಥವಾಗುತ್ತದೋ ಆ ರೀತಿಯಲ್ಲಿ ಮಾತನಾಡಬೇಕು.”

“ ಅಲ್ಲಿಗೂ ನಿನ್ನ ಮಾತು ನನಗೆ ಅರ್ಥವಾಗಲಿಲ್ಲ.”

"ಇಷ್ಟೆ—ಬಾಯಿಮಾತು ನಡೆಯುವ ಕಡೆ ಬಾಯಿಮಾತು, ಕತ್ತಿಯ ಮಾತು ನಡೆಯುವ ಕಡೆ ಕತ್ತಿಯ ಮಾತು."

" ಅದೂ ಸರಿಯಾದ ರೀತಿ "

—ಎಂದು ಅದುವರಗೆ ಸುಮ್ಮನಿದ್ದ ರಾಯಣ್ಣ ಮುದ್ದಣ್ಣನ ಮಾತಿಗೆ ತಾಳಹಾಕಿದ.

" ಅಂದರೆ ನಮ್ಮ ಮಾತು ಕೇಳದವರ ತಲೆ ಕತ್ತರಿಸಬೇಕೆಂದೇ....?"

" ಕತ್ತರಿಸಿದರೆ ತಪ್ಪೇ ? "

—ಮುದ್ದಣ್ಣ ಮರುಸವಾಲುಹಾಕಿದ.

"ತಪ್ಪೇ, ನಮ್ಮ ಮಾತು ಕೇಳದವರ ತಲೆಯನ್ನೆಲ್ಲಾ ಕತ್ತರಿಸುತ್ತೇವೆ ಎಂದರೆ ಅದಕ್ಕೆ ಕೊನೆ ಎಲ್ಲಿ? ಯುದ್ಧದಲ್ಲಂತೂ ಅದು ಅನಿವಾರ್ಯ. ಇಂಥ ಮಾತುಗಳಲ್ಲಿ ತಲೆ ಕತ್ತರಿಸುವ ಮಾತನಾಡುವುದು ರಕ್ತದ ಹುಚ್ಚು ಅದ ರಿಂದ ಒಳಿತಾಗುವುದಿಲ್ಲ."

—ಆ ಮಾತು ತನ್ನ ನಿರ್ಧಾರ ಎಂಬಷ್ಟು ಖಚಿತವಾದ ಧ್ವನಿಯಲ್ಲಿ ಹೇಳಿದ ದೇಸಣ್ಣ.

" ನಿಮ್ಮ ಮಾತು ಸರಿ ದೇಸಣ್ಣನವರೇ. ನಾನೂ ಅವನ್ನು ಇಲ್ಲ. ಎನ್ನುವುದಿಲ್ಲ. ಕತ್ತಿಯೇನು ಕಟುಕರ ಕೈಚೂರಿಯೇ, ಹಾಗಲ್ಲ ನಾನು ಹೇಳಿದುದು."

—ಯಾವುದೋ ಭಾವನೆಯನ್ನು ಹುದುಗುತ್ತಾ ಹೇಳಿದ ಮುದ್ದಣ್ಣ.

" ಮತ್ತೆ ಹೇಗೆ ? "

" ಈಗ ನ್ಯಾಯಕ್ಕಾಗಿ ತಾನೇ ನಾವು ಹೋರಾಡುತ್ತಿರುವುದು."

" ನಿಜ "

" ನಾವು ಇದೇ ನ್ಯಾಯ ಎಂದು ಹೇಳಿದರೆ ಅದು ನಡೆದರೆ ಸರಿ. ಇಲ್ಲವಾದರೆ ನ್ಯಾಯ ನಡೆಯುವಂತೆ ಮಾಡಬೇಕು."

" ಅಂದರೆ........? "

" ನಮ್ಮ ಮಾತನ್ನು ಇದಿರು ಪಕ್ಷದವರು ಕೇಳುವಷ್ಟು ಮಟ್ಟಿಗೆ ನಮ್ಮ ಪಕ್ಷವನ್ನು ಬಲಪಡಿಸಬೇಕು."

" ಅದಕ್ಕೆ ನಾನೂ ಒಪ್ಪುತ್ತೇನೆ."

“ಹಾಗಿದ್ದರೆ ಈ ವಿಷಯದಲ್ಲಿ ನಮ್ಮಿಬ್ಬರದೂ ಏಕಾಭಿಪ್ರಾಯ ಎಂದ ಹಾಗಾಯಿತು.”

“ಅಷ್ಟೇ ಆದರೆ ನಮ್ಮಿಬ್ಬರದೂ ಏಕಾಭಿಪ್ರಾಯವೇ.”

“ಸರಿ, ಹಾಗಾದರೆ ಈ ಬಾರಿ ಪಟ್ಟಕ್ಕೆ ವಾರಸುದಾರನನ್ನು ನೇಮಿಸುವಾಗ ಅನ್ಯಾಯವಾಗಬಾರದು ಎನ್ನುವುದಾದರೆ ಭುವನಪ್ಪನವರು ಏನೇ ಮಾಡಲಿ ಬಿಡಲಿ, ನಾವು ಮಾತ್ರ ನಮ್ಮ ಪಕ್ಷ ಬಿಗಿಮಾಡಿ ಕೊಳ್ಳಬೇಕು.”

“ಸರಿಯೆ.”

“ಅದಕ್ಕೆ ನಮ್ಮ ನಮ್ಮಲ್ಲಿ ಭಿನ್ನಾಭಿಪ್ರಾಯ ಬರದಂತೆ ಮೊದಲೇ ನಾವು ದಳವಾಯಿಗಳೆಲ್ಲಾ ಒಂದಾಗಿ ಸೇರಿ, ನಮ್ಮೆಲ್ಲರದೂ ಇದೇ ಅಭಿಪ್ರಾಯ ಎಂದ. ಸಾರಿ ಹೇಳುವಂತಾಗಬೇಕು. ಈ ಕೆಲಸವನ್ನು ನಾವು ಮಾಡಬೇಕು. ಶತಾಯಗತಾಯ ನಾನೇನೋ ನಿಮ್ಮ ಪಕ್ಷ. ಉಳಿದ ದಳವಾಯಿಗಳನ್ನು ನೀವು ಮಾತನಾಡಿಸಿ ಒಪ್ಪಿಸಬೇಕು.”

“ಸರ್ಜೇರಾಯರ ಮಕ್ಕಳು ಸಿಂಹಾಸನಕ್ಕೆ ಬರಬೇಕೆಂಬ ವಿಚಾರ ದಲ್ಲಿ ದಳವಾಯಿಗಳಾರಿಗೂ ಭಿನ್ನಾಭಿಪ್ರಾಯವಿಲ್ಲ. ನಾನು ಬಲ್ಲೆ. ಎಷ್ಟಾದರೂ ಸರ್ಜೇರಾಯರಷ್ಟು ನಮ್ಮಲ್ಲಿ ವಿಶ್ವಾಸ ತೋರಿದವರು ಯಾರು? ಅವರಿದ್ದಷ್ಟು ದಿನ ನಮ್ಮನ್ನು ಹೊಟ್ಟೆಯ ಮಕ್ಕಳಂತೆ ಕಾಪಾಡಿದರು. ಇನ್ನೆಲ್ಲಿ ಅಂಥ ಪ್ರಭು!”

—ಮಡಿದ ನೆಚ್ಚಿನ ಪ್ರಭುವನ್ನು ನೆನೆದು ನಿಟ್ಟುಸಿರಿಟ್ಟು ಹೇಳಿದ ದೇಸಣ್ಣ.

“ನಿಜ. ಇನ್ನು ಅಂಥ ಧಣಿ ನಮಗೆ ಹುಡುಕಿದರೂ ಸಿಗುವುದಿಲ್ಲ. ಅದಕ್ಕೆಂದೇ ಅಲ್ಲವೇ ಅವರ ಮಕ್ಕಳಿಗೆ ಸಿಗಬೇಕಾದ ಸಿಂಹಾಸನ ಅನ್ಯರ ಪಾಲಾಯಿತೆಂದು ನಾವು ಕೊರಗುತ್ತಿರುವುದು. ಆ ಅನ್ಯಾಯವನ್ನು ಸರಿಪಡಿಸುವ ಕಾಲ ಬಂದಿದೆ. ಅದನ್ನು ಕಳೆದುಕೊಳ್ಳದೆ ಸಾಧಿಸ ಬೇಕು.

“ಅದಕ್ಕೆ–ನಾವು ಆ ಕೆಲಸಮಾಡುವ ಮೊದಲು ಲಿಂಗಣ್ಣನಾಯಕ ರನ್ನು ಒಂದು ಮಾತು ಕೇಳಬೇಕು. ಅವರ ಒಪ್ಪಿಗೆ ಪಡೆದು ನಾವು ಕೆಲಸಮಾಡಬೇಕು.”

" ನ್ಯಾಯವಾದ ಮಾತು. ಆದರೆ ಅವರನ್ನು ಒಪ್ಪಿಸುವ ಭಾರವನ್ನು ನನಗೆ ಬಿಡಿ."

—ಎಂದ ಮುದ್ದಣ್ಣ.

" ಅವರು, ನಾವು ಅವರ ಪರ ವಾದಮಾಡಲು ಒಪ್ಪುತ್ತಾರೆಯೋ ? "

" ರಾಜ್ಯ ತಾನಾಗಿ ಬಂದರೆ ಯಾರಿಗೆ ಬೇಡ ದೇಸಣ್ಣನವರೇ—ನಿಮಗೆ ಬೇಡವೇ, ನನಗೆ ತಾನೇ ಬೇಡವೇ ? "

—ಆಡುವ ಒಂದೊಂದು ಮಾತನ್ನು ಅರ್ಥ ತುಂಬಿ ಒತ್ತಿ ಒತ್ತಿ ಹೇಳಿದ ಮುದ್ದಣ್ಣ.

" ರಾಜ್ಯ, ಹೆಣ್ಣು, ಬಂಗಾರ ಬೆಡಾ ಅನ್ನೋ ಬೈರಾಗೀನ ಈ ಭೂಮಿತಾಯಿ ಕಂಡಿಲ್ಲ. ಸಿಕ್ಕರೆ ನನಗೂ ಬೇಕು."

—ಎಂದು ದನಿಗೂಡಿಸಿದ ರಾಯಣ್ಣ ನಗುತ್ತಾ.

ಆ ನಗುವನ್ನು ಕೇಳಿ ದೇಸಣ್ಣನಿಗೂ ಏಕೋ ಒಂದು ರೀತಿಯ ಹೆದರಿಕೆಯಾಯಿತು. ಆಳು ಆಗತಾನೆ ತಂದಿಟ್ಟ ದೀಪದ ಬೆಳಕಿನಲ್ಲಿ, ಗೋಡೆಯ ಮೇಲೆ ತೂಗುಹಾಕಿದ ಶಸ್ತ್ರಗಳು, ಹಗಲ ಬೆಳಕಿನಲ್ಲಿ ಕಾಣು ವುದಕ್ಕಿಂತ ಹೆಚ್ಚು ಕಠೋರ ಕಾಂತಿಯಿಂದ ಹೊಳೆದಂತೆ ಭಾಸವಾಯಿತು.

ಆ ಅಣ್ಣ ತಮ್ಮಂದಿರ ಮಾತಿಗೆ ಏನೂ ಉತ್ತರ ಕೊಡದೆ, ಬಳಿ ಯಲ್ಲಿದ್ದ ಹರಿವಾಣವನ್ನು ಹತ್ತಿರಕ್ಕೆಳೆದುಕೊಂಡು, ಬಾಯಲ್ಲಿ ಅಡಕೆಯನ್ನು ಹಾಕಿಕೊಂಡು, ಮೌನವಾಗಿಯೇ ವೀಳೆಯದ ಎಲೆಗೆ ಸುಣ್ಣ ಸವರ ತೊಡಗಿದ.

೩

ಇಳಿ ಮಧ್ಯಾಹ್ನದ ಮಾಗಿದ ಬಿಸಿಲು, ಅಂತಃಪುರದ ಪಡುವಣ ದತ್ತಣ ವಾತಾಯನದಿಂದ ತೂರಿ ಬಂದು, ರತ್ನಗಂಬಳಿ ಹಾಸಿದ ನೆಲದ ಮೇಲೆ ಬಿಸಿಲು ನೆರಳಿನ ರಂಗವಲ್ಲಿಯನ್ನು ರಚಿಸಿತ್ತು. ಮಂಚದ ಕೆಳಗೆ ಹಾಸಿದ ವ್ಯಾಘ್ರಾಜಿನದ ಮೇಲೆ ಕುಳಿತ ಓಬವ್ವನಾಗತಿ, ಚಿಂತಾಭಾರ ವಾದ ಕಣ್ಣುಗಳಿಂದ ವಾತಾಯನದಾಚೆ ಕಾಣುವ, ಬಿಸಿಲ ಹಚ್ಚಡವನ್ನು ಹೊದ್ದ ಶೃಂಗಾರವನದ ಮರದ ತುದಿಗಳನ್ನು, ಹೊಳೆಯುವ ಕಲಶ ಮಾತ್ರ ಕಾಣುವ ಗೋಪಾಲಸ್ವಾಮಿಯ ದೇವಾಲಯದ ಗೋಪುರವನ್ನು ದಿಟ್ಟಿಸುತ್ತಾ ಕುಳಿತ್ತಿದ್ದಳು.

ಒಂದು ಚಿಂತೆ ಹತ್ತಾರು ರೂಪ ತಾಳಿ ಆಕೆಯ ಚಿತ್ತಕ್ಕೆ ಮುತ್ತಿಗೆ ಹಾಕಿತ್ತು. ಅನಿರೀಕ್ಷಿತವಾಗಿ ಗೌರಮ್ಮನಾಗತಿ, ಭುವನಪ್ಪನವರು ಆಕೆಯ ನೆತ್ತಿಯ ಮೇಲೆ ಬೆಟ್ಟದಂಥ ಕೆಲಸವನ್ನು ಹೇರಿದ್ದರು. ಆ ಹೊಣೆಗಾರಿಕೆಯನ್ನು ಹೇಗೆ ನಿರ್ವಹಿಸುವುದು? ನಿರ್ವಹಿಸುವುದು ತನ್ನಿಂದ ಸಾಧ್ಯವಾದೀತೆ" ಎಂಬ ಚಿಂತೆ ಉಳಿದೆಲ್ಲ ಚಿಂತೆಗಳನ್ನೂ ಮರೆಸಿ ಬೆಳೆದಿತ್ತು.

ಆ ಚಿಂತೆ ಬಂದಾಗ ಶಿವನ ಲೀಲೆ ಎಷ್ಟು ವಿಚಿತ್ರ ಎನಿಸಿ, ಮನಸಿನಲ್ಲಿ ಆಶ್ಚರ್ಯ ತರಂಗಗಳು ಮೂಡುವುವು. ಪತಿಯ ಪ್ರಾಣಪಕ್ಷಿ ದೇಹ ಪಂಜರದಿಂದ ಹಾರಿ ಹೋಯಿತೆಂದು ಅರಿವಾದ ಗಳಿಗೆಯಲ್ಲೇ ಆಕೆ ಈ ಲೋಕದ ಚಿಂತೆಯನ್ನು ಮರೆತಿದ್ದಳು. ನಾಯಕರು ಜೀವಂತರಾಗಿ ಇದ್ದಾಗಲೇ ಆಕೆ ಶಿವಪಾದ ಸೇರಲು ತವಕಿಸುತ್ತಿದ್ದಳು.

ಓಬವ್ವನಾಗತಿ ಮದಕರಿನಾಯಕರನ್ನು ಮೊದಲು ಕೈ ಹಿಡಿದ ಹೆಣ್ಣು. ಆಕೆಯ ಬಳಿಕ ಇಪ್ಪತ್ತೊಂಭತ್ತು ಜನರನ್ನು ಮದುವೆಯಾಗಿ, ಆ ವಿಲಾಸ ಸಾಗರದಲ್ಲಿ ಮುಳುಗಿ, ಆಕೆ ಸಂಸಾರದಲ್ಲಿ ಪತಿಸುಖ ನಿರೀಕ್ಷಿಸುವುದನ್ನು ಎಂದೋ ಮರೆತಿದ್ದಳು. ಒಬ್ಬರ ಮೇಲೊಬ್ಬರಾಗಿ ಸವತಿಯರು ಬಂದು ಅಂತಃಪುರವನ್ನು ತುಂಬಿದಾಗ, ಮೊದಮೊದಲು ಮಾತ್ಸರ್ಯದ ಉರಿ ಆಕೆಯ ಹೃದಯದಲ್ಲೂ ಹೊತ್ತಿ ಹೆಡೆಯಾಡಿಸಿತ್ತು. ತನ್ನ ಸುಖಕ್ಕಾಗಿ ಇವರು ಕಂಟಕವಾಗಿ ಬಂದರಲ್ಲಾ ಎಂದು, ಅವರ ಕೈಯಿಂದ ನಾಯಕರನ್ನು ತನ್ನ ಪಾಲಿಗೆ ಉಳಿಸಿಕೊಳ್ಳಲು ಕೆಲದಿನ ಶ್ರಮಿಸಿದ್ದಳು. ಆದರೆ ಬರಬರುತ್ತಾ ಅಂಥ ನೀರಿಕ್ಷೆ ವಿಫಲವೆಂದು ಅರಿವಾದ ಮೇಲೆ, ನಾಗತಿಯರಲ್ಲಿ ಕೆಲವರಂತೆ ಆಕೆಯೂ ಅಂತಃಪುರದ ರಾಜಕೀಯದಲ್ಲಿ ಮುಳುಗ ಬಹುದಾಗಿತ್ತು. ಆದರೆ ಒಂದು ದಿನ ಅಂಥ ನಾಗತಿಯರ ವಿಷಯದಲ್ಲಿ ದಾಸಿಯರು ಆಡಿದ ಅಣಕ, ತಾತ್ಸಾರದ ಮಾತುಗಳು ಆಕಸ್ಮಿಕವಾಗಿ ಕಿವಿಗೆ ಬಿದ್ದು, ಅಂಥ ಬಾಳಿನ ಬಗ್ಗೆ ಹೇಸಿಗೆಯಾಯಿತು.

"ಏನೋ— ಹಿಂದಿನ ಜನುಮದಲ್ಲಿ ನಾನು ತಾಯಿಗೆ ಮಾಡಿದ ಅರಿಶಿನ ಕುಂಕುಮದ ಪೂಜೆ ಸಾಲದಾಯಿತೇನೋ. ಅದಕ್ಕೇ ಈ ಜನ್ಮದಲ್ಲಿ ಪೂರ್ಣವಾಗಿ ಪತಿ ಸುಖ ದೊರೆಯಲಿಲ್ಲ. ಅದಕ್ಕಾಗಿ ಈ ಜನ್ಮದಲ್ಲಿ

ಸವತಿಯರೊಂದಿಗೆ ಕಚ್ಚಾಡಿದರೆ ಬರುವುದೇನು? ನಾಯಕರ ಮನಸ್ಸು ಪತಂಗದಂತೆ ದಿನಕ್ಕೊಬ್ಬ ಹೊಸ ನಾಗತಿಯ ಸುತ್ತ ಸುತ್ತುತ್ತಿರುವಾಗ, ಹೆಣ್ಣು ಹೆಣ್ಣು ಕಾದಾಡಿ ಆಗುವ ಲಾಭವೇನು? ವೃಥಾ ಮನಸ್ತಾಪ. ಅದನ್ನು ಕಟ್ಟಿಕೊಂಡರೂ ಆಗುವುದೇನು? ಮನುಷ್ಯ ಮನುಷ್ಯನಿಗೆ ಏನು ತಾನೇ ಕೊಡಬಲ್ಲ. ಕೊಡುವುದು ಬಿಡುವುದು ತಾಯಿಯ ಇಚ್ಛೆ. ಆಯಿತು —ಈ ಜನ್ಮದಲ್ಲಿ ಆಕೆಯ ಪ್ರೀತಿ ಪಡೆದು ಬರಲಿಲ್ಲ, ಮುಂದಿನ ಜನ್ಮಕ್ಕಾದರೂ ದಾರಿ ಸರಿಮಾಡಿಕೊಳ್ಳೋಣ"—ಎಂದುಕೊಂಡು, ಅಂದಿನಿಂದ ಪೂಜಾಗೃಹವಾಸಿನಿಯಾದಳು. ಏರು, ಇಳಿವುಗಳ ಆಘಾತವಿಲ್ಲದೆ ಪ್ರಶಾಂತ ಜೀವನವನ್ನು ಆರಂಭಿಸಿದಳು. ಅರಮನೆಯ ಭೋಗ ಭಾಗ್ಯ, ವಿಲಾಸ ವೈಭವಗಳ ನಡುವೆ ವಿರಾಗಿಣಿಯಂತೆ ಬದುಕತೊಡಗಿದಳು. ಆಕೆಯ ಬಾಳು ಪರದ ಚಿಂತೆ, ಪರರ ಹಿತಗಳಿಗೆ ಮೀಸಲಾಗಿ, ಉಳಿದ ನಾಗತಿಯರಿಗೆಲ್ಲಾ 'ಅಕ್ಕ' ಆದಳು. ಆಕೆಗೆ ಯಾವ ಸುಖದುಃಖಗಳ ಪರಿವೆಯೂ ಇಲ್ಲವಾದರೂ, ಉಳಿದವರೆಲ್ಲರೂ ತಮ್ಮ ಸುಖದುಃಖಗಳ ಭಾರವನ್ನು ಆಕೆಯ ಹೆಗಲಮೇಲೆ ಹೇರತೊಡಗಿದರು. ಆಕೆಯ ಅಂತಃಪುರದ ಬಾಗಿಲು ಎಲ್ಲರಿಗೂ ಮುಕ್ತದ್ವಾರವಾಯಿತು. ಎಲ್ಲರಿಗೂ ಆಕೆಯಲ್ಲಿ ವಿಶ್ವಾಸ ಹೆಚ್ಚಿದಷ್ಟೇ, ಗೌರವ ಆಕೆಯ ಇದಿರು ತಮ್ಮ ಸಣ್ಣತನವನ್ನು ತೋರಿಸಿಕೊಳ್ಳಲು ಭೀತಿ ಬೆಳೆದಿತ್ತು. ಈಕೆಯಲ್ಲಿ ಕೊಂಚ ಒಗರಿನಿಂದ ನಡೆಯುತ್ತಿದ್ದವಳು ನಾಯಕರ ಮೋಹದ ನಾಗತಿಯಾದ ಗೌರವ್ವ ನಾಗತಿಯೊಬ್ಬಳೇ.

ಗೌರವ್ವನಾಗತಿಗೂ ಓಬವ್ವನಾಗತಿಯೆಂದರೆ ವಿಶ್ವಾಸ, ಗೌರವಗಳಿದ್ದರೂ, ಉಳಿದವರಂತೆ ಆಕೆಯ ಸುತ್ತಲೂ ಸುತ್ತಿ ತನ್ನ ಮನೋಭಾವವನ್ನು ಪ್ರಕಟಿಸುತ್ತಿರಲಿಲ್ಲ. ವಿಶ್ವಾಸವೆಂದು ಹೆಚ್ಚು ಓಡಾಡುತ್ತಿರಲಿಲ್ಲ; ಗೌರವವೆಂದು ಹೆಜ್ಜೆ ಇಟ್ಟಕಡೆ ಹೂವುಹಾಕುತ್ತಿರಲಿಲ್ಲ.

ಗೌರವ್ವನಾಗತಿಯದು ಕೊಂಚ ವಿಚಿತ್ರ ಸ್ವಭಾವ. ಉಳಿದ ನಾಗತಿಯರ ಪಾಲಿಗೆ, ನಾಯಕರ ತೃಪ್ತಿ-ಅತೃಪ್ತಿಗಳೇ ಸಮಸ್ತ ಪ್ರಪಂಚವೂ ಆಗಿದ್ದರೆ, ಗೌರವನಾಗತಿ ಅದನ್ನು ಗೆದ್ದು ಅದರಾಚೆಗೂ ಪ್ರವೇಶಿಸಿದ್ದಳು. ಉಳಿದವರೆಲ್ಲರಿಗೂ ನಾಯಕರ ಒಲವನ್ನು ಹೇಗೆ

ಗೆಲ್ಲುವುದು, ಗೆದ್ದದನ್ನು ಹೇಗೆ ಸ್ಥಿರವಾಗಿ ಉಳಿಸಿಕೊಳ್ಳುವುದು ಎಂಬುದೇ ಕೊನೆಗಾಣದ ರಾಜಕೀಯವಾಗಿದ್ದರೆ, ಗೌರವ್ವನಾಗತಿಗೆ ಅದರೊಂದಿಗೆ ದೇಶದ ರಾಜಕೀಯವೂ ಬೇಕಾಗಿತ್ತು. ನಾಗತಿಯಾಗಿ ಬಂದಾಕೆ ಬರೀ ಅರಸರ ಅಂಗೈಯ ಅರಗಿಳಿಯಾಗಿ ಬದುಕಿ, ಅಂತಃಪುರದ ಶಯ್ಯೆಯಲ್ಲಿಯೇ ಸಕಲ ಜಗತ್ತನ್ನೂ ಕಾಣುವುದು ಸಲ್ಲದು; ನಾಯಕರಷ್ಟೇ ನಾಗತಿಗೂ ಪ್ರಜೆಗಳ ಹಿತಚಿಂತನೆಯಲ್ಲಿ ಪಾಲಿದೆ ಎಂದು ನಂಬಿ, ಆಕೆ ಆ ರೀತಿ ನಡೆಯುತ್ತಿದ್ದಳು. ತನಗೆ ಸಲಿಗೆಯಾದ ನಾಗತಿಯರಲ್ಲಿ ಒಮ್ಮೊಮ್ಮೆ ರಾಜಕೀಯ ಘಟನೆಗಳ ಪರಿಣಾಮವನ್ನು ಚಿಂತಿಸುವಳು. ಇದು ಉಳಿದವರ ದೃಷ್ಟಿಯಲ್ಲಿ ಬರೀ ಅನಗತ್ಯವಾದ ಉಪದ್ವ್ಯಾಪಿತನ; ತನ್ನ ಹಿರಿಮೆ ಮೆರೆಸಲು ಕಟ್ಟಿದ ಕಪಟನಾಟಕ.

"ದೊಡ್ಡ ನಾಗತಿಯವರೇ ಸುಮ್ಮನಿರುವಾಗ ಈಕೆಗೇಕೆ ಬೇಕು ಇದೆಲ್ಲಾ. ನಿನ್ನೆ-ಇವತ್ತು ಬಂದವಳು, ತಾನೋ ತನ್ನ ಹಾಡುಹಸೆಯೋ ಅಷ್ಟನ್ನು ನೋಡಿಕೊಂಡಿರುವುದನ್ನು ಬಿಟ್ಟು, ನಾಯಕರನ್ನು ಆಳಿದಂತೇ ರಾಜ್ಯವನ್ನೂ ಆಳುವುದಕ್ಕೆ ಹೋಗುತ್ತಾಳೆ—ಗಡಿಗೆ ತಾನಾಗಿಯೇ ದೊಣ್ಣೆಗೆ ಮುದ್ದುಕೊಡಲು ಹೋಗುವಂತೆ. ಇವಳ ರೂಪ ನಾಯಕರ ಕಣ್ಣು ಮುತ್ತಿರುವ ವರೆಗೂ ಏನಾಡಿದರೂ ನಡೆಯುತ್ತದೆ, ನಾಳೆ ಇವಳಿಗಿಂತ ಚೆಲುವೆಯೊಬ್ಬಳು ಬಂದರೆ, ಊಟದ ತಳಿಗೆ, ತಾಂಬೂಲದ ತಟ್ಟೆ ಎರಡೇ ಉಳಿಯುವುದೆಂದು ಕಾಣಳು. ನಮ್ಮಂತೇ ಬರಿಮಂಚವನ್ನಾಳಬೇಕಾಗಿ ಬಂದಾಗ ಈ ರಾಜ್ಯವಾಳುವ ಸೊಕ್ಕು ಎಲ್ಲಿ ಉಳಿಯುವುದೋ ನೋಡಬೇಕು."

—ಎಂದು ತಮ್ಮ ತಮ್ಮಲ್ಲೇ ಆಡಿಕೊಳ್ಳುವರು.

ಹಿರಿಯ ನಾಗತಿಯ ಮುಂದೆ ತಮ್ಮ ಅಸಮಾಧಾನವನ್ನು ಇಷ್ಟು ಬಿಚ್ಚುಮಾತುಗಳಿಂದ ತೋರಿಸಿಕೊಳ್ಳಲು ಅವಕಾಶವಿಲ್ಲದ್ದರಿಂದ, ಆಕೆಯ ಬಳಿ ಬೇರೆ ರೀತಿಯಲ್ಲಿ ಮಾತನಾಡಿ, ತಮ್ಮ ಅಸೂಯೆಗೆ ಆಕೆಯ ಸಹಾನುಭೂತಿಯನ್ನು ಗಳಿಸಲು ಯತ್ನಿಸುವರು.

"ನೆತ್ತಿ ಬಲವೆಂದು ಕೋಡುಗಲ್ಲಿಗೆ ತಲೆ ಘಟ್ಟಿಸಿ ಬದುಕಿದವರುಂಟೆ ಅಕ್ಕಾ? ನಾವಂತೂ ಅವಳಿಗೆ ಸರೀಕರು. ಆದರೆ ಎಲ್ಲರಿಗಿಂತ ಮೊದಲು

ಈ ಅರಮನೆಯ ಹೊಸಲಿಕ್ಕಿ ದಾಟಿದ ನಿಮ್ಮೆಲ್ಲಾದರೂ ತಾನು ಕಿರಿಯವಳು ಎಂಬ ಭಾವನೆ ಬೇಡವೇ? ಹಣತೆ ಎಷ್ಟು ಉರಿದರೂ ಸೂರ್ಯನಿಗೆ ಸಮವೇ? ಬೆಟ್ಟದ ತುದಿಯಲ್ಲಿ ಕುಳಿತವರು ನಾವು ಅಲ್ಲಿ ಕುಳಿತಿದೀವಿ ಎಂದು ಮೆರೆದರೆ ಬಂತೆ? ಅಲ್ಲಿಂದ ಉರುಳಿದರೆ ಎಷ್ಟು ಆಳಕ್ಕೆ ಬೀಳುತ್ತೇವೆ ಎನ್ನುವ ಎಚ್ಚರಿಕೆ ಬೇಡವೆ?"

—ಎಂದು ಪರ್ಯಾಯವಾಗಿ ತಮ್ಮ ಅಸೂಯೆ, ಅಸಹನೆಗಳನ್ನು ತೋರ್ಪಡಿಸಿಕೊಳ್ಳುವರು. ಆದರೆ ಅವರ ಮಾತನ್ನು ಕೇಳಿದ ಓಬವ್ವ ನಾಗತಿ, ಅವರ ಮಾತುಗಳಿಂದ ಉತ್ಸಾಹಿತಳೂ ಆಗದೆ, ಉದ್ರೇಕಳೂ ಆಗದೆ, ಮೃದುವಾಗಿ ನಕ್ಕು—

"ಮರದ ಕೆಳಗೆ ನಿಂತವನು ಮನೆಯ ಒಳಗೆ ನಿಂತವರನ್ನು ಕರುಬಿ ಬಂದ ಫಲವೇನು ತಂಗಿ? ಭೋಗಿ ಪಡೆದದ್ದು ಭೋಗಿಗೆ, ಜೋಗಿ ಪಡೆದದ್ದು ಜೋಗಿಗೆ. ಈ ಜನ್ಮಕ್ಕೆ ನಮಗೆ ಇಷ್ಟೇ ಎಂದು ಲೆಕ್ಕಾಚಾರ ಮಾಡಿ ಕಳಿಸಿದಾನೆ ಪರಶಿವ, 'ಆಯಿತು, ನಿನ್ನಿಚ್ಛೆ. ಈ ಜನ್ಮಕ್ಕೆ ನಿನಗೆ ಬೇಕಾದುದನ್ನು ಕೊಟ್ಟೆ. ಮುಂದಿನ ಜನ್ಮಕಾದರೂ ನನಗೆ ಬೇಕಾದುದನ್ನು ಕೊಡು' ಎಂದು ಆತನನ್ನೇ ಕೇಳಿದರೆ ಆಯಿತು. ಅದು ಬಿಟ್ಟು ಕೊರಗಿದರೆ ಏನಾದಹಾಗಾಯಿತು. ಈ ಕೊರಗು ಬಡ್ಡಿ ಬರೆದ ಸಾಲ ಕೊರಗಿಗೆ ಕೊರಗುವುದೇ ಲಾಭ, ಮರಳು ಹಿಂಡಿ ಎಣ್ಣೆ ತೆಗೆಯುವ ಚಪಲ ಏಕೆ ಬೇಕು ಬಿಡು."

—ಎನ್ನುವಳು. ಆಕೆಯ ಮಾತು ಕೇಳಿ, ದೂರು ಹೇಳಿದವರಿಗೆ ತಮ್ಮ ಸಣ್ಣ ಬುದ್ಧಿಗಾಗಿ ತಮಗೇ ನಾಚಿಕೆಯಾಗುವುದು; ಹಿರಿಯ ನಾಗತಿಯ ಬಗ್ಗೆ ಮತಷ್ಟು ಗೌರವ ಬೆಳೆಯುವುದು; ಹಾಗೇ ಹಿರಿಯ ನಾಗತಿಯ ನಡತೆಗಾಗಿ ಅಸಮಾಧಾನವೂ.

ಆದರೆ ಓಬವ್ವನಾಗತಿಗೇನೋ ಗೌರವನಾಗತಿಯೆಂದರೆ, ಉಳಿದವರ ಮೇಲಿದ್ದಷ್ಟೇ ಅಭಿಮಾನವಿತ್ತು. 'ತಾನು ಹಿಡಿದ ಕೈಯನ್ನೇ ಹಿಡಿದವಳು' ಎಂದು ಆಶ್ವಾಸವಿತ್ತಾದರೂ ಅದನ್ನು ತೋರಿಸಿಕೊಳ್ಳಲು ಹೋಗುತ್ತಿರಲಿಲ್ಲ. ಹಾಗೆಂದು ಹೊತ್ತು ಬಂದಾಗ ಬುದ್ಧಿಯ ಮಾತು ಹೇಳಲೂ ಹಿಂಜರಿಯುತ್ತಿರಲಿಲ್ಲ. ಹಾಗೆ ಹೇಳಿದಾಗ ಗೌರವ್ವ ನಾಗತಿಯ

ಕಣ್ಣು ಕಿಡಿಯಾಡಿದರೆ, ಹುಬ್ಬು ಗಂಟು ಹಾಕಿಕೊಂಡರೆ ಅಸಮಾಧಾನವೂ ಪಟ್ಟುಕೊಳ್ಳುತ್ತಿರಲಿಲ್ಲ.

"ಇನ್ನೂ ಕಾದ ಹಾಲು, ಆರಿದರೆ ತಾನೇ ಹಿತವಾಗುತ್ತದೆ"

—ಎಂದು ತನಗೆ ತಾನೇ ಗೌರವ್ವನಾಗತಿಯ ಬಗ್ಗೆ ಸಮಾಧಾನ ಹೇಳಿಕೊಳ್ಳುವಳು. ಆಕೆಯ ಈ ನಿರೀಕ್ಷೆ ಕಡೆಗಾಲಕ್ಕೆ ಸತ್ಯವಾಯಿತು.

ಓಬಣ್ಣನಾಯಕನನ್ನು ಪಟ್ಟಕ್ಕೆ ತರುವ ಜವಾಬದಾರಿಯನ್ನು ಓಬವ್ವನಾಗತಿಯ ಹೆಗಲ ಮೇಲೆ ಹೇರಿ, ಸಹಗಮನ ಮಾಡುವ ಮುನ್ನ, ಗೌರವ್ವನಾಗತಿ ತನ್ನ ತಮ್ಮನೊಡನೆ ಈಕೆಯ ಅಂತಃಪುರಕ್ಕೆ ಬಂದಿದ್ದಳು. ಅದೇ ಮೊದಲು ಬಾರಿ—ಅದೇ ಕಡೆಯ ಬಾರಿ.

ನಾಯಕರ ಶವದ ಇದಿರೇ ಆದ ವಾಗ್ವಾದದ ಸಂದರ್ಭದಲ್ಲಿ ಬುದ್ದಿ ವಾದ ಹೇಳಬಂದ ಓಬವ್ವನಾಗತಿಯನ್ನು ಗೌರವ್ವನಾಗತಿ ಗದರಿಕೊಂಡಿದ್ದಳು. ಅದು ನೆನಪಾಗಿಯೋ ಏನೋ, ಓಬವ್ವನಾಗತಿಯ ಅಂತಃಪುರಕ್ಕೆ ಗೌರವ್ವನಾಗತಿಯು ಮುಖ ನೆಲಕ್ಕೆ ಬಾಗಿತ್ತು. ಆ ಹೊತ್ತಿನಲ್ಲಿ ತಮ್ಮಿಬ್ಬರ ನಡುವೆ ಆಗುವ ಮಾತುಕತೆಯನ್ನು ಯಾರೂ ಕೇಳಬಾರದೆಂದು, ಓಬವ್ವ ನಾಗತಿ ದಾಸಿಯರನ್ನೆಲ್ಲಾ ಹೊರಗಟ್ಟಿ, ಅವರಾರೂ ಹೊರಗೆ ನಿಂತು, ಕದ್ದು ಮಾತುಕೇಳುತ್ತಿಲ್ಲವೆಂದು ಖಚಿತಮಾಡಿಕೊಂಡು, ಬಾಗಿಲು ಹಾಕಿ ವಿಶ್ವಾಸ ತುಂಬಿ ತುಳುಕುವ ಧ್ವನಿಯಲ್ಲಿ,

"ಬಾ, ಗೌರಾ. ಹೀಗೆ ಬರಬೇಕಾಗಿತ್ತೇ ಅಕ್ಕನ ಅಂತಃಪುರಕ್ಕೆ" ಎಂದಿದ್ದಳು.

ಆ ಮಾತು ಕೇಳಿದ ಕೂಡಲೇ ಗೌರವ್ವ ಕೊಚ್ಚಿ ಬಂದ ದುಃಖದಲ್ಲಿ ನಿಲ್ಲಲಾರದೆಯೇ, ವಿಶ್ವಾಸದಿಂದ ತೆರೆದ ಅಕ್ಕನ ತೋಳೊಳಗೆ ತೂಗಿ ಬಿದ್ದಳು. ಇಬ್ಬರಿಗೂ ದುಃಖ ಮರುಕಳಿಸಿ, ಅಷ್ಟು ಹೊತ್ತು ಇಬ್ಬರೂ ಒಬ್ಬರನೊಬ್ಬರು ತಬ್ಬಿಕೊಂಡು, ಎದೆ ಹಗುರಾಗುವ ವರೆಗೂ ಅತ್ತರು. ದುಃಖದ ನೆರೆ ಕೊಂಚ ಇಳಿದು, ಮೈಯರಿವು ಮರಳಿದ ಮೇಲೂ ಗೌರವ್ವ ನಾಗತಿಯನ್ನು ತಬ್ಬಿದ ಓಬವ್ವನಾಗತಿಯ ತೋಳ ಹಿಡಿತ ಸಡಿಲಿರಲಿಲ್ಲ. ಓಬವ್ವನಾಗತಿಯ ಎದೆಯಲ್ಲಿ ತನ್ನ ಮುಖವನ್ನು ಹುದಗಿಸಿ, ಗೌರವ್ವ ನಾಗತಿ ಕಂಬನಿಯೊಸರುವ ಧ್ವನಿಯಲ್ಲಿ ಕೇಳಿದಳು.—

"ಅಕ್ಕಾ, ನಿನ್ನ ತಂಗಿಯ ಅಜ್ಞಾನ, ಅಹಂಕಾರವನ್ನು ಕ್ಷಮಿಸ ಬಲ್ಲೆಯಾ ಅಕ್ಕಾ?"

ಆ ಮಾತು ಕೇಳಿ ಓಬವ್ವನಾಗತಿಯ ಎದೆ ಅಭಿಮಾನದಿಂದ ತುಂಬಿ ಬಂದಿತ್ತು. ಆ ಅಭಿಮಾನ ತುಳುಕುವ ಧ್ವನಿಯಲ್ಲೇ ಹೇಳಿದಳು—

"ಎಂಥ ಮಾತು ಗೌರಾ. ಅಕ್ಕಾ ಎಂದು ಕರೆದು ಹೀಗೆ ಕೇಳಿದರೆ, ನಾನು ತಲೆ ಎತ್ತಿಕೊಂಡು ಬಾಳಬಹುದೇ?"

"ಇಲ್ಲಕ್ಕ. ನನ್ನಿಂದ ನಿನಗೆ ತುಂಬಾ ಅಪಚಾರವಾಗಿದೆ, ನಿನ್ನ ತಂಗಿ ಎನಿಸಿಕೊಳ್ಳಲು ಯೋಗ್ಯವಾಗದ ಹಾಗೆ ನಡೆದುಕೊಂಡೆ. ನಿನ್ನೆಯೂ ನೀವು ಬುದ್ಧಿಯ ಮಾತು ಹೇಳಿದಾಗ ಗದರಿಕೊಂಡೆ. ಕ್ಷಮಿಸು ಎಂದು ಕೇಳಲಿಕ್ಕೂ ಬಾಯಿಲ್ಲದ ಹಾಗೆ ಮಾಡಿಕೊಂಡೆ."

"ಹುಚ್ಚಿ; ಇದೇನು ಮಾತು ಬಿಡು, ನಿನ್ನೆ ನೀನು ಆಡಿದ ಮಾತು ನೀನು ಆಡಿದ್ದಲ್ಲ."

"ಇದೇ ಹಾಳು ಬಾಯಲ್ಲೇ ಆಡಬಾರದ ಮಾತು ಆಡಿದೆ ಅಕ್ಕ........"

"ಊಹೂ-ನೀನಲ್ಲ, ನಿನ್ನ ಬಾಯಿಯೂ ಅಲ್ಲ ಆ ಮಾತಾಡಿದ್ದು...."

"ನಿಜ ಅಕ್ಕ ಆ ಮಾತಾಡಿದ್ದು ನಾನಲ್ಲ, ನನ್ನ ಅಹಂಕಾರದ ಭೂತ."

"ಅದೂ ಅಲ್ಲ........ನಾಯಕರ ಮೇಲಿನ ನಿನ್ನ ಪ್ರೀತಿ, ಈ ರಾಜ್ಯದ ಮೇಲಿನ ನಿನ್ನ ಅಭಿಮಾನ ಆ ಮಾತು ಆಡಿದುವು; ನೀನಲ್ಲ. ಮರಿಗೆ ಕೈ ಹಾಕಿದರೆ ಸಾಕಿದ ಬೆಕ್ಕು ಸಿರ್ ಎನ್ನುತ್ತದೆ, ಹಾಗೆಂದು ಅದರ ಮೇಲೆ ಸಿಟ್ಟಾದವರುಂಟೇ ಗೌರಾ. ಇವೊತ್ತು ಗೊತ್ತಿರುವಷ್ಟು ನಿನ್ನೆ ಗೊತ್ತಿದ್ದರೆ ನಾನು ಅಷ್ಟು ಮಾತೂ ಆಡುತ್ತಿರಲಿಲ್ಲ. ಏಕೆ-ನೀನಾಡುವ ಮಾತನ್ನೇ ನಾನೂ ಆಡುತ್ತಿದ್ದೆ."

"ಅಕ್ಕ ನೀನು ಈ ಲೋಕದ ಹೆಣ್ಣಲ್ಲ, ದೇವತಾ ಸ್ತ್ರೀ."

"ಛಿ—ಹಾಗೆಲ್ಲಾ ಅಸಂಬದ್ಧವಾಗಿ ಹೊಗಳಬಾರದು. ನಾನೊಂದು ಮುರುಕು ಕನ್ನಡಿ ಚೂರು. ಬಿಸಿಲು ಬಿದ್ದರೆ ಅಷ್ಟು ಹೊಳೆಯುತ್ತೇನೆ. ಅಷ್ಟು ಮಾತ್ರಕ್ಕೆ ನನ್ನನ್ನೇ ಸೂರ್ಯ ಎಂದುಬಿಟ್ಟರೆ, ಎಲ್ಲಿಯಾದರೂ ಉಂಟೆ...."

ಓಬವ್ವ ನಾಗತಿಯಾಡಿದ ಆ ಮಾತನ್ನು ಕೇಳಿ, ಗೌರವ್ವನಾಗತಿಗೆ ಆಕೆಯಲ್ಲಿ ಇದ್ದ ಗೌರವ ಆ ಒಂದು ಗಳಿಗೆಯಲ್ಲಿ ನೂರ್ಮಡಿಯಾಯಿತು. ಆ ಭಾವನೆಯಲ್ಲೇ ಹೇಳಿದಳು;

" ಅಕ್ಕಾ—ಇಷ್ಟು ದಿನ ನಾನೆಂಥ ಭಾಗ್ಯಕ್ಕೆ ಎರವಾಗಿದ್ದೆನೆಂದು ನಾನು ಅರಿತಿರಲಿಲ್ಲ. ಈಗ ಅರಿವಾಗಿಯೂ ಉಪಯೋಗವಿಲ್ಲ. ಅಕ್ಕಾ- ನಿನ್ನ ಕಾಲು ಹಿಡಿದು ಬೇಡುತ್ತೇನೆ, ಜನ್ಮ ಜನ್ಮಕ್ಕೂ ನಿನ್ನ ತಂಗಿಯಾಗಿ ಹುಟ್ಟುವ ಭಾಗ್ಯವನ್ನು ಆಶೀರ್ವದಿಸು."

" ನಾನು ಬಯಸುವುದೂ ಅಷ್ಟೇ ಗೌರಾ—ಜನ್ಮ ಜನ್ಮಕ್ಕೂ ನಿನ್ನಂಥ ತಂಗಿಯಾಗಲಿ, ನಾಯಕರಂಥ ಪತಿಯಾಗಲಿ."

" ನಾಯಕರೇನೋ ಏಳೇಳು ಜನ್ಮಕ್ಕೂ ಬೇಕು ಎನ್ನುವಂಥ ಪತಿರಾಯ. ಆದರೆ ತಿಳಿದು ತಿಳಿದೂ ನನ್ನಂಥ ತಂಗಿ ಬೇಕು ಎನ್ನುತ್ತೀಯಾ ? "

" ಬೇಡ ಅನ್ನಿಸುವಂಥದನ್ನು ನೀನೇನು ಮಾಡಿದೆ ? "

" ಏನು ಮಾಡಿದೆ ? ಮಾಡಿದ್ದು ಸಾಲದೆ ? ಇದ್ದಷ್ಟು ದಿನ ಸವತಿಯಾಗಿ ನಡೆದುಕೊಂಡೆ. ಈಗ ಹೋಗುವಾಗ, ನೀನು ನಾಯಕರೊಂದಿಗೆ ಸ್ವರ್ಗಸೂರೆ ಮಾಡುವುದಕ್ಕೂ ವಿಘ್ನ ಮಾಡಿ ಹೋಗುತ್ತಿದೇನೆ........"

" ಅಷ್ಟೇ ತಾನೇ."

" ಇಷ್ಟೇ ಸಾಲದೆ ? "

" ಹುಚ್ಚಿ—ನಿನ್ನಂಥ ಸವತಿಯರಿದ್ದದ್ದರಿಂದಲೇ ನನಗೆ ನಾಯಕರ ಪ್ರೀತಿ ಎಂಥ ಆಸ್ತಿ ಎಂಬುದು ಅರಿವಾಯಿತು. ಅದು ಶಾಶ್ವತವಾಗಿ ಸಿಗಲಿ ಎಂದು ಅಮ್ಮನವರ ಪೂಜೆ ಮಾಡುವ ಬುದ್ಧಿ ಬಂತು. ಇಲ್ಲವಾಗಿದ್ದರೆ ನಾನೂ ಯಾವುದೋ ಕಾವಳದಲ್ಲಿ ಮಲಗುತ್ತಿದ್ದೆ. ಈ ಕಣ್ಣು ತೆರೆಸಿದ ನಿನ್ನನ್ನು ತಂಗಿಯಾಗಿ ಬಾ ಎಂದು ಕರೆಯದೆ ಬೇರೆ ಯಾರನ್ನು ಕರೆಯಲಿ. ನಿನಗೆ ಅದು ಬೇಬವೆಂದರೆ ಬಿಡು, ತಂಗಿಯಾಗಿ ಬರುವುದಿಲ್ಲ ಎಂದರೆ ತಾಯಿಯಾಗಿ ಬಾ ಎನ್ನುತ್ತೇನೆ. ನಾನೇನೂ ನಿನ್ನನ್ನು ಬಿಡುವುದಿಲ್ಲ."

" ಅಕ್ಕ—ನಾನು—ನಿನ್ನ ತಾಯಿಯಾಗಿ ? "

" ಏಕೆ ಆಶ್ಚರ್ಯವೇಕೆ ? ಅಥವಾ ನನ್ನಂಥ ನಿರ್ಭಾಗ್ಯೆಯ ತಾಯಿಯಾಗುವುದು ಬೇಡವೆಂದೇ ? "

“ ಬೇಡವೆಂದೇ ಅಕ್ಕಾ, ನಿನ್ನ ಕಾಲ ಧೂಳಿಯಾಗಿ, ಕೈಯ ಕಂಕಣವಾಗಿ ಜನಿಸಿದರೂ ಅದು ನನ್ನ ಪರಮ ಭಾಗ್ಯ. ಅಷ್ಟು ಆಶೀರ್ವದಿಸಿ ನನ್ನನ್ನು ಕಳಿಸಿಕೊಡು ಅಕ್ಕ.”

—ಎಂದು ಹೇಳಿ ಗೌರವ್ವನಾಗತಿ, ಅಷ್ಟು ಹೊತ್ತು ಯಾವ ಮಾತೂ ಆಡದೆ, ಯಾವ ಮಾತೂ ಆಡಲಾಗದೆ, ಪವಾಡವನ್ನು ಕಂಡ ಶಿಶುವಿನಂತೆ ಮೂಕವಿಸ್ಮಿತನಾಗಿ ಕುಳಿತಿದ್ದ ತನ್ನ ತಮ್ಮ ಓಬಣ್ಣನಾಯಕನನ್ನು ಹತ್ತಿರ ಕರೆದು, ಓಬವ್ವನಾಗತಿಯ ಚರಣಗಳ ಮೇಲೆ ಕೆಡವಿ—

“ ಅಕ್ಕ—ಇಂದಿನಿಂದ ಇವನು ನನ್ನ ತಮ್ಮನಲ್ಲ, ನಿನ್ನ ಕರುಣೆಯ ಕಂದ. ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು.”

—ಎಂದಳು.

ಓಬವ್ವನಾಗತಿ, ನಮಸ್ಕರಿಸಿದ ಓಬಣ್ಣನಾಯಕನ ಮುಡಿಯನ್ನು ಸ್ನೇಹದಿಂದ ನೇವರಿಸಿ,

“ ನೂರು ವರ್ಷ ಕಾಲ ಅಖಂಡ ಪೃಥ್ವೀಶ್ವರನಾಗಿ ಬಾಳು. ಸಿದ್ಧರ ರಕ್ಷೆ ನಿನಗಿರಲಿ.”

—ಎಂದು ಹರಸಿ, ಆತನನ್ನು ಮೇಲೆತ್ತಿ ತನ್ನ ಬಳಿಯಲ್ಲೇ ಕೂಡಿಸಿಕೊಂಡು—

“ ಓಬಣ್ಣ, ನನಗೆ ನಾಯಕರ ರಕ್ಷಣೆ ತಪ್ಪಿತು. ಇನ್ನು ನಮ್ಮನ್ನು ಕಾಪಾಡುವವನು ನೀನು ” ಎಂದಳು.

ಆ ಮಾತು ಕೇಳಿ ಗೌರವ್ವನಾಗತಿಯ ಗಂಟಲು ಕಟ್ಟಿ, ಕಣ್ಣಲ್ಲಿ ಸ್ವಲ್ಪ ಹೊತ್ತು ಆರಿದ ನೀರು ಮತ್ತೆ ತುಂಬಿಕೊಂಡಿತು. ಗದ್ಗದ ಧ್ವನಿಯಲ್ಲೇ ಹೇಳಿದಳು—

“ ಓಬಣ್ಣ, ನೀನು ಭಾಗ್ಯವಂತ. ಇಂಥ ಅಕ್ಕನನ್ನು ಬಿಟ್ಟು ತಬ್ಬಲಿಯಾಗಿ ಹೋಗುವ ನಾನು ಪಾಪಿ. ಬದುಕುವಷ್ಟು ದಿನ ಈ ತಾಯಿಗೆ ಸರಿಯಾದ ಮಗನೆನಿಸಿ ಬಾಳು. ಜಗತ್ತೇ ನಿನ್ನನ್ನು ಬಿಟ್ಟ ಈಕೆಯ ಪಾದದ ಆಶ್ರಯವೊಂದೇ ಉಳಿದರೂ ನಿನ್ನ ಬಾಳು ಪಾವನವಾಗುತ್ತದೆ.... ಅಕ್ಕ....ನಾನಿನ್ನು ಹೋಗಿ ಬರಲೇ ? ”

“ ಹೋಗಿ ಬಾ ಗೌರಾ. ಸ್ವರ್ಗದಲ್ಲಿ ಅವರಿಗೆ ನನ್ನ ನೆನಪುಕೊಡು

ಗೌರಾ. ಬೇಗ ನನ್ನನ್ನೂ ಈ ಜಗತ್ತಿನ ಸೆರೆಯಿಂದ ಕರೆಸಿಕೊಳ್ಳಲಿ. ಅವರ ಇಚ್ಛೆ ನಡೆಸಿದ ಬಳಿಕ ನಾನಿಲ್ಲಿ ಬಹಳ ಕಾಲ ಒಂಟಿಯಾಗಿ ಇರಲಾರೆ."

ಓಬವ್ವನಾಗತಿ ಆ ಮಾತನ್ನು ಶಾಂತವಾಗಿಯೇ ಆಡಿದರೂ, ಆ ಮಾತುಗಳ ಆಳದಲ್ಲಿ ಭಯಂಕರ ವಿರಹದ ಜ್ವಾಲಾಮುಖಿ ದಹದಹಿಸುತ್ತಿರುವುದು ಗೌರವನಾಗತಿಯ ಹೃದಯಕ್ಕೆ ಗೋಚರವಾಯಿತು. ಮತ್ತೊಮ್ಮೆ ಆಕೆಯನ್ನು ತಬ್ಬಿಕೊಂಡು, ಕಂಬನಿಯ ಕಡಲಿನಲ್ಲಿ ಮೈಯನ್ನು ತೇಲಿಬಿಟ್ಟಳು. ಆ ಎರಡು ಮೈಗಳು ಬೇರೆಯಾಗಿ ಉಳಿದಿದ್ದರೂ, ದುಃಖದ ಬೆಸುಗೆಯಲ್ಲಿ ಆತ್ಮಗಳೆರಡೂ ಒಂದೇ ಆದುವು. ತಾನಾಗಿಯೇ ಆ ದುಃಖದ ಕಾವು ಆರುವಷ್ಟು ಹೊತ್ತು ಒಬ್ಬರನೊಬ್ಬರು ತಬ್ಬಿದ್ದು, ಬಳಿಕ ಗೌರವ್ವನಾಗತಿ, ಓಬವ್ವನಾಗತಿಗೆರಗಿ, ಆಕೆಯ ಚರಣಗಳನ್ನು ಕಣ್ಣಿಗೆ ಒತ್ತಿಕೊಂಡು—

"ಅಕ್ಕ–ದೇವರನ್ನು ನೋಡಲು ಸ್ವರ್ಗಕ್ಕೆ ಹೋಗಬೇಕೆನ್ನುತ್ತಾರೆ. ನನಗೆ ಈ ಕಣ್ಣುಗಳಲ್ಲೇ ಇವತ್ತು ಏಕನಾಥೇಶ್ವರಿಯ ದರ್ಶನವಾಯಿತು. ನನ್ನಂಥ ಭಾಗ್ಯವಂತರಿನ್ನಿಲ್ಲ. ನಿನ್ನ ನಿರ್ಭಾಗ್ಯ ತಂಗಿಯನ್ನು ಹರಸಿ ಕಳಿಸಿಕೊಡು ಎಂದಳು."

ಆ ಮಾತು ಕೇಳಿ ಅಯಾಚಿತವಾಗಿ ಓಬವ್ವನಾಗತಿಯ ಕಂಗಳಿಂದ ಉರುಳಿದ ಕಂಬನಿಗಳೇ ಗೌರವ್ವನಾಗತಿಗೆ ಆಶೀರ್ವಾದ ಸೇಸೆಯನ್ನೆರೆದುವು.

ಓಬವ್ವನಾಗತಿಯ ಅಂತಃಪುರದಿಂದ ಹೋಗಲಾರೆನೆನ್ನುವ ಕಾಲನ್ನು ಬಲವಂತದಿಂದ ಕಿತ್ತು, ಕಂಬನಿದುಂಬಿ ಕುರುಡಾಗಿ ಗೋಡೆಗಳನ್ನು ತಡವುತ್ತಾ, ತನ್ನ ತಮ್ಮನೊಂದಿಗೆ ತನ್ನ ಅಂತಃಪುರಕ್ಕೆ ತೆರಳಿದಳು ಗೌರವ್ವನಾಗತಿ—ಮೈಯನ್ನು ಹೊರಗೆಯ್ದು, ಬರಲಾರನೆಂದ ಹೃದಯವನ್ನು ಓಬವ್ವನಾಗತಿಯ ಚರಣದಡಿಯಲ್ಲಿಯೇ ಉಳಿಸಿ.

ಗೌರವ್ವನಾಗತಿ ತೆರಳಿದಳು—ಅಂತಃಪುರದಿಂದ, ಈ ಲೋಕದಿಂದ; ಆದರೆ ಆ ಗಳಿಗೆಯ ನೆನಪು ಮಾತ್ರ ಅಮರವಾಗಿ ಉಳಿಯಿತು ಓಬವ್ವನಾಗತಿಯ ಮನೋಮಂದಿರದಲ್ಲಿ.

ಈಗ ಒಂಟಿಯಾಗಿ, ಬಿಡುವಾಗಿ ಕುಳಿತ ಒಂದೊಂದು ಗಳಿಗೆಯೂ, ಆ ನೆನಪು ಹತ್ತಾರು ಬಾರಿ ಮರಳಿ, ಓಬವ್ವನಾಗತಿಯನ್ನೂ, ಆಕೆ ಹೊತ್ತ ಹೊಣೆಗಾರಿಕೆಯ ಬಗ್ಗೆ ಎಚ್ಚರಿಸುತ್ತಿತ್ತು. 'ನಾಯಕರ ಮನದಾಸೆಯನ್ನು ತೀರಿಸಲು ಅಷ್ಟು ಹೊಯ್ದಾಡಿದ ಗೌರಿ, ಎಲ್ಲವನ್ನೂ ನನಗೆ ಒಪ್ಪಿಸಿ ಹೋದಳು. ನಾನು ಆ ನಂಬಿಕೆಯನ್ನು ಉಳಿಸಿಕೊಂಡೇನೇ?' ಎಂದು ಯೋಚಿಸುವಳು. ಹಾಗೇ ಆ ಕಾರ್ಯವನ್ನು ಆದಷ್ಟು ಬೇಗ ನಡಸಲು ತವಕಿಸುವಳು. ದಿನಕ್ಕೊಂದು ಬಾರಿಯಾದರೂ ಭುವನಪ್ಪನವರಲ್ಲಿ, ಆ ಕಾರ್ಯವನ್ನು ನಡಸುವ ವಿಧಿ-ವಿಧಾನದ ಬಗ್ಗೆ ಮಾತನಾಡುವಳು.

"ಇಂದು, ನಾಯಕರು ತೀರಿ ಹತ್ತು ದಿನ ಕಳೆದಿದೆ. ಇನ್ನೆರಡು ದಿನ ಕಳೆದರೆ ಅಂತ್ಯಕ್ರಿಯೆಗಳೆಲ್ಲವೂ ಮುಗಿಯುತ್ತವೆ. ಆ ಬಳಿಕ ಮುಂದಿನ ಕೆಲಸವಾಗಬೇಕು. ಆದರೆ ಆ ಎರಡು ದಿನಗಳೂ ಕಳೆಯುವವರೆಗೂ ಯಾರೊಬ್ಬರ ಮೈ—ಮನಸಿಗೂ ಬಿಡುವಿಲ್ಲ. ಭುವನಪ್ಪನವರಂತೂ ಊಟ—ನಿದ್ರೆಗೂ ವೇಳೆಯಿಲ್ಲದೆ, ಬುಗುರಿಯಂತೆ ಸುತ್ತುತ್ತಿದ್ದರು. ಆದರಿಂದಾಗಿಯೇ ಕಳೆದ ಎರಡು ದಿನಗಳಿಂದ ಅವರು ನಾಗತಿಯನ್ನು ನೋಡಿರಲಿಲ್ಲ. ಇಂದಾದರೂ ಅವರು ಬರಬಹುದೆಂದೂ, ಅವರೊಂದಿಗೆ, ಬಹು ಹತ್ತಿರವಾದ ನಾಯಕರ ಅಂತ್ಯ ಸಂಸ್ಕಾರದ ಕೊನೆಯ ದಿನದ ವಿವರಗಳನ್ನು ತಿಳಿದು ಕೊಳ್ಳಬೇಕೆಂದೂ ನಾಗತಿ ಕಾದಿದ್ದಳು, ಹಾಗೇ ದತ್ತು ಸ್ವೀಕಾರದ ವಿಷಯವಾಗಿಯೂ ಬೇಗ ನಿರ್ಧರಿಸಬೇಕಾಗಿತ್ತು. ಪಟ್ಟಾಭಿಷಿಕ್ತನಾದ ದೊರೆಯಿಲ್ಲದೆ ಸಿಂಹಾಸನ ಬರಿದಾಗಿ, ಬಹು ದಿನ ಉಳಿದಿರುವುದು ಹಲವಾರು ದೃಷ್ಟಿಯಿಂದ ಯೋಗ್ಯವಾಗಿರಲಿಲ್ಲ. ಅಲ್ಲದೆ ದೊರೆಯ ಪರಾಮರ್ಶೆ—ಒಪ್ಪಿಗೆಯನ್ನು ಪಡೆದು ನಿರ್ಧರಿತವಾಗಬೇಕಾದ ಹಲವಾರು ಆಡಳಿತದ ವಿಷಯಗಳನ್ನು ನಾಗತಿ ತಾನೇ ನಿರ್ವಹಿಸುವುದೂ ಸಾಧ್ಯವಿರಲಿಲ್ಲ. ಇಲ್ಲಿಯ ವರೆಗೇನೋ ಎಲ್ಲವನ್ನೂ ಭುವನಪ್ಪನವರು, ಗುರುಕಣ್ಣನವರು ಮೊದಲಾದ ಮಂತ್ರಿಮಂಡಲದವರೇ ನೋಡಿಕೊಂಡು ಹೋಗುತ್ತಿದ್ದರು. ಹೆಚ್ಚು ದಿನ ಆಡಳಿತ ಭಾರವನ್ನು ಅವರ ಮೇಲೆ ಬಿಡುವುದೂ ವ್ಯವಹಾರ ದೃಷ್ಟಿಯಿಂದ ಸೂಕ್ತವಾಗಿರಲಿಲ್ಲ. ಈ ಎಲ್ಲ

ತೊಡಕುಗಳನ್ನು ಬಿಡಿಸಿ, ಒಪ್ಪಿಕೊಂಡ ಕೆಲಸವನ್ನು ಮಾಡಿ ಮುಗಿಸಿ, ನಿಶ್ಚಿಂತೆಯಿಂದ ಪೂಜಾ ಮಂದಿರವನ್ನು ಸೇರುವ ದಿನ ಎಂದು ಬರುವುದೋ ಎಂದು ಚಿಂತಿಸುತ್ತಾ ಕುಳಿತಿದ್ದಳು.

ನಾಗತಿ ಈ ಚಿಂತೆಯಲ್ಲಿ ಕುಳಿತಿರುವಾಗಲೇ ಬಾಗಿಲ ದಾಸಿ ಒಳ ಬಂದು 'ಲಿಂಗಣ್ಣನಾಯಕರು ಬಂದಿದಾರೆ. ಬರಬಹುದೇ ಎಂದು ಕೇಳಿದರು' ಎಂದು ಹೇಳಿದಳು.

"ಅವರನ್ನು ಒಳಗೆ ಬಿಡು" ಎಂದು ಹೇಳಿ ನಾಗತಿ ಅರ್ಧ ಮುಖ ಮುಚ್ಚುವಂತೆ ಮುಖದ ಮೇಲೆ ಸೆರೆಗೆಳೆದುಕೊಂಡು, ತಾನೇ ಬಾಗಿಲ ವರೆಗೂ ಹೋಗಿ ಲಿಂಗಣ್ಣನಾಯಕರನ್ನು ಒಳಗೆ ಕರೆದುಕೊಂಡು ಬಂದಳು.

ಲಿಂಗಣ್ಣನಾಯಕ ಒಳಗೆ ಬರುತ್ತಿದ್ದ ಹಾಗೇ ನಾಗತಿಯ ಕಾಲುಗಳಿಗೆ ನಮಸ್ಕಾರಮಾಡಿ ಪಾದಧೂಳಿಯನ್ನು ನೆತ್ತಿಗೆ ಲೇಪಿಸಿಕೊಂಡು—

"ಮಲಗಿದ್ದಿರೇನೋ. ಬಂದು ತೊಂದರೆಕೊಟ್ಟೆ. ಬಿಡುವಿಲ್ಲದಿದ್ದರೆ ಮತ್ತೊಮ್ಮೆ ಬಂದು ಕಾಣುತ್ತೇನೆ" ಎಂದ.

ಆ ಮಾತಿಗೆ ಕೂಡಲೇ ಉತ್ತರ ಕೊಡದೆ, ತಲೆಬಾಗಿಸಿ ನಿಂತ ಲಿಂಗಣ್ಣನಾಯಕನ ಮುಖವನ್ನು ಒಂದು ಗಳಿಗೆ ದಿಟ್ಟಿಸಿ ನೋಡಿ—

"ನಾಯಕರಂತೂ ನಮ್ಮನ್ನು ಬಿಟ್ಟು ಹೋದರು. ನಾಯಕರ ಮಕ್ಕಳೂ ನಮ್ಮನ್ನು ದೂರಮಾಡುತ್ತಿರುವಂತಿದೆ" ಎಂದಳು.

"ಏಕೆ? ನನ್ನಿಂದೇನಾದರೂ ಅಪಚಾರವಾಯಿತೇ?"

—ನಾಗತಿಯಾಡಿದ ಮಾತು ಕೇಳಿ ಬೆಚ್ಚಿಬಿದ್ದವನಂತೆ ಕೇಳಿದ ಲಿಂಗಣ್ಣನಾಯಕ.

"ಅಪಚಾರವಲ್ಲವೇ? ತಾಯಿಯ ಮನೆಗೆ ಬಂದ ಮಕ್ಕಳು ಪರಕೀಯರ ಮನೆಗೆ ಬಂದಂತೆ ನಡೆದುಕೊಂಡರೆ ಅದಕ್ಕೆ ಏನು ಹೇಳಬೇಕು. ಹೋಗಲಿ ಬಿಡು, ನಾನೀಗ ಅಷ್ಟಕ್ಕೇ ಅರ್ಹಳೇನೋ."

"ನೀವು ಹಾಗೆ ಮಾತನಾಡಿದರೆ ನನ್ನ ಎದೆ ಸೀಳಿಹೋಗುತ್ತದೆ ಚಿಕ್ಕಮ್ಮ. ನನ್ನಿಂದ ತಪ್ಪಾಗಿದ್ದರೆ ಕೆನ್ನೆಗೆ ಹೊಡೆದು ಹೇಳಿ. ತಿದ್ದಿಕೊಳ್ಳುತ್ತೇನೆ."

"ತಪ್ಪಾಗಿತ್ತು. ಆದರೆ ಅದು ಈಗ ತೀರಿಹೋಯಿತು."

" ಯಾವಾಗ ? "

" ಮೊದಲಿನಂತೆ ಬಾಯಿತುಂಬ 'ಚಿಕ್ಕಮ್ಮ' ಎಂದು ಕರೆದಾಗ. ಕುಳಿತುಕೋ ಬಾ. ಹತ್ತಿರ ಕುಳಿತುಕೊಂಡು ಏನು ಬೇಕೋ ಕೇಳು " ಎಂದು ತನ್ನ ಬಳಿಯಲ್ಲಿದ್ದ ಬೆಳ್ಳಿಯ ಪೀಠವನ್ನು ತೋರಿದಳು.

" ಎಷ್ಟು ಬೇಗ ಹೆದರಿಸಿ ಬಿಡುತ್ತಿ ಚಿಕ್ಕಮ್ಮ. ನೀನಾಡಿದ ಮಾತು ಕೇಳಿ ನನ್ನಿಂದ ಆಗಬಾರದುದು ಏನಾಯಿತೋ ಎಂದು ಹೆದರಿದ್ದೆ. "

" ನಾನು, ನನ್ನ ಮಾತು ಅಂದರೆ ಅಷ್ಟು ಹೆದರಿಕೆಯೇ? "

" ಊಹೂ—ಹೆದರಿಕೆಯಲ್ಲ. "

" ಮತ್ತೇನು ? "

" ಅದೇನೋ ನಾನು ಹೇಳಲಾರೆ ಚಿಕ್ಕಮ್ಮ. ಅಂತೂ ನಿನ್ನ ಹುಬ್ಬು ಗಂಟಾದರೆ, ಭೂಮಿ ನಡುಗಿದಂತಾಗುತ್ತದೆ ನನಗೆ. "

" ಏಕೆ ? "

" ಏಕೆಂದರೆ ಏನು ಹೇಳಲಿ ಚಿಕ್ಕಮ್ಮ. ನಮ್ಮಿಬ್ಬರಿಗೂ ತಾಯಿಗಿಂತ ತಾಯಾಗಿ ಎತ್ತಿ ಬೆಳೆಸಿದವಳು ನೀನು. ತಂದೆಯಿಲ್ಲದ ನಮಗೆ ದೊಡ್ಡಪ್ಪ ತಂದೆಯಾಗಿದ್ದರು. ಅವರು ಹೋಗಿ ಎರಡನೆಯ ಬಾರಿ ನಾವು ತಬ್ಬಲಿಗಳಾದೆವು. ನಮ್ಮ ಪಾಲಿಗೆ ಅಮ್ಮ ಎಂದು ಕೂಗಲು ಉಳಿದಿರುವವಳು ನೀನೊಬ್ಬಳು. ನೀನೂ ನಮ್ಮಲ್ಲಿ ಅಸಮಾಧಾನಪಟ್ಟುಕೊಂಡರೆ ನಮಗೆ ಯಾರು ದಿಕ್ಕು ಹೇಳು. "

" ನನಗೂ ಅಷ್ಟೆ, ನಿಮ್ಮನ್ನು ಬಿಟ್ಟರೆ ಬೇರೆ ಯಾರು ? ನಾಯಕರು ನನ್ನನ್ನು ನಿಮ್ಮ ಕೈಯಲ್ಲಿಟ್ಟು ಹೋದರು. ಆದರೆ ಇಷ್ಟು ದಿನ ನೀನಾಗಲಿ ಚಿಕ್ಕಣ್ಣನಾಗಲಿ ಒಬ್ಬರಾದರೂ ಬಂದು ಒಂದು ಗಳಿಗೆ ಕುಳಿತು ಮಾತನಾಡಿದಿರಾ ? ಅವೊತ್ತಿನಿಂದ, ಅದಕ್ಕೇ ನಿಮಗೂ ನಾನು ಬೇಡವಾದೆನೇನೋ ಎಂದುಕೊಂಡೆ. "

" ಅಂಥ ಭಾವನೆ ನನ್ನ ಕನಸು ಮನಸಿನಲ್ಲೂ ಸುಳಿಯುವುದಿಲ್ಲ ಚಿಕ್ಕಮ್ಮ, ನಾನು ಬರದಿರುವುದಕ್ಕೆ ಅಂಥ ಕಾರಣ ಯಾವುದೂ ಇಲ್ಲ. "

" ಆದರೂ, ಅರಮನೆಗೆ ಬಂದೂ, ಒಮ್ಮೆಯಾದರೂ ಇಲ್ಲಿಗೆ ಬರಲಿಲ್ಲ. "

“ ನಿಜ ಹೇಳಬೇಕೆಂದರೆ....ನಿಜ ಹೇಳಬೇಕೆಂದರೆ....”

—ಉಕ್ಕಿಬರುವ ಭಾವನೆಯೊಂದನ್ನು ಅತಿ ಪ್ರಯಾಸದಿಂದ ಹತ್ತಿಕ್ಕುತ್ತಾ ಹೇಳಿದ ಲಿಂಗಣ್ಣನಾಯಕ.

“ ಹೇಳು ಸಂಕೋಚ ಬೇಡ.”

“ ಈ ಸ್ಥಿತಿಯಲ್ಲಿ....ನಿನ್ನ ಮುಖ ನೋಡಿದರೆ....ನನ್ನ ಎದೆ ಹಿಂಡಿದ ಹಾಗಾಗುತ್ತದೆ ಚಿಕ್ಕಮ್ಮ ಅದಕ್ಕೇ....ಅದಕ್ಕೇ....

—ಒತ್ತರಿಸಿ ಬಂದ ದುಃಖವನ್ನು ತಡೆಯಲಾರದೆ, ಬಿಕ್ಕುತ್ತಾ ಹೇಳಿದ ಲಿಂಗಣ್ಣನಾಯಕ. ನಾಗತಿಯೇ ಆತನ ನೆತ್ತಿಯನ್ನು ನೇವರಿಸಿ, ಸಮಾಧಾನ ಮಾಡುತ್ತಾ—

“ ಭಗವಂತನ ಇಚ್ಛೆಗೆ ಯಾರು ಇದಿರು ಹೇಳು ಲಿಂಗಣ್ಣ. ನಾವೆಲ್ಲ ಆತನ ಕೈಯಗೊಂಬೆಗಳು. ಇಷ್ಟವಿದ್ದಷ್ಟು ಆಟವಾಡುತ್ತಾನೆ, ಬೇಡವೆಂದರೆ ಬಿಸುಡುತ್ತಾನೆ. ಹೇಗೋ—ಎಲ್ಲವೂ ಅವನ ಆಟವೆಂದುಕೊಂಡರೆ ಮನಸ್ಸು ಅಷ್ಟು ಕುದಿಯುವುದಿಲ್ಲ. ಹಾಗೂ ಕುದಿಯುವ ಹೊತ್ತಿನಲ್ಲಿ ನಿಮ್ಮಂಥ ಮಕ್ಕಳು ಹತ್ತಿರವಿದ್ದರೆ, ಇದ್ದ ಸುಖ ನೋಡಿಕೊಂಡು, ಕಳೆದುಹೋದ ಸುಖವನ್ನು ಮರೆಯಬಹುದು....ಆ ಮಾತು ನೆನೆಸಿಕೊಂಡಷ್ಟೂ, ಇನ್ನಷ್ಟು ಕಣ್ಣೀರು ಬೇಕು ಎನ್ನುತ್ತದೆ. ಹೋಗಲಿ ಬಿಡು. ಈಗ ಬಂದದ್ದೇಕೆ ಎನ್ನುವುದನ್ನೇ ಹೇಳಲಿಲ್ಲವಲ್ಲ ? ”

“ ನಾಳಿದ್ದು ಹನ್ನೆರಡನೆಯ ದಿನ, ಆ ದಿನ ದಾನಧರ್ಮಗಳು ಏನಾಗಬೇಕೋ ನಿಮ್ಮನ್ನೇ ವಿಚಾರಿಸಬೇಕು ಎಂದರು ಜೋಯಿಸರು. ಅದನ್ನು ಕೇಳಬೇಕೆಂದೇ ಬಂದೆ.”

“ ಹೆಂಗಸು ನನ್ನನ್ನು ಕೇಳಿದರೆ ನಾನೇನು ಹೇಳಲಿ ಲಿಂಗಣ್ಣ,”

“ ನೀನೇ ಹೇಳಬೇಕು ಚಿಕ್ಕಮ್ಮ”

“ ಊಹೂ—ನನಗೇನು ತಿಳಿಯುತ್ತದೆ ಹೇಳು. ನನಗೆ ತಿಳಿಯುವುದಿಷ್ಟೆ—ಅವರ ಆತ್ಮಕ್ಕೆ ಸಂತೋಷವಾಗಲು ಏನೇನು ಮಾಡಬೇಕೋ ಎಲ್ಲವನ್ನೂ ಮಾಡಿ. ಇಂಥ ಸಮಯದಲ್ಲಿ ಏನೇನು ದಾನ ಕೊಡಬೇಕೊ, ಧರ್ಮ ಮಾಡಬೇಕೋ ಜೋಯಿಸರು ಹೇಳಬೇಕು. ಅದಕ್ಕೆಲ್ಲ ಭಂಡಾರದಲ್ಲಿ ಎಷ್ಟು ಹಣ ಇದೆಯೆಂದು ಚಿನ್ನದಮನೆಯವರು ಲೆಕ್ಕ ಹೇಳಿದರೆ,

ಅದರಲ್ಲಿ ಇಷ್ಟು ಇದಕ್ಕೆ ಖರ್ಚುಮಾಡಬಹುದು ಅಂತ, ನಾನು, ಉಳಿದ ಹಿರಿಯರು ನಿರ್ಧರಿಸಬೇಕು. ಭುವನಪ್ಪನವರೊಂದಿಗೆ ವಿಚಾರ ಮಾಡು ಲಿಂಗಣ್ಣ. ಎಲ್ಲಾ ವಿಚಾರವನ್ನು ಅರಿತ ಹಿರಿಯರು ಅವರು........ಅಂದ ಹಾಗೆ ಅವರೂ ನಿನ್ನೊಂದಿಗೆ ಏನೋ ಮಾತನಾಡುವುದಿದೆ ಎನ್ನುತ್ತಿದ್ದರು. ಸಿಕ್ಕಿದ್ದರೆ ? "

"ಇಲ್ಲ, ಯಾರೊಂದಿಗೂ ಮಾತನಾಡಲು ಅವರಿಗೆ ಬಿಡುವೇ ಇಲ್ಲ. ತುಂಬಾ ಅವಸರದ ವಿಷಯವೇ ಚಿಕ್ಕಮ್ಮ ? "

"ಹೂ ಅವಸರದ್ದೇ, ನಾನೊಂದು ಮಾತು ಹೇಳುತ್ತೇನೆ ಕೇಳು ತ್ತೀಯಾ ಲಿಂಗಣ್ಣ ? "

"ಏನು ಹೇಳು ಚಿಕ್ಕಮ್ಮ, ನೀನು ಕಾಲಲ್ಲಿ ತೋರಿದುದನ್ನು ನೆತ್ತಿ ಯಲ್ಲಿ ಹೊತ್ತು ಮಾಡುತ್ತೇನೆ."

"ಹಾಗೆಲ್ಲಾ ಹಿಂದುಮುಂದು ನೋಡದೆ ಮಾತು ಕೊಡಬಾರದು ಲಿಂಗಣ್ಣ."

"ನಿನಗೆ ಮಾತುಕೊಡಲು ಹೆದರಬೇಕೇ ? ನಿನಗೆ ಕೊಟ್ಟ ಮಾತಿಗೆ ತಲೆ ಹೋದರೂ ಹೋಗಲೇಳು."

"ನಿನ್ನ ಚಿಕ್ಕಮ್ಮ ಎಂಥ ಭಯಂಕರ ಹೆಂಗಸು ಎಂದು ನಿನಗೆ ತಿಳಿಯದು. ಅದಕ್ಕೇ ಹೀಗೆ ಹೇಳುತ್ತೀಯ ಹೆಂಗಸಿಗೆ ಹಾಗೆಲ್ಲಾ ಮಾತು ಕೊಡಬಾರದು. ತುಂಬಾ ಎಚ್ಚರಿಕೆಯಾಗಿರಬೇಕು."

"ಉಳಿದ ಹೆಂಗಸರ ವಿಷಯದಲ್ಲಿ ಹಾಗಿರಬೇಕೋ ಏನೋ, ಆದರೆ ತಾಯಿಯ ವಿಷಯದಲ್ಲೇಕೆ ಆ ಎಚ್ಚರಿಕೆಯ ಮಾತು ? "

"ತಾಯಂದಿರ ಕಥೆ ನಿನಗೆ ಗೊತ್ತಿಲ್ಲ. ಕುಂತಿದೇವಿ ಮಾಡಿದ್ದು ಕೇಳಿಲ್ಲವೆ ? "

"ಏನು ? "

"ಹುಟ್ಟಿದಾಗಲೇ ಹೊಳೆಪಾಲು ಮಾಡಿದ ಮಗನನ್ನೇ ಅವನು ಬೇಕಾದದ್ದು ಕೇಳು ಎಂದಾಗ ನಿನ್ನ ತಲೆ ಕೊಟ್ಟು ಉಳಿದ ಮಕ್ಕಳನ್ನು ಉಳಿಸು ಎಂದಳು. ನಾನೂ ಇನ್ನೊಬ್ಬ ಕುಂತಿದೇವಿಯೇ : ತೆಗೆದುಕೋ ಎಂದರೆ, ಈಗ ನಿನ್ನ ಪಾಲಿಗೆ ಬಂದಿರುವ ರಾಜ್ಯವನ್ನೇ ಕೊಡು ಎಂದು ಕೇಳುತ್ತೇನೆ."

" ಆ ತಾಪತ್ರಯವೇ ತಪ್ಪಿತು. ಆ ಭಾರ ನಿನ್ನ ದೊಡ್ಡ ಹೆಗಲ ಮೇಲೇ ಇರಲಿ ಎಂದು ಒಪ್ಪಿಸಿ, ಇದ್ದಷ್ಟು ದಿನ ಹಾಯಾಗಿ ನಿನ್ನ ಮಗ ನಾಗಿಯೇ ಇದ್ದುಬಿಡುತ್ತೇನೆ. ನನಗಾದ ನಷ್ಟವೇನು ? ನಿನಗೇ ತಲೆ ನೋವು. "

—ಎಂದು ನಗುತ್ತಾ ಹೇಳಿದ ಲಿಂಗಣ್ಣನಾಯಕ. ಆ ಮಾತು ಕೇಳಿ ನಾಗತಿಯ ಮುಖದಲ್ಲಿ ಮಂದಹಾಸ ಮೂಡಟಿ, ಮುಖ ಗಂಭೀರ ವಾಯಿತು. ಹಾಗೇ ತುದಿಯವರೆಗೂ ಬಂದ ಮಾತನ್ನು ತಡೆದುಕೊಂಡು,

" ಈಗೇಕೆ ಆ ಮಾತು. ಹಾಗೆ ಕೇಳುವ ಕಾಲ ಬರಲಿ. ಆಗ ಏನು ಮಾಡುತ್ತೀಯೋ ನೋಡೋಣ. ಈಗ ಅದನ್ನಲ್ಲ ನಾನು ಕೇಳಿದ್ದು. "

" ಮತ್ತೇನು ? "

" ಭುವನಪ್ಪನವರಿಗೆ ಬಿಡುವಿಲ್ಲವೆಂದು ನೀನೇ ಹೇಳಿದೆ. ನಿನಗೆ ಬಿಡುವಿದ್ದರೆ, ನೀನೇ ಹೋಗಿ ಒಂದು ಗಳಿಗೆ ಅವರೊಂದಿಗೆ ಮಾತನಾಡಿ ಕೊಂಡು ಬಾ. "

" ಅಷ್ಟೇ ತಾನೇ ? ನಾನು ಇನ್ನೇನೋ ಎಂದಿದ್ದೆ. "

" ಯಾವ ಮಾತನ್ನೂ ಅಷ್ಟು ಸುಲಭ ಅಂದುಕೊಳ್ಳಬಾರದು ಲಿಂಗಣ್ಣ, ಕಲ್ಲಿಗೆ ಕಲ್ಲಿನ ತೂಕವಿದ್ದರೆ ಹೂವಿಗೂ ಹೂವಿನ ತೂಕ ಇದ್ದೇ ಇರುತ್ತದೆ. ಆದ್ದರಿಂದ ಎಲ್ಲಕ್ಕೂ ತೂಕವಿದೆ ಎಂದು ಅರಿತುಕೊಂಡು ನಡೆಯುವುದು ಒಳಿತು........ಚಿಕ್ಕಣ್ಣ ಎಲ್ಲಿ, ಕಾಣಲೇ ಇಲ್ಲ, ಇದ್ದರೆ ಒಂದು ಗಳಿಗೆ ಕಳಿಸಿಕೊಡು. ನಿನ್ನ ಹಾಗೇ ಆತನೂ ಬಂದು ಒಂದು ಗಳಿಗೆ ಕುಳಿತುಕೊಂಡು ಮಾತನಾಡಿ ಹೋದರೆ ಈ ಜೀವಕ್ಕೆ ಎಷ್ಟೋ ಸಮಾಧಾನ. "

" ಅವನು ಸಿಕ್ಕಾಗ ಹೇಳುತ್ತೇನೆ—"

" ಅಂದರೆ...."

" ಇಬ್ಬರೂ ಒಂದೇ ಕಡೆಯಲ್ಲಿ ಇದ್ದರೂ ನನಗೇ ಸಿಕ್ಕುವುದಿಲ್ಲ ಅವನು. ಮೂರು ಹೊತ್ತೂ ಅವನಾಯಿತು, ದಳವಾಯಿ ಮುದ್ದಣ್ಣನವ ರಾಯಿತು. ಅದಕ್ಕೇ, ಸಿಕ್ಕರೆ ಹೇಳುತ್ತೇನೆ ಎಂದದ್ದು. "

ಲಿಂಗಣ್ಣನಾಯಕ ಹೇಳಿದ ಮಾತನ್ನು ಕೇಳಿ ನಾಗತಿಯ ಮುಖದ ಮೇಲೆ ಯಾವುದೋ ಚಿಂತೆಯ ಮೋಡ ಸುಳಿದು ಹೋಯಿತು.

"ಮುದ್ದಣ್ಣನವರ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ಲಿಂಗಣ್ಣ ?"

"ನನಗೂ ಅವರಿಗೂ ಅಷ್ಟು ಸಲಿಗೆಯಿಲ್ಲ ಚಿಕ್ಕಮ್ಮ. ಅವರೇನೊ ನನ್ನೊಂದಿಗೆ ಸಲಿಗೆಯಾಗೇ ಇರಲು ಯತ್ನಿಸುತ್ತಾರೆ. ಆದರೆ ನನಗೇ ಅದು ಬೇಡ ಎನ್ನಿಸಿದೆ."

"ಏಕೆ ?"

"ಆತ ಮಹಾ ಕ್ರೂರಿ."

"ಆ್ಞ !"

—ಆಶ್ಚರ್ಯದಿಂದ ಕೇಳಿದಳು ನಾಗತಿ.

"ನಿಜವಾಗಿಯೂ, ಸಿಟ್ಟು ಬಂದಾಗ ಯಾವುದಕ್ಕೂ ಹಿಂಜರಿಯುವವರಲ್ಲ ದಳವಾಯಿಗಳು. ಹುಲ್ಲಿಯ ಮರಿಯನ್ನು ಸಾಕಿ ಬೆಳೆಸಿ, ದೊಡ್ಡದು ಮಾಡಿ, ತಾನೇ ಅದರ ಮೇಲೆ ತನ್ನ ಬೇಟೆಯ ನಾಯನ್ನು ಛೂ ಬಿಟ್ಟು ನೋಡಿ ಸಂತೋಷಪಡುತ್ತಾನೆ. ಒಂದು ದಿನ ಅದನ್ನು ನೋಡಿದೆ. ಹೇಸಿಗೆಯಾಯಿತು. ಅಂದಿನಿಂದ ಅವನೆಂದರೆ, ಆದಷ್ಟು ದೂರ ಇರಬೇಕು ಎನ್ನಿಸುತ್ತದೆ."

ಲಿಂಗಣ್ಣನಾಯಕ ಹೇಳಿದುವನ್ನು ಕೇಳಿ ನಾಗತಿಯ ಮೈ ಕಂಪಿಸಿತು.

"ಚಿಕ್ಕಣ್ಣನಿಗೂ ಆತನಿಂದ ಆದಷ್ಟು ದೂರ ಇರು ಎಂದು ಹೇಳಬೇಕಾಗಿತ್ತು. ಅಂಥ ಸ್ನೇಹ ಒಳ್ಳೆಯದಲ್ಲ."

"ನಾನೂ ಹೇಳಿದೆ. ಆದರೆ ಚಿಕ್ಕಣ್ಣನಿಗೆ ಬೇಟೆಯ ಹುಚ್ಚು. ದಳವಾಯಿ ಮುದ್ದಣ್ಣನವರಿಗಂತೂ ಬೇಟೆಯೆಂದರೆ ಊಟ, ನೀರು ಒಂದೂ ಬೇಡ. ಅವರ ಮನೆ ನೋಡಬೇಕು ಚಿಕ್ಕಮ್ಮ—ಒಳಗೆ ಕಾಲಿಡಲು ಹೆದರಿಕೆಯಾಗಬೇಕು—ಅಷ್ಟು ಬೇಟೆಯ ನಾಯಿ ಕಟ್ಟಿದಾರೆ. ಮನೆಯ ಮುಂದಣ ಕೈಸಾಲೆಯ ಕಂಭಕಂಭಕ್ಕೂ ಬೇಟೆಯ ಹದ್ದುಗಳ ಪಂಜರತೂಗುಹಾಕಿದಾರೆ. ನಿನಗೆ ಗೊತ್ತಿಲ್ಲ—ಜಿಂಕೆಯ ಬೇಟೆಗೆಂದು

ಅವರೊಂದು ಚಿರತೆಯನ್ನೇ ಸಾಕಿಕೊಂಡಿದ್ದಾರೆ. ಚಿಕ್ಕಣ್ಣನ ಬೇಟೆಯ ಹುಚ್ಚು ಇವರ ಸ್ನೇಹದಲ್ಲಿ ಮತ್ತಷ್ಟು ಬಲವಾಗಿದೆ."

"ನಿನಗೆ ಆ ಹುಚ್ಚಿಲ್ಲವೇ ಲಿಂಗಣ್ಣ?"

"ಊಹೂ."

"ಏಕೆ—ಹೆದರಿಕೆಯೇ?"

"ಹೆದರಿಕೆ! ನನಗೆ! ಹಾಗೆಂದರೆ ಹಡೆದವರ ಹೆಸರಿಗೆ ಅಪಮಾನವಾದೀತು. ಹುಲಿ ಇದಿರಾದರೆ, ಕೈಗತ್ತಿಯಲ್ಲೇ ಕೊಂದೇನು? ಆದರೆ ತಮ್ಮ ಪಾಡಿಗೆ ತಾವಾಗಿ ಆಡಿಕೊಂಡಿರುವ ಜಿಂಕೆ, ನವಿಲು, ಮೊಲಗಳನ್ನು ಬೇಟೆಯಾಡಿ ಕೊಲ್ಲುವುದರಲ್ಲಿ ಏನು ಗಂಡಸುತನವಿದೆ ಚಿಕ್ಕಮ್ಮ. ಅದೊಂದು ಬಗೆಯ ರಕ್ತದಾಹ; ಮನುಷ್ಯರು ಮಾಡುವ ಕೆಲಸವಲ್ಲ. ಆ ಕೆಲಸ ಮಾಡಿದವನು ಹೆಮ್ಮೆಪಟ್ಟುಕೊಳ್ಳುವುದಕ್ಕಿಂತ ಎಂಥ ಕೆಲಸ ಮಾಡಿದೆ ಎಂದು ನಾಚಿಕೊಳ್ಳಬೇಕು."

—ಯಾವುದೋ ಆವೇಶ ಬಂದವನಂತೆ ಹೇಳಿದ ಲಿಂಗಣ್ಣ ನಾಯಕ.

"ಮುತ್ತಿನಂಥ ಮಾತನಾಡಿದೆ ಲಿಂಗಣ್ಣ; ಸ್ವರ್ಗದಲ್ಲಿರುವ ನಿಮ್ಮ ತಂದೆ ಒಪ್ಪುವಂಥ ಮಾತಾಡಿದೆ. ಎಷ್ಟಾದರೂ ನೀನು ಹಿರಿಯ. ಚಿಕ್ಕಣ್ಣನಿಗೂ ಬುದ್ಧಿ ಹೇಳಿ ದಾರಿಗೆ ತಾ. ರಕ್ತದ ಹುಚ್ಚು ಯಾರಿಗೂ ಅಷ್ಟು ಹಿಡಿಯ ಬಾರದು. ಹೋಗಲಿ—ಇನ್ನೊಬ್ಬರ ಮಾತು ನಮಗೇಕೆ? ಆದರೆ—ನಿನ್ನಗೂ ಇಂಥ ಮಾತು ಕೇಳಿದಾಗ ನನಗೂ ಒಂದೇ ಅಸಮಾಧಾನ ಲಿಂಗಣ್ಣ."

"ಏಕೆ ಚಿಕ್ಕಮ್ಮ?"

"ನಿನ್ನನ್ನು ಹಡೆದ ಹೊಟ್ಟೆ ನನ್ನದಾಗಲಿಲ್ಲವಲ್ಲಾ ಎಂದು—"

"ಆದರೆ ಎತ್ತಿ ಬೆಳೆಸಿದ ತೋಳು ನಿನ್ನದು ಚಿಕ್ಕಮ್ಮ."

"ಈ ಜೀವಕ್ಕೆ ಅಷ್ಟೇ ಸಮಾಧಾನ."

—ಎಂದು ನಿಟ್ಟುಸಿರುಬಿಟ್ಟಳು ನಾಗತಿ. ಆ ಮಾತು ಹೇಳಿ ತಲೆ ಎತ್ತಿನೋಡಿದಾಗ, ಒಳಮನೆಯ ಬಾಗಿಲಲ್ಲಿ ದಾಸಿಯ ಮುಖ ಕಾಣಿಸಿತು. "ಏನು ಗಿರಿಜವ್ವ?" ಎಂದು ಅವಳನ್ನು ಕೇಳಿದಳು.

“ಸಂಜೆಯಾಯಿತು. ಮಡಿಯುಟ್ಟುಕೊಳ್ಳಲು ನೀರು ಸಿದ್ಧವಾಗಿದೆ. ಅದನ್ನೇ ತಿಳಿಸೋಣವೆಂದು ಬಂದೆ. ಕ್ಷಮಿಸಬೇಕು.”

“ಓ! ಆಗಲೇ ಅಷ್ಟು ಹೊತ್ತಾಯಿತೆ? ಮಾತಿನಲ್ಲಿ ಹೊತ್ತೇ ತಿಳಿಯಲಿಲ್ಲ. ನೀರು ಸಿದ್ಧಮಾಡು ಬಂದೆ.”

“ಅಪ್ಪಣೆಯಾದರೆ ನಾನೂ ಹೋಗಿ ಬರುತ್ತೇನೆ ಚಿಕ್ಕಮ್ಮ.”

“ಹೂ. ಹೋಗಿಬಾ. ಆದರೆ ನಾನು ಹೇಳಿದುದನ್ನು ಮರೆಯಬೇಡ.”

“ಯಾವ ಮಾತು?”

“ಸಾಧ್ಯವಾದರೆ ಭುವನಪ್ಪನವರನ್ನು ನೋಡಿಕೊಂಡು ಹೋಗು.”

“ಖಂಡಿತವಾಗಿಯೂ, ಬರುತ್ತೇನೆ ಚಿಕ್ಕಮ್ಮ.”

—ಎಂದು ಲಿಂಗಣ್ಣನಾಯಕ ನಾಗತಿಗೆ ನಮಸ್ಕಾರ ಮಾಡಿದ.

“ಏಕನಾಥೇಶ್ವರ ನಿನಗೆ ಒಳಿತು ಮಾಡಲಿ. ನೂರು ವರ್ಷ ಬದುಕು” ಎಂದು, ಕಾಲಿಗೆರಗಿದ ಲಿಂಗಣ್ಣನಾಯಕನನ್ನು ಹರಸಿ, ನಾಗತಿ ಒಳಮನೆಗೆ ನಡೆದಳು.

ಲಿಂಗಣ್ಣನಾಯಕ ಕೋಣೆ ಮುಚ್ಚಿದ ಬಾಗಿಲನ್ನು ತೆರೆದು ಹೊರ ಬಂದಾಗ, ಬಾಗಿಲ ಬಳಿಯಿಂದ ಏನೋ ನೆರಳು ತಟಕ್ಕನೆ ಸರಿದು ಹೋದಂತಾಯಿತು, ಅಲ್ಲೇ ನಿಂತು ಸುತ್ತುಮುತ್ತಲೂ ನೋಡಿದ.

ಮುಚ್ಚಂಜೆಯ ಕತ್ತಲು ಕವಿಯುತ್ತಿದ್ದ ಹಜಾರದಲ್ಲಿ ದೀಪವನ್ನು ಹೊತ್ತಿಸಿಡುತ್ತಿದ್ದ ಆಳು ವಿನಾ ಬೇರೆ ಯಾರೂ ಕಾಣಲಿಲ್ಲ. ಆದರೂ ಆತನ ಮನಸ್ಸಿನಿಂದ, ಯಾರೋ ಬಾಗಿಲ ಬಳಿ ನಿಂತಿದ್ದು ತಾನು ಹೊರ ಬರುತ್ತಲೂ ಸರಿದುಹೋದರೆಂಬ ಭಾವನೆ ಮರೆಯಾಗಲಿಲ್ಲ. ಯಾರಿರಬಹುದು ಎಂದು ಆಶ್ಚರ್ಯವಾಯಿತು; ಏನಿರಬಹುದು ಎಂದು ಚಿಂತೆಯಾಯಿತು. ಅದೇ ಯೋಚನೆಯಲ್ಲೇ ತಲೆ ತಗ್ಗಿಸಿಕೊಂಡು ಹೊರ ಬಂದ.

ಅರಮನೆಯಿಂದ ಹೊರಬರುತ್ತಿದ್ದ ಹಾಗೇ ಪಂಜುಹಿಡಿದ ಆಳುಗಳು ಇದಿರುಬಂದು, ಇಬ್ಬದಿಯಲ್ಲೂ ನಿಂತು ದಾರಿತೋರಿದರು. ಬೆಂಬದಿಯಲ್ಲಿ ಕಾವಲು ಸೈನಿಕರು ನಡೆದರು. ಬಾಗಿಲ ಬಳಿಯ ಕಾವಲಭಟರು

ಮುಜುರೆಮಾಡಿ ಅವನ ಬರವನ್ನು ಕೂಗಿ ಹೇಳಿದ ಕೂಡಲೇ, ಲಿಂಗಣ್ಣ ನಾಯಕನನ್ನು ಅವನ ಅರಮನೆಗೆ ಕರೆದೊಯ್ಯಲು ಕಾದಿದ್ದ ಮೇನಾವನ್ನು ಬೋಯಿಗಳು ಹೊತ್ತು ತಂದರು. ಅದಾವುದೂ ಅರಿವಾಗದವನಂತೆ, ಹೋಗಿ ಮೇನಾದಲ್ಲಿ ಕುಳಿತ ಲಿಂಗಣ್ಣನಾಯಕ.

೪

ಬೆಳ್ಳಿಯ ಸರಪಳಿಗೆ ಬಿಗಿದ, ಕತ್ತಿಗೆ ಬಿರುದಿನ ಗಂಟೆಯನ್ನು ಕಟ್ಟಿ ಕೊಂಡು, ಹೆಗಲ ಮೇಲೆ ಒರಗಿದ ಬೇಟೆಯ ನಾಯಿಯ ತೆರೆದ ಬಾಯಲ್ಲಿ ಮುಂಗೈಯನ್ನಿಟ್ಟು, ಮೈಯನ್ನು ನೀಳವಾಗಿ ಚಾಚಿ, ದಿಂಬಿಗೆ ಒರಗಿ ಏನೋ ಯೋಚನೆ ಮಾಡುತ್ತಾ ಇದ್ದ ದಳವಾಯಿ ಮುದ್ದಣ್ಣ. ಬಿರುಸಾದ ಮುಖಮುದ್ರೆ ಯೋಚನೆಯ ತೀವ್ರತೆಗೆ ಕೈಗೋಲಾಗಿತ್ತು. ಹಾಗೇ ಚಿಂತಿಸುತ್ತಾ ಒರಗಿರುವಾಗ ಪಕ್ಕದಲ್ಲಿದ್ದ ಬೇಟೆಯ ನಾಯಿ ಗಂಭೀರವಾಗಿ ನೊರೆದು, ಯಾರೋ ಬಂದರೆಂಬುದನ್ನು ಸೂಚಿಸಿತು. ಮುದ್ದಣ್ಣ ಕಣ್ಣು ತೆರೆದು ನೋಡಿದ. ಅರಮನೆಯ ಕಾವಲುಪಡೆಯ ನಾಯಕ ವೀರಣ್ಣ, ದಳವಾಯಿ ಕಣ್ಣು ತೆರೆದುದನ್ನು ಕಂಡೊಡನೆಯೇ ಮುಜುರೆಮಾಡಿದ.

"ಏನು ವೀರಣ್ಣ, ಅರಮನೆಯಲ್ಲಿ ಎಲ್ಲರೂ ಕುಶಲವೇ ?"

"ಕುಶಲ ಪ್ರಭು."

"ಈಗೇನು ಬಂದದ್ದು ?"

"ನಿನ್ನೆ ಸಂಜೆ ನಡೆದುದನ್ನು ಪ್ರಭುಗಳಲ್ಲಿ ತಿಳಿಸಬೇಕೆಂದು ಬಂದೆ."

ಆ ಮಾತು ಕೇಳಿದ ಕೂಡಲೇ, ದಿಂಬಿಗೆ ಒರಗಿದ ಮುದ್ದಣ್ಣನ ಮೈಸೆಟೆದು ನೇರವಾಯಿತು. ಕಣ್ಣಿನ ಹೊಳಪಿನಲ್ಲಿ ಉಕ್ಕಿನ ಕಠೋರತೆ ಮೂಡಿತು. ಆ ಮಾತು ಕೇಳಿದಾಗ ಮನದಲ್ಲಿ ಮೂಡಿದ ಕರ್ಕಶತೆಯನ್ನು ಧ್ವನಿಯಲ್ಲಿ ತೋರಗೊಡದೆ—

"ಏನು ಸುದ್ದಿ ?"

—ಎಂದು ಕೇಳಿದ.

"ನಿನ್ನೆ ಸಂಜೆ ಲಿಂಗಣ್ಣನಾಯಕರು ಹಿರಿಯ ನಾಗತಿಯರನ್ನು ಕಾಣಲು ಬಂದಿದ್ದರು. ಬಹಳ ಹೊತ್ತು ಮಾತುಕತೆ ನಡೆಯಿತು."

"ಯಾವ ವಿಚಾರ ನಡೆಯಿತೆಂದು ಗೊತ್ತಾಯಿತೇ ?"

"ಅಂತಃಪುರದ ಬಾಗಿಲು ಮುಚ್ಚಿದ್ದುದರಿಂದ, ಹೊನಗೆ ನಿಂತ ನನಗೆ ಮಾತು ಕೇಳಿಸಲಿಲ್ಲ."

"ಮಾತು ಕೇಳಿಸಲಿಲ್ಲ! ಸುಮ್ಮನೆ ಕಲ್ಲಿನಂತೆ ನಿಂತಿದ್ದು, ಯಾರು ಬಂದಿದ್ದರು, ಯಾರು ಹೋದರು ಎಂದು ತಿಳಿಸುವುದಕ್ಕೆ ನಿನ್ನನ್ನೇ ನೇಮಕ ಮಾಡಬೇಕಾಗಿತ್ತೆ ?"

"ಬಾಗಿಲಿಗೆ ಬೆಳ್ಳಿಯ ತಗಡು ಬಿಗಿದಿರುವುದರಿಂದ, ಬಾಗಿಲು ಹಾಕಿದರೆ ಒಳಗಿನ ಮಾತಾವುದೂ ಕೇಳಿಸುವುದು ಸಾಧ್ಯವಿಲ್ಲ. ಬಾಗಿಲಿಗೆ ಕಿವಿ ಹಚ್ಚಿ ಕೇಳಿದರೂ ಏನು ಕೇಳಿಸಲಿಲ್ಲ; ಹಾಗಿರುವಾಗಲೇ ಸಿಕ್ಕುಬಿಳುವುದರಲ್ಲಿದ್ದೆ; ಹೇಗೋ ತಪ್ಪಿಸಿಕೊಂಡದಾಯಿತು."

"ಸಿಕ್ಕುಬಿದ್ದವರಿಗಾಗುವ ಶಿಕ್ಷೆ ಗೊತ್ತಿದೆ ತಾನೇ. ಎಚ್ಚರವಿರಲಿ. ಹಾಗೇ ಇನ್ನು ಮುಂದೆ ಮುಚ್ಚಿದ ಬಾಗಿಲುಗಳ ಹಿಂದೆ ಏನು ನಡೆಯುತ್ತವೆ ಎನ್ನುವುದನ್ನು ತಿಳಿದುಕೊಳ್ಳಲೂ ಏನಾದರೂ ಏರ್ಪಾಡು ಮಾಡಬೇಕು. ಹಿರಿಯ ನಾಗತಿಯರ ಅಂತಃಪುರದಲ್ಲಿ ನಿನಗೆ ತಿಳಿದವರು ಯಾರೂ ಇಲ್ಲವೇ ?"

"ಇದ್ದಾರೆ."

"ಯಾರು ?"

"ಪೂಜಾಗೃಹದ ದಾಸಿ"

"ಹೇಗೆ ಪರಿಚಯ ? ಎಷ್ಟು ಮಟ್ಟಿನ ಪರಿಚಯ ?"

ಆ ಪ್ರಶ್ನೆಗೆ ವೀರಣ್ಣ ಕೂಡಲೇ ಉತ್ತರ ಕೊಡಲಿಲ್ಲ, ಮುದ್ದಣ್ಣ ಅವನ ಕೆಂಪೇರಿದ ಮೊಗವನ್ನು ನೋಡಿ, ಅವನ ಮನದಲ್ಲಿ ಹುದುಗಿದ ಮಾತನ್ನು ಅರಿತುಕೊಂಡವನಂತೆ ನಗುತ್ತಾ ಹೇಳಿದ—

"ಹಾಗಿದ್ದರೆ ಮತ್ತಷ್ಟು ಅನುಕೂಲವೇ ಆಯಿತು. ಹೆಣ್ಣಿನ ಬಾಯಿ ಬಿಡಿಸಲು ಪ್ರೇಮಕ್ಕಿಂತ ಉತ್ತಮವಾದ ಅಸ್ತ್ರ ಬೇರೆ ಇಲ್ಲ. ಈ ಕೆಲಸಕ್ಕೆ ನಿನ್ನನ್ನು ನೇಮಿಸಿದುದು ಸಾರ್ಥಕವಾಯಿತು.

ಆತನ ನಗು, ಮಾತು, ಮಾತನಾಡಿದ ರೀತಿಯನ್ನು ಕೇಳಿ, ಪಳಗಿದ ಸೈನಿಕನಾದ ವೀರಣ್ಣನಿಗೂ, ಏಕೋ ಎದೆಯ ಮೇಲೆ ಮಂಜುಗಡ್ಡೆ ಇಟ್ಟಂತಾಯಿತು. ಆ ಭಾವನೆಯನ್ನು ಹಾಗೇ ಹುದುಗಿಕೊಂಡು,

"ಕ್ಷಮಿಸಬೇಕು" ಎಂದ.

"ಏಕೋ?"

"ಗಿರಿಜವ್ವ ಅಂಥ ಹೆಣ್ಣಲ್ಲ."

"ಅಂದರೆ?"

"ಹಿರಿಯ ನಾಗತಿಯರೊಡನೆ ಆಕೆಗೆ ಏಕನಾಥೇಶ್ವರಿಯ ಅವತಾರವೇ ಅವರು ಎಂಬಷ್ಟು ಭಕ್ತಿ. ಅವರಿಗೆ ಆಕೆ ಎಂದೂ ದ್ರೋಹ ಬಗೆಯುವಂತಿಲ್ಲ."

"ನೀನು ಶುದ್ಧ ಮೂರ್ಖ. ಹಿರಿಯ ನಾಗತಿಯರಿಗಾಗಲಿ, ದುರ್ಗಕ್ಕಾಗಲಿ ದ್ರೋಹ ಬಗೆಯಬೇಕೆಂಬ ಯೋಚನೆ ನಮಗೆ ತಾನೆ ಇದೆಯೆ? ಅವರ ಮೈಮರೆವಿನಿಂದಾಗಿ, ಅರಮನೆಗಾಗಲಿ, ದುರ್ಗಕ್ಕಾಗಲಿ ಯಾವ ಬಗೆಯ ವಿಪತ್ತೂ ಬರಬಾರದೆಂಬುದೇ ನನ್ನ ಇಚ್ಛೆ. ಅದಕ್ಕಾಗಿಯೇ ಈ ಕಟ್ಟು, ಕಾವಲು, ಬಂದೋಬಸ್ತು—ಎಲ್ಲವೂ. ಇಷ್ಟೆಲ್ಲ ಮಾಡಿದೆವೆಂದು ಅರಮನೆಯವರು ನಮಗೆ ಹೆಚ್ಚಿನ ಬಹುಮಾನವೇನನ್ನಾದರೂ ಕೊಡುತ್ತಾರೆಯೇ? ನಾಯಕರಿಟ್ಟ ಉಪ್ಪಿನ ಋಣ ತೀರಿಸಲು ನಾವು ಮೈಯೆಲ್ಲಾ ಕಣ್ಣಾಗಿರಬೇಕಾಗಿದೆ. ನಾಯಕರಿಂದ ಹಾಲು ಬೆಣ್ಣೆ ಉಂಬಳಿಪಡೆದವನು ನೀನು. ನಿನ್ನ ತಂದೆ ಈ ದುರ್ಗಕ್ಕಾಗಿಯೇ ಮಡಿದ. ಆ ಭಾವನೆ ನಿನಗಿಲ್ಲವೇ? ಆದ್ದರಿಂದ, ಗಿರಿಜವ್ವೆಗೂ ಈ ಮಾತನ್ನು ತಿಳಿಹೇಳಿ ವಿಷಯ ಸಂಗ್ರಹಿಸಬೇಕು. ನಿನ್ನನ್ನೂ ಸಾಕಿ ಸಲಹಿದ ದುರ್ಗಕ್ಕಾಗಿ ಇಷ್ಟು ಮಾಡಲಾರೆಯ? ಅಥವಾ ಆ ಹೆಣ್ಣಿನ ಹೃದಯವನ್ನು ಗೆಲ್ಲುವ ಶಕ್ತಿ ನಿನಗಿಲ್ಲವೋ?"

ದಳವಾಯಿ ಆಡಿದ ಮಾತಿಗೆ ಏನು ಎತ್ತರ ಹೇಳಲೂ ವೀರಣ್ಣನಿಗೆ ತೋಚಲಿಲ್ಲ. ಸುಮ್ಮನೆ ತಲೆಬಗ್ಗಿಸಿ ನಿಂತಿದ್ದ ಮುದ್ದಣ್ಣನೇ ತನ್ನ ಮಾತನ್ನು ಮುಂದುವರಿಸಿ ಕೇಳಿದ—

"ನಿನ್ನ ಅಣ್ಣ ಕಸ್ತೂರಿ ನಾಯಕನೂ ಅರಮನೆಯ ಊಳಿಗದಲ್ಲೇ ಇರಬೇಕು?"

" ಹೌದು. ಏಕೆ ಪ್ರಭು ? "

" ಏಕೂ ಇಲ್ಲ, ಸುಮ್ಮನೆ ನೆನಪಾಯಿತು. ಅದಕ್ಕೇ ಕೇಳಿದೆ. ಅಂತೂ ದುರ್ಗದ ಸೇವೆ ಸಲ್ಲಿಸಲು ದೇವರು ನಿನಗೆ ಶಕ್ತಿ ಕೊಟ್ಟಿದ್ದಾನೆ. ಅದರಲ್ಲಿ ವಂಚನೆಮಾಡಬೇಡ."

" ಕ್ಷಮಿಸಬೇಕು. ನನ್ನಲ್ಲಿ ಅಂಥ ಭಾವನೆ ಇದ್ದಿದ್ದರೆ ಇಲ್ಲಿಯ ವರೆಗೆ ಬರುತ್ತಿರಲಿಲ್ಲ. ಅರಮನೆಯ ಮೇಲೆ ಜೇಹು ಮಾಡಲು ಒಪ್ಪು ತ್ತಿರಲಿಲ್ಲ."

ತಾನು ಸೈನಿಕ, ಮಾತನಾಡುತ್ತಿರುವುದು ತನ್ನ ಸಾವು-ಬದುಕಿನ ಮೇಲೆ ತನ್ನ ಅಧಿಕಾರವನ್ನುಳ್ಳ ದಳಪತಿಯ ಮುಂದೆ ಎಂಬುದನ್ನರಿತು, ಆ ಮರ್ಯಾದೆಗೆ ಭಂಗ ತರದೆ, ಅಷ್ಟೇ ಮಟ್ಟಿಗೆ ತಾನು ಹೇಳಬೇಕಾದ ಮಾತಿಗೂ ಕೊರೆ ಮಾಡಿಕೊಳ್ಳದೆ ಹೇಳಿದ ವೀರಣ್ಣ. ಆವನ ಮಾತು ಕೇಳಿ, ಅವನ ಉದ್ದ-ಅಗಲವನ್ನು ಕಣ್ಣಲ್ಲಿಯೇ ಆಳೆಯುವಂತೆ ಅವ ನನ್ನು ನೋಡಿ, ಏರಿಳಿವುಗಳಿಲ್ಲದೆ, ಬಿಗಿದ ತಂತಿಯಂತೆ ಬಿಗಿವೆಳೆದ ಧ್ವನಿ ಯಲ್ಲಿ ಹೇಳಿದ ಮುದ್ದಣ್ಣ—

" ನೀನು ಮಾತನಾಡುತ್ತಿರುವುದು ದಳವಾಯಿಗಳ ಇದುರಿನಲ್ಲಿ ಎಂಬುದು ನೆನಪಿದೆ ತಾನೇ."

" ಇದ್ದ ಮಾತನ್ನು ಹೇಳಿದುದಕ್ಕೆ ಪ್ರಭುಗಳಿಗೆ ನನ್ನ ಮೇಲೆ ಅಗ್ರಹ ವಾದರೆ, ಕೊಡಬಹುದಾದ ಶಿಕ್ಷೆ ಅನುಭವಿಸಲು ಸಿದ್ಧವಾಗಿದೇನೆ."

ತನ್ನ ದೇಹದ ಉದ್ದಕ್ಕೂ ನೇರವಾಗಿ ನಿಂತು ಹೇಳಿದ ವೀರಣ್ಣ. ಮುದ್ದಣ್ಣ ಅವನ ಮಾತು ಕೇಳುತ್ತಿದ್ದ. ಅವನ ಕೈ ಬಳಿಯ ಬೇಟೆಯ ನಾಯಿಯ ಬೆನ್ನನ್ನು ನೇವರಿಸುತ್ತಿತ್ತು. ಅರಗಳಿಗೆ ಸುಮ್ಮನಿದ್ದು, ಬಳಿಕ ಥಟ್ಟನೆ ನಕ್ಕು ಹೇಳಿದ—

" ಸ್ಪಷ್ಟವಾಗಿ ಮಾತನಾಡುವವರನ್ನು ಕಂಡರೇ ನನಗೆ ಅಭಿಮಾನ. ಅದಕ್ಕೆಂದೇ ಸುಮ್ಮನಿದ್ದೇನೆ. ಸರಿ. ಹೇಳುವ ಮಾತು ಇನ್ನೇನೂ ಇಲ್ಲ ದಿದ್ದರೆ ಹೋಗಬಹುದು."

" ಇನ್ನೊಂದು ವಿಷಯ "

" ಏನು ? "

“ ಹಿರಿಯ ನಾಗತಿಯವರೊಂದಿಗೆ ಮಾತುಕತೆ ಮುಗಿಸಿಕೊಂಡ ಲಿಂಗಣ್ಣನಾಯಕರು, ಆ ಬಳಿಕ ಭುವನಪ್ಪನವರ ಮನೆಗೆ ಹೋದರು.”

“ ಏನು ? ”

—ಚುರುಕಾಗಿ ಕೇಳಿದ ಮುದ್ದಣ್ಣ.

“ ಮಂತ್ರಿ ಭುವನಪ್ಪನವರ ಮನೆಗೆ ಹೋದರು ಲಿಂಗಣ್ಣನಾಯಕರು. ರಾತ್ರಿ ಎರಡನೆಯ ಕಹಳೆ ಕೂಗುವವರೆಗೂ ಅಲ್ಲೇ ಇದ್ದರೆಂದು ತಿಳಿಯಿತು.”

“ ಹೂ ! ”

“ ಅಷ್ಟೇ. ಅಲ್ಲಿ ಏನು ನಡೆಯಿತೆಂಬುದು ತಿಳಿಯಲಿಲ್ಲ. ಅಲ್ಲಿ ಹೋಗಲು ನಮಗೆ ಪ್ರವೇಶವೂ ಇಲ್ಲ.”

“ ಹೂ. ”

“ ಅಷ್ಟೇ. ಹೆಚ್ಚು ಮತ್ತೇನೂ ಇಲ್ಲ.” ಅಪ್ಪಣೆಯಾದರೆ ಹೊರಡುತ್ತೇನೆ.”

“ ಹೂ. ಇಂದಿನಿಂದ ಬೇಹು ಮತ್ತಷ್ಟು ಬಿಗಿಯಾಗಬೇಕು.”

—ಎಂದು ಹೇಳಿದ ಮುದ್ದಣ್ಣ. ವೀರಣ್ಣ ಮತ್ತೊಮ್ಮೆ ದಳವಾಯಿಗೆ ಮುಜುರೆ ಮಾಡಿ ಹೊರಗೆ ಹೋದ. ಹೊರಗೆ ಹೋಗುತ್ತಿದ್ದ ಅವನನ್ನು ಕಂಡು ಬೇಟೆಯ ನಾಯಿ ಗರ್ರೆಂದು ಬಗುಳಿತು. ಕೂಡಲೇ ಮುದ್ದಣ್ಣ ಬಳಿಯಲ್ಲಿದ್ದ ಚಮ್ಮಟಿಗೆಯಿಂದ ನಾಯಿಗೆ ಬಾರಿಸಿದ. ಚುರುಕಾದ ಚಾವಟಿಯ ಪೆಟ್ಟು ಬಿದ್ದು, ನಾಯಿ ಕಿರ್ರೆಂದು ನಿಂತಲ್ಲಿಯೇ ಮಲಗಿತು. ಮುದ್ದಣ್ಣ ನಾಯಿಯನ್ನು ಹೊಡೆದ ರೀತಿಯಲ್ಲಿ ಜಗತ್ತನ್ನೇ ಪ್ರಹರಿಸುವ ಆಕ್ರೋಶವಿತ್ತು.

“ ಭುವನಪ್ಪ, ಈ ದುರ್ಗದಲ್ಲಿ ಒಬ್ಬರಿಗೇ ಸ್ಥಾನ—ಇಲ್ಲ ನನಗೆ, ಇಲ್ಲವೇ ” ನಿನಗೆ—ಎಂದು ಕರ್ಕಶವಾಗಿ ಒಟಗುಟ್ಟುತ್ತಾ, ನೆಲವನ್ನೇ ಪುಡಿಪುಡಿ ಮಾಡುವವನಂತೆ ಶತಪಥ ಹಾಕತೊಡಗಿದ.”

ಹಾಗೇ ಅಷ್ಟು ಹೊತ್ತು, ಬೋನಿನಲ್ಲಿ ಸಿಕ್ಕ ಕಾಡುಮೃಗದಂತೆ ಅತ್ತಿಂದಿತ್ತ ಸುತ್ತಾಡುತಿದ್ದು, ಬಳಿಕ ಥಟಕ್ಕನೆ ನಿಂತು ಚಪ್ಪಾಳೆ ತಟ್ಟಿದ.

ಆ ಸದ್ದು ಅಡಗುವಷ್ಟರಲ್ಲೇ ಬಾಗಿಲ ಬಳಿಯ ಆಳು ಒಳಬಂದು ಮುಜುರೆ ಮಾಡಿ ಕೇಳಿದ—

"ಏನಪ್ಪಣೆ ?"

"ಕುದುರೆಯನ್ನು ಸಿದ್ಧಮಾಡಿ ತರುವಂತೆ ಲಾಯದ ಆಳಿಗೆ ಹೇಳು"

ಅಪ್ಪಣೆ ಪಡೆದು ಆಳು ಹೊರಟುಹೋದ. ಕೂಡಲೇ ಮುದ್ದಣ್ಣ ತನ್ನ ಅಧಿಕಾರದ ವಸ್ತ್ರಗಳನ್ನು ಧರಿಸಿ, ತಲೆಯ ಮೇಲೆ ಪಾಗನ್ನಿಟ್ಟು ಕೊಂಡು ಕನ್ನಡಿಯಲ್ಲಿ ಮುಖ ನೋಡಿಕೊಂಡ. ಕನ್ನಡಿಯ ಪ್ರತಿಬಿಂಬ ದಲ್ಲಿ ಉಗ್ರವಾಗಿ ಕೆಂಡ ಕಾರುತ್ತಿದ್ದ ಕಣ್ಣುಗಳನ್ನು ಕಂಡು, ಆತನೇ ಒಂದು ಹೆಜ್ಜೆ ಹಿಮ್ಮೆಟ್ಟಿದ.

ಆ ವೇಳೆಗೆ ಆಳು ಬಂದು ಕುದುರೆ ಸಿದ್ಧವಾಗಿದೆಯೆಂದು ತಿಳಿಸಿದ. ಕೂಡಲೇ, ಗೋಡೆಗೆ ತೂಗು ಹಾಕಿದ್ದ ಖಡ್ಗವನ್ನು ಸೊಂಟಕ್ಕೆ ಬಿಗಿದು ಕೊಂಡು, ಮುತ್ತಿನ ಕುಚ್ಚಿನ ಚಡಾವು ಧರಿಸಿ ಹೊರಬಂದು, ಕಾಯುತ್ತಿದ್ದ ಕುದುರೆಯನ್ನೇರಿ, ಓಡಿಸಿದ.

ಮನೆಯ ಕೈಸಾಲೆಯಲ್ಲಿ ತೂಗುಹಾಕಿದ ಪಂಜರದಲ್ಲಿದ್ದ ಡೇಗೆ ಶಿಖರಿ ಹದ್ದುಗಳು ಅವನನ್ನು ಕಂಡು ಸಿಳ್ಳುಹಾಕಿದುವು.

ತನ್ನ ಮನೆಯಿಂದ ಹೊರಟ ಮುದ್ದಣ್ಣ ಚಿಕ್ಕಣ್ಣನಾಯಕನ ಅರ ಮನೆಯ ಬಾಗಿಲು ಸೇರುವ ವರೆಗೂ ಅತ್ತಿತ್ತ ನೋಡಲಿಲ್ಲ.

೫

ಬರುವ ಯಾವ ಸೂಚನೆಯನ್ನು ಕೊಡದೆ ಅನಿರೀಕ್ಷಿತವಾಗಿ ಬಂದ ದಳವಾಯಿಯನ್ನು ಕಂಡು ಚಿಕ್ಕಣ್ಣನಾಯಕನಿಗೆ ಆಶ್ಚರ್ಯವಾಯಿತು. ಅವ ರಿಬ್ಬರಲ್ಲಿಯೂ ಹೆಚ್ಚು ಸ್ನೇಹವಿದ್ದಾಗಿಯೂ ದಳವಾಯಿ ಹಾಗೆಂದೂ ಬಂದವನಲ್ಲ. ಏನಾದರೂ ಗೊತ್ತಾದ ಕಾರ್ಯವಿದ್ದರೂ ಮೊದಲೇ ಹೇಳಿ ಕಳಿಸಿ, ತಿಳಿಸಿದ ವೇಳೆಗೆ ಸರಿಯಾಗಿ ಬರುವವನು ಏಕಾಏಕಿ ಹೀಗೆ ಬಂದದ್ದು ಚಿಕ್ಕಣ್ಣನಾಯಕನಿಗೆ ಆಶ್ಚರ್ಯದೊಂದಿಗೆ, ಏನೋ ಅವಸರದ ಕೆಲಸವಿರಬೇಕೆಂಬ ಭಾವನೆಯೂ ಮೂಡಿತು. ಎಂತಲೇ ಮಧ್ಯಾಹ್ನದ ಊಟ ಉಂಡು ವಿಶ್ರಮಿಸಿದ್ದ ಚಿಕ್ಕಣ್ಣನಾಯಕ ಪಲ್ಲಂಕದಿಂದ ಧಿಗ್ಗನೆ

ಎದ್ದು, ಮಾಮೂಲು ಮರ್ಯಾದೆಯ ಮಾತುಗಳನ್ನಾಡುವುದನ್ನು ಆಡದೆಯೆ ನೇರವಾಗಿ ವಿಷಯವನ್ನೇ ಪ್ರಸ್ತಾಪಿಸಿದ.

"ಏನಿಷ್ಟು ಅವಸರವಾಗಿ, ಈ ವೇಳೆಯಲ್ಲಿ ಬಂದಿರಿ ದಳವಾಯಿಗಳೇ?"

"ದುರ್ಗದ ರಕ್ಷಣೆಯ ಹೊಣೆ ಹೊತ್ತವರಿಗೆ ಹೊತ್ತೇನು, ಗೊತ್ತೇನು ಅಣ್ಣಾಜಿಯವರು ಮನೆಯಲ್ಲಿದ್ದಾರೆಯೇ?"

"ಇರಬೇಕು, ಮಲಗಿರಬಹುದು. ಕರೆಸಲೇ?"

"ಬೇಡ, ಅವರೊಂದಿಗೆ ನಾನು ಆಡಬೇಕಾದ ಮಾತುಗಳನ್ನು ನೀವೇ ಆಡಿ, ಅದರ ಪರಿಣಾಮವನ್ನು ನನಗೆ ತಿಳಿಸಿದರೆ ಸಾಕು."

"ಏನು ಹೇಳಬೇಕು ಹೇಳಿ, ಹೇಳುತ್ತೇನೆ."

"ನಾನು ಬರಬಹುದೆಂದು ಹೆದರಿದ ಗಂಡಾಂತರ ಹತ್ತಿರವಾದಂತಿದೆ ಚಿಕ್ಕಣ್ಣನಾಯಕರೇ. ಭುವನಪ್ಪನವರು ಬೀಸಿದ ಬಲೆ ಬಿಗಿಯಾಗುತ್ತಿದೆ. ಈ ಸಂಚನ್ನು ಪುಡಿಪುಡಿ ಮಾಡದಿದ್ದರೆ, ನೀವಾಗಲಿ, ನಿಮ್ಮ ಅಣ್ಣಾಜಿಯವರಾಗಲಿ ಉಳಿಯಲಾರಿರಿ. ಆ ಬಲೆಯ ಎಳೆಗಳನ್ನು ಸಡಿಲವಾಗಿರುವಾಗಲೇ ಕತ್ತರಿಸಿ ಒಗೆಯಲು ನೀವು ಸಿದ್ಧರಾಗಬೇಕು."

"ಆ ಬಗ್ಗೆ ನೀವು ಸಾಕಷ್ಟು ಮುಂಜಾಗರೂಕತೆಯ ಕಾರ್ಯಕ್ರಮ ಕೈಕೊಂಡಿರುವುದಾಗಿ ಹೇಳಿದಿರಲ್ಲಾ...."

"ನಿಜ, ನಾನೇನೋ ಮಾಡುವಷ್ಟನ್ನು ಮಾಡಿದೇನೆ. ಮುಂದೆ ಮಾಡಬೇಕಾದುದನ್ನು ಮಾಡುವುದಕ್ಕೆ ಸಿದ್ಧವಾಗಿದೇನೆ. ಆದರೆ ಇದರಲ್ಲಿ ನಿಮ್ಮಿರ್ವರ ನೆರವಿಲ್ಲದೆ ನನ್ನ ಕೆಲಸ ನಡೆಯುವುದು ಅಸಾಧ್ಯ."

"ನಾನಂತೂ ಈಗಾಗಲೇ ನನ್ನಿಂದಾದ ನೆರವನ್ನು ನೀಡಲು ಒಪ್ಪಿ ವಚನ ಕೊಟ್ಟಿರುವೆನಲ್ಲಾ?...."

"ನಿಮ್ಮ ಒಬ್ಬರ ವಚನವೇ ಸಾಲದು. ನಿಮ್ಮದಕ್ಕಿಂತ ಹೆಚ್ಚಾಗಿ ಅಣ್ಣಾಜಿಯವರ ನೆರವು ಬೇಕು. ಅದಿಲ್ಲದೆ ನಾವು ಮಾಡುವುದೆಲ್ಲಾ ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತಾಗುವುದು."

"ನಾನು ಹೇಳುತ್ತೇನೆ—ಖಂಡಿತ ನಿಮಗೆ ಅಣ್ಣಾಜಿಯವರ ನೆರವು ಸಿಕ್ಕೇ ಸಿಗುವುದು."

"ಆ ಮಾತು ನೀವು ಹೇಳಿದರೆ ಸಾಲದು. ಅಣ್ಣಾಜಿಯವರ ಬಾಯಿಂದಲೇ ಆ ಮಾತು ಕೇಳಿದರೆ ನನ್ನ ಜೀವಕ್ಕೆ ಸಮಾಧಾನ."

"ನಿಮಗಾಗಿ ನೀವು ಏನೂ ಕೇಳುತ್ತಿಲ್ಲವಲ್ಲ. ನೀವು ಮಾಡುತ್ತಿರುವುದೆಲ್ಲಾ ನಮಗಾಗಿ...."

"ಆ ಮಾತನ್ನು ನಾನೇ ಹೇಳಿಕೊಂಡರೆ ಸಾಕೇ? ನಿಮ್ಮ ಬಾಯಿಂದ ಆ ಮಾತು ಬಂದರೇ ಅದಕ್ಕೆ ಬೆಲೆ."

"ನಾನೇ ಈಗ ಅದನ್ನು ಹೇಳುತ್ತಿರುವೆನಲ್ಲ. ಇನ್ನೇಕೆ ಸಂದೇಹ. ಅಣ್ಣಾಜಿಯವರೂ ಖಂಡಿತ ಇದಕ್ಕೆ ಒಪ್ಪಿಗೆ ಕೊಡುವರು. ನಾನು ಅವರೊಂದಿಗೆ ಮಾತನಾಡುತ್ತೇನೆ. ಈ ಮಾತನ್ನು ಹೇಳಿಕಳಿಸಿದ್ದರಾಗುತ್ತಿರಲಿಲ್ಲವೇ. ಬಿಸಲಿನಲ್ಲಿ ನೀವೇ ಬರಬೇಕಾಗಿತ್ತೆ."

"ಹಾಗೇ ಅವರೊಂದಿಗೆ ಇನ್ನೊಂದು ಸುದ್ದಿಯನ್ನು ಹೇಳುವುದಿತ್ತು."

"ಏನು?"

"ದೊಡ್ಡಣ್ಣನಕೆರೆಯ ಬಳಿ ಗುಡ್ಡದಲ್ಲಿ ಹುಲಿಯೊಂದು ಬಂದು ಸೇರಿದೆಯಂತೆ. ಈ ದಿನ ಸುದ್ದಿ ತಿಳಿಯಿತು."

"ನಿಜ. ನಾನೂ ನಿಮಗೆ ಈ ವಿಷಯದಲ್ಲಿ ಹೇಳಕಳಿಸಬೇಕೆಂದಿದ್ದೆ. ನಾಯಕರು ಹೋದಂದಿನಿಂದ ಬೇಟೆಗೆ ಹೋಗದೆ ಬೇಸರವಾಗಿದೆ. ಹೇಗೂ ನಾಳೆಗೆ ಎಲ್ಲ ಕರ್ಮಗಳೂ ಮುಗಿಯುತ್ತವೆ. ಯಾವ ಚಿಂತೆಯೂ ಇಲ್ಲದೆ ಬೇಟೆಗೆ ಹೊರಡಬಹುದು. ಆದಷ್ಟು ಬೇಗ ಏರ್ಪಾಡುಮಾಡಿ ದಳವಾಯಿಗಳೇ."

"ಅದರದೇನೂ ತಡವಾಗುವುದಿಲ್ಲ. ಆದರೆ ಅದಕ್ಕೆ ಮೊದಲು ಈ ಬೇಟೆಯ ಮಾತು ಇತ್ಯರ್ಥವಾದರೆ ಒಳಿತು."

"ಯಾವ ಬೇಟೆಯದು?"

"ಸಿಂಹಾಸನದ ಬೇಟೆಯದು. ಇನ್ನು ಅದು ಇತ್ಯರ್ಥವಾಗಲು ತಡವಾಗುವುದಿಲ್ಲ. ಹೇಗೂ ನಾಳೆ ದುರ್ಗಕ್ಕೆ, ಅರಮನೆಗೆ ಬೇಕಾದವರೆಲ್ಲರೂ ಕಲೆಯುತ್ತಾರೆ. ನಾಳಿದ್ದೇ ಓಲಗ ಸೇರಿಸಿ, ಈ ಪ್ರಶ್ನೆಯನ್ನು ಇತ್ಯರ್ಥಮಾಡಬೇಕು, ಎಂದು ಕೇಳುತ್ತೇನೆ. ಆದರೆ ಅಲ್ಲಿ ಆ ಮಾತು ಎತ್ತುವ ಮೊದಲು ನಿಮ್ಮ ಸಹಕಾರದ ಭರವಸೆ ಬೇಕು, ನಮಗೆ. ನೀವು

ಆದಷ್ಟು ಬೇಗ ಅಣ್ಣಾಜಿಯವರೊಂದಿಗೆ ಮಾತನಾಡಿ, ಅವರ ಅಭಿಪ್ರಾಯ ವನ್ನು ನನಗೆ ತಿಳಿಸಬೇಕು."

"ಆಗಲಿ. ಅವರು ಎದ್ದ ಕೂಡಲೇ ವಿಚಾರಿಸಿ ತಿಳಿಸುತ್ತೇನೆ. ನೀವು ಆ ಚಿಂತೆ ಹೆಚ್ಚಾಗಿ ಹಚ್ಚಿಕೊಳ್ಳಬೇಡಿ. ಆ ಭಾರವನ್ನು ನನ್ನ ಮೇಲೆ ಹಾಕಿ ಉಳಿದುದನ್ನು ನೀವು ಮಾಡಿ."

"ನೀವು ಅಷ್ಟು ಹೇಳಿದರೆ, ನನ್ನ ಕೆಲಸ ಮುಕ್ಕಾಲು ಆದಂತೆಯೇ. ನಾನಿನ್ನು ಬರಲೆ?"

"ಏನು? ಬಿಸಲಿನಲ್ಲಿ ಬಂದವರು ಹಾಗೇ ಹೊರಡುವುದೆ? ಕೊಂಚ ತಡೆಯಿರಿ-ಸ್ವಲ್ಪ ಪಾನಕವನ್ನಾದರೂ ತರಿಸುತ್ತೇನೆ."

"ಅದೆಲ್ಲಾ ಈ ಕೆಲಸ ಮುಗಿದ ಮೇಲೆ. ಈಗ ಅದಾವುದಕ್ಕೂ ವೇಳೆಯಿಲ್ಲ."

"ನಮಗಾಗಿ ನೀವೆಷ್ಟು ಶ್ರಮಪಡುತ್ತೀರ ದಳವಾಯಿಗಳೇ. ನಿಮ್ಮಂಥ ಮಿತ್ರರನ್ನು ಪಡೆದಿದ್ದ ಅಪ್ಪಾಜಿ ಭಾಗ್ಯವಂತರು."

"ಅವರು ಹುಟ್ಟಿನಿಂದ ಪಡೆದ ಭಾಗ್ಯ ಅವರದಾಗಲು ವಿಧಿ ಅಡ್ಡ ವಾಯಿತು. ಅವರನಂತರ ನಿಮಗೆ ಪ್ರಾಪ್ತವಾಗಬೇಕಾಗಿದ್ದ ಹಕ್ಕಿನ ಭಾಗಕ್ಕೆ ಸಂಚಕಾರ ತರಲು ಭುವನಪ್ಪನವರಂಥ ದ್ರೋಹಿಗಳು ಯತ್ನಿಸು ತ್ತಿದ್ದಾರೆ. ಒಮ್ಮೆ ಅವರಿಗೆ ಗೆಲುವಾಯಿತು. ಆದರೆ ಈ ಬಾರಿ ಏನಾ ದರಾಗಲಿ ಅದು ಮತ್ತೊಮ್ಮೆ ಗೆಲ್ಲದಂತೆ ನಾವೂ ಪಣ ತೊಟ್ಟದೇವೆ. ಅವರೂ ಪಣ ತೊಟ್ಟು ಕೆಲಸ ಮಾಡುತ್ತಿರುವಂತಿದೆ. ನಿನ್ನೆಯ ದಿನ ಲಿಂಗಣ್ಣನಾಯಕರೇನೋ ಭುವನಪ್ಪನವರ ಮನೆಗೆ ಹೋಗಿದ್ದರಂತೆ. ಏನಾಯಿತೋ ತಿಳಿಯದು. ಆದರೂ ನಮ್ಮಿರ್ವರಲ್ಲಿರುವ ವಿಶ್ವಾಸ ಬಲ ದಿಂದ ಇಷ್ಟು ಮಾತನ್ನು ಹೇಳಬಲ್ಲೆ ಚಿಕ್ಕಣ್ಣನಾಯಕರೇ—ನಾಳೆ ನಾಯಕರಾಗಿ ಎಲ್ಲರನ್ನೂ ಆಳುವಂಥವರು ಹೀಗೆ ಸಚಿವರ ಮನೆಗೆ ಅಲೆಯು ವುದು ಮರ್ಯಾದೆಯಲ್ಲ. ಈ ಮಾತನ್ನಂತೂ ನೀವು ಅಗತ್ಯವಾಗಿ ಹೇಳಲೇಬೇಕು."

"ಆಗಲಿ."

ಚಿಕ್ಕಣ್ಣನಾಯಕನಿಂದ ಆ ಭರವಸೆಯನ್ನು ಪಡೆದು, ದಳವಾಯಿ

ಮುದ್ದಣ್ಣ ಬಂದ ಕೆಲಸ ಅರ್ಥವಾಯಿತೆಂದು ಭಾವಿಸಿ, ಅಲ್ಲಿಂದ ಮರಳಿದ. ದಳವಾಯಿಗಳು ಹೆಬ್ಬಾಗಿಲನ್ನು ದಾಟಿ ಹೋದುದನ್ನು ವಾತಾಯನದಿಂದ ಕಂಡು, ಕೂಡಲೇ ಆಳನ್ನು ಕರೆದು, 'ಅಣ್ಣಾಜಿಯವರು ಎದ್ದ ಕೂಡಲೇ ನನಗೆ ತಿಳಿಸು' ಎಂದು ಹೇಳಿದ.

"ಆದರೆ ದೊಡ್ಡ ನಾಯಕರು ಮನೆಯಲಿಲ್ಲ" ಎಂದು ಹೇಳಿದ ಆಳು. ಈ ಮಾತನ್ನು ಕೇಳಿ ಚಿಕ್ಕಣ್ಣನಾಯಕನಿಗೆ ಆಶ್ಚರ್ಯವಾಯಿತು.

"ಯಾವಾಗ ಹೊರಗೆ ಹೋದರು ?"

"ಊಟ ಮುಗಿಸಿದವರೇ, ಒಂದು ಗಳಿಗೆ ವಿಶ್ರಾಂತಿಯನ್ನೂ ಪಡೆಯದೇ ಅವಸರವಾಗಿ ಹೋದರು."

"ಎಲ್ಲಿಗೆ ?"

"ಬಹುಶಃ ದೊಡ್ಡ ಅರಮನೆಗೆ ಹೋಗಿರಬಹುದು ಪ್ರಭು. ಅಪ್ಪಣೆಯಾದರೆ ಆಳನ್ನು ಕಳಿಸಿ ಸುದ್ದಿ ತರಿಸುತ್ತೇನೆ."

"ಏನೂ ಬೇಡ. ಅವರು ಬಂದ ಕೂಡಲೇ ನಾನು ನೋಡಬೇಕೆಂದು ಹೇಳಿದೆನೆಂದು ಅವರಿಗೆ ತಿಳಿಸು."

"ಅಪ್ಪಣೆ ಜೀಯಾ."

ಆಳು ಹೇಳಿದುದನ್ನು ಕೇಳಿ ಚಿಕ್ಕಣ್ಣನಾಯಕನಿಗೆ ಏಕೋ ತುಂಬ ಅಸಮಾಧಾನವಾಗಿತ್ತು. ಮುದ್ದಣ್ಣ ಹೇಳಿದ ಮಾತು ಅವನ ಹೃದಯ ದಡಿಯಲ್ಲಿ ಕುಳಿತು 'ನಿಜ-ನಾಳೆ ನಾಯಕರಾಗಿ ಎಲ್ಲರನ್ನೂ ಆಳಬೇಕಾದವರು ಹೀಗೆ ಮಾಡಬಾರದು' ಎಂದು ಮತ್ತೆ ಮತ್ತೆ ನುಡಿಯುತ್ತಿತ್ತು.

ಅದೇ ಅಸಮಾಧಾನದಲ್ಲೇ ಕುದಿಯುತ್ತಾ, ಲಿಂಗಣ್ಣನಾಯಕ ಬರುವುದನ್ನೇ ಕಾಯುತ್ತಾ ಕುಳಿತ.

೬

ಆವರೆ ಲಿಂಗಣ್ಣನಾಯಕ ತನ್ನ ಚಿಕ್ಕಮ್ಮ ಓಬವ್ವನಾಗತಿಯ ಅಂತಃಪುರದಲ್ಲಿ ಮಾತನಾಡುತ್ತಾ ಕುಳಿತಿದ್ದ. ಆತನ ಸುತ್ತ ಕುಳಿತ ಭುವನಪ್ಪನವರು, ಓಬವ್ವನಾಗತಿಯರ ಮುಖ ಗಂಭೀರವಾಗಿದ್ದು, ಮಾತುಕತೆಗಳ ಮಹತ್ವವನ್ನು ಸಾರಿ ಹೇಳುವಂತಿತ್ತು.

ಹಿಂದಿನಂತೆ ಇಂದು ಅಂತಃಪುರದ ಬಾಗಿಲು ಮಾತ್ರ ಹಾಕಲ್ಪಡವೆ, ಆದರ ಬಳಿ ಯಾರೂ ಸುಳಿಯದಂತೆ ಬಲವಾದ ಕಾವಲು ಹಾಕಲ್ಪಟ್ಟಿತ್ತು. ನಾಗತಿಯರ ಅಪ್ಪಣೆಯಾಗುವವರೆಗೂ, ಯಾರನ್ನೂ ಅವರನ್ನು ಕಾಣಲು ಬಿಡಕೂಡದೆಂದು ಅಪ್ಪಣೆ ಪಡೆದ ಕಸ್ತೂರಿ ನಾಯಕ ನೋಟದಿಂದಲೇ ಬಳಿಸಾರುವವರನ್ನು ಬೆದರಿಸುತ್ತಾ, ಸೊಂಟದಲ್ಲಿ ಬೆತ್ತಲೆಯಾಗಿ ಹೊಳೆಯುತ್ತಿದ್ದ ಖಡ್ಗದ ಮೇಲೆ ಕೈಯಿಟ್ಟು ನಿಂತಿದ್ದ.

ಭುವನಪ್ಪನವರು ಲಿಂಗಣ್ಣನಾಯಕರೊಡನೆ ಅರಮನೆಯನ್ನು ಪ್ರವೇಶಿಸಿದ ಕೂಡಲೇ, ಅರಮನೆಗೆ ದಳವಾಯಿಗಳು ನೇಮಿಸಿದ ಕಾವಲು ಪಡೆಯ ನಾಯಕನಾದ ವೀರನಾಯಕ ತನ್ನ ಭಟರೊಡನೆ ಅಲ್ಲಿಗೆ ಕಾವಲು ಕಾಯಲು ಬಂದಿದ್ದ. ಆದರೆ ಮುಚ್ಚಿದ ಅಂತಃಪುರದ ಬಾಗಿಲ ಬಳಿ ಕಾವಲುನಿಂತ ಕಸ್ತೂರಿ ನಾಯಕ, ಹೊರಬಾಗಿಲ ಬಳಿಯಲ್ಲೇ ಅವರನ್ನು ತಡೆದು ಕೇಳಿದ—

" ಈ ದಿನ ಇಲ್ಲಿ ಹೊರಗಿನವರಾರೂ ಪ್ರವೇಶಿಸಕೂಡದೆಂದು ನಾಗತಿಯರ ಅಪ್ಪಣೆಯಾಗಿದೆ."

ಆ ಮಾತನ್ನು ಕೇಳಿ ವೀರನಾಯಕ ದಿಗ್ಭ್ರಾಂತನಾದ. ಹಾಗೇ ಕೊಂಚ ಸಿಟ್ಟೂ ಬಂತು. ಆ ಸಿಟ್ಟು, ಅಸಮಾಧಾನದಲ್ಲೇ ಹೇಳಿದ—

" ಈ ಅಪ್ಪಣೆ ಅಪರಿಚಯಸ್ಥರಿಗೆ ಅನ್ವಯಿಸಬಹುದೇ ಹೊರತು, ಕಾವಲು ಪಡೆಯವರಿಗೆ ಅನ್ವಯಿಸಲಾರದು. ನಾವು ಅಧಿಕಾರಸ್ಥರು ಅರಮನೆಗೆ ಪ್ರವೇಶಿಸದಂತೆ ತಡೆಯಲೆಂದೇ ದಳವಾಯಿಗಳಿಂದ ನೇಮಿತರಾದವರು ಅವರ ಅಪ್ಪಣೆ ನಡಸಬೇಕಾದುದು ನಮ್ಮ ಕರ್ತವ್ಯ."

" ನಿಜ, ನಿಮ್ಮ ಕಾರ್ಯ ನೀವು ಮಾಡಿ. ಅರಮನೆಯ ಹೊರಬಾಗಿಲನ್ನು ಕಾದು ನಿಮ್ಮ ಕರ್ತವ್ಯವನ್ನು ನಿರ್ವಹಿಸಬಹುದು. ಅಂತಃಪುರದೊಳಗೆ ಯಾರನ್ನೂ ಬಿಡಕೂಡದೆಂದು ನಾಗತಿಯರು ಕಟ್ಟಪ್ಪಣೆ ಮಾಡಿದಾರೆ. ಆದುದರಿಂದ ಅವರ ಅಪ್ಪಣೆಯಿಲ್ಲದೆ, ಕಾವಲುಪಡೆಯ, ವರೂ ಇಲ್ಲಿ ಪ್ರವೇಶಿಸುವಂತಿಲ್ಲ."

" ಹೀಗೆಂದು ನಾವು ದಳವಾಯಿಗಳಿಗೆ ಹೇಳಬಹುದೇ ?"

" ದಳವಾಯಿಗಳ ಅಪ್ಪಣೆಯೆಂದು ನೀವು ನಾಗತಿಯರ ಅಪ್ಪಣೆ

ಯನ್ನು ತಿರಸ್ಕರಿಸುವ ಧೈರ್ಯಮಾಡಿದಿರೆಂದು ನಾನೂ ನಾಗತಿಯರಿಗೆ ವರದಿ ಮಾಡಬೇಕಾಗಬಹುದು. ಅದಕ್ಕೆ ಅವಕಾಶ ಕೊಡಬೇಡಿ."

ಆ ಮಾತನ್ನು ಕಸ್ತೂರಿನಾಯಕ ಶಾಂತನಾಗಿಯೇ ಹೇಳಿದನಾದರೂ ಅದರಲ್ಲಿ ಭಯಂಕರ ಬೆದರಿಕೆಯ ಬಿಗುಹಿತ್ತು. ಅದರಿದಿರು ಸೆಣಸಲಾರದೆ ವೀರನಾಯಕ ತನ್ನ ಭಟರೊಂದಿಗೆ ಹಿಂದಿರುಗಲೇ ಬೇಕಾಯಿತು. ಮುಚ್ಚಿದ ಬಾಗಿಲಷ್ಟೇ ಬಿಗಿಯಾಗಿ, ನಿರ್ವಿಕಾರನಾಗಿ, ಕತ್ತಿಯ ಮೇಲೆ ಕೈಯನ್ನಿಟ್ಟು ನಿಂತ ಕಸ್ತೂರಿನಾಯಕನ ಮುಖವನ್ನೊಮ್ಮೆ ಬಿರುಗಂಗಳಿಂದ ನೋಡಿ ವೀರನಾಯಕ ತನ್ನ ಭಟರೊಡನೆ ಹೊರಗೆ ಹೋದ.

ಕಡೆಯ ಭಟನೂ ಹೊರಗೆ ಹೋಗುವವರೆಗೂ ಕಸ್ತೂರಿನಾಯಕ ಕತ್ತಿಯ ಮೇಲಿಟ್ಟ ಕೈಯನ್ನು ಕೆಳಗಿಳಿಸಲಿಲ್ಲ.

ದಳವಾಯಿಗಳು ನೇಮಿಸಿದ ಕಾವಲುಪಡೆಯವರ ಉದ್ಧಟತನದಿಂದ ಕಸ್ತೂರಿನಾಯಕನಿಗೆ ಆಶ್ಚರ್ಯವಾದಷ್ಟೇ, ಅನಿರೀಕ್ಷಿತವಾದ ನಾಗತಿಯ ಕಟ್ಟಪ್ಪಣೆಯನ್ನು ಕೇಳಿ ವೀರನಾಯಕನಿಗೂ ಆಶ್ಚರ್ಯವಾಗಿತ್ತು. ಅಂತಃಪುರಪಲ್ಲಿ ನಡೆಯುವ ಘಟನೆಗಳ ಬಹಿರಂಗವನ್ನಷ್ಟೇ ಅಲ್ಲದೆ, ಅಂತರಂಗವನ್ನು ಬೇದಿಸಬೇಕೆಂದು ಅಪ್ಪಣೆಪಡೆದುಬಂದ ವೀರನಾಯಕನಿಗೆ, ಇದರಿಂದ ನಿರಾಶೆಯಾಗಿದ್ದುದಷ್ಟೇ ಅಲ್ಲದೆ, ತನ್ನ ಕೈಕೆಳಗಿನ ಸೈನಿಕರ ಇದಿರು ಆದ ಅವಮಾನದಿಂದ ಅವನ ಹೃದಯ ಪ್ರಕ್ಷುಬ್ಧವಾಗಿತ್ತು. ಆದರೆ ಅದಕ್ಕೆ ಪ್ರತಿಮಾಡಲು ಅವಕಾಶವಿಲ್ಲದುದರಿಂದ ಅಸಹಾಯನಾಗಿ ಹಲ್ಲುಕಡಿಯುತ್ತಾ ಹಿಂದಿರುಗಿದ. ಅಷ್ಟೇ ಮಟ್ಟಿಗೆ, ಇಷ್ಟು ಕಾವಲು ಕಾಯುವ ನಾಗತಿಯ ರಹಸ್ಯವನ್ನು ಭೇದಿಸಲೇ ಬೇಕೆಂಬ ಹಟವೂ ಅವನಲ್ಲಿ ತಲೆ ಎತ್ತಿತ್ತು.

ಕಸೂರಿನಾಯಕನಿಗೆ ಎಂದೂ ಇಲ್ಲದೆ, ನಾಗತಿ ಮಾಡಿದ ಕಾವಲ ಅಪ್ಪಣೆಯನ್ನು ಕೇಳಿಯೋ ಆಶ್ಚರ್ಯವಾಗಿತ್ತು. ಕಸ್ತೂರಿನಾಯಕ ನಾಯಕರ ಖಾಸಾ ಅಂಗರಕ್ಷಕರ ಪಡೆಯ ದಳಪತಿ. ನಾಯಕರು ಎಲ್ಲಿಯಾದರೂ ಹೊರಹೊರಟಾಗ, ಯುದ್ಧಭೂಮಿಯನ್ನು ಪ್ರವೇಶ ಮಾಡಿದಾಗ, ಓಲಗ ಸಾಲೆಯಲ್ಲಿ ಕುಳಿತಾಗ ಅವರ ಸುತ್ತ ನಿಂತು, ಎತ್ತಲಿಂದಲೂ ಅವರ ಜೀವಕ್ಕೆ ಅಪಾಯ ಬರದಂತೆ ಕಾಪಾಡುವ ಜವಾಬಬಾರಿ

ಈ ಅಂಗರಕ್ಷಕ ಪಡೆಯದಾಗಿತ್ತು. ಉಳಿದ ಸೇನೆಯವರಂತೆಯೇ ಅವರಿಗೂ ಸಂಬಳಸಾರಿಗೆ, ಉಂಬಳಿ ಮಾನ್ಯಗಳು ಕೊಡಲ್ಪಡುತ್ತಿದ್ದರೂ, ಇವರಿಗೆ ಅಪ್ಪಣೆಕೊಡುವ ಅಧಿಕಾರ ನಾಯಕರೊಬ್ಬರಿಗೇ ಇದ್ದದ್ದು. ಉಳಿದ ಸೇನೆಯನ್ನಾಳುವ ದಳವಾಯಿಗಳಿಗೆ ಇವರ ಮೇಲೆ ಏನೂ ಅಧಿಕಾರವಿರಲಿಲ್ಲ. ನಾಯಕರೊಂದಿಗೆ, ಅವರ ಪರಿವಾರದ ರಕ್ಷಣೆಯೂ ಅಂಗರಕ್ಷಕ ಪಡೆಗೆ ಸೇರಿತ್ತಾದರೂ, ಇಂದಿನವರೆಗೂ ಅವರಿಗೆ ಅಂತಃಪುರದ ದ್ವಾರರಕ್ಷಣೆಯ ಕೆಲಸವೆಂದೂ ಒದಗಿರಲಿಲ್ಲ.

ಎಂತಲೇ ಆ ದಿನ ನಾಗತಿ ಅವನನ್ನೇ ಕರೆಕಳಿಸಿ ಮತ್ತೆ ನಾವು ಅಪ್ಪಣೆಮಾಡುವವರೆಗೂ, ಅಂತಃಪುರದ ಹೊರಬಾಗಿಲಿಂದೀಚೆಗೆ ಯಾರನ್ನೂ ಬಿಡಕೂಡದು. ಕಾವಲು ಭಟರಾಗಲಿ, ಉಳಿದ ಯಾರೇ ಆಗಲಿ, ಯಾವುದೇ ಕಾರಣಕ್ಕಾಗಿಯಾದರೂ ಒಳಗೆ ಬರದಂತೆ ಎಚ್ಚರದಿಂದ ಕಾದಿರಬೇಕು. ಎಂದು ಅಪ್ಪಣೆಮಾಡಿದಾಗ, ಎತ್ತಲಿಂದ, ಯಾವ ಬಗೆಯ ಭೀತಿಯನ್ನು ನಿರೀಕ್ಷಿಸಿ ನಾಗತಿ ಇಂಥ ಕಟ್ಟಪ್ಪಣೆಮಾಡಿರಬೇಕೆಂದು ಊಹಿಸಲಾರದೆ ದಿಗ್ಭ್ರಾಂತನಾಗಿದ್ದ.

ಆದರೆ ಆ ಕಟ್ಟಪ್ಪಣೆಯ ಕಾರಣವನ್ನು ಅರಿಯುವುದಾಗಲಿ, ಅದರ ಅಂತರಂಗವನ್ನು ಮಥಿಸುವುದಾಗಲಿ ಆತನಿಗೆ ಸೇರಿದ ಕೆಲಸವಾಗಿರಲಿಲ್ಲ. ನಾಗತಿಯ ಅಪ್ಪಣೆಯನ್ನು ಕಟ್ಟೆಚ್ಚರದಿಂದ ಪಾಲಿಸುವುದು ಆತ ಹೊತ್ತ ಹೊಣೆಯಾಗಿತ್ತು. ಅ ದೃಷ್ಟಿಯಿಂದಲೇ. ತನ್ನ ಕಾರ್ಯನಿರ್ವಹಣೆಯ ಮಾರ್ಗದಲ್ಲಿ ಯಾವ ಬಗೆಯ ಅತಿತಡೆಯೂ ಬರದಿರಬಹುದೆಂದು ಊಹಿಸಿ ಕಾವಲಿದ್ದ. ಆದರೆ ನಾಗತಿಯ ಅಪ್ಪಣೆಯಷ್ಟೇ ಅನಿರೀಕ್ಷಿತವಾಗಿ, ದಳವಾಯಿಗಳ ನೇಮಕವ ಕಾವಲು ಪಡೆಯವರು, ನಾಗತಿಯ ಅಪ್ಪಣೆಯನ್ನು ಕೇಳಿದ ಕೂಡಲೇ ಮನ್ನಿಸದೆ, ಅದನ್ನು ಚರ್ಚಿಸುವ ಧೈರ್ಯ ಮಾಡಿದ್ದನ್ನು ಕಂಡು ಆತನಿಗೆ ಆಶ್ಚರ್ಯವಾದಷ್ಟೇ ಚಿಂತೆಯೂ ಆಗಿತ್ತು.

ದಳವಾಯಿಗಳ ಕಡೆಯವರಿಂದಲೇ ನಾಗತಿಯವರು ಭೀತಿಯನ್ನು ನಿರೀಕ್ಷಿಸಿದ್ದು? ಏಕೆ? ಸಾಮಾನ್ಯ ಅಪ್ಪಣೆಯ ರೂಪದಲ್ಲಿ ಕಾಣುವ ಈ ಪ್ರಸಂಗದ ಅಂತರಾಳದಲ್ಲಿ ಯಾವ ಘೋರ ಸರ್ಪ ಹೆಡೆಯಾಡಿಸುತ್ತಿದೆ? ಯಾರಿಂದ ಯಾರಿಗೆ ಭೀತಿ? ಯಾವ ಕಾರಣಕ್ಕಾಗಿ?

ಎಷ್ಟು ಚಿಂತಿಸಿದರೂ ಆ ಸಮಸ್ಯೆ ಬಗೆಹರಿಯಲಿಲ್ಲ. ಆದರೆ ಆ ಭೀತಿ ಯಾವ ಕಡೆಯಿಂದಲೇ ಯಾವ ರೂಪದಿಂದಲೇ ಬರಲಿ, ಏನಾದ ರಾಗಲಿ ಪ್ರಾಣ ಕೊಟ್ಟಾದರೂ ನಾಗತಿಯನ್ನು ಅವರಿಂದ ರಕ್ಷಿಸಲೇ ಬೇಕೆಂದು ನಿರ್ಧಾರಮಾಡಿ, ಆ ಭೀಮನಿರ್ಧಾರವೇ ಮಾನವಾಕೃತಿ ಯನ್ನು ತಳೆದಂತೆ, ಅಂತಃಪುರದ ಬಾಗಿಲೆದುರು ಕಾವಲು ನಿಂತ, ಕಸ್ತೂರಿ ನಾಯಕ.

ಒಳಗೆ ಮಾತನಾಡುತ್ತಾ ಕುಳಿತವರಿಗೆ ಹೊರಗೆ ನಡೆದ ಪ್ರಸಂಗ ಕಿವಿಯಮೇಲೆ ಬೀಳಲಿಲ್ಲ, ಬಿದ್ದರೂ ಅದು ಅವರ ಮನಸಿನಾಳವನ್ನು ಹೊಗದಂಥ ಗಂಭೀರ ಚರ್ಚೆಯಲ್ಲವರು ಮಗ್ನರಾಗಿದ್ದರು.

೭

“ನಿನ್ನೆ ನೀನು ಇಲ್ಲಿಗೆ ಬಂದಾಗ ನಿನ್ನನ್ನೊಂದು ಮಾತು ಕೇಳಿದ್ದೆ. ನೆನಪಿದೆಯೇ ಲಿಂಗಣ್ಣ ?”

—ನಾಗತಿಯು ತನ್ನ ಇದಿರು ಕುಳಿತ ಲಿಂಗಣ್ಣನಾಯಕನನ್ನು ಕೇಳಿ ದಳು. ನಾಗತಿಯ ಪ್ರಶ್ನೆಗೆ ಲಿಂಗಣ್ಣನಾಯಕ ಏನು ಉತ್ತರ ಕೊಡು ವನೋ ಎಂದು ಕುತೂಹಲದಿಂದ ಭುವನಪ್ಪನವರು ಆತನ ಮೊಗವನ್ನೇ ನೋಡುತ್ತಿದ್ದರು. ನಾಯಕರ ಸಾಕುನುಗ ಓಬಣ್ಣನಾಯಕನೂ ಅವ ರೆಲ್ಲರ ಮುಖವನ್ನೇ ನೋಡುತ್ತಾ ಕುಳಿತ್ತಿದ್ದ.

ಊಟ ಮಾಡಿ ಕೈ ತೊಳೆಯುತ್ತಿದ್ದ ಹಾಗೇ, ಮಧ್ಯಾಹ್ನದ ಬಿಸಿಲಿ ನಲ್ಲೇ ನಾಗತಿಯಿಂದ ಬಂದ ಅವಸರದ ಕರೆಯಿಂದಲೇ ಲಿಂಗಣ್ಣ ನಾಯಕನಿಗೆ ಆಶ್ಚರ್ಯವಾಗಿತ್ತು. ಹಿಂದಿನ ದಿನ ತಾನೇ ಆತ ಸಾಕಷ್ಟು ಹೊತ್ತು ಅವರೊಂದಿಗೆ ಮಾತನಾಡಿ ಬಂದಿದ್ದ. ಅಲ್ಲದೆ ಅಂತ್ಯ ಕ್ರಿಯೆ ಗಳ ಕೊನೆಯ ದಿನವಾದ ಮರುದಿನದ ಕೆಲಸ ಕಾರ್ಯಗಳ ಬಗ್ಗೆ ವಿವರವನ್ನರಿಯಲು ಆತ ಮತ್ತೆ ಆ ದಿನವೂ ನಾಗತಿಯನ್ನು ನೋಡಬೇ ಕಾಗಿತ್ತು. ಹೀಗಿರುವಾಗ ಇಷ್ಟು ಅವಸರದ ಕರೆಯೇಕೆ ? ಯಾವ ಗುರು ತರವಾದ ಆಲೋಚನೆಗೆ ಇರಬಹುದು ಎಂದು ಚಿಂತಿಸುತ್ತಲೇ ಅರಮನೆಗೆ ಬಂದಿದ್ದ.

ನಾಗತಿಯ ಅಂತಃಪುರದಲ್ಲಿ ಭುವನಪ್ಪನವರನ್ನು ನೋಡಿ, ನಡೆಯಬೇಕಾದ ಸಮಾಲೋಚನೆ ತಾನು ಯೋಚಿಸಿದುದಕ್ಕಿಂತ ಗುರುತರವಾದುದೇ ಇರಬೇಕೆನಿಸಿತು, ಆತನಿಗೆ.

ಹಿಂದಿನ ದಿನ ರಾತ್ರಿ ಆತ, ನಾಗತಿಯ ಮಾತಿನಂತೆ ಭುವನಪ್ಪನವರನ್ನು ನೋಡಹೋದಾಗ ಅಲ್ಲಿ ನಡೆದ ಚರ್ಚೆ ಆತನಿಗೆ ಆಶ್ಚರ್ಯವನ್ನುಂಟುಮಾಡಿತ್ತು. ನಾಗತಿಯ ಮಾತಿನಂತೆ ತಾನು ಅಲ್ಲಿಗೆ ಬಂದೆನೆಂದು ಹೇಳಿದಾಗ, ಅವರು ಇದ್ದಕ್ಕಿದ್ದ ಹಾಗೇ 'ಮುಂದೆ ನಾಯಕರು ಯಾರಾಗಬೇಕೆಂದು ನಿನ್ನ ಅಭಿಪ್ರಾಯ?' ಎಂದು ಕೇಳಿ, ಈತನನ್ನು ದಿಗ್ಭ್ರಮೆಗೊಳಿಸಿದ್ದರು. ಅಲ್ಲದೆ ಅವರ ಮಾತಿನ ತಲೆ ಬುಡವೇ ಗೊತ್ತಾಗದ ಹಾಗೆ ಸುತ್ತು ಬಳಸಾಗಿ ಮಾತನಾಡಿ, ಆ ದಿಗ್ಭ್ರಮೆಯನ್ನು ಮತ್ತಷ್ಟು ಬಲಗೊಳಿಸಿದ್ದರು. ಈಗ ನಾಗತಿ ಕೇಳಿದ ಪ್ರಶ್ನೆ ಮತ್ತೆ ಆತನಲ್ಲಿ ಹಿಂದಿನ ರಾತ್ರಿಯ ದಿಗ್ಭ್ರಾಂತಿ ಮರುಕಳಿಸುವಂತೆ ಮಾಡಿತು. ಎಂತಲೇ ನಾಗತಿಯ ಮಾತಿಗೆ ನೇರವಾಗಿ ಉತ್ತರ ಕೊಡಲಾಗದೆ—

"ಅದೇನು ಮಾತು ಹೇಳಿ ಚಿಕ್ಕಮ್ಮ?" ಎಂದ.

"ನಿನ್ನೆ ಹೇಳಿದ ಮಾತು ಈಗಾಗಲೇ ಮರೆತು ಹೋಯಿತೇ?"

"ನಿನ್ನೆ ಒಂದು ಮಾತಾಡಿದೆವೆ? ಏನಾದರಾಗಲಿ–ಹೇಳಿ ಚಿಕ್ಕಮ್ಮ, ನಿಮ್ಮ ಮಾತನ್ನು ನಡೆಸಿಕೊಡುವ ಭಾರ ನನ್ನದು."

"ಹಾಗೆಲ್ಲಾ ನಿಮ್ಮ ಕುರುಡು ವಾಗ್ದಾನ ಪಡೆವ ಇಚ್ಛೆ ನಮಗಿಲ್ಲ ಲಿಂಗಣ್ಣನಾಯಕರೇ. ನಾಳೆ ನೀವೆ ಆಗಲಿ, ಲೋಕವೇ ಆಗಲಿ, ಯಾರೂ ನಾವು ನಿಮ್ಮಿಂದ ಮಾತೇನೆಂದು ತಿಳಿಸದೆಯೇ ಮೋಸ ಮಾಡಿದವೆಂದು ಅಂದುಕೊಳ್ಳಬಾರದು. ಆದುದರಿಂದ ವಿಷಯವೇನೆಂದು ಕೂಲಂಕಷವಾಗಿ ತಿಳಿದುಕೊಳ್ಳಿ. ಅನಂತರ ನಮ್ಮ ಮಾತು ಒಪ್ಪಿಗೆಯಾದರೆ, ನಡಸಿಕೊಡಿ. ಇಲ್ಲವೆನಿಸಿದರೆ ಸ್ಪಷ್ಟವಾಗಿ, ನಿರ್ಭಯವಾಗಿ, ನಿಸ್ಸಂಕೋಚವಾಗಿ ಇಲ್ಲವೆಂದು ಹೇಳಿ. ಏಕೆಂದರೆ ಇಂದು ನಾವಾಡುತ್ತಿರುವುದು ಒಂದು ದಿನದ ಮಾತಲ್ಲ; ಇಂದಿನ ಮಾತು ಸೂರ್ಯ ಚಂದ್ರರಿರುವವರೆಗೂ ನಡೆಯುವಂಥದು; ನಿಮಗೆ ಅಪಾರ ಹಾನಿಯಾಗುವಂಥ ಮಾತು. ಆದ್ದರಿಂದಲೇ ನಿಮ್ಮಲ್ಲಿ ಅಪಾರ ವಿಶ್ವಾಸವಿದ್ದರೂ, ನಾಗತಿ ಹಿಂಜರಿದು ಹಿಂಜರಿದು ಮಾತನಾಡುತ್ತಿರುವುದು."

—ಭುವನಪ್ಪನವರೂ ಮುಂದೆ ಆಡಬೇಕಾದ ಮಾತಿಗೆ ಪೀಠಿಗೆ ಹಾಕುತ್ತಾ ಹೇಳಿದರು.

“ನಿನ್ನೆಯೂ ಹೀಗೆ ಏನೋ ಒಂದು ಮಾತು ಬಂದಿತ್ತು ಭುವನಪ್ಪ ನವರೇ. ನಾನಾಗಲೇ ಚಿಕ್ಕಮ್ಮನವರಿಗೆ ಹೇಳಿದೆ—ನಿಮಗೆ ಬೇಕೆಂದು ಪ್ರಾಣ ಕೊಡಲು ಕೂಡಾ ನಾನು ಹಿಂಜರಿಯುವುದಿಲ್ಲ, ಎಂದು. ಇಂದು ನೀವು ಹೇಳಲಿರುವ ಮಾತು ಎಂಥದೋ, ಕೇಳಲಿರುವ ವಾಗ್ದಾನ ಎಂಥದೋ ನಾನರಿಯೆ. ಆದರೆ ಆ ಮಾತನ್ನು ಹೇಳಲು ನೀವು ಪಡು ತ್ತಿರುವ ತೊಳಲಾಟವನ್ನು ನೋಡಿದರೆ, ಅದು ತುಂಬಾ ಮಹತ್ವದ ಮಾತಿರಬೇಕೆಂದೇ ತೋರುತ್ತದೆ. ಆದರೂ ನಾನು ಪ್ರಮಾಣಮಾಡಿ ಹೇಳುತ್ತೇನೆ-ನನ್ನನ್ನು ಯಾವುದನ್ನು ಕೇಳಲೂ ಚಿಕ್ಕಮ್ಮನವರು ಸಂಕೋಚ ಪಡಬೇಕಾಗಿಲ್ಲ. ಅವರ ಮಾತು ಏನಿದ್ದರೂ ತಲೆಯ ಮೇಲೆ ಹೊತ್ತು ನಡಸುತ್ತೇನೆ.”

—ಖಚಿತವಾಗಿ ಹೇಳಿದ ಲಿಂಗಣ್ಣನಾಯಕ.

“ನನ್ನಲ್ಲಿ ಪ್ರೀತಿ ತೋರಿ, ನನ್ನ ಬಾಯಿ ಕಟ್ಟುತ್ತಿದ್ದೀಯ ಲಿಂಗಣ್ಣ; ನನ್ನನ್ನು ನೀನು ‘ತಾಯಿ’ ಎಂದೆ. ಆದರೆ ತಾಯಿ ಮಗನಿಗೆ ಹೇಳಬಾರ ದಂಥ ಮಾತನ್ನು ಹೇಗೆ ಹೇಳಲಿ ಎಂಬುದೇ ನನ್ನ ಚಿಂತೆ.”

—ಲಿಂಗಣ್ಣನ ಮೊಗವನ್ನು ನೋಡಲು ಸಂಕೋಚವಾದವಳಂತೆ, ಮುಖವನ್ನು ನೆಲದತ್ತ ಬಾಗಿಸಿ ಹೇಳಿದಳು ನಾಗತಿ.

“ಚಿಕ್ಕಮ್ಮ—ಈ ಜಗತ್ತಿನಲ್ಲಿ ನಾನು ನಂಬದಿರುವಂಥ ವಸ್ತುಗಳು ಎಷ್ಟೋ ಇವೆ. ನಂಬುವ ವಸ್ತುಗಳೂ ಕೆಲವಿವೆ. ಈ ಗುಡ್ಡ ಕುಸಿಯುವು ದಿಲ್ಲ. ಎಂದು ನಂಬಿದೇನೆ. ಆದರೆ ಒಂದು ವೇಳೆ ಭೂತಾಯಿಗೆ ಇದರ ಭಾರ ಬೇಸರವಾಗಿ ಬಾಯಿ ತೆರೆದು ಇದನ್ನೂ ನುಂಗಬಹುದು. ಆದರೆ ತಾಯಿಗಿಂತ ಹೆಚ್ಚಿನ ತಾಯಾಗಿ ಈ ತಬ್ಬಲಿಯನ್ನು ಸಾಕಿದ ನೀವು ಎಂದೂ ನನಗೆ ಹಾನಿಯಾಗುವಂಥ ಕೆಲಸ ಮಾಡುವುದಿಲ್ಲ.”

“ಆದರೆ ಲೋಕದಲ್ಲಿರುವವರೆಲ್ಲರೂ ನಿನ್ನಂತಯೇ ತಿಳಿಯುವುದಿಲ್ಲ. ಲಿಂಗಣ್ಣ. ಹನಿಹನಿಯಾಗಿ ಬಿದ್ದರೂ ನೀರು ಕಡೆಗೊಂದು ದಿನ ಕೋಡು ಗಲ್ಲನ್ನೇ ಕದಲಿಸುವಂತೆ, ಲೋಕದ ಮಾತು ನಿನ್ನ ನಂಬಿಕೆಯನ್ನು ಕೆಡಿಸ ಬಹುದು....”

"ಲೋಕದ ಜನ ಬೇಕಾದದ್ದು ಹೇಳಬಹುದು ಚಿಕ್ಕಮ್ಮ. ಅವರು ಕಾಣುವುದು ಬಹಿರಂಗವನ್ನು ಮಾತ್ರ. ನಿನ್ನ ಹೃದಯಾಂತರಾಳದಲ್ಲಿ ಪ್ರಜ್ವಲಿಸುತ್ತಿರುವ ದೇವತಾಮೂರ್ತಿಯನ್ನವರು ಕಾಣಲಾರರು. ನಾನು ಕಾಣಬಲ್ಲೆ. ನೀನು ಇಂದು ಹೇಳುವ ಮಾತು ಜಗತ್ತಿಗೆ ಕೆಡಕಾಗಿ ಕಾಣ ಬಹುದು; ನನಗೇ ಒಂದು ಗಳಿಗೆ ಅಪ್ರಿಯವಾಗಿ, ಅಹಿತವಾಗಿ ಕಾಣ ಬಹುದು. ಆದರೂ ನಾನು ಏಕನಾಥೇಶ್ವರಿಯ ಪಾದ ಹಿಡಿದು, ಸಾರಿ ಹೇಳುತ್ತೇನೆ—ನಿನ್ನಲ್ಲಿ ಹುದುಗಿರುವ ಮಾತೃ ದೇವತೆ ನನಗೆಂದೂ ಕೇಡು ಬಗೆಯಲಾರಳು."

—ಸತ್ಯವನ್ನು ಸಾರುವ ಪ್ರವಾದಿಯ ನಿಶ್ಚಿತ ಧ್ವನಿಯಲ್ಲಿ ಹೇಳಿದ. ಆತನ ಮಾತು ಕೇಳಿ ನಾಗತಿಯ ಗಂಟಲು ಬಿಗಿದು ಬಂದಿತು. ಭುವನಪ್ಪ ನವರ ಕಂಗಳಾಳದಲ್ಲಿಯೂ ನೀರಾಡಿದಂತೆ ತೋರಿತು.

"ನಿನ್ನೆ, ನಿನಗೆ ಮಗನ ತಲೆಯನ್ನೇ ಕೇಳಿದ ತಾಯಿಯೊಬ್ಬಳ ಕಥೆ ಹೇಳಿದೆನಲ್ಲವೇ ಲಿಂಗಣ್ಣ."

"ಹೂ."

"ಇಂದು ನಾನೂ ಅಂಥ ತಾಯಾಗಬೇಕೆಂದೇ ಮಾಡಿದೇನೆ."

"ಆ! ನನ್ನ ತಲೆಯ ಬಲಿ ಬೇಕೇ ಚಿಕ್ಕಮ್ಮ!" ಸಿಡಿಲು ಸೋಕಿ ದವನಂತೆ ಚಕಿತನಾಗಿ ಕೇಳಿದ ಲಿಂಗಣ್ಣನಾಯಕ. ಮರುಗಳಿಗೆಯೇ ಆ ಅಘಾತದಿಂದ ಸಾವರಿಸಿಕೊಂಡು ಹೇಳಿದ "ಅದೇ ನಿನ್ನ ಇಚ್ಛೆಯಾದರೆ ಹಾಗೂ ಆಗಲಿ ಚಿಕ್ಕಮ್ಮ. ದೇವರು ಸೃಜಿಸಿದ ಹೂವು ದೇವರ ಪಾದಕ್ಕೇ ಅರ್ಪಿತವಾಗಿ ಧನ್ಯವಾಗುವಂತೆ, ನೀನು ಸಾಕಿದ ನನ್ನ ಪ್ರಾಣಪುಷ್ಪ ನಿನ್ನ ಪಾದಕ್ಕರ್ಪಿತವಾದರೆ ಅದಕ್ಕಿಂತ ಹೆಚ್ಚೇನು ಬಯಸಲಿ."

"ಲಿಂಗಣ್ಣಾ........ಲಿಂಗಣ್ಣಾ............ನಿನಗಾರು ಕಲಿಸಿದರು ಈ ಬುದ್ಧಿಯನ್ನು ಕಂದಾ" ಎಂದು ಉದ್ವಿಗ್ನರಾಗಿ ಕೇಳಿದಳು ನಾಗತಿ.

"ನಾನು ಬರೀ ಬಿದಿರ ತುಂಡು ಚಿಕ್ಕಮ್ಮ, ಇದರಲ್ಲಿ ಉಸಿರು ಊದಿ ಇಂಚರವನ್ನು ಮೂಡಿಸುವ ಶಕ್ತಿ, ನನ್ನಿದುರು ಕುಳಿತಿರುವ ತಾಯಿದೇವಿ."

"ನೀನು ಇಂಥ ಮಗನೆಂದು ನಾನು ಅರಿತಿದ್ದೆ ಲಿಂಗಣ್ಣ. ಅದಕ್ಕೇ ನಾಯಕರು ಇರುವವರೆಗೂ ಅವರ ಬಯಕೆಗೆ ಸಮ್ಮತಿಸಲಿಲ್ಲ. ಆದರೀಗ

ಅವರು ತಮ್ಮ ಬಯಕೆಯನ್ನು ಕಾರ್ಯರೂಪಕ್ಕೆ ತರುವ ಭಾರವನ್ನು ನನ್ನ ಹೆಗಲ ಮೇಲೆ ಹೇರಿ ಹೋಗಿದ್ದಾರೆ. ನಿನ್ನ ಹಾಗೆ ನಾನೂ ಬರೀ ಬಿದಿರ ತುಂಡು. ನಾಯಕರ ಇಚ್ಛೆ ನನ್ನನ್ನು ನುಡಿಸುತ್ತಿದೆ. ನಿನ್ನನ್ನು ನಾನು ಕೇಳಬೇಕಾದುದಿಷ್ಟೆ ಲಿಂಗಣ್ಣ. ನಾಯಕರು ಅನಾಥವಾಗಿ ಬಿಟ್ಟು ತೆರಳಿದ ಈ ದುರ್ಗದ ರಾಜ್ಯ ಹಕ್ಕಿನಿಂದ ನಿನ್ನದು. ನೀನು ಇದನ್ನು ನನಗೇ ಬೇಕು ಎಂದರೆ ಅದಕ್ಕೆ ಯಾರೂ ಅಡ್ಡ ಬರುವವ ರಿಲ್ಲ. ಒಂದು ಕಡೆ ಈ ರಾಜ್ಯವಿದೆ—ಇನ್ನೊಂದು ಕಡೆ ನಾನು. ನಾನು ನಿನ್ನನ್ನು ಕೇಳಬೇಕೆಂದಿದ್ದುದಿಷ್ಟೆ—ನಿನಗಾವುದು ಬೇಕು? ಈ ರಾಜ್ಯವೇ, ನಾನೇ?"

"ಅದು ಏನು ಅಗ್ನಿಪರೀಕ್ಷೆ ಚಿಕ್ಕಮ್ಮ. ನನ್ನದಾದ ರಾಜ್ಯ ವನ್ನು ನನಗೆ ಬೇಕು ಎಂದರೆ, ಅದರಿಂದಾಗಿ ನಾನು ನಿನಗೆ ಎರವಾಗ ಬೇಕೇ?"

"ಹೌದು ಲಿಂಗಣ್ಣ."

"ಏಕೆ........ಏಕೆ........ಏಕೆ........! ಇದೇನು ವಿಧಿಯ ವಿಕಟಾಟ್ಟ ಹಾಸ!!"

—ಹೃದಯದಲ್ಲಿ ಧಿಗ್ಗನೆ ಹೊತ್ತಿದ ಉದ್ವಿಗ್ನತೆಯಲ್ಲಿ ಕುಳ್ಳಿರಲಾರದೆ ಎದ್ದು ನಿಂತು ಕೇಳಿದ ಲಿಂಗಣ್ಣನಾಯಕ.

"ಹೌದು ಮಗು, ಇಂದಿನ ಪರಿಸ್ಥಿತಿ ಹಾಗಿದೆ. ನಾನಿಂದು ಸ್ವತಂತ್ರ ಳಲ್ಲ, ನಾಯಕರ ಕೈಹಿಡಿದಂದು ನಾನು ಅವರವಳಾದೆ. ಅವರು ಇಲ್ಲಿರಲಿ ಸ್ವರ್ಗದಲ್ಲಿರಲಿ ನಾನವರ ಛಾಯಾನುವರ್ತಿನಿ. ನಾನಿಲ್ಲಿ ಉಳಿದಿರುವುದು ಅವರ ಬಯಕೆಯನ್ನು ನಡಸಬೇಕೆಂದು. ಅದಕ್ಕೆ ವಿರೋಧಿಗಳಾದವರು ನನಗೂ ವಿರೋಧಿಗಳೇ. ನಾನು ನಿಷ್ಠುರ ಕರ್ತವ್ಯದ ಬಂದಿ ಲಿಂಗಣ್ಣ. ನನ್ನ ಹೃದಯವೇನೇ ಹೇಳಿದರೂ, ಕರ್ತವ್ಯ ತೋರಿದ ಪಥದಿಂದ ವಿಮುಖಳಾಗಲಾರೆ."

ಎದ್ದು ನಿಂತು ತನ್ನನ್ನೇ ನೋಡುತ್ತಿರುವ ಲಿಂಗಣ್ಣನಾಯಕನ ಕಣ್ಣಲ್ಲಿ ತನ್ನ ನೋಟವನ್ನು ನೆಟ್ಟು ಹೇಳಿದಳು ನಾಗತಿ. ಆ ನೋಟದ ತೀವ್ರತೆಯನ್ನು ತಡೆಯಲಾಗದವನಂತೆ ಲಿಂಗಣ್ಣನಾಯಕ ಒಮ್ಮೆ ತಲೆ

ಕೊಡಹಿ, ಒಂದು ಗಳಿಗೆ ಅಂತ್ತಿಂದಿತ್ತ ಆಡ್ಡಾಡುತ್ತಿದ್ದು ಬಳಿಕ ತಟಕ್ಕನೆ ನಿಂತು, ಸುತ್ತ ಕುಳಿತವರನ್ನು ದುರುಗುಟ್ಟಿ ನೋಡುತ್ತಾ ಕೇಳಿದ—

“ ನಾಯಕರಿಗೆ ನಮ್ಮ ಮೇಲೇಕೆ ಅಷ್ಟು ದ್ವೇಷವಿತ್ತು ? ”

“ ಅದಕ್ಕೆ ಉತ್ತರ ನಾನು ಹೇಳಬಲ್ಲೆ ಲಿಂಗಣ್ಣನಾಯಕರೇ. ನಾಯಕರಿಗೆ ನಿಮ್ಮ ಮೇಲೆ ದ್ವೇಷವಿರಲಿಲ್ಲ. ಇದ್ದಿದ್ದರೆ ಇಪ್ಪತ್ತೆರಡು ವರ್ಷಗಳ ಕಾಲ ನೀವು ಈ ಪ್ರಶ್ನೆಯನ್ನು ಕೇಳಲು ಉಳಿದಿರುತ್ತಿರಲಿಲ್ಲ.”

ಲಿಂಗಣ್ಣನಾಯಕನ ಪ್ರಶ್ನೆಗೆ ಭುವನಪ್ಪನವರು ಉತ್ತರಕೊಟ್ಟರು.

“ ಅಂದರೆ........? ”

“ ಅಂದರೆ ನಾಯಕರಿಗೆ ನಿಮ್ಮ ಮೇಲೆ ವಿಶ್ವಾಸವಿತ್ತು. ಆದರೆ ದುರ್ಗದ ಹಿತದ ಬಗ್ಗೆ ಎಲ್ಲಕ್ಕಿಂತ ಹೆಚ್ಚು ಆಸಕ್ತಿ ಇತ್ತು. ಎಂತಲೇ ಅವರು ನಮ್ಮೆಲ್ಲರ ಹೆಗಲ ಮೇಲೆ ಈ ಕಠೋರ ಕರ್ತವ್ಯದ ಉರಿಭಾರ ವನ್ನು ಹೇರಿ ತೆರಳಿದರು.”

“ ನಿಮ್ಮ ಮಾತನ್ನು ಕೊಂಚ ವಿವರಿಸಿ ಹೇಳುವಿರಾ ಭುವನಪ್ಪ ನವರೇ ? ”

ನಿರುದ್ವಿಗ್ನರಾಗಿ ಭುವನಪ್ಪನವರು ಓಬಣ್ಣನಾಯಕನನ್ನು ಸಾಕುಮಗ ನಾಗಿ ತೆಗೆದುಕೊಂಡು, ಆತನನ್ನು ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಮಾಡ ಬೇಕೆಂದಿದ್ದ ಬಯಕೆ, ಆದಕ್ಕಿದ್ದ ಕಾರ್‍ಯಗಳು ಎಲ್ಲವನ್ನೂ ವಿವರಿಸಿ ಹೇಳಿ,

“ ಈಗ ನಾನು ಇಷ್ಟು ಹೇಳಬಲ್ಲೆ ಲಿಂಗಣ್ಣನಾಯಕರೇ. ಗತಿಸಿದ ನಾಯಕರಿಂದ ಒಂದು ದೊಡ್ಡ ತಪ್ಪಾಯಿತು. ಇದ್ದಾಗ ಅವರು ನಿಮ್ಮ ಹೃದಯವನ್ನು ಅರಿತುಕೊಳ್ಳಲಿಲ್ಲ. ಅರಿತುಕೊಂಡಿದ್ದರೆ, ಇಂಥ ನಿರ್ಧಾರದ ತಪ್ಪು ಅವರಿಂದ ಆಗುತ್ತಿರಲಿಲ್ಲ. ಆದರೆ ಅವರಲ್ಲಿ ತಪ್ಪು-ಒಪ್ಪುಗಳನ್ನೆ ಣಿಸುವ ಅಧಿಕಾರ ಅವರ ಉಪ್ಪುಂಡ ಈ ವೈಗಿಲ್ಲ. ಆದಕ್ಕೇ ನುಡಿಯು ವಾಗ ನಾಲಗೆ ಕಹಿಯಾದರೂ ಈ ಮಾತನ್ನು ತಮ್ಮಲ್ಲಿ ಬಿನ್ನವಿಸಿಕೊಳ್ಳು ತ್ತಿದ್ದೇನೆ. ನನ್ನಂತೆಯೇ ತಾವೂ ಈ ದುರ್ಗದ ನೀರು ಕುಡಿದವರು. ನೀವು ಮನಸ್ಸು ಮಾಡಿದರೆ ಅಮೃತ ಜಲವೆರೆದು, ಈ ದುರ್ಗವನ್ನು ಕಟ್ಟ ಬಹುದು; ಇಲ್ಲವೇ ಯಾದವೀಕಲಹದ ರಕ್ತವೃಷ್ಟಿಯಲ್ಲಿ ಇದನ್ನು ಮುಳು ಗಿಸಬಹುದು. ಹೇಳಿ ನಿಮ್ಮ ಇಚ್ಛೆಯೇನು ? ”

ಆ ಮಾತನ್ನು ಕೇಳಿ ನೆತ್ತಿಯ ಮೇಲೆ ಹತ್ತು ಅಡಿಗಳ ಎತ್ತರದಲ್ಲಿದ್ದ ಸೂರು ತಲೆಯ ಮೇಲೆ ಕುಸಿದು ಬಿದ್ದವನಂತೆ ಸುಮ್ಮನೆ ನಿಂತಿದ್ದು, ಬಳಿಕ ಲಿಂಗಣ್ಣನಾಯಕ ನಾಗತಿಯತ್ತ ದೈನ್ಯದೃಷ್ಟಿಯಿಂದ ನೋಡುತ್ತಾ ಕೇಳಿದ,

" ಈ ರಾಜ್ಯ ಬೇಕೆಂದರೆ-ನಿನ್ನನ್ನು....ನಿನ್ನನ್ನು....ನಾನು ಕಳೆದು ಕೊಳ್ಳಬೇಕೇ ಚಿಕ್ಕಮ್ಮ? "

" ಭುವನಪ್ಪನವರು ಹೇಳಿದುದನ್ನೆಲ್ಲಾ ನೀನೇ ಕೇಳಿದೀಯ ಲಿಂಗಣ್ಣ, ಬೇರೆ ಮಾತಾಡಲು ನನಗೆ ದಾರಿಯನ್ನೇ ಉಳಿಸಿಲ್ಲ ನಾಯಕರು."

—ಬೆಂಕಿಯ ಮೇಲೆ ಬಿದ್ದ ಕೈಕಾಲು ಕಟ್ಟಿದ ಪಶು ಅಸಹಾಯ ಸ್ಥಿತಿಯಲ್ಲಿ ನರಳುವ ಧ್ವನಿಯಲ್ಲಿ ಹೇಳಿದಳು ನಾಗತಿ.

ಆ ಮಾತನ್ನು, ಅವನ ಎದೆ ಇರಿವ ಧ್ವನಿಯನ್ನು ಕೇಳಿ ಲಿಂಗಣ್ಣ ನಾಯಕರ ಕಣ್ಣಲ್ಲಿ ಇದ್ದಕ್ಕಿದ್ದ ಹಾಗೇ ಕಂಬನಿಯುಕ್ಕಿ ಹರಿಯಿತು. ಹರಿಯುವ ಕಂಬನಿಯನ್ನು ಒರೆಸಿಕೊಳ್ಳದೆ ತಲೆಬಾಗಿಸಿ ಕುಳಿತ ನಾಗತಿಯನ್ನೇ ದಿಟ್ಟಿಸಿ ನೋಡಿದ, ನೋಟದಲ್ಲೇ ಆಕೆಯನ್ನು ಹೀರಿ ತನ್ನ ಎದೆಯೊಳಗೆ ತುಂಬಿಕೊಳ್ಳುವವನಂತೆ. ಒಂದು ಗಳಿಗೆ ಅವನ ಮೈ, ಬಿರುಗಾಳಿಗೆ ಸಿಕ್ಕಿದಂತೆ ಬಲವಾಗಿ ಕಂಪಿಸಿ, ಮರುಗಳಿಗೆಯೇ ಉಕ್ಕಿನಂತೆ ಸ್ಥಿರವಾಯಿತು. ಆ ನಿರ್ಧಾರದ ಬಲವಿದೆಂಬಂತೆ, ಆತನ ಮೈಯ ಎತ್ತರ ಇನ್ನಷ್ಟು ಹೆಚ್ಚಿದಂತೆ ತೋರಿತು. ಹೆಗಲ ಮೇಲೆ ತೂಗಾಡುತ್ತಿದ್ದ ಶಲ್ಯದ ತುದಿಯಿಂದ ಕಣ್ಣನ್ನು ಒರಸಿಕೊಂಡು, ತಾಯಿ ಬಳಿ ಸಾರುವ ಕರುವಿನಂತೆ, ನಾಗತಿಯ ಬಳಿ ಸಾರಿ ಕುಳಿತು ಹೇಳಿದ.

" ಅಬ್ಬಾ! ನನ್ನನ್ನು ಎಷ್ಟು ಬಳಲಿಸಿಬಿಟ್ಟೆ ಚಿಕಮ್ಮ. ನನ್ನನ್ನೇನು ತೀರಾ ಬುದ್ಧಿಹೀನನೆಂದು ತಿಳಿದೆಯಾ ಈ ಕವಡೆಯ ಬೆಲೆಯ ರಾಜ್ಯಕ್ಕೆ ನಿನ್ನನ್ನು ಕಳೆದುಕೊಳ್ಳಲು. ಈ ರಾಜ್ಯ ಯಾರಿಗೆ ಬೇಕೋ ಅವರಿಗೆ ಕೊಡು. ನಿನ್ನ ಪಾದ ಮಾತ್ರ ಸದಾ ನನ್ನ ಶಿರದ ಮೇಲೆ ಇರಲಿ."

ಆ ಮಾತು ಕೇಳುತ್ತಿದ್ದ ಹಾಗೇ ನಾಗತಿಯ ಕಣ್ಣುಗಳಿಂದ ಗಜ್ಜು

ಗವ ಗಾತ್ರದ ಕಂಬನಿಯುರುಳಿ ನೆಲವನ್ನು ತೋಯಿಸಿತು. ಪರಕೀಯರು ಎದುರಿಗಿರುವರು, ಲಿಂಗಣ್ಣನಾಯಕ ಮಗನಾದರೂ ವಯಸ್ಕ ಎಂಬುದನ್ನು ಮರೆತು, ತಟಕ್ಕನೆ ಆತನನ್ನು ಬಿಗಿತಪ್ಪಿ "ಲಿಂಗಣ್ಣಾ.... ಲಿಂಗಣ್ಣಾ...." ಎಂದು ಬಿಕ್ಕಳಿಸಿ ಅಳಲಾರಂಭಿಸಿದಳು. ಲಿಂಗಣ್ಣ ನಾಯಕನೂ ತಾಯ ತೋಳತೆಕ್ಕೆಯಲಿ ಮೈಮರೆತ. ಕಾಲ ದೇಶ ಸ್ಥಿತಿಗಳನ್ನು ಗೆದ್ದು ಮರೆಯಿತು ಮಾತೃತ್ವ.

ಕಣ್ಣೆದುರೇ ನಡೆಯುತ್ತಿರುವ ಭಯಂಕರ ಬಲಿದಾನವೊಂದನ್ನು ನೋಡಲಾದವರಂತೆ, ತೋಳಿನಿಂದ ಕಣ್ಣನ್ನು ಮುಚ್ಚಿಕೊಂಡು ಮೌನವಾಗಿ ಕುಳಿತಿದ್ದರು ಭುವನಪ್ಪನವರು. ತನ್ನ ಕೈಯಿಂದಲೇ ಅನಿವಾರ್ಯವಾಗಿ ಕೊಲೆಯೊಂದು ನಡೆದ ಸಾಧುಜೀವ ಆರ್ತಸ್ವರದಿಂದ ದೇವನ ಕ್ಷಮಾಪಣೆಯನ್ನು ಕೇಳುವಂತೆ, ಅವರ ಹೃದಯ ಚೀರುತ್ತಿತ್ತು. ಬಿರುಗಾಳಿ ಕಡೆವ ಕಡಲಲೆಗಳಂತೆ ಭಾವದ ಉಕ್ಕಿನಿಂದ ಗದ್ಗದಿಸುವ ಸ್ವರವನ್ನು ಎಳೆದು ಹಿಡಿಯುತ್ತಾ ಹೇಳಿದರು.

"ಧನ್ಯ ಲಿಂಗಣ್ಣನಾಯಕ. ಧನ್ಯ!"

ಆ ಮಾತು ತನ್ನ ಕಿವಿಗೆ ಬೀಳದವನಂತೆ, ಅವರು ಅಲ್ಲಿರುವುದೂ ಅರಿವಿಲ್ಲದವನಂತೆ ನಾಗತಿಯನ್ನು ಕೇಳಿದ ಲಿಂಗಣ್ಣನಾಯಕ—

"ಇಷ್ಟು ಸಣ್ಣ ಮಾತು ಹೇಳಲು ನೀನು ಇಷ್ಟು ತಾಪಪಡಬೇಕೇ ಚಿಕ್ಕಮ್ಮ. ಕಾಸಿನ ಬೆಲೆಯ ಮಾತಿಗಾಗಿ ನಿನ್ನ ಕಣ್ಣಿಂದ ನೀರು ಸುರಿಯಬೇಕೆ? ಅದು ಆಗದು. ಹೇಳು, ಕಂಬನಿಯ ಮೋಡ ಕಟ್ಟಿದ ನಿನ್ನ ಕಣ್ಣಲ್ಲಿ ನಗೆಬಿಸಿಲು ಮೂಡಲು ನಾನೇನು ಮಾಡಬೇಕು?"

ನಾಗತಿ ಅವನ ಮಾತಿಗೆ ಉತ್ತರಕೊಡದೆ. ವಿಸ್ಮಯಮೂಕನಾಗಿ ಕುಳಿತಿದ್ದ ಹದಿನಾರು ವರ್ಷದ ಓಬಣ್ಣನಾಯಕನನ್ನು ಬಳಿಗೆಳೆದುಕೊಂಡು ಲಿಂಗಣ್ಣನಾಯಕನ ಕಾಲಮೇಲೆ ಬಾಗಿಸಿ ಹೇಳಿದಳು.

"ಇಂದಿನಿಂದ ಇವನು ನಿನ್ನ ಸೋದರ. ಇವನ ತಲೆ ಕಾಯುತ್ತೇನೆಂದು ವಚನ ಕೊಡು ಮಗೂ."

"ಅವನ ತಲೆಗೆ ನನ್ನ ತಲೆ ಕಾವಲು ತಾಯಿ. ಆ ಭೀತಿ ಬೇಡ ಬಿಡು."

—ಎಂದು ನುಡಿದ ಲಿಂಗಣ್ಣನಾಯಕ, ಎದ್ದುನಿಂತು, ಸೊಂಟದಲ್ಲಿದ್ದ ಕತ್ತಿಯನ್ನು ಹಿರಿದು ಓಬಣ್ಣನಾಯಕನ ಪಾದದ ಮೇಲಿಟ್ಟು ಹೇಳಿದ,

"ಇಂದಿನಿಂದ ಓಬಣ್ಣ ನನ್ನ ಸೊದರನಷ್ಟೇ ಅಲ್ಲ, ನನ್ನ ದೊರೆ. ಜಗತ್ತೇ ಇದಿರಾದರೂ ಈ ದುರ್ಗದ ರಾಜ್ಯ ಅವನದೇ."

"ಲಿಂಗಣ್ಣ....ನಿನ್ನ ಹಿರಿಮೆಗೆ ಏನು ಮೆಚ್ಚುಗೊಡಲಿ ಹೇಳು."

—ಅಭಿಮಾನ ತುಂಬಿದ ಧ್ವನಿಯಲ್ಲಿ ಕೇಳಿದಳು ನಾಗತಿ.

"ಕೇಳಿದ ಮೆಚ್ಚುಕೊಡುತ್ತೀಯ ?"

"ಕೇಳು, ಬೇಕಾದುದದನ್ನು ಕೇಳು."

"ಹಾಗಾದರೆ ಇಂದು ನಾನು ಹೊತ್ತ ಹರಕೆಯನ್ನು ತೀರಿಸುವ ಬಲ ನನ್ನ ತೋಳುಗಳಿಗೆ ಬರಲೆಂದು ಹರಸು. ಅದನ್ನೇ ನಾನು ಬೇಡುವುದು. ಅದೇ ನಾನು ಬಯಸುವ ಪರಮಸೌಭಾಗ್ಯ."

ಎಂದು ಹೇಳಿ, ಲಿಂಗಣ್ಣನಾಯಕ, ನಾಗತಿಯ ಕಾಲುಗಳ ಮೇಲೆ ಹಣೆಯನ್ನಿಟ್ಟ. ಆ ಮಾತಿಗೆ ಮರುಮಾತಿನ ಆಶೀರ್ವಾದ ಹೇಳಲು ನಾಗತಿಯ ನಾಲಗೆ ನಿರಾಕರಿಸಿತು. ಆದರೆ ನಾಲಗೆ ನುಡಿಯಲು ಅಶಕ್ತವಾದ ಕೋಟಿಮಾತುಗಳನ್ನು ಮಮತೆಯ ಅಮೃತ ಸೇಚನೆಯಿಂದ ಮೃದುವಾದ ನಾಗತಿಯ ನೋಟ ಹೇಳಿತು.

೮

ಗತಿಸಿದ ನಾಯಕರ ಅಂತ್ಯಕ್ರೀಯೆಗಳೆಲ್ಲವೂ ದ್ವಾದಶಿಯ ವೇಳೆಗೆ ಮುಕ್ತಾಯವಾಯಿತು. ಏಕಾದಶಿಯಂದೇ ಹನ್ನೆರಡನೆಯ ದಿನ. ಸೂತಕ ಸ್ನಾನ, ಅಂತ್ಯದಿನದ ಕರ್ಮಕಲಾಪಗಳು ಮುಗಿದು ಶುಭ ಸ್ವೀಕಾರ, ದಾನಧರ್ಮಗಳು ಆರಂಭವಾಯಿತು. ಈ ಕರ್ಮಗಳಿಗಾಗಿ ನಾಯಕರ ನಂಟರಿಷ್ಟರು, ಹಿತೈಷಿಗಳು, ದುರ್ಗದ ಅಧಿಕಾರಿಗಳು ಎಲ್ಲರೂ ಕಲೆತಂತೆಯೇ ಆ ದಿನ ಆರಂಭವಾದ ದಾನಗಳ ಆಸೆಗಾಗಿ, ಬೆಲ್ಲಕ್ಕೆ ಮುತ್ತುವ ನೊಣದಂತೆ ಮೂಲೆ ಮೂಲೆಗಳಿಂದಲೂ ಜನ ದುರ್ಗಕ್ಕೆ ಮಗುಚಿತು.

ನಾಗತಿಯ ಅಪ್ಪಣೆಯಂತೆ, ಏಕಾದಶಿಯಿಂದ ಅಮಾವಾಸ್ಯೆಯ

ಕೊನೆಯ ವರೆಗೆ ಒಂದೇ ಸಮನೆ, ಬಿಡುವಿಲ್ಲದೆ ದಾನಧರ್ಮಗಳು ನಡೆದುವು. ನಾಯಕರ ಆತ್ಮತೃಪ್ತ್ಯರ್ಥವಾಗಿ ದುರ್ಗದ ದೇವಾಲಯಗಳಲ್ಲೆಲ್ಲಾ ಅಭಿಷೇಕ, ಆರಾಧನೆ, ಶಾಂತಿಯ ಹೋಮಗಳು, ನಡೆದು, ಆ ಮಂತ್ರ ಘೋಷದಿಂದ, ಆ ಹನ್ನೆರಡು ದಿನಕಾಲ ದುರ್ಗವನ್ನು ಕವಿದಿದ್ದ ನಾಯಕರ ಮರಣದ ರಾಹುಕಳೆ ತೊಲಗಿ ಹೋಗಿ, ಪುರ್ನಜನ್ಮ ಪಡೆದಂತೆ ದುರ್ಗ ರಂಜಿಸಿತು.

ದಾನಧರ್ಮಗಳ ಬಯಕೆಯಿಂದ ಜನ ಬಂದಿದ್ದಂತೆಯೇ, ಆ ಕಾಲ ದಲ್ಲಿ ನಡೆದ ದೇವತೆಗಳ ವಿಶೇಷ ಉತ್ಸವಗಳನ್ನು ನೊಡಬೇಕೆಂದೂ ಜನ ಕಿಕ್ಕಿರಿದಿತ್ತು. ಒಟ್ಟೊಟ್ಟಿಗೆ ನಡೆದ ಸಂಪಿಗೆ ಸಿದ್ದೇಶ್ವರನ ನವಿ ಲುಯ್ಯಾಲೆ ಉತ್ಸವ, ಭೂತನಾಥೇಶ್ವರನ ವಿಮಾನೋತ್ಸವ, ಗೋಪಾಲ ಸ್ವಾಮಿಯ ತೆಪ್ಪೋತ್ಸವಗಳ ವೈಭವ ನೆರೆದ ಜನರ ಪಾಲಿಗೆ ಮಗುವಿನ ಮುಂದೆ ಆಟದ ಗೊಂಬೆಗಳ ಸಂತೆಯನ್ನೇ ಹರವಿದಂತಿತ್ತು. ದುರ್ಗದ ಮೇಲಿದ್ದ ಏಕನಾಥೇಶ್ವರಿಯೇ ಅಲ್ಲದೆ, ದುರ್ಗದ ಕೆಳಗೆ ಇದ್ದ ಉತ್ಸ ವಾಂಬ, ಬರಗೇರಮ್ಮ, ತಿಪ್ಪಲಗಟ್ಟಮ್ಮ ಮೊದಲಾದ ದುರ್ಗಾಭಿಮಾನಿ ದೇವತೆಗಳೂ ಅರಮನೆಯ ಮುಂದಿನ ಶೃಂಗಾರವನಕ್ಕೆ ದಯಮಾಡಿಸಿ, ಅರಮನೆಯವರಿಂದ ವಿಶೇಷ ವಸಂತೋತ್ಸವದ ಪೂಜೆ ಪಡೆದು ತೃಪ್ತ ವಾದುವು. ಆ ದೇವತೆಗಳ ಆನಂದಾರ್ಥವಾಗಿ ಬಾರಿಸಲ್ಪಟ್ಟ ಡೋಲು, ತಮಟೆ, ಉರುಮೆ, ಕಹಳೆ, ಕೊಂಬುಗಳ ನಾದ ಗವಿಗವಿಯಿಂದಲೂ, ಕೋಡುಗಲ್ಲುಗಳಿಂದಲೂ ಮಾರ್ದನಿಸಿ ಮೊಳಗಿತು.

ಆ ಐದು ದಿನಗಳ ಕಾಲ ಯಾರಿಗೂ ಹಗಲು ರಾತ್ರಿಯ ಪರವೆ ಇರ ಲಿಲ್ಲ. ನೋಡುವ ಕಣ್ಣಿಗಾಗಲಿ, ದಾನ ಸ್ವಿಕಾರ ಮಾಡುವ ಕೈಗಳಿ ಗಾಗಲಿ ಬಿಡುವಿರಲಿಲ್ಲ. ಮುಕ್ತಿದ್ವಾರವಾದ ಅರಮನೆಯ ಭಂಡಾರ ಮನೆ ಮನೆಯ ಬಾಗಿಲಿಗೂ ಹರಿದು, ಎಲ್ಲರಿಗೂ ತೃಪ್ತಿಯನ್ನು ನೀಡಿತು. ಬಟ್ಟೆಬರೆ, ಮಂಗಲದ್ರವ್ಯಗಳನ್ನು ಹೊತ್ತ ಬಂಡಿಗಳು ನಗರದ ಬೀದಿಗಳ ಲ್ಲೆಲ್ಲಾ ಸಂಚರಿಸಿ, ಅರಮನೆಯ ದಾನವನ್ನು ಬ್ರಾಹ್ಮಣ ಸುವಾಸಿನಿಯರಿಗೆ ಗುರು ಹಿರಿಯರಿಗೆ ಹಂಚಿ ಬರಿದಿತು. ದೇವಾಲಯ, ಮಠಗಳಿಗೆ ನಾಯ ಕರ ಮರಣದಿನವಂದು ನಡಸುವ ವಿಶೇಷೋತ್ಸವಗಳ ಸಲುವಾಗಿ ಜಮೀನು

ಗಳು ಧರ್ಮಾರ್ಥವಾಗಿ ಬಿಡಲ್ಪಟ್ಟುವು. ಕ್ಷೀರಾಭಿಷೇಕಕ್ಕಾಗಿ ಹಸುಗಳ ದಾನ ಬಂತು. ಎಲ್ಲವೂ ಸಾಂಗವಾಗಿ, ಯುಕ್ತವಾಗಿ ನಡೆದು, ಇಂಥದು ನಡೆಯಬೇಕಾಗಿತ್ತು. ಇಂಥದು ನಡೆಯಲಿಲ್ಲ ಎಂದು ಹೇಳಲು ಯಾವ ನಾಲಗೆಗೂ ಶಕ್ತಿ ಬರಲಿಲ್ಲ.

ಸತತವಾಗಿ ನಡೆದ ಊಟ ಉಪಚಾರ, ದಾನಧರ್ಮ, ಉತ್ಸವ ವೈಭವಗಳಿಂದ ಪಂಚೇಂದ್ರಿಯಗಳಿಗೂ ಸಮಾರಾಧನೆಯಾಗಿ ತೃಪ್ತರಾದ ಜನ, ಶುಭಸ್ವೀಕಾರ ಮಾಡಿದ ಅರಮನೆಯಿಂದ, ಶುಭವಾರ್ತೆಯೊಂದನ್ನು ಬಯಸಿ, ಅರಮನೆಯತ್ತ ನೋಡಿತು. ಎಲ್ಲರ ನೋಟದಲ್ಲಿದ್ದ ಭಾವನೆ, ಹೃದಯದಲ್ಲಿದ್ದ ಬಯಕೆ ಒಂದೇ—' ಮುಂದೆ ನಮ್ಮನ್ನಾಳುವ ನಾಯಕರು ಯಾರು ? '–ನಾಗತಿಯನ್ನು, ದೇಶಕ್ಕೆ ದೇಶವೇ ಒಕ್ಕೊರಲಿನಲ್ಲಿ ಕೇಳಿತು ಈ ಪ್ರಶ್ನೆಯನ್ನು.

ದೇಶದ ಈ ಪ್ರಶ್ನೆಯನ್ನು ಪ್ರತಿಧ್ವನಿಸಿದಂತೆ ಮಾಘ ಶುದ್ಧ ಪಾಡ್ಯದ ದಿನ ಅರಮನೆಯ ಓಲಗಸಾಲೆಯಲ್ಲಿ ನೆರೆದ ಸಭೆ ನಾಗತಿಯನ್ನು ಇದೇ ಮಾತು ಕೇಳಿತು.

ಮಧ್ಯಾಹ್ನದ ಊಟ, ವಿಶ್ರಾಂತಿಗಳು ಮುಗಿದ ಬಳಿಕ, ನಾಗತಿಯ ಅಪ್ಪಣೆಯಂತೆ, ಅರಮನೆಯ ಮೇಲಿನುಪ್ಪರಿಗೆಯ ಲಕ್ಷ್ಮೀವಿಲಾಸ ತೊಟ್ಟಿಯಲ್ಲಿ ಸಭೆ ಕರೆಯಲ್ಪಟ್ಟಿತು. ಅಂದಿನ ಓಲಗ ಮಾಮೂಲು ಸಭೆಯಾಗದೆ, ವಿಶೇಷ ರೀತಿಯ ಮಂತ್ರಾಲೋಚನಾಸಭೆಯಾಗಿದ್ದುದರಿಂದ ಅತ್ಯಂತ ಆಪ್ತರೂ ಮುಖ್ಯಸ್ಥರೂ ಮಾತ್ರವೇ ಸಭೆಗೆ ಆಹ್ವಾನಿಸಲ್ಪಟ್ಟಿದ್ದರು.

ಬಿಳಿಜೋಡು, ಮಸ್ಕೋಡು, ಹಿರಿಯೂರು, ಹೊಳಲಕೆರೆ ಮೊದಲಾದ ಬೇರೆ ಬೇರೆ ಊರುಗಳಲ್ಲಿದ್ದ ರಾಜಮನೆತನದ ನಂಟರಲ್ಲಿ ಹಿರಿಯರಾದವರು, ಸಂಸ್ಥಾನದ ಸಚಿವರು, ದಳವಾಯಿಗಳು. ಮೊದಲಾದ ಆಹ್ವಾನಿತರು ಒಬ್ಬೊಬ್ಬರಾಗಿ ಬಂದು, ತಮಗೆ ಮೀಸಲಾದ ಸ್ಥಾನಗಳಲ್ಲಿ ಕುಳಿತರು. ಬರಬೇಕಾದವರೆಲ್ಲರೂ ಬಂದು ಕುಳಿತಾದ ಮೇಲೆ ಅವಗುಂಠನವತಿಯಾದ ಓಬವ್ವನಾಗತಿ ಒಂದು ಪಕ್ಕದಲ್ಲಿ ಲಿಂಗಣ್ಣನಾಯಕ ಇನ್ನೊಂದು ಪಕ್ಕದಲ್ಲಿ ಓಬಣ್ಣನಾಯಕರನ್ನು ಕರೆದುಕೊಂಡು ಸಭಾ

ಮಂದಿರವನ್ನು ಪ್ರವೇಶಿಸಿ, ನಾಯಕರ ಭದ್ರಪೀಠದ ಇದಿರು ಅವಳಿಗೆಂದು ಸಿದ್ಧಪಡಿಸಿದ ಭವ್ಯಾಸನದಲ್ಲಿ ಮಂಡಿಸಿದಳು.

ಆಕೆ ಸಭಾಮಂಟಪವನ್ನು ಪ್ರವೇಶಿಸಿದ ಕೂಡಲೇ ಗೌರವಾರ್ಥವಾಗಿ ಎದ್ದುನಿಂತ ಸಭಿಕರೆಲ್ಲರೂ ಕುಳಿತ ಮೇಲೆ ವಂಧಿ ಮಾಗಧರಿಂದ ಪರಾಕು ಹೇಳಲ್ಪಟ್ಟು, ಬಳಿಕ ಸಭೆಯಲ್ಲಿ ನಿಶ್ಶಬ್ದತೆ ನೆಲಸಿತು. ತರುವಾಯ, ಮಂತ್ರಿಮಂಡಲದ ಹಿರಿಯರಾದ ಭುವನಪ್ಪನವರು ಎದ್ದು ನಿಂತು ಸಿಂಹಾಸನಕ್ಕೆ ಮೂರುಬಾರಿ ಮುಜುರೆಮಾಡಿ ಹೇಳಿದರು.

" ಇಂದು ಚಿತ್ರದುರ್ಗ ಸಂಸ್ಥಾನದ ಭವಿಷ್ಯಕ್ಕೆ ಸಂಬಂಧಿಸಿದ ಬಹು ಮುಖ್ಯವಾದ ಸಂಗತಿಯೊಂದನ್ನು ಚರ್ಚಿಸುವ ಉದ್ದೇಶದಿಂದ, ಇಂದು ರಾಜ್ಯದ ರಕ್ಷಣಾ ಭಾರವನ್ನು ಹೊತ್ತಿರುವ ಓಬವ್ವನಾಗತಿಯರು ತಮ್ಮೆಲ್ಲರನ್ನೂ ಕರೆಸಿದ್ದಾರೆ. ಇಲ್ಲಿ ದುರ್ಗದ ಹಿತೈಷಿಗಳು, ಹಿರಿಯರು, ಆಪ್ತೇಷ್ಟರು, ರಕ್ಷಣಾ ಭಾರವನ್ನು ಹೊತ್ತ ವೀರಾಗ್ರಣಿಗಳು ಎಲ್ಲರೂ ಕಲೆತಿದೀರ. ಈ ದುರ್ಗದ ರಾಜ್ಯಕ್ಕೆ ನೀವು ಅಸ್ತಿಭಾರ. ಇದು ಅಜೇಯವಾಗಿ, ಪ್ರಖ್ಯಾತವಾಗಿರುವುದಕ್ಕೆ ಕಾರಣ, ಈ ಸಿಂಹಾಸನದ ಬಗ್ಗೆ ನೀವು ತಳೆದಿರುವ ಅಸೀಮ ನಿಷ್ಠೆ. ಇದುವರೆಗೂ ಅದು ದುರ್ಗದ ಕೀರ್ತಿಯನ್ನು ಕಾಯ್ದುಕೊಂಡು ಬಂದಿರುವಂತೆ ಮುಂದೆಯೂ ಕಾಯಬೇಕಾಗಿದೆ. ಹಿಂದಿಗಿಂತಲೂ ಹೆಚ್ಚಾಗಿ ಇಂದು ನಿಮ್ಮ ನಿಷ್ಠೆ, ಪರಾಕ್ರಮ, ಶ್ರದ್ಧೆಗಳ ಅಗತ್ಯ ಈ ಸಿಂಹಾಸನಕ್ಕಿದೆ. ಎಂತಲೇ ನಾಗತಿಯವರ ಅಪ್ಪಣೆಯಂತೆ, ಅವರು ತಮ್ಮ ಮುಂದೆ ಮಂಡಿಸಬೇಕೆಂದು ಅಪ್ಪಣೆಕೊಡಿಸಿರುವ ವಿಚಾರವನ್ನು ತಮ್ಮ ಮುಂದೆ ಇಡಲಿದ್ದೇನೆ. ಆ ವಿಷಯವನ್ನು ತಾವುಗಳೆಲ್ಲರೂ ಯಾವುದೇ ರಾಗಮೋಹಗಳಿಗೂ, ಕೋಪತಾಪಗಳಿಗೂ, ವಶರಾಗದೆ ಪರಾಮರ್ಶಿಸಿ, ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂಬುದೇ ನಾಗತಿಯರ ಉದ್ದೇಶ. "

ಅಷ್ಟೇ ಹೇಳಿ, ಅಷ್ಟು ಮಾತನಾಡಿದುದರ ಆಯಾಸಕ್ಕೋ ಎಂಬಂತೆ ಮಾತನ್ನು ಒಂದು ಗಳಿಗೆ ನಿಲ್ಲಿಸಿದರು. ಅವರ ಮಾತನ್ನು ಸಭೆ ಉಸಿರು ಬಿಗಿಹಿಡಿದು ಕೇಳುತ್ತಿದ್ದರೂ, ಅದರ ಪರಿಣಾಮ ಒಬ್ಬೊಬ್ಬರ ಮುಖದಲ್ಲಿ ಒಂದೊಂದು ಬಗೆಯಾಗಿ ಚಿತ್ರಿತವಾಗಿತ್ತು. ಸಭೆಯನ್ನು ವ್ಯಾಪಿಸಿದ

ಮೌನದಲ್ಲೂ ಏನೋ ಒಂದು ಬಗೆಯ ಆವೇಗವಿದ್ದಂತಿದ್ದು, ಸಭಾಭವನದ ಇಕ್ಕೆಲದಲ್ಲಿ, ಚಾವಣಿಯನ್ನು ಹೊತ್ತುನಿಂತ ಉನ್ನತಸ್ತಂಭಗಳೂ, ಗೋಡೆಗಳ ಮೇಲೆ ಬಗೆಬಗೆಯ ಚಿತ್ರಗಳೂ, ಭುವನಪ್ಪನವರು ಮುಂದೇನು ಮಾತನಾಡುವರೋ, ಕೇಳಬೇಕು, ಎಂಬ ಆಸಕ್ತಿಯಿಂದ ಉಸಿರು ಹೊಯ್ಯದೆ ಸದ್ದಡಗಿ ಕೇಳುತ್ತಿದ್ದಂತೆ ತೋರಿತು.

ತಾವು ಆಡಿದ ಮಾತು ನೆರೆದವರ ಹೃದಯದಾಳಕ್ಕಿಳಿದು ನೆಲಸಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವವರಂತೆ, ಭುವನಪ್ಪನವರು ಮತ್ತೊಮ್ಮೆ ಸಭಿಕರೆಲ್ಲರ ಮೊಗವನ್ನು ದಿಟ್ಟಿಸಿ ನೋಡಿ, ಮಾತನ್ನು ಮುಂದುವರಿಸಿದರು.

“ ಇಂದು ನಮ್ಮೆಲ್ಲರ ದುರ್ದೈವದಿಂದ, ಬರಬಾರದಂತಹ ಪರಿಸ್ಥಿತಿಯೊಂದು ಪ್ರಾಪ್ತವಾಗಿದೆ. ನೀವು ಕಾಣುವಂತೆಯೇ, ಶತ್ರುಹೃದಯ ಕಂಪಾಯಮಾನವಾಗಿ ಕಂಗೊಳಿಸುವ ನಾಯಕರ ಭವ್ಯಮೂರ್ತಿಯಿಂದ ರಾರಾಜಿಸಬೇಕಾದ ಸಿಂಹಾಸನ ತೆರವಾಗಿವೆ. ಈ ದುರ್ಗದ ಸಿಂಹಾಸನದಂತೆಯೇ ನಮ್ಮ ಹೃದಯ ಸಿಂಹಾಸನದ ಮೇಲೂ ವಿರಾಜಿಸುತ್ತಿದ್ದ ಮದಕರಿನಾಯಕರ ದೇಹ, ನಮ್ಮನ್ನು ತೊರೆದು ಹೋಗಿ ಇಂದಿಗೆ ಹನ್ನೆರಡು ದಿನಗಳು ಸಂದು, ದುರ್ಗವನ್ನು ದುಃಖದ ಕಾರ್ಗತ್ತಲು ಕವಿದಿದೆ. ಅಂತೇ ಮುಂದೆ ಈ ಸಿಂಹಾಸನಕ್ಕೆ ಅಧಿಕಾರಿಗಳು ಯಾರು ಎಂಬ ಪ್ರಶ್ನೆಯೂ ನಮ್ಮನ್ನು ಕವಿದಿದೆ. ನಾಯಕರನಂತರ ಪಟ್ಟಕ್ಕೆ ಬರಲು ಅವರ ಹೊಟ್ಟೆಯ ಮಕ್ಕಳಿದ್ದರೆ, ಇಂದು ಈ ಸಮಸ್ಯೆ ನಮ್ಮನ್ನು ಬಾಧಿಸಬೇಕಾಗಿರಲಿಲ್ಲ. ಆದರೆ ಭೂತನಾಥೇಶ್ವರನ ಇಚ್ಛೆ-ಈ ದಿಕ್ಕಿನಲ್ಲಿ ನಾಯಕರ ಹಾರೈಕೆ ಸಫಲವಾಗಲಿಲ್ಲ. ಉತ್ಸವಾಂಬೆಯ ‘ ಇದಿರೆತ್ತಿ ’ ಪೂಜೆಮಾಡಿದುದೂ ಫಲಕಾರಿಯಾಗಲಿಲ್ಲ. ಅಲ್ಲದೆ ಅನಿರೀಕ್ಷಿತನಾಗಿ ಸಾವು ಬಂದುದರಿಂದ ನಾಯಕರು ತಮ್ಮನಂತರ ಈ ಸಿಂಹಾಸನಕ್ಕೆ ಯಾರು ವಾರಸುದಾರರು ಎಂದು ಬಾಯಿಬಿಟ್ಟು ಹೇಳಲೂ ಅವಕಾಶವಾಗಲಿಲ್ಲ. ಆದರೆ ಅವರ ಹೃದಯಾಂತರಾಳದಲ್ಲಿ ಏನು ಇಚ್ಛೆ ಇತ್ತೆಂಬುದು ಹಲವು ಕೆಲವರಿಗಾದರೂ ತಿಳಿದಿದೆ. ಆದರೆ ನೇರವಾಗಿ ಅವರಂತೆ ನಡೆಯಲು ಧರ್ಮಸಂಕಟವೊಂದು ಇದಿರಾಗಿದೆ.

“ ತಮಗೆ ಪ್ರಾಪ್ತವಾದ ಈ ಸಿಂಹಾಸನಾಧಿಕಾರವನ್ನು ತಮಗೆ

ಯಾರಿಗೆ ಬೇಕೋ ಅವರಿಗೆ ಕೊಡುವ ಅಧಿಕಾರ ನಾಯಕರಿಗಿತ್ತು. ಆದರೆ ಅವರಿಗೆ ತಮ್ಮನಂತರ ಯಾರು ವಾರಸುದಾರರಾಗಬೇಕು ಎಂಬ ಬಗ್ಗೆ ಸ್ಪಷ್ಟಾಭಿಪ್ರಾಯವಿದ್ದರೂ, ದತ್ತು ಸ್ವೀಕಾರದ ಶಾಸ್ತ್ರಮುಗಿಸಿ ನಮ್ಮ ದಾರಿಯನ್ನು ಸುಗಮಮಾಡಲಿಲ್ಲ. ಈಗ ಅವರ ಪ್ರತಿನಿಧಿಯಾಗಿ ಉಳಿದಿರುವ ಮಾತೋ ಶ್ರೀ ನಾಗತಿಯವರು ಆ ಕಾರ್ಯಮಾಡಬೇಕು.

"ಇಲ್ಲವೇ ದಿವಂಗತರಾದ ನಾಯಕರ ಅಣ್ಣನ ಹಿರಿಯ ಮಕ್ಕಳು ಲಿಂಗಣ್ಣನಾಯಕರು ಸಿಂಹಾಸನಾಧಿಕಾರಿಗಳಾಗಬೇಕು. ವಿಧಿವಶದಿಂದ ಸಿಂಹಾಸನಾಧಿಕಾರಿಗಳಾಗಿದ್ದ ಅವರ ತಂದೆ ಸರ್ಜೇನಾಯಕರು ಅಕಾಲದಲ್ಲಿ ಮೃತ್ಯುವಶರಾಗದಿದ್ದರೆ, ಇಂದು ಸಿಂಹಾಸನ ಬೇರಾವ ಬಗೆಯ ಮಾತಿಗೂ ಅವಕಾಶವಿಲ್ಲದಂತೆ, ಅವರದೇ ಆಗುತ್ತಿತ್ತು. ಈಗ ಹಾಗಾಗಲಿ, ಎನ್ನುವ ಭಾವನೆಯೂ ಕೆಲವರು ದುರ್ಗದ ಅಭಿಮಾನಿಗಳಲ್ಲಿದೆ. ಮದಕರಿನಾಯಕರ ಕಾರ್ಯ ರೂಪಕ್ಕೆ ಬರದ ಬಯಕೆ ಕಾರ್ಯಗತವಾಗಿ ಅವರ ಆತ್ಮಕ್ಕೆ ಶಾಂತಿಯಾಗಲಿ, ಎಂಬ ಭಾವನೆಯೂ ಕೆಲವರಿಗಿದೆ.

"ಹೀಗೆ ಇಂದು ಈ ಸಿಂಹಾಸನಕ್ಕೆ ಯಾರು ಅಧಿಕಾರಿಗಳು ಎಂಬ ಬಗ್ಗೆ ಇಬ್ಬಣವಾಗಿದೆ. ಆದರೆ ಈ ಇಬ್ಬಣ ಅಗತ್ಯವಲ್ಲ, ಯಾರಿಗೂ ಇಷ್ಟವಾದುದಲ್ಲ. ಇಂದಿನವರೆಗೆ, ಎಲ್ಲ ಕಾರ್ಯಗಳನ್ನು ಒಮ್ಮತಿ—ಸಮ್ಮತಿಯಿಂದ ನಡಸಿಕೊಂಡು ಬಂದಿರುವುದು ದುರ್ಗದ ರಾಜಕಾರಣದ ಸಂಪ್ರದಾಯ. ಈಗಲೂ ಹೀಗಾಗಬೇಕು, ಎಲ್ಲೆಡೆಯಲ್ಲೂ ಶಾಂತಿ ಸೌಹಾರ್ದಗಳು ನೆಲಸಿ, ಹಾಲು–ಸಕ್ಕರೆಯಂಥ ಮಧುರ ವಾತಾವರಣದಲ್ಲಿ ಹೊಸ ದೊರೆಗಳ ಪಟ್ಟಾಭಿಷೇಕವಾಗಬೇಕು ಎಂಬುದೇ ನಾಗತಿಯವರ ಅಪೇಕ್ಷೆ. ಅದು ಸಾರ್ವತ್ರಿಕವಾದ ಅಪೇಕ್ಷೆಯೂ ಅಹುದು. ಇಂದು ಇಲ್ಲಿ ದುರ್ಗದ ಹಿತೈಷಿಗಳೆಲ್ಲಾ ನೆರೆದಿದೀರ. ನೀವೆಲ್ಲರೂ ವಿಚಾರಮಾಡಿ, ನಿಮ್ಮ ನಿಷ್ಪಕ್ಷಪಾತವಾದ ಅಭಿಪ್ರಾಯದ ಬೆಳಕನ್ನು ನಾಗತಿಯರ ಕರ್ತವ್ಯಪಥದ ಮೇಲೆ ಚೆಲ್ಲಬೇಕು.

"ಹಾಗೇ ಈ ಸಮಸ್ಯೆಯ ತೀರ್ಮಾನ ಮಾಡುವುದನ್ನು ಹೆಚ್ಚು ದಿನ ಮುಂದೆ ಹಾಕುವುದೂ ಸಾಧ್ಯವಿಲ್ಲ; ಅದು ಅಪೇಕ್ಷಣೀಯವಾದುದೂ ಅಲ್ಲ. ಬರಿದಾದ ಸಿಂಹಾಸನ ಒಳಸಂಚುಗಳ ತಾಯಿ, ಎಂಬುದು ರಾಜ

ಕಾರಣದಲ್ಲಿ ಅರಿತು ನುರಿತ ನಿಮ್ಮಂಥ ಜ್ಞಾನ ವೃದ್ಧರಿಗೆ ನಾನು ಹೇಳುವುದು ಅನಗತ್ಯ, ನಾಯಕರ ಮರಣದ ಮರುದಿನದಿಂದಲೇ ಕೃಷ್ಣಪಕ್ಷದ ಅಶುಭ ದಿನಗಳೂ ಬಂದು ಒದಗದಿದ್ದರೆ, ಈ ಸಮಸ್ಯೆ ತೀರ್ಮಾನವಾಗಿ ಸಿಂಹಾಸನಾರೋಹಣ ನಡೆಯಲು ಇಷ್ಟು ತಡವಾಗುತ್ತಿರಲಿಲ್ಲ. ಆದುದರಿಂದ ಇನ್ನು ವೃಥಾ ಕಾಲಹರಣವಾಗದಂತೆ ಎಚ್ಚರ ವಹಿಸಿ, ಈ ದಿನವೆ ಈ ಸಮಸ್ಯೆಯನ್ನು ಬಗೆಹರಿಸಿ, ಮಾತೋಶ್ರೀ ನಾಗತಿಯರು ಹೊತ್ತ ಭಾರವನ್ನು ಹಗುರಾಗಿಸಬೇಕೆಂದು ಸಭೆಯನ್ನು ಪ್ರಾರ್ಥಿಸುತ್ತೇನೆ.”

ಎಂದು ಹೇಳಿ ಭುವನಪ್ಪನವರು ತಮ್ಮ ಪೀಠದಲ್ಲಿ ಕುಳಿತುಕೊಂಡರು.

ಅವರು ಮಾತು ಮುಗಿಸಿ ಕುಳಿತ ಬಳಿಕ ವ್ಯಾಪಿಸಿದ ಮೌನದಲ್ಲೂ ಏನೋ ಒಂದು ಬಗೆಯ ಬಿಗಿತ ಕಂಡು ಬಂದಿತು. ಅವರಾದ ಬಳಿಕ ಯಾರು ಮಾತನಾದಬೇಕು ಎಂಬ ಬಗ್ಗೆ ಎಲ್ಲರಿಗೂ ಚಿಂತೆಯೇ ಇದ್ದಂತಿತ್ತು. ವೈಯುಕ್ತಿಕವಾಗಿ ಕೇಳಿದ್ದರೆ ಒಬ್ಬೊಬ್ಬರೂ, ಯಾವ ತಡವನ್ನೂ ಮಾಡದೆ ಉತ್ತರ ಹೇಳಬಲ್ಲ ನಿರ್ಧಾರವನ್ನು ಮಾಡಿಕೊಂಡಿದ್ದರೂ, ತುಂಬಿದ ಓಲಗದಲ್ಲಿ, ‘ನನ್ನದು ಇದೇ ಅಭಿಪ್ರಾಯ’ ಎಂದು ತಿಳಿಸಲು ಎಲ್ಲರೂ ಹಿಂಜರಿಯುತ್ತಿರುವಂತಿತ್ತು. ಅವರು ಮಾತನಾಡಲಿ, ಇವರು ಹೇಳಲಿ, ಬಳಿಕ ನಾವು ಮಾತನಾಡೋಣ ಎಂಬ ಭಾವನೆಯೇ ಎಲ್ಲರ ನಾಲಗೆಗೂ ಲಗಾಮು ಹಾಕಿದಂತಿತ್ತು. ಒಬ್ಬೊಬ್ಬರನ್ನು ಒಂದೊಂದು ಬಗೆಯ ಸಂಕೋಚ ಬಿಗಿದಿತ್ತು. ಎಲ್ಲರೂ ಹೀಗೆ ಸುಮ್ಮನೆ ಕುಳಿತರೆ ಸಮಸ್ಯೆ ತೀರ್ಮಾನವಾಗುವುದು ಹೇಗೆ?

ಎಲ್ಲರನ್ನೂ ಕಟ್ಟಿದ ಮೌನಶೃಂಖಲೆಯನ್ನು ಮುರಿದು ನಾಗತಿಯೇ ಮಾತನಾಡಿದಳು—

“ಈ ಸಭೆಯಲ್ಲಿ ನೆರೆದಿರುವ ಎಲ್ಲರಿಗೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿರುವಾಗ, ಯಾರೊಬ್ಬರೂ ಮಾತನಾಡದೇ ಕುಳಿತಿರುವುದು ಸಲ್ಲದು. ಸಂಕೋಚವಿಲ್ಲದೆ, ನಿರ್ಭಯವಾಗಿ ನಿಮ್ಮ ಅಭಿಪ್ರಾಯವನ್ನು ಹೇಳಿ.”

ನಾಗತಿಯ ಮಾತು ಕೇಳಿ ಕೊಂಚ ಧೈರ್ಯಬಂದಂತೆ ಅಬ್ಬಿಗೆರೆ ಮಲ್ಲಣ್ಣ ಹೇಳಿದ—

"ಇದು ಮಹಾಪ್ರಭುಗಳಾದ ನಾಯಕರು ನಿರ್ಧರಿಸಬೇಕಾಗಿದ್ದ ಮಾತು. ಈಗ ಅವರು ಇಲ್ಲ. ಆದರೆ ಅವರ ಸ್ಥಾನದಲ್ಲಿ ನಾಗತಿಯವರು ಇದ್ದಾರೆ. ಮಾತೋಶ್ರೀಯವರು ಮಾಡಿದ ನಿರ್ಧಾರಕ್ಕೆ ತಲೆಬಾಗಿ ನಡೆಯುವವರು ನಾವು. ಆದುದರಿಂದ ಅವರು ಈಗಾಗಲೇ ಹೀಗೆಂದು ನಿರ್ಧಾರಕ್ಕೆ ಬಂದಿದ್ದರೆ ಅಪ್ಪಣೆ ಕೊಡಿಸಬೇಕು, ಅದನ್ನು ನಾವು ತಲೆಯ ಮೇಲೆ ಹೊತ್ತು ನಡಸುತ್ತೇವೆ."

"ನಿಮ್ಮ ಆಶ್ವಾಸನದ ಮಾತುಗಳಿಗೆ, ನೀವು ನಮ್ಮಲ್ಲಿಟ್ಟಿರುವ ನಂಬಿಕೆಗೆ ನಾವು ಕೃತಜ್ಞರಾಗಿದೇವೆ. ಇದು ಯಾರನ್ನು ನಾವು ಮಕ್ಕಳು ಎಂದು ಸ್ವೀಕರಿಸುವ ಪ್ರಶ್ನೆಯಷ್ಟೇ ಆಗಿದ್ದಿದ್ದರೆ ಹೀಗೇ ಸರಿ ಎಂದು ಹೇಳುತ್ತಿದ್ದೆವು. ಆದರೆ ಇಂದು ನಾವು ಯಾರನ್ನು ಮಕ್ಕಳು ಎಂದು ಸ್ವೀಕರಿಸುತ್ತೇವೋ ಅವರಿಗೆ ನಾಳೆ ನೀವೆಲ್ಲರೂ ದೊರೆ ಎಂದು ತಲೆಬಾಗಬೇಕಾಗಿರುವುದರಿಂದ, ಈ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ಯಾರ ಮೇಲೂ ಹೇರುವ ಬಯಕೆ ನಮಗಿಲ್ಲ. ಅಷ್ಟೇ ಅಲ್ಲ—ಸಭೆಯವರು ಹೀಗೇ ಸರಿ ಎಂದು ಹೇಳುವುದಾದರೆ ಅದನ್ನು ಶಿರಸಾವಹಿಸಲು ನಾವೂ ಸಿದ್ಧರಾಗಿದೇವೆ."

—ನಾಗತಿ ಹೇಳಿದಳು.

"ಹಿಂದೆ ನಾವು ಮದಕರಿನಾಯಕರನ್ನು ದೊರೆಗಳನ್ನಾಗಿ ಮಾಡಿದಂದು, ಅವರಿಗೆ, ಅವರ ಸಂತಾನಕ್ಕೇ ಪಟ್ಟಾಧಿಕಾರವಿರಬೇಕೆಂಬ ಮಾತಿಗೆ ಒಪ್ಪಿ ವಚನ ಕೊಟ್ಟಿದ್ದೆವು. ಇದು ಎಲ್ಲರಿಗೂ ಗೊತ್ತು. ಆದ್ದರಿಂದ ಇಂದು ಹಿಂದಾದ ಅನ್ಯಾಯವನ್ನು ಸರಿಪಡಿಸಬೇಕೆಂದು ಹೊರಡುವುದಕ್ಕಿಂತ, ನಾಯಕರ ಮನಸ್ಸಿನಲ್ಲಿ ಏನಿತ್ತೋ ಅದನ್ನು ನಡಸುವುದರಿಂದ ಅವರ ಆತ್ಮಕ್ಕೂ ತೃಪ್ತಿಯಾಗುತ್ತದೆ, ನಮ್ಮ ಆತ್ಮಕ್ಕೂ ತೃಪ್ತಿಯಾಗುತ್ತದೆ. ಆದುದರಿಂದ ಮಾತೋಶ್ರೀ ನಾಗತಿಯವರು, ನಾಯಕರ ಬಯಕೆ ಹೇಗಿತ್ತೋ ಹಾಗೆಯೇ ನಡೆಯಬೇಕೆಂಬುದೇ ನನ್ನ ಅಭಿಪ್ರಾಯ."

—ಎಂದು ಗುರುಕಣ್ಣ ಖಚಿತವಾದ ಧ್ವನಿಯಲ್ಲಿ ಹೇಳಿದ.

"ಇದೇ ಸಭೆಯ ಸಕಲರ ಅಭಿಪ್ರಾಯವಾದರೆ ಆಗಬಹುದು. ಉಳಿ

ದವರೂ ಹೇಳಬೇಕು. ದಳವಾಯಿಗಳೂ ಸುಮ್ಮನಿರದೆ ತಮ್ಮ ಅಭಿಪ್ರಾಯ ತಿಳಿಸಬೇಕು. ಅವರ ನಿಷ್ಠೆಯೇ ದುರ್ಗಕ್ಕೆ ವಜ್ರ ಕವಚ; ಹಾಗಿರುವಾಗ ಅವರು ಸುಮ್ಮನಿರುವುದು ಸಲ್ಲದು. ದೇಸಣ್ಣನವರೇ, ನಿಮ್ಮ ಅಭಿಪ್ರಾಯವನ್ನು ತಿಳಿಸಬೇಕು."

—ಎಂದು ನಾಗತಿ ದಳವಾಯಿಗಳಲ್ಲಿ ಹಿರಿಯನಾದ ದಳವಾಯಿ ದೇಸಣ್ಣನತ್ತ ನೋಡುತ್ತಾ ಕೇಳಿದಳು. ನಾಗತಿಯ ನೋಟ ನೋಕಿದ ಕೂಡಲೇ, ಮಿಂಚು ನೋಕಿದವನಂತೆ ಎದ್ದು ನಿಂತು, ಸಿಂಹಾಸನಕ್ಕೂ, ಸಭೆಗೂ ವಂದಿಸಿ, ದಳವಾಯಿ ದೇಸಣ್ಣ ಹೇಳಿದ—

"ಇದು ಅರಮನೆಯವರು, ಮಂತ್ರಿಮಂಡಲದವರು ನಿರ್ಧರಿಸಬೇಕಾದ ಮಾತು. ಇಂಥ ವಿಷಯಗಳಲ್ಲಿ ದಳವಾಯಿಗಳನ್ನು ಕೇಳುವ ಸಂಪ್ರದಾಯವಿಲ್ಲ. ಆದುದರಿಂದ ಎಂದಿನಂತೆ ಈಗಲೂ ಅರಮನೆಯವರು, ಮಂತ್ರಿಪ್ರಧಾನಿಗಳೇ ಕುಳಿತು ಮಾತನಾಡಿ ನಿರ್ಧರಿಸಬಹುದು. ದೊರೆಯೆಂದು ನೀವು ತೋರಿಸಿದವರಿಗೆ ತಲೆ ಬಾಗಿ ನಡೆಯುವ ಕರ್ತವ್ಯ ನಮ್ಮದು."

ಆತನ ಮಾತಿನಲ್ಲಿ ಅಡಗಿದ್ದ ಅಸಮಾಧಾನದ ಎಳೆ ಎಲ್ಲರಿಗೆ ಅಲ್ಲವಾದರೂ ಕೆಲವರಿಗಾದರೂ ಅರಿವಾಯಿತು. ದೇಸಣ್ಣನ ಮಾತು ಮುಗಿಯುತ್ತಿದ್ದಂತೆಯೇ ದಳವಾಯಿ ಮುದ್ದಣ್ಣ ಎದ್ದು ನಿಂತು ಹೇಳಿದ.—

"ಮಾತೋಶ್ರೀ ನಾಗತಿಯವರೇ ನಮ್ಮ ಅಭಿಪ್ರಾಯ ಕೇಳುತ್ತಿರುವುದರಿಂದ ನಾನೂ ಸ್ವಾತಂತ್ರ್ಯವಹಿಸಿ ಇದ್ದ ಮಾತನ್ನು ಹೇಳಬಯಸುತ್ತೇನೆ. ಖಂಡಿತವಾದಿ ಲೋಕವಿರೋಧಿ ಎಂಬ ಮಾತನ್ನು ಎಲ್ಲರೂ ಬಲ್ಲರು. ಆದರೂ ಇದು ಅಳಿದು ಸುರಿದು ಮಾತನಾಡುವ ಹೊತ್ತಲ್ಲವಾದುದರಿಂದ ಇದ್ದ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ ಅಪ್ಪಣೆಯಾಗಬೇಕು."

"ಇದ್ದ ಮಾತನ್ನು ಹೇಳುವುದಕ್ಕೆಂದೇ ತಮ್ಮನ್ನು ಕರೆಸಿರುವುದರಿಂದ ನಿಸ್ಸಂಕೋಚವಾಗಿ ಹೇಳಿ."

—ಮುದ್ದಣ್ಣನ ಮಾತಿಗೆ ಸಭೆಯ ಹಿರಿಯರಾದ ಭುವನಪ್ಪನವರು ಉತ್ತರಕೊಟ್ಟರು.

"ಹಾಗಾದರೆ ಸರಿ. ದೊಡ್ಡ ದಳವಾಯಿಗಳು ಹೇಳಿದ ಮಾತನ್ನು

ತಾವೆಲ್ಲರೂ ಕೇಳಿದೀರ. ಅವರಾಡಿದ ಮಾತು ಸತ್ಯ. ಇದುವರೆಗೂ ಅರಮನೆಯವರಾಗಲಿ, ಮಂತ್ರಿಮಂಡಲದವರಾಗಲಿ, ಯುದ್ಧದ ವಿಚಾರ ಉಳಿದು ಬೇರಾವುದರಲ್ಲೂ ನಮ್ಮನ್ನು ಕೇಳಿಲ್ಲ, ನಮ್ಮ ಸಮ್ಮತಿಯನ್ನು ಪಡೆದಿಲ್ಲ. ಈ ಬಾರಿ ಮಾತ್ರ ಏಕೋ,–ಏಕೆಂದು ನಾನರಿಯೆ–ಮಾತೋಶ್ರೀ ನಾಗತಿಯವರೂ ನಮ್ಮ ಅಭಿಪ್ರಾಯ ಹೇಳಬೇಕೆಂದು ಕೇಳುತ್ತಿದ್ದಾರೆ. ದೊಡ್ಡ ಉಪಕಾರವಾಯಿತು. ಕಲ್ಲುಗೊಂಬೆಗಳಂತಿದ್ದವರಿಗೆ ನಾಗತಿಯವರು ನುಡಿಯಲು ನಾಲಗೆ ಕೊಟ್ಟಿದ್ದಾರೆ. ಆದರೆ ಅವರು ಇಂದು ನಮಗಿತ್ತ ನಾಲಗೆ ನುಡಿದ ಮಾತಿಗೆ ಬೆಲೆ ಬಂದೀತೆಂಬ ನಂಬಿಕೆ ನಮಗಿಲ್ಲ. ಆದರೂ ನಮ್ಮ ಅಭಿಪ್ರಾಯ ತಿಳಿಸಬೇಕೆಂದು ಸನ್ನಿಧಾನದಿಂದ ಅಪ್ಪಣೆಯಾಗಿರುವುದರಿಂದ, ಅದನ್ನು ಪಾಲಿಸಲು ನಾವೇನೋ ಸಿದ್ಧರಾಗಿದೇವೆ. ಆದರೆ ಹಾಗೇ ಸನ್ನಿಧಾನದಿಂದ ಒಂದು ಭರವಸೆಯ ಮಾತನ್ನು ಕೇಳುತ್ತೇನೆ."

"ದಳವಾಯಿಗಳು ತಮ್ಮ ಅಭಿಪ್ರಾಯ ತಿಳಿಸಬೇಕೆಂದು ನಾವೇ ಹೇಳಿದ ಮೇಲೂ ಅವರಿಗೆ ಏನು ಆತಂಕವಿದೆಯೋ ನಮಗೆ ತಿಳಿಯುತ್ತಿಲ್ಲ. ಹಾಗೂ ಅವರು ಮನಸ್ಸಿನಲ್ಲಿರುವುದನ್ನಾಡಿದರೆ, ಏನು ಭರವಸೆ ಬೇಕೆಂದು ತಿಳಿಸಿದರೆ, ನಾವು ಏನು ಸಮಾಧಾನ ಹೇಳಬೇಕೋ, ಭರವಸೆ ಕೊಡಬೇಕೋ ಅರ್ಥವಾಗುತ್ತದೆ."

—ಎಂದಳು ನಾಗತಿ. ಆ ಎರಡೇ ಮಾತುಗಳಲ್ಲೂ ಆಕೆಗೆ ಮುದ್ದಣ್ಣನ ಮಾತಿನಿಂದ ಅಸಮಾಧಾನವಾದುದು ವ್ಯಕ್ತವಾಗಿತ್ತು. ಮಾತಿನ ಜಾಡು ಬದಲಾದುದು ಸಭಿಕರೆಲ್ಲರಿಗೂ ಅರಿವಾಗಿ, ಮುಂದೇನೋ ಎಂಬ ಕುತೂಹಲಕ್ಕೆ ಕಾರಣವಾಯಿತು. ದಳವಾಯಿ ಮುದ್ದಣ್ಣನಿಗೂ ನಾಗತಿಯ ನುಡಿಯಲ್ಲಿ ಅಡಗಿದ್ದ ಅಸಮಾಧಾನದ ಎಳೆ ಅರಿವಾದರೂ ಅರಿವಾಗದವನಂತೆ ಹೇಳಿದ:

"ನಾವು ದಳವಾಯಿಗಳು ರಾಜ್ಯರಕ್ಷಣೆಗಾಗಿ ಮಾತ್ರ ಇರುವ ಜನ; ಕತ್ತಿ, ಕೋವಿಯಂತೆ ಯುದ್ಧದಲ್ಲಿ ಮಾತ್ರ ನಮ್ಮ ಉಪಯೋಗ ಎಂಬುದನ್ನು ತಿಳಿದೂ ತಿಳಿದೂ, ಈಗ ಎಲ್ಲರ ಮುಂದಿರುವ ಸಮಸ್ಯೆಯಲ್ಲಿ ನಾವು ತಲೆಹಾಕಲು ಅವಕಾಶವಿಲ್ಲ ಎಂಬುದನ್ನು ಅರಿತು ಕೂಡಾ, ನಾವೂ

ನಾಲ್ಕು ಜನ ರಾಜ್ಯದ ಹಿತೈಷಿಗಳು ಕಲೆತು ಹೀಗಾದರೆ, ರಾಜ್ಯಕ್ಕೆ ಕ್ಷೇಮ, ಧರ್ಮಕ್ಕೆ ವಿರುದ್ಧವಾಗುವುದಿಲ್ಲ, ಎಂಬ ತೀರ್ಮಾನಕ್ಕೆ ಬಂದಿದೇವೆ. ಆದರೆ ನಮ್ಮ ಮಾತಿಗೆ ಬೆಲೆ ಇಲ್ಲವಾದಲ್ಲಿ ಆ ಮಾತನ್ನು ಆಡಿ ಉಪಯೋಗವೇನು ? ಆದ್ದರಿಂದ ಈ ಹೊತ್ತಿನಲ್ಲಿ ನಾವು ಸನ್ನಿಧಾನದವರಿಂದ ಬಯಸುವುದಿಷ್ಟೆ—ಅವರಿಗೆ ನಾವೂ ಮಂತ್ರಿಮಾಂಡಲಿಕರಷ್ಟೇ ರಾಜ್ಯದ ಹಿತೈಷಿಗಳು, ನಿಷ್ಠಪ್ರಜೆಗಳು ಹೊತ್ತಿನಲ್ಲಿ ತಲೆ ಕೊಡಬೇಕಾದ ಬಂಟರು ಎಂಬುದು ಮನವರಿಕೆಯಾಗಿದ್ದಲ್ಲಿ, ನಮ್ಮ ಆ ನಂಬಿಕೆ ಇದ್ದಲ್ಲಿ—ನಾವು ಹೇಳುವ ಮಾತನ್ನು ನಡಸಿಕೊಡುತ್ತೇವೆ, ಎಂದು ವಚನ ಕೊಡಬೇಕು.

ಆಸ್ಥಾನದ ರೀತಿ-ರಿವಾಜುಗಳ ವಿಷಯದಲ್ಲಿ ಕಟ್ಟುನಿಟ್ಟಾದ ಅಬ್ಬಿಗೆರೆ ಮಲ್ಲಣ್ಣ ಮಾತು ಕೇಳಿ ತಟಕ್ಕನೆ ಎದ್ದು ನಿಂತು ಹೇಳಿದ:

“ಸನ್ನಿಧಾನದವರು ನಮ್ಮನ್ನು ಕರೆಸಿರುವುದು ಅಭಿಪ್ರಾಯ ಸೂಚಿಸುವುದಕ್ಕೆ ಹೊರತಾಗಿ ಹೀಗೇ ಮಾಡುತ್ತೇವೆಂದು ವಚನ ಕೊಡುವುದದಕ್ಕಲ್ಲ: ಎಲ್ಲರಂತೆ ದಳವಾಯಿಗಳಿಗೂ ತಮ್ಮ ಅಭಿಪ್ರಾಯ ಹೇಳಲು, ಸಲಹೆ ನೀಡಲು ಅಧಿಕಾರವಿದೆಯೇ ವಿನಾ ನಮ್ಮನಮ್ಮಲ್ಲೇ ಭೇದ ಭಾವನೆಯ ಮಾತಾಡಿ, ಕಹಿ ಕಲಕುವ ಅಧಿಕಾರವಿಲ್ಲ. ಅಲ್ಲದೆ ಸನ್ನಿಧಾನದಿಂದ ಈ ವಚನ ಕೊಡಿ, ಹೀಗೆ ಭರವಸೆ ಕೊಡಿ ಎಂದು ಕೇಳುವುದು ಆ ಪೀಠಕ್ಕೆ ಗೌರವ ತರುವ ರೀತಿಯಲ್ಲ.”

“ಪೀಠದ ಬಗ್ಗೆ ತಮಗೊಬ್ಬರಿಗೇ ಗೌರವವಿರುವ ರೀತಿಯಲ್ಲಿ ಮಾತಾಡಿ, ಸಚಿವರು ಸನ್ನಿಧಾನದಲ್ಲಿ ದಳವಾಯಿಗಳ ಬಗ್ಗೆ ಅಸಮಾಧಾನ ಮಾಡಲು ಕಾರಣವಾಗುತ್ತಿದ್ದಾರೆ. ಇದು ಹಿರಿಯರಿಗೆ ಒಪ್ಪುವ ನಡತೆಯಲ್ಲವೆಂದು ಮಾತ್ರ ನಾನು ಹೇಳಬಲ್ಲೆ. ಅಲ್ಲದೆ ನಾನು ವಿನಂತಿಮಾಡಿಕೊಳ್ಳುತ್ತಿರುವುದು ಸನ್ನಿಧಾನದಲ್ಲಿ, ಸಚಿವರಲ್ಲಲ್ಲ! ನನ್ನ ಬೇಡಿಕೆಗೆ ಒಪ್ಪುವ ಅಥವಾ ಬಿಡುವ ಅಧಿಕಾರ ಸನ್ನಿಧಾನಕ್ಕಿದೆ.”

ಸವಾಲಿಗೆ ಜವಾಬು ಕೊಡುವ ತೆರೆದ ಧ್ವನಿಯಲ್ಲಿ ಹೇಳಿದ ಮುದ್ದಣ್ಣ. ಈ ಮಾತಿನ ಚಕಮಕಿಯಿಂದ ಸಭೆಯಲ್ಲಿ ಹೊಸದೊಂದು ಬಗೆಯ ಕಲಕಿದ ವಾತಾವರಣ ಮೂಡಿದಂತಾಗಿ ಕೊಂಚ ಕಲಕಲವಾಯಿತು. ಸಭಿಕರಲ್ಲಿ ಕಲಕಲವಾದ ಕೂಡಲೇ ಸಿಂಹಾಸಕ್ಕೆ ಅಷ್ಟು

ದೂರದಲ್ಲಿ ಕಾವಲು ನಿಂತಿದ್ದ ಖಾಸಾ ಅಂಗರಕ್ಷಕರ ಪಡೆಯವರು ಹತ್ತಿರ ಸರಿದು ತಮ್ಮ ಆಯುಧಗಳ ಮೇಲೆ ಕೈಯಿಟ್ಟು ನಿಂತರು. ಮುದ್ದಣ್ಣನಿಗೆ ಉತ್ತರ ಕೊಡಲೆಂದು ನಿಂತ ಮಲ್ಲಣ್ಣನನ್ನು ಪೀಠದಲ್ಲಿ ಕೂಡಿಸಿ ಭುವನಪ್ಪನವರು, ಗಂಭೀರವಾದ, ಆದರೆ ಸದ್ದು ಗದ್ದಲ ಅಡಗುವಷ್ಟು ಪ್ರಭಾವಶಾಲಿಯಾದಂಥ ಧ್ವನಿಯಲ್ಲಿ ಹೇಳಿದರು.

"ಇದು ರಾಜಸಭೆ. ಪರಸ್ಪರ ವೈಷಮ್ಯಗಳ ಪ್ರದರ್ಶನಶಾಲೆಯಲ್ಲ. ಆ ಧೋರಣೆಯಲ್ಲಿ ಮಾತನಾಡುವುದು ನಮ್ಮ ಘನತೆಗಾಗಲಿ, ಆಸ್ಥಾನದ ಘನತೆಗಾಗಲಿ ಮರ್‍ಯಾದೆ ತರುವ ಮಾತಲ್ಲ. ದಳವಾಯಿಗಳು ತಾವು ನಾಲ್ಕು ಜನ ಕಲೆತು ಈ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಬಂದಿರುವುದಾಗಿ ಹೇಳಿದರು. ಸಂತೋಷ. ಅವರಿಗೆ ಈ ಪೀಠದ ನ್ಯಾಯ ದೃಷ್ಟಿಯಲ್ಲಿ ನಂಬಿಕೆ ಇದ್ದರೆ, ತಮ್ಮ ಅಭಿಪ್ರಾಯವನ್ನು ತಿಳಿಸಬಹುದು. ಅಷ್ಟು ವಿನಾ ಬೇರೆ ಮಾತನಾಡುವುದು ಸಭೆಗೆ ಶೋಭಿಸುವುದಿಲ್ಲ. ನಾನು ಸೂಚಿಸಬೇಕೆಂಬುದಿಷ್ಟೆ—ತಮ್ಮ ಮಾತಿಗೆ ಬೆಲೆ ಬರಬೇಕೆಂದು ಬಯಸುವ ಜನ, ಬೆಲೆ ಬರುವಂಥ ಮಾತಾಡಬೇಕು."

"ವೃಥಾ ಮಾತುಕಥೆಗಳಿಗೀಗ ವ್ಯವಧಾನವೂ ಇಲ್ಲ, ಅಂಥ ಮಾತಿಗೆ ಇದು ಹೊತ್ತೂ ಅಲ್ಲ. ದಳವಾಯಿಗಳು ತಮ್ಮ ಮಾತು ಹೇಳಬೇಕು."

—ಇನ್ನೂ ಹೆಚ್ಚಿನ ಚರ್ಚೆ ಅನಪೇಕ್ಷಣೀಯ ಎಂಬ ಧ್ವನಿಯಲ್ಲಿ ಹೇಳಿದಳು ನಾಗತಿ.

ಈ ಮಾತನ್ನು ಕೇಳಿದ ಮುದ್ದಣ್ಣ, ತನ್ನ ಅಕ್ಕಪಕ್ಕದಲ್ಲಿ ಕುಳಿತ ದಳವಾಯಿಗಳ ಮೊಗವನ್ನು ದಿಟ್ಟಿಸಿ ನೋಡಿದ. ಅವರಾರು ಈ ಬಗೆಯ ಪ್ರಸಂಗಕ್ಕೆ ಸಿದ್ಧರಾಗದೆ, ಈ ಅನಿರೀಕ್ಷಿತ ಘನತೆಯಿಂದಾಗಿ ದಿಗ್ಭ್ರಾಂತರಾದುದು ಅವರ ಮೊಗದಲ್ಲಿ ಸುವ್ಯಕ್ತವಾಗಿತ್ತು. ಎಂತಲೇ ಅವರಿಂದ ಮುದ್ದಣ್ಣನಿಗೆ ನಿರೀಕ್ಷಿಸಿದ ಬೆಂಬಲವಾಗಲಿ, ಮುಂದುವರಿಯಲು ಪ್ರೋತ್ಸಾಹವಾಗಲಿ ಕಾಣಬರಲಿಲ್ಲ. ಆದರೂ ತನ್ನಲ್ಲಿ ಕೆದರಿದ ಕ್ರೋಧವನ್ನು ಹತ್ತಿಕ್ಕಲಾರದೆಯೋ ಗಡುಸಾದ ಧ್ವನಿಯಲ್ಲಿ,

"ಅಂತೂ ನಾವಿಂದೂ ರೀತಿರಿವಾಜು ಕಲಿತುದಾಯಿತು. ಸಂತೋಷ. ನಮಗಿದು ಕಲಿಯುವಕಾಲ. ಕಲಿಸುವಕಾಲ ಬರುವುದೋ ಇಲ್ಲವೋ

ನೋಡಬೇಕು. ಆದರೆ ಸದ್ಯಕ್ಕೆ ನಮ್ಮ ಅಭಿಪ್ರಾಯವಿಷ್ಟೆ—ಸಿಂಹಾಸನ ಸರ್ಜೇನಾಯಕರ ಸಂತಾನಕ್ಕೆ ಹೋಗಬೇಕು. ಅದು ನನ್ನೊಬ್ಬನದೇ ಅಭಿಪ್ರಾಯವಲ್ಲ. ದಳವಾಯಿಗಳೆಲ್ಲರಿಗೂ ಅದೇ ಅಭಿಪ್ರಾಯವಿದೆ. ಬೇಕಾದರೆ ವಿಚಾರಿಸಬಹುದು."

ಎಂದು ಕಡ್ಡಿ ತುಂಡು ಮಾಡುನಂತೆ ಹೇಳಿದ, ಆತನ ಮಾತು ಕೇಳಿ ಸಭೆ ನಿಶ್ಶಬ್ದವಾಯಿತು. ನಾಗತಿ ಇದಕ್ಕೆ ಏನು ಹೇಳುವಳೋ ಎಂಬ ಕುತೂಹಲ ಎಲ್ಲರಲ್ಲಿಯೂ ಕೆರಳಿತು. ನಾಗತಿ ಆ ಮಾತಿಗೆ ಏನೂ ಪ್ರತ್ಯುತ್ತರ ಕೊಡದೆ, 'ನಿಮ್ಮ ಅಭಿಪ್ರಾಯವೂ ಇದೇನೇ ?' ಎಂದು ಪ್ರಶ್ನಿಸುವ ನೋಟದಿಂದ ಸುಮ್ಮನೆ ಕುಳಿತ ದಳವಾಯಿಗಳನ್ನು ನೋಡಿ ದಳು. ಬೇರೆ ದಾರಿಯಿಲ್ಲದೆ ಮಾತನಾಡಲೇಬೇಕಾಗಿ ಬಂದವನಂತೆ, ದಳವಾಯಿ ದೇಸಣ್ಣ ಎದ್ದು ನಿಂತು ಹೇಳಿದ—

"ದಳವಾಯಿ ಮುದ್ದಣ್ಣನವರು ಹೇಳಿದುದು ನಿಜ. ನಾವೆಲ್ಲಾ ಕಲೆತು ಅಂದುಕೊಂಡ ಮಾತನ್ನು ಅವರು ಹೇಳಿದಾರೆ. ಅವರು ಆಡಿದ ಮಾತು ನಮ್ಮದು, ಆದರೆ ರೀತಿ ನಮ್ಮದಲ್ಲ. ಅವರ ಮಾತಿನಲ್ಲಾಗಲಿ, ನಮ್ಮ ನಡೆಯಲ್ಲಾಗಲಿ ಅವಿನಯ ಕಂಡು ಬಂದಿದ್ದರೆ ಸನ್ನಿಧಾನದವರು ಕ್ಷಮಿಸಬೇಕು."

ದೇಸಣ್ಣನ ಮಾತು ಕೇಳಿ ಮುದ್ದಣ್ಣ ದೇಸಣ್ಣನ ಮೊಗವನ್ನು ದುರು ಗುಟ್ಟಿ ನೋಡಿದ. ಆತನ ಕಣ್ಣುಗಳಲ್ಲಿ ಕೆರಳಿದ ಹಾವಿನ ಕ್ರೋಧದ ಹೊಳಪಿತ್ತು. ಎದ್ದು ಮಾತಾಡ ಬಯಸಿದವನಂತೆ ಮೈಚಾಚಿದ. ಆದರೆ ಅವನು ಮಾತನಾಡಲು ಅವಕಾಶ ಕೊಡದೆ, ನಾಗತಿಯೇ ಮಾತನಾಡಿ ದಳು ;

"ದಳವಾಯಿಗಳ ಅಭಿಪ್ರಾಯ ಹೀಗೆಂದು ತಿಳಿದು ಸಂತೋಷ ವಾಯಿತು. ಈ ಬಗ್ಗೆ ಉಳಿದವರು ಯಾರಾದರೂ ಏನಾದರೂ ಹೇಳ ಬೇಕೆಂದಿದ್ದರೆ ಹೇಳಬೇಕು."

ಉಳಿದವರು 'ನಾಗತಿಯ ಮಾತಿಗೆ ಏನು ಹೇಳಬೇಕೆಂದು ಯೋಚಿ ಸುತ್ತಿರುವಾಗಲೇ, ನಾಗತಿಯ ಬಳಿಯ ಪೀಠದಲ್ಲಿ, ಅದುವರೆಗೂ ನಡೆ ಯುತ್ತಿದ್ದ ಮಾತುಗಳನ್ನು ಮೌನವಾಗಿ ಕೇಳುತ್ತಾ, ಕುಳಿತಿದ್ದ ಲಿಂಗಣ್ಣ ನಾಯಕ ಎದ್ದು ನಿಂತು ವಂದನೆಮಾಡಿ ಕೇಳಿದ:

" ಈ ಸಂದರ್ಭದಲ್ಲಿ ನನಗೂ ಮಾತನಾಡಲು ಅಪ್ಪಣೆ ಇದೆಯೇ ? "

" ಹೇಳಿ."

" ನಾಯಕರನಂತರ ನಾನು ಪಟ್ಟಕ್ಕೆ ಬರಬೇಕು ಎಂಬ ಮಾತನ್ನು ದಳವಾಯಿಗಳು ಹೇಳಿದರು. ಅದು ಅವರು ನನ್ನಲ್ಲಿ, ದಿವಂಗತರಾದ ನಮ್ಮ ತಂದೆಯವರಲ್ಲಿ ಇಟ್ಟುಕೊಂಡಿರುವ ಅಭಿಮಾನಕ್ಕೆ ಸಾಕ್ಷಿಯಾಗಿದೆ. ಈ ವಿಶ್ವಾಸ, ಅಭಿಮಾನಕ್ಕಾಗಿ ನನ್ನ ಹಾರ್ದಿಕ ವಂದನೆಗಳನ್ನು ಸ್ವೀಕರಿಸಬೇಕು. ಈ ಅಭಿಮಾನಕ್ಕಾಗಿ ನಾವು ಅವರಿಗೆ ಆಜನ್ಮ ಋಣಿಗಳಾಗಿರುತ್ತೇವೆ. ಹಾಗೇ ನಮ್ಮ ಮೇಲಿನ ಅಭಿಮಾನ, ದುರ್ಗದ ಬಗ್ಗೆ ಇರುವ ಅಖಂಡ ವಿಶ್ವಾಸದಿಂದ ಅವರು ಆಡಿದ ಬಿಚ್ಚು ಮಾತುಗಳಿಂದ ಮಾತೋಶ್ರೀಯವರ ಮನಸ್ಸಿಗೆ ನೋವಾಗಿದ್ದರೆ, ಆ ಮಾತುಗಳ ಹಿಂದಿನ ವಿಶ್ವಾಸವನ್ನು ಸ್ವೀಕರಿಸಿ, ಮಾತಿನ ಧೋರಣೆಯನ್ನು ಮನ್ನಿಸಬೇಕೆಂದು ಬೇಡುತ್ತೇನೆ. ಹಾಗೇ ನಾನು ಹೇಳುವ ಕೆಲವು ಮಾತುಗಳನ್ನು ಮಾತೋಶ್ರೀಯವರೂ ಸಭೆಯವರೂ ವಿಶ್ವಾಸದಿಂದ, ಸಹಾನುಭೂತಿಯಿಂದ ಕೇಳಬೇಕು.

" ಸಭೆಯ ಮುಂದೆ ಈ ದಿನ, ದಳವಾಯಿಗಳು ಒಂದು ಧರ್ಮದ ಸಮಸ್ಯೆಯನ್ನಿಟ್ಟಿದ್ದಾರೆ. ಧರ್ಮದ ಏಕೈಕ ದೃಷ್ಟಿಯಿಂದ ಕೆಲವು ಮಾತುಗಳನ್ನಾಡಿದರೆ, ಔರಸಪುತ್ರರಿಗೆ ಸಿಂಹಾಸನಾಧಿಕಾರವಿರಬೇಕೆಂಬುದು ಸರ್ವದೇಶ, ಸರ್ವಕಾಲದಲ್ಲಿಯೂ ಸಕಲ ಜನ ಸಮ್ಮತವಾದ ಮಾತು. ಇಂದು ಕಾಲಮಾನ್ಯವಾದ ಈ ತತ್ತ್ವವನ್ನೇ ಎತ್ತಿ ಹಿಡಿಯಬೇಕೆಂದು ದಳವಾಯಿಗಳು ಯತ್ನಿಸಿದಾರೆ. ಯಾವುದೋ ಕಾರಣದಿಂದ ನಡುವೆ, ನನಗೆ ಬರಬೇಕಾಗಿದ್ದ ಸಿಂಹಾಸನ ನಮ್ಮ ಚಿಕ್ಕಪ್ಪನವರ ಪಾಲಿಗೆ ಹೋಯಿತು. ಸುಮಾರು ಇಪ್ಪತ್ತೆರಡು ವರ್ಷಗಳ ಕಾಲ ಅವರು ಈ ರಾಜ್ಯವನ್ನು ನಿಷ್ಠೆಯಿಂದ, ಸಮರ್ಥತೆಯಿಂದ ಆಳಿದರು. ಈಗ ಅವರು ಪುತ್ರ ಸಂತಾನವಿಲ್ಲದೆ ಮೃತರಾಗಿರುವುದರಿಂದ ನನಗೆ ಪುನಃ ಪಟ್ಟದ ಹಕ್ಕು ಸ್ವಾಭಾವಿಕವಾಗಿಯೇ ಪ್ರಾಪ್ತವಾಗಿದೆ. ದಳವಾಯಿಗಳು ಹೇಳಿದುದು ಇದೇ ಮಾತನ್ನೇ. ಅವರಂತೆಯೇ ಮತ್ತೆ ಕೆಲವರಿಗೂ ಭಾವನೆಯಿದೆಯೆಂದು ನಾನು ಕೇಳಬಲ್ಲೆ. ಅಲ್ಲವೇ ಭುವನಪ್ಪನವರೇ ? "

" ನಿಜ "

" ಇದೆಲ್ಲದರಿಂದ, ಈ ಸಿಂಹಾಸನ ನನಗಾಗಬೇಕು ಎಂಬುದೇ ತಮ್ಮೆಲ್ಲರ ಇಷ್ಟ ಎಂದು ನಾನು ನಂಬಿದೇನೆ ಅಲ್ಲವೆ ? "

" ಅದರಲ್ಲಿ ಸಂದೇಹವೇ ಇಲ್ಲ. "

—ದಳವಾಯಿಗಳು ಒಕ್ಕೊರಲಿನಲ್ಲಿ ಈ ಮಾತು ಹೇಳಿದರು. ಉಳಿದವರಲ್ಲಿ ಕೆಲವರು ತಮ್ಮ ಕಣ್ಣಮುಂದೆಯೇ ತಮಗೆ ಅರಿವಾಗದ ಯಾವುದೋ ಘಟನೆ ನಡೆಯುತ್ತಿರುವುದನ್ನು ಅಸಹಾಯವಾಗಿ, ಮೌನವಾಗಿ ನೋಡುತ್ತ ಕುಳಿತಿದ್ದರು. ಒಪ್ಪಿ ತಲೆಯಾಡಿಸಿದವರಿಗಾಗಲಿ, ಸುಮ್ಮನಿದ್ದವರಿಗಾಗಲಿ ಯಾರಿಗೂ ಲಿಂಗಣ್ಣನಾಯಕನ ಮಾತು ಯಾವ ಗುರಿಯತ್ತ, ಯಾವ ಜಾಡು ಹಿಡಿದು ಸಾಗುತ್ತಿದೆ ಎಂಬುದು ಅರಿವಾಗಲಿಲ್ಲ. ಒಬ್ಬಿಬ್ಬರಿಗೆ, ಇದೇ ಹೊತ್ತು ಸಾಧಿಸಿ ಆತ ಸಿಂಹಾಸನದ ಮೇಲಿನ ತನ್ನ ಅಧಿಕಾರವನ್ನು ಸ್ಥಾಪಿಸಿಕೊಳ್ಳಲು ಯತ್ನಿಸುತ್ತಿದ್ದಾನೆ, ಎಂದೇ ತೋರಿತು. ಆದರೆ ಆ ಮಾತನ್ನು ಗಟ್ಟಿಯಾಗಿ ಆಡಲಾರದೆ ಮುಂದೇನಾಗುವುದೋ ನೋಡೋಣ ಎಂದು ಕಾದು ಕುಳಿತಿದ್ದರು.

" ಈ ಸಿಂಹಾಸನ ನನ್ನದಾಗಬೇಕು ಎಂದೇ ನಿಮ್ಮ ಆಶೆಯೂ ಇದೆಯಲ್ಲವೇ ಚಿಕ್ಕಮ್ಮಾಜಿ ? "

" ನಿಜ. ನಮ್ಮದೂ ಅದೇ ಅಭಿಪ್ರಾಯವೇ. "

—ನಾಗತಿ ಖಚಿತವಾದ ಸ್ವರದಲ್ಲಿ ಹೇಳಿದಳು.

" ಇದರಿಂದ ಎಲ್ಲರಿಗೂ ನಾನೇ ನಾಯಕರಾಗಬೇಕು ಎಂಬ ಅಭಿಪ್ರಾಯ ಇದೆ ಎಂದಂತಾಯಿತು. ಹಾಗೇ ಈ ಸಿಂಹಾಸನ ನನ್ನದು ಎನ್ನುವುದೂ ನಿರ್ಧಾರವಾಯಿತು. ಸಿಂಹಾಸನಸ್ಥನಾದ ದೊರೆಗೆ ತನ್ನ ನಂತರ ಯಾರು ಪಟ್ಟಕ್ಕೆ ಬರಬೇಕು ಎಂದು ನಿರ್ಧರಿಸುವ ಅಧಿಕಾರವಿದೆಯಲ್ಲವೇ ಭುವನಪ್ಪನವನೇ ? "

" ಇದೆ ಪ್ರಭು. "

" ಸರಿ. ಹಾಗಾದರೆ ತಾವೆಲ್ಲರೂ ನಾನು ಹೇಳಲಿರುವ ಮಾತನ್ನು ದಯವಿಟ್ಟು ಸಾವಧಾನದಿಂದ ಕೇಳಬೇಕು. ತಾವೆಲ್ಲರೂ ಏಕಾಭಿ

ಪ್ರಾಯದಿಂದ ಒಪ್ಪಿದಿರಿ ಎಂಬುದರಿಂದಲೇ ಈ ದುರ್ಗಾಧಿಪತ್ಯ ನನ್ನ ದಾಯಿತು. ಹಾಗೇ ಇದರ ಭವಿಷ್ಯ ನಿರ್ಣಯವೂ ನನ್ನದೇ ಎಂದಾ ಯಿತು. ಇದಕ್ಕೆ ಯಾರಾದರೂ ಭಿನ್ನಾಭಿಪ್ರಾಯವಿದ್ದರೆ ಸೂಚಿಸ ಬೇಕು! ”

—ಅಷ್ಟು ಹೇಳಿ, ಒಂದು ಗಳಿಗೆ ಮಾತನಾಡದೆ ಸಭೆಯನ್ನು ದಿಟ್ಟಿ ಸುತ್ತಾ ನಿಂತಿದ್ದ ಲಿಂಗಣ್ಣನಾಯಕ. ಆತನ ಪ್ರಶ್ನೆಗೆ ಯಾರೂ ಉತ್ತರ ಕೊಡಲಿಲ್ಲ, ಅದನ್ನು ಕಂಡು ಮೃದುವಾದ ನಗು ನಕ್ಕು ತನ್ನ ಮಾತು ಮುಂದುವರಿಸಿದ—

“ ನನ್ನದಾದ ಈ ಸಿಂಹಾಸನವನ್ನು ಇಂದು ನಾನು ನನ್ನ ಇಚ್ಛೆ ಯಿಂದ, ನನ್ನ ಸೋದರ ಓಬಣ್ಣನಾಯಕನಿಗೆ ಒಪ್ಪಿಸುತ್ತಿದೇನೆ. ”

—ಈ ಮಾತು ಕೇಳಿದ ಕೂಡಲೇ ಸಭೆಯಲ್ಲಿ ಸಿಡಿಲು ಹೊಡೆದ ಹಾಗಾಗಿ, ಕಲಕಲವಾಯಿತು.

“ ಯಾರೂ ಪ್ರಕ್ಷುಬ್ಧರಾಗಬಾರದು. ನಮ್ಮ ಚಿಕ್ಕಪ್ಪ, ದಿವಂಗತ ಮದಕರಿನಾಯಕರು ನಮ್ಮನ್ನೂ ತಮ್ಮ ಹೊಟ್ಟೆಯ ಮಕ್ಕಳಂತೆಯೇ ಸಾಕಿದರು. ಅವರ ಪ್ರೀತಿ, ವಿಶ್ವಾಸದಿಂದಾಗಿ, ಮಾತೋಶ್ರೀ ನಾಗತಿ ಯವರ ಸಹಜ ಕೋಮಲಾಂತಃಕರಣದಿಂದಾಗಿ, ಪಿತೃಸುಖದಲ್ಲಿ ನಮ ಗಾವುದೂ ಕೊರತೆಯಾಗಲಿಲ್ಲ. ತಂದೆಯಿಲ್ಲದ ಮಕ್ಕಳು ನಾವು, ಎಂಬ ಕೊರಗನ್ನು ಮರೆಯಿಸಿ ಬೆಳೆಸಿದರು ಅವರು. ನಾವು ಅವರ ಮಕ್ಕಳಾಗಿ ಬೆಳೆದೆವು. ತಂದೆಯ ಮಾತನ್ನು ನಡಸುವುದು ಮಗನ ಆದ್ಯಕರ್ತವ್ಯ. ತಂದೆಯ ಮಾತಿಗಾಗಿ ರಾಮಚಂದ್ರ ಕಾನನಕ್ಕೆ ಹೋದ, ನಚಿಕೇತ ಯಮನ ಮಂದಿರವನ್ನೇ ಹೊಕ್ಕ ಎಂಬುದನ್ನು ನಾವು ಗುರುಗಳಿಂದ ಕೇಳಿ ದೇವೆ. ಅಷ್ಟು ಶಕ್ತಿಯಾಗಲಿ, ಸಾಹಸವಾಗಲಿ ನಮಗಿಲ್ಲ. ಆದರೆ ಯಾರನ್ನು ನಾವು ತಂದೆ ಎಂದುಕೊಂಡಿದ್ದೆವೋ, ಅವರ ಮನದ ಬಯಕೆ ಯನ್ನು ಈಡೇರಿಸುವಷ್ಟು ಶಕ್ತಿಯನ್ನಾದರೂ ಶಿವ ನಮಗೆ ಕೊಟ್ಟಿದ್ದಾನೆ ಎಂದೇ ನಾವು ನಂಬಿದೇವೆ. ಚಿಕ್ಕಪ್ಪಾಜಿಯವರಿಗೆ ತಮ್ಮ ಬಳಿಕ ಈ ರಾಜ್ಯ ಓಬಣ್ಣನಾಯಕನದಾಗಬೇಕು, ಎಂದು ಮನಸ್ಸಿತ್ತು. ನನ್ನ ಮುಂದೂ ಆ ಮಾತು ಹೇಳಿದ್ದರು. ಇಂದು ನಾನು ತಮ್ಮೆಲ್ಲರನ್ನೂ,

ಅವರ ಮಾತು ನಡಸಿಕೊಡಲು, ಅವರ ಬಯಕೆಯನ್ನು ಸಫಲಗೊಳಿಸಲು ನಮಗೆ ಅವಕಾಶಮಾಡಿಕೊಡಬೇಕು, ನಿಮ್ಮ ಸಹಕಾರ ನೀಡಬೇಕು ಎಂದು ಬೇಡಿಕೊಳ್ಳುತ್ತೇನೆ. ನಮ್ಮಲ್ಲಿ ಪ್ರೀತಿ ಇರುವವರು, ಅಭಿಮಾನ ವಿರುವವರು ಈ ಕಾರ್ಯದಲ್ಲಿ ನಮ್ಮ ಬೆಂಬಲವಾಗಿ, ತೋಳರಕ್ಷೆಯಾಗಿ ನಿಲ್ಲಬೇಕು. ಈ ಸಿಂಹಾಸನದಲ್ಲಿ ಯಾರು ಕುಳಿತರೇನು, ನಿಮ್ಮ ಹೃದಯ ಸಿಂಹಾಸನ ನಮ್ಮದಾದರೆ ಸಾಕು. ಇಷ್ಟೇ ನಾನು ಹೇಳಬೇಕೆಂದಿದ್ದುದು. ನನ್ನ ಪರವಾಗಿ, ನನ್ನಲ್ಲಿ ಅಭಿಮಾನವಿಟ್ಟಿರುವವರ ಪರವಾಗಿ ನಾನಿಂದು ಸಾರಿ ಹೇಳುತ್ತೇನೆ. ಈ ಸಿಂಹಾಸನ ಓಬಣ್ಣನಾಯಕರದು. ಅವರ ಮಿತ್ರರು ನನ್ನ ಮಿತ್ರರು, ಅವರ ಶತ್ರುಗಳು ನನ್ನ ಶತ್ರುಗಳು. ಇಂದಿನಿಂದ ನನ್ನ ಕತ್ತಿ ಅವರ ರಕ್ಷಣೆ, ಸೇವೆಗೆ ಮೀಸಲು. ಓಬಣ್ಣನಾಯಕರು ಇದನ್ನು ಒಪ್ಪಿಸಿಕೊಳ್ಳಲಿ. ”

—ಎಂದು ಹೇಳಿ, ಒರೆಯಲ್ಲಿದ್ದ ತನ್ನ ಕತ್ತಿಯನ್ನು ಹಿಡಿದು, ಓಬಣ್ಣನಾಯಕ ಕುಳಿತಿದ್ದ ಪೀಠದ ಬಳಿ ತೆರಳಿ, ಅವನ ಕಾಲ ಬಳಿ ತನ್ನ ಕತ್ತಿಯನ್ನಿಟ್ಟು ವಂದಿಸಿದ.

ಆತನ ಮಾತನ್ನೂ ಕೃತಿಯನ್ನೂ ಮೆಚ್ಚಿದ ಸಭಾಸದರು ‘ ಭಾಪು ಭಾಪು ’ ‘ ಉಘೇ ಉಘೇ ’ ಎಂದು ಕೂಗಿ, ಕರತಾಡನಮಾಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಹತ್ತಾರು ಜನ ಲಿಂಗಣ್ಣನಾಯಕ ನಂತೆಯೇ ತಾವೂ ತಮ್ಮ ಕತ್ತಿಗಳನ್ನೊಯ್ದು ಓಬಣ್ಣನಾಯಕನ ಪಾದದ ಬಳಿಯಿಟ್ಟು ವಂದಿಸಿದರು.

ಈ ಗದ್ದಲದಲ್ಲಿ ದಳವಾಯಿ ಮುದ್ದಣ್ಣ ತನ್ನ ಕೆಲವರು ಹಿಂಬಾಲಕ ರೊಂದಿಗೆ, ದುರ್ದಾನ ತೆಗೆದುಕೊಂಡವನಂತೆ ಸಭೆಯಿಂದ ಎದ್ದು ಹೋದು ದನ್ನು ಬಹು ಜನ ಗಮನಿಸಲಿಲ್ಲ. ಇದನ್ನು ಗಮನಿಸಿದ ಭುವನಪ್ಪನವರು ಒಂದು ಗಳಿಗೆ ಸಭಾಭವನದ ಮಹಾದ್ವಾರದತ್ತಲೇ ನೋಡಿ, ಬಳಿಕ ನಾಗತಿ ಯತ್ತ ತಿರುಗಿ ನೋಡಿದರು. ನಾಗತಿಯ ಕಣ್ಣುಗಳೂ ಅತ್ತಲೇ ನೋಡು ತ್ತಿದ್ದುವು. ಆಕೆಯ ಕೈ ಬಳಿಯಲ್ಲಿ ಕುಳಿತ ಓಬಣ್ಣನಾಯಕನ ನೆತ್ತಿಯ ಮೇಲಿತ್ತು.

ಬಿರುಗಾಳಿಯ ಮುನ್ನ

೧

" ಕಡುಕಡುಗತ್ತಿ ಕೈಯಾಗ ಹಿಡಿದು
ನಟ್ಟಕತ್ತಿ ಬಗಲಾಗಿಟ್ಟು
ಎಡಕೆ ಬಲಕೆ ಕಟ್ಯಾರಣ್ಣಾ ಎಲ್ಡೆಳ್ಡಾಯುಧವಾ—
ಜೈ—ಎಲ್ಡೆಳ್ಡಾಯುಧವಾ !...............

" ಹೋ ಹ್ಹೊ ಹ್ಹೊ ಹೋ....ಹೊ ಹೋ ಹೊ ಹ್ಹೊ ಹ್ಹೋ.... ಹೊಂಟ್ರಣ್ಣಾ ಹೊಂಟ್ರು....ಯುದ್ಧಕ್ಕೊಂಟ್ರು....ಹಾಲು ಅನ್ನಉಂಡ್ಕೊಂಡು ಮನ್ಯಾಗಿರೋ ಮಗನೇ ಅಂದ್ರೆ ಜೀವಾ ತಿಂದು ಜೀವಾ ಕೊಡಾಕೆ ಹೊಂಟ್ರು. ಬ್ಯಾಡಾಕಣೋಂದ್ರೆ ಕೇಳ್ಳಿಲ್ಲ. ಹೋದ....ಹೋಗೇ ಬಿಟ್ಟ....

" ಆಳು ಕುದುರೇ ದಂಡು ಲಗ್ಗೇಯಮಾಡಿ
ರಣಹದ್ದು ಚೀರೀತು ಮುಗಿಲಾಗೆ ಅಡಿ
ಮಣ್ಣಾಗೆ ಬಿದ್ದೀತೋ ಮಾಸತಿಯ ಕೈಗಡಗ
ದುರ್ಗದಾ ಬೀದೀಲಿ ಹರಿದೀತೊ ದುಃಖದಾ ಹಡಗ...."

ಶಿಲೆಯ ಎದೆಯಲ್ಲೂ ಕಂಬನಿಯೊಸರುವಂತೆ ಮಾಡುವಂಥ ಶೋಕ ಧ್ವನಿಯಲ್ಲಿ ಮೂಡಿ ಬಂದ ಹಾಡು, ಅದನ್ನು ಹಿಂಬಾಲಿಸಿ ಬಂದ, ಕಲ್ಲನ್ನು ಕರುಗಿಸುವಂಥ ಉನ್ನತ ವಿಕಟಾಟ್ಟಹಾಸ.

ವೀರಣ್ಣನ ಮೈ ಅವನಿಗರಿವಾಗದಂತೆಯೇ ಗದಗುಟ್ಟಿ ನಡುಗಿತು, ಅದನ್ನು ಕೇಳಿ. ದಟ್ಟಕತ್ತಲಾಗದೆ, ಹತ್ತಿರ ಇದ್ದವರ ಮುಖವೂ ಕಾಣಿಸ ದಂಥ ಸಂಜೆಯ ಮಬ್ಬು ಬೆಳಕಿನಲ್ಲಿ, ಹಗುರಾದ ನಡೆಯಲ್ಲಿ ನಡೆಯು ತ್ತಿದ್ದ ಕುದುರೆಯನ್ನು ಲಗಾಮು ಎಳೆದು ನಿಲ್ಲಿಸಿ, ಧ್ವನಿ ಬಂದ ಕಡೆಯೇ ನಿಟ್ಟಿಸಿ ನೋಡಿದ.

ವೆಂಕರಮಣಸ್ವಾಮಿ ದೇವಾಲಯದ ಬಳಿಯ ಹುಣಿಸೆಯ ತೋಪಿ ನಲ್ಲಿ ಕವಿದ ಕಗ್ಗತ್ತಲಿನಲ್ಲಿ ಹಾಡುತ್ತಾ ನಗುತ್ತಾ, ಅಳುತ್ತಾ, ಮನಸ್ಸಿಗೆ ಬಂದಂತೆ ಮಾತನಾಡುತ್ತಾ, ಮಣ್ಣುಗುಡ್ಡೆಯ ಮೇಲೆ ಹೊರಳಾಡುತ್ತಿದ್ದ ಹುಚ್ಚಿ ಹನುಮವ್ವನ ಆಕೃತಿ ಮಸಕು ಮಸಕಾಗಿ ಕಾಣಿಸಿತು ಅವನ ಕಣ್ಣು ಗಳಿಗೆ.

ಹುಚ್ಚಿ ಹನುಮವ್ವ ವೀರಣ್ಣನಂತೆಯೇ ಗೋಣೂರಿನವಳು. ಗೋಣೂರಿನಲ್ಲಿ ಅವಳನ್ನು ಅರಿಯದವರು ಯಾರೂ ಇಲ್ಲ. ಆಬಾಲವೃದ್ಧರಿಗೂ ಅವಳ ಬಾಳ ಕರುಣ ಕಥೆ ಗೊತ್ತು. ಇಂದು, ಕಂಡ ಕಂಡ ಮಣ್ಣು ಗುಡ್ಡೆಯಲ್ಲೆಲ್ಲಾ ಮಗನ ಸಮಾಧಿಯನ್ನರಸುತ್ತಾ, ಹುಚ್ಚಾಗಿ ಹಾಡುತ್ತಾ ಚೀರುತ್ತಾ ಅಲೆಯುತ್ತಿರುವ ಹನುಮವ್ವ ಎಂದೂ ಹಾಗೆಯೇ ಇರಲಿಲ್ಲ. ಕೆಲವೇ ವರ್ಷಗಳ ಹಿಂದೆ, ಆಕೆ ಎಲ್ಲರಂತೆಯೇ ಇದ್ದಳು. ಕಸ್ತೂರಿ ರಂಗಪ್ಪನಾಯಕರ ಕಾಲದಲ್ಲಿ ಆಕೆಯ ಗಂಡ, ಅವರ ಸೇನೆಯಲ್ಲೊಬ್ಬ ಮುಖ್ಯಸ್ಥನಾಗಿದ್ದ. ಸೀರ್ಯದ ರಂಗಪ್ಪನಾಯಕ ಹಿರಿಯೂರಿನ ಕೋಟೆಗೆ ಲಗ್ಗೆ ಹಾಕಿದಾಗ, ಅದರ ರಕ್ಷಣೆಗೆಂದು ತೆರಳಿದ ದುರ್ಗದ ಪಡೆಯೊಂದಿಗೆ ಹೋದ ಹನುಮವ್ವನ ಗಂಡ, ಆ ಯುದ್ಧದಿಂದ ಹಿಂದಿರುಗಲಿಲ್ಲ. ಹಿಂದಿರುಗಿ ಬಂದುದು ನೂರಾರು ಬಾಣಗಳ ಆಘಾತದಿಂದ ತೂತುತೂತಾಗಿದ್ದ ವಿಕಾರವಾಗಿ ಕೊಳೆತು ನಾರುತ್ತಿದ್ದ ಅವನ ಶವ. ಆಗ ಹನುಮವ್ವ ಗಂಡನೊಂದಿಗೆ ಸಹಗಮನ ಮಾಡಲು ಸಿದ್ಧಳಾಗಿದ್ದಳು. ಆದರೆ ಇದ್ದೊಬ್ಬ ಮಗ ಚಿನ್ನೋಬಯ್ಯ ಅವಕ್ಕೆ ಅಡ್ಡಿಯಾದ ಅವನನ್ನು ಸಾಕಿ ಬೆಳೆಸಲು ಉಳಿದುಕೊಂಡಳು ಹನುಮವ್ವ.

ಆರಮನೆಯವರು ಕೊಟ್ಟ ಹಾಲು ಬೆಣ್ಣೆಯ ಉಂಬಳಿಯಿಂದ ವಜ್ರಕಾಯನಾಗಿ ಬೆಳೆದ ಚಿನ್ನೋಬಯ್ಯ ಮಾಮೂಲಿನಂತೆ ದಂಡಿಗೆ ಸೇರಿದ. ತೇಗದಮರದಂತೆ ಪುಷ್ಟವಾಗಿ ಬೆಳೆದ ಮಗನಿಗೆ ತಕ್ಕ ಮಡದಿಯನ್ನು ತಂದು, ಮನೆಯಲ್ಲಿ ತೊಟ್ಟಿಲು ಕಟ್ಟುವುದನ್ನು ಕಾಣಬೇಕೆಂದು, ಹನುಮವ್ವ ಬಯಸುತ್ತಿರುವಾಗಲೇ, ಮದಕರಿನಾಯಕರ ಕಾಲದಲ್ಲಾದ ದೇವಪುರದ ಲಡಾಯಿಯಲ್ಲಿ ಚಿನ್ನೋಬಯ್ಯ ಉರುಳಿದ. ಗಂಡನ ಹೆಣವನ್ನಾದರೂ ಕಂಡಿದ್ದಳು ಹನುಮವ್ವ. ಆದರೆ ಮಗನ ಹೆಣವನ್ನು ನೋಡುವ ಭಾಗ್ಯವೂ ಆಕೆಯ ಹಣೆಯಲ್ಲಿ ಬರೆದಿರಲಿಲ್ಲ. ಯುದ್ಧದಲ್ಲಿ ಮೃತನಾದ ಅವನನ್ನು ಅಲ್ಲೇ ಎಲ್ಲಿಯೋ ಮಣ್ಣು ಮಾಡಲಾಯಿತೆಂಬ ಮಾತನ್ನು ಕೇಳಿದಳು. ಆ ಮಾತು ಕೇಳಿದಾಗ ಆಕೆಗೆ ಏನಾಯಿತೊ. ತಾನೇ ಮಗನನ್ನು ಹುಡುಕಿ ತರುವುದಾಗಿ ಹೊರಟಳು. ಅಂದಿನಿಂದ ಹನುಮವ್ವ ಹುಚ್ಚಿ ಹನುಮವ್ವನಾದಳು ಎಲ್ಲಿ ಮಣ್ಣುಗುಡ್ಡೆ ಕಂಡರೆ, ಅಲ್ಲೇ ತನ್ನ

ಮಗನ ಸಮಾಧಿಯಾಗಿರಬಹುದೆಂದು ಸಿಕ್ಕ ಕಲ್ಲಿನಲ್ಲೋ, ಕಟ್ಟಿಗೆಯ ಚೂರಿನಲ್ಲೋ, ಏನೂ ಇಲ್ಲವಾದರೆ ಬರೀ ಕೈಯ ಉಗುರುಗಳಿಂದಲೋ ಆ ಮಣ್ಣು ಗುಡ್ಡೆಯನ್ನು ಬಗಿಯುವಳು. ಅದರ ಮೇಲೆ ಉರುಳಿ, ಅಳುತ್ತ, ಮಗನನ್ನು ಕರೆಯುತ್ತ ಹೊರಳಾಡುವಳು. ಹುಚ್ಚಾಗಿ ನಗುವಳು, ಅಳುವಳು, ಹಾಡುವಳು. ಆಕೆಯನ್ನು ಕಂಡು ಮೊದಲ ಹನುಮವ್ವನನ್ನು ಅರಿತಿದ್ದವರಿಗೆ, ಕರುಳು ಹಿಡಿದಂತಾಗಿ, ಕಣ್ಣು ತೇವವಾಗುವುದು. ಎಲ್ಲರೂ ಆಕೆಗೊದಗಿದ ದುರ್ವಿಧಿಗಾಗಿ ಪರಿತಪಿಸುವರು. ಆದರೆ ಸಹಾನುಭೂತಿ, ಪಶ್ಚಾತ್ತಾಪ ಆಕೆಯನ್ನು ಮತ್ತೆ ನೇರವಾದ ಜೀವನಕ್ಕೆ ಮರುಳಿಸಲು ಸಾಧ್ಯವಾಗಲಿಲ್ಲ; ಒಮ್ಮೆ ಹತ್ತಾರು ಜನ ಉಂಡುಟ್ಟು ನಲಿಯುತ್ತಿದ್ದ ಮನೆ, ಇಲಿ ಹೆಗ್ಗಣಗಳ, ಬೀದಿ ನಾಯಿಗಳ ವಾಸಸ್ಥಳವಾಗಿ, ಮುಳ್ಳು ಬೆಳೆಯುವ ಭೂಮಿಯಾಗುವುದನ್ನು ತಪ್ಪಿಸಲಾಗಲಿಲ್ಲ. ಯಾರೂ ಯಾವ ರೀತಿಯಲ್ಲೂ ಆಕೆಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ.

ಆ ಹೊತ್ತಿನಲ್ಲಿ ಅರೆ ಬೆತ್ತಲೆಯಾಗಿ ಅಲೆಯುತ್ತಿದ್ದ ಹೆಣ್ಣನ್ನು ನೋಡಲಾರದೆ ಪೂಜಾರಿ ಭೀಮಯ್ಯ ಆಕೆಯ ರಕ್ಷಣೆಯ ಹೊಣೆಯನ್ನು ಹೊತ್ತುಕೊಂಡ.

ಪೂಜಾರಿ ಭೀಮಯ್ಯ ಗೋಣೂರಿನ ಆಂಜನೇಯ ದೇವಾಲಯದ ಪೂಜಾರಿ. ಕೆರೆಯ ಬಳಿಯ ಕಣಗಿಲ ಬನದಲ್ಲಿ, ದೇವಾಲಯಕ್ಕೆ ಹತ್ತಿರವಾಗಿಯೇ ಆತನ ಮನೆ. ಆತನಿಗೂ, ಮಬ್ಬು ಕವಿಯುತ್ತಿದ್ದ ಕಣ್ಣುಗಳಲ್ಲಿ ಬೆಳಕು ತುಂಬಿ ಬೆಳೆಯುತ್ತಿದ್ದ ಮಗುಳು ಗಿರಿಜೆಯಲ್ಲದೆ, ಬೇರಾವ ಬಾಳಬಂಧನವೂ ಇರಲಿಲ್ಲ. ಆತನ ಬಾಳು ಆ ಮಗಳ ಪಾಲನೆ ಪೋಷಣೆಗೆ ಆಂಜನೇಯನ ಅರ್ಚನೆಗೆ ಮೀಸಲಾಗಿತ್ತು. ಬೆಳೆದು ವಯಸ್ಸಿಗೆ ಬಂದ ಗಿರಿಜೆ, ಅರಮನೆಯ ಊಳಿಗಕ್ಕೆ ಸೇರಿದ ಮೇಲೆ, ಆಂಜನೇಯನೊಬ್ಬನೇ ಅವನ ಬಾಳಸರ್ವಸ್ವವಾಗಿದ್ದ.

ಗಿರಿಜಾ ಅರಮನೆಯ ಊಳಿಗಕ್ಕೆ ಸೇರಿದ ಮೇಲೂ ಅಷ್ಟು ದಿನ ಆತನಿಗೆ ಮಗಳ ಚಿಂತೆ ತಪ್ಪಿರಲಿಲ್ಲ. ತನ್ನ ಮಗಳಾಗಿ ಜನಿಸಿದವಳು. ಯೋಗ್ಯನಾದವನೊಬ್ಬನ ಮಡದಿಯಾಗಿ, ಅವನ ಮನೆಯನ್ನು ಬೆಳಗಿದ ದೀಪ, ಹೋದವನ ಮನೆಯ ನಂದಾದೀಪವಾಗಿ ಬೆಳಗುವ ದಿನ ಎಂದು

ಬಂದೀತೋ, ಯಾರ ಕೈಗೆ ಅವಳ ಕೊರಳಿಗೆ ತಾಳಿ ಕಟ್ಟುವ ಪುಣ್ಯ ಬರುವುದೋ ಎಂಬ ಚಿಂತೆ ಅಷ್ಟುದಿನ ಆತನನ್ನು ಕಾಡಿತ್ತು. ಆದರೆ ಎಲ್ಲಕ್ಕೂ ಆಂಜನೇಯನನೇ ಶರಣೆಂದು ನಂಬಿದ ಭೀಮಯ್ಯ ಈ ಚಿಂತೆಯನ್ನು ಅಷ್ಟಾಗಿ ಹಚ್ಚಿಕೊಂಡಿರಲಿಲ್ಲ. ಮಗಳು ತನ್ನವಳಾದರೇನು, ಅವಳನ್ನು ಕಾಪಾಡಿ, ಅವಳಿಗೆ ಸರಿಯಾದ ಸಂಸಾರದ ದಿಕ್ಕು ತೋರಿಸುವ ಹೊಣೆಗಾರಿಕೆ, ತಮ್ಮಿಬ್ಬರನ್ನು ಸೃಷ್ಟಿಸಿದ ಆಂಜನೇಯನಿಗಿಲ್ಲವೇ. ಲೋಕವನ್ನೇ ಸಾಕುವ ಬಲಭೀಮ ತನ್ನ ಬೆಂಬಲಕ್ಕಿರುವಾಗ ಈ ಚಿಂತೆ ನನಗೇಕೆ ಎಂದು, ತನ್ನ ಹೆಗಲಿನ ಮೇಲಿನ ಭಾರವನ್ನು ಹನುಮಂತನ ವಿಶ್ವವಿಶಾಲ ವಜ್ರಬಾಹುಗಳ ಮೇಲೆ ಹೇರಿ ಆ ಚಿಂತೆಯನ್ನು ಕಡಿಮೆಮಾಡಿಕೊಂಡಿದ್ದ. ಆಂಜನೇಯನ ಅನುಗ್ರಹವೂ ಗಿರಿಜೆಗೆ ಲಭಿಸಿದಂತಿತ್ತು. ಹಳ್ಳಿಯ ಹತ್ತಾರು ಜನ ಹುಡುಗಿಯರು, ತಮ್ಮವನಾದಾನೇ ಎಂದು ಹಾರೈಸಬಹುದಾದಂಥ ಗಂಡು ವೀರಣ್ಣನ ಅನುರಾಗ ದೃಷ್ಟಿ ಗಿರಿಜೆಯ ಮೊಗದ ಮೇಲೆ ಬಿದ್ದು, ಅವಳ ಕನ್ನಡಿಗೆನ್ನೆಗಳ ಮೊಗವನ್ನು ಕೆಂಪೇರಿಸಿತ್ತು.

ಬಂಗಾರದ ಬಣ್ಣದ ತೆನೆಗಳ ಭಾರಕ್ಕೆ ಬಾಗಿ ಭೂಮಿಯನ್ನು ಆಲಿಂಗಿಸಿದ ಭತ್ತದ ಪೈರುಗಳ ನಡುವೆ ಸುಗ್ಗಿಯ ದೇವತೆಯಂತೆ ನಗುತ್ತಾ, ಕೊಯಿಲು ಪದ ಹಾಡುತ್ತಾ ಗದ್ದೆಯನ್ನು ಕೊಯ್ಯುತ್ತಿದ್ದ ಗಿರಿಜೆ ತನ್ನನ್ನೇ, ಎವೆಯಿಕ್ಕದ ಕಣ್ಣುಗಳಿಂದ ನೋಡುತ್ತಿದ್ದ ವೀರಣ್ಣನ ಹೃದಯವನ್ನು, ಭತ್ತದ ತೆನೆಯೊಂದಿಗೆ ಕತ್ತರಿಸಿ ತನ್ನ ಮಡಿಲಲ್ಲಿ ತುಂಬಿಕೊಂಡಳು. ನಕ್ಕಾಗ ಕುಳಿಬೀಳುವ ಅವಳ ತುಂಬುಗೆನ್ನೆಗಳ ಕುಳಿಯಲ್ಲಿ ವೀರಣ್ಣನ ಕಣ್ಣು ಬಂದಿಯಾದುವು. ಅವನ ನೋಟಕ್ಕೆ ಅವಳ ತಲೆ ಬಾಗಿದರೆ, ಅವನ ಕಣ್ಣು ಅವಳ ಕಾಲಲ್ಲಿ ಹುದುಗಿ ಬಾಗಿದ ಮೊಗವನ್ನು ಕಾಣಲು ಯತ್ನಿಸುವುದು.

"ದಂಡಿಗೆ ಸೋಲಲಿಲ್ಲ, ದಾಳಿಗೆ ಸೋಲಲಿಲ್ಲ—ಹುಡುಗೀ ಕಣ್ಣಿಗೆ ಸೋತುಬಿಟ್ಟ ಗಂಡು ಭಂಟ" ಎಂದು ಅವರಿಬ್ಬರನ್ನು ಕಂಡ ಹಳ್ಳಿಯ ಹಿರಿಯರು ನಕ್ಕು, ಅವರಿಬ್ಬರ ದಾಂಪತ್ಯಕ್ಕೆ ತಮ್ಮ ಹರಕೆಯ ರಕ್ಷೆಯೂ ಇದೆಯೆಂದು ಸೂಚಿಸಿದರು.

ತನ್ನ ವಿವಾಹ ಆದಷ್ಟು ಬೇಗ ಆಗಬೇಕೆಂಬ ಆತುರ ಅವರಿಬ್ಬರಿಗೂ ಇದ್ದಷ್ಟೇ ಉಳಿದವರಿಗೂ ಇದ್ದರೂ, ಆಂಜನೇಯ ವಿವಾಹದ ಮುಹೂರ್ತಕ್ಕೆ ಒಪ್ಪಿ ಬಲಗಡೆಯ ಹೂವು ಕೊಡುವ ವರೆಗೂ, ಆ ಶಾಸ್ತ್ರವನ್ನು ಮುಗಿಸಬಾರದು ಎಂಬ ಭೀಮಯ್ಯನ ಹಟದಿಂದಾಗಿ, ಆ ಕಾರ್ಯ ವರ್ಷ ವರ್ಷಕ್ಕೆ ಮುಂದಕ್ಕೆ ಹೋಗುತ್ತಾ ಬಂದಿತ್ತು. "ಮದುವೆಯ ಕಾರ್ಯ ಮುಗಿಯದೆ ತಡವಾಗುತ್ತಿದೆ. ನೀನು ಶುದ್ಧ ಬ್ರಹ್ಮಚಾರಿಯಾಗಿ ಕೆಟ್ಟೆ. ಪ್ರಾಯದ ಮಕ್ಕಳ ಒಂಟಿಬಾಳಿನ ನೋವು ನಿನಗೆ ಅರ್ಥವೇ ಆಗುವುದಿಲ್ಲ. ಶುದ್ಧ ಕಲ್ಲು ಹನುಮನೇ ಆಗಿಬಿಟ್ಟೆ" ಎಂದು ಭೀಮಯ್ಯ ತನ್ನ ಆರಾಧ್ಯ ದೇವತೆಯೊಂದಿಗೆ ಜಗಳವಾಡಿದರೂ, ಇಂದಲ್ಲ ನಾಳೆ ಅದು ಆಗುವ ಕೆಲಸ ಎಂದುಕೊಂಡು "ನಿನಗಿಷ್ಟ ಬಂದಾಗ ಹೂ ಕೊಡು," ಎಂದು ನಿಶ್ಚಿಂತನಾಗಿದ್ದ.

"ನನಗಿನ್ನು ಬಾಳಿನಲ್ಲಿ ಬೇರಾವ ಚಿಂತೆಯೂ ಇಲ್ಲ. ನಿನ್ನ ಇಷ್ಟವಿದ್ದಷ್ಟು ದಿನ ನಿನ್ನ ಸೇವೆ ಮಾಡಿಸಿಕೊ" ಎಂದು ಭೀಮಯ್ಯ ಆಂಜನೇಯನಿಗೆ ಹೇಳಿದ ಹೊತ್ತಿನಲ್ಲಿ, ಆಂಜನೇಯ ಅವನ ಹೆಗಲ ಮೇಲೆ ಹನುಮವ್ವನನ್ನು ಹೇರಿದ್ದ.

ಒಂದು ದಿನ ಇನ್ನೂ ಮೂಡಲ ಕಪ್ಪು ಕರಗಿ ಕೆಂಪಾಗುವ ಮುನ್ನವೇ ಹತ್ತು ಜನ ಹೊರುವಷ್ಟು ಕಣಗಿಲಹೂವನ್ನು ಕೊಯ್ದು, ಕೆರೆಯಲ್ಲಿ ಸ್ನಾನ ಮುಗಿಸಿ, ಪೂಜೆಗೆಂದು ದೇವಾಲಯಕ್ಕೆ ಬಂದ ಭೀಮಯ್ಯ. ಆಂಜನೇಯನ ಗುಡಿಯ ಮುಂದೆ ಬೆತ್ತಲೆಯಾಗಿ ಹೊರಳಾಡುತ್ತಿದ್ದ ಹನುಮವ್ವನನ್ನು ಕಂಡು ಬೆಚ್ಚಿಬಿದ್ದ. ನಿದ್ರೆಯಿಲ್ಲದೆ, ಶೋಕ–ಉನ್ಮಾದದಿಂದ ಕೆಂಪಾದ ಆಕೆಯ ಕಣ್ಣುಗಳು, ಜಡೆಗಟ್ಟಿ ಹುಚ್ಚಾಗಿ ಹಾರುತ್ತಿದ್ದ ಕೂದಲು, ಧೂಳುಗಟ್ಟಿದ ಮುಖ, ಮೈ ಆಕೆಯ ವಿವಸ್ತ್ರಸ್ಥಿತಿ, ಅಳುತ್ತಾ ಹೊರಳಾಡುತ್ತಿರುವ ಹೆಣ್ಣು ಹೃದಯದ ದುರಂತ–ಇವುಗಳನ್ನು ಕಂಡು ಭೀಮಯ್ಯನ ಎದೆಯನ್ನು ಗರಗಸದಿಂದ ಕುಯ್ದಂತಾಯಿತು. ಮುತ್ತೈದೆತನದ ಸೌಭಾಗ್ಯದಿಂದ ಅಲಂಕೃತಳಾಗಿ, ತಾಯ್ತನದ ಹೆಮ್ಮೆಯಲ್ಲಿ ಬೀಗುತ್ತಾ ಶನಿವಾರದ ಪೂಜೆಗೆ ತಪ್ಪದೆ ಬರುತ್ತಿದ್ದ ಹನುಮವ್ವನನ್ನು ಭೀಮಯ್ಯ ಕಂಡಿದ್ದ, ಆಂಜನೇಯನಲ್ಲಿ ಆಕೆಗಿದ್ದ ಭಕ್ತಿಯನ್ನು ಕಂಡು ಮೆಚ್ಚಿಕೊಂಡಿದ್ದ. ಆ

ಹನುಮವ್ವ ಈಗ–ಹೀಗೆ! ಈಗವಳು ಮುತ್ತೈದೆಯಲ್ಲ, ತಾಯಿಯೂ ಅಲ್ಲ; ಯಾರನ್ನು ಕಂಡರೂ ಬಗುಳುವ ಬೀದಿಯ ನಾಯಿಗಳೂ ಕಂಡು ಹೆದರಿ ಚೀರುತ್ತಾ ಓಡುವ, ಮಕ್ಕಳ ತಾಯಂದಿರು ಹೆದರಿ, ತೋಳೊಳಗೆ ಇರುವ ಮಕ್ಕಳ ಮುಖಕ್ಕೆ ಸೆರಗುಹೊದಿಸಿ 'ಶ್ರೀರಾಮರಕ್ಷೆ, ಆಂಜನೇಯ ರಕ್ಷೆ' ಎನ್ನುತ್ತಾ ಬೆದರಿ ಸರಿಯುವಂಥ-ಬೆತ್ತಲುವ್ವೈಯ್ಯ ಹುಚ್ಚಿ! ಎಂಥ ಹೆಣ್ಣಿಗೆ ಎಂಥ ಪಾಡು! ಅದನ್ನು ಕಂಡು ಅವನ ಕಾಲು ಮರಗಟ್ಟಿತು. ಅಷ್ಟು ದಿನ ತಾನು ಪೂಜಿಸಿದ ದೇವತೆಯ ಮೇಲೂ ಒಂದು ಗಳಿಗೆ ಸಿಟ್ಟು ಬಂತು. ಆ ಸಿಟ್ಟಿನಲ್ಲೇ ದೇವಾಲಯದ ಒಳಗೆ ಹೋಗಿ, ಭೀಮಾಕಾರ ವಾಗಿ ನಿಂತ ಆಂಜನೇಯನ ಮುಂದೆ ತಾನು ತಂದಿದ್ದ ಪೂಜಾ ದ್ರವ್ಯಗಳ ನ್ನೆಲ್ಲಾ ಎಸೆದು, ಆತನ ಪಾದದ ಬಳಿ ಕುಸಿದು—

"ಮಾರುತಿರಾಯಾ, ಮಾರುತಿರಾಯಾ ಇದೇನು ನಿನ್ನ ಆಟ! ಈ ಹೆಣ್ಣಿನ ವಿಷಯಕ್ಕೆ ಇಷ್ಟೇಕೆ ನಿಷ್ಕರುಣಿಯಾದೆ ತಂದೆ. ಸೀತಾದೇವಿಯ ದುಃಖಕ್ಕೆ ಮರುಗಿ, ಸಾಗರವನ್ನೇ ಹಾರಿ, ಲಂಕೆಯನ್ನು ಸುಟ್ಟು, ರಾಕ್ಷಸ ನನ್ನು ಕೊಂದ ಮಹಾಕರುಣಿ ನೀನು. ನಿನಗೆ ಈ ಹೆಣ್ಣೆಂದರೆ ಇಷ್ಟು ಅಸಡ್ಡೆಯೇ, ತಾತ್ಸಾರವೇ? ಕರುಣೆಯೇ ಬತ್ತಿ ಹೋಯಿತೇ ನಿನ್ನ ಎದೆಯಲ್ಲಿ? ಹೇಳು, ಹೇಳು, ಯಾವ ಪಾಪಕ್ಕೆಂದು ಇಷ್ಟು ಛಲಿಸು ತ್ತಿದೀಯೆ? ಆಕೆಯನ್ನು ಕೊಂದಾದರೂ ನಿನ್ನ ಸಿಟ್ಟು ತೀರಿಸಿಕೊಳ್ಳ ಬಾರದೇ ತಂದೆ. ಮರ್ಯಾದಸ್ಥನ ಮಗಳನ್ನು ಬೆತ್ತಲೆಯಾಗಿ ಅಲೆಸಿ, ನೀಚಜನರಂತೆ ನೀನೂ ನಗುತ್ತೀಯಾ? ಅಹಿರಾವಣ ಮಹಿರಾವಣನನ್ನು ನಡುಗಿಸಿದ ನಿನ್ನ ಕ್ರೋಧವ ಕಣ್ಣಿಗೆ ಈ ಬಡಹೆಣ್ಣಿನ ಬೇಟೆಯಾಡಿ ನೋಡುವ ಚಪಲವೇ?"

—ಎಂದು ತನ್ನ ಶೋಕದ ಆಳವನ್ನೇ ತಾನರಿಯದೆ ಉನ್ಮತ್ತ ನಗು ನಗುತ್ತಿರುವ ಹೆಣ್ಣನ್ನೂ ಕಂಡು ಕಂಬನಿಗರೆದ.

ತನ್ನ ಮಾತಿಗಾಗಲಿ, ಶೋಕಕ್ಕಾಗಲಿ, ಕಂಬನಿಗಾಗಲಿ ಕದಲಿ ಚಲಿ ಸದೆ ನಿಂತ ಶಿಲಾಮೂರ್ತಿಗೆ, ಮಜ್ಜನಮಾಡಿಸಿ, ಹೂವಿಡುತ್ತಾ ಹೇಳಿದ—

"ಲೋಕವೇ ಕೈ ಬಿಟ್ಟ ಈ ಹೆಣ್ಣಿಗೆ ನೀನಲ್ಲದೆ ಬೇರೆ ಯಾರು ದಿಕ್ಕು ನಿನಗೆ ಅವಳನ್ನು ಸಾಕುವ ಆಸೆ ಇಲ್ಲದಿದ್ದರೆ, ನಿನ್ನ ದಾಸಾನು ದಾಸ ನನಗಾದರೂ ಸಾಕಿಕೊ ಎಂದು ಹೇಳು."

ಭೀಮಯ್ಯನ ಆ ಪ್ರಾರ್ಥನೆಗೆ ಉತ್ತರಕೊಟ್ಟಂತೆ ಆಂಜನೇಯನ ಬಲತೋಳ ಮೇಲಿದ್ದ ಹೂವು ಕೆಳಗುರುಳಿತು. ಅದನ್ನು ಕಂಡು ಭೀಮಯ್ಯ ಅವಾಕ್ಕಾದ. ತನ್ನ ಮಗಳ ಮದುವೆಗೆ ಹೂವು ಕೇಳಿದರೆ ಕೊಡದ ಈ ಮೊಂಡ ಹನುಮ, ಇವಳ ವಿಷಯಕ್ಕೆ ಎಷ್ಟು ಬೇಗ ಹೂವು ಕೊಟ್ಟ—

"ಇನ್ನೇನೂ ಸಂಸಾರದ ಚಿಂತೆ ನನಗಿಲ್ಲ, ನಿನ್ನ ಚಿಂತೆಯೊಂದೇ ಸಾಕು ಎಂದರೆ, ಈ ಹೊಸ ಸಂಸಾರ ನನ್ನ ಹೆಗಲಿಗೆ ಹಾಕುತ್ತೀಯಾ ಕಳ್ಳ ಹನುಮ! ಅದೇನು ಆಟ ಆಡುತ್ತೀಯೋ ಆಡು, ನಾನೂ ನೋಡೇ ಬಿಡುತ್ತೇನೆ."

—ಎಂದು, ಆ ಅಚ್ಚರಿ-ಮೆಚ್ಚುಗೆಯಲ್ಲೇ ದಿನದ ಪೂಜೆಯನ್ನು ಮುಗಿಸಿ, ಹೊರಬಂದು, ದೇವಾಲಯದ ಮುಂದೆ ಬೆತ್ತಲೆಯಾಗಿ ಬಿದ್ದಿದ್ದ ಹೆಣ್ಣಿಗೆ ತನ್ನ ಹೆಗಲ ಮೇಲಿನ ಉತ್ತರೀಯವನ್ನೇ ಉಡಿಸಿ, ನೈವೇದ್ಯಮಾಡಿದ ಹಾಲು ಹಣ್ಣುಗಳನ್ನು ಬಲಾತ್ಕಾರವಾಗಿ ತಿನಿಸಿ ಮನೆಗೆ ಕರೆತಂದ.

ಅಂದಿನಿಂದ ಗಿರಿಜೆಯೊಂದಿಗೆ ಹನುಮವ್ವನೂ ಭೀಮಯ್ಯನಿಗೆ ಒಬ್ಬ ಮಗಳಾದಳು. ಬೆಳೆದು, ಅರಮನೆಯ ಊಳಿಗದಲ್ಲಿದ್ದ ಗಿರಿಜೆ ಅವನಿಗೆ ಭಾರವಾಗಿರಲಿಲ್ಲ. ಆದರೆ ಈ ಮಗಳನ್ನು ಸಾಕುವುದೇ ತುಂಬಾ ಕಷ್ಟದ ಕೆಲಸವಾಗಿತ್ತು. ದಿನಗಟ್ಟಲೆ ಭೀಮಯ್ಯನ ಮನೆಯಲ್ಲೇ ಮನಸ್ಸಿಗೆ ಬಂದದ್ದನ್ನು ಮಾಡುತ್ತಾ ಓಡಾಡುತ್ತಿದ್ದ ಹನುಮವ್ವ, ಒಮ್ಮೊಮ್ಮೆ ಬುದ್ಧಿ ತಿರುಗಿದಾಗ ಹೇಳದೆ ಕೇಳದೆ ಮನಸ್ಸು ಬಂದತ್ತ ಹೊರಟು ಬಿಡುವಳು. ಆಗ ಹಗಲಾಗಲಿ, ರಾತ್ರಿಯಾಗಲಿ, ಅವಳನ್ನು ಹುಡುಕಿ ಮತ್ತೆ ಮನೆಗೆ ಕರೆತರುವವರೆಗೂ ಭೀಮಯ್ಯ ಊಟ ನಿದ್ರೆಮಾಡುತ್ತಿರಲಿಲ್ಲ. ನಡುರಾತ್ರಿಯಾದರೂ ಪಂಜುಹಿಡಿದು ಹುಡುಕುತ್ತಾ ಹೊರಡುವನು. ತಾನೇ ಮುಪ್ಪಿನ ವಯಸ್ಸಿಗೆ ಬಂದ ಮುದುಕ ಹಗಲು, ರಾತ್ರಿ ಈ ಹುಚ್ಚಿಯ ಹಿಂದೆ ಬಿದ್ದು ಒದ್ದಾಡುವುದನ್ನು ಕಂಡು "ಈ ವಯಸಿನಲ್ಲಿ ಇದೇನು ಆಟ ಪೂಜಾರಯ್ಯ. ಹುಚ್ಚು ಹಿಡಿದಿರೋದು ಅವಳಿಗಲ್ಲ ನಿನಗೆ." ಎಂದು ರೇಗಿದರೆ, "ನಿಜ. ಆ ಹನುಮ ಯಾರಿಗೆ

ಯಾವ ಹೊತ್ತಿನಲ್ಲಿ ಏನು ಹುಚ್ಚು ಹಿಡಿಸುತ್ತಾನೋ ಕಂಡವರು ಯಾರು? ನನಗೇನು ಕನಸು ಬಿದ್ದಿತ್ತೆ, ಆ ಕಳ್ಳ ಹನುಮ ಹೀಗೆ ಮಾಡುತ್ತಾನೇಂತ. ಇನ್ನು ನನಗೆ ಸಂಸಾರವಿಲ್ಲ. ಇನ್ನು ನನ್ನ ಭಾರ ನಿನ್ನಮೇಲೆ ಇರಲಿ ಎಂದರೆ, 'ಇಲ್ಲಾನ್ನುತ್ತೀಯಾ, ಇಗೋ ಇಲ್ಲಿದೆ ನೋಡು ನಿಮ್ಮಪ್ಪನ ಮನೆಗಂಟು, ಹೊತ್ತುಕೋ' ಅಂತ ಹೆಗಲ ಮೇಲೆ ಹಾಕಿದ. ನಾನೇನು ಮಾಡಲಿ" ಎನ್ನುವನು ನಗುತ್ತಾ.

"ಇದೋ ಮೊದಲೇ ಗುಡ್ಡಗಾಡುಸೀಮೆ. ಹಾವೋ—ಹುಳುವೋ, ಹುಲಿಯೋ ಕಿರುಬವೋ ಏನಾದರೂ ಅಡ್ಡವಾದರೆ ಗತಿ ಏನು? ಹಗಲು ರಾತ್ರಿ ನೋಡದೆ ಅಲೆಯುತ್ತೀಯಲ್ಲಾ"

—ಎಂದರೆ,

"ಅವನು ಆಡಿಸಿದ ಹಾಗೆ ಆಡುವನು ನಾನು. ಅವನಿಗಿಲ್ಲದ ಭಯ, ಚಿಂತೆ ನನಗೇನು?"

—ಎಂದು ನಿಶ್ಚಿಂತನಾಗಿ ಉತ್ತರಕೊಡುವನು ಭೀಮಯ್ಯ.

ಹನುಮವ್ವನ ಬಗ್ಗೆ ಭೀಮಯ್ಯನಿಗಿದ್ದ ಅಕ್ಕರೆ, ಕಕ್ಕಲಾತಿಯನ್ನು ಅರಿತುಕೊಂಡ ಜನ, ತಾವೂ ಅವನ ಭಾರದಲ್ಲಿ ಪಾಲುಗಾರರಾದರು. ಮನೆಬಿಟ್ಟು ಬಂದ ಹನುಮವ್ವ ಎಲ್ಲಿಯಾದರೂ ಕಣ್ಣಿಗೆ ಬಿದ್ದರೆ, ಇದ್ದ ಕೆಲಸ ಬಿಟ್ಟು ಮೊದಲು ಅವಳನ್ನು ಕರೆತಂದು ಮನೆ ಸೇರಿಸುವರು. ಅವನು ಅವಳನ್ನು ಹುಡುಕ ಹೊರಟರೆ ತಾವೂ ಅವನ ಬೆಂಬಲವಾಗಿ ಹೊರಡುವರು. ಹೀಗಾಗಿ ಒಂದು ರೀತಿಯಲ್ಲಿ ಹನುಮವ್ವ ಬರೀ ಭೀಮಯ್ಯನ ಮಗಳಾಗಿಯೇ ಉಳಿಯದೆ ಹಳ್ಳಿಯ ಮಗಳಾಗಿದ್ದಳು. ತನ್ನೊಂದಿಗೆ ಹಳ್ಳಿಯ ಜನವೂ ಪರದಾಡುವುದನ್ನು ಕಂಡು, ಹಿಂದೆ ಅವರು ಆಡಿದುದನ್ನು ಜ್ಞಾಪಿಸಿಕೊಂಡು ಭೀಮಯ್ಯ—

"ನೋಡಿದಿರಾ ಅವನ ಆಟಾನ. ನನಗೆ ಹುಚ್ಚು ಹಿಡಿಸಿದ ಎಂದಿರಿ. ಈಗ ನೋಡಿದಿರಾ, ನಿಮಗೂ ಹೇಗೆ ಹುಚ್ಚುಹಿಡಿಸಿ ಆಟ ಆಡಿಸುತ್ತಿದ್ದಾನೆ. ಬಲಭೀಮ ಅಂದರೆ ಸಾಮಾನ್ಯದವನೇ!"

—ಎಂದು ನಗುವನು.

"ಎಷ್ಟಾದರೂ ನೀನು ಪ್ರಸಾದ ಹಂಚೋ ಪೂಜಾರಯ್ಯ, ಅಲ್ಲವೇ. ಈ ಪ್ರಸಾದಾನೂ ಹಂಚಿಬಿಟ್ಟೆ."

—ಎಂದು ಹಳ್ಳಿಯ ಜನವೂ ಅವನೊಂದಿಗೆ ನಗುವಿನಲ್ಲಿ ಬೆರೆಯುವುದು. ಯಾರ ಮಾತೂ ಅರ್ಥವಾಗದೆ, ತನ್ನ ಪ್ರಪಂಚದಲ್ಲೇ ತೊಳಲುವ ಹನುಮವ್ವನೂ ಒಮ್ಮೊಮ್ಮೆ ಇವರ ನಗುವಿನೊಂದಿಗೆ ತನ್ನ ನಗುವನ್ನು ಬೆರಸುವಳು.

"ಈ ಯುದ್ಧಕ್ಕಷ್ಟು ಬೆಂಕಿಬೀಳ. ಮಾಡಿದೋರ ಪಾಪ ನೋಡಿದೋರ ಮೇಲೆ ಅಂದ್ಹಾಗೆ, ಯಾರೋ ಮಾಡಿದ ಯುದ್ಧ ಈ ಜೀವನಕ್ಕೆ ಬೆಂಕಿ ಹಾಕ್ಬಿಡ್ತು. ರಾಜ್ಯ ದೊರೆಗಾಯಿತು, ಸತ್ತೋನು ಧೀರ ಅನ್ನಿಸಿಕೊಂಡ. ಏನೂ ಅರೀದ ಈ ಹೆಣ್ಣು ಮುಕ್ಕ ಕಾಡುಮೇಡು ಅಲೀಬೇಕಾಯ್ತು. ಶಿವಶಿವಾ ಈ ಗೋಳು ಎಂದಿಗೆ ತಪ್ತದೋ" ಎಂದು ನಿಟ್ಟುಸಿರುಬಿಡುವರು, ಅವಳ ನಗುವನ್ನು ಕೇಳಿದ ಜನ.

ಅವಳು ನಗುವಳು; ಅದನ್ನು ಕೇಳಿದ ಜನದ ಕಣ್ಣಲ್ಲಿ ಕಂಬನಿ ಒಸರುವುದು.

೨

ಆಕಸ್ಮಿಕವಾಗಿ ಹುಣಿಸೆಯ ತೋಪಿನಲ್ಲಿ ಹನುಮವ್ವನ ಧ್ವನಿಯನ್ನು ಕೇಳಿದ ವೀರಣ್ಣನಿಗೆ ಒಂದು ಗಳಿಗೆ ಮೈ ನಡುಗಿತಾದರೂ, ಆ ಧ್ವನಿ ಯಾರದೆಂಬುದು ಮನವರಿಕೆಯಾದ ಕೂಡಲೇ ತನ್ನ ಗಳಿಗೆಯ ಭೀತಿಯನ್ನು ನೆನೆದು ನಗು ಬಂತು. ಕೂಡಲೇ ಕುದುರೆಯಿಂದಿಳಿದು, ಅದನ್ನು ಪಕ್ಕದ ಸಾಲುಮರಕ್ಕೆ ಕಟ್ಟಿಹಾಕಿ, ಹನುಮವ್ವನನ್ನು ಕರೆತರಲು ಹೊರಟ. ತನ್ನ ಪಾಡಿಗೆ ತಾನು ಏನೋ ಮಾತನಾಡಿಕೊಳ್ಳುತ್ತ ಧೂಳಿನಲ್ಲಿ ಹೊರಳುತ್ತಿದ್ದ ಹನುಮವ್ವ ಇವನ ಹೆಜ್ಜೆಯ ಸದ್ದುಕೇಳಿದ ಕೂಡಲೇ, ಮಣ್ಣಿನಿಂದ ಮೇಲೆದ್ದು ಹತ್ತಿರ ಬಂದ ವೀರಣ್ಣನನ್ನೇ ದುರುಗುಟ್ಟಿ ನೋಡಿದಳು. ಮುಸುಗುಗತ್ತಲಲ್ಲೂ, ಅವನ ಆಕಾರವನ್ನು ಕಂಡಕೂಡಲೇ ಹನುಮವ್ವನ ಮೈ ಏಕೋ ಗವಗುಟ್ಟಿ ನಡುಗಲಾರಂಭಿಸಿತು. ಮರುಗಳಿಗೆಯೇ ಕತ್ತಲು ಬೆದರುವಂತೆ ವಿಕಾರ ಸ್ವರದಲ್ಲಿ ಚೀರಿ, ಅವನಿಂದ ದೂರ ಓಡಲಾರಂಭಿಸಿದಳು. ಇದ್ದಕಿದ್ದಂತೆಯೇ ಅವಳು ಚೀರಿದುದನ್ನು ಕೇಳಿ ವೀರಣ್ಣನ ಮೈಯ ಮೇಲೆ ಮಂಜು ನೀರನ್ನು ಸುರಿದಂತಾಯಿತು. ಮರುಗಳಿಗೆಯೇ

ಅದನ್ನು ಸಾವರಿಸಿಕೊಂಡು ಎತ್ತಲೋ ಓಡಿಹೋಗುತ್ತಿದ್ದ ಅವಳನ್ನು ಹಿಡಿದು ತರಲು, ಅವನೂ ಅವಳ ಹಿಂದೆಯೇ ಓಡಿದ.

ಯಾವುದೋ ಭೀತಿ ಬೆನ್ನಟ್ಟಿದಂತಿದ್ದ ಹನುಮವ್ವನ ಕಾಲುಗಳಿಗೆ ಬಿರುಗಾಳಿಯ ಬಲ ಬಂದಂತೆ ಓಡುತ್ತಿದ್ದಳು—ದುರ್ಗದ ದಾರಿಯಲ್ಲಿ. ಅಷ್ಟೇ ವೇಗವಾಗಿ ಅವಳನ್ನು ಹಿಂಬಾಲಿಸಿದ ವೀರಣ್ಣ, ಅಷ್ಟು ದೂರ ಹೋದಾಗ, ದೂರದಲ್ಲಿ, ಯಾರೋ ದುರ್ಗದ ಕಡೆಯಿಂದ ಬರುತ್ತಿರುವ ಜನರ ಧ್ವನಿ ಕೇಳಿಸಿ, ಅಲ್ಲಿಂದಲೇ ಗಟ್ಟಿದನಿಯಲ್ಲಿ "ಹಿಡಿದುಕೊಳ್ಳಿ" ಎಂದು ಕೂಗಿ ತನ್ನ ಓಟದ ವೇಗವನ್ನು ಕಡಮೆಮಾಡಿದ.

ಹನುಮವ್ವನ ಓಡುವ ಕಾಲಿನ ಸದ್ದು ನಿಂತು, ಅವಳನ್ನು ಆವರು ಯಾರೋ ಹಿಡಿದುನಿಲ್ಲಿಸಿರಬಹುದೆಂದು ತೋರಿತು, ವೀರಣ್ಣನಿಗೆ. ಆದರೂ ನಿಲ್ಲದೆ, ಆದಷ್ಟು ಬೇಗ ಅವಳ ಹಿಂದೆಯೇ ನಡೆದ.

ದುರ್ಗದತ್ತಣಿಂದ ಬರುತ್ತಿದ್ದ ನಾಲ್ಕರು ಜನ ಹೆಂಗಸರ ಗುಂಪು ಹನುಮವ್ವನನ್ನು ನಿಲ್ಲಿಸಿಕೊಂಡಿತ್ತು. ಆ ಗುಂಪಿನೊಳಗೆ ಅಡಗಿದ ಹನುಮವ್ವ ಅಳುವ ಸದ್ದು ಕೇಳಿಬಂದು ಅವಳು ಅಲ್ಲೇ ಇರುವಳೆಂಬುದನ್ನು ಸೂಚಿಸಿತು. ವೀರಣ್ಣ ಆ ಗುಂಪಿನ ಹತ್ತಿರ ಹೋದಾಗ, ಗುಂಪಿನೊಳಗಿದ್ದ ಹೆಂಗಸೊಬ್ಬಳು ಸಿಟ್ಟಿನ ಸ್ವರದಲ್ಲಿ ಕೇಳಿದಳು—

"ಯಾರು ಇವಳನ್ನು ಹೀಗೆ ಓಡಿಸಿಕೊಂಡು ಬಂದದ್ದು ? ಹುಚ್ಚು ಹೆಣ್ಣನ್ನು ಹೀಗೆ ಕಾಡಿಸುವ ನೀವು ಏನು ಮನುಷ್ಯರೋ ಪಶುಗಳೋ ?"

ಆ ಹೆಣ್ಣಿನ ಸ್ವರ ವೀರಣ್ಣನಿಗೆ ಪರಿಚಿತವಾದುದೇ. ಗಿರಿಜೆಯದು, ಅರಮನೆಯಿಂದ ಹಗಲು ಕೆಲಸ ತೀರಿಸಿಕೊಂಡು, ತನ್ನ ಜೊತೆಗಾತಿಯರೊಂದಿಗೆ ಹಳ್ಳಿಗೆ ಹಿಂದಿರುಗುತ್ತಿದ್ದ ಗಿರಿಜೆಯ ಕೈಯಲ್ಲೇ ಸಿಕ್ಕಿದಳು ಹನುಮವ್ವ.

ಆ ಪ್ರಶ್ನೆಯ ಜೋರಿನಿಂದ ಬೆಚ್ಚಗಾದ ವೀರಣ್ಣನ ಮೈ ಗಿರಿಜೆಯ ಪರಿಚಿತ ಸ್ವರವನ್ನು ಕೇಳಿ ಶಾಂತವಾಯಿತು. ಓಡಿಬಂದುದರಿಂದ ಏದುತ್ತಿದ್ದ ಉಸಿರನ್ನು ಹತೋಟಿಗೆ ತಂದುಕೊಂಡು ಹೇಳಿದ—

"ನಾನು ಗಿರಿಜಾ, ವೀರಣ್ಣ. ಇವಳನ್ನ ನಾನು ಓಡಿಸಿಕೊಂಡು ಬರಲಿಲ್ಲ. ನನ್ನ ನೋಡಿ ಏಕೊ ಏನೊ ಇವಳೇ ಹೀಗೆ ಓಡಿ ಬಂದಳು. ಯಾರೂಂತ ತಿಳಿದು ಕೊಂಡಳೋ ಏನೋ."

ಹತ್ತಿರವಲ್ಲೇ ವೀರಣ್ಣನ ಧ್ವನಿಯನ್ನು ಕೇಳಿದ ಹನುಮವ್ವ, ಗಿರಿಜೆಯ ಹಿಡಿತದಿಂದಲೂ ಬಿಡಿಸಿಕೊಂಡು ಓಡಲು ಯತ್ನಿಸಿದಳು. ಮತ್ತೆ ಅವಳ ಮೈ ಭಯದಿಂದ ಕಂಪಿಸತೊಡಗಿತ್ತು. ಅವಳ ಬೆನ್ನು ನೇವರಿಸಿ ಭೀತಿಯನ್ನು ನಿವಾರಿಸಿ, ಗದ್ದರಿಸಿ ಆಡಿದ ತನ್ನ ಮಾತಿಗೆ ತಾನೇ ನಾಚಿ ಮೆದುವಾದ ಧ್ವನಿಯಲ್ಲಿ ಹೇಳಿದಳು ಗಿರಿಜಾ—

"ನೀವೇ, ಕತ್ತಲಲ್ಲಿ ಕಾಣಲಿಲ್ಲ. ಹೀಗೆ ಏಕೆ ಓಡಿ ಬಂದಳು?"

"ಏಕೋ ನಾ ಕಾಣೆ."

—ಎಂದು ವೀರಣ್ಣ ಹನುಮವ್ವನನ್ನು ತಾನು ವೆಂಕಟರಮಣಸ್ವಾಮಿಯ ಗುಡಿಯ ಬಳಿಯ ಹುಣಿಸೆಯ ತೋಪಿನಲ್ಲಿ ಕಂಡುದು, ಅಲ್ಲಿಂದ ಅವಳನ್ನು ಹಳ್ಳಿಗೆ ಕರೆದುಕೊಂಡು ಹೋಗಲು ಯತ್ನಿಸಿದಾಗ ನಡೆದುದೆಲ್ಲವನ್ನೂ ವಿವರಿಸಿದ.

"ಇವಳ ರೀತೀನೇ ತಿಳಿಯೋದಿಲ್ಲ. ಒಂದೊಂದು ಸಲ ಗುರುತಿದ್ದೋರನ್ನ ಕಂಡರೂ, ಗುರುತಿಲ್ಲದವರನ್ನು ಕಂಡ ಹಾಗೇ ಆಡುತ್ತಾಳೆ. ವಿಚಿತ್ರ ಹೆಂಗಸು."

—ಎಂದು ಗಿರಿಜೆ ವೀರಣ್ಣನಿಗೆ ಸಮಾಧಾನ ಹೇಳಿದಳು. ವೀರಣ್ಣನೂ ಕುದುರೆಯನ್ನು ದೇವಾಲಯದ ಬಳಿಯೇ ಕಟ್ಟಿ ಬಂದದ್ದರಿಂದ, ಆತನೂ ಗುಂಪಿನೊಂದಿಗೆ ನಡೆಯತೊಡಗಿದ. ಆಕಸ್ಮಿಕವಾಗಿ ಗಿರಿಜೆಯನ್ನು ಕಂಡುದು ಅವನಿಗೆ ತುಂಬ ಸಂತೋಷವಾಗಿತ್ತು. ಅವಳೊಂದಿಗೆ ಅವನು ಮಾತನಾಡುವ ವಿಷಯವೂ ಬೇಕಾದಷ್ಟಿತ್ತು. ಗಿರಿಜೆಯಿಂದ ಆದಷ್ಟು ಮಟ್ಟಿಗೆ ಅರಮನೆಯ ವಿಷಯವನ್ನು ಸಂಗ್ರಹ ಮಾಡಬೇಕೆಂದು ದಳವಾಯಿ ಮುದ್ದಣ್ಣ ಹೇಳಿದುದು ವೀರಣ್ಣನಿಗೆ ಮರೆತು ಹೋಗಿರಲಿಲ್ಲ. ಆ ವಿಷಯದಲ್ಲಿ ಗಿರಿಜೆಯೊಂದಿಗೆ ಆದಷ್ಟು ಬೇಗ ಮಾತನಾಡಬೇಕೆಂಬ ಚಪಲವೂ ಇತ್ತು. ಇವರೆ ಅದಕ್ಕೆ ಅನುಕೂಲವಾದ ಸಮಯ ಇದುರೆಗೂ ದೊರೆತಿರಲಿಲ್ಲ. ಈಗ ಅವಳು ಸಿಕ್ಕಿದ್ದರೂ, ಜೊತೆಯಲ್ಲಿ ಬೇರೆ ಹೆಂಗಸರು ಇದ್ದದ್ದರಿಂದ ಮನಬಿಚ್ಚಿ ಮಾತನಾಡಲು ಅವಕಾಶವಿರಲಿಲ್ಲ. ಆದರೂ ವಿಷಯ ತಿಳಿದುಕೊಳ್ಳಬೇಕೆಂಬ ತನ್ನ ಚಪಲವನ್ನು ಹತ್ತಿಕ್ಕಲಾರದೆಯೆ, ಸುತ್ತುಬಳಸಾಗಿ ಕೇಳಿದ:

" ಅರಮನೇಲಿ ಈಗ ಬಹಳ ಗದ್ದಲ ಅಲ್ಲವೇ ಗಿರಿಜಾ ? "

" ಅದೇನು ಹೇಳಿ ಕೇಳಿ ಅರಮನೆ. ಗದ್ದಲ ಇಲ್ಲದೆ ಇರುತ್ತದೆಯೇ "

—ವೀರಣ್ಣನ ಪ್ರಶ್ನೆಗೆ ಅಷ್ಟೇ ಹಾರಿಕೆಯ ಉತ್ತರ ಕೊಟ್ಟಳು ಗಿರಿಜೆ. ಆದರೆ ವೀರಣ್ಣ ಅಷ್ಟಕ್ಕೇ ಬಿಡಲಿಲ್ಲ.

" ಗದ್ದಲ ಎನ್ನೋ ಯಾವಾಗಲೂ ಇದ್ದದ್ದೆ, ಆದರೆ ಈಗಂತೂ ಇನ್ನೂ ವಿಶೇಷ. ಪಟ್ಟಾಭಿಷೇಕ ಬೇರೆ ನಡೆಯೋದಿದೆ. ಅಂದಹಾಗೆ—ನಿನ್ನೆ ಸಭೇಲಿ ಏನೋ ಗದ್ದಲ ನಡೀತು ಅಂತ ಕೇಳಿದೆ. ಮುಂದೆ ಪಟ್ಟಕ್ಕೆ ಯಾರು ಬರ್ತಾರೆ ಅನ್ನೋದೇನಾದರೂ ನಿಷ್ಕರ್ಷೆ ಆಯಿತಂತಾ ? "

" ನಿಮ್ಮ ದಳವಾಯಿಗಳೇ ಎನೋ ಗದ್ದಲ ಮಾಡಿದರಂತೆ "

—ಗಿರಿಜೆಯ ಜೊತೆಗಿದ್ದ ಮತ್ತೊಬ್ಬ ಅರಮನೆಯ ಪರಿಚಾರಗಿತ್ತಿ ತಾನೂ ಮಾತನಾಡುವ ಚಪಲವನ್ನು ಹತ್ತಿಕ್ಕಲಾರದೆಯೇ, ನಡುವೆ ಬಾಯಿ ಹಾಕಿ ಹೇಳಿದಳು.

" ದಳವಾಯಿಗಳು ದೊಡ್ಡೋರು. ಅರಮನೆಯೋರು ಅನ್ನ ಇಡೋ ಧಣಿಗಳು, ದೊಡ್ಡೋರ ಸುದ್ದಿ ನಮಗೇಕೆ ಹೇಳು. ನಾವು ಮಾಡೋದು ಪರಿಚಾರಿಕೆ ಕೆಲಸ. ನಮ್ಮ ಚಾಕರಿ ನಾವು ನೋಡಿಕೊಂಡು ಹೋದರೆ ಸಾಲದೆ ? ಕಬ್ಬಿಣ ಹೊಡಿಯೋ ಹತ್ತಿರ ನೊಣಕ್ಕೇನು ಕೆಲಸ ? "

ಅರಮನೆಯ ವಿಷಯ ತಾವು ಚರ್ಚಿಸಬಾರದಂಥ ಮಾತು ಎಂಬ ಧ್ವನಿಯಲ್ಲಿ ಹೇಳಿದಳು ಗಿರಿಜೆ. ಆ ವಿಷಯ ಇಷ್ಟು ಚರ್ಚಿಸಿದುದೂ ತನಗೆ ಸಮಾಧಾನವಿಲ್ಲ ಎಂಬುದು ಧ್ವನಿಯಲ್ಲಿ ಸ್ಪಷ್ಟವಾಗಿತ್ತು. ಆದರೆ ಪರಿಚಾರಗಿತ್ತಿಗೆ ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇರಲಿಲ್ಲ. ವೀರಣ್ಣನಿಗೆ ಅದು ಅರ್ಥವಾದರೂ ಅರ್ಥವಾದುದನ್ನು ತೋರಿಸಿಕೊಳ್ಳುವುದು ತನ್ನ ಉದ್ದೇಶಕ್ಕೆ ಸಹಕಾರಿಯಾಗಿರಲಿಲ್ಲವಾದುದರಿಂದ ಅದನ್ನು ಅರ್ಥಮಾಡಿಕೊಳ್ಳುವವನಂತೆಯೇ ಹೇಳಿದ.

" ನಿನ್ನ ಮಾತು ನಿಜ ಗಿರಿಜಾ. ದೊಡ್ಡೋರ ವಿಷಯ ಅವರ ಎದುರಿಗೆ ಮಾತಾಡೋ ಯೋಗ್ಯತೆ ನಮಗಿಲ್ಲ. ಆದರೆ ನಮ್ಮ ನಮ್ಮಲ್ಲಿ ಮಾತನಾಡಿಕೊಳ್ಳುವುದಕ್ಕೇನು ? ಆ ಸುದ್ದೀನೇ ಮಾತಾಡಬಾರದು ಅಂತ ಯಾರಾದರೂ ಅಡ್ಡಿ ಮಾಡಿದಾರಾ ? "

" ಅಡ್ಡಿ ಮಾಡಲಿ, ಬಿಡಲಿ. ನಾವು ಯಾಕೆ ಮಾತಾಡಬೇಕು? ಅವರಿಂದ ನಮಗಾಗೋದು ಏನಿದೆ? "

ವೀರಣ್ಣನ ಪ್ರಶ್ನೆಗೆ ಉತ್ತರವಾಗಿ ಗಿರಿಜಾ ಮರುಪ್ರಶ್ನೆ ಹಾಕಿದಳು.

" ಏನಾದರೂ ನಮಗಾಗೋದು ಅಷ್ಟರಲ್ಲೇ ಇದೆ. ಆದರೂ ಇದ ವಿಷಯ ಮಾತನಾಡಿಕೊಳ್ಳಲಿಕ್ಕೇನು? ಊರ ಜನ ಎಲ್ಲವೂ ಮಾತನಾಡುವುದಿಲ್ಲವೇ? "

" ನಾವು ಊರ ಜನ ಅಲ್ಲವಲ್ಲ! "

" ಮತ್ತೇನು? "

" ಊ ಹೂ—ನಾವು ಅರಮನೆಯ ಉಪ್ಪು ಉಣ್ಣೋ ಜನ. ನಮಗವರು ಸಂಬಳಸಾರಿಗೆ ಕೊಡೋದು ಚಾಕರಿ ಮಾಡಲಿ ಅಂತಾನೇ ಹೊರತು, ತಮ್ಮ ವಿಷಯ ಅಲ್ಲಲ್ಲಿ ಮಾತನಾಡಲಿ ಅಂತಲ್ಲ. ಅಷ್ಟಕ್ಕೂ ಮೂರು ಹೊತ್ತೂ ಊಳಿಗ ಗೆಯ್ಯೋ ಜನಕ್ಕೆ ಏನು ಸುದ್ದಿ ತಿಳಿಯುತ್ತೆ? ದಳವಾಯಿಗಳ ವಿಚಾರ ಏನು ಅಂತ ನಿಮ್ಮನ್ನು ಕೇಳಿದರೆ ನಿಮಗೆ ಗೊತ್ತಾ? "

ಗಿರಿಜೆಯ ಉತ್ತರದಲ್ಲಿ ಇಂಥ ಪ್ರಶ್ನೆಗಳನ್ನು ಕೇಳಬಾರದು ಎಂದು ಛೇಡಿಸುವ ಕಟಕಿ ಇತ್ತು. ಆ ಮಾತಿನ ಮುಳ್ಳಿರಿತದಿಂದ ವೀರಣ್ಣ ಒಂದು ಗಳಿಗೆ ಅಪ್ರತಿಭನಾದ. ಮಾತಿನ ಜಾಡು ಹೀಗೆ ತಿರುಗಬಹುದೆಂದು ಆತ ಊಹಿಸಿರಲಿಲ್ಲ. ಎಂತಲೇ ಗಿರಿಜೆಯ ಪ್ರಶ್ನೆಗೆ ಏನೂ ಉತ್ತರ ಕೊಡಲಾಗಲಿಲ್ಲ. ಆದರೆ ಗಿರಿಜೆಯ ಜೊತೆಗಿದ್ದ ಹೆಂಗಸರಿಗೆ ಗಿರಿಜೆಯ ಮಾತು ಅಡ್ಡಿಯಾಗಿರಲಿಲ್ಲ. ಎಂತಲೇ ಇನ್ನೊಬ್ಬಳು ಕೇಳಿದಳು—

" ಕಸ ಗುಡಿಸಿ, ಪಾತ್ರೆ ಬೆಳಗುವ ನಮ್ಮಂಥವರಿಗೇನೂ ಗೊತ್ತಿರುವುದಿಲ್ಲ. ಆದರೆ ನಾಗತಿಯರ ಸಜ್ಜೆಯ ದಾಸಿ ನೀನು. ನಿನ್ನ ಬಿಟ್ಟು ಅವರು ಹೆಜ್ಜೇನೂ ಅಲ್ಲಾಡೋದಿಲ್ಲ. ಎಲ್ಲಿಗೆ ಕಳಿಸಬೇಕಾದ್ರೂ ನಿನ್ನನ್ನೇ ಕಳಿಸುತ್ತಾರೆ. ಹೀಗಿರುವಾಗ ನಿನಗೆ ಗೊತ್ತಿಲ್ಲ ಅಂದರೆ ಯಾರಾದರೂ ನಂಬಲಿಕ್ಕಾಗುತ್ತದೆಯೇ? ನಾವು ಕೇಳಬಾರದ ಸಣ್ಣ ಜನ. ಅದಕ್ಕೇ ಹೇಳೋಕೆ ಹಿಂಜರೀತೀಯಾ. "

—ಎಂದಳು. ಅವಳ ಮಾತನ್ನು ಕೇಳಿ ಗಿರಿಜೆಗೆ ಬೇಡವೆಂದರೂ ಬಿಡದೆ ಅಪ್ರಿಯವಾದ ಈ ಮಾತನ್ನು ಮುಂದುವರಿಸುತ್ತಿದ್ದಾರಲ್ಲಾ ಎನಿಸಿ ಸಿಟ್ಟು ಬಂದಿತು. ಆದರೆ ಸಿಟ್ಟಿನ ಮಾತಾಡುವುದರಿಂದ ಜೊತೆಯವರಲ್ಲಿ ಮನಸ್ತಾಪ ಬೆಳೆಯುವುದರ ವಿನಾ ಹೆಚ್ಚಿನ ಪ್ರಯೋಜನವಾಗುವುದಿಲ್ಲ ವೆನ್ನುವುದನ್ನರಿತು—

"ಹೀಗೆಲ್ಲಾ ನಾವು ಅರಮನೆ ವಿಷಯ ಮಾತಾಡುತ್ತೇವೆ ಎಂತ ತಿಳಿದರೆ ಅರಮನೆಯೋರು ಶೂಲಕ್ಕೇರಿಸಿಯಾರು. ಬಿಡು, ನಮಗೇಕೆ ಅವರ ಮಾತು. ಏನಾದರೂ ಆಡಿಕೊಳ್ಳಲಿ, ಏನಾದರೂ ಮಾಡಿಕೊಳ್ಳಲಿ. ನಮ್ಮದೇ ನಮಗೆ ಹಾಸಿ ಹೊದೆಯುವಷ್ಟಿರುವಾಗ ಇನ್ನೊಬ್ಬರ ಚಿಂತೆ ಕಟ್ಟಿಕೊಂಡು ನಮಗಾಗುವುದೇನು, ಹೊತ್ತಾಗಿ ಹೋಯಿತು. ಅಪ್ಪಯ್ಯ ಕಾಯ್ತಾ ಇರ್ತಾನೆ. ಇವಳು ಬೇರೆ ತಪ್ಪಿಸಿಕೊಂಡು ಬಂದಿದಾಳೆ, ಎಲ್ಲೆಲ್ಲಿ ಪರದಾಡ್ತಾ ಇರ್ತಾನೋ ಏನೋ. ನೀವು ನಡೆದುಕೊಂಡೇ ಬಂದಿರಾ ದುರ್ಗದಿಂದ?"

—ಎಂದು ಆ ಮಾತು ಮುಗಿಸಿದಂತೆ ಮಾಡಿ ವೀರಣ್ಣನನ್ನು ಕೇಳಿದಳು.

"ಇಲ್ಲ, ಕುದುರೆಯ ಮೇಲೆ ಬಂದೆ. ಹನುಮವ್ವನನ್ನು ಕರೆದು ಕೊಂಡು ಹೋಗೋಣಾಂತ ಇಳಿದು ಗುಡಿಯ ಹತ್ತಿರ ಮರಕ್ಕೆ ಕಟ್ಟಿ ಹಾಕಿದ್ದೆ."

"ಹಾಗಾದರೆ ನೀವು ಮುಂದೆ ಹೋಗಿ, ಅಪ್ಪಯ್ಯನಿಗೆ ಹನುಮಕ್ಕ ಇಲ್ಲಿದಾಳೆ. ನಮ್ಮ ಜೊತೇಲಿ ಬರ್ತಾ ಇದಾಳೆ. ಏನೂ ಚಿಂತೆ ಮಾಡಬೇಡಿ ಅಂತ ಹೇಳಿ."

—ಎಂದಳು.

ಗಿರಿಜಾ ಆ ಮಾತು ಹೇಳಿದ ಬಳಿಕ ತನಗಿನ್ನು ಅಲ್ಲಿ ಮಾತನಾಡಲು ಅವಕಾಶವಿಲ್ಲವೆಂಬುದು ಅರಿವಾಗಿ, ಅನಿವಾರ್ಯವಾಗಿ, ವೀರಣ್ಣ ವೇಗ ವಾಗಿ ಹೆಜ್ಜೆ ಹಾಕುತ್ತಾ ಮುಂದೆ ನಡೆದ. ಮಾತನಾಡಿಕೊಳ್ಳುತ್ತಾ ಅವರಾಗಲೇ ಗುಡಿಯ ವರೆಗೂ ಬಂದಿದ್ದರು. ಕತ್ತಲಲ್ಲಿ ಮರಕ್ಕೆ ಕಟ್ಟಿದ ಕುದುರೆ, ಹುಲ್ಲಿನಲ್ಲಿ ಬಾಯಾಡಿಸುತ್ತಾ ನಿಂತುದು, ಇವರ ಹೆಜ್ಜೆ ಸದ್ದನ್ನು ಕೇಳಿ ಕೆನೆಯಿತು.

ಓಡುನ ... ು

ಹಳ್ಳಿಯತ್ತ ... ು,

ಅರಿವಾಯಿತ ...

ಒಂದೂ ಮಾ ...

ಸತ್ತಿದ್ದ ಹನುಮ ...

" ಈ ದಂ ...

ಜೊತೇಲಿ ಮಾತಾಡ ...

ಹನುಮವ್ವನ ...

ಹೆಂಗೆಸರಿಗೂ ಆಶ್ಚರ್ಯವಾ ...

" ಏಕೆ ಮಾತಾಡಬಾರದು ...

—ಗಿರಿಜೆಯೇ ಕೇಳಿದಳು.

" ಊಹೂ, ಮಾತಾಡ್ತಾರ್ದು."

" ಏಕೆ ? "

" ಅವರು ಕಾಲಿಟ್ಟ ಕಡೆ ಕಣ್ಣೀರು, ಓಡಾಡಿದ ಕ... ಅವರ ಕಣ್ಣು ಬಿದ್ದ ತಾವ ನೆಲದಲ್ಲಿ ಹಸಿರು ಕೂಡಾ ಬೆಳೆಯಾಕಿಲ್ಲ. ನನ್ನ ಮಗನ್ನೊಯ್ದು ಎಲ್ಲೋ ಮಣ್ಣು ಮಾಡಲಿಲ್ಲವಾ ಈ ಹಾಳಾದೋರು ; ಇವರ ವಂಶ ನಿರ್ವಂಶವಾಗ "—ಎಂದು ಕರ್ಕಶವಾಗಿ ಹೇಳಿ, ಗಟ್ಟಿಯಾಗಿ ಅಳಲಾರಂಭಿಸಿದಳು. ಒಂದು ಗಳಿಗೆ ಅದು. ಮರುಗಳಿಗೆಯೇ—

" ಗಿರಿಜಾ....ಗಿರಿಜಾ....ನಿನ್ನ ಬಿಡೋದಿಲ್ಲ ಆ ದೈಯ್ಯ....ಗಬಕ್ ಅಂತ ನುಂಗಿಬಿಡುತ್ತದೆ. ನಂಬಬ್ಯಾಡ" ಎಂದವಳೇ 'ದೆಯ್ಯ....ದೈಯ್ಯಾ.... ಸಿಪಾಯಿ ದೈಯ್ಯಾ' ಎಂದು ಗಟ್ಟಿಯಾಗಿ ನಗಲಾರಂಭಿಸಿದಳು.

ಅವಳ ಮಾತು-ನಗುವನ್ನು ಕೇಳಿ ಗಿರಿಜೆಯ ಮೈಯ ಮೇಲೆ ಹಾವು ಹರಿದಂತಾಯಿತು.

" ಛಿ, ಹಾಗೆಲ್ಲಾ ಮಾತಾಡಬಾರದು ಬಿಡು "

— ಎಂದು ಗದರಿಕೊಂಡಳು. ಆದರೆ ಹನುಮವ್ವನಿಗೆ ಅದರ ಪರಿವೆ ಇರಲಿಲ್ಲ. ಕತ್ತಲು ತುಂಬಿದ ಮುಗಿಲಿನಲ್ಲಿ ಕೆದರಿದ್ದ ತಾರೆಗಳು ಬೆದರುವಂಥ ಸ್ವರದಲ್ಲಿ ತನಗೆ ತಾನೇ ಹಾಡು ಹೇಳುತ್ತಿದ್ದಳು—

...ಟ್ಟು

...ನಡಿಗೆಯ ವೇಗಕ್ಕೆ,
...ಬ ಉದ್ದೇಶಕ್ಕಿಂತಲೂ
...ಕು ನುಡಿಯಿಂದ ಅವನಲ್ಲಿ
...ಗಿರಿಜೆ ಅಂತಃಪುರದಲ್ಲಿ ನಡೆದು
...ತನಾಡುವುದೂ ಸಲ್ಲದು ಎಂಬ ರೀತಿ
...ಲ್ಲ ನಿರಾಶೆಯನ್ನು ಮೂಡಿಸಿತ್ತು. ಅವಳಿಂದ
...ಸಿಕೊಳ್ಳಬೇಕು ಎಂದು ಮುದ್ದಣ್ಣ ಹೇಳಿದ್ದ. ಗಿರಿಜೆ
...ಲ್ಲವೆಂದು ವೀಣ್ಣನಿಗೆ ಗೊತ್ತಿದ್ದರೂ, ತನ್ನ ಮೇಲಿನ ಒಲುಮೆ
...ಂದ ಅವಳು ಏನು ನಡೆಯುತ್ತಿದೆ ಎಂಬ ಬಗೆ ಸುಳಿವನ್ನಾದರೂ ಕೊಡಬಹುದು ಎಂದು ಊಹಿಸಿದ್ದ. ಈಗ ಅವಳು ಮಾತನಾಡಿದ ರೀತಿಯಿಂದ ಅಷ್ಟು ನಿರೀಕ್ಷೆಯೂ ವಿಫಲವೆಂದು ತೋರಿ, ಇವನ ಮನಸ್ಸು ಪ್ರಕ್ಷುಬ್ಧವಾಗಿತ್ತು. ತನ್ನವರು, ತನ್ನವರೆಂದು ತಾನು ನಂಬಿದವರು—ಎಲ್ಲರೂ ತನಗೆ ದ್ರೋಹ ಮಾಡುತ್ತಿದಾರೆಂದೇ ಆತನಿಗೆ ತೋರಿತು.

ಆ ಭಾವನೆ ಮೂಡಿ ಬಂದ ಹೊತ್ತಿನಲ್ಲೇ, ಹಿಂದೆ ಅಂತಃಪುರದ ಇದಿರು ನಡೆದ ಘಟನೆಯೂ ನೆನಪಿಗೆ ಬಂದಿತು. ಅದು ಅಂತಃಪುರದ ಬಾಗಿಲಲ್ಲಿ ಕಾವಲಿದ್ದ ಕಸ್ತೂರಿನಾಯಕ ವೀರಣ್ಣನ ಖಾಸಾ ಅಣ್ಣ. ಆದರೆ ಅಂದು ಆತ ಇವನು ತಮ್ಮನಲ್ಲ, ಯಾರೋ ಗುರುತರಿಯದ ಅಪರಿಚಯಸ್ಥ ಎಂಬ ರೀತಿಯಲ್ಲಿ ನಡೆದುಕೊಂಡಿದ್ದ. ನಾಗತಿ ಯಾರನ್ನೂ ಬಿಡಕೂಡದೆಂದು ಕಟ್ಟಪ್ಪಣೆ ಮಾಡಿರಬಹುದು. ಆದರೆ ಅದಕ್ಕೆ ಬೆನ್ನಲ್ಲಿ ಬಿದ್ದ ತಮ್ಮನೂ ಹೊರತಲ್ಲವೆ? ಹೊರಗಿನವನಂತೆ ಮಾತನಾಡಿ ಅಪಮಾನಿಸಬೇಕೇ? ಅದೂ ತನ್ನ ಕೈಕೆಳಗಿನ ಭಟರ ಇದಿರು? ಮರೆಯಲ್ಲಿ

ಕರೆದು ವಿಶ್ವಾಸದಿಂದ ಆ ಮಾತು ಹೇಳಬಹುದಾಗಿತ್ತು. ನಾಗತಿಯ ಅಪ್ಪಣೆಯಾದರೂ, ತಾನೇ ಅಲ್ಲಿಗೆ ಬಂದಾಗ ಸಂಬಂಧವನ್ನೂ, ಮರೆತು, ಕೈಕೆಳಗಿನವರ ಇದಿರು ಅಪಮಾನವಾಗುವಂತೆ ನಡೆಯುವುದೇ ? ತಾನಾಗಿದ್ದರೆ ಹೀಗೆ ಮಾತಾಡುತ್ತಿರಲಿಲ್ಲ—ಎಂದು ಕೊಂಡ. ಹಾಗೆಂದುಕೊಂಡಾಗ ಅವನ ಅಸಮಾಧಾನ, ಮುನಿಸು ಮತ್ತಷ್ಟು ಹೆಚ್ಚಾಗಿತ್ತು. ಅಂತಃಪುರದ ದ್ವಾರದಲ್ಲಿ ನಾಗತಿಯಿಂದ ಕಾವಲಿಗೆ ನೇಮಿತನಾದವನು ತನ್ನ ಅಣ್ಣ ಎಂದು ತಿಳಿದಾಗ, ಅವನ ಹೃದಯದಲ್ಲಿ ಆಸೆಯೊಂದು ಕುಡಿಯೊಡೆದಿತ್ತು. ಆದರೆ ಕಸ್ತೂರಿನಾಯಕನ ನಡತೆಯಿಂದ ಆ ಆಸೆಯ ಚಿಗುರು ಕಮರಿದುದಷ್ಟೇ ಅಲ್ಲ, ಅದರೊಂದಿಗೆ ಅಪಮಾನದ ಕಾವೂ ತಟ್ಟಿತ್ತು. ಅಂದು ವೀರಣ್ಣನ ಎದೆಯಲ್ಲಿ ಆದ ಗಾಯ ಇನ್ನೂ ಆರಿರಲಿಲ್ಲ. ಆಗ ಗಿರಿಜೆಯಾಡಿದ ಮಾತಿನಿಂದ, ಆ ಹುಣ್ಣನ್ನು ಸೂಜಿಯಿಂದ ಇರಿದಂತಾಗಿ, ಆ ನೋವು, ಸಿಟ್ಟು ಮತ್ತೆ ಅವನ ಎದೆಯಲ್ಲಿ ಮರುಕಳಿಸಿತು.

ಆ ಸಿಟ್ಟಿನಲ್ಲೇ ವೇಗವಾಗಿ ನಡೆದು ಕುದುರೆಯನ್ನೇರಿ, ಕುದುರೆಯ ಮೊಗದ ಮೇಲೆ ಛಾವಟಿಯಿಂದ ಹೊಡೆದ. ಅನಿರೀಕ್ಷಿತವಾಗಿ ಧಣಿಯಿಂದ ಏಟು ತಿಂದ ಕುದುರೆ, ಒಂದು ಗಳಿಗೆ ದಿಗ್ಭ್ರಾಂತವಾಗಿ, ಏಟಿನ ನೋವಿಗೆ ಮುಂಗಾಲುಗಳಿಂದ ನೆಲವನ್ನೊದೆದು, ಹಿಂಗಾಲುಗಳ ಮೇಲೆ ಎದ್ದು ನಿಂತು ಕೇಗರಿಸಿ, ಮರುಗಳಿಗೆಯೇ ನಾಗಾಲೋಟದಿಂದ ಹಳ್ಳಿಯತ್ತ ಓಡಿತು.

ಕುದುರೆಯ ಓಟದ ವೇಗ, ಕಣ್ಣನ್ನು ಕವಿದ ಅಸಮಾಧಾನದ ಕಾವಳದಲ್ಲಿ ವೀರಣ್ಣನಿಗೆ ಸುತ್ತಲದಾವುದೂ ಕಾಣುವಂತಿರಲಿಲ್ಲ. ದಾರಿಯಲ್ಲಿ ಕೆರೆಯಂಚಿನಲ್ಲಿ ಪೂಜಾರಿ ಭೀಮಯ್ಯ ಪಂಜು ಹಿಡಿದು ಇನ್ನಿಬ್ಬರು ಪಳ್ಳಿಯವರೊಂದಿಗೆ ತನಗೆ ಇದಿರಾಗಿಯೇ ಬರುತ್ತಿರುವುದೂ ಕಾಣಲಿಲ್ಲ. ಕುದುರೆಯೇ ಅಭ್ಯಾಸಬಲದಿಂದ, ಅವನ ಮನೆಯ ಬಾಗಿಲ ಇದುರಿಗೆ ನಿಲ್ಲದಿದ್ದರೆ, ಬಹುಶಃ ಅದು ಹೋದಷ್ಟು ದೂರವೂ ಮೈಯರಿಯದೆಯೇ ಹೋಗುತ್ತಿದ್ದನೋ ಏನೋ.

ಮನೆಯ ಮುಂದೆ ನಿಂತ ಕುದುರೆಯಿಂದ ಇಳಿದು, ಅದನ್ನು ಪಕ್ಕ

ದಲ್ಲಿಯೇ ಇದ್ದ ದನದ ಕೊಟ್ಟಿಗೆಯಲ್ಲಿ ಕುದುರೆಗಳಿಗೆಂದೇ ಬಿಟ್ಟ ಸ್ಥಳದಲ್ಲಿ ಕಟ್ಟಿ, ಅಭ್ಯಾಸಬಲದಿಂದ ಅದರ ಮುಂದೆ ಹುಲ್ಲು ಹರಡಿ ಅದರ ಬೆನ್ನ ತಟ್ಟಿ ಹೊರಗೆ ಬಂದ.

ಅವನು ಕೊಟ್ಟಿಗೆಯಿಂದ ಹೊರಗೆ ಬರುವ ವೇಳೆಗೆ, ಅವನ ಅತ್ತಿಗೆ, ಕಸ್ತೂರಿನಾಯಕನ ಹೆಂಡತಿ ಗಂಗವ್ವ ಕಾಲು ತೊಳೆಯಲು ನೀರು ತೆಗೆದು ಕೊಂಡು ಬಂದು ಕೊಟ್ಟಳು.

" ಕಸ್ತೂರಣ್ಣ ಮನೆಗೆ ಬಂದನೆ ಅತ್ತಿಗೆ! "

ಆ ಮಾತೂ ವೀರಣ್ಣ ಅಭ್ಯಾಸವಶದಿಂದಲೇ ಕೇಳಿದುದು. ಸಾಧಾರ ಣವಾಗಿ ಅವನು ಮನೆಗೆ ಬರುವ ವೇಳೆಗೆ ಕಸ್ತೂರಿನಾಯಕನೂ ಅರಮನೆ ಯಿಂದ ಬರುತ್ತಿದ್ದ.

" ಊಹೂ. ಇನ್ನೂ ಬಂದಿಲ್ಲ. ಯಾಕೋ ತಡವಾಗಿದೆ. ನಿನಗೇನಾ ದರೂ ಸಿಕ್ಕಿ ಹೇಳಿದರೇ! "

ತನಗೇನಾದರೂ ಅರಮನೆಯಲ್ಲಿ ವಿಶೇಷ ಕೆಲಸಬಿದ್ದು ದುರ್ಗ ದಲ್ಲಿಯೇ ಇರಬೇಕಾಗಿ ಬಂದರೆ, ಕಸ್ತೂರಿನಾಯಕ ತಾನು ಬರುವುದು ತಡವಾಗುವುದೆಂದೋ, ಅಥವಾ ತನಗೆ ಕಾಯಬೇಕಾಗಿಲ್ಲವೆಂದೋ ತಮ್ಮ ನೊಂದಿಗೆ ಹೇಳಿ ಕಳಿಸುತ್ತಿದ್ದುದು ವಾಡಿಕೆಯಾಗಿತ್ತು. ಎಂತಲೇ ಗಂಗವ್ವ, ಈ ವೊದಲೇ ಮನೆಗೆ ಬರಬೇಕಾಗಿದ್ದ ಗಂಡ ಬರಲಿಲ್ಲವಲ್ಲಾ ಎಂದು, ಎಂದಿನಂತೆಯೇ ಮೈದುನನ್ನು ಕೇಳಿದಳು.

" ಏನೋ ನನಗೆ ತಿಳೀದು "

—ಎಂದು ವೀರಣ್ಣ ಕೈಕಾಲುಗಳನ್ನು ತೊಳೆದುಕೊಳ್ಳುತ್ತಾ ಅತ್ತಿ ಗೆಯ ಕಡೆ ನೋಡದೆಯೇ ಉತ್ತರ ಕೊಟ್ಟ.

" ನಿನಗೆಲ್ಲೂ ಸಿಕ್ಕಲಿಲ್ವಾ "

" ಊಹೂ. "

—ಎಂದು ಅಷ್ಟೇ ಉತ್ತರ ಕೊಟ್ಟ ವೀರಣ್ಣ ಮನೆಯೊಳಗೆ ಹೋದ. ಅವನ ಮಿತವಾದ ಮಾತು, ಆಡಿದ ಮಾತಿಗೇ ಮಾತು ಮುಗಿಸುವ ರೀತಿ ಯನ್ನು ಕಂಡು ಗಂಗವ್ವನಿಗೆ ಆಶ್ಚರ್ಯವಾಯಿತು. ವೀರಣ್ಣ ಆಕೆಯಲ್ಲಿ ಹಿಂದೆಂದೂ ಈ ರೀತಿ ನಡೆದುಕೊಂಡಿರಲಿಲ್ಲ.

ಗಂಗವ್ವ ತವರು ಮನೆಯಿಂದ ಕಸ್ತೂರಿನಾಯಕನ ಕೈಹಿಡಿದು ಈ ಮನೆಗೆ ಬಂದಾಗಿನಿಂದ, ವೀರಣ್ಣನಿಗೆ ಚಿಕ್ಕಂದಿನಲ್ಲೇ ತನ್ನ ತಾಯನ್ನು ಕಳೆದುಕೊಂಡ ಕೊರಗು ಮರೆಯಾಗಿತ್ತು. ಚಿಕ್ಕಂದಿನಲ್ಲೇ ತಂದೆತಾಯಿಗಳನ್ನು ಕಳೆದುಕೊಂಡು, ಸೋದರಮಾವನ ಪೋಷಣೆಯಲ್ಲಿ ಬೆಳೆದ ಇವರಿಗೆ, ಸೋದರಮಾವ ತಂದೆಯೇ ಆಗಿದ್ದರೂ, ತಾಯಿಯಂಥ ವಸ್ತುವಿಲ್ಲದ ಕೊರಗು ತಪ್ಪಿರಲಿಲ್ಲ. ಆದರೆ ಅತ್ತಿಗೆಯಾಗಿ ಬಂದ ಗಂಗವ್ವ. ಬರೀ ಅತ್ತಿಗೆಯಾಗಿಯೇ ಉಳಿಯದೆ ಅದಕ್ಕಿಂತ ಹೆಚ್ಚಾಗಿ ತಾಯಿಯಾಗಿದ್ದಳು. ಕಸ್ತೂರಿನಾಯಕ ವೀರನಾಯಕರ ನಡುವೆ ಇದ್ದ ವಯಸ್ಸಿನ ಅಂತರ ನಾಲ್ಕೇ ವರ್ಷವಾದರೂ, ಪ್ರಾಯಕ್ಕೆ ಬಂದ ಮೈದುನನನ್ನು ಹೊರಗಿನವನಂತೆ, ಪ್ರಾಯದ ಗಂಡಿನಂತೆ ಕಾಣದೆ ಮಗನಂತೆಯೇ ಕಂಡು, ಗಂಡನ ಒಲುಮೆಯೊಂದಿಗೆ ಮೈದುನನ ಪ್ರೀತಿಯನ್ನೂ ಗಳಿಸಿಕೊಂಡಿದ್ದಳು. ಸೇನೆಯಲ್ಲಿ, ಸಾವಿರ ಜನದೊಂದಿಗೆ ಒಬ್ಬನಾದ ವೀರಣ್ಣ, ಅತ್ತಿಗೆಯ ಕಣ್ಣಿನಲ್ಲಿ ಬರೀ ಸಿಪಾಯಿಯೇ ಅಲ್ಲ, ಸಾವಿರ ಕುದುರೆ ಸರದಾರ. ದೊರೆಗಳನ್ನು ಕಾಯುವ ತನ್ನ ಗಂಡನ ಹುದ್ದೆಯಲ್ಲಿ ಅವಳಿಗೆ ಅಭಿಮಾನವಿದ್ದರೂ, ಅವಳ ದೃಷ್ಟಿಯಲ್ಲಿ ಮೈದುನನದು ಇನ್ನೂ ದೊಡ್ಡ ಹುದ್ದೆ.

“ ನೀವು ಬರೀ ದೊರೆಗಳನ್ನು ಕಾಪಾಡೋ ಜನ. ನನ್ನ ಮೈದುನ ದೇಶವನ್ನೇ ಕಾಪಾಡುವ ಸರದಾರ ” ಎಂದು ದುರ್ಗದ ಸೀಮೆಯ ಭಾರವನ್ನೆಲ್ಲಾ ವೀರಣ್ಣನ ಹೆಗಲೇ ಹೊತ್ತಿದೆ ಎಂಬಷ್ಟು ಅಭಿಮಾನದಿಂದ ಮಾತನಾಡುವಳು. ಗಂಡನಿಗಿಂತ ಹೆಚ್ಚಾಗಿ ವೀರಣ್ಣನ ಯೋಗಕ್ಷೇಮ ವಿಚಾರಿಸುವಳು, ಉಪಚಾರ ಮಾಡುವಳು. ಅತ್ತಿತ್ತ ಬಿದ್ದ ಕಾಳುಕಡ್ಡಿಯನ್ನು ವೇಗವಾಗಿ ಆಯ್ದು ತಂದು, ತನ್ನ ಮರಿಯ ಬಾಯಿಗಿಡುವ ತಾಯಿ ಹಕ್ಕಿಯ ಕಕ್ಕುಲತೆಯಿಂದ, ಮೈದುನ ಸಂಜೆ ಮನೆಗೆ ಬಂದಾಗ ಉಪಚರಿಸಿ, ಅವನ ಊಟಕ್ಕೆ ಅಣಿಮಾಡುವಳು.

ಕಸ್ತೂರಿನಾಯಕನಿಗೂ ತನ್ನ ತಮ್ಮನೆಂದರೆ ಅಷ್ಟೇ ಅಭಿಮಾನವಿತ್ತು. ತಾನು ಮೊದಲು ಮನೆಗೆ ಬಂದರೂ, ಎಷ್ಟೇ ಹೊತ್ತಾಗಲಿ ತನ್ನ ತಮ್ಮನಿಗಾಗಿ ಊಟಕ್ಕೆ ಕಾಯುತ್ತಿದ್ದ. ಒಂದು ವೇಳೆ ಬರುವ ಹೊತ್ತು ಕೊಂಚ ಮೀರಿದರೆ, “ ಏಕೋ ಬರಲಿಲ್ಲ ಎನ್ನುತ್ತಾ ಅರ್ಧ ದಾರಿಯು

ವರೆಗೂ ಹೋಗಿ ಕಾಯುತ್ತಿದ್ದ. ತೀರಾ ತಡವಾಗಿ, ಅವನ ಸುದ್ದಿ ತಿಳಿಯುದಿದ್ದರೆ, ನಡುರಾತ್ರಿಯಾದರೂ ದುರ್ಗದ ವರೆಗೂ ಓಡುವನು—ತನ್ನ ತಮ್ಮನ ಯೋಗಕ್ಷೇಮ ವಿಚಾರಿಸಲು ತಮ್ಮನ ಬಗ್ಗೆ ಅವನಿಗಿದ್ದ ಕಕ್ಕುಲತೆಯನ್ನು ವೀರಣ್ಣನೇ ಎಷ್ಟೋ ಬಾರಿ ನಗೆಯಾಡಿದ್ದ.

"ಕಸ್ತೂರಣ್ಣಾ, ನಾನು ಬರೋದು ಒಂದು ಗಳಿಗೆ ತಡವಾದರೆ ಯಾಕಿಷ್ಟು ಒದ್ದುಗೋತೀಯ. ನಾನೇನು ಹೆಣ್ಣು ಹುಡುಗೀನೇ—ಹೊತ್ತಾಯಿತು ಮನೆಗೆ ಬರಲಿಲ್ಲ ಎಂತ ಗಾಬರಿಯಾಗೋಕೆ. ಹಿಂಗೆಲ್ಲಾ ಆಡಿದರೆ ನೋಡಿದೋರು ನಗೆಸಾರ ಮಾಡುವುದಿಲ್ಲವೇ ? ನಾನೇನು ಹಸು ಮಗೂನೇ ? " ಎಂದು.

"ಹೂ. ನೀನೆಷ್ಟು ಬೆಳೆದರೂ ನನ್ನ ಪಾಲಿಗೆ ಹಸುಮಗೂನೇ ವೀರಣ್ಣ. ಇನ್ನಿಪ್ಪತ್ತು ವರ್ಷ ಬೆಳೆದರೂ, ನೀನು ನನಗಿಂತ ಚಿಕ್ಕೋನೇ ಅಲ್ವಾ. ಮೀಸೇ ಬಂದ್ರೂ ಮಗ ತಾಯಿಗೆ ಮಗನೇ."

—ಎಂದು ಕಸ್ತೂರಿನಾಯಕನೂ ಅವನೊಂದಿಗೆ ನಗುವನು. ಆ ಪ್ರೀತಿಯಿಂದಲೇ ಅವನು ವೀರಣ್ಣ ಮೊದಲು ಮನೆಗೆ ಬಂದರೆ, ಅವನು ತನಗಾಗಿ ಊಟಕ್ಕೆ ಕಾಯದಂತೆ ಮೊದಲೇ ಊಟಕ್ಕೆ ಬಡಿಸಬೇಕೆಂದು ಹೆಂಡತಿಗೆ ಕಟ್ಟಪ್ಪಣೆ ಮಾಡಿದ್ದ. ಅಂಥವನೂ ಒಮ್ಮೊಮ್ಮೆ ವೀರಣ್ಣನ ಉಪಚಾರದಲ್ಲಿ ಗಂಗವ್ವ ತೋರುವ ಉತ್ಸಾಹವನ್ನು ಕಂಡು, ತೋರಿಕೆಯ ಸಿಟ್ಟಿನಲ್ಲಿ—

"ಲೇ ಹೆಣ್ಣೇ, ನಿನ್ನನ್ನೇನು ಮೈದುನನ ಉಪಚಾರಕ್ಕೇಂತ, ನಿನ್ನು ದ್ದಕ್ಕೊ ತೆರ ಕೊಟ್ಟು ತಂದೆನೇ ? ನನ್ನ ಮಾತೇ ಆಡಿಸೋದಿಲ್ಲ. ಮೈದುನನ ಸೇವೆ ಅಂದರೆ ಥೈ ಅಂತ ನಿಂತ್ಕೋತೀಯ. ನಿನ್ನ ಈ ಮನೆಗೆ ತಂದೋರು ಯಾರು ಹೇಳು. ಆಮೇಲೆ ಬಂದೋನು ಅವನೇ ಹೆಚ್ಚಾಗಿ ಬಿಟ್ಟನೇ ? "

ಎಂದರೇ, ಆ ಮಾತು ಕೇಳಿ ಗಂಗವ್ವ ಗಂಭೀರವಾಗಿ—

"ನಾನು ನಿಮ್ಮ ಹೆಂಡತಿ ಅಲ್ವಾ, ನಿಮ್ಮ ಗುಣಾನೇ ನನಗೂ ಬಂದಿದೆ " ಎನ್ನುವಳು.

"ಹೇಗೆ ? "

" ನಿಮ್ಮ ಸ್ವಭಾವಾನೂ ಹಾಗೇ ಅಲ್ವಾ ? "

" ಹಾಗೇ ಅಂದರೆ ಹೇಗೆ ? "

" ಮೊದಲು ಹುಟ್ಟಿದ ಜುಟ್ಟಿಗಿಂತ ಆಮೇಲೆ ಬಂದ ಮೀಸೇ ಮೇಲೇ ಬಾಳ ಪ್ರೀತಿ ಅಲ್ವಾ ನಿಮಗೆ ! "

ಆ ಮಾತು ಹೇಳ ಹೇಳುತ್ತಾ ಗಂಗವ್ವನ ಮುಖದ ಮೇಲಿದ್ದ ಗಂಭೀರತೆ ಸಿಡಿದು ಹೋಗಿ, ತುಟಿಯಂಚಿನಿಂದ ನಗೆಯ ಬುಗ್ಗೆ ಚಿಮ್ಮುವುದು.

" ವಾರೇ ಹುಡುಗಿ. ಹೆಂಡ್ತೀಂತ ಸದರ ಕೊಟ್ಟರೆ ನೆತ್ತೀನೇ ಹತ್ತುತೀಯಾ. ಗಂಡಾಂದರೆ ಭಯಾನೇ ಇಲ್ಲ. ಸುಮ್ಮನೆ ಬಿಟ್ರೆ ನೀನೂ ಆಡಿಕೊಂಡು ನಗೋಕೆ ಆರಂಭ ಮಾಡಿದೆಯೂ ? ಕುದುರೆ ಚಾಟಿ ಏನು ಹೇಳುತ್ತೆ ಗೊತ್ತೇ "

—ಎಂದು, ದಟ್ಟವಾಗಿ ಬೆಳೆದ ಮೀಸೆಯನ್ನು ಹೊಸೆಯುತ್ತಾ, ಕಣ್ಣುಗಳನ್ನು ಹೊರಳಿಸುತ್ತಾ ಬೆದರಿಸುವವನಂತೆ ಅಬ್ಬರಿಸುವನು. ಅವನ್ನು ಕೇಳಿ ಗಂಗವ್ವ,

" ಅದೇನು ಹೇಳುತ್ತದೆ ಅಂತ ನನಗೆ ಗೊತ್ತು "

—ಎಂದು ಮತ್ತಷ್ಟು ನಗಲಾರಂಭಿಸುವಳು.

" ಏನನ್ತದೆ ? "

" ಸಾವಿರ ಕುದುರೆ ಸರದಾರ ಮನೆ ಹೆಂಡತಿ........"

—ಎಂದು ಮುಂದಿನ ಮಾತು ಹೇಳದೆ, ಗಟ್ಟಿಯಾಗಿ ನಕ್ಕು ದೂರ ಓಡುವಳು.

" ಬದುಕ್ಕೊಂಡೆ........ಬದುಕ್ಕೊಂಡೆ ಮುಂದಿನ ಮಾತು ಹೇಳದೆ. ಇಲ್ದೆ ಹೋಗಿದ್ರೆ........"

ಎಂದು ಕಸ್ತೂರಿನಾಯಕನೂ ನಗಲಾರಂಭಿಸುವನು.

" ಹೇಳಿದ್ರೆ ಏನು ಮಾಡ್ತಾ ಇದ್ದಿರೋ "

—ಗಂಡನಿಂದ ದೂರವಾಗಿ, ನಡುಮನೆಯ ಬಾಗಿಲ ಹೊಸಿಲ ಬಳಿ ನಿಂತು, ಕೆಣಕುವ ಧ್ವನಿಯಲ್ಲಿ ಕೇಳುವಳು ಗಂಗವ್ವ.

" ದೂರಾ ನಿಂತು ಕೇಳೋ ಮಾತಲ್ಲ ಅದೆಲ್ಲಾ. ಹತ್ತಿರ ಬಂದರೇ ಹೂವಿನ ವಾಸನೆ ತಿಳಿಯೋದು "

" ಹತ್ತಿರವಾಗೋಕೆ ನಿಮ್ಮ ಮೀಸೆ ಕೋಟೆ ಅಡ್ಡವಾಗಿದೆಯಲ್ಲಾ ! "

—ಎಂದವಳೇ ಗಂಗವ್ವ ಹಜಾರದ ತುಂಬಾ ನಗೆಯ ಬೆಳುದಿಂಗಳನ್ನು ಚೆಲ್ಲಿ ಓಡಿಹೋಗುವಳು, ಅವಳ ಮಾತಿನ ಜೇನುಸವಿಯನ್ನು ಮೆಲುಕು ಹಾಕುತ್ತಾ, ತನಗೆ ತಾನೇ ನಸುನಗುತ್ತಾ ಕುಳಿತುಕೊಳ್ಳುವನು ಕಸ್ತೂರಿನಾಯಕ. ಆ ಒಂದು ಗಳಿಗೆಯಲ್ಲಿ ಅವನ ದಿನದ ದುಡಿತದ ಶ್ರಮವೆಲ್ಲ ಪರಿಹಾರವಾಗಿ ಮೈ ಮನಸುಗಳೆರಡೂ ಹಗುರಾಗುವುವು.

ಗಂಗವ್ವನಿಗೆ ಮೈದುನನೆಂದರೆ ಎಷ್ಟು ಪ್ರೀತಿಯೋ, ವೀರಣ್ಣನಿಗೂ ಅತ್ತಿಗೆ ಎಂದರೆ ಅಷ್ಟೇ ಪ್ರೀತಿ. ಆಕೆಯ ಮುಖ ದುಡಿತದ ಬಳಲಿಕೆಯಿಂದ ಕೊಂಚ ಬಾಡಿದ್ದರೆ, ಯಾವುದಾದರೂ ಕಾರಣಕ್ಕಾಗಿ ಕಣ್ಣಲ್ಲಿ ಹನಿಯಾಡಿದ್ದರೆ, ಮತ್ತೆ ಆ ಮುಖದ ಮೇಲೆ ನಗು ಮೂಡುವ ವರೆಗೂ ಕೆಸರಿನಲ್ಲಿ ಸಿಕ್ಕಿದವನಂತೆ ಒದ್ದಾಡುವನು ವೀರಣ್ಣ ; ಊಟ ತಿಂಡಿಯ ಯೋಚನೆಯನ್ನು ಬಿಟ್ಟು, ಸಣ್ಣ ಮಗುವಿನಂತೆ, ಆಕೆಯ ಸುತ್ತ ಓಡಿಯಾಡಿ " ಅತ್ತಿಗೆ ಅತ್ತಿಗೆ " ಎಂದು ಮಾತನಾಡಿಸಿ, ಏಕೋ ಮುದುಡಿಕೊಂಡ ಆಕೆಯ ಹೃದಯವನ್ನು ತನ್ನ ಅಕ್ಕರೆಯಿಂದ ಅರಳಿಸುವನು. ತನಗೂ ತನ್ನ ಅತ್ತಿಗೆಗೂ ಇರುವ ಪ್ರೇಮದ ನಡುವೆ ಯಾವುದೇ ಕಾರಣಕ್ಕಾಗಿಯೇ ಆದರೂ, ಯಾವ ಕಾರ್ಮೋಡವೂ ಎಂದೂ ಸುಳಿಯುವುದೇ ಇಲ್ಲವೆಂದು ನಂಬಿದ್ದ ವೀರಣ್ಣ, ಯಾವಾಗಲಾದರೊಮ್ಮೆ ಗಂಗವ್ವನೇ ವಿನೋದಕ್ಕೆ—

" ಎಷ್ಟು ದಿನ ಹೀಗೆ ಅತ್ತಿಗೆ ಅತ್ತಿಗೆ ಅಂತ ಒದ್ದಾಡ್ತೀಯ, ಎಲ್ಲಾ ನಾಕು ದಿನದ ಆಟ "

—ಎಂದರೆ,

" ನಾಕು ದಿನ-ಊಹೂ–ನನ್ನ ಜೀವ ಇರುವ ತನಕ ಹೀಗೆ. "

"ಹೂ, ನಾನೂ ಅದೇ ಹೇಳಿದ್ದು, ನಿನ್ನ ಜೀವ ನಿನ್ನದಾಗಿರುವತನಕ."

" ಅಂದರೆ........? "

—ಅತ್ತಿಗೆಯ ಮಾತಿನ ಅರ್ಥ ತಿಳಿಯದೆಯೆ ಕೇಳುವನು.

" ಅಂದರೆ, ಅಷ್ಟೂ ತಿಳಿಯುವುದಿಲ್ಲವೇ, ದಡ್ಡಬುದ್ಧಿ ನಿನ್ನದು ವೀರಣ್ಣ. ಎಲ್ಲಾ ಬಾಯಿಬಿಟ್ಟು ಹೇಳಬೇಕೇ ? "

" ನನ್ನ ಬುದ್ಧಿ ಮಂದ ನಿಜ. ಆದರೆ ಆ ತಪ್ಪು ನಿನ್ನದೆ. "

" ಏಕೆ ? "

" ಎನ್ನೆ ಹಾಲು ಮೊಸರು ಹಾಕಿ ಸಾಕಿ ಬೆಳೆಸಿದವಳು ನೀನೇ. ಆ ತಪ್ಪು ಮಾಡಿದ್ದಕ್ಕೆ ಈಗ ಅನುಭವಿಸು."

" ಅದಕ್ಕೆ ಕಲಿಕಾಲ ಅಂದದ್ದು, ಏನು ಮಾಡಿದರೂ ಕಷ್ಟ. ಅಂತೂ ಎಲ್ಲಾ ಮಾತೂ ನಾನೇ ಬಿಡಿಸಿ ಹೇಳಬೇಕು ಎನ್ನು."

" ಹೂ ಮತ್ತೆ."

" ಇಷ್ಟೇ ವೀರಣ್ಣ—ನಾಳೆ ನಿನ್ನ ಜೀವಕ್ಕೆ ಒಡತಿ ಬೇರೆ ಒಬ್ಬಳು ಬಂದರೆ, ಆಗ ಬಡ ಅತ್ತಿಗೇನ ಮಾತಾಡಸ್ತೀಯ ಹೊಸ ನೀರು ಬಂದು ಹಳೇ ನೀರು ಕೊಚ್ಚಿ ಹೋಗುತ್ತೆ."

" ಹಾಗೆಂದಿಗೂ ಆಗೋಲ್ಲ ಅತ್ತಿಗೆ."

" ಅಂದರೆ ನೀನು ಮದುವೇನೇ ಮಾಡಿಕೊಳ್ಳಲ್ಲವೇ ? ಹಾಗಂತ ಗಿರಿಜೆಗೆ ಹೇಳಲೇ ? "

—ಅವನ ಮಾತನ್ನು ಸಂಪೂರ್ಣವಾಗಿ ನಂಬಿದವಳಂತೆ ಗಂಭೀರ ಧ್ವನಿಯಲ್ಲಿ ಹೇಳುವಳು ಗಂಗವ್ವ. ಆ ಮಾತು ಕೇಳಿ ವೀರಣ್ಣನ ಮುಖ ಕೆಂಪೇರುವುದು.

" ಹಾಗಲ್ಲ ಅತ್ತಿಗೆ, ಶುದ್ಧ ಕೊಂಕುಬುದ್ಧಿ ನಿನ್ನದು, ನಾನೊಂದು ಹೇಳಿದರೆ ನೀನೊಂದು ತಿಳಿದುಕೊತೀಯಾ."

" ಮತ್ತೆ ಹೇಗೆ ತಿಳುಕೋಬೇಕೋ, ನೀನೇ ಹೇಳು."

" ಒಂದು ವೇಳೆ ಮದುವೆ ಆದ್ರೂ, ಹೆಂಡತಿಪಾಡು ಹೆಂಡತಿಗೇ...."

" ನಿನ್ನ ಪಾಡು ನಿನಗೆ. ಅಷ್ಟೇ ತಾನೇ ನೀನು ಹೇಳೋದು. ಹಾಗೆ ಮಾಡಿದರೆ ನೀನು ಇಬ್ಬರನ್ನೂ ಸುಖಪಡಿಸೊಲ್ಲ ವೀರಣ್ಣ"

" ಏಕೆ ? "

" ಅತ್ತಿಗೇಂತ ನಿನ್ನ ಅಕ್ಕರೆಯನ್ನೆಲ್ಲಾ ನನಗೇ ಮೀಸಲು ಮಾಡಿದರೆ, ನಿನ್ನನ್ನೇ ನಚ್ಚಿಕೊಂಡು ಬಂದ ಜೀವಕ್ಕೆ ನೋವಾಗುತ್ತೆ. ಅದು ಬಿಟ್ಟು, ಹೆಂಡತೀನ್ನೇ ಹೆಗಲ ಮೇಲೆ ಕೂರಿಸಿಕೊಂಡು ಮರೆಸಿ ನನ್ನನ್ನು ಮರೆತರೆ ನನಗೆ ದುಃಖವಾಗುತ್ತೆ."

" ನಿಜ. ಅದಕ್ಕೇನು ಮಾಡು ಅನ್ನುತ್ತೀಯ."

" ಅದನ್ನೇ ಸಂಸಾರದಲ್ಲಿ ಜಾಣತನ ಅನ್ನೋದು. ನಂಟೂ ಕಳೆದು ಕೊಳ್ಳಬಾರದು. ಗಂಟೂ ಕಳೆದುಕೊಳ್ಳಬಾರದು. ಹತ್ತು ಕುದುರೆ ಕಟ್ಟಿದ ರಥ ನಡಸುತ್ತಾರೆ ನೋಡು. ಹಾಗೆ ನಡಸಬೇಕು ಸಂಸಾರಾನ. ಈ ಕುದುರೆಗಳನ್ನೆಲ್ಲಾ ಒಟ್ಟಿಗೆ, ಒಂದೇ ದಿಕ್ಕಿನಲ್ಲಿ ನಡಸುವ ಲಾಗಮು ಇದೆಯಲ್ಲ ಅದು ಬಲವಾಗಿರಬೇಕು."

" ಅಂಥ ಲಗಾಮು ಎಲ್ಲಿಂದ ತರಬೇಕು ಅತ್ತಿಗೆ. ಭೂಲೋಕದಲ್ಲಿ ಎಲ್ಲಿ ಸಿಕ್ಕುತ್ತೋ ನಾನು ಕಾಣೆ. ಕೈಲಾಸದಿಂದಲೇ ತರಬೇಕೋ ಏನೋ."

" ಊಹೂ. ನಮ್ಮಲ್ಲೇ ಇದೆ ಆ ಲಗಾಮು. ಇದೆ ಅನ್ನೋದನ್ನ ತಿಳಿದುಕೊಂಡು ಉಪಯೋಗಿಸಬೇಕು."

" ಎಲ್ಲಿದೆ, ಎಂಥಾ ಲಗಾಮು ಹೇಳು."

" ಪ್ರೀತಿಯೇ, ವಿಶ್ವಾಸವೇ ಆ ಲಗಾಮು ವೀರಣ್ಣ. ಚಾಟಿ ಏಟಿನ ಮೇಲೆ ಓಡೋ ಕುದುರೆ ಎಂದಿದ್ದರೂ ಧಣಿಯನ್ನ ಕೆಡವಿ ಹಾಕುವುದು ಖಂಡಿತ. ಅದೇ ಪ್ರೀತಿಗೆ ಒಗ್ಗಿದ ಕುದುರೆಯಾದರೆ, ತಾನು ಬಿದ್ದರೂ ನಿನ್ನನ್ನು ಬೀಳಿಸುವುದಿಲ್ಲ. ಇದೆಲ್ಲಾ, ಹೆಣ್ಣು ಹೆಂಗಸು ನಾನು ಹೇಳಿ ಕೊಡಬೇಕೇ ನಿನಗೆ."

" ನನಗೆ ? ನನ್ನೊಬ್ಬನಿಗೆ ಏನು ಅತ್ತಿಗೆ, ಲೋಕಕ್ಕೆ ಪಾಠ ಹೇಳು ವಷ್ಟು ಜ್ಞಾನ ಭಂಡಾರ ನಿನ್ನಲ್ಲಿದೆ."

—ಆಕೆಯ ಮಾತು ಕೇಳಿ, ತಾನೇ ತಾನಾಗಿ ಮೂಡಿ ಬಂದ ಅಭಿ ಮಾನದಲ್ಲಿ, ಮೆಚ್ಚುಗೆಯಲ್ಲಿ ನುಡಿಯುವನು ವೀರಣ್ಣ.

" ಅದಕ್ಕೇ ನೋಡು ನಿನ್ನನ್ನು ನಾನು ದಡ್ಡ ಎಂದದ್ದು."

" ಏಕೆ ? "

" ಹೆಣ್ಣಿನ ಬುದ್ಧಿ ಕೆಡಿಸಲು ಬಹಳ ಒಳ್ಳೆ ದಾರಿ ಯಾವುದು ಗೊತ್ತೆ ? "

" ಯಾವುದು ? "

" ಹೊಗಳುವುದು. ಆ ಹೆಂಡ ಕುಡಿಸಿಬಿಡು, ಎಂಥ ಹೆಣ್ಣಾದರೂ ಹುಚ್ಚಾಗಿ ಕುಣಿಯುತ್ತದೆ. ಒಮ್ಮೆ ಹೀಗೆ ಹೊಗಳಿಕೆಯಿಂದ ಕೆಟ್ಟ ಹೆಣ್ಣು ಮತ್ತೆ ಎಂದೂ ಹತೋಟಿಗೆ ಸಿಕ್ಕುವುದಿಲ್ಲ."

" ಹಾಗಾದರೆ ಹೆಣ್ಣನ್ನು ಹೊಗಳಲೇ ಬಾರದು ಅನ್ನುತ್ತೀಯಾ ? "

" ಉಂಟು. ಹೊಗಳಬೇಕು-ಆದರೆ ಅದಕ್ಕೆ ಸಮಯ ಬಂದಾಗ. ಅದು ಹೇಗಿರಬೇಕು ಗೊತ್ತೆ ವೀರಣ್ಣ ? ಅಂಥಾ ಹೊಗಳಿಕೆ ಎಂದು ಬಂದೀತೋ ಎಂದು ಕಾಯುತ್ತಿರಬೇಕು. ಅದು ಅಗ್ಗದ ಸರಕಾಗಬಾರದು. ವರ್ಷಕ್ಕೊಂದು ಬಾರಿ ಬಿಡುವ ಹೂವಿನ ಹಾಗಿದ್ದರೆ ಆ ಕಾಲ ಎಂದು ಬಂದೀತೋ ಎಂದು ಕಾಯುತ್ತೇವೆ. ಎಷ್ಟು ಬೆಲೆಯಾದರೂ ಕೊಟ್ಟು ಕೊಳ್ಳುತ್ತೇವೆ. ಹಾಗಿರಬೇಕು ಹೊಗಳಿಕೆ. ಎಲ್ಲಿ ಹೊಗಳಬೇಕು, ಎಲ್ಲಿ ಹೊಗಳಬಾರದು ಎನ್ನುವುದನ್ನು ಕಲಿಯುವುದು ಬಹಳ ಕಷ್ಟ ವೀರಣ್ಣ. "

" ಈ ಕಷ್ಟದ ವಿದ್ಯವನ್ನೆಲ್ಲಾ ನೀನೆಲ್ಲಿ ಕಲಿತೆ ಅತ್ತಿಗೆ ? "

" ಇನ್ನೆಲ್ಲಿ, ಎಲ್ಲಿ, ಯಾರಲ್ಲಿ ಕಲಿಯ ಬೇಕೋ ಅಲ್ಲೆ. "

" ಅಂದರೆ........"

" ಕಲಿಸುವುದು ಬಿಡುವುದು ಎಲ್ಲದರ ಭಾರವನ್ನೂ ಹೊತ್ತು ಯಾರು ನನ್ನನ್ನು ಈ ಮನೆಗೆ ತಂದರೋ ಅವರೇ. "

" ಯಾರು—ಕಸ್ತೂರಣ್ಣನೇ ? "

—ಅತ್ತಿಗೆಯ ಮಾತು ಕೇಳಿ ಅಚ್ಚರಿಯಿಂದ ಕೇಳುವನು ವೀರಣ್ಣ.

" ಹೂ. ಮತ್ತಿನ್ನಾರು, ಅವರೇ. ಹೆಂಗಸೇನು ಕನ್ನಡಿ ಇದ್ದ ಹಾಗೆ. ಬಿಸಿಲಿದ್ದರೆ ಬಿಸಿಲು, ಕತ್ತಲಿದ್ದರೆ ಕತ್ತಲನ್ನು ಬಿಂಬಿಸುತ್ತದೆ. ಅದರಲ್ಲಿ ಬೆಳಕು, ಕತ್ತಲನ್ನು ಕಾಣಿಸುವವರೆಲ್ಲಾ ಅವರೇ. "

—ಕೃತಜ್ಞಪೂರ್ವಕವಾಗಿ ಈ ನುಡಿ ಗಂಗವ್ವನ ಹೃದಯದಿಂದ ಮೂಡಿ ಬರುವುದು. ಅದನ್ನು ಕೇಳಿದ ವೀರಣ್ಣ —

" ಅತ್ತಿಗೆ, ನೀನು ಕಾಗೆ ತೋರಿಸಿ ಇದು ಹಂಸ ಎಂದು ಹೇಳಿದರೆ ಅದನ್ನು ನಂಬುತ್ತೇನೆ. ಆದರೆ ಇದನ್ನು ಮಾತ್ರ ನಂಬುವುದಿಲ್ಲ. "

" ಯಾವುದನ್ನು ? "

" ಕಸ್ತೂರಣ್ಣ ಇಷ್ಟೆಲ್ಲಾ ನಿನಗೆ ಕಲಿಸಿದ ಅನ್ನುವುದನ್ನು. "

" ಏಕೆ ? "

" ಏಕೆಂದರೆ—ನಾವಿಬ್ಬರೂ ಒಂದೇ ತಾಯಿಯ ಹಾಲು ಕುಡಿದು ಬೆಳೆದವರು ಅತ್ತಿಗೆ—ನಮ್ಮಿಬ್ಬರ ಬುದ್ಧಿನೂ ಒಂದೇ. "

" ಅದಕ್ಕೇ ನೀನು ತಿಳಿದುಕೊಳ್ಳಬೇಕಾದಷ್ಟನ್ನೂ ತಿಳಿದುಕೊಂಡಿಲ್ಲ ಎನ್ನುವುದು. "

" ಏಕೆ ? "

" ಅವರ ಗುಣ ನೀನು ಕಾಣೆ ವೀರಣ್ಣ. ಹಿತ್ತಲ ಹೀರೆ ಮದ್ದಲ್ಲ, ನಿನ್ನ ಅಣ್ಣಂದಿರು ಮನುಷ್ಯರಲ್ಲಿ ದೇವತೆ. ಅವರ ಕೈಹಿಡಿದು ನಾನೂ ಒಬ್ಬ ಮನುಷ್ಯಳೂಂತ ಆದೆ. ನನಗಿರುವುದೆಲ್ಲಾ ಒಂದೇ ಬಯಕೆ. "

" ಏನು ? "

" ಒಂದು ಗಳಿಗೆಯೂ ನನ್ನ ವಿಷಯದಲ್ಲಿ, ಇವಳು ಹೀಗೆ ಮಾಡಿದ ಳಲ್ಲಾ ಎಂದು ನೊಂದುಕೊಳ್ಳದಂತೆ ಬದುಕಿದ್ದು, ಅವರ ಕಣ್ಣೆದುರೇ ಸ್ವಾಮಿಯ ಪಾದ ಸೇರಿದರೆ ನಾನು ಧನ್ಯೆ. ನನ್ನ ಸಮಾನ ಹೆಂಗಸೇ ಇಲ್ಲ, ಎಂದುಕೊಳ್ಳುತ್ತೇನೆ. "

" ಇಲ್ಲ ಅತ್ತಿಗೆ. ಕಸ್ತೂರಣ್ಣ ಎಲ್ಲೋ ಹಿಂದಿನ ಜನ್ಮದಲ್ಲಿ ತಪಸ್ಸು ಮಾಡಿ ನಿನ್ನನ್ನು ಪಡೆದ. ಇಲ್ಲವಾದರೆ ಎಲ್ಲರಿಗೂ ಇಂಥ ಹೆಂಡತಿ ಸಿಗುವ ಪುಣ್ಯವೆಲ್ಲಿ ? "

" ಊಹೂ. ನನ್ನ ಏಳೇಳು ಜನ್ಮದ ತಪಸ್ಸಿನ ಫಲ ಈಗ ಪತಿ ರೂಪದಲ್ಲಿ ಬಂದು ಕೈಹಿಡಿದು ಕಾಪಾಡುತ್ತಿದೆ ವೀರಣ್ಣ, ನಿನಗವರ ಸ್ವಭಾವ ಅರ್ಥವಾಗಿಲ್ಲ. ಅದಕ್ಕೇ ಒಂದೊಂದು ಸಲ ಅವರ ಮಾತು ಕೇಳಿ ಮುನಿಸಿಕೊಳ್ಳುತ್ತೀಯ. ನೀನು ನಗುನಗುತ್ತಾ ಇರುವುದು ಅವರಿಗೆ ಬೇಕು. ಆದರೆ ಹಾಗೆಂದು, ಅದಕ್ಕೆ ವಿವೇಚನೆಯನ್ನು ಬಲಿಕೊಡುವು ದಿಲ್ಲ. ವಿವೇಚನೆ ಇಲ್ಲದ ಪ್ರೀತಿ ನಾಶಕ್ಕೆ ದಾರಿ. ದೊಡ್ಡವರಾಗಿ ಅವರು ಹೇಳಿದ ಮಾತನ್ನು ನೀನು ಸರಿಯಾದ ರೀತಿಯಲ್ಲಿ ಅರ್ಥಮಾಡಿ ಕೊಳ್ಳಬೇಕು. ಹಾಗೆ ಮಾಡದೆ ನೀನು ಮುನಿಸಿಕೊಂಡರೆ, ಅವರೆಷ್ಟು ಕೊರಗುತ್ತಾರೆ ಬಲ್ಲೆಯಾ ? ನನಗಂತೂ ಅವರ ಕೊರಗನ್ನು ಕಂಡರೆ ಕರುಳು ಕಿತ್ತಂತಾಗುತ್ತದೆ ವೀರಣ್ಣ. ನೀವಿಬ್ಬರೂ ನಗುನಗುತ್ತಾ ಇದ್ದರೆ ಸೂರ್ಯ ಚಂದ್ರ ಇಬ್ಬರೂ ಒಟ್ಟಿಗೇ ಬೆಳಗಿದಷ್ಟು ಸಂತೋಷವಾಗಿರುತ್ತದೆ. ನೀವಿಬ್ಬರೂ ಹಾಗಿದ್ದು ಬಿಟ್ಟರೆ ನನಗೆ ಬೇರೆ ಏನೂ ಬೇಡ. ದಿನಾ ನಾನು ದೇವರನ್ನು ಬೇಡಿಕೊಳ್ಳುವುದೇ ಇಷ್ಟು, ವೀರಣ್ಣ. ನೀವಿಬ್ಬರೂ ಸುಖ

ವಾಗಿರಬೇಕು, ನೀವಿಬ್ಬರೂ ನಗುನಗುತ್ತ ಅನ್ಯೋನ್ಯವಾಗಿರಬೇಕು. ಅಷ್ಟ ಕ್ಕಿಂತ ಹೆಚ್ಚು ಭಾಗ್ಯ ನನಗೇನು ಬೇಕು?"

ಅತ್ತಿಗೆಯಾಡಿದ ಆ ಮಾತನ್ನು ಕೇಳಿ ವೀರಣ್ಣನ ಹೃದಯ ಹೆಮ್ಮೆ, ಅಭಿಮಾನ, ಅಕ್ಕರೆಗಳಿಂದ ಬೀಗುವುದು. ಆ ಭಾವನೆಯಲ್ಲೇ ನಗುತ್ತಾ ಹೇಳುವನು.

"ಅತ್ತಿಗೆ, ದೇವರು ನನಗೆ ಶಕ್ತಿ ಕೊಡಲಿಲ್ಲ. ಕೊಟ್ಟಿದ್ದರೆ ಏನು ಮಾಡುತ್ತಿದ್ದೆ ಗೊತ್ತೆ?"

"ಏನು ಮಾಡುತ್ತಿದ್ದೆ?"

"ನೀನು ಇಂಥ ಮಾತು ಆಡಿದಾಗ ಮಾತಿಗೊಂದು ಬಾರಿ, ಬಂಗಾ ರದ ಮಳೆ ಕರೆಯುತ್ತಿದ್ದೆ ನಿನ್ನ ನೆತ್ತಿಯ ಮೇಲೆ."

"ಹೂ. ಬೆಟ್ಟದಷ್ಟು ಬಂಗಾರ ಬಿದ್ದು ತಲೆಯೊಡೆದು ಇವಳ ಕಾಟ ತಪ್ಪಿ ಹೋಗಲಿ ಎಂದು ಅಲ್ಲವೆ?"

—ಎಂದು ನಕ್ಕು, ಆ ಮಾತು ಬದಲಿಸುವಳು ಗಂಗವ್ವ.

ಆಕೆಯೊಂದಿಗೆ ಅಷ್ಟು ಮಾತಾಡಿದ ವೀರಣ್ಣನಿಗೆ ಹಾಲು ಸಕ್ಕರೆಯ ಸಮಾರಾಧನೆಯಾದಷ್ಟು ಸಂತೋಷವಾಗುವುದು. ಮೈದುನನೊಂದಿಗೆ ಸರಸವಾಡಿದ ಗಂಗವ್ವನಿಗೂ ಅಷ್ಟೇ ಸಂತೋಷವಾಗುವುದು. ಆದರೆ ಅಂಥ ವೇಳೆ ಹೆಚ್ಚು ಸಿಗುತ್ತಿರಲಿಲ್ಲ. ಆದುದರಿಂದಲೇ ಅಂಥ ವೇಳೆ ದೊರೆತಾಗ ಒಂದು ಗಳಿಗೆಯನ್ನೂ ಅವನು ವ್ಯರ್ಥಮಾಡುತ್ತಿರಲಿಲ್ಲ. ಅಷ್ಟು ಹೊತ್ತು ಮಾತನಾಡಿ ನಕ್ಕಾಗಲೇ ಇಬ್ಬರ ಜೀವಕ್ಕೂ ಸಮಾಧಾನ.

ಎಂತಲೇ ಇಂದು ಆ ಮೈದುನ ಹೆಚ್ಚು ಮಾತನಾಡದೆ, ಮೂರು ಮಾತಿನ ಪ್ರಶ್ನೆಗೆ ಒಂದು ಮಾತಿನ ಉತ್ತರ ಕೊಟ್ಟು, ಅದನ್ನೂ ಮುಖ ಗಂಟುಹಾಕಿಕೊಂಡು, ಬೇಸರದ ಧ್ವನಿಯಲ್ಲಿ ಹೇಳಿ ಒಳಗೆ ಹೋದುದನ್ನು ಕಂಡು ಗಂಗವ್ವನಿಗೆ ಕರುಳನ್ನು ಇರಿದಷ್ಟು ಯಾತನೆಯಾಯಿತು.

ಆದರೆ ತಾನಾಗಿಯೇ ಮಾತನಾಡದ ಅವನನ್ನು ಕೆಣಕಿ ಮಾತನಾಡಿ ಸದೆ, ಊಟಕ್ಕೆ ಬಂದು ಕುಳಿತ ಅವನಿದಿರು, ಬೆಳಗಿ ಬಂಗಾರದಂತೆ ಹೊಳೆವ ಕಂಚಿನ ತಳಿಗೆಯನ್ನಿಟ್ಟು ಬಡಿಸತೊಡಗಿದಳು, ವೀರಣ್ಣನೂ ಮಾತನಾಡದೆ ತಲೆ ತಗ್ಗಿಸಿ ಸಾಕು ಬೇಕೆಂದು ಹೇಳದೆ ಊಟಮಾಡ

ತೊಡಗಿದ. ಅವನಿಗೆ ತನ್ನ ನಡತೆಯಿಂದ ಅತ್ತಿಗೆಗೆ ಅಪಾರ ವ್ಯಥೆಯಾಗಿದೆಯೆಂದು ಅರಿವಾದುದು ತಳಿಗೆಯನ್ನು ತುಂಬಿದ ಹಾಲಿನಲ್ಲಿ, ಆಕೆಯ ಕಣ್ಣ ಕಂಬನಿ ಜಾರಿ ಬಿದ್ದಾಗಲೇ. ಅದನ್ನು ಕಂಡು ವೀರಣ್ಣ ತಟಕ್ಕನೆ ತಲೆ ಎತ್ತಿ ಅತ್ತಿಗೆಯ ಮುಖ ನೋಡಿದ. ಆದರೆ ಗಂಗವ್ವ ಮೈದುನನಿಗೆ ತನ್ನ ಕಂಬನಿಯಿಂದ ಕರೆಗಟ್ಟಿದ ಮೊಗವನ್ನು ತೋರದೆ, ತಟಕ್ಕನೆ ಹೊರಗೆ ಜಾರಿದಳು.

೪

ಆ ದಿನ ಕಸ್ತೂರಿನಾಯಕ ದುರ್ಗದಿಂದ ಹಳ್ಳಿಗೆ ಹಿಂದಿರುಗಿದಾಗ, ನಡುರಾತ್ರಿಯ ಸಮಯವಾಗಿತ್ತು. ಅವನು ಮನೆಬಾಗಿಲಿಗೆ ಬಂದು ಕುದುರೆಯಿಂದ ಇಳಿದಾಗ, ಅವನು ಎಷ್ಟೇ ಹೊತ್ತಿಗೆ ಬಂದರೂ ಬಾಗಿಲಲ್ಲಿ ದೀಪವಿಟ್ಟುಕೊಂಡು, ಕಾಲು ತೊಳೆಯಲು ನೀರು ಹಿಡಿದು ನಿಂತಿರುತ್ತಿದ್ದ ಗಂಗವ್ವ, ಇಂದು ಬಾಗಿಲ ಬಳಿ ಕಾಣಲಿಲ್ಲ. ಅನಿರೀಕ್ಷಿತವಾದ ಈ ನಡತೆಯನ್ನು ಕಂಡು ಅವನಿಗೆ ಅಚ್ಚರಿಯಾಯಿತು. ತಾನು ಬರುವುದು ಬಹಳ ಹೊತ್ತಾದುದರಿಂದ ಕಾದು ಬಳಲಿದ ಅವಳು ಮಲಗಿರಬಹುದೇ ಎಂದು ಯೋಚಿಸಿದ. ಅದೂ ಸೂಕ್ತವಾಗಿ ತೋರಲಿಲ್ಲ, ಒಮ್ಮೊಮ್ಮೆ ಅವನು ಅರಮನೆಯಿಂದ ಮರಳುವುದು, ಇಂದಿನಂತೆ, ಬಹು ತಡವಾದರೆ ಅವಳು ಮೊಗಸಾಲೆಯಲ್ಲಿಟ್ಟ ದೀಪದ ಇದಿರು, ಗೋಡೆಗೆ ಒರಗಿ ಹಾಗೇ ನಿದ್ದೆ ಹೋದುದೂ ಉಂಟು. ಆದರೂ ಕುದುರೆಯ ಖುರಪುಟದ ಸದ್ದನ್ನು, ಇವನು ಬಂದುದನ್ನು ಅವಳಿಗೆ ಸೂಚಿಸುವಂತೆ ಬಗಳುವ ರೊಪ್ಪದ ಕಾವಲು ನಾಯಿಗಳ ಬಗುಳುವಿಕೆಯ ಸದ್ದನ್ನು ಕೇಳಿದ ಕೂಡಲೇ ಎದ್ದು, ಓಡಿ ಬಾಗಿಲ ಬಳಿ ಬರುತ್ತಿದ್ದಳು. ಆ ಅವಸರದಲ್ಲಿ ನಿದ್ರೆಯಲ್ಲಿ ಅಸ್ತವ್ಯಸ್ತವಾಗಿದ್ದ ಸೆರಗನ್ನು ಸರಿಮಾಡಿಕೊಳ್ಳುವಷ್ಟು ತಾಳ್ಮೆಯೂ ಆಕೆಗಿರುತ್ತಿರಲಿಲ್ಲ. ಅದನ್ನು ಕಂಡೇ ಅವನು, ಈಕೆ ಮಲಗಿದ್ದವಳು ಎದ್ದು ಬಂದವಳು ಎನ್ನುವುದನ್ನು ಊಹಿಸಿ, ಅವಳ ನಿದ್ರೆಗೆ ಭಂಗತಂದುದಕ್ಕಾಗಿ ಮರುಗುತ್ತಿದ್ದ. ಆ ಗಳಿಗೆಯಲ್ಲಿ ಅವನಿಗೆ, ಅವಳ ಕಾಯುವಿಕೆ, ನಿದ್ರಾಭಂಗಕ್ಕೆ ಕಾರಣವಾದ ತನ್ನ ಚಾಕರಿ ಮೇಲೆ ಸಿಟ್ಟು ಬಂದರೂ, ಮರುಗಳಿಗೆಯೇ ಕೊಂಚ ಅಸ್ತವ್ಯಸ್ತವಾದ ಉಡುಪು, ನಿದ್ರೆ ಕವಡಿದ ಮೊಗ, ಮಂಪರು

ಇನ್ನೂ ತುಂಬಿ ತೂಗುವ ಕಣ್ಣುಗಳಲ್ಲಿ ಹೊಳೆಯುವ ವಿನೂತನ ಲಾವಣ್ಯ ವನ್ನು ಕಂಡು, ಎದೆ ತುಂಬಿಕೊಂಡು 'ಹೀಗಾದುದೂ ಒಳ್ಳೆಯದಕ್ಕೇ' ಎಂದು ಹಿಗುತ್ತಿದ್ದ. ಅಂಥ ಹೊತ್ತಿನಲ್ಲಿ ಬೇಗ ಕಾಲು ತೊಳೆದುಕೊಳ್ಳದೆ ಕೈಯಲ್ಲಿ ಹಿಡಿದು ಚಾಚಿದ ಚೆಂಬನ್ನು ತೆಗೆದುಕೊಳ್ಳದೆ ಬಿಟ್ಟಕಣ್ಣು ಬಿಟ್ಟಂತೆಯೇ ತನ್ನನ್ನು ನೋಡುತ್ತಾ ನಿಂತ ಅವನನ್ನು ಕಂಡು ಅವಳ ಮೊಗದಲ್ಲಿ ಹುಸಿ ಮುನಿಸು ಇಣಿಕಿ, ಆ ಲಾವಣ್ಯಕ್ಕೆ ಒಪ್ಪವಿಡುವುದು. ಆ ಹುಸಿ ಮುನಿಸಿನ ಹೊಗೆಗೆ ಅಕಾಲಚೇಷ್ಟೆಯ ಗಾಳಿ ಬೀಸಿ ಹರ್ಷಿಸು ವನು ಗಂಡು. ಇದು ಬೇಡವೆಂದು ಬಾಯಲ್ಲಿ ಆಡಿದರೂ ಹೆಣ್ಣೂ ಆ ಹಿಗ್ಗಿನಲ್ಲಿ ಪಾಲುಗಾತಿಯಾಗಿ, ಗಂಡಿನ ಎದೆಯಲ್ಲಿ ಮಧುರ ಸ್ಪಂದನವನ್ನು ಮೂಡಿಸುವುದು.

ಅಂಥ ಗಂಗಾ ಇಂದು ಅವನು ಬಾಗಿಲಿಗೆ ಬಂದರೂ ಇಲ್ಲ; ಬಾಗಿಲ ಬಳಿ ಬಂದು ಕೂಗಿದರೂ ಇಲ್ಲ. ಹೆಚ್ಚು ನಿದ್ರೆ ಬಂದು ಮೈಮರೆತು ಮಲಗಿರುವಳೇನೋ ಎಂದು ಒಳಗೆ ಇಣಿಕಿ ಹಾಕಿ ನೋಡಿದ. ಅಲ್ಲೂ ಅವಳು ಕಾಣಿಸಲಿಲ್ಲ. ಆಗ ಅವನಿಗೆ, ಹಿಂದೊಂದು ದಿನ ಗಂಗವ್ವ, ಊಟದ ಮನೆಯಲ್ಲಿ ಗಂಡನ ಊಟದ ತಳಿಗೆಯನ್ನು ಸಿದ್ಧವಾಗಿಟ್ಟು ಅಲ್ಲೇ ಕಾಯುತ್ತಾ ಮಲಗಿ ನಿದ್ದೆ ಹೋಗಿದ್ದುದು ನೆನಪಿಗೆ ಬಂದಿತು. ಇಂದೂ ಹಾಗೆಯೇ ಆಗಿರಬಹುದೇನೋ ಎಂದುಕೊಂಡ. ಹಾಗೇ, ಅವಳು ಹಾಗೆ ಮಲಗಿರುವಾಗಲೇ ತಾನು ಹೋಗಿ ತಾನೇ ಬಡಿಸಿಕೊಂಡು ಊಟಮಾಡಿ, ಬಳಿಕ ಅವಳನ್ನು ಛೇಡಿಸಿ ಆಡಬಹುದಾದ ಆಟದ ಚಿತ್ರ ವನ್ನು ಮನಸಿನ ಕಣ್ಣಮುಂದೆ ಚಿತ್ರಿಸಿಕೊಂಡು ನಲಿದ.

ಆದರೂ ಆ ಹರ್ಷ ಸಹಜವಾಗಿ ಮೂಡಿ ಬರಲಿಲ್ಲ. ಏನೋ ಅದಕ್ಕೆ ಅಡ್ಡಿಯಾದಂತಿತ್ತು. ಮನೆಯ ಬಾಗಿಲು ತೆರೆದಿದ್ದರೂ, ದಿನವೂ ಅವ ನನ್ನು ಮನೆಯೊಳಕ್ಕೆ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ಯಾವುದೋ ವಸ್ತು ಅಲ್ಲಿ ಇಲ್ಲವೆಂದು ಏನೋ ಅವನ ಮನದೊಳಗೆ ನುಡಿಯುತ್ತಿತ್ತು. ಯಾವುದೋ ಒಂದು ಬಗೆಯ ಅರ್ಥವಾಗದ ಕಾತರತೆ ಅವನ ಹೃದಯ ದಾಳದಲ್ಲೆಲ್ಲೋ ಕ್ಷೀಣಧ್ವನಿಯಲ್ಲಿ ಸುಯ್ಯುತ್ತಿತ್ತು. ಒಳಗೆ ನುಗ್ಗಿ ನೋಡ ಬೇಕೆಂದುಕೊಂಡ. ಆದರೆ ಕಾಲು ತೊಳದೇ ಮನೆಯೊಳಗೆ ಕಾಲಿಟ್ಟು

ಅಭ್ಯಾಸವಾದ ಅವನ ಕಾಲುಗಳು, ಕಾಲು ತೊಳೆಯದೆಯೇ ಒಳಗೆ ಹೆಜ್ಜೆ ಹಾಕಲು ಒಪ್ಪಲಿಲ್ಲ.

ಬಾಗಿಲ ಒಳಬದಿಯಲ್ಲಿ ನೀರಿನ ತಂಬಿಗೆ ಇದೆಯೇನೋ ಎಂದು ನೋಡಿದ. ಬರಿದಾದ ತಂಬಿಗೆ ಕಾಣಿಸಿತು. ಹಿತ್ತಲ ಬಳಿಯ ಭಾವಿಯಲ್ಲಿ ನೀರು ಸೇದಿ ಕಾಲು, ಮುಖ ತೊಳೆದುಕೊಳ್ಳುವುದು ಎಂದುಕೊಂಡು, ಬರಿ ತಂಬಿಗೆಯನ್ನೇ ಹಿಡಿದು ಭಾವಿಯ ಬಳಿಗೆ ಹೊರಟ.

ಮನೆಯ ಹಿಂಭಾಗದಲ್ಲಿಯೇ ಭಾವಿಯಿತ್ತು. ಆ ಭಾವಿಗೆ ಸ್ವಲ್ಪ ದೂರದಲ್ಲಿಯೇ ಮೂರಾಳು ಎತ್ತರದ ಹುಲ್ಲು ಬಣವೆ. ಕತ್ತಲಲ್ಲೇ ಭಾವಿಯ ಹತ್ತಿರಕ್ಕೆ ಬಂದಾಗ ಅವನಿಗೆ ಹುಲ್ಲು ಬಣವೆಯ ಬದಿಯಲ್ಲಿ ಯಾರೋ ಕುಳಿತಂತೆ ಕಾಣಿಸಿತು. ಅಷ್ಟು ಹೊತ್ತಿನಲ್ಲಿ ಅಲ್ಲಿ ಯಾರು ಕುಳಿತಿರಬಹುದು ಎನಿಸಿ, ಆಶ್ಚರ್ಯ ಭಯಗಳೆರಡೂ ಆಯಿತು. ನಿಂತಲ್ಲಿಯೇ ನಿಂತು 'ಯಾರದು?' ಎಂದು ಗದ್ದರಿಸಿ ಕೇಳಿದ. ಅವನ ಕೂಗನ್ನು ಕೇಳಿ, ರೊಪ್ಪದಲ್ಲಿದ್ದ ಕಾವಲುನಾಯಿ ಎದ್ದು ಬಗುಳಲಾರಂಭಿಸಿತು. ಆದರೆ ಬಣವೆಯ ಬಳಿ ಕುಳಿತ ವ್ಯಕ್ತಿ ಚಲಿಸಲಿಲ್ಲ. ಅದನ್ನು ನೋಡಿ ಕಸ್ತೂರಿನಾಯಕ ಬಣವೆಯ ಹತ್ತಿರವೇ ಹೋಗಿ ಮತ್ತೊಮ್ಮೆ "ಯಾರದೂ?" ಎಂದು ಕೇಳಿ, ಕತ್ತಲಲ್ಲಿ ಮರೆಯಾಗಿ ಕುಳಿತ ವ್ಯಕ್ತಿಯಾರೆಂದು ಇಣಿಕಿ ನೋಡಿದ. ಬಣವೆಯ ಬದಿಯಲ್ಲಿ ಕುಳಿತಿದ್ದವಳು ಗಂಗವ್ವ!

ಆ ಹೊತ್ತಿನಲ್ಲಿ, ಆ ಸ್ಥಳದಲ್ಲಿ, ಹಾಗೆ ಕುಳಿತ ಗಂಗವ್ವನನ್ನು ಕಂಡು ಕಸ್ತೂರಿನಾಯಕನಿಗೆ ಆಶ್ಚರ್ಯವಾಯಿತು.

"ಗಂಗಾ—ಇದೇನು ಇಲ್ಲಿ? ಏಳು"

—ಎಂದು ಅವಳನ್ನು ಮೇಲಕ್ಕೆ ಎತ್ತಲು ಬೆನ್ನಿಗೆ ಕೈಹಾಕಿದ. ಅವನ ಕೈ ಸೋಕಿದ ಕೂಡಲೇ ಅದುವರೆಗೂ ಕುಳಿತಿದ್ದ ಗಂಗವ್ವ ಕುಸಿದು ಅಳಲಾರಂಭಿಸಿದಳು.

"ಗಂಗಾ....ಗಂಗಾ....ಏನಾಯಿತು ಹೇಳು ಗಂಗಾ....!"

—ಎಂದು ಹತ್ತಿಕ್ಕಲಾರದ ಉದ್ವಿಗ್ನತೆಯಲ್ಲಿ ಅಧೀರನಾಗಿ ಕೇಳಿದ ಕಸ್ತೂರಿನಾಯಕ. ಕೊಂಚ ಹೊತ್ತು ಉಕ್ಕಿಬಂದ ದುಃಖದ ನೆರೆಯಲ್ಲಿ

ಗಂಗವ್ವನಿಗೆ ಏನೂ ಮಾತನಾಡಲಾಗಲಿಲ್ಲ. ದುಃಖ ಬಿರುಗಾಳಿಯಂತೆ ಆವಳ ಮೈಯನ್ನು ಅತ್ತಿತ್ತ ತೂಗಾಡಿಸುತ್ತಿತ್ತು. ಆ ದುಃಖದ ಪ್ರಖರತೆಯ ಕಾವು ಕಸ್ತೂರಿನಾಯಕನಿಗೂ ಸೋಕಿ, ಕಾರಣವರಿಯದ ದುಃಖಕ್ಕೆ ಯಾವ ಬಗೆಯ ಸಮಾಧಾನವನ್ನೂ ಹೇಳಲಾರದವನಾಗಿ ದುಃಖವಿಹ್ವಲಳಾದ ಮಡದಿಯನ್ನು ತನ್ನ ಎದೆಯೊಳಗೆ ತಬ್ಬಿ ಸುಮ್ಮನೆ ಕುಳಿತ. ಅಷ್ಟು ಹೊತ್ತು ಇಬ್ಬರೂ ಹಾಗೆಯೇ ಕುಳಿತ ಮೇಲೆ, ಕ್ರಮೇಣ ಗಂಗವ್ವನ ದುಃಖದ ಉರುಬು ಕಡಮೆಯಾಯಿತು. ಅಳು ಅಡಗಿ ಇನ್ನು ಮಾತು ಮೂಡಬಹುದು ಎಂದು ಮನವರಿಕೆಯಾದ ಮೇಲೆ ಕಸ್ತೂರಿನಾಯಕ, ಗಂಗವ್ವನ ನೆತ್ತಿ, ಬೆನ್ನನ್ನು ನೇವರಿಸುತ್ತಾ ಮೃದುವಾದ ಧ್ವನಿಯಲ್ಲಿ ಕೇಳಿದ.

"ಇದೇನು ವಿಚಿತ್ರ ದುಃಖ. ಏನಾಯಿತು ಗಂಗಾ?"

"ಏನು ಹೇಳಲಿ, ನನಗೇಕೋ ಹುಚ್ಚು ಹಿಡಿದಂತೆ ಕಾಣುತ್ತದೆ."

"ಹುಚ್ಚು! ನಿನಗೇ! ಎಲ್ಲರಿಗೂ ಹುಚ್ಚು ಹಿಡಿಸಿ ಕುಣಿಸುವ ಮಾಟಗಾತಿ ನೀನು. ನಿನಗೆ ಹುಚ್ಚು ಹಿಡಿಯುವುದೇ?"

—ಅವಳ ಭೀತಿಯನ್ನು ತನ್ನ ನಗುವಿನಿಂದ ಸಂತೈಸುತ್ತಾ ಹೇಳಿದ ಕಸ್ತೂರಿನಾಯಕ.

"ಹೂ. ಹಾಗೇ ಅನಿಸುತ್ತಿದೆ."

"ಅಂತಹುದು ಏನಾಯಿತು? ಯಾರೇನು ಮಾಡಿದರು ಹೇಳು!"

"ವೀರಣ್ಣ ಏಕೋ ಮುನಿಸಿಕೊಂಡಿದಾನೆ. ದಿನದ ಹಾಗೆ ಮಾತನಾಡಲಿಲ್ಲ. ಹೊರಗಿನವರು ಮಾಡಿದ ಹಾಗೆ ಮಾಡಿ, ಊಟವನ್ನೂ ಸರಿಯಾಗಿ ಮಾಡದೆ ಎದ್ದು ಹೋದ. ಅದಕ್ಕೇ ದುಃಖವಾಯಿತು."

"ಮುನಿಸು ಏಕಂತೆ ಕೇಳಿದೆಯಾ?"

"ಹೂ."

"ಏಕಂತೆ?"

"ಏನೂ ಹೇಳಲಿಲ್ಲ. ನಿಮ್ಮ ಸುದ್ದಿ ಕೇಳಿದರೆ ಅದಕ್ಕೂ ಉತ್ತರವಿಲ್ಲ. ಏನು ಮಾತನಾಡಿಸಿದರೂ ಗಡಿಗೆ ಮುಖ ಮಾಡಿಕೊಂಡು ಉತ್ತರ ಕೊಡುತ್ತಾನೆ. ಹೀಗೆಂದೂ ಮಾಡಿರಲಿಲ್ಲ. ಅದಕ್ಕೇ ಇಷ್ಟು ದುಃಖವಾಯಿತು."

" ಈಗ ನೀನು ನಿಜವಾಗಿಯೂ ಹುಚ್ಚಿ ಎನ್ನುವುದು ನನಗೂ ನಂಬಿಕೆ ಯಾಯಿತು."

" ಏಕೆ? "

" ಅಲ್ಲವೇ ಮತ್ತೆ. ನಿನ್ನ ಮೈದುನ ಏನು ಇನ್ನೂ ಹಾಲು ಕುಡಿವ ಹಸುಳೆ ಎಂದುಕೊಂಡಿದೀಯಾ? ದೇವರ ಅನುಗ್ರಹವಾಗಿದ್ದಿದ್ದರೆ, ಈ ವೇಳೆಗೆ ಅವನೂ ಮದುವೆಯಾಗಿ, ತಂದೆಯಾಗಬಹುದಿತ್ತು. ಆ ವಯಸ್ಸು ಬಂದಿದೆ. ಅಲ್ಲದೆ ಅವನು ಮನೆಯ ಮಗುವೂ ಅಲ್ಲ. ಸೇನೆಯಲ್ಲಿದ್ದಾನೆ. ದುರ್ಗದ ಪರಿಸ್ಥಿತಿ ಈಗ ಎಲ್ಲರಿಗೂ ತಲೆ ಕೆಡಿಸುವಂತಿದೆ. ಅಲ್ಲಿ ಏನಾದರೂ ಆಗಿರಬಹುದು. ದಳವಾಯಿಗಳೇ ಏನಾದರೂ ಒಂದು ಅಸಮಾಧಾನದ ಮಾತು ಆಡಿ ಅವನ ಮನಸ್ಸು ಕೆಟ್ಟಿರಬಹುದು. ಹೀಗೇ ಹೊರಗೆ ತಿರುಗುವ ಗಂಡಸಿಗೆ ಹತ್ತು ಚಿಂತೆ. ನೀನು ಅದನ್ನೇ ಹಚ್ಚಿಕೊಂಡು, ಹೀಗೆ ಅಳುತ್ತಾ ಕುಳಿತರೆ, ಅದಕ್ಕೆ ಏನು ಹೇಳಲಿ ಹೇಳು. ಅಸಮಾಧಾನ ಇನ್ನೂ ಬಿಸಿಯಾಗಿದ್ದ ಹೊತ್ತಿನಲ್ಲಿ ಕೇಳಿದರೆ, ಅವನು ಮಾತನಾಡಲಿಲ್ಲ. ಆಯಿತು. ಒಂದು ಗಳಿಗೆ ಬಿಟ್ಟುಕೊಂಡು, ಅದು ತಣಿದ ಮೇಲೆ ಕೇಳಿದ್ದರೆ ಅವನೇ ಹೇಳುತ್ತಿದ್ದ. ಹಾಗೆ ಮಾಡುವುದನ್ನು ಬಿಟ್ಟು, ನಡುರಾತ್ರಿಯಲ್ಲಿ ಬಣವೆಯ ಬಳಿ ಅಳುತ್ತಾ ಕುಳಿತರೆ ಏನು ಬಂದ ಹಾಗಾಯಿತು. ಏಳು—ಒಳಗೆ ಹೋಗೋಣ. ಇಷ್ಟೇನೇ? ನೀನು ಹೀಗೆ ಕುಳಿತದ್ದನ್ನು ನೋಡಿ ಏನೋ ಲೋಕ ಮುಳುಗುವಂಥದು ಆಗಿ ಹೋಯಿತು ಎಂದು ಗಾಬರಿಯಾಗಿದ್ದೆ. ಎಷ್ಟು ಹೆದರಿಸಿ ಬಿಟ್ಟೆಯೇ ಹುಚ್ಚು ಹುಡುಗಿ? "

—ಎಂದು ನಗುತ್ತಾ ಗಂಗವ್ವನ ಕೆನ್ನೆಯನ್ನು ಹಿಂಡಿ ಹೇಳಿದ ಕಸ್ತೂರಿನಾಯಕ.

" ನೀವೇನೇ ಹೇಳಿ. ನನಗಿನ್ನೂ ಗಾಬರಿಯೇ."

" ಏಕೆ? "

" ನಿಮ್ಮಿಬ್ಬರಿಗೂ ಏತಕ್ಕಾದರೂ ಮನಸ್ತಾಪವಾಯಿತೇ? "

" ನನಗೂ ಅವನಿಗೂ ಮನಸ್ತಾಪವೇ! ಏಕೆ? ಹಾಗೆಂದು ಹೇಳಿದನೇ ವೀರಣ್ಣ? "

—ಗಂಗವ್ವನ ಮಾತು ಕೇಳಿ ಗೊಂದಲದಲ್ಲಿ ಬಿದ್ದ ಕಸ್ತೂರಿನಾಯಕ, ಕೇಳಿದ.

" ಹಾಗೆಂದು ಹೇಳಲಿಲ್ಲ. ಆದರೆ ಏಕೋ ನಿಮ್ಮ ಮೇಲೂ ಅವನಿಗೆ ಅಸಮಾಧಾನವಾಗಿದೆ ಎನಿಸಿತು, ಅವನು ಮಾತಾಡುವ ರೀತಿ ನೋಡಿದರೆ."

" ಅಸಮಾಧಾನ—ನನ್ನಮೇಲೆ—ಏಕೆ ? "

—ತನಗೆ ತಾನೇ ಆ ಪ್ರಶ್ನೆಯನ್ನು ಕೇಳಿಕೊಳ್ಳುವವನಂತೆ ಹೇಳಿ, ಕಸ್ತೂರಿನಾಯಕ, ಆ ಪ್ರಶ್ನೆಯ ಕೋಲಿನಿಂದ ಮಿದುಳನ್ನು ಕೆದಕುತ್ತಾ ಒಂದು ಗಳಿಗೆ ಸುಮ್ಮನೆ ಕುಳಿತ. ಏನಾಗಿರಬಹುದು ? ಅವನಿಗೆ ಅಸಮಾಧಾನವಾಗುವಂಥ ಕೆಲಸ ತನ್ನಿಂದ ಏನು ಘಟಿಸಿರಬಹುದು ಎಂದು ಚಿಂತಿಸಿದ. ಇದ್ದಕ್ಕಿದ್ದ ಹಾಗೇ ಕೆಲವು ದಿನಗಳ ಹಿಂದೆ ಅಂತಃಪುರದ ಕಾವಲಿನ ವಿಷಯದಲ್ಲಿ ತಮ್ಮಿಬ್ಬರಿಗೂ ಆದ ಚರ್ಚೆ ನೆನಪಿಗೆ ಬಂದಿತು. ಆದರೆ ಅದಕ್ಕಾಗಿ ಅವನು ಏಕೆ ಅಸಮಾಧಾನಪಟ್ಟುಕೊಳ್ಳಬೇಕೆಂಬುದು ಬಗೆಹರಿಯಲಿಲ್ಲ. ಕಸ್ತೂರಿನಾಯಕ ತನ್ನ ಕರ್ತವ್ಯವನ್ನು ತಾನು ಮಾಡಿದಂತೆ, ವೀರಣ್ಣ ತನ್ನ ಕರ್ತವ್ಯವನ್ನು ತಾನು ನಿರ್ವಹಿಸಿದ್ದ. ವೀರಣ್ಣನ ಮಾತಿನಿಂದ ಕಸ್ತೂರಿನಾಯಕನಿಗೆ ಅಸಮಾಧಾನವಾಗಿರಲಿಲ್ಲ. ಅವನ ಕರ್ತವ್ಯ ಅವನು ಮಾಡಿದ ಎಂದುಕೊಂಡು ಸುಮ್ಮನಾಗಿದ್ದ. ಹೀಗಿರುವಾಗ, ಕಸ್ತೂರಿನಾಯಕನ ಮಾತಿನಿಂದ ಅವನೇಕೆ ಅಸಮಾಧಾನಮಾಡಿಕೊಳ್ಳಬೇಕು ? ವೀರಣ್ಣನ ಮನಸ್ಸು ನೋಯಿಸಬೇಕೆಂದು, ವೈಯ್ಯಕ್ತಿಕವಾಗಿ ಅವನಿಗೇ ಯಾವ ಮಾತನ್ನೂ ತಾನು ಹೇಳಿರಲಿಲ್ಲ. ವೀರಣ್ಣನಲ್ಲದೆ ಬೇರೆ ಯಾರು ಆ ಸ್ಥಾನದಲ್ಲಿದ್ದರೂ, ಆ ರೀತಿ ವರ್ತಿಸಿದ್ದರೂ ತಾನು ಅದೇ ಮಾತನ್ನೇ ಆಡುತ್ತಿದ್ದ. ತಾನಲ್ಲದೆ ಬೇರೆಯವರು ಆ ಸ್ಥಾನದಲ್ಲಿದ್ದಿದ್ದರೆ, ಅವರೂ ಅದೇ ಮಾತನ್ನೇ ಆಡುತ್ತಿದ್ದರು. ಸಂದರ್ಭವೇ ಹಾಗಿತ್ತು. ಹೀಗಿರುವಾಗ ಅದಕ್ಕಾಗಿ ವೀರಣ್ಣ ತನ್ನ ಮನಸ್ಸನ್ನು ಕಲುಷಿತಮಾಡಿಕೊಂಡು, ಎಲ್ಲರ ಮನಸ್ಸನ್ನೂ ನೋಯಿಸಬೇಕೇ ? ಈ ಯೋಚನೆ ಅವನ ಮಿದುಳನ್ನು ಸುತ್ತ ಮುತ್ತ ಕಾಡತೊಡಗಿತು.

ತನ್ನ ಪ್ರಶ್ನೆಗೆ ಕಸ್ತೂರಿನಾಯಕ ಏನೂ ಉತ್ತರಕೊಡದೆ ಸುಮ್ಮನೆ ಕುಳಿತುದನ್ನು ಕಂಡು ಗಂಗವ್ವನಿಗೆ ತಾನು ಕೇಳಬಾರದ ಪ್ರಶ್ನೆಯನ್ನು ಕೇಳಿದೆನೋ ಎನಿಸಿ ದಿಗಿಲಾಯಿತು.

" ಏಕೆ, ಹೀಗೆ ಸುಮ್ಮನೆ ಕುಳಿತುಬಿಟ್ಟರಲ್ಲಾ ? "

—ಎಂದು ಮನಸ್ಸಿನ ಭೀತಿ ವ್ಯಕ್ತವಾಗುವ ಸಣ್ಣಧ್ವನಿಯಲ್ಲಿ ಕೇಳಿದಳು ಗಂಗವ್ವ.

" ನಿನ್ನ ಮಾತು ಕೇಳಿ ಏನಾಗಿರಬಹುದೆಂದು ಚಿಂತೆಯಾಯಿತು. ಅದನ್ನೇ ಯೋಚಿಸುತ್ತಾ ಕುಳಿತಿದ್ದೆ. ನೋಡು ಗಂಗಾ. ನೀನು ವೀರಣ್ಣನಿಗೆ ಒಂದು ಮಾತು ಹೇಳಬೇಕು. "

" ಏನು ? ಏನು ಹೇಳಬೇಕು ? "

—ತನ್ನ ಗಂಡ ನಿರ್ಧಾರದ ಧ್ವನಿಯಲ್ಲಿ ಹೇಳಿದ ಮಾತನ್ನು ಕೇಳಿ ಚಕಿತಳಾದ ಗಂಗವ್ವ ಕೇಳಿದಳು.

" ಇಂದು ದುರ್ಗದ ಪರಿಸ್ಥಿತಿ ಚೆನ್ನಾಗಿಲ್ಲ, ರಾಜಕಾರಣದ ಶನಿ ಅಲ್ಲಿಯ ಸ್ನೇಹಮಯ ವಾತಾವರಣವನ್ನು ಕಲಕಿ ರಾಡಿಯಾಗಿ ಮಾಡಿದೆ. ಇದು ಯಾರ ಮುಂದೂ ಆಡುವ ಮಾತಲ್ಲ........"

" ಹಾಗಾದರೆ ನನ್ನ ಮುಂದೇಕೆ ಹೇಳುತ್ತೀರಿ ? "

" ನಿನ್ನ ನಾಲಗೆ ಹೊರಗೆ ಈ ಮಾತನ್ನು ನುಡಿಯುವುದಿಲ್ಲ ಎಂಬ ನಂಬಿಕೆಯಿಂದ, ವಿಷಯ ತಿಳಿದಿದ್ದರೆ, ವೀರಣ್ಣನಿಗೆ ಹೇಳುವ ಮಾತನ್ನೂ ಅವನಿಗೆ ನಂಬಿಕೆಯಾಗುವರೀತಿಯಲ್ಲಿ ಹೇಳುತ್ತೀಯ ಎಂಬ ಕಾರಣಕ್ಕಾಗಿ. ಆದರೆ ನಾನು ಹೇಳುವುದನ್ನೆಲ್ಲಾ ಅವನಿಗೆ ಹೇಳಕೂಡದು. ಅದು ನನಗೆ ಉಪ್ಪಿಟ್ಟವರ ರಹಸ್ಯ. ವೀರಣ್ಣ ಇಂದು ಅರಮನೆಗೆ ವಿರುದ್ಧವಾಗಿರುವವರ ಗುಂಪಿಗೆ ಸೇರಿದವನು. "

" ಆ್ಞ ? ನನ್ನ ವೀರಣ್ಣ ಅರಮನೆಗೆ ದ್ರೋಹಿಯೇ ? "

—ಆಕಸ್ಮಿಕವಾಗಿ ಹಾವು ಮುಟ್ಟಿದವಳಂತೆ ಹೆದರಿ ಕೇಳಿದಳು ಗಂಗವ್ವ.

" ಊಹೂ, ವೀರಣ್ಣ ಅರಮನೆಯ ದ್ರೋಹಿಯಲ್ಲ. ಅದರಲ್ಲಿ ಅವನ ತಪ್ಪೇನೂ ಇಲ್ಲ, ನಾಯಕರನಂತರ ಯಾರು ಪಟ್ಟಕ್ಕೆ ಬರಬೇಕು ಎಂಬ ವಿಚಾರದಲ್ಲಿ ಅರಮನೆಯವರಿಗೂ ದಳವಾಯಿಗಳಿಗೂ ಭಿನ್ನಾಭಿಪ್ರಾಯವಿದೆ ; ನಾನು ಅರಮನೆಯ ಚಾಕರ. ಅರಮನೆಯವರು ಹೇಳಿದಂತೆ ಕೇಳಬೇಕಾದವನು. ವೀರಣ್ಣ ದಳವಾಯಿಗಳ ಊಳಿಗದಲ್ಲಿರುವ ಆಳು. ಅವರು

ಹೇಳಿದ ಹಾಗೆ ಅವನು ಕೇಳಬೇಕು. ಸಿಂಹಾಸನದ ಮೇಲೆ ದೊರೆ ಎನ್ನು ವವನು ಒಬ್ಬನಿಲ್ಲದುದರಿಂದ, ಅರಮನೆ, ಸೇನೆ—ಒಂದೇ ದಿಕ್ಕಿನಲ್ಲಿ ಎಳೆಯಬೇಕಾದ ಈ ಕುದುರೆಗಳೆರಡು ಬೇರೆ ಬೇರೆ ದಿಕ್ಕಿನಲ್ಲಿ ಎಳೆಯು ತ್ತಿವೆ. ನಾಳೆ ಇಂಥವರೇ ದೊರೆಗಳೆಂದು ನಿಷ್ಕರ್ಷೆಯಾಗಿ, ಪಟ್ಟಾಭಿಷೇಕ ವಾದರೆ ಇಂದು ಎರಡಾಗಿರುವ ಗುಂಪು ಮತ್ತೆ ಒಂದೇ ಆಗುತ್ತದೆ. ಆದರೆ ಈ ಮಧ್ಯಕಾಲದಲ್ಲಿ, ಅವರಿಬ್ಬರಿಗೆ ತಿಕ್ಕಾಟ ನಡೆಯುತ್ತಿರುವಾಗ, ನಾವು ಆಳುಗಳು, ಧಣಿಗಳ ಚಿತ್ತದಂತೆ ನಡೆಯುವಾಗ, ನಾವು ಅಣ್ಣತಮ್ಮಂದಿರು ಒಬ್ಬರನ್ನೊಬ್ಬರು ಪ್ರತಿಭಟಿಸಬೇಕಾಗಬಹುದು...."

—ಕಸ್ತೂರಿನಾಯಕ ಶಾಂತ ಧ್ವನಿಯಲ್ಲಿ ಹೇಳಿದ ಆ ಮಾತನ್ನು ಕೇಳಿ ಗಂಗವ್ವನ ಕಣ್ಣಿದಿರು ಭಯಾನಕ ಭೂತಗಳು ಬೀಡುಬಿಟ್ಟಂತಾಗಿ ಕಂಗಾಲಾದಳು.

" ನೀವು........ನೀವು ನೀವು....ಪ್ರತಿಸ್ಪರ್ಧಿಗಳಾಗಬೇಕೇ ? "

—ಎಂದು ಆರ್ತ ಧ್ವನಿಯಲ್ಲಿ ಕೇಳಿದಳು.

" ಆ ಮಾತಿಗೆ ಇಲ್ಲ ಎಂದು ಪ್ರಯೋಜನವೇನು ? ಅಲ್ಲಿ, ದುರ್ಗದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಹಾಗಾಗುವುದು ಅನಿವಾರ್ಯ. ಹೀಗಾಗಬಾರದು ಎಂದು ನನಗೆ ಆಸೆಯಿತ್ತು. ಅದಕ್ಕೇ ವೀರಣ್ಣನನ್ನು ನನ್ನೊಂದಿಗೆ ಅರ ಮನೆಯ ಚಾಕರಿಗೆ ಸೇರಿಸಬೇಕೆಂದು ಯತ್ನಿಸಿದೆ. ಆದರೆ ವೀರಣ್ಣ ನನ್ನ ಮಾತು ಕೇಳಲಿಲ್ಲ. ಅರಮನೆಯ ಚಾಕರಿಯಲ್ಲಿ ಏನಿದೆ? ಹೆಚ್ಚೆಂದರೆ ಅಂಗರಕ್ಷಕಪಡೆಯ ಮಟ್ಟಕ್ಕೆ ಏರಿದರೆ ಆಯಿತು ಅಷ್ಟೆ. ಆದರೆ ಸೇನೆಗೆ ಸೇರಿದರೆ, ಅದೃಷ್ಟ ಯೋಗ್ಯತೆ ಎರಡೂ ಇದ್ದರೆ ಇಂದಲ್ಲ ನಾಳೆ ನಾನು ದಳವಾಯಿಯಾಗಬಹುದು ಎಂಬ ಹುಚ್ಚಿಗೆ ಬಿದ್ದು ವೀರಣ್ಣ ಸೇನೆಗೆ ಸೇರುತ್ತೀನಿ ಎಂದ. ಅಂದು, ಹೀಗಾಗಬಹುದು, ಎಂದಾದರೂ ಇಂಥ ಪರಿಸ್ಥಿತಿ ಬರಬಹುದು ಎಂಬ ಕಲ್ಪನೆಯೂ ನನಗಿರಲಿಲ್ಲ. ಇದ್ದಿದ್ದರೆ ತಲೆ ಕೊಟ್ಟಾದರೂ ಅವನು ಸೇನೆಗೆ ಸೇರುವುದನ್ನು ತಪ್ಪಿಸುತ್ತಿದ್ದೆ........"

" ಅದಂತೂ ಈಗ ಕೈ ಮೀರಿ ಹೋಯಿತು, ಪಶ್ಚಾತ್ತಾಪ ಪಟ್ಟರೂ ಪ್ರಯೋಜನವಿಲ್ಲ. ಈಗ, ಈಗೇನು ಮಾಡಬೇಕು ಎನ್ನುತ್ತೀರಿ ? "

—ದಾರಿಗಾಣದ ಕಾವಳದಲ್ಲಿ ತೊಳಲುತ್ತಾ ಕೇಳಿದಳು ಗಂಗವ್ವ—

" ಈಗ ಇದಿರಾಳಿಗಳಾಗದೆ ಬೇರೆ ದಾರಿಯೇ ಇಲ್ಲವೇ ? "

" ಊಹೂ, ಇಲ್ಲ ಸಾಧ್ಯವಿಲ್ಲ, ಆ ವಿಷಘಟ್ಟದಿಂದ ಎಷ್ಟು ತಪ್ಪಿಸಿಕೊಳ್ಳಬೇಕೆಂದು ಹೊಯ್ದಾಡಿದರೂ ನಮ್ಮ ಕೈ ಮೀರಿ, ಎಲ್ಲ ಇಚ್ಛೆಗೂ ವಿರುದ್ಧವಾಗಿ ಇಂಥ ಪರಿಸ್ಥಿತಿ ಬರಬಹುದು. ಹಾಗೆ ಬಂದಾಗ ನಮ್ಮಲ್ಲಿ ಒಂದು ವಿವೇಚನೆ ಇದ್ದರೆ ಈ ವಿಷಘಟ್ಟದ ದುಷ್ಪರಿಣಾಮದಿಂದ ತಪ್ಪಿಸಿಕೊಳ್ಳಬಹುದು."

ಕಸ್ತೂರಿನಾಯಕನ ಮಾತು ಕೇಳಿ ಗಂಗವ್ವನಿಗೆ ಕತ್ತಲಲ್ಲಿ ದಾರಿ ತಪ್ಪಿದ ಪಾಂಥನಿಗೆ ದೂರದಲ್ಲಿ ಬೆಳಕು ಕಂಡಂತಾಗಿ, ಆ ಬೆಳಕಿನ ದಾರಿಯನ್ನು ಅರಿಯಲು ಉತ್ಸಾಹವಾಯಿತು. ಆ ಆತುರದಲ್ಲೇ ಕೇಳಿದಳು :

" ಏನು ದಾರಿ ? "

" ಅಲ್ಲಿ ನಾವು ವಿರುದ್ಧ ಪಕ್ಷಕ್ಕೆ ಸೇರಿದ ಆಳುಗಳು. ನಮ್ಮ ವಿರೋಧವೆಲ್ಲಾ ಅಲ್ಲಿಗೇ ಸರಿ. ಮನೆಯಲ್ಲಿ ನಾವಿಬ್ಬರೂ ಅಣ್ಣ ತಮ್ಮಂದಿರಾಗಿ ಬಾಳಬೇಕಾದವರು ಎನ್ನುವುದನ್ನು ಮರೆಯದೆ ಹೋದರೆ, ಅದರಿಂದ ನಮಗೇನೂ ಕೆಡುಕಾಗಬೇಕಿಲ್ಲ. ಬೀದಿಯಲ್ಲಿ ಓಡಾಡುವ ಧೂಳು, ಕಸ ಬೇಡವೆಂದರೂ ನಮ್ಮ ಮೈಗೆ ಅಂಟಿಕೊಳ್ಳುತ್ತವೆ. ಅಲ್ಲಿ ಅದು ಅನಿವಾರ್ಯ. ಹಾಗೆಂದುಕೊಂಡು, ಆ ಬೀದಿಯ ಕಸವನ್ನು ಮನೆಗೂ ತಂದುಕೊಂಡು ಮನೆಯನ್ನು ಮೈಲಿಗೆ ಮಾಡುವುದೇಕೆ ? ಬೀದಿಯಿಂದ ಮನೆಗೆ ಬರುವಾಗ ಬಾಗಿಲಲ್ಲೇ ಕಾಲು ತೊಳೆದುಕೊಂಡು ಒಳಬರುವಂತೆ, ಹೊರಗಿನ ಭಿನ್ನಾಭಿಪ್ರಾಯಗಳೆಲ್ಲ ಹೊರಗೇ ಇರಲಿ ಎಂದು ಬಿಟ್ಟು ಬಂದರೆ ಮುಗಿಯಿತು. ಈ ಸಣ್ಣ ಮಾತನ್ನು ಅರ್ಥಮಾಡಿಕೊಂಡರೆ, ಯಾರೂ ಮುನಿದುಕೊಳ್ಳಬೇಕಾಗಿಲ್ಲ, ಮನಸು ಕೆಡಿಸಿಕೊಳ್ಳಬೇಕಾಗಿಲ್ಲ. ಈ ಮಾತನ್ನು ನೀನು ವೀರಣ್ಣನಿಗೆ ಹೇಳಬೇಕು. ಅಲ್ಲಿ ನಾನು ಮಾಡುವುದು, ಆಡುವುದು ಎಲ್ಲಾ ಕಸ್ತೂರಿನಾಯಕನಾಗಿ; ದುರ್ಗದಿಂದ ಇಲ್ಲಿಗೆ ಬಂದರೆ ಎಂದಿನ ಕಸ್ತೂರಣ್ಣನೇ. ಇಷ್ಟು ಹೇಳು."

" ಇದೆಲ್ಲಾ ಬುದ್ಧಿವಾದದ ಮಾತಾಯಿತು."

" ನಿಜ."

" ಅದನ್ನು ಹೆಣ್ಣು ಹೆಂಗಸು ನಾನು ಹೇಗೆ ಹೇಳಲಿ."

" ವೀರಣ್ಣನಿಗೆ ಅತ್ತಿಗೆ ಎಂದರೆ ಪಂಚಪ್ರಾಣ. ಆದ್ದರಿಂದ ನೀನು ಹೇಳಬಹುದು."

" ಊಹೂ. ಪ್ರೀತಿಯಲ್ಲಿ ಹೇಳಬಹುದಾದುದನ್ನು ನಾನು ಹೇಳಬಹುದೇ ಹೊರತು, ನನಗಿಂತ ಹಿರಿಯರು ಮನೆಯಲ್ಲಿರುವಾಗ, ಬುದ್ಧಿವಾದ ಹೇಳುವ ಅಧಿಕಾರ ನನಗೆಲ್ಲಿ ? "

" ನಾನು ಹೇಳುವುದು ಅವನ ಮನಸ್ಸಿಗೆ ಪಥ್ಯವಾಗದೆ ಇರಬಹುದು ಗಂಗಾ. ಅಷ್ಟೇ ಅಲ್ಲ, ಅಪಾರ್ಥಕ್ಕೂ ಕಾರಣವಾಗಬಹುದು. ಇಲ್ಲಿ ನಾನು ಅವನಿಗೆ ಅಣ್ಣನಾದರೂ, ಅಲ್ಲಿ ಅವನ ವಿರುದ್ಧ ಗುಂಪಿನವನು. ಆದ್ದರಿಂದ ಏನೋ ಅಂತರಾರ್ಥವಿಟ್ಟುಕೊಂಡು ಮಾತಾಡುತ್ತಿದ್ದೇನೆ ಎನಿಸಬಹುದು."

" ವೀರಣ್ಣ ನಿಮ್ಮನ್ನು ತಪ್ಪು ತಿಳಿದುಕೊಳ್ಳುವನೇ ? ದೇವರೇ ಇಳಿದು ಬಂದು ಹೇಳಿದರೂ ಆ ಮಾತನ್ನು ನಾನು ನಂಬುವುದಿಲ್ಲ."

—ಸತ್ಯವನ್ನು ಸಾರುವ ಖಚಿತವಾದ ಧ್ವನಿಯಲ್ಲಿ ಹೇಳಿದಳು ಗಂಗವ್ವ.

" ಒಳಿತೆನ್ನು. ನೀನು ಅಂದ ಹಾಗೇ ಆಗಲಿ. ಸಂತೋಷ ಆದರೂ ಗಂಗಾ, ನಿನಗೆ ಹೊರಗೆ ದುಡಿಯುವ ಗಂಡಸರ ಬುದ್ಧಿ ಅರ್ಥವಾಗಿಲ್ಲ. ಅದು ಹತ್ತು ಕಡೆಯ ಗಾಳಿಗೆ ಒಡ್ಡಿದ ಸೊಡರು. ಯಾವ ಗಳಿಗೆಯಲ್ಲಿ ಅದು ಯಾವ ಕಡೆಗೆ ಒಲಿದೀತು ಎಂದು ಹೇಳುವುದು ಮಹಾ ಕಷ್ಟದ ಕೆಲಸ. ಆದುದರಿಂದ ಆ ಲೋಕದ ಸಂಪರ್ಕವಿಲ್ಲದ ನೀನು ಹೇಳುವುದು ಸರಿ."

" ಅದು ತಾನೇ ಹೇಗೆ ಸರಿಯಾದೀತು. ನಿಮ್ಮ ಕೈಹಿಡಿದ ನನಗೂ ನಿಮ್ಮ ಲೋಕದ ಸಂಪರ್ಕವಿದ್ದಂತೆಯೇ. ವೀರಣ್ಣ ನಿಮ್ಮನ್ನು ತಪ್ಪು ತಿಳಿದುಕೊಳ್ಳಬಹುದಾದರೆ, ನನ್ನನ್ನೂ ತಪ್ಪು ತಿಳಿದುಕೊಳ್ಳಬಹುದು. ಅದಕ್ಕೇ ನಾನೂ ಹೇಳಲಾರೆ ಎಂದದ್ದು.

" ಹಾಗಾದರೆ ಯಾವುದೋ ಸಿಟ್ಟಿನ ಕಾವಳದಲ್ಲಿ ದಾರಿತಪ್ಪಬಹುದಾದ ಅವನಿಗೆ ದಾರಿ ತೋರುವವರು ಯಾರು ಗಂಗಾ ? "

—ನಿರಾಶೆಯ ಆಳಕ್ಕಿಳಿಯುತ್ತಾ ಕೇಳಿದ ಕಸ್ತೂರಿನಾಯಕ.

" ನಾನೂ ಬೇಡ, ನೀವೂ ಬೇಡ. ನಮ್ಮೆಲ್ಲರಿಗೂ ಹಿರಿಯರು ನಾವು ಹೇಳಬೇಕಾದ ಮಾತನ್ನು ಹೇಳಲಿ."

" ಯಾರು ? "

" ಮಾವಯ್ಯ ? "

" ಛೆ! ಮಾವಯ್ಯನಿಗೆ ಅಂಟಿಸುವುದೇ ಈ ಕೆಲಸವನ್ನು! ಎಲ್ಲಿಯೂ ಏನೂ ದುಃಖವಿಲ್ಲ, ಎಲ್ಲಾ ಹಾಯಾಗಿದೆ ಎಂದುಕೊಂಡು ತನ್ನ ಪಾಡಿಗೆ ತಾನಿರುವ ಮಾವಯ್ಯನಿಗೆ ಈ ಮನಸ್ತಾಪದ ಮಾತು ಹೇಳಿ ಮನ ನೋಯಿಸುವುದೇ ಗಂಗಾ ? "

" ಹಿರಿಯರು ಅವರು. ಇಂಥ ನೂರು ಮಾತು ಕೇಳಿರಬಹುದು, ಸಾವಿರ ಮಾತು ಹೇಳಿರಬಹುದು. ಅವರಿಗಿರುವ ಚಿತ್ತಸ್ಥೈರ್ಯ ನಮಗೆಲ್ಲಿ ಬಂದೀತು. ಅವರೇ ಹೇಳಬೇಕು. ಅವರು ಹೇಳಿದರೆ ಸರಿಯಾಗುತ್ತದೆ."

" ಹಾಗಾಗಲಿ ಎಂತ ನಾನೂ ಬೇಡುತ್ತೇನೆ."

" ಹಾಗಾದರೆ ನೀವೇ ಅವರಿಗೆ ಸೂಕ್ಷ್ಮವಾಗಿ ಒಂದು ಮಾತು ಹೇಳಿ."

" ಊಹೂ. ನನ್ನಿಂದ ಆಗದ ಮಾತು ಅದು. ಎಷ್ಟಾದರೂ ನೀನೇ ಆತನ ಮುದ್ದಿನ ಸೊಸೆ. ನೀನೇ ಹೊತ್ತು ನೋಡಿಕೊಂಡು ಅವರಿಗೆ ಈ ಮಾತು ಹೇಳು. ಅಲ್ಲದೆ ಕೆಲಸಕ್ಕೂ ಹೊತ್ತು ತಾನೇ ಎಲ್ಲಿದೆ ಗಂಗಾ. ನೋಡು—ಈಗ ನಡುರಾತ್ರಿಯಲ್ಲಿ ಮನೆಗೆ ಬಂದೆ. ಇನ್ನು ಬೆಳ್ಳಿ ಮೂಡುವ ಹೊತ್ತಿಗೇ ಎದ್ದು ಹೋಗಬೇಕು, ಚಾಕರಿಗೆ."

ಅದುವರೆಗೂ ಬೇರೆ ಯಾವುದೋ ಲೋಕದಲ್ಲಿ ಮಗ್ನರಾಗಿದ್ದ ಅವರಿಗೆ ಹೊತ್ತಿನ ನೆನಪಾಗಲಿ, ತಾವಿದ್ದ ಸ್ಥಳದ ನೆನಪಾಗಲಿ ಇರದೆ ಮರೆತು ಹೋಗಿತ್ತು. ಚಾಕರಿಯ ಮಾತು ಬಂದ ಕೂಡಲೇ ಗಂಗವ್ವ ಈ ಲೋಕಕ್ಕೆ ಇಳಿದು ಬಂದಳು. ಹಗಲಿಡೀ ಚಾಕರಿ ಮಾಡಿದು, ನಡು ರಾತ್ರಿಗೆ ದಣಿದು ಮನೆಗೆ ಬಂದ ಗಂಡನಿಗೆ ತಾನು ಊಟಕ್ಕಿಡದೆ ಕುಳಿತಿದ್ದುದು ನೆನಪಾಗಿ ಮಾಡಬಾರದ ಕೆಲಸ ಮಾಡಿದಷ್ಟು ನಾಚಿಕೆಯಾಯಿತು. ಆ ಅಪರಾಧ ಪ್ರಜ್ಞೆ ಅವಳ ಕರುಳನ್ನು ಹಿಂಡಿತು.

" ಛಿ! ನಾನೆಂಥಾ ಪಾಪಿ. ದಣಿದು ಬಂದ ನಿಮಗೆ ಊಟಕ್ಕಿಡದೆ ಮತ್ತಷ್ಟು ದಣಿಸಿದೆ. ಎಷ್ಟು ಜನ್ಮದ ಶಿಕ್ಷೆ ಅನುಭವಿಸಿ, ಈ ಪಾಪದ ಋಣ ತೀರಿಸಬೇಕೋ. ಏಳಿ, ಕಾಲಿಗೆ ನೀರು ಕೊಡುತ್ತೇನೆ " ಎಂದಳು.

" ನೀನು ತಳಿಗೆ ಇಡು ಹೋಗು ನಾನು ಭಾವಿಯಲ್ಲೇ ನೀರು ಸೇದಿಕೊಂಡು ಕೈಕಾಲು ಮುಖ ತೊಳೆದುಕೊಂಡು ಬರುತ್ತೇನಿ. ಅಂತೂ ನಮ್ಮ ಚಿಂತೆಯಲ್ಲಿ ನಿನಗೆ ಹೊತ್ತುಗೊತ್ತಿಗೆ ಊಟ, ನಿದ್ರೆ ಇಲ್ಲದಂತಾಯಿತು. ಲಗ್ನವಾಗುವ ಮೊದಲೇ ಹೇಳಿದೆ—ಅರಮನೆಯ ನೌಕರನನ್ನು ಮದುವೆಮಾಡಿಕೊಳ್ಳುವುದಕ್ಕಿಂತ ನರಕಕ್ಕೆ ಹೋಗುವುದು ಲೇಸು ಎಂತ. ನೀನು ಕೇಳಲಿಲ್ಲ. ಅನುಭವಿಸು. "

—ಎಂದ ಕಸ್ತೂರಿನಾಯಕ.

" ಹೂ. ಈ ನರಕ ನನಗೆ ಹತ್ತುಹತ್ತು ಜನ್ಮಕ್ಕೂ ಇರಲಿ. "

—ಎಂದು ಹೇಳಿ ಗಂಗವ್ವ ಊಟಕ್ಕೆ ಸಿದ್ಧತೆ ಮಾಡಲು ಒಳಗೆ ಹೋದಳು. ಗಂಡನೊಂದಿಗೆ ಅಷ್ಟು ಮಾತನಾಡಿದುದರಿಂದ ಅವಳ ಹೃದಯದ ಭಾರ ಕೊಂಚ ಹಗುರವಾಗಿತ್ತಾದರೂ, ಅವಳ ಹೃದಯ ಮಂದಿರದಲ್ಲಿ ಕವಿದ ಕಾರ್ಮೋಡ ಪೂರ್ಣವಾಗಿ ತೊಲಗಿರಲಿಲ್ಲ. ಯಾವುದೋ ಮೋಡದ ಸಂದಿನಲ್ಲಿ 'ಇಗೋ ಬಂದೆ' ಎಂದು ಹೇಳಿ, ಸಿಡಿಲು ಇಣಿಕಿ ನೋಡಿ ಕಣ್ಣು ಹೊಡೆಯುತ್ತಿರುವಂತೆ ಭಾಸವಾಗುತ್ತಿತ್ತು. ಆ ಭಾವನೆಯಿಂದ ನಡೆವ ಅವಳ ಹೆಜ್ಜೆ ಭಾರವಾಗಿತ್ತು. ಮೊಗ ನೆಲದತ್ತಬಾಗಿತ್ತು.

ಅದೇ ಭಾವನೆಯ ಬಿಗಿತದಲ್ಲೇ ಒಳಬಂದು, ಆರಬಂದಿದ್ದ ಹಣತೆಗೆ ಅಷ್ಟು ಎಣ್ಣೆ ಹಾಕಿ, ಬತ್ತಿಯನ್ನು ಮೀಟಿ, ಅಡಿಗೆಯ ಮನೆಯ ಮಾಡದಲ್ಲಿದ್ದ ಆಂಜನೇಯನ ವಿಗ್ರಹಕ್ಕೆ ಎರಗಿ—

" ಸ್ವಾಮೀ, ನಮ್ಮಪ್ಪ, ಏನೂ ಕೆಡಕಾಗದಂತೆ ಕಾಪಾಡು ಸ್ವಾಮೀ "

—ಎಂದು ಕಕ್ಕುಲತೆಯಿಂದ ಪ್ರಾರ್ಥಿಸಿದಳು. ಅಂಥ ದೇವರು ಒಬ್ಬ ಇದ್ದರೆ ಖಂಡಿತ ಆತನ ಕಿವಿಗೆ ಅವಳ ಕರೆ ಬಿದ್ದಿರಬೇಕು. ಅಷ್ಟು ಆರ್ತತೆ, ಯಾತನೆಗಳ ಆಕ್ರಂದನವಿತ್ತು ಅವಳ ಮೃದುವಾದ ಪಿಸುದನಿಯ ಬೇಡಿಕೆಯಲ್ಲಿ.

೫೩

" ಇಂದೀಗ ಹೊಯ್ದಾಟ–ತುಯ್ದಾಟಗಳಿಗೆ ವೇಳೆಯಿಲ್ಲ ದೇಸಣ್ಣನವರೇ. ಎರಡರಲ್ಲಿ ಒಂದು ಮಾತು ಇತ್ಯರ್ಥವಾಗಬೇಕು. ತಮ್ಮ ಮಾತನ್ನು ಹೇಗಾದರೂ ದಕ್ಕಿಸಿಕೊಂಡು, ದಳವಾಯಿಗಳು ಗಂಡುಗಳಂತೆ ಬಾಳಬೇಕು. ಇಲ್ಲವೇ ಮುಖದ ಮೇಲೆ ಸೆರಗೆಳೆದುಕೊಂಡು ನಾವು ಹೊತ್ತ ಮೀಸೆ ಬರೀ ಅಲಂಕಾರದ ವಸ್ತು ಎಂದು ಒಪ್ಪಿಕೊಂಡು ಮೂಲೆಯಲ್ಲಿ ಕೂಡಬೇಕು. "

ಅತ್ತಿಂದಿತ್ತ ಶತಪಥ ತಿರುಗುತ್ತಾ ಬೋನಿಗೆ ಬಿದ್ದ ಪಶುವಿನಂತೆ ಅಲೆಯುತ್ತಿದ್ದ ದಳವಾಯಿ ಮುದ್ದಣ್ಣ, ತಟಕ್ಕನೆ ನಿಂತು, ಲೋಡಿಗೆ ಒರಗಿ ಕುಳಿತ ದಳವಾಯಿ ದೇಸಣ್ಣನತ್ತ ತೀಕ್ಷ್ಣವಾಗಿ ನೋಡಿ ಅಬ್ಬರಿಸಿ ಹೇಳಿದ.

" ನಾವು ಹಿಡಿದ ದಾಳ ಅಂದುಕೊಂಡ ಗರ ಉರುಳಿಸಲಿಲ್ಲ. ಯಾರಿಗೆ ಸಿಂಹಾಸನ ಬೇಕಾಗಬೇಕೋ ಅವರಿಗೆ ಬೇಡವಾದ ಮೇಲೆ ನಮಗೆ ತಾನೇ ಆ ಜಗಳ ಏಕೆ ಬೇಕು ಮುದ್ದಣ್ಣ. "

ತಲೆತಗ್ಗಿಸಿ ಕುಳಿತ ದೇಸಣ್ಣ ತಲೆ ತಗ್ಗಿಸಿಯೇ ಹೇಳಿದ.

" ಇದು ಬರೀ ಸಿಂಹಾಸನಾರೋಹಣದ ಪ್ರಶ್ನೆಯೇ ಅಲ್ಲ, ದೇಸಣ್ಣನವರೇ. ದಳವಾಯಿಗಳ ಮಾನಾಪಮಾನದ ಪ್ರಶ್ನೆ. ಮತ್ತೊಮ್ಮೆ ಸಂಚು ನಡಸಿ, ಅರಮನೆಯವರು, ಮಂತ್ರಿಗಳ ಗುಂಪಿನವರು ನಮ್ಮ ಮೋರೆಗೆ ಕಪ್ಪು ಬಳಿದಿದಾರೆ. ನಾನು ಕೇಳುವುದಿಷ್ಟೇ—ನೀವು ಮೌನವಾಗಿ ಕುಳಿತು ಈ ಅಸಮಾಧಾನವನ್ನು ಸಹಿಸುತ್ತೀರಾ, ಇಲ್ಲವೇ ಗಂಡಿನಂತೆ ಸಿಡಿದೆದ್ದು ಇದನ್ನು ಪ್ರತಿಭಟಿಸುತ್ತೀರಾ ? "

" ನಿಜ ಹೇಳಬೇಕೆಂದರೆ ಕತ್ತಲಿಲ್ಲದ ಕಡೆ ಕತ್ತಲಿದೆ ಎಂದುಕೊಂಡು ತಡಕಾಡುವಂತಿದೆ ನಿನ್ನ ಸ್ಥಿತಿ ಮುದ್ದಣ್ಣ. ದೊರೆಗಳು ಯಾರಾಗಬೇಕು ಎಂಬ ಚರ್ಚೆಯಲ್ಲಿ ನಮ್ಮನಿಮ್ಮ ಮಾನಾಪಮಾನದ ಪ್ರಶ್ನೆ ಎಲ್ಲಿ ಬಂತು ? "

" ಎಲ್ಲಿ ಬಂತೇ ? ನಿಮ್ಮ ಕಣ್ಣಿಗೆ ಮುಸುಗುತ್ತಿರುವ ಕುರುಡು, ಅರಿವಿಗೂ ಮುಸುಗುತ್ತಿದೆ ಎಂದು ನಾನು ತಿಳಿದಿರಲಿಲ್ಲ ದೇಸಣ್ಣನವರೇ ? "

—ನವಿರಾದ ಅಣಕ, ಕರುಣೆ, ತಿರಸ್ಕಾರಗಳು ಬೆರತ ಧ್ವನಿಯಲ್ಲಿ

ಕೇಳಿದ ಮುದ್ದಣ್ಣ, ಆ ಮಾತಿನ ಕಟಕಿಯ ಮುಳ್ಳುಸೋಕಿ, ದೇಸಣ್ಣನ ಮೈ ಬಿರುಸಾಯಿತು; ಧ್ವನಿಯೂ ಬಿಗಿದು ಗಡುಸಾಯಿತು.

"ನೀನಾಡುವ ಮಾತು ನನಗೆ ಅರ್ಥವಾಗುತ್ತಿಲ್ಲ ಮುದ್ದಣ್ಣ."

ಹರಿತವಾದ ಧ್ವನಿಯಲ್ಲಿ ಹೇಳಿದ ದೇಸಣ್ಣ. ಆ ಮಾತಿನಲ್ಲಿದ್ದ ಚುರುಕು ಮನವರಿಕೆಯಾಗಿ, ತಾನು ಅಂದುಕೊಂಡುದಕ್ಕಿಂತ ಕೊಂಚ ಮುಂದೆ ಹೋದೆನೇನೋ ಎಂದು ಸಾವರಿಸಿಕೊಂಡು ಹೇಳಿದ ಮುದ್ದಣ್ಣ.

"ತಾವು ನನ್ನ ಮಾತನ್ನು ಅನ್ಯಥಾ ಭಾವಿಸಬಾರದು. ನಿಮ್ಮ ಒಳ್ಳೆಯತನದಿಂದಾಗಿ ನಿಮಗೆ ಹೊರಗಿನವರು ಮಾಡುತ್ತಿರುವ ಕುತಂತ್ರ ಕಾಣುತ್ತಿಲ್ಲ. ಇಂದು ಎಲ್ಲರ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು, ಸ್ವಪ್ರತಿಷ್ಠೆಯನ್ನು ಮೆರೆಸುವ ಪ್ರಯತ್ನ ನಡೆದಿದೆ. ಅದನ್ನು ನೀವು ಕಾಣುತ್ತಿಲ್ಲವೆಂದೇ ನನ್ನ ವ್ಯಥೆ."

"ನಿಜ. ನಿಜವಾಗಿಯೂ ನನಗೆ ಸ್ವಪ್ರತಿಷ್ಠೆಯನ್ನು ಮೆರೆಸುವ ಸ್ವಾರ್ಥವಾಗಲಿ, ಕುತಂತ್ರವಾಗಲಿ ಎಲ್ಲೂ ಕಾಣುತ್ತಿಲ್ಲ. ಎಲ್ಲ ವ್ಯವಹಾರವೂ ನೇರವಾಗೆಯೇ ಇದೆ. ನಾಗತಿಯವರು ನಡೆದುಕೊಂಡ ದಾರಿಯಲ್ಲಿ ಎಳ್ಳಷ್ಟೂ ಲೋಪವಿಲ್ಲ. ನಿಜ ಹೇಳಬೇಕೆಂದರೆ, ಅಂದು ನೀನು ಸಭೆಯಲ್ಲಿ ನಡೆದುಕೊಂಡ ರೀತಿಯೂ ನನಗೆ ಒಪ್ಪಿಗೆಯಿಲ್ಲ."

"ಏಕೆ ?"

"ನಮಗೆ ಅರಮನೆಯವರ ಬಗ್ಗೆ ಭಿನ್ನಾಭಿಪ್ರಾಯವಿದ್ದುದು, ಮುಖ್ಯ ವಿಷಯಗಳಲ್ಲಿ ನಮ್ಮನ್ನು ಒಂದು ಮಾತು ಕೇಳುವುದಿಲ್ಲವಲ್ಲ ಎಂದು. ಆದರೆ ನಾಗತಿಯವರು ಆ ಕೊರಗನ್ನು ನಿವಾರಿಸಿದರು. ಆದರೆ ನೀನು ಮಾತ್ರ ಸನ್ನಿಧಾನದಲ್ಲಿ ಅವಿನಯದಿಂದ ನಡೆದುಕೊಂಡು, ಬೆಲೆ ಕೊಡುವುದಕ್ಕೆ ದಳವಾಯಿಗಳು ಯೋಗ್ಯರಲ್ಲ ಎಂದು ಜನ ಆಡಿಕೊಳ್ಳುವಂತೆ ಮಾಡಿದೆ."

ದೇಸಣ್ಣನಾಡಿದ ಮಾತು ಕೇಳಕೇಳುತ್ತಾ ಮುದ್ದಣ್ಣನ ಹೃದಯದಲ್ಲಿ ಕ್ರೋಧಾನಲ ಪ್ರಜ್ವಲಿಸಲಾರಂಭಿಸಿತ್ತು. ಆದರೆ ಅದನ್ನು ತನ್ನ ಮುಖಭಾವದಿಂದ ಕೊಂಚವೂ ತೋರಗೊಡದೆ, ಅರೆಗಣ್ಣಿನಿಂದ ದೇಸಣ್ಣನ ಮುಖವನ್ನೇ ನೋಡುತ್ತಿದ್ದು, ಆತನ ಮಾತು ಮುಗಿದ ಬಳಿಕ ಗಂಭೀರವಾದ ಸ್ವರದಲ್ಲಿ ಹೇಳಿದ.

" ನಿಜ ದೇಸಣ್ಣನವರೇ, ನನ್ನ ಖಂಡಿತವಾದಿ ಸ್ವಭಾವ ಬಹುಜನಕ್ಕೆ ಮೆಚ್ಚಿಗೆಯಾಗುವುದಿಲ್ಲ. ' ಖಂಡಿತವಾದಿ ಲೋಕವಿರೋಧಿ ' ಎಂಬ ಗಾದೆ ಸುಳ್ಳಲ್ಲ. ಆದರೆ ನೀವಾದರೂ ನನ್ನ ಸ್ಪಷ್ಟಮಾತಿನ ಹಿಂದಿನ ಸರಳ ಹೃದಯವನ್ನು ಅರಿತುಕೊಳ್ಳಬಹುದು ಎಂದಿದ್ದೆ. ಆದರೆ ನನ್ನ ದುರದೃಷ್ಟ. ಎಲ್ಲರ ಹಾಗೇ ನೀವೂ ಆಡುತ್ತಿದೀರ. ಈ ಸಂದರ್ಭದಲ್ಲಿ ನನಗೆ ನನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಬಯಕೆ ಇದ್ದಿದ್ದರೆ ನಾನೂ ಎಲ್ಲರ ಹಾಗೆಯೇ ರೇಶಿಮೆಯಂಥ ಮಾತಾಡುತ್ತಿದ್ದೆ. ಆದರೆ ಇದರಲ್ಲಿ ನನ್ನ ಸ್ವಾರ್ಥವೇನೂ ಸಾಧಿತವಾಗಬೇಕಿಲ್ಲ. ನನಗೆ ಬೇಕಿರುವುದಿಷ್ಟೆ: ನ್ಯಾಯಕ್ಕೆ, ಸತ್ಯಕ್ಕೆ ಜಯವಾಗಬೇಕು."

" ಈಗ ನ್ಯಾಯಕ್ಕೆ ಸತ್ಯಕ್ಕೆ ಅಪಚಾರ ನಡೆದಿದೆಯೇ ? "

" ನಡೆದಿದೆ."

—ಕಡ್ಡಿ ಮುರಿದು ತುಂಡುಮಾಡಿದಂತೆ ಹೇಳಿದ ಮುದ್ದಣ್ಣ.

" ಹೇಗೆ, ಎಲ್ಲಿ ? "

" ಲಿಂಗಣ್ಣನಾಯಕರು ರಾಜ್ಯತ್ಯಾಗಮಾಡಲು ಸಿದ್ಧರಾದುದು ಭುವನಪ್ಪನವರ ಸಲಹೆಯ ಮೇರೆಗೆ, ಎಂದು ನಾನು ಬಲ್ಲೆ."

" ಇರಬಹುದು. ಸಿಂಹಾಸನಕ್ಕಾಗಿ ಯಾದವೀ ಕಲಹವಾಗುವುದು ಬೇಡ. ಮದಕರಿನಾಯಕರ ಮನಸ್ಸಿನಲ್ಲಿ ಏನಿತ್ತೋ ಅದು ನಡೆಯಲಿ ಎಂದು ಸಲಹೆ ಕೊಟ್ಟಿರಬಹುದು. ಲಿಂಗಣ್ಣನಾಯಕರೇ ಅದು ಸರಿ ಎಂದು ಒಪ್ಪಿ ಈ ರಾಜ್ಯತ್ಯಾಗ ಮಾಡಿದ ಬಳಿಕ, ಅವರಲ್ಲಿ ಯಾರೇನು ಹೇಳುವುದು ಉಳಿದಿದೆ ? "

" ಏನೂ ಇಲ್ಲವೇ ? "

" ಏನಿದೆ ಹೇಳು."

" ಒಂದು ವೇಳೆ ಲಿಂಗಣ್ಣನಾಯಕರು ಇರದಿದ್ದರೆ, ಒಂದು ವೇಳೆ ಮೃತರಾಗಿದ್ದರೆ, ಈ ಸಿಂಹಾಸನ ಯಾರಿಗೆ ಹೋಗಬೇಕಾಗಿತ್ತು ದಳವಾಯಿಗಳೇ ? ಸರ್ಜೇನಾಯಕರಿಗಿದ್ದುದು ಒಬ್ಬನೇ ಮಗನಲ್ಲ. ಇನ್ನೊಬ್ಬ ಜೀವಂತನಾಗಿದಾನೆ. ಆತನೂ ಈ ರಾಜ್ಯ ನನಗೆ ಬೇಡವೆಂದು ಹೇಳಿಲ್ಲ. ಲಿಂಗಣ್ಣನಾಯಕ ಬೇಡವೆಂದರೆ, ಚಿಕ್ಕಣ್ಣನಾಯಕ ಪಟ್ಟಕ್ಕೆ ಬರಬೇಕಾ

ದುದು ನ್ಯಾಯವಲ್ಲವೇ? ಹೀಗಿರುವಾಗ ಲಿಂಗಣ್ಣನಾಯಕನನ್ನು ಒಲಿಸಿಕೊಂಡು, ಓಬಣ್ಣನಾಯಕನನ್ನು ಪಟ್ಟಕ್ಕೆ ತಂದರೆ ನ್ಯಾಯಕ್ಕೆ ಕೊಡಬೇಕಾದ ಮರ್ಯಾದೆ ಕೊಟ್ಟಂತಾಯಿತೇ? ಊಹೂ. ಇಲ್ಲೇ ನಿಮ್ಮ ಕಣ್ಣು ಕಾಣುವುದಿಲ್ಲ ಎಂದು ನಾನು ಹೇಳಿದ್ದು. ಓಬಣ್ಣನಾಯಕನನ್ನು ಪಟ್ಟಕ್ಕೆ ತಂದಿರುವುದು ಗತಿಸಿದ ನಾಯಕರ ಮಾತಿಗೆ ಮರ್ಯಾದೆ ಕೊಡಲಿಲ್ಲ; ರಾಜ್ಯದ ಮೇಲಿನ ತಮ್ಮ ವರ್ಚಸ್ಸನ್ನು ಬಲಗೊಳಿಸಿಕೊಳ್ಳುವುದಕ್ಕಾಗಿ."

"ದೇವತೆಯಂತಿರುವ ನಾಗತಿಯರಲ್ಲಿ ಈ ಬಗೆಯ ಆರೋಪ ಮಾಡುವುದು ಯಾರಿಗೂ ಶೋಭಿಸುವುದಿಲ್ಲ ಮುದ್ದಣ್ಣ."

—ಮುದ್ದಣ್ಣನ ಮಾತಿನಿಂದ ತನ್ನಲ್ಲಿ ಮೂಡಿದ ತೀವ್ರ ಅಸಮಾಧಾನವನ್ನು ಕೊಂಚವೂ ಹುದುಗಲೆತ್ನಿಸದೆ ಹೇಳಿದ ದೇಸಣ್ಣ.

"ಶಾಂತಂ ಪಾಪಂ ನಾಗತಿಯವರನ್ನು ಆಡುವ ನಾಲಗೆಯಲ್ಲಿ ಹುಳ ಸುರಿಯಬೇಕು. ಅವರು ದೇವತೆ ಎಂಬುದು ನಿಜ ದೇಸಣ್ಣನವರೇ· ದೇವತೆಗಳು ಸ್ವರ್ಗದಲ್ಲಿರಬೇಕೇ ಹೊರತು ನೆಲಕ್ಕೆ ಬಂದರೆ, ಇಲ್ಲಿಯವರು ಅವರ ದೇವತಾಗುಣವನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ನಾಗತಿಯವರಿಗೆ ಇದು ತಿಳಿಯದು. ಎಲ್ಲರಂತೆ ಅವರು ತಮ್ಮ ಒಳ್ಳೆತನದಿಂದ ಕುರುಡರಾಗಿದಾರೆ."

"ನಾಗತಿಯವರಿಗೆ ಸ್ವಾರ್ಥವಿಲ್ಲ, ರಾಜ್ಯವನ್ನೇ ಬಿಟ್ಟುಕೊಟ್ಟ ಲಿಂಗಣ್ಣನಾಯಕರಲ್ಲಿ ದೋಷವಿಲ್ಲ. ಹಾಗಾದರೆ ಇನ್ನಾರ ಸ್ವಾರ್ಥ ಕಂಡಿತು ನಿನಗೆ?"

"ಹಿಂದೆಯೇ ಒಮ್ಮೆ ಹೇಳಿದ್ದೆ. ಈಗಲೂ ಹೇಳುತ್ತೇನೆ—ಮಂತ್ರಿ ಭುವನಪ್ಪನವರದು."

"ಈಗ ಓಬಣ್ಣನಾಯಕರು ಪಟ್ಟಕ್ಕೆ ಬಂದರೆ ಅವನಿಗಾಗುವ ಲಾಭವೇನು, ಚಿಕ್ಕಣ್ಣನಾಯಕರು ಬಂದಿದ್ದರೆ ಆಗುತ್ತಿದ್ದ ನಷ್ಟವೇನು?"

"ನಷ್ಟವಿಲ್ಲವೇ, ಅವನಿಂದಾಗಿ ರಾಜ್ಯ ಪಡೆದ ಓಬಣ್ಣನಾಯಕರು ಅವರ ಕೈಗೊಂಬೆಯಾಗಿರುತ್ತಾರೆ. ಚಿಕ್ಕಣ್ಣನಾಯಕನಾದರೆ, ಅವರ ಹತ್ತಿರ ಇವರ ಬೇಳೆ ಬೇಯುವುದಿಲ್ಲ. ಚಿಕ್ಕಣ್ಣನಾಯಕರು ಅಣ್ಣನಂತೆ

ಭೋಳೇಸ್ವಭಾವದವರಲ್ಲ. ಅವರಿಗೆ ಯಾರ ಯಾರ ಬೆಲೆ ಎಷ್ಟು ಎನ್ನು ವುದು ಗೊತ್ತಿದೆ. ಅದಕ್ಕಾಗಿಯೇ ಈ ಸಭೆ ಕರೆಯುವ ನಾಟಕವಾಡಿ, ಹತ್ತು ಜನದ ಕಣ್ಣಿಗೆ ಬೂದಿ ತೂರಿ, ಚಿಕ್ಕಣ್ಣನಾಯಕರು ಪಟ್ಟಕ್ಕೆ ಬರುವುದನ್ನು ತಪ್ಪಿಸಿದ್ದು."

"ನಿನ್ನ ಮಾತು ನನಗಷ್ಟು ನಂಬಿಕೆಯಾಗುತ್ತಿಲ್ಲ ಮುದ್ದಣ್ಣ, ಒಂದು ವೇಳೆ ಅದು ನಿಜವೆಂದುಕೊಂಡರೂ ಈಗ ನಾವು ಮಾಡುವುದೇನು ಉಳಿದಿದೆ?"

"ಬೇಕಾದಷ್ಟು ಉಳಿದಿದೆ. ಈಗಲೂ ನಾವು ಬಲವಾಗಿ ನಿಂತರೆ, ನ್ಯಾಯಕ್ಕೆ ಗೆಲುವಾಗುವಂತೆ ಮಾಡಬಹುದು."

"ಹೇಗೆ?"

"ಲಿಂಗಣ್ಣನಾಯಕರು ಪಟ್ಟ ಬೇಡವೆಂದರೆ, ಅದು ಚಿಕ್ಕಣ್ಣ ನಾಯಕರದಾಗಬೇಕು ಎಂದು ನಾವೆಲ್ಲರೂ ಒಟ್ಟಾಗಿ ಹೇಳಬೇಕು. ಸರ್ಜೇನಾಯಕರ ಮಕ್ಕಳಿಗೆ ಅನ್ಯಾಯವಾಗದಂತೆ ಶತಾಯ-ಗತಾಯ ಶ್ರಮಿಸಬೇಕು."

"ಅಂದರೆ ಅದು ಸಭೆಯಲ್ಲಾದ ತೀರ್ಮಾನದ ವಿರುದ್ಧ ನಾವು ಕೆಲಸಮಾಡಬೇಕು, ಅಲ್ಲವೇ?"

"ಅಗತ್ಯವಾದರೆ—ಅಹುದು."

"ನಾಗತಿಯುವರೂ ಉಳಿದವರೂ ಇದಕ್ಕೆ ಒಪ್ಪಿದರೆ ಸರಿ. ಒಪ್ಪ ದಿದ್ದರೆ........?"

"ಒಪ್ಪಿಸಬೇಕು."

"ಮಾತಿನಿಂದಲಾದರೂ ಸರಿ—ಹೇಗಾದರೂ ಸರಿ—ಅಲ್ಲವೇ?"

—ಮುದ್ದಣ್ಣನ ಹೃದಯದಾಳವನ್ನು ಹೊಕ್ಕು ನೋಡುವಷ್ಟು ಮೊನೆ ಯಾಗಿ ಪ್ರಶ್ನೆಯನ್ನು ಹಾಕಿದ ದೇಸಣ್ಣ.

"ನನಗಾವುದೂ ತಿಳಿಯುತ್ತಿಲ್ಲ ದೇಸಣ್ಣನವರೇ, ನನಗೆ ಬೇಕಾದು ದಿಷ್ಟೇ—ನ್ಯಾಯಕ್ಕೆ ಗೆಲುವಾಗಬೇಕು."

"ಆ ಮಾತನ್ನು ಮತ್ತೆ ಮತ್ತೆ ಹೇಳುತ್ತಿದ್ದೀಯ ಮುದ್ದಣ್ಣ-ನಿನ್ನೊ ಬ್ಬನ ಕಣ್ಣಿಗೇ ನ್ಯಾಯ ಕಾಣುವಂತೆ ನಮ್ಮ ಕಣ್ಣಿಗೆ ನ್ಯಾಯವೆಂದು ಕಂಡುದೇ ನ್ಯಾಯವಾಗಿರಬೇಕಾದ ಅಗತ್ಯವಿಲ್ಲ. ಅದು ಹೇಗಾದರೂ

ಅರಮನೆಯ ವ್ಯವಹಾರದಲ್ಲಿ ನಾವು ಇಷ್ಟು ದೂರ ಪ್ರವೇಶಿಸಬೇಕಾದುದು ಉಚಿತವಲ್ಲ. ನ್ಯಾಯ, ನ್ಯಾಯ ಎನ್ನುತ್ತೀಯ. ನ್ಯಾಯವೇ ನಿನಗೆ ಬೇಕಾದ ಪಕ್ಷದಲ್ಲಿ, ಆ ದಿನ ಸಭೆಯಲ್ಲೇ ಇಂದು ನನ್ನ ಮುಂದೆ ಹೇಳಿದ ಮಾತನ್ನು ಹೇಳಬೇಕಾಗಿತ್ತು. ಅಂದು ಯಾರ ಮಾತಿಗೂ ಅಡ್ಡಿ ಇರಲಿಲ್ಲ. ಹಾಗೆ ಮಾಡದೆ ಅಂದು ಸುಮ್ಮನಿದ್ದು, ಇಂದು ಎಲ್ಲವೂ ಇತ್ಯರ್ಥವಾಯಿತು ಎನ್ನುವ ಗಳಿಗೆಯಲ್ಲಿ ಹೊಸ ಸಮಸ್ಯೆಯೊಂದನ್ನು ತಂದು ಒಡ್ಡುವುದು, ನಿನ್ನ ದೃಷ್ಟಿಯಲ್ಲಿ ನ್ಯಾಯದ ಸಮರ್ಥನೆಯಾಗಿ ಕಾಣ ಬಹುದೋ ಏನೋ. ಆದರೆ ದುರ್ಗದ ಹಿತದೃಷ್ಟಿಯಿಂದ ಒಳಿತಲ್ಲ. ಭುವನಪ್ಪನವರು ಇದಿರು ಜನ ಎಂದು ಹೇಳುತ್ತೀಯ. ಅದು ಇರಬಹುದು; ಇಲ್ಲದಿರಬಹುದು. ಒಂದು ವೇಳೆ ಹಾಗೆ ಇದಿರು ಜನವೆಂಬುದಿದ್ದರೆ, ನೀನು ನಿನ್ನ ಪಕ್ಷವನ್ನು ಗೆಲ್ಲಿಸಲು ಹಟಹಿಡಿದರೆ, ಅವರೂ ಅವರ ಪಕ್ಷವನ್ನು ಗೆಲ್ಲಿಸಲು ಹಟ ತೊಡುತ್ತಾರೆ. ಇಂಥ ಹಟದ ಫಲವೇನಾಗುವುದೆಂಬು ದನ್ನು ನಾನು ಬಲ್ಲೆ. "

" ಏನಾಗುತ್ತದೆ ? "

" ಮಾತಿನಲ್ಲಿ ಮುಗಿಯಬಹುದು—ರಕ್ತಪಾತದಲ್ಲಿ ಕೊನೆಗಾಣ ಬಹುದು. ಎರಡನೆಯ ಪರಿಣಾಮದ ಸಂಭವವೇ ಹೆಚ್ಚು. ನನಗೆ ತೋರುವುದಿಷ್ಟೇ ಮುದ್ದಣ್ಣ........ಒಂದು ವೇಳೆ ಅನ್ಯಾಯವಾಗುತ್ತಿದ್ದರೆ, ಹಾಗೆ ಮಾಡಿದವರನ್ನು ಶಿಕ್ಷಿಸುವ ಭಾರವನ್ನು ದೇವರಿಗೆ ಬಿಟ್ಟು ವಿನಾ ಕಾರಣ ರಕ್ತಪಾತವಾಗದಂತೆ ನಡೆಯುವುದು ಒಳ್ಳೆಯ ದಾರಿ. "

" ರಕ್ತಪಾತದ ಭೀತಿಗೆ ಸತ್ಯವನ್ನು ಬಲಿಗೊಡುತ್ತೀರಾ. "

" ಸತ್ಯದ ಮಾರ್ಗ ಬಹು ವಿಚಿತ್ರ ಮುದ್ದಣ್ಣ. ನನಗೆ ಕಂಡುದು ನನಗೆ ಸತ್ಯ, ನಿನಗೆ ಕಂಡುದು ನಿನಗೆ ಸತ್ಯ. ಈ ಎರಡರಲ್ಲಿ ಯಾವುದು ಸರಿ. ಈ ಎರಡು ಸತ್ಯಗಳ ತಿಕ್ಕಾಟದಲ್ಲಿ ಸತ್ಯ ಉದ್ಧಾರವಾಗುವುದಿಲ್ಲ. ಅದರ ಹೆಸರಿನಲ್ಲಿ ಜನರ, ಅದರಲ್ಲೂ ಹೆಚ್ಚಾಗಿ ನಿರಪರಾಧಿಗಳ ರಕ್ತಪಾತ ವಾಗುತ್ತದೆ. ಅಂಥ ರಕ್ತಪಾತಕ್ಕೆ ನಾನು ಬೆದರುತ್ತೇನೆ. ನಿರಪರಾಧಿಗಳ ರಕ್ತ, ಕಣ್ಣೀರು ಏಳೇಳು ಜನ್ಮಕ್ಕೂ ಬೆನ್ನಟ್ಟಿ ಬರುವ ಭಯಂಕರ ಪಾಪ, ಮುದ್ದಣ್ಣ. "

" ರಕ್ತಪಾತವೆಂದರೆ, ಯುದ್ಧದಲ್ಲೇ ಮೈಸವೆಸಿದ ದಳವಾಯಿಗಳಿಗೂ ದಿಗಿಲೇ ? "

—ನವಿರಾದ ವ್ಯಂಗ್ಯದ ಧ್ವನಿಯಲ್ಲಿ ಕೇಳಿದ ಮುದ್ದಣ್ಣ.

" ನಿಜ. ನನಗೆ ದಿಗಿಲು. ದಳವಾಯಿಯಾದುದರಿಂದಲೇ, ರಕ್ತ ವೃಷ್ಟಿಕರೆವ ರಣದಲ್ಲಿ ಮೈಸೆವೆದುದರಿಂದಲೇ ನನಗಿಷ್ಟು ದಿಗಿಲು. ರಕ್ತದ ಬೆಲೆ ಏನೆಂಬುದು ಬೇರೆಯವರಿಗೆ ತಿಳಿಯುವುದು ಅಸಾಧ್ಯ ಮುದ್ದಣ್ಣ. ಆದರೆ ನನಗೆ, ನಿನಗೆ ಗೊತ್ತು. ರಕ್ತದಲ್ಲಿ ಬಿತ್ತಿದ ಬೆಳೆ ಯನ್ನು ಕಂಬನಿಯ ಕಾಲುವೆ ಹರಿಸಿ ಬೆಳಿಸಬೇಕಾಗುವುದು ಎಂಬುದು ಬೇರೆಯವರಿಗೆ ಕಾಣದಿರಬಹುದು. ಆದರೆ ಅದು ನನಗೆ—ನಿನಗೆ ಅಂಗೈಯ ನೆಲ್ಲಿಯ ಕಾಯಿಯಷ್ಟು ಸ್ಪಷ್ಟವಾಗಿ ತಿಳಿದಿದೆ. ಒಂದೊಂದು ಬಾರಿ ಶತ್ರು ವಿನ ಸಾಲುಗೊಲೆಮಾಡಿ ಗೆದ್ದೆವು ಎಂದುಕೊಂಡು ಬಂದಾಗಲೂ, ಆ ಗೆಲವು ಮುಂದಿನ ಯುದ್ಧಕ್ಕೆ ತಾಯಿಯಾದುದು ಈ ಅಲ್ಪಬಾಳಿನಲ್ಲೇ ನಾಲ್ಕಾರು ಬಾರಿ ಕಂಡಿದೆ. ಊಹೂ—ಯುದ್ಧದಿಂದ, ಕತ್ತಿಯಿಂದ ತೀರ್ಮಾನವಾದ ಮಾತು, ಎಂದೂ ಶಾಶ್ವತವಾಗುವುದಿಲ್ಲ. ನೀನಿನ್ನೂ ಯುವಕ. ಅಷ್ಟು ರಕ್ತವನ್ನು ಸುರಿಸಿಯೂ ಇಲ್ಲ, ಸುರಿದುದನ್ನು ಕಂಡೂ ಇಲ್ಲ. ಅದಕ್ಕೇ ರಕ್ತಸುರಿಸುವುದು ಬಹಳ ಅಗ್ಗವಾದ ಮಾತು ಎಂಬಂತೆ ಆಡುತ್ತಿದೀಯ. ಆದರೆ ನಾನು ಹೇಳುತ್ತೇನೆ ಕೇಳು. ಇಷ್ಟು ರಕ್ತದ ಆತುರ ಬೇಡ. ಕಂಡವರ ರಕ್ತಕ್ಕೆ ಆತುರ ಪಡುವುದು ಬಲು ಸುಲಭ ಮುದ್ದಣ್ಣ. ಆದರೆ ಇಂದು ಪರರ ಮೈಯಿಂದ ಸುರಿದ ನೆತ್ತರು, ನಾಳೆ ನಮ್ಮ ಮೈಯಿಂದ ಸುರಿವ ನೆತ್ತರಿಗೆ ಮುನ್ನುಡಿ. ಆದುದರಿಂದ ಇಷ್ಟು ಹಟ ಬೇಡ. ನಮ್ಮ ಮನಸ್ಸಿನಲ್ಲಿದ್ದುದನ್ನು ನಿರ್ವಂಚನೆಯಾಗಿ ಹೇಳಿ ಯಾಯಿತು. ಮುಂದಿನದು ಶಿವನ ಚಿತ್ತ. ಆತನ ಮನಸ್ಸಿಗೆ ಬರದೆ ಯಾರು ಯಾರ ತಲೆಯ ಮೇಲಿಟ್ಟ ಕಿರೀಟವೂ ಉಳಿಯುವುದಿಲ್ಲ. ನನಗೆ ನಿನಗೆ ಕಾಣದ ಸತ್ಯವನ್ನು ಆತ ಕಾಣಬಲ್ಲ. ಆತನ ಮೇಲೆ ಭಾರ ಹಾಕಿ ಸುಮ್ಮನಿರು. "

—ತನ್ನೊಳಗಿದ್ದ ಯಾವುದೋ ಶಕ್ತಿ ನುಡಿಸಿದವನಂತೆ ಹೇಳಿದ ದೇಸಣ್ಣ. ಮುದ್ದಣ್ಣ ಆತನ ಮಾತಿಗೆ ಅಡ್ಡಿ ಬರದೆ ಸುಮ್ಮನೆ ಕುಳಿತು ಕೇಳುತ್ತಿದ್ದು, ಆತನ ಮಾತು ಮುಗಿದ ಬಳಿಕ ಹೇಳಿದ.

“ ಅಂತೂ ದೊಡ್ಡ ದಳವಾಯಿಗಳು ಬರಬರುತ್ತ ವೇದಾಂತಿಗಳಾಗುತ್ತಿರುವಂತಿದೆ ಸರಿಯೆ. ಶಿವನ ಇಚ್ಛೆಗೆ ಯಾರು ಇದಿರು. ಅಂತೂ ನಮಗೆ ನಾಲ್ಕು ಬುದ್ಧಿವಾದದ ಮಾತು ಹೇಳಿ ಉಪಕಾರಮಾಡಿದಿರಿ. ಸಭೆಗೆ ಹೋಗಿ ರೀತಿ ರಿವಾಜು ಕಲಿತಂತಾಯಿತು ; ದಳವಾಯಿಗಳ ಹತ್ತಿರ ವೇದಾಂತ ಕಲಿತಂತಾಯಿತು. ಒಟ್ಟಿನ ಮೇಲೆ ನಾನಿನ್ನೂ ಕಲಿಯುವುದು ಬಹಳ ಇದೆ ಎಂದು ತಿಳಿದಂತಾಯಿತು. ಸರಿಯೆ. ಏನೋ ಮನಸ್ಸಿನಲ್ಲಿದ್ದುದನ್ನು ಒಳಗೇ ಇಟ್ಟುಕೊಳ್ಳುವ ವಿದ್ಯೆ ನನಗೆ ಬರದ ವಿದ್ಯೆ. ಅದಕ್ಕೆ ಇದ್ದ ವಿಚಾರವನ್ನು ಹೇಳಿದೆ. ದೊಡ್ಡ ದಳವಾಯಿಗಳು, ಈಗ ನಡೆಯುತ್ತಿರುವುದೇ ಸರಿ. ಹೀಗೇ ಆಗಬೇಕು ಎಂದರೆ, ಹಾಗೇ ಆಗಲಿ. ಅದರಲ್ಲಿ ನನಗೆ ನಷ್ಟವೂ ಇಲ್ಲ, ಲಾಭವೂ ಇಲ್ಲ. ಹತ್ತುಜನ ಹಿರಿಯರ ನಡುವೆ, ನಾವು ಕಿರಿಯರು, ಅವರು ಸರಿ ಎಂದ ದಾರಿಯಲ್ಲಿ ನಡೆದರಾಯಿತು. ರಾಜ್ಯ ಯಾರದೋ ಅವರದಾಗಲಿ, ಈ ಕತ್ತಿ ಯಾರ ಊಳಿಗಮಾಡಬೇಕೊ, ಅವರ ಊಳಿಗ ಮಾಡಲಿ.”

ಮುದ್ದಣ್ಣ ಇಷ್ಟು ಸುಲಭವಾಗಿ ತನ್ನ ಮಾತಿಗೆ ಒಪ್ಪುತ್ತಾನೆ ಎಂದು ದೇಸಣ್ಣ ನಂಬಿರಲಿಲ್ಲ; ಎಂತಲೇ ಅತಿ ಸರಳವಾಗಿ ಕಾಣುವ ಈ ಮಾತುಗಳ ಗರ್ಭದಲ್ಲಿ ಬೇರಾವುದೋ ಬ್ರಹ್ಮಾಂಡ ಅಡಗಿದೆ ಎನಿಸಿತು. ಆದರೆ ಅದನ್ನು ತಿಳಿದುಕೊಳ್ಳಲು ದಾರಿ ಇರಲಿಲ್ಲ. ಹೆಚ್ಚು ಕೇಳುವುದರಿಂದ ಉಪಯೋಗವಿಲ್ಲವೆನ್ನುವುದನ್ನರಿತು ದೇಸಣ್ಣ—

“ ನನ್ನ ಮಾತು ನಿನಗೂ ಸರಿ ಎಂದು ತೋರಿದರೆ ಸರಿ; ಹಾಲಿಗೆ ಸಕ್ಕರೆ ಬೆರತಂತಾಯಿತು. ನಾನಿನ್ನು ಬರಲೆ ? ”

—ಎಂದು ಮಾತು ಮುಗಿಸಿ ಹೊರಡಲನುವಾದ.

“ ಸರಿ. ಹೋಗಿ ಬನ್ನಿ”

—ಎಂದ ಮುದ್ದಣ್ಣ. ದೇಸಣ್ಣ ಮಗ್ಗುಲಲ್ಲಿಟ್ಟಿದ್ದ ಪಾಗನ್ನು ತೆಗೆದು ತಲೆಗೆ ಧರಿಸಿಕೊಂಡು, ಮುದ್ದಣ್ಣನಿಗೆ ನಮಸ್ಕಾರ ಮಾಡಿ ಹೊರಟ.

ಆತ ಇಲ್ಲಿಯ ಸದ್ದು ಕೇಳದಷ್ಟು ದೂರ ಹೋಗುವವರೆಗೂ ಸುಮ್ಮನೆ, ದಿಂಬಿಗೆ ಒರಗಿ ಕುಳಿತಿದ್ದ ಮುದ್ದಣ್ಣ, ಆ ಬಳಿಕ “ ಇನ್ನು ಹೊರಗೆ ಬರಬಹುದು ರಾಯಣ್ಣ” ಎಂದ.

ಆ ಮಾತು ಕೇಳಿದ ಕೂಡಲೇ, ಹಜಾರದ ನಡುವೆ ಇಳಿಬಿಟ್ಟ ದಪ್ಪ ತೆರೆಯ ಮರೆಯಲ್ಲಿ ಕುಳಿತು ಇವರಿಬ್ಬರ ಮಾತನ್ನು ಕೇಳಿಸಿಕೊಳ್ಳುತ್ತಿದ್ದ ರಾಯಣ್ಣ ಹೊರಬಂದ.

" ದೊಡ್ಡ ದಳವಾಯಿಗಳ ಮಾತನ್ನು ಕೇಳಿದೆಯಾ ರಾಯಣ್ಣ ? "

" ಕೇಳಿದೆ."

" ಹಾಗಾದರೆ ಇನ್ನು ನಮಗೆ ಬಾಕಿ ಉಳಿದಿರುವುದು ಸನ್ಯಾಸ ಸ್ವೀಕಾರಕ್ಕೆ ಸಿದ್ಧತೆ ಮಾಡಿಕೊಳ್ಳುವುದೊಂದೇ ಅಲ್ಲವೆ ? "

—ಪಕ್ಕಕ್ಕೆ ಬಂದು ಕುಳಿತು ತಮ್ಮನತ್ತ ಅರ್ಥಗರ್ಭಿತನೋಟ ದಿಂದ ನೋಡುತ್ತಾ ವಿಷಮಿಶ್ರಿತವಾದ ನಗು ನಕ್ಕು ಕೇಳಿದ ಮುದ್ದಣ್ಣ.

" ಹೂ, ದೊಡ್ಡ ದಳವಾಯಿಗಳ ಮಾತು ಕೇಳಿದರೆ ಹಾಗೆ ತೋರು ತ್ತದೆ. ಏಕೊ ಅವರಿಗೆ ವೇದಾಂತದ ಹುಚ್ಚು ಹಿಡಿದ ಹಾಗಿದೆ.

" ಹೌದು, ಹೌದು, ಅವರು ಈ ಲೋಕದಿಂದ ತೆರಳುವ ದಿನ ದೂರ ವಿಲ್ಲವೆಂದೇ ನನಗೂ ತೋರುತ್ತದೆ."

ಎಂದವನೇ ಮುದ್ದಣ್ಣ, ಕೆಣಕಿದ ಸರ್ಪದಂತೆ ಸೆಟೆದು ಕುಳಿತು ನೋಟದಲ್ಲಿ ನಂಜು ಉರಿಯನ್ನು ಕಾರುತ್ತಾ ಗುಡುಗಿದ—

" ರಾಯಣ್ಣ, ಇಂದಿನಿಂದ ದೊಡ್ಡ ದಳವಾಯಿಗಳ ಮೇಲೂ ಒಂದು ಕಣ್ಣಿರಲಿ. ನನ್ನ ದಾರಿಯಲ್ಲಿ ಅಡ್ಡ ಬಂದವರು ಯಾರೂ ಉಳಿಯ ಕೂಡದು. ಅರ್ಥವಾಯಿತೇ ? "

" ಅರ್ಥವಾಯಿತು."

" ನನಗೆ ಕತ್ತಿಯ ಆತುರ....ರಕ್ತದ ಹುಚ್ಚು....ನಿಜ ರಾಯಣ್ಣಾ, ದೊಡ್ಡ ದಳವಾಯಿಗಳ ಮಾತು ನಿಜ. ಇಂದು ನನಗೆ ದೊಡ್ಡ ದಳವಾಯಿ ಗಳ ರಕ್ತದ ಹುಚ್ಚೂ ಹಿಡಿದಿದೆ. ತನ್ನ ದಾರಿಗೆ ಅಡ್ಡವಾದವರ ಎದೆಯ ರಕ್ತ ಬಸಿಯದ ಹೊರತು ಈ ಹುಚ್ಚು ತೀರುವುದಿಲ್ಲ. ಹೋಗು—ದೊಡ್ಡ ದಳವಾಯಿಗಳ ಹಿಂದೆಯೂ ಒಬ್ಬ ಬೇಹುಗಾರನಿರಬೇಕೆಂಬ ನಮ್ಮ ಕಟ್ಟಪ್ಪಣೆಯನ್ನು ತಿಳಿಸು ನಮ್ಮ ದಳದವರಿಗೆ. ಇಂದಿನಿಂದ ಬೇಹು ಬಲ ವಾಗಬೇಕು ರಾಯಣ್ಣ. ಇಂದು ದಳವಾಯಿಗಳು ಬಿಚ್ಚು ಮಾತಾಡಿ ನಮಗೇ ಮಹೋಪಕಾರ ಮಾಡಿದಾರೆ. ನಮ್ಮ ಶತ್ರುಗಳು ಅರಮನೆಯಲ್ಲಿ

ಮಾತ್ರವೇ ಅಲ್ಲ ಇರುವುದು, ನಮ್ಮ ಪಾಳಯದಲ್ಲೂ ಅದು ಸುಳಿಯುತ್ತಿರ ಬಹುದು ಎಂದು ತೋರಿಕೊಟ್ಟಿದಾರೆ. ಈ ಉಪಕಾರಕ್ಕೆ ತಕ್ಕ ಕೃತಜ್ಞತೆ ಎಂದರೆ...."

"ಅಡ್ಡವಾದರೆ ಮೊದಲು ಅವರ ತಲೆ ಉರುಳಿಸುವುದು"

—ಎಂದು ಮುದ್ದಣ್ಣನ ಹೃದಯದಲ್ಲಿದ್ದ ಭಾವನೆಯೇ ಮಾರ್ನುಡಿ ದಂತೆ ಹೇಳಿದ ರಾಯಣ್ಣ. ತಮ್ಮನ ಮಾತು ಕೇಳಿ ಮುದ್ದಣ್ಣ 'ಶಾಭಾಸ್' ಎಂದು ಗಹಗಹಿಸಿ ನಕ್ಕ.

ಆ ನಗುವಿನ ಉಗ್ರತೆಗೆ, ಛಾವಣಿಯನ್ನು ಹೊತ್ತ ತೇಗದ ಜಂತೆ ಗಳೂ ನಡುಗಿದುವು.

೬

ಮಧ್ಯಾಹ್ನದ ಊಟದ ಬಳಿಕ ನಿದ್ರೆಯನ್ನು ಮುಗಿಸಿ ಆಗತಾನೇ ಎದ್ದ ಭುವನಪ್ಪನವರು, ತೊಡೆಯ ಮೇಲೆ ಕುಳಿತ ಮೊಮ್ಮಗನೊಂದಿಗೆ ಸರ ಸವಾಡುತ್ತಾ ಮೆತ್ತೆ ಹಾಸಿದ ಉಯ್ಯಾಲೆಯಲ್ಲಿ ತೂಗಿಕೊಳ್ಳುತ್ತಿರುವಾಗ ಆಳು ಬಂದು "ದೊಡ್ಡದಳವಾಯಿ ದೇಸಣ್ಣನವರು ಕಾಣಲು ಬಂದಿದಾರೆ" ಎಂದು ಹೇಳಿದ.

"ಇಲ್ಲೇ ಬರಲಿ. ಒಳಗೆ ಕರೆದುಕೊಂಡು ಬಾ"

—ಎಂದು ಆಳಿಗೆ ಅಪ್ಪಣೆ ಮಾಡಿದರು. ದೊಡ್ಡ ದಳವಾಯಿಗಳು ಬಂದಿದಾರೆ ಎಂದು ಕೇಳುತ್ತಲೇ, ಅವರಿಗೆ ತೊಡೆಯ ಮೇಲೆ ಕುಳಿತ ಮೊಮ್ಮಗ, ತೂಗುತ್ತಿರುವ ಉಯ್ಯಾಲೆ ಎಲ್ಲವೂ ಮರೆತು ಹೋಗಿ, ಸಂಸಾರ ಸ್ವರ್ಗದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಅವರ ಮನಸ್ಸು ಮತ್ತೆ ರಾಜ ಕಾರಣದ ಮರಳುಗಾಡಿಗೆ ಇಳಿಯಿತು. ಹಾಗೇ ಅವರ ಹೃದಯ, 'ಸ್ವಾಮೀ ಭೂತನಾಥೇಶ್ವರಾ, ಎಂದು ಈ ಬಂಧನದಿಂದ ಬಿಡುಗಡೆ ಮಾಡಿ, ನಿನ್ನ ಸೇವೆಗೆ ಕರೆದುಕೊಳ್ಳುತ್ತೀಯಾ?' ಎಂದು ಬೇಡಿತು. ಅವರ ಮನಸು ಇನ್ನೂ ಆ ಭಾವನೆ ನಿರ್ಮಿಸಿದ ಲೋಕದಲ್ಲಿರುವಾಗಲೇ ದೇಸಣ್ಣ ಒಳಗೆ ಬಂದು ವಂದಿಸಿದ.

"ಕುಳಿತುಕೊಳ್ಳಿ ದೇಸಣ್ಣನವರೇ. ಬಿಸಿಲಿನಲ್ಲೇ ತುಂಬಾ ದೂರ ಬಂದಿರಿ. ಮನೆಯಲ್ಲಿ ಎಲ್ಲರೂ ಕುಶಲವೇ?"

" ಶಿವನ ದಯೆ. ಎಲ್ಲವೂ ಕ್ಷೇಮ."

" ಆ ಮಾತು ಕೇಳಿ ತುಂಬಾ ಸಂತೋಷವಾಯಿತು. ಅಪ್ಪಣೆಯಾಗಲಿ. ನನ್ನಿಂದ ಏನಾಗಬೇಕಿತ್ತು ? "

" ಬಹು ದಿನಗಳಿಂದಲೂ ತಮ್ಮನ್ನೊಂದು ಮಾತು ಕೇಳಬೇಕೆಂಬ ಬಯಕೆ ಇತ್ತು. ಈ ದಿನ ಏಕೋ ಆ ಬಯಕೆ ತುಂಬಾ ಬಲವಾಯಿತು. ತೊಂದರೆಯಾಗದಿದ್ದರೆ ಕೇಳಿಯೇ ಬಿಡೋಣವೆಂದು ಬಂದೆ."

" ಬಹಳ ಒಳ್ಳೆಯದು ಮಾಡಿದಿರಿ. ಏನು ಮಾತು ಹೇಳಿ? ನನಗೆ ಸಂಬಂಧಿಸಿದ್ದೋ ಅಥವಾ ಅಧಿಕಾರಕ್ಕೆ ಸಂಬಂಧಿಸಿದ್ದೋ ? "

" ಎರಡಕ್ಕೂ ಸೇರಿದ ಮಾತು."

" ಸರಿ. ಹಾಗಾದರೆ ಕೊಂಚ ತಡೆಯಿರಿ. ಈ ಮಗುವನ್ನು ಒಳಗೆ ಬಿಟ್ಟು ಬರುತ್ತೇನೆ. ಮುಂದೆ ಇವನ ಹಣೆಯಲ್ಲಿ ಏನು ಬರೆದಿದೆಯೋ. ಈಗಿನಿಂದಲೇ ಈ ರಾಜಕಾರಣವೆಲ್ಲಾ ಏಕೆ ಅವನ ಕಿವಿಯ ಮೇಲೆ ಬೀಳಬೇಕು."

—ಎಂದು ಭುವನಪ್ಪನವರು ತೊಡೆಯ ಮೇಲಿದ್ದ ಮೊಮ್ಮಗನನ್ನು ಎತ್ತಿಕೊಂಡು ಒಳಗೆ ಹೋದರು. ದೇಸಣ್ಣ ಅವರು ಹಿಂದಿರುಗುವುದನ್ನೇ ಕಾಯುತ್ತಾ ಕುಳಿತ. ಕೆಲಸವಿಲ್ಲದೆ ಕುಳಿತ ಅವನ ಕಣ್ಣು, ಕುಳಿತ ಸ್ಥಳದಲ್ಲೆಲ್ಲಾ ಓಡಿಯಾಡಿ ನೋಡಿತು.

ಭುವನಪ್ಪನವರು ದುರ್ಗದ ಸಂಸ್ಥಾನದ ಪ್ರಧಾನ ಸಚಿವರು. ಆ ಪಟ್ಟ ಅವರಿಗೆ ವಂಶ ಪಾರಂಪರ್ಯವಾಗಿ ಬಂದಿತು. ಅವರು ಮಾಡುತ್ತಿದ್ದ ದಾನಧರ್ಮಗಳ ವಿಜೃಂಭಣೆಯನ್ನು ಕಂಡ ಜನ, ಅವರ ಮನೆಯಲ್ಲಿ ವಜ್ರವೈಢೂರ್ಯಗಳು ಕಾಲ ಕಸವಾಗಿವೆ, ಎಂದು ಆಡಿಕೊಳ್ಳುತ್ತಿದ್ದರು. ಹಾಗೆ ಆಡಿಕೊಳ್ಳುವ ಜನ ಈ ಮನೆಗೆ ಬಂದು ನೋಡಿದರೆ ಖಂಡಿತ ನಂಬುತ್ತಿರಲಿಲ್ಲ. ಪ್ರಧಾನರ ಮನೆ ಎಂದು ಯಾರೋ ದೊಡ್ಡ ಬ್ರಾಹ್ಮಣರ ಮನೆಗೆ ಕರೆದುಕೊಂಡು ಬಂದಿದಾರೆ ಎಂದೇ ಹೇಳುತ್ತಿದ್ದರು. ಅಷ್ಟು ಸರಳವಾಗಿತ್ತು, ಅಲ್ಲಿಯ ಗೃಹಾಲಂಕಾರ. ಹಜಾರದ ಭವ್ಯ ವಿಶಾಲತೆಯೊಂದನ್ನುಳಿದು ಬೇರಾವ ಹೆಚ್ಚಿನ ಆಡಂಬರದ ವಸ್ತುಗಳೂ ಅಲ್ಲಿರಲಿಲ್ಲ. ಒಂದು ಕಡೆಯ ಗೋಡೆಯ ಮೇಲೆ ಅವರ ಹಿರಿಯರ ವರ್ಣ

ಚಿತ್ರಗಳಿದ್ದುವು. ಅದರ ಇದಿರು ಬದಿಯ ಗೋಡೆಯ ಮೇಲೆ ನಾಯಕರ ಚಿತ್ರಗಳು. ಅವರು ಕುಳಿತುಕೊಳ್ಳುವ ಪೀಠಕ್ಕೆ ಇದಿರಾಗಿ ಗೋಡೆಯ ಮೇಲೆ, ಸಕಲಾಭರಣ ಭೂಷಿತವಾದ ಪುರುಷಪ್ರಮಾಣದ ಗಾಯತ್ರಿಯ ಚಿತ್ರ. ಅದರ ಇಬ್ಬದಿಯಲ್ಲಿ ಉತ್ಸವಾಂಬಾ, ಏಕನಾಥೇಶ್ವರಿಯರ ಚಿತ್ರ. ಸುವರ್ಣವರ್ಣದಿಂದ ರಚಿತವಾದ ಆ ಚಿತ್ರಗಳು ಹಜಾರದಲ್ಲಿ ಹಬ್ಬಿದ ನಸುಗತ್ತಲಲ್ಲೂ ಥಳಥಳಿಸುತ್ತಿದ್ದುವು. ಮೂರಂಕಣ ಉದ್ದವಾದ ಭಾವಣಿಯಲ್ಲಿ, ಅಂಕಣಕ್ಕೊಂದು ವೃತ್ತ ರಚಿಸಿ, ಅದರಲ್ಲಿ ದಶಾವತಾರ, ಅಷ್ಟ ದಿಕ್ಪಾಲಕರು, ಸಪ್ತಮಾತೃಕೆಯರ ಚಿತ್ರವನ್ನು ಬರಸಿದ್ದರು. ಆದರೂ ಆ ಚಿತ್ರಗಳಾಗಲಿ, ಅವುಗಳ ಹೊಳಪಾಗಲಿ, ಯಾವುವೂ ಆ ಹಜಾರಕ್ಕೆ ಆಡಂಬರದ ಕಳೆಯನ್ನು ತರದೆ, ಹಜಾರದ ವಿಸ್ತಾರದಲ್ಲಿ ಬೆರೆತು, ಕೆತ್ತನೆ ಕೆಲಸಮಾಡಿದ ಎತ್ತರವಾದ ಸಾಲುಗಂಭಗಳನ್ನುಳ್ಳ ಆ ಹಜಾರಕ್ಕೆ ದೇವಾಲಯದ ಶೋಭೆಯನ್ನು ನೀಡಿದ್ದುವು. ಆ ಹಜಾರದಲ್ಲಿ ಎದ್ದು ಕಾಣುತ್ತಿದ್ದುದು ಅವರ ಅಧಿಕಾರದ ದರ್ಪವಲ್ಲ. ಅವರ ಆತ್ಮೋನ್ನತಿಯ ಪವಿತ್ರಕಾಂತಿ. ದೇಸಣ್ಣ ಇದೆಲ್ಲವನ್ನೂ ನೋಡುತ್ತಾ ಕುಳಿತಿರುವಾಗಲೇ ಭುವನಪ್ಪನವರೂ, ಮಗುವನ್ನು ಒಳಗೆ ಬಿಟ್ಟು ಬಂದರು. ನಿಧಾನವಾಗಿ ಹಜಾರದೊಳಗೆ ನಡೆದು ಬಂದ ಅವರನ್ನು ನೋಡಿದ ದೇಸಣ್ಣ. ಆ ಹಜಾರಕ್ಕೆ ಒಪ್ಪುವ ಅಲಂಕಾರವಾಗಿತ್ತು ಅವರ ವ್ಯಕ್ತಿತ್ವ.

ಅವರ ವಯಸ್ಸು ಎಪ್ಪತ್ತರ ಸಮೀಪವೆಂದು ವಯಸ್ಸು ಬಲ್ಲವರು ಹೇಳಬೇಕಾಗಿತ್ತೇ ಹೊರತು, ಅರಿಯದವರು ಐವತ್ತಕ್ಕಿಂತ ಹೆಚ್ಚು ಹೇಳುವಂತಿರಲಿಲ್ಲ. ಸಂಯಮ, ಸಾಧನೆಗಳಿಂದ ಪಟುವಾದ ಅವರ ಆರಡಿ ಉದ್ದದ ಭವ್ಯದೇಹ, ಕೋಡಗಲ್ಲಿನಂತೆ ನೇರವಾಗಿ ಭದ್ರವಾಗಿತ್ತು. ವಿಶಾಲವಾದ ವಕ್ಷ. ಮೊಳಕಾಲ ವರೆಗೆ ಬರುವ ಬಲವಾದ ನೀಳವಾದ ತೋಳು, ಸಾತ್ವಿಕ ಕಳೆ ರಾರಾಜಿಸುವ ಶಾಂತಪ್ರಸನ್ನ ಮುಖಮುದ್ರೆ, ನರೆತ ಹುಬ್ಬಿನಡಿಯಲ್ಲಿ ಅರಳಿದ ಕಣ್ಣುಗಳು, ಹುಬ್ಬಿನ ನಡುವೆ ಹಣೆಯಗಲಕ್ಕೂ ಕುಂಕುಮ ಗಂಧ, ಕಿವಿಗಳಲ್ಲಿ ಜೋತುಬಿದ್ದ ವಜ್ರದ ಕರ್ಣಕುಂಡಲಗಳು, ಅಲ್ಲೊಂದು ಇಲ್ಲೊಂದು ನರೆತಕೂದಲ ಛಾಯೆಕಾಣಿಸುವ ಜೋಳುತಲೆ, ಮೈಮೇಲೆ ಯಾವ ಕಸೂತಿಯ ಕೆಲಸವೂ, ಜರಿಯ

ಹೊಳಪೂ ಇಲ್ಲದ ಬಿಳಿಯ ಕಾಶ್ಮೀರದ ಶಾಲು, ಕೆಂಪು ರೇಶಿಮೆಯಂಚಿನ ಪಂಚೆ, ಕೈಯಲ್ಲಿ ಒಂದು ಪವಿತ್ರದುಂಗುರ, ಒಂದು ಮುದ್ರೆಯುಂಗುರ— ನೋಡಿದ ಕೂಡಲೇ ಮನದಲ್ಲಿ ಕಡೆದು ನಿಲ್ಲುವ ಮೂರ್ತಿ. ಅದರಲ್ಲೂ ಪ್ರಧಾನಿ ಪಟ್ಟದ ಅಟ್ಟಹಾಸದ ಎಳೆಯೂ ಕಾಣದು.

ಅವರನ್ನು ನೋಡಿ 'ಈ ಚಿನ್ನದ ಗಟ್ಟಿಯಲ್ಲೂ ಸ್ವಾರ್ಥದ ಕಸಿರೇ' ಎನಿಸಿ ಆಶ್ಚರ್ಯವಾಯಿತು ದೇಸಣ್ಣನಿಗೆ. ಆಶ್ಚರ್ಯವಾದಷ್ಟೇ ಯಾತನೆಯೂ ಆಯಿತು. 'ಊಹೂ, ನಾನು ನಂಬಲಾರೆ' ಎಂದಿತು, ಆ ಮಾತನ್ನು ನೆನೆಸಿಕೊಂಡು ನುಡಿದ ಮನಸ್ಸು.

"ದಳವಾಯಿಗಳನ್ನು ಬಹಳ ಹೊತ್ತು ಕಾಯಿಸಿಬಿಟ್ಟೆನೋ ಏನೋ, ಮನ್ನಿಸಬೇಕು"

ಎಂದು ನುಡಿದು, ಭುವನಪ್ಪನವರು ದಳವಾಯಿಗೆ ಹತ್ತಿರದಲ್ಲೇ ಇದಿರಾಗಿ ಒಂದು ಪೀಠವನ್ನು ಎಳೆದುಕೊಂಡು ಕುಳಿತು ಹಸನ್ಮುಖದಿಂದ ಆತನ ಮುಖವನ್ನು ನೋಡುತ್ತಾ—

"ಹೇಳುವುದು ಏನೋ ಇದೆ ಎಂದಿರಿ, ಅಪ್ಪಣೆಯಾಗಲಿ"

—ಎಂದರು.

"ನನ್ನನ್ನು ತಾವು ಬಹು ವರ್ಷಗಳಿಂದ ಬಲ್ಲಿರಿ, ಭುವನಪ್ಪನವರೇ. ನಾನೂ ನಿಮ್ಮನ್ನು ಅಷ್ಟೇ ಅರಿತುಕೊಂಡಿದೇನೆ, ಎಂದು ತಿಳಿದು ಕೊಂಡಿದೇನೆ. ನಿಮ್ಮಲ್ಲಿ ಅಚಲ ವಿಶ್ವಾಸವಿದೆ. ಆ ವಿಶ್ವಾಸವೇ ಸಂದೇಹದಲ್ಲಿ ತೊಳಲುತ್ತಿದ್ದ ನನ್ನನ್ನು ನಿಮ್ಮಲ್ಲಿಗೆ ಕರೆತಂದುದು. ಆದುದರಿಂದ- ತಮ್ಮಲ್ಲಿ ಮನಬಿಚ್ಚಿ ಮಾತನಾಡಿದರೆ ಅನ್ಯಥಾ ಭಾವಿಸಬಾರದು.

ಯಾವುದೋ ಮಾತನ್ನು ಹೇಳಲು ಸಂಕೋಚಪಟ್ಟುಕೊಂಡು ದೇಸಣ್ಣ ಪಡುತ್ತಿದ್ದ ದ್ರಾವಿಡ ಪ್ರಾಣಾಯಾಮದ ಬಳಲಿಕೆಯನ್ನು ಕಂಡು ಭುವನಪ್ಪನವರಿಗೆ ನಗು ಬಂತು. ದೊಡ್ಡದಾಗಿ ನಕ್ಕು ಹೇಳಿದರು—

"ನಮ್ಮನಮ್ಮಲ್ಲಿ ಮಾತನಾಡುವುದಕ್ಕೆ ಇಷ್ಟು ಪೀಠಿಕೆ, ಸಂಕೋಚ ಯಾವುದೂ ಅಗತ್ಯವಿಲ್ಲ ದೇಸಣ್ಣ; ನೀವೇ ಹೇಳಿದಿರಿ—ನಿಮ್ಮ ಪರಿಚಯ ನನಗೆ ಚೆನ್ನಾಗಿದೆಯೆಂದು. ನಿಜ, ನಾನೂ ಅದನ್ನು ಒಪ್ಪುತ್ತೇನೆ. ನಿಮ್ಮ ಹೃದಯವನ್ನು ನಾನು ಬಲ್ಲೆ. ಎಂತಲೇ ನಾನು ತಪ್ಪು ತಿಳಿದುಕೊಳ್ಳ

ಬಹುದೊ ಏನೊ ಎಂದು ಊಹಿಸುವುದು ಬೇಡ; ಹೇಳಬೇಕೆಂದು ಬಂದ ಮಾತನ್ನು ನಿಸ್ಸಂಕೋಚವಾಗಿ ಹೇಳಿ. ”

“ ಆದರೂ ತಾವು ಹಿರಿಯರು........”

“ ಹೂ, ವಯಸ್ಸಿನಲ್ಲಿ, ಅಷ್ಟು ಮಾತ್ರ ಒಪ್ಪಿಕೊಳ್ಳುತ್ತೇನೆ. ಉಳಿದದ್ದರಲ್ಲಿ ಹೇಗೋ ನಾ ಕಾಣೆ. ಅಲ್ಲದೆ ರಾಜಕಾರಣದ ವಿಷಯ ಮಾತನಾಡುವುದಿದೆ ಎಂದಿರಿ. ದೇವರ ಇದಿರಿನಲ್ಲಿರುವಂತೆಯೇ ಸಿಂಹಾಸನದ ಇದಿರೂ ಹಿರಿಯರು, ಕಿರಿಯರು ಎಂಬ ತಾರತಮ್ಯವಿಲ್ಲ; ಅಲ್ಲಿ ಬೆಲೆ ಬರುವುದು ಒಂದೇ ಮಾತಿಗೆ—ನಿಷ್ಠೆಗೆ. ಅದರಲ್ಲಿ ನೀವು ನನಗಿಂತ ಕಿರಿಯರಲ್ಲ. ಆದ್ದರಿಂದ ಧಾರಾಳವಾಗಿ ಹೇಳಿ. ”

“ ನಿಮ್ಮ ವಿಷಯದಲ್ಲೊಂದು ಒಡಕು ಸುದ್ದಿ ಕಿವಿಗೆ ಬಿತ್ತು, ಅದಕ್ಕೇ ಬಂದೆ. ”

—ಪ್ರಯತ್ನ ಪಟ್ಟು ವಿಷಯಕ್ಕೆ ಬಂದು ಹೇಳಿದ ದೇಸಣ್ಣ. ಆ ಮಾತು ಕೇಳಿ ಭುವನಪ್ಪನವರ ಮುಖ ಗಂಭೀರವಾಯಿತು. ನಗುತ್ತಿದ್ದ ಕಣ್ಣುಗಳಲ್ಲಿ ನೋವು ಬೆರೆತ ಬೇರೊಂದು ಭಾವನೆ ಹೊಳೆಯಿತು.

“ ಹೂ, ಹೇಳಿ. ”

ತನ್ನ ಅಷ್ಟು ಮಾತಿನಿಂದಲೇ ಭುವನಪ್ಪನವರ ಹೃದಯಕ್ಕೆ ಮುಳ್ಳಿರಿದಷ್ಟು ಯಾತನೆಯಾಗಿತ್ತೆಂಬುದನ್ನು ಅವರು ಬಾಯಿಬಿಟ್ಟು ಹೇಳದಿದ್ದರೂ, ಆ ಎರಡೇ ಶಬ್ದ ಸಾರಿಸಾರಿ ಹೇಳಿದುವು ದೇಸಣ್ಣನಿಗೆ. ಅದನ್ನರಿತು ಅವನೆದೆಗೂ ನೋವಾಯಿತು. ಆ ನೋವಿನ ಆಕ್ರೋಶದಲ್ಲೇ ಹೇಳಿದ:

“ ನಿಮ್ಮಲ್ಲಿ ನನಗೆ ನಂಬಿಕೆ ಇದೆ ಭುವನಪ್ಪನವರೇ, ಪ್ರಚಂಡ ನಂಬಿಕೆಯಿದೆ. ಭೂತನಾಥೇಶ್ವರನಿಗೆ ದುರ್ಗದ ಮೇಲೆ ಅಭಿಮಾನ ತಪ್ಪಿದರೂ ನಿಮಗೆ ತಪ್ಪುವುದಿಲ್ಲ ಎಂಬಷ್ಟು ನಂಬಿಕೆಯಿದೆ. ನಿಮ್ಮ ಮನೆತನದ ಹಿರಿಯ ಸೇವೆಯಿಂದ ಈ ಸಿಂಹಾಸನ ಬಲಿತು ಬಲವಾಗಿದೆ ಎಂದು ನಾನು ಬಲ್ಲೆ. ಆದರೆ ಈಗ ನನ್ನ ಕಿವಿಗೆ ಬಿದ್ದಿರುವುದಿಷ್ಟು: ಹೆತ್ತ ತಾಯಿಯೇ ಹಸುಗೂಸಿನ ಕೊಲೆಗೆ ಸಿದ್ಧವಾಗುತ್ತಿದ್ದಾಳೆ ಎಂಬುದು. ಆ ಮಾತು ನನ್ನೆದೆಯನ್ನು ಬಿರುಗಾಳಿಯಂತೆ ಕಲಕುತ್ತಿದೆ. ಸತ್ಯ ಏನೇ ಇರಲಿ, ಶಿವನ ಪಾದಸಾಕ್ಷಿಯಾಗಿ ಹೇಳಬೇಕು—ಓಬಣ್ಣನಾಯಕನನ್ನು ಪಟ್ಟಕ್ಕೆ ತರಬೇಕೆಂಬುದರಲ್ಲಿ ನಿಮಗಿರುವ ಆಸಕ್ತಿ ಏನು ? ”

" ನಾನು ಸತ್ಯ ಹೇಳುತ್ತೇನೆಂದು ನಿಮಗೆ ನಂಬಿಕೆ ಇದೆಯೊ ? "

" ಇದೆ. "

" ಆದರೂ....ಆದರೂ.... ಇಂಥ ವಿಷಯದಲ್ಲಿ ಸುಳ್ಳು ಹೇಳುವುದು ಮಾನವ ಸ್ವಭಾವಕ್ಕೆ ಅನಿರೀಕ್ಷಿತವಾದ ವಿಷಯವೇನಿಲ್ಲ. "

" ಇರಬಹುದು. ನೀವು ಸ್ವಾರ್ಥದೃಷ್ಟಿಯಿಂದ ಏನಾದರೂ ಮಾಡುತೀರಿ ಎಂಬುದೇ ನಾನು ನಂಬಲಾಗದ ಮಾತು. ಒಂದು ವೇಳೆ ಹಾಗಾದರೂ ಆಗಬಹುದು. ಆದರೆ ಯಾವುದೇ ಕಾರಣಕ್ಕಾಗಿಯಾದರೂ ನಿಮ್ಮ ನಾಲಗೆ ಅನೃತ ನುಡಿಯುತ್ತದೆ ಎಂದರೆ ನಾನು ನಂಬುವುದಿಲ್ಲ. "

" ನಾನು ಅಂದುಕೊಂಡುದಕ್ಕಿಂತ ಹೆಚ್ಚು ಬೆಲೆಯನ್ನು ನನಗೆ ಕೊಡುತ್ತಿದೀರಿ ದೇಸಣ್ಣ. ಒಂದು ವೇಳೆ....ಇವರಲ್ಲಿ ನನ್ನ ಸ್ವಾರ್ಥದ ದುರುದ್ದೇಶವಿದೆ ಎಂದು ಹೇಳಿದರೆ ಏನು ಮಾಡುತ್ತೀರ ? "

ದೇಸಣ್ಣನ ಹೃದಯವನ್ನು ಕತ್ತರಿಸಿ ನೋಡುವ ನೋಟದಿಂದ ಆತನ ಮೊಗವನ್ನು ನೋಡುತ್ತಾ ಕೇಳಿದರು ಭುವನಪ್ಪ.

" ಅದನ್ನು ನಂಬುವುದು ಕಷ್ಟ...."

ಆ ಮಾತನ್ನು ಗಟ್ಟಿಯಾಗಿ ಹೇಳಲಾಗದೆ, ತೊದಲುತ್ತಾ ಹೇಳಿದ ದೇಸಣ್ಣ.

" ಒಂದು ವೇಳೆ ನಂಬಿಕೆಯಾದರೆ....ಆಗ...."

" ಆಗಲೇ....ಆಗಲೇ...."

ಬಿರುಗಾಳಿ ಕಡಡಿವ ಅಲೆಯಲ್ಲಿ ಹೊಯ್ದಾಡುವ ಕಿರುನಾವೆಯಂತೆ ತೂಗುತ್ತಿತ್ತು ದೇಸಣ್ಣನ ಮಾತು.

" ಹೂ, ಆಗ ಏನು ಮಾಡುತ್ತೀರ ಹೇಳಿ ? "

" ಏನು ಮಾಡುತ್ತೇನೆಯೊ ? ಏನು ಮಾಡಲಿ.... ಬೇಲಿ ಎದ್ದು ಹೊಲವನ್ನು ಮೆಯ್ದಾಗ ಅದಕ್ಕೇನು ಕಾವಲು ಕಟ್ಟಲು ಸಾಧ್ಯ. ಆಯಿತು ....ದುರ್ಗದ ಪುಣ್ಯ ತೀರಿತು, ಎಂದು ಹೊಂಡದಲ್ಲಿ ಬಿದ್ದು ಪ್ರಾಣ ಬಿಡುತ್ತೇನೆ. "

" ಏಕೆ ? ದುರ್ಗದ ರಕ್ಷಣೆಗಾಗಿ ನಿಮ್ಮ ಕತ್ತಿ ಎತ್ತುವುದಿಲ್ಲವೆ ? "

" ಕತ್ತಿ ! ದುರ್ಗಕ್ಕೆ ದ್ರೋಹ ಬಗೆಯಲು ನೀವೇ ಸಿದ್ಧರಾದರೆ ನನ್ನ

ಕತ್ತಿಯಿಂದ ಏನಾಗುತ್ತದೆ, ಭುವನಪ್ಪನವರೇ. ಮುಗಿಲು ಕಡಿದು ಬಿದ್ದಾಗ ಛಾವಣಿ ಕಾಪಾಡಬಲ್ಲುದೇ? ಕೊಡೆ ಹಿಡಿದು ಸಿಡಿಲಿನಿಂದ ತಪ್ಪಿಸಿಕೊಳ್ಳಲಾದೀತೆ? ಭುವನಪ್ಪನವರೇ, ಈ ದುರ್ಗ ಬದುಕಿರುವುದು ನಮ್ಮಂಥವರ ಕತ್ತಿಯ ಬಲದಿಂದ ಅಲ್ಲ, ಸಿದ್ಧರ ಅನುಗ್ರಹದಿಂದ ನಿಮ್ಮಂಥ ಹಿರಿಯರಲ್ಲಿ, ದೇವತಾ ಸದೃಶರಲ್ಲಿ ಸ್ವಾರ್ಥಕಸಿರು, ದ್ರೋಹದ ಮೈಲಿಗೆ ಕಂಡಿತು ಎಂದರೆ ಇದಕ್ಕೆ ಸಿದ್ಧರ ಅನುಗ್ರಹದ ಕಾಲ ಮುಗಿಯಿತು ಎಂತಲೇ ಅರ್ಥ. ದುರ್ಗದ ಪತನಕ್ಕೆ ಇದು ಉತ್ಪಾತ ಸೂಚನೆ ಎಂದೇ ಲೆಕ್ಕ. ನಾವು ಬದುಕಿದ್ದು, ಇದು ಬೀಳುವುದನ್ನು ನೋಡುವುದಕ್ಕಿಂತ, ಆ ಕಾಲ ಬರುವ ಮೊದಲು ನಾವೇ ಕಣ್ಣು ಮುಚ್ಚಿಕೊಳ್ಳುವುದು ಮೇಲು. ಅದಕ್ಕೇ ಹೊಂಡಕ್ಕೆ ಹಾರಿಕೊಳ್ಳುತ್ತೇನೆ ಎಂದದ್ದು."

"ನಾನು ದ್ರೋಹಿ ಎಂದು ತಿಳಿದ ಮೇಲೆ, ನೀವು ಹೊಂಡಕ್ಕೆ ಹಾರುವುದರ ಬದಲು, ನನ್ನನ್ನೇ ಹಿಡಿದು ಕತ್ತರಿಸಿದರೆ, ಆ ಪೀಡೆ ಅಲ್ಲಿಗೆ ಬಗೆಹರಿಯುತ್ತದೆಯಲ್ಲ?"

"ಏನು, ನಿಮ್ಮನ್ನು ಕೊಲೆಮಾಡುವುದೇ! ಬ್ರಾಹ್ಮಣ ವಧೆ ಮಾಡುವುದೇ! ಶಿವಶಿವಾ! ಎಂಥ ಮಾತು!

"ಅಲ್ಲೇ ನೀವು ತಪ್ಪುತ್ತಿರುವುದು, ದೇಸಣ್ಣ. ದ್ರೋಹ ಬಗೆದಾತ, ಸ್ವಾರ್ಥಕ್ಕೆ ಬುದ್ಧಿಯನ್ನು ಮಾರಿದಾತ ಹುಟ್ಟಿನಿಂದ ಬ್ರಾಹ್ಮಣನಾದರೂ ಚಂಡಾಲ. ಅಂಥವರ ವಧೆಯಿಂದ ಬ್ರಹ್ಮಹತ್ಯಾ ಪಾಪ ತಟ್ಟುವುದಿಲ್ಲ. ಎಲ್ಲಿಯ ವರೆಗೆ ಬ್ರಾಹ್ಮಣ ಹೃದಯ 'ಲೋಕಾಸ್ಸಮಸ್ತಾಃ ಸುಖಿನೊಭವಂತು' ಎಂಬುದೇ ಗಾಯತ್ರಿ ಎಂದು ತಿಳಿದು ಜಪಿಸುತಿರುತ್ತದೆಯೋ, ಎಲ್ಲಿಯ ವರೆಗೆ ಅವನ ತ್ರಿಕರಣಗಳೂ ಆ ಪವಿತ್ರ ಮಂತ್ರಾರ್ಥವನ್ನು ನಿತ್ಯಾನುಷ್ಠಾನದಿಂದ ಕಾಪಾಡುತ್ತಿರುವುದೋ ಅಲ್ಲಿಯ ವರೆಗೂ ಬ್ರಾಹ್ಮಣ, ಬ್ರಾಹ್ಮಣ. ಅದು ತಪ್ಪಿದಂದು ಅವನು ಕರ್ಮಚಂಡಾಲ. ಕರ್ಮಭ್ರಷ್ಟರ ಸಂಹಾರ ದೇವತಾಪೂಜೆಯಷ್ಟೇ ಪವಿತ್ರವಾದ ಕರ್ತವ್ಯ ದೇಸಣ್ಣ. ಸಂಪ್ರದಾಯಕ್ಕೆ ಶರಣಾಗಿ, ಕರ್ಮಲೋಪಕ್ಕೆ ಎಡೆಗೊಟ್ಟರೆ ಆಗ ಲೋಕ ಹಾನಿಯಾಗುತ್ತದೆ. ರಾವಣನೂ ಬ್ರಾಹ್ಮಣನೇ, ಋಷಿಪುತ್ರ, ಶಿವಭಕ್ತ– ಆದರೂ ಕರ್ಮಲೋಪವಾದಾಗ, ಸ್ವಾಮಿ ಶ್ರೀರಾಮಚಂದ್ರ ಅವನನ್ನು

ಕೊಂದು ಲೋಕವನ್ನು ರಕ್ಷಿಸಬೇಕಾಯಿತು. ಆತನಿಗೆ ತಿಳಿಯದ ಧರ್ಮ ಇದೆಯೇ ದೇಸಣ್ಣ. ಆದುದರಿಂದ ಅಗತ್ಯ ಒದಗಿದರೆ, ಅನಿವಾರ್ಯ ವೆಂದು ಕಂಡು ಬಂದರೆ, ತಾವು ಅದಕ್ಕೂ ಹಿಂಜರಿಯಬಾರದು. ಶುಷ್ಕ ಸಂಪ್ರದಾಯಕ್ಕೆ ಹೆದರಿ, ಕ್ಲೈಬ್ಯಕ್ಕೆ ಮನ ಮಾರಬಾರದು."

—ಘಂಟಾನಾದದಂತೆ ಸ್ಪಷ್ಟವಾಗಿ ಆಡಿದರು ಭುವನಪ್ಪನವರು. ಅವರ ಒಂದೊಂದು ಮಾತೂ ಆಸ್ಫೋಟನೆಯ ಆಘಾತದಂತೆ ದೇಸಣ್ಣನ ಹೃದಯವನ್ನು ಅಪ್ಪಳಿಸುತ್ತಿತ್ತು. ಅದನ್ನು ಕೇಳಿ ಗರಬಡಿದವನಂತಾದ ದೇಸಣ್ಣ. ಆ ಮಾತಿಗೆ ಉತ್ತರವಾಗಿ ಮರು ಮಾತು ಆತನ ನಾಲಗೆ ಯಿಂದ ಹೊರಬರಲಿಲ್ಲ. ಆ ಮಾತುಗಳನ್ನು ಆಡುತ್ತಿರುವ ವರೆಗೂ ಭುವನಪ್ಪನವರ ಗೌರವರ್ಣದ ಮೊಗವನ್ನು ಆವರಿಸಿದ್ದ ಉದ್ವೇಗದ ಕೆಂಪು, ಆ ಮಾತು ಮುಗಿಯುತ್ತಿದ್ದಂತೆಯೇ ಹರಿದು, ವಾತ್ಸಲ್ಯದ ಶಾಂತ ಮೋಹಕ ಬೆಳಕು ಹರಡಿತು.

"ನನ್ನ ಮಾತು ಕೇಳಿ ಗಾಬರಿಯಾಯಿತೇ ದೇಸಣ್ಣ? ಸತ್ಯವನ್ನು ಹೇಳಬೇಕೆಂದು, ಸತ್ಯವನ್ನು ಕೇಳಬೇಕೆಂದು ಬಂದೆ. ಸತ್ಯಾರಾಧನೆ ತುಂಬ ಉಗ್ರವಾದ ಉಪಾಸನೆ ದೇಸಣ್ಣ. ಈ ದೇವಿಯ ಉಪಾಸಕರ ಭಯಂಕರ ದೃಶ್ಯವನ್ನು ನೋಡಲೂ ಸಿದ್ಧರಾಗಿರಬೇಕು, ಎಂಥ ಬಲಿ ಯನ್ನು ಕೇಳಿದರೂ ಕೊಡಲು ತಯಾರಾಗಿರಬೇಕು. ಹಾಗಿದ್ದರೇ ಈ ದೇವ ಒಲಿಯುವುದು."

"ಇ....ಇ....ಇ....ದೇ....ನು....ಮಾತು....!....ಭುವನಪ್ಪನವರೇ?"

—ಭಯ, ಶೋಕ, ನಿರಾಶೆಗಳ ಪ್ರಚಂಡ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾ ಕೇಳಿದ ದೇಸಣ್ಣ—

"ಹಾಗಾದರೆ ದುರ್ಗದ ಪುಣ್ಯ ತೀರಿತೆ?"

—ಆ ಮಾತನ್ನು ಆಡುವುದರಿಂದಲೇ ಆತನ ಹೃದಯವನ್ನು ಬೆಂಕಿಯ ಕೈಗಳು ಹಿಂಡಿದಂತಾಗಿ, ಕಣ್ಣಲ್ಲಿ ಹನಿ ತುಂಬಿತು.

"ಊಹೂ. ಸದ್ಯಕ್ಕೆ ಅಂಥ ಭಯ ಬಂದಿಲ್ಲ ದೇಸಣ್ಣ. ಏನಾ ದರೂ, ಅನೃತವನ್ನು ನುಡಿಯುವುದಿಲ್ಲ ಎಂದು ಹೇಳಿದೆ. ನಂಬಿಕೆಯ ಮಾತಿಗೆ ಋಣಿಯಾಗಿದ್ದೇನೆ. ನಾನು ಅಸತ್ಯವನ್ನು ಹೇಳುವುದಿಲ್ಲ.

ಅಷ್ಟೇ ಮಟ್ಟಿಗೆ ನನ್ನಲ್ಲಿ ಸ್ವಾರ್ಥದ ಲವಲೇಶವೂ ಇಲ್ಲ. ದುರ್ಗದ ನೀರು ಕುಡಿದ ಈ ಮೈ, ಜಗತ್ತೇ ತಲೆಕೆಳಗಾದರೂ, ಮೂರು ಲೋಕಗಳೇ ಇದಿರು ಬಂದರೂ ದುರ್ಗಕ್ಕೆ ಎರಡು ಬಗೆಯುವುದಿಲ್ಲ. ಈ ಘಟ ಇರುವ ವರೆಗೂ ದುರ್ಗದ ಮೈಯ ಕೂದಲೂ ಕೊಂಕಲು ಬಿಡುವುದಿಲ್ಲ. ದುರ್ಗಕ್ಕೆ ದ್ರೋಹ ಬಗೆಯಬೇಕೆನ್ನುವವರು, ನನ್ನ ವಶದ ಬತೇರಿಯ ಮೇಲೆ ದ್ರೋಹದ ಬಾವುಟ ಹಾರಿಸಬೇಕು, ದೇಸಣ್ಣ. ನಾನು ಬ್ರಾಹ್ಮಣ, ವೃದ್ಧ, ಆದರೂ ನನ್ನ ದೇಹದಲ್ಲಿ ಕೊನೆಯ ಹನಿ ರಕ್ತ ಇರುವ ವರೆಗೂ ದುರ್ಗಕ್ಕೆ ಕೇಡಾಗಲು ಬಿಡುವುದಿಲ್ಲ. ಆದುದರಿಂದ ನನ್ನಲ್ಲಿ ಅಂಥ ಅಪ ನಂಬಿಕೆ ಬೇಡ."

"ಅಷ್ಟು ಹೇಳಿ ನನ್ನನ್ನು ಬದುಕಿಸಿದಿರಿ ಭುವನಪ್ಪನವರೇ. ಮೊದಲು ನೀವಾಡಿದ ಮಾತು ಕೇಳಿ ನನ್ನ ಕೈಕಾಲ ನರವೇ ಉಡುಗಿ ಹೋಗಿತ್ತು."

"ಈಗ ನಂಬಿಕೆಯಾಯಿತೇ ?"

"ಆಯಿತು."

"ಮತ್ತೆ ಅಪನಂಬಿಕೆ ಸುಳಿಯುವುದಿಲ್ಲವೇ ?"

"ದೇವರೇ ಬಂದು ಹೇಳಿದರೂ ಇಲ್ಲ."

"ಆ ಮಾತು ಹೇಳಿ ದೊಡ್ಡ ಉಪಕಾರ ಮಾಡಿದಿರಿ ದೇಸಣ್ಣ. ನಿಮ್ಮ ಬಾಯಿಂದ ಅಪವಾದದ ಮಾತು ಕೇಳಿ, ಈ ಜೀವನ ಪಾತಾಳ ಕ್ಕಿಳಿದುಹೋಗಿತ್ತು."

"ಆ ಅಪರಾಧವನ್ನು ಮನ್ನಿಸಬೇಕು."

—ಆರಡಿಯ ಮೈಯನ್ನು ಗೇಣುದ್ದ ಮಾಡಿಕೊಂಡು ಕೇಳಿದ ದೇಸಣ್ಣ.

"ಅದು ಅಪರಾಧವಲ್ಲ, ಅಪಚಾರವಲ್ಲ, ಉಪಕಾರವೇ ಆಯಿತು. ಎಂದು ಹೇಳಿದೆನಲ್ಲ."

"ಅಪನಂಬಿಕೆಯ ಮಾತಾಡಿ ನಿಮ್ಮೆದೆಯನ್ನು ಇರಿದುದೂ ಉಪ ಕಾರವೇ ?"

"ನಿಜ. ಆಗಾಗ ಒರೆಹಚ್ಚದೆ ಬಂಗಾರದ ಬೆಲೆ ತಿಳಿಯುವುದಿಲ್ಲ. ಎಳೆದೆಳೆದು ನೋಡಿ ಹೊಸೆದಾಗಲೇ ದಾರ ಬಲವಾಗುವುದು."

“ ನಿಮ್ಮ ಮಾತಿಗೆ ಇದಿರು ಹೇಳುವ ಶಕ್ತಿ ನನಗಿಲ್ಲ. ಹೇಗೂ ಇಷ್ಟು ಕೇಳಿ ನಿಮ್ಮ ಮನಸ್ಸು ನೋಯಿಸಿದೆ ಇನ್ನು ಒಂದು ಕೇಳಬೇಕಾದ ಮಾತಿದೆ. ಅಪ್ಪಣೆಯಾದರೆ ಕೇಳಿ ಹೃದಯವನ್ನು ಹಗುರಾಗಿಸಿಕೊಳ್ಳುತ್ತೇನೆ.”

“ ಕೇಳಿ, ಏನು ಕೇಳಲೂ ಅಡ್ಡಿಯಿಲ್ಲ.”

“ ಲಿಂಗಣ್ಣನಾಯಕರು ಪಟ್ಟಕ್ಕೆ ಬರದಂತೆ ನೀವು ಸಂಚುಮಾಡಿದಿರಾ ? ”

“ ಸಂಚು !.....ಹೂ.....ಒಂದು ರೀತಿಯಲ್ಲಿ ಅದೂ ಒಂದು ಸಂಚೇ ಅನ್ನಿ. ಆದರೆ ನಾನು ಮಾಡಲಿಲ್ಲ.”

“ ಮತ್ತಾರು ? ”

“ ಲಿಂಗಣ್ಣನಾಯಕರ ವಿಧಿ ! ”

“ ಅಂದರೆ........? ”

—ಭುವನಪ್ಪನವರ ಮಾತು ಅರ್ಥವಾಗದೆ ತೊಳಲುತ್ತಾ ಕೇಳಿದ ದೇಸಣ್ಣ.

“ ಲಿಂಗಣ್ಣನಾಯಕರ ವಿಧಿ ನಾಯಕರ ಕಣ್ಣಿಗೆ ಇಲ್ಲದ ಭೀತಿ ಕವಿಸಿ, ಅವರು ಸರ್ಜೇನಾಯಕರ ಮಕ್ಕಳು ಪಟ್ಟಕ್ಕೆ ಬರದಂತೆ ಮನಸ್ಸು ಮಾಡಲು ಕಾರಣವಾಯಿತು.”

“ ಏನು ಭೀತಿ ? ”

ಆ ಮಾತಿಗೆ ಭುವನಪ್ಪನವರು ಕೂಡಲೇ ಉತ್ತರ ಕೊಡಲಿಲ್ಲ. ಒಂದು ಗಳಿಗೆ ಸುಮ್ಮನೆ ಕುಳಿತಿದ್ದು, ಬಳಿಕ ನಿಧಾನವಾಗಿ ಹೇಳಿದರು—

“ ನೀವು ನನಗೆ ಮನಬಿಚ್ಚಿ ಮಾತನಾಡಿದರೆ ನೊಂದುಕೊಳ್ಳಕೂಡದು ಎಂದಿರಿ. ಆಗಲಿ ಎಂದೆ. ನೀವೂ ಮನಸಿನಲ್ಲಿದ್ದುದನ್ನು ಹುದುಗದೆ ಹೇಳಿದಿರಿ. ನಾನೂ ಹಾಗೇ ಇಮ್ಮಲ್ಲಿ ಮನಬಿಚ್ಚಿ ಮಾತನಾಡಬಹುದೇ ? ಮಾತನಾಡಿದರೆ ನೀವು ನೊಂದುಕೊಳ್ಳುವುದಿಲ್ಲ ತಾನೆ ? ”

“ ಶಿವನಾಣೆ ! ಏನು ಮಾತಿದ್ದರೂ ಅಪ್ಪಣೆಕೊಡಿಸಿ. ಸತ್ಯದ ಆರಾಧಕ ಎಂಥ ಭಯಂಕರ ದೃಶ್ಯವನ್ನು ನೋಡಲೂ ಸಿದ್ಧನಾಗಿರಬೇಕು ಎಂದು ನೀವೇ ಸ್ವಲ್ಪ ಹೊತ್ತಿಗೆ ಮುಂಚೆ ಅಪ್ಪಣೆಕೊಡಿಸಿದಿರಿ. ಸಿದ್ಧವಾಗಿದ್ದೇನೆ. ನಾಯಕರ ಯಾವ ಭೀತಿ, ಸರ್ಜೇನಾಯಕರ ಮಕ್ಕಳು ಪಟ್ಟಕ್ಕೆ ಬರದಂತೆ ಮಾಡಿತು, ಹೇಳಿ ? ”

“ನಾಯಕರಿಗೆ ಇದ್ದ ಭೀತಿಯೆಲ್ಲಾ ನಿಮ್ಮದೇ; ದಳವಾಯಿಗಳದು.”

“ಅಂದರೆ....?”

“ದಳವಾಯಿಗಳು ತಮ್ಮ ಬಲ ಬೆಳಸಿಕೊಳ್ಳಲು, ತಾವು ಪ್ರಬಲರಾಗಲು ಸರ್ಜೇನಾಯಕರ ಮಕ್ಕಳ ಪಕ್ಷವಹಿಸಿದ್ದಾರೆ ಎಂದು ನಾಯಕರಿಗೆ ಸಂಶಯ ಬಂದಿತ್ತು. ಅದಕ್ಕಾಗಿಯೇ ಓಬಣ್ಣನಾಯಕರನ್ನು ದತ್ತು ತೆಗೆದುಕೊಳ್ಳುವ ಯೋಚನೆ ಮಾಡಿದ್ದು.”

“ನಾಯಕರಿಗೆ....ನಮ್ಮಲ್ಲಿ....ಸಂಶಯವೇ ”....”

— ಆ ಮಾತನ್ನು ನಂಬಲಾಗದವನಂತೆ ಕೇಳಿದ ದೇಸಣ್ಣ.

“ನಿಜ, ದೇಸಣ್ಣ. ನಾಯಕರಿಗೆ ದಳವಾಯಿಗಳಲ್ಲಿ ಸಂಶಯವಿತ್ತು. ಸಂಶಯ ಗಾಳಿಯಲ್ಲಾಡುವ ಭೂತಗಳಿದ್ದಂತೆ. ಅದು ಯಾವ ಗಳಿಗೆಯಲ್ಲಿ, ಯಾರ ಮೈಯನ್ನಾದರೂ ಹೊಗಬಹುದು. ಈಗ ನಿಮಗೇ ನನ್ನಲ್ಲಿ ಒಂದು ಗಳಿಗೆ ಸಂಶಯ ಮೂಡಿರಲಿಲ್ಲವೇ. ನಿಮಗೆ ಅವಕಾಶವಿತ್ತು. ಬಂದು ನಿಮ್ಮ ಸಂಶಯ ಪರಿಹಾರ ಮಾಡಿಕೊಂಡಿರಿ. ಆದರೆ ನಮ್ಮ ದುರದೃಷ್ಟ—ನಾಯಕರು ತಮ್ಮ ಸಂಶಯ ಪರಿಹಾರ ಮಾಡಿಕೊಳ್ಳುವವರೆಗೂ ಉಳಿಯಲಿಲ್ಲ; ಆ ಕಾವಳದಲ್ಲೇ ತೀರಿಕೊಂಡರು—ನಮಗೆ, ಅವರ ಆಜ್ಞಾಧಾರಕರಾದವರಿಗೆ ಹೀಗೆ ಮಾಡಿ ಎಂದು ಹೇಳಿ, ನಮಗೆ ಅವರು ಬೇರೆ ದಾರಿಯನ್ನೇ ಉಳಿಸಿಲ್ಲ. ಅವರು ತೋರಿದ ದಾರಿಯಲ್ಲಿ ನಡೆಯುವುದೊಂದೇ ನಮ್ಮ ಪಾಲಿಗೆ ಉಳಿದ ಕರ್ತವ್ಯ. ಅದಕ್ಕಾಗಿಯೇ ನಾಗತಿಯವರು ಉಳಿದುಕೊಂಡದ್ದು ; ಅದಕ್ಕಾಗಿಯೇ ಲಿಂಗಣ್ಣನಾಯಕರು ರಾಜ್ಯತ್ಯಾಗಮಾಡಿದ್ದು ; ಅದಕ್ಕೇ ನಾನು-ಇದು ವಿಧಿಯ ಒಳಸಂಚು ಎಂದದ್ದು. ಈಗ ಹೇಳಿ—ನನ್ನಿಂದ ಎಲ್ಲಿ ತಪ್ಪಾಗಿದೆ? ತಪ್ಪಾಗಿದ್ದರೆ ತಿದ್ದಿಕೊಳ್ಳುತ್ತೇನೆ. ಸರ್ಜೇನಾಯಕರ ಮಕ್ಕಳಿಗೆ ಇದರಿಂದ ಅನ್ಯಾಯವಾಗಿದೆ, ಬಹಳ ದೊಡ್ಡ ಅನ್ಯಾಯವಾಗಿದೆ. ನಾನು ಬಲ್ಲೆ, ದೇಸಣ್ಣನವರೇ. ಅದಕ್ಕಾಗಿ ನನ್ನ ಹೃದಯ ಮಮ್ಮಲ ಮರಗುತ್ತಿದೆ. ಆದರೇನುಮಾಡಲಿ, ಅರಸು ಮಕ್ಕಳಾಗಿಯೂ ಅರಸಾಗಿ ಆಳುವ ಪುಣ್ಯ ಅವರು ಪಡೆದು ಬರಲಿಲ್ಲ. ಎರಡೆರಡು ಬಾರಿ ವಿಧಿ ಅವರಿಗೆ ದ್ರೋಹ ಬಗೆಯಿತು. ಅದರ ವಿರುದ್ಧ ಹೋರಾಡಲು ನಾವು ಶಕ್ತರೇ? ಈ ಹೊತ್ತಿನಲ್ಲಿ ನಾವು ಮಾಡ

ಬಹುದಾದುದಿಷ್ಟೇ—ಆಯಿತು, ನಮ್ಮ ಕೈಮೀರಿ ಅನ್ಯಾಯವಾಯಿತು. ಇದು ಇಷ್ಟಕ್ಕೆ ನಿಲ್ಲಲಿ; ಇದರಿಂದ ಹೆಚ್ಚು ಅನಾಹುತವಾಗದಿರಲಿ, ಎಂದು ಹಾರೈಸಿ, ನಾವು ಹೊತ್ತ ಕರ್ತವ್ಯ ನಡಸುವುದು. ಅಷ್ಟೇ ಅಲ್ಲವೆ ನಮಗೆ ಉಳಿದಿರುವುದು ದೇಸಣ್ಣನವರೇ?"

ಭುವನಪ್ಪನವರ ಮಾತು ಕೇಳಿ ದೇಸಣ್ಣನ ಕಣ್ಣಿಗೆ ಅಂಜನ ಹಾಕಿದಂತಾಗಿತ್ತು. ಯಾವುದೋ ಕಾವಳದಲ್ಲಿ ತಾನು ಮಾಡಿದ ಅಪರಾಧದ ಅರಿವಾಗಿ ಅದರ ಭಾರಕ್ಕೆ ಅವನ ತಲೆ ನೆಲಕ್ಕೆ ಬಾಗಿತು. ಧ್ವನಿಯಲ್ಲಿ ಬಲ ಉಡುಗಿಹೋಯಿತು. ಒಣಗಿದ ಧ್ವನಿಯಲ್ಲೇ ಹೇಳಿದ:

"ನಮ್ಮಿಂದ ಒಂದು ದೊಡ್ಡ ಅಪರಾಧವಾಗಿದೆ, ಭುವನಪ್ಪನವರೇ, ಆದರೆ ಅದು ಅರಿಯದೆ ಮಾಡಿದ ಅಪರಾಧ, ಅದೂ ಇನ್ನೂ ಎಷ್ಟು ದೂರ ಬೆಳೆಯುತ್ತಿತ್ತೋ ಏನೋ, ದೇವರು ನನಗೆ ನಿಮ್ಮನ್ನು ಬಂದು ನೋಡುವ ಬುದ್ಧಿ ಕೊಟ್ಟು ಬದುಕಿಸಿದ."

"ಅಪರಾಧವೇ....ನಿಮ್ಮಿಂದ! ನಾನದನ್ನು ನಂಬಲಾರೆ ದೇಸಣ್ಣ."

"ನಿಜ, ಅಪರಾಧ ಆಗಿದೆ. ನನ್ನಿಂದಲೇ ಆಗಿದೆ."

"ಅದೇನು ಹೇಳಿ?"

"ಕೇಳಿ ನನ್ನನ್ನು ದೂರ ಮಾಡುವುದಿಲ್ಲ ತಾನೇ?"

"ಉಂಟೆ! ಎಂಥ ಮಾತು! ನಿಮ್ಮನ್ನು ದೂರಮಾಡಿ ದುರ್ಗ ಬದುಕಲು ಸಾಧ್ಯವೇ? ಈ ದುರ್ಗವನ್ನು ಕಾಪಾಡುತ್ತಿರುವುದು ನಿಮ್ಮ ವಜ್ರ ಬಾಹು."

"ಅಷ್ಟು ಮಾತಿಗೆ ಅನರ್ಹನಾಗುವಂತಾಗಿದೇನೆ ಈಗ; ನಾಯಕರಿಗೆ ನಮ್ಮ ಮೇಲೆ ಏಕೆ ಸಂದೇಹವಿತ್ತೋ, ಏನು ಕಾರಣದಿಂದ ನಮ್ಮಲ್ಲಿ ಸಂಶಯ ಮೂಡಿತೋ ನಾನರಿಯೆ. ಆದರೆ ಅವರ ಸಂಶಯಕ್ಕೆ ಪಾತ್ರರಾಗುವಂಥ ಕೆಲಸವೇನೂ ನಮ್ಮಿಂದ ಆಗಿರಲಿಲ್ಲ."

"ನಾಯಕರು ಇದ್ದಾಗಲೂ ನೀವು ಸರ್ಜೇನಾಯಕರ ಪಕ್ಷ ಕಟ್ಟಿದ್ದಿರಲ್ಲವೇ?"

"ಹಾಗೆ ಪಕ್ಷ ಕಟ್ಟಿರಲಿಲ್ಲ, ದುರ್ಗಕ್ಕಾಗಿ ಧೀರ ಸರ್ಜೇನಾಯಕರ ಮಕ್ಕಳೆಂದು ಅಭಿಮಾನವಿತ್ತು, ಅವರಿಗೆ ಕೊಡಬೇಕಾದ ಸ್ಥಾನವನ್ನು

ನಾಯಕರು ಕೊಟ್ಟಿಲ್ಲವಲ್ಲಾ ಎಂದು ನಮ್ಮೆಲ್ಲರಿಗೂ ಅಸಮಾಧಾನವಿತ್ತು. ಇದ್ದ ಮಾತಿಗೆ ಇಲ್ಲ ಎಂದು ಹೇಳಲಾರೆ."

"ಸರಿ."

"ಅಷ್ಟು ಮಾತ್ರಕ್ಕೆ ನಾಯಕರು ನಮ್ಮಲ್ಲಿ ಸಂಶಯ ಪಡಬೇಕೇ ?"

"ನೀವಾದರೂ ಇದುವರೆಗೂ ಎಂದಾದರೂ ನಿಮ್ಮ ಅಸಮಾಧಾನಕ್ಕೆ ಕಾರಣವೇನೆಂದು ಯಾರಲ್ಲಾದರೂ ಹೇಳಿಕೊಂಡಿದ್ದಿರಾ ?"

"ಇಲ್ಲ, ನಮ್ಮ ನಮ್ಮಲ್ಲೇ ಆ ಮಾತಾಡಿಕೊಂಡಿದ್ದೆವು."

"ಅದೇ ತಪ್ಪಾಧುದು, ಎಲ್ಲರಿಗೂ ತಂದೆಗಳಂತಿದ್ದ ನಾಯಕರಲ್ಲಿ ನಿಮ್ಮ ಅಸಮಾಧಾನದ ವಿಷಯ ಏಕೆ ಹೇಳಲಿಲ್ಲ ?"

"ಅವರಿದುರು ನಾವು ಮಾತಾಡಬಹುದೇ—ಎಷ್ಟಾದರೂ ನಾವು ಅವರ ಚಾಕರರು."

"ನಿಜ, ಅವರಿದಿರು ಮಾತನಾಡಬಾರದು, ಆದರೆ ಹಾಗೆಂದು ಆ ವಿಷಯ ಅವರ ಬೆನ್ನ ಹಿಂದೆ ಮಾತನಾಡಿಕೊಳ್ಳುವುದು ಅದಕ್ಕಿಂತ ಹೆಚ್ಚಿನ ತಪ್ಪಲ್ಲವೇ ? ಅವರ ಇದಿರೇ ಖಂಡಿತವಾಗಿ ಮಾತನಾಡುವುದು ಹೆಚ್ಚೆಂದರೆ ಉದ್ಧಟತನವಾಗಬಹುದು. ಆದರೆ ಬೆನ್ನ ಹಿಂದೆ ಮಾತನಾಡುವುದು ದ್ರೋಹವಾಗುತ್ತದೆ. ದ್ರೋಹ ಉದ್ಧಟತನಕ್ಕಿಂತ ಹೆಚ್ಚಿನ ಪಾಪ, ಅಲ್ಲವೇ ದಳವಾಯಿಗಳೇ ?"

"ನಿಮ್ಮ ಮಾತು ಸತ್ಯ, ಆಗ ಅದು ಹಾಗೆ ಕಂಡಿರಲಿಲ್ಲ, ಕಂಡಿದ್ದರೆ ಆ ದ್ರೋಹ ನನ್ನಿಂದ ಘಟಿಸುತ್ತಿರಲಿಲ್ಲ. ಈಗ, ನಿಮ್ಮ ಮಾತು ಕೇಳಿದ ಬಳಿಕ ಎಲ್ಲವೂ ನಿಚ್ಚಳವಾಗಿ ಕಾಣುತ್ತಿದೆ,"

"ನೀವು ಆ ಮಾತಾಡಿದುದನ್ನು ಕೇಳಿ ಸಂತೋಷವಾಯಿತು ದೇಸಣ್ಣನವರೇ. ನಿಮಗೆ ನಮ್ಮೆಲ್ಲರ ಬಗ್ಗೆ ಇದ್ದ ಅಸಮಾಧಾನವನ್ನು ನಾನು ಬಲ್ಲೆ. ಅದಿರಲಿ, ಹಾಗೇ ಕೊಂಚ ನಾಯಕರ ದೃಷ್ಟಿಯಿಂದಲೂ ವಿಚಾರ ಮಾಡಿ. ಅವರ ಕಣ್ಣಿಗೆ ಕಂಡುದಿಷ್ಟು; ಅವರಿದಿರು ದಳವಾಯಿಗಳಾರೂ ಮನಬಿಚ್ಚಿ ಮಾತನಾಡುವುದಿಲ್ಲ. ಆದರೆ ತಮ್ಮ ಬೆನ್ನ ಹಿಂದೆ ಎಲ್ಲರೂ ಒಟ್ಟಗೆ ಕಲೆತು ಮಾತಾಡಿಕೊಳ್ಳುತ್ತಿದ್ದಾರೆ. ಯಾವ ಪಕ್ಷಕ್ಕೋ ಬೆಂಬಲಕೊಡುವ ಬಯಕೆ ಸೂಚಿಸುತ್ತಿದ್ದಾರೆ, ಅಪರೋಕ್ಷವಾಗಿ ಅವರ ಸ್ಥಾನದಲ್ಲಿ ನೀವೇ ಇದ್ದಿದ್ದರೆ, ಇದೆಲ್ಲಾ ನಿಮಗೆ ಏನೆಂದು ತೋರುತ್ತಿತ್ತು ದಳವಾಯಿಗಳೇ ?"

"ನನಗೀಗ ತಿಳಿಯುತ್ತಿದೆ—ಏನೆಂದು."

"ಇದು ತಮ್ಮ ವಿರುದ್ಧ ಒಳಸಂಚು ಮಾಡುತ್ತಿದ್ದಾರೆ, ಇದಿರುಪಕ್ಷ ಕಟ್ಟುತ್ತಿದಾರೆ ಎಂದೇ ತೋರುವುದಿಲ್ಲವೇ ?"

"ನಿಜ."

"ನಾಯಕರಿಗೆ ಹಾಗೇ ತೋರಿತು. ತಾವು ನೆಚ್ಚಿದ ದಳವಾಯಿಗಳು ತಮ್ಮಲ್ಲಿ ನಂಬಿಕೆದೋರದೆ ತಮಗೆ ತಾವು ಏನೋ ನಡಸುತ್ತಿದ್ದಾರೆ ಎನಿಸಿತು. ಆ ಕೊರಗಿನಿಂದ ಕಡೆಗಾಲಕ್ಕೆ ಅವರು ಎಷ್ಟು ವ್ಯಥೆಪಟ್ಟರು ಎಂಬುದನ್ನು ನೀವು ಕಾಣಿರಿ ದೇಸಣ್ಣನವರೇ—ಅವರ ಅಂತರಂಗವನ್ನರಿತ ನಾವೆಲ್ಲಾ ಬೆಂದು ಹೋದೆವು ಆ ಕಿಚ್ಚಿನಲ್ಲಿ. ದಳವಾಯಿಗಳಲ್ಲಿ ಅವರಿಗೆ ನಂಬಿಕೆ ತಪ್ಪಿದುದೇ ಕಾರಣವಾಗಿ, ಅವರಿಗೆ ನಮ್ಮಲ್ಲಿದ್ದ ನಂಬಿಕೆಯೂ ಕಡಮೆಯಾಯಿತು. ನೆಚ್ಚಿದವರೆಲ್ಲರಿಂದಲೂ ದೂರವಾಗಿ ತೊಳಲಾಡಿದರು. ಅವರು ನಮ್ಮಲ್ಲಿ ಹೇಳಿದ್ದರೂ ಈ ಅನ್ಯಾಯವಾಗಲು ಬಿಡುತ್ತಿರಲಿಲ್ಲ. ಆದರೆ ಯಾರನ್ನು ತಾನೇ ನಾವು ನಮ್ಮನ್ನು ನಂಬಿ ಎಂದು ಕೇಳುವುದು. ಹಾಗೆ ಕೇಳಿದರೆ ಯಾರು ತಾನೇ ನಮ್ಮನ್ನು ನಂಬುತ್ತಾರೆ? ನಂಬಿಕೆ ತಾನೇ ಲಭಿಸಬೇಕಾದಂಥ ವಸ್ತು; ಕೇಳಿ ಪಡೆಯಬಹುದಾದುದಂಥದಲ್ಲ. ಹೀಗೇ ಆಯಿತು—ದಳವಾಯಿಗಳಿಗೆ ನಮ್ಮಲ್ಲಿ ನಂಬಿಕೆ ಇರಲಿಲ್ಲ. ದೊರೆಗಳಿಗೂ ನಮ್ಮಲ್ಲಿ ನಂಬಿಕೆ ಸಾಲದಾಯಿತು. ಈ ಎರಡೂ ಸೇರಿ, ನಮ್ಮ ಕೈಬಾಯಿಗಳನ್ನು ಕಟ್ಟಿಹಾಕಿತು. ಯಾರ ದುರುದ್ದೇಶವೂ ಕಾರಣವಾಗದೆ, ಎಲ್ಲರ ಪ್ರೀತಿಯ ಬಲವಿದ್ದೂ ಸರ್ಜೇ ನಾಯಕರ ಮಕ್ಕಳಿಗೆ ಅನ್ಯಾಯವಾಯಿತು. ಅದಕ್ಕೇ ನಾನು ಅದನ್ನು ವಿಧಿಯ ಒಳಸಂಚು ಎಂದದ್ದು. ಏನೋ ಆಯಿತು—ಹೋಯಿತು. ಅದೆಲ್ಲಾ ಗತಕಾಲದ ಮಾತಾಯಿತು. ಕೈಮಿಂಚಿ ಹೋದುದಕ್ಕೆ ಹಳಹಳಿಸಿ ಫಲವೇನು? ಈಗ ನಾವು ಮುಂದೆ ಮಾಡುವುದನ್ನು ಯೋಚಿಸಬೇಕು. ಅಲ್ಲೂ ನಮಗೆ ಸ್ವಾತಂತ್ರ್ಯವಿಲ್ಲ. ನಾಯಕರ ಕಡೆಗಾಲದ ಇಚ್ಛೆ ನಮ್ಮ ಕೈ ಬಿಗಿದಿದೆ. ಆದ್ದರಿಂದ ಈ ಹೊತ್ತಿನಲ್ಲಿ ನಾನು ನಿಮ್ಮನ್ನು ಬೇಡುವುದಿಷ್ಟೇ ದೇಸಣ್ಣ—ಈಗಲಾದರೂ, ಮರದ ಕೊಂಬೆಗಳಂತೆ ಹತ್ತು ಕಡೆ ಮುಖ ತಿರುಗಿಸಿಕೊಂಡಿರುವ ನಾವೆಲ್ಲಾ ಒಂದಾಗೋಣ. ಅನ್ಯಾಯ

ವಾಗಿರುವವರಿಗೆ ಕಾಲಿಗೆ ಬಿದ್ದು ಕ್ಷಮೆ ಬೇಡಿ, ನಾಯಕರ ಇಚ್ಛೆ ನಡ ಸೋಣ. ಈ ಹೊತ್ತಿನಲ್ಲಿ ಈಗ ಒದಗಿರುವ ವಿಷಸಮಸ್ಯೆಯನ್ನು ಬಗೆ ಹರಿಸಿ, ಇಬ್ಬಣವನ್ನು ಕೊನೆಗಾಣಿಸಲು ನನಗೊಂದು ದಾರಿ ತೋರು ತ್ತಿದೆ. "

" ಏನು ಹೇಳಿ? "

" ನಾಯಕರ ಬಯಕೆಯೂ ನಡೆಯಬೇಕು, ಆಗಿರುವ ಅನ್ಯಾಯ ವನ್ನೂ ಆದಷ್ಟು ಸರಿಪಡಿಸಬೇಕು. ಇದೇ ಸೂಕ್ತಮಾರ್ಗವಲ್ಲವೇ ? "

" ಹೌದು. "

" ಅದಕ್ಕೆ ನಾನು ಹೇಳುವುದಿಷ್ಟೆ—ನಾಯಕರ ಬಯಕೆಯಂತೆ ಓಬಣ್ಣನಾಯಕರು ಸಿಂಹಾಸನಾರೋಹಣ ಮಾಡಲಿ. ಆದರೆ ಆತನಿಗಿನ್ನೂ ಚಿಕ್ಕವಯಸ್ಸು. ರಾಜ್ಯವನ್ನಾಳುವ ಸಾಮರ್ಥ್ಯವಿಲ್ಲ. ಆದುದರಿಂದ ಆತ ಮೂಲವಿಗ್ರಹವಾಗಿ ಸಿಂಹಾಸನದ ಮೇಲಿರಲಿ. ಲಿಂಗಣ್ಣನಾಯಕರು ಹಿರಿಯರಾಗಿ, ಉತ್ಸವ ಮೂರ್ತಿಯಾಗಿ ರಾಜ್ಯದ ಆಡಳಿತವನ್ನು ನಡಸಿ ಕೊಂಡು ಹೋಗಲಿ. ಅದರಿಂದ ನಾಯಕರ ಇಚ್ಛೆಯೂ ನಡೆದಂತಾಗು ತ್ತದೆ, ಸರ್ಜೇನಾಯಕರ ಮಕ್ಕಳಿಗೂ ತೀರಾ ಅನ್ಯಾಯವಾಯಿತೆಂದು ಯಾರೂ ಆಡಲು ಅವಕಾಶವಿರುವುದಿಲ್ಲ. ನನಗೆ ತೋರುವುದಿಷ್ಟೆ. ನಿಮಗೂ ಇದು ಸರಿಕಂಡರೆ ಸಂತೋಷ. "

" ನೀವು ಹೇಳಿದ ಹಾಗೆ ಆದರೆ ಆಗಬಹುದು. ಆದರೆ ಉತ್ಸವ ಮೂರ್ತಿಯ ಸ್ಥಾನ ಲಿಂಗಣ್ಣನಾಯಕರಿಗೆ ಹೇಗೆ ಬರುತ್ತದೆ? "

" ಹೇಗೆ ಎಂದರೆ—ನಾವೆಲ್ಲಾ ಒಪ್ಪುವುದರಿಂದ. ಅದರಲ್ಲಿರುವ ತೊಡಕು ನಾನು ಬಲ್ಲೆ ದೇಸಣ್ಣ. ಅದಕ್ಕೂ ಒಂದು ಪರಿಹಾರೋಪಾಯ ಯೋಚಿಸಿದೇನೆ. "

" ಏನು ? "

" ನಾಯಕರನಂತರ ದೊಡ್ಡ ಅಧಿಕಾರ ಪ್ರಧಾನಿಗಳದಲ್ಲವೇ ? "

" ಹೌದು....ಆದರೆ....ನೀವು....? "

" ಮೊದಲು ನಾನು ಹೇಳುವುದನ್ನು ಕೇಳಿ. ಆಮೇಲೆ ಅದರ ಸೂಕ್ತಾಸೂಕ್ತತೆಯನ್ನು ಚರ್ಚಿಸೋಣ. ಆಗಬಹುದೇ ? "

" ಹೂ. ಹೇಳಿ. "

" ಓಬಣ್ಣನಾಯಕರಿಗೆ ಪಟ್ಟಾಧಿಕಾರವಾದಂದೇ, ಲಿಂಗಣ್ಣನಾಯಕರಿಗೆ ಪ್ರಧಾನಿ ಪಟ್ಟ ಕಟ್ಟಬೇಕೆಂದು ಮಾಡಿದ್ದೇನೆ. "

" ಆ ! ಅದು ಹೇಗೆ ಸಾಧ್ಯ ? "

" ಏಕೆ ಸಾಧ್ಯವಲ್ಲ ? "

" ದೊರೆತನದಂತೆಯೇ ಪ್ರಧಾನಿಪಟ್ಟವೂ ವಂಶಪಾರಂಪರ್ಯವಾಗಿ ಬರಬೇಕಾದ ಅಧಿಕಾರ. ಅದು ನಿಮ್ಮ ಮನೆಗೆ ಮೀಸಲು "

" ನಿಜ. ಈ ಸ್ವಾಭಾವಿಕ ಸನ್ನಿವೇಶಗಳಲ್ಲಿ ಹಾಗೇ ಆಗಬೇಕು. ಆದರೆ ಇಂದಿನದು ಸ್ವಾಭಾವಿಕ ಸನ್ನಿವೇಶವಲ್ಲ, ವಿಶೇಷ ಪರಿಸ್ಥಿತಿ. ಇದಕ್ಕೆ ತಲೆಬಾಗಿ ಲಿಂಗಣ್ಣನಾಯಕರು ತಮಗೆ ಪ್ರಾಪ್ತವಾಗಬೇಕಾಗಿದ್ದ ಸಿಂಹಾಸನಾಧಿಕಾರವನ್ನು ಓಬಣ್ಣನಾಯಕರಿಗೆ ದಾನಮಾಡಲಿಲ್ಲವೇ ? ಅದರಂತೆ ನಾನೂ ದಾನಮಾಡಬೇಕೆಂದಿದ್ದೇನೆ. ಔದಾರ್ಯದಲ್ಲಿ ಹಿರಿಯ ಎನಿಸಿಕೊಂಡ ನಾನು, ಆ ಕಿರಿಯರಿಗಿಂತ ಸಣ್ಣವನಾಗಲು ನನಗೆ ಇಚ್ಛೆಯಿಲ್ಲ ದೇಸಣ್ಣ. ಲಿಂಗಣ್ಣನಾಯಕರ ಮನದ ಔದಾರ್ಯವನ್ನು ಕಂಡಂದೇ ಭೂತನಾಥೇಶ್ವರ ನನ್ನ ಹೃದಯದಲ್ಲಿ ಕುಳಿತು ಈ ಮಾತು ಹೇಳಿದ— ಭುವನಪ್ಪಾ ಈಗ ಹೇಳು, ನೀನು ದೊಡ್ಡವನೋ, ಲಿಂಗಣ್ಣನಾಯಕ ದೊಡ್ಡವನೋ ಎಂತ. ಸ್ವಾಮಿಯ ಮಾತು ಕೇಳಿ ನನಗೂ ಸಿಟ್ಟು ಬಂತು. ವಯಸ್ಸಿನಲ್ಲಿ ಕಿರಿಯನಾದವನನ್ನು ಕರೆದುಕೊಂಡು ಬಂದು ನನಗಿಂತ ಅವನನ್ನು ದೊಡ್ಡವನನ್ನಾಗಿ ಮಾಡುತ್ತೀಯಾ ? ನಾನೇನು ಕಡಮೆ. ಅವರು ಅವರ ಪೀಠ ಕೊಟ್ಟರು ; ನಾನೂ ನನ್ನ ಪೀಠ ಬಿಟ್ಟೆ ಎಂತ. ಆ ಮಾತು ಕೇಳಿ ಸ್ವಾಮಿ ತೃಪ್ತನಾಗಿ ನಕ್ಕ. ಸರಿಯಾಯಿತಲ್ಲವೇ ನಾನು ಹೇಳಿದ್ದು ? "

ತಾನು ಮಾಡಿದ ಕೆಲಸಕ್ಕೆ ಹಿರಿಯರ ಒಪ್ಪಿಗೆ ಕೇಳುವ ಹುಡುಗನಂತೆ ಕೇಳಿದರು ಭುವನಪ್ಪನವರು. ಅವರ ತ್ಯಾಗದ ಹಿರಿಮೆಯನ್ನರಿತು ಅವನ ಹೃದಯದಲ್ಲಿ ಮೆಚ್ಚುಗೆ ತುಂಬಿ ಬಂದು ಕಣ್ಣಲ್ಲಿ ತುಳುಕಿತು. ಆ ಮೆಚ್ಚುಗೆಯಲ್ಲೇ ಅವರಿಗೆ ಕೈಮುಗಿದು ಹೇಳಿದ :

" ಭುವನಪ್ಪನವರೇ, ನೀವು ಮನುಷ್ಯರಲ್ಲ ಭೂತನಾಥೇಶ್ವರನೇ

ನಿಮ್ಮ ರೂಪದಲ್ಲಿ ನಮ್ಮಿದುರು ಆಡುತ್ತಿದ್ದಾನೆ. ನಿಮ್ಮ ಮಾತಿಗೆ ಹೌದು ಅಲ್ಲ ಎನ್ನುವಷ್ಟು ಶಕ್ತಿಯೂ ಪಾಮರರಾದ ನಮಗಿಲ್ಲ. ಆದರೂ ತಾವು ಕೊಂಚ ಯೋಚಿಸಬೇಕು."

"ಏನು?"

"ನಿಮ್ಮ ತ್ಯಾಗ ಮಹತ್ತರವಾದದ್ದು. ಆದರೆ ಇದರಿಂದ ನಿಮ್ಮ ಮಕ್ಕಳಿಗೆ ವಂಚನೆಮಾಡಿದಂತಾಗುವುದಿಲ್ಲವೇ?"

"ಹೇಗೆ?"

"ನಿಮ್ಮ ಬಳಿಕ ಅವರು ಪ್ರಧಾನಿಗಳಾಗಬೇಕಾದವರು. ಅವರಿಗೆ ಇದು ತಪ್ಪಿಹೋಗುತ್ತದೆಯಲ್ಲಾ?"

"ಅಷ್ಟೇ ತಾನೇ. ನಮ್ಮ ತಂದೆ ನನಗೆ ಪ್ರಧಾನಿ ಪಟ್ಟ ತಪ್ಪಿಸಿದ ಎಂದುಕೊಳ್ಳಬಹುದು ಅವನು. ಆದರೆ ಅವನಿಗೆ ದೇವರು ಕೊಟ್ಟ ಪದವಿಯನ್ನು ಯಾರು ತಪ್ಪಿಸಲು ಸಾಧ್ಯ ದೇಸಣ್ಣ? ಹೇಗೂ ಅವನಿಗೆ ಪ್ರಧಾನಿ ಪಟ್ಟಕ್ಕಿಂತ ಹಿರಿದಾದ ಪಟ್ಟ ಕೊಟ್ಟಿದ್ದಾನೆ ಭೂತನಾಥೇಶ್ವರ. ಆ ಅಧಿಕಾರ ನಡಸು ಎಂದು ಹೇಳುತ್ತೇನೆ."

"ಏನು ಅಧಿಕಾರ?"

"ಬ್ರಾಹ್ಮಣಜನ್ಮದಿಂದ ಬಂದ ದೊಡ್ಡ ಪದವಿ. ದೊರೆ, ಪ್ರಧಾನಿ ದೊಡ್ಡವರು ನಿಜ; ಆದರೆ ಅವರನ್ನು ಹರಸುವ ಅಧಿಕಾರ ಕರ್ಮ ಬ್ರಾಹ್ಮಣನಾದ ಬ್ರಾಹ್ಮಣನಿಗಿದೆ. ಯಜ್ಞೇಶ್ವರನ ಆರಾಧನೆ ಮಾಡುವ ಪದವಿ ಯಾರಿಗಿದೆ ಹೇಳಿ? ಅದನ್ನು ಬಿಟ್ಟು ಈ ಸಣ್ಣದಕ್ಕೆ ಪರದಾಡಿದರೆ ಬಂದದ್ದೇನು?"

—ಭುವನಪ್ಪನವರು ಆ ಮಾತನ್ನು ನಗುನಗುತ್ತಾ ಹೇಳಿದರೂ ಅದರ ತೂಕಕ್ಕೆ ಕುಸಿದು ಹೋದ ದೇಸಣ್ಣ.

ಹಣತೆಯನ್ನು ಕಂಡೇ ದಿಗ್ಭ್ರಮೆಗೊಳ್ಳುವ ಮಗುವಿನ ಕಣ್ಣೆದುರು ಸೂರ್ಯನನ್ನೇ ಹಿಡಿದು ಇದು ಏನು ಎಂದು ಕೇಳಿದರೆ ಏನು ತಾನೇ ಹೇಳಲು ಸಾಧ್ಯ ಭುವನಪ್ಪನವರೇ. ನಾನಂಥ ಹಸುಳೆ, ಪಾಮರ. ನಿಮ್ಮಂಥ ಹಿರಿಯರಿದುರು ಬದುಕುವ ಭಾಗ್ಯ ನಮ್ಮದಾದದ್ದು ಹೆಚ್ಚಿನ ಪುಣ್ಯ. ಆ ಪುಣ್ಯಕ್ಕೆ ಅರ್ಹರಾಗಿ ಬದುಕಿದರೆ ಸಾಕು. ಮನಸ್ಸಿನಲ್ಲಿ ಏನೇನೋ

ವಿಷ, ಕಸಿರು ತುಂಬಿಕೊಂಡು ಬಂದಿದ್ದೆ. ಎಲ್ಲಾ ತೊಳೆದು ಹೋಗಿ ಗಂಗೆಯಲ್ಲಿ ಸ್ನಾನಮಾಡಿದಂತಾಯಿತು. ಇನ್ನು ನಾನು ಹೇಳಬೇಕಾದದ್ದು ಒಂದೇ ಒಂದು ಮಾತು ಉಳಿದಿದೆ. ಆಗಲೇ ಹೇಳಬೇಕೆಂದುಕೊಂಡೆ. ಮಾತು ಎತ್ತಲೋ ತಿರುಗಿತು."

"ಹೇಳುವುದು ಇನ್ನೂ ಬಾಕಿ ಉಳಿದಿದೆಯೋ? ಹೇಳಿಬಿಡಿ. ಯಾವುದನ್ನೂ ಮನಸ್ಸಿನಲ್ಲಿಟ್ಟುಕೊಂಡು ಹೋಗಬೇಡಿ."

"ಇದು ಮನಸ್ಸಿನಲ್ಲಿಟ್ಟುಕೊಂಡರೆ ತಲೆಹೋಗಬಹುದಾದಂಥ ಮಾತು. ನೀವು ಭೂಮಿತೂಕದ ಮನುಷ್ಯರು. ಸಣ್ಣ ಮಾತು ಸಣ್ಣ ವಿಚಾರ ನಿಮ್ಮ ಹತ್ತಿರ ಹರಿದಾರಿಯೊಳಗೂ ಸುಳಿಯುವುದಿಲ್ಲ. ನಿಮ್ಮ ಪುಣ್ಯವನ್ನೆಲ್ಲಾ ಧಾರೆ ಎರೆದು, ಈ ದುರ್ಗವನ್ನು ಬದುಕಿಸಬೇಕೆಂದು ಹೊರಟಿದ್ದೀರ. ಆದರೆ ಈ ಹೊತ್ತಿನಲ್ಲಿ ನೀವು ಮೈಯೆಲ್ಲಾ ಕಣ್ಣಾಗಿರಬೇಕು. ಯಾರನ್ನೂ ನಂಬಬಾರದು. ಇಲ್ಲದೆ ಹೋದರೆ ಎಲ್ಲಾ ವ್ಯರ್ಥವಾಗಿ ಹೋಗಬಹುದು."

"ಏಕೆ?"

—ದೇಸಣ್ಣನ ಮಾತು ಕೇಳಿ ತಬಕ್ಕನೆ ಸಿಡಿದು ಕೇಳಿದರು. ಭುವನಪ್ಪ.

"ಈಚೆಗೆ ನಮ್ಮವರಲ್ಲೇ ಒಬ್ಬಿಬ್ಬರಲ್ಲಿ ಅಡ್ಡಮಾತು ಆರಂಭವಾಗಿದೆ. ಮೂಕ ಅಸಮಾಧಾನವಾಗಿದ್ದುದು ಪೌರುಷದ ಮಾತುಗಳಿಗೂ ತಿರುಗಿದೆ. ಇದನ್ನು ನಾವು, ಹಿರಿಯರು ಮೊಳಕೆಯಲ್ಲೇ ಮುರಿಯಬಹುದಾಗಿತ್ತು. ಆದರೆ ನಾವೂ ಅಸಮಾಧಾನದಿಂದ ಮೊದಮೊದಲು ಅದಕ್ಕೆ ನೀರೆರೆದು, ಈಗ ಬೆಳೆದು ನಿಂತಿರುವ ಅದನ್ನು ನೋಡಿ ನಾವೇ ಗಾಬರಿಯಾಗುವಂತಾಗಿದೆ. ನಾನಾಗಲೇ ತಮ್ಮಲ್ಲಿ ಒಂದು ಮಾತು ಬೇಡಿಕೊಂಡೆ—ನನ್ನಿಂದ ಒಂದು ಅಪರಾಧವಾಗಿದೆ ಕ್ಷಮಿಸಬೇಕು ಎಂತ. ನಾನು ಹೇಳಬೇಕೆಂದಿದ್ದುದು ಇದೇ ವಿಷಯ. ದಳವಾಯಿಗಳು ಅಸಮಾಧಾನವಾಗಿದ್ದುದು ಸುಳ್ಳಲ್ಲ. ಆವರಲ್ಲಿ ಅಸಮಾಧಾನವಿತ್ತು. ಆದರೆ ಯಾರಿಗೂ ತಮ್ಮೊಳಗಿದ್ದ ಅಸಮಾಧಾನವನ್ನು ಹೊರಗೆ ಆಡಿತೋರಿಸುವಷ್ಟು ಧೈರ್ಯವಿರಲಿಲ್ಲ. ಒಳಗೇ ಹುದುಗಿಟ್ಟುಕೊಂಡಿದ್ದರು. ಅದನ್ನು ಮೊದಲು ಆಡಿತೋರಿಸಿದವನು ನಾನು. ಹಿರಿಯನಾದ ನಾನೇ ಬಾಯಿಬಿಟ್ಟು ಹೇಳಿದ ಮೇಲೆ ಉಳಿದವರ ನಾಲಗೆಗೂ

ಬಲ ಬಂತು. ನಾವು ದಳವಾಯಿಗಳು ಎಲ್ಲಾ ಒಂದಾಗಬೇಕು ಎಂದು ಹೇಳಿದೆ. ಒಂದಾಗುವ ವರೆಗೂ ನಾನೇ ಗುಂಪಿಗೂ ಮುಖ್ಯಸ್ಥನಾಗಿದ್ದೆ. ಈಗ ಏಕೋ ಅದೆಲ್ಲಾ ನನ್ನ ಕೈಮೀರಿ ಹೋಗಿದೆ. ನಾನೂ ಬೇರೆಯವರ ಕೈಯ ಕತ್ತಿಯಾಗಿ ಹೋದನೇನೋ ಎಂದು ಭಯವಾಗುತ್ತಿದೆ. ಅಷ್ಟೇ ಅಲ್ಲ, ಅದರಿಂದ ಎಂಥೆಂಥ ವಿಪತ್ತು ಬರಬಹುದೋ ಎನಿಸಿ ಮೈ ನಡುಗುತ್ತಿದೆ. ಅದನ್ನು ಮುರಿಯುವ ಶಕ್ತಿ ಇಲ್ಲ. ನೀವೇ ಅದಕ್ಕೆ ಶಕ್ತರು. ಅದನ್ನು ನಿಮ್ಮ ಮುಂದೆ ಹೇಳಬೇಕು ಎಂದು ಬಂದೆ. ಬರುವ ಮೊದಲು ನಿಮ್ಮ ವಿಷಯದಲ್ಲೇ ಕೆಟ್ಟ ಮಾತು ಕೇಳಿದ್ದೆ. ಈಗ ಅದು ಸುಳ್ಳು ಎಂದು ನಂಬಿಕೆಯಾಯಿತು. ನೀವು ಎಚ್ಚರವಾಗಿದ್ದು ದುರ್ಗವನ್ನು ಕಾಪಾಡಬೇಕು."

ದೇಸಣ್ಣ ನಾಡಿದ ಒಂದೊಂದು ಮಾತನ್ನೂ ಮೈಯೆಲ್ಲಾ ಕಿವಿಯಾಗಿ ಲಕ್ಷ್ಯಗೊಟ್ಟು ಕೇಳಿದರು ಭುವನಪ್ಪನವರು; ಆ ಮಾತು ಒಂದೊಂದೂ ಹೃದಯದೊಳಕ್ಕಿಳಿದು ಸ್ಥಿರವಾಗಿ ನೆಲಸಿದ ಮೇಲೆ, ಕೇಳಿದರು—

" ಈ ಭೀತಿ ಎಲ್ಲಿಂದ ಬರಬಹುದು, ಯಾರು ಇದರ ಮುಂದಾಳಾಗ ಬಹುದು ಎಂದು ಸೂಚನೆಯನ್ನೇನಾದರೂ ಕೊಡಬಲ್ಲಿರಾ ನೀವು ? "

ಭುವನಪ್ಪನವರ ಪ್ರಶ್ನೆಯನ್ನು ಕೇಳಿ ದೇಸಣ್ಣ ಒಂದು ಗಳಿಗೆ ವಿಚಾರಕ್ಕೆ ಒಳಗಾದ. ಹೇಳಬಹುದು ಎಂದುಕೊಂಡ ಮಾತನ್ನು ಹೇಳಬಹುದೋ ಬೇಡವೋ ಎಂದು ತುಯ್ದು ತುಯ್ದು ನೋಡಿ, ಆದದ್ದಾಗಲಿ ಹೇಳಿಯೇ ಬಿಡುವುದೆಂದು ನಿರ್ಧಾರ ಮಾಡಿ ಹೇಳಿದ—

" ಇಂಥವನ ರೂಪದಲ್ಲೇ ಕೇಡು ಬರಬಹುದೆಂದು ಖಚಿತವಾಗಿ ನಾನು ಹೇಳಲಾರೆ. ಆದರೆ, ನನಗಿರುವ ಅನುಮಾನವನ್ನು ನಿಮ್ಮ ಕಿವಿಯ ಮೇಲೂ ಹಾಕುವುದು ಮೇಲು ಎಂಬ ಭಾವನೆಯಿಂದ ಹೇಳುತ್ತಿದ್ದೇನೆ. ತಾವೂ ಹಾಗೇ ಭಾವಿಸಬೇಕು."

" ಆಯಿತು, ಹೇಳಿ."

" ದಳವಾಯಿ ಮುದ್ದಣ್ಣ ಮತ್ತು ಅವನ ತಮ್ಮಂದಿರ ವಿಷಯದಲ್ಲಿ ತಾವು ಎಚ್ಚರವಾಗಿರುವುದು ಮೇಲು. ಅರಮನೆಯವರು ಓಬಣ್ಣ ನಾಯಕರನ್ನು ಪಟ್ಟಕ್ಕೆ ತರುವುದಾದರೆ ಲಿಂಗಣ್ಣನಾಯಕರ ಹೆಸರಿನಲ್ಲಿ ಅವನ್ನು ಪ್ರತಿಭಟಿಸಬೇಕೆಂದಿದ್ದವರು ಈಗ ಲಿಂಗಣ್ಣನಾಯಕರೇ ತಮ್ಮ

ಗದು ಬೇಡವೆಂದ ಮೇಲೆ ಚಿಕ್ಕಣ್ಣನಾಯಕರ ಹೆಸರಿನಲ್ಲಿ ಆ ಮಾತು ಆಡಲಾರಂಭಿಸಿದಾರೆ. ಚಿಕ್ಕಣ್ಣನಾಯಕರು ಲಿಂಗಣ್ಣನಾಯಕರಲ್ಲ. ಅಷ್ಟನ್ನು ನೀವು ತಿಳಿದಿರಬೇಕು. ಅದು ಎತ್ತ ಒಲಿಯುವುದೋ ನಾನು ಹೇಳಲಾರೆ. ಆದ್ದರಿಂದ ನೀವು ಎಚ್ಚರವಾಗಿರಬೇಕು. ಹಾಗೆಯೇ ನಿಮ್ಮ ವಿಷಯದಲ್ಲೂ ಜನರ ಮನಸ್ಸು ಕೆಡಿಸುವ ಮಾತು ಅಲ್ಲಲ್ಲಿ ಕೇಳಿ ಬರುತ್ತಿದೆ. ನೀವು ನಿಮ್ಮ ವಿಷಯದಲ್ಲೂ ಎಚ್ಚರವಾಗಿರಬೇಕು, ಬರ ಬಹುದಾದ ವಿಪತ್ತನ್ನು ಮೊಳಕೆಯಲ್ಲೇ ಮುರಿಯಲು ಒಂದೇ ಒಂದು ದಾರಿ ಇದೆ ಎಂದು ನನಗೆ ತೋರುತ್ತದೆ."

"ಏನು ?"

—ಯಾವುದೋ ಪಾತಾಳದಡಿಯಿಂದ ಪ್ರಯತ್ನ ಪೂರ್ವಕವಾಗಿ ಹೊರಹೊಮ್ಮುವಂತೆ ಮಾತು ಭುವನಪ್ಪನವರ ಬಾಯಿಂದ ಬಂತು,

"ಆದಷ್ಟು ಬೇಗ ಪಟ್ಟಾಭಿಷೇಕ, ನೀವು ಹೇಳಿದ ಕೆಲಸ ಮುಗಿದು ಹೋಗಿಬಿಟ್ಟರೆ, ಈ ಅಸಮಾಧಾನವನ್ನೆಲ್ಲಾ ಕುಡಿಯಲ್ಲೇ ಚಿವುಟಿದಂತಾಗು ತ್ತದೆ. ಸಿಂಹಾಸನ ಬರಿದಾಗಿರುವಷ್ಟು ದಿನ ಇಂಥ ಮಾತುಗಳು, ಭೀತಿ ತಪ್ಪಿದ್ದಲ್ಲ."

"ನಿಜ ನನಗೂ ಅದು ಗೊತ್ತು."

"ನಾಗತಿಯವರಿಗೂ ಈ ಎಲ್ಲ ಮಾತನ್ನು ಹೇಳಿ, ಜೇಗ ಮುಂದಿನ ಏರ್ಪಾಟು ಮಾಡಬೇಕು."

"ಹೂ. ಹೇಳುತ್ತೇನೆ. ದೈವೇಚ್ಛೆ ಹೇಗಿದೆಯೋ ಹಾಗಾಗಲಿ. ನಿಮ್ಮಂಥ ನಿಷ್ಠರ ಕಾವಲ ಬಲವಿದ್ದರೆ ಏನೂ ಕೆಡಕಾಗುವುದಿಲ್ಲವೆಂದೇ ನಾನು ನಂಬಿದೇನೆ."

—ಎಂದರು ಭುವನಪ್ಪ.

"ನಿಮ್ಮ ಮುಂದೆ ನಾವು ಯಾವ ಗಿಡದ ಕೊಪ್ಪಲು. ನಿಮ್ಮ ಹರಕೆಯೇ ಈ ದುರ್ಗವನ್ನು ಕಾಯುವ ವಜ್ರಕೋಟೆ" ಎಂದ ದೇಸಣ್ಣ.

ಅವನ ಹೃದಯದಾಳದಿಂದ ಮೂಡಿಬಂದ ಆ ಮಾತಿನಲ್ಲಿ ಪ್ರಾರ್ಥ ನೆಯ ಧ್ವನಿ ಇದ್ದಂತೆಯೇ, ಭರವಸೆಯ ಬಲವೂ ಇದ್ದಿತು. ಆ ಮಾತಿಗೆ ಭುವನಪ್ಪನವರು ಏನೂ ಉತ್ತರ ಕೊಡದೆ ಸುಮ್ಮನೆ ಕುಳಿತಿ

ದರು. ಅವರ ಮನಸ್ಸು ಬೇರಾವುದೋ ಲೋಕವಲ್ಲಿದ್ದುದನ್ನು ಕಂಡು ದೇಸಣ್ಣ ಅವರಿಂದ ಹೋಗಲು ಅಪ್ಪಣೆ ಪಡೆದು ತೆರಳಿದ.

ದೇಸಣ್ಣ ಹೋಗುವ ವರೆಗೂ ಆತನ ಮಾತಿನಿಂದ ತಮ್ಮಲ್ಲಿ ಮೂಡಿದ ಚಿತ್ತಕ್ಷೋಭೆಯನ್ನು ಕೊಂಚವೂ ತೋರಿಸದೆ, ಸ್ಥೈರ್ಯದಿಂದ ಮಾತನಾಡುತ್ತಿದ್ದ ಭುವನಪ್ಪನವರಲ್ಲಿ, ಅದುವರೆಗೂ ಹುದುಗಿದ್ದ ಯೋಚನೆಗಳು, ಆತನ ಬೆನ್ನು ಮರೆಯಾಗುತ್ತಲೇ ಎದ್ದು ಕಟುಕುತ್ತ ಕಾಡುಕುದುರೆಯಂತೆ ಹುಚ್ಚಾಪಟ್ಟೆ ಓಡಿ, ಅವನ ಹೃದಯನ್ನು ಅಲ್ಲಾಡಿಸಿದುವು. ಯಾವುದೋ ಅಸ್ಪಷ್ಟರೂಪದ ಭಯಂಕರ ಭೀತಿಯೊಂದು ಭೀಮಾಕಾರವಾಗಿ ಬೆಳೆದು, ಅವರ ಸುತ್ತಲೂ ತನ್ನ ತೋಳು ಚಾಚಿ ನಿಂತಂತಿತ್ತು. ಭಯಾನಕ ಮೌನತುಂಬಿದ ರುದ್ರಭೂಮಿಯಲ್ಲಿ ದಾರಿಗೆಟ್ಟು, ಭೀತಿ ಬೆನ್ನಟ್ಟಿ ಅಲೆಯುತ್ತಿರುವ ಪಾಂಥನಂತಿತ್ತು ಅವನ ಮನಸ್ಸು. ಅವರು ಹಿಂದೆಂದೂ ಅನುಭವಿಸದಿದ್ದಂಥ ವಿಚಿತ್ರ ಅಧೀರತೆ ಅವರ ಹೃದಯದ ಬೇರನ್ನೇ ಹಿಡಿದು ಅಲ್ಲಾಡಿಸುತ್ತಿತ್ತು. "ಒಳಿತಾಗಲಿಲ್ಲ. ಇದು ಒಳಿತಾಗಲಿಲ್ಲ" ಎಂದು ಹತ್ತಾರು ಬಾರಿ ನುಡಿಯಿತು ಆ ಹೆದರಿದ ಮನಸ್ಸು. ಲೊಚಗುಟ್ಟಿತ ಹಲ್ಲಿಯಂತೆ. ಅವರ ಮಿದುಳ ಕಗ್ಗವಿಯಲ್ಲಿ ಯಾವುದೋ ಪಿಶಾಚ ಧ್ವನಿ ಗಹಗಹಿಸಿ ನಗುತ್ತಿತ್ತು. ಹಜಾರದಲ್ಲಿ ಕವಿಯುತ್ತಿದ್ದ ಅಸ್ತಮಾನಾನಂತರದ ಸಂಜೆಗತ್ತಲು, ಅವರ ಮೈಯ ನರನರಗಳಲ್ಲೂ ವ್ಯಾಪಿಸಿ, ರಕ್ತವನ್ನು ಕಪ್ಪಾಗಿ ಹೆಪ್ಪುಗಟ್ಟಿಸುತ್ತಿರುವಂತಿತ್ತು. ಹತ್ತಾರು ಅಶುಭ ಚಿಂತೆಗಳ ಪ್ರಚಂಡ ದಾಳಿಯಲ್ಲಿ ದಿಗ್ಭ್ರಾಂತರಾಗಿ ಮೈಮರೆತು ಕುಳಿತಿದ್ದರು ಭುವನಪ್ಪನವರು.

ಆ ವೇಳೆಗೆ, ಅವರ ಪೂಜಾಮಂದಿರದ ಪರಿಚಾರಕ ಬ್ರಾಹ್ಮಣ ಬಂದು "ಸಾಯಂಪೂಜೆಗೆ ಎಲ್ಲವೂ ಸಿದ್ಧವಾಗಿದೆ" ಎಂದು ಹೊತ್ತು ತಿಳಿಸಿ ಎಚ್ಚರಿಸದಿದ್ದರೆ ಎಷ್ಟು ಹೊತ್ತು ಹಾಗೇ ಆ ಮೈಮರೆವಿನಲ್ಲಿ ಕುಳಿತಿರುತ್ತಿದ್ದರೋ ಏನೋ. ಆತ ಬಂದು ಎಚ್ಚರಿಸಿದಾಗ ಮೈಯರಿತು, "ಓ! ಅಷ್ಟು ಹೊತ್ತಾಯಿತೆ!" ಎಂದು, ಸ್ನಾನ ಗೃಹಕ್ಕೆ ತೆರಳಿದರು. ಸ್ನಾನಮಾಡುವಾಗಲೂ ಅವರ ಬುದ್ಧಿ ಎತ್ತಲೋ ಅಲೆಯುತ್ತಿತ್ತು. ಪರಿಚಾರಕ ತುಂಬಿಕೊಡುತ್ತಿದ್ದ ನೀರನ್ನು ಮೈಮೇಲೆ ಸುರಿದುಕೊಳ್ಳು

ತ್ತಲೇ ಇದ್ದರು. “ಮೈ ಒರಸಿಕೊಳ್ಳುವ ವಸ್ತ್ರ ಕೊಡಲೇ?” ಎಂದು ಕೇಳಿದಾಗ, ಸ್ನಾನ ಮಾಡುತ್ತಿರುವುದರ ಅರಿವಾಗಿ, ತಮ್ಮ ಮೈಮರವಿಗಾಗಿ ನಾಚಿ, ಮೈ ಒರಸಿಕೊಂಡು, ಮಡಿಯುಟ್ಟು ಪೂಜಾಮಂದಿರಕ್ಕೆ ತೆರಳಿದರು.

ಅಲ್ಲಿಯೂ ಅದೇ ಮೈಮರವು, ಎಲ್ಲಿಯೋ ಅಲೆವ ಜ್ಞಾನ. ಹಲವಾರು ವರ್ಷಗಳ ಬಳಕೆಯಿಂದಾಗಿ ಮುಖದಿಂದ ಧಾರಾಕಾರವಾಗಿ ಪ್ರವಹಿಸಬೇಕಾಗಿದ್ದ ಮಂತ್ರಝುರಿಯೂ ತಟಕ್ಕನೆ ತಡೆದು ನಿಲ್ಲುತ್ತದೆ, ಹಿಂದು ಮುಂದಾಗುತ್ತದೆ, ಉಚ್ಚಾರಣೆ ವಿಕಾರವಾಗುತ್ತದೆ. ಎಷ್ಟು ಪ್ರಯತ್ನಪಟ್ಟರೂ ಬುದ್ಧಿ ಹತೋಟಿಗೆ ಬರುತ್ತಿಲ್ಲ. ಹತ್ತಾರು ಬಾರಿ ಆ ಪ್ರಯತ್ನ ಮಾಡಿ, ಕಡೆಗದು ಪ್ರಯೋಜನಕಾರಿಯಲ್ಲವೆಂದರಿತು, “ಈ ದಿನ ನಿಶ್ಚಿಂತೆಯಾಗಿ ದೇವತಾಕಾರ್ಯ ಮಾಡುವ ಪುಣ್ಯ ಲಭ್ಯವಿಲ್ಲ” ಎಂದುಕೊಂಡು, ಸಮೀಪದಲ್ಲಿಯೇ ಪೂಜಾದ್ರವ್ಯಗಳನ್ನು ಸಿದ್ಧಗೊಳಿಸುತ್ತಿದ್ದ ಸೊಸೆಯನ್ನು ಕರೆದು—

“ಲಕ್ಷ್ಮೀ ಈ ದಿನದ ಪೂಜೆಯನ್ನು ನೀನೇ ಮುಗಿಸಿಬಿಡು. ಏಕೋ ಸ್ವಾಮಿ ನನ್ನ ಮೇಲೆ ಮುನಿಸಿಕೊಂಡು, ನೀನು ಪೂಜೆಮಾಡುವುದು ಬೇಡ ಎನ್ನುತ್ತಿದ್ದಾನೆ. ಎಂದೂ ಇಲ್ಲದೆ ಹೀಗೇಕಾಡುತ್ತಿದ್ದಾನೋ ತಿಳಿಯದು. ಏನೋ ಅವನಿಚ್ಛೆ ಇದ್ದಂತಾಗಲಿ. ಪೂಜೆ ಮುಗಿಸಿ “ಏನೂ ಕೆಟ್ಟದಾಗದಿರಲಿ” ಎಂದು ಪ್ರಾರ್ಥನೆ ಮಾಡು. ಮಕ್ಕಳ ತಾಯಿ ನೀನು. ನಿನ್ನ ಮಾತಿಗೆ ಇಲ್ಲ ಎನ್ನುವುದಿಲ್ಲ.”

—ಎಂದವರೇ ಮಡಿಯನ್ನು ಬದಲಿಸದೆ ಹೊರಗೆ ಹೊರಟುಬಿಟ್ಟರು. ಅಂದಿನ ಅವನ ವಿಚಿತ್ರ ವರ್ತನೆಯನ್ನು ಕಂಡು ಅವರ ಸೊಸೆ, ಪೂಜಾ ಮಂದಿರದ ಬ್ರಾಹ್ಮಣ ಇಬ್ಬರೂ ಅವಾಕ್ಕಾದರು.

ಪೂಜಾ ಮಂದಿರದಿಂದ ಹೊರಬಿದ್ದವರೇ, ಭುವನಪ್ಪನವರು ಬರಿ ಮೈಯ ಮೇಲೆ ಶಾಲೊಂದನ್ನು ಹೊದೆದು, ಜೊತೆಗೆ ಬರಲು ಸಿದ್ಧವಾದ ಕಾವಲು ಆಳು, ದೀವಟಿಗೆಯವರನ್ನು ಬೇಡವೆಂದು ಕಳಿಸಿ ಒಂಟಿಯಾಗಿ ಮನೆಯಿಂದ ಹೊರಬಿದ್ದರು. ಬಯಲ ತಂಗಾಳಿ, ಅವರ ಕಾದಮಿದುಳಿಗೆ ಅಷ್ಟು ಹೊತ್ತು ಶೈತ್ಯೋಪಚಾರ ಮಾಡಿದ ಮೇಲೆ, ಬುದ್ಧಿ ಕೊಂಚ ಸ್ಥಿಮಿ

ತಕ್ಕೆ ಬಂದಂತೆ ತೋರಿತು. ಮನೆಯಿಂದ ಹೊರಬಿದ್ದು ಅಂಗಳಕ್ಕೆ ಇಳಿದರು.

ಪ್ರಧಾನಿಗಳ ಮನೆ ಇದ್ದುದು ಏಕನಾಥೇಶ್ವರಿಯ ದೇವಾಲಯದ ಮುಂದಿನ ವಿಶಾಲವಾದ ಬಯಲಿನಲ್ಲಿ. ಅರಮನೆಯ ಇದಿರೇ ಟಂಕ ಸಾಲೆಯ ಭವ್ಯಮಂದಿರ. ಅಲ್ಲಿಂದ ಕೊಂಚ ಕೆಳಗಿಳಿದು ಬಂದರೆ ಐವತ್ತು ಅಡಿ ಎತ್ತರವಾದ ಕಲ್ಲಿನ ಉಯ್ಯಾಲೆಕಂಭ. ಅವರ ಇದಿರು ಕನಕವ್ವ ನಾಗತಿಯ ಕಂಭ. ಅದರ ಬಲಬದಿಗೆ ದುರ್ಗದಿಂದ ಕೆಳಗೆ ಹೋಗುವ ದಾರಿಯಲ್ಲಿ ಕಟ್ಟಿದ ಅಜ್ಜಿಯ ಬಾಗಿಲು, ಅಜ್ಜಿಯ ಬಾಗಿಲ ಬಲಬದಿಯ ವಿಶಾಲೋನ್ನತವಾದ ಕೋಡುಗಲ್ಲಿನ ಮೇಲೆ, ಭವ್ಯವಾದ ಹಿಡಂಬೇಶ್ವರನ ದೇವಾಲಯ ದುರ್ಗದ ರಕ್ಷಣೆಯ ಭರವಸೆಯನ್ನಿತ್ತು ಅಭಯ ಹಸ್ತವನ್ನೆತ್ತಿ ದಂತೆ ನಿಂತಿದೆ.

ತಮ್ಮ ಮನೆಯಿಂದ ಹೊರಬಂದ ಭುವನಪ್ಪನವರು ಅಂಗಳದಲ್ಲಿ ನಿಂತು ಎದುರು ಶಿಖರದ ಮೇಲೆ ಕಟ್ಟಿದ ಬಾವುಟದ ಬತೇರಿಯನ್ನು ನೋಡಿದರು. ವಿಶಾಲವಾದ ಧ್ವಜ ಕತ್ತಲಲ್ಲಿ ಅಸ್ಪಷ್ಟವಾಗಿ ಹಾರಾಡು ತ್ತಿತ್ತು. ಅದನ್ನು ಕಂಡು "ನಿನಗೂ ಕತ್ತಲು ಕವಿಯುವ ಹೊತ್ತು ಬಂದಿದೆ?" ಎಂದುಕೊಂಡರು. ಒಂದು ಗಳಿಗೆ, ಏಕನಾಥೇಶ್ವರಿಯ ದೇವಾಲಯದ ಇದಿರು ಸಾಲಾಗಿ ಬೆಳೆದ ದೇವಗಣಗಿಲೆಯ ಗಿಡದ ಹೂವಿ ನಿಂದ ಹಿತವಾದ ಪರಿಮಳವನ್ನುಂಡು ಅಲೆಯುತ್ತಿರುವ ತಂಗಾಳಿಯಿಂದ ಹಗುರವಾದ ಅವರ ಎದೆ ಮತ್ತೆ ಭಾರವಾಯಿತು. ಸುತ್ತಲ ದೇವಾಲಯ ಗಳಲ್ಲಿ ಸಾಯಂಪೂಜೆ ಮುಗಿದು, ಮಂಗಳಾರತಿಯ ವೇಳೆಯ ಘಂಟೆ, ಶಂಖ, ಜಾಗಟೆಗಳ ನಿನಾದ ಗಾಳಿಯಲ್ಲಿ ಕವಿದ ಬಂದು ಅವರ ಕಿವಿಯನ್ನು ತುಂಬಿತು.

"ನೀವು ಇಷ್ಟು ಜನ ಇದೀರ. ನಿಮ್ಮನ್ನೇ ನೆಚ್ಚಿ ಪೂಜಿಸಿದವರನ್ನು ಕೈಬಿಡಬೇಡಿ."

—ಎಂದು ಎಲ್ಲ ದೇವತೆಗಳನ್ನೂ ಉದ್ದೇಶಿಸಿ ಪ್ರಾರ್ಥಿಸಿದರು. ಅವರಿಗೆ ಆಶ್ವಾಸನವಿತ್ತಂತೆ ಮಂಗಳವಾದ್ಯಗಳು ಮೊಳಗಿದುವು. ಆದರೂ ಏಕೋ ಅವರ ಮನಸ್ಸಿಗೆ ಸಮಾಧಾನವಾಗಲಿಲ್ಲ. ನಿಂತಲ್ಲಿ ನಿಲ್ಲಲಾರದೆ,

ಅಂಗಳದಿಂದ ಕೆಳಗಿಳಿದು, ಹಿಡಂಬೇಶ್ವರನ ದೇವಾಲಯದತ್ತ ಹೆಜ್ಜೆ ಹಾಕಿದರು.

ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿದ್ದ ಹೆಬ್ಬಾಗಿಲ ಬಳಿಯ ಕಾವಲುಗಾರರು, ಪ್ರಧಾನಿಗಳು, ಕಾವಲವರು, ದೀವಟಿಗೆಯರಿಲ್ಲದೆ ಒಂಟಿಯಾಗಿ ಬಂದುದನ್ನು ಕಂಡು ಸನ್ನೆ ಗಾಳಿಯನ್ನೂದಿ, ಬಾಗಿಲು ತೆರೆದು ಅವರನ್ನು ಒಳಗೆ ಬಿಟ್ಟರು. ಕತ್ತು ತಗ್ಗಿಸಿ ನಡೆದ ಭುವನಪ್ಪನವರು, ಮೊಳಕಾಲ ವರೆಗೂ ಮೈಬಗ್ಗಿಸಿ ಮುಜುರೆಮಾಡಿದ ಕಾವಲುಗಾರರತ್ತಲೂ ನೋಡದೆ, ಮುಂದೆ ನಡೆದು, ಗಾಳಿಮಂಪಟವನ್ನು ದಾಟಿ, ಹಿಡಂಬೇಶ್ವರನ ದೇವಾಲಯಕ್ಕೆ ಹೋಗಲು, ಕೋಡುಗಲ್ಲಿನ ಬೆನ್ನಿನ ಮೇಲೆ ಕಡೆದ ಪಾವಟಿಗೆಗಳನ್ನು ಏರತೊಡಗಿದರು.

ಭುವನಪ್ಪನವರು ಹೇಳಿ ಹೋದುದನ್ನು ಕೇಳಿದಾಗಲಿಂದ ಓಬವ್ವ ನಾಗತಿಗೆ ಗರ ಬಡಿದಂತಾಗಿತ್ತು. ಓಬಣ್ಣನಾಯಕನನ್ನು ದತ್ತು ಸ್ವೀಕಾರ ಮಾಡಿ, ಆತನ ಪಟ್ಟಾಭಿಷೇಕವನ್ನು ಮುಗಿಸಿದ ಬಳಿಕ ತಾನು ನಿಶ್ಚಿಂತಳಾಗಿರಬಹುದೆಂದು ಆಕೆ ಊಹಿಸಿದ್ದಳು. ಆದರೆ ಭುವನಪ್ಪನವರು ಪಟ್ಟಾಭಿಷೇಕ ನಡೆಯುವ ವರೆಗೂ ಮೈಯೆಲ್ಲಾ ಕಣ್ಣಾಗಿರಬೇಕಾಮದುದೇ ಅಲ್ಲದೆ, ಅದರಾಚೆಗೂ ಚಿಂತೆಯ, ಗಂಡಾಂತರದ ದಿನಗಳೇ ಬರಬಹುದೆಂದು ಸೂಚಿಸಿ ಹೋಗಿದ್ದರು. ಅದೆಲ್ಲವನ್ನು ಕೇಳಿ ನಾಗತಿ ಹೌಹಾರಿ ಹೋಗಿದ್ದಳು. ಗತಿಸಿದ ಪತಿಯನ್ನು ನೆನೆದು—

" ಎಂಥ ಬೆಟ್ಟದ ಭಾರವನ್ನು ಈ ಹೆಣ್ಣ ಹೆಗಲ ಮೇಲೆ ಹಾಕಿ ಹೋಗಿ ಬಿಟ್ಟಿರಿ "

— ಎಂದು ದುಃಖಿಸಿದಳು. ಆದರೆ ಆಕೆ ಹೊತ್ತ ಹೊಣೆಗಾರಿಕೆ ಬರಿ ದುಃಖದಿಂದಲೇ ತೀರುವಂತಹುದಾಗಿರಲಿಲ್ಲ. ಆ ಹೊಣೆಗಾರಿಕೆಯನ್ನು ತೀರಿಸುವ ವರೆಗೂ ಆಕೆ ತನ್ನ ದುಃಖದಲ್ಲೇ ಕರಗಿ ಕುಳಿತಿರಲೂ ಬಿಡುವಿರಲಿಲ್ಲ. ಮೊದಲೇ ಸಾಕಷ್ಟು ಚಿಂತೆ ಇತ್ತು. ಈಗ ವಿದ್ರೋಹದ ಸುದ್ದಿಯೂ ಬಂದು, ಈ ಭಾರದ ಜೊತೆಗೆ ಭೀತಿಯ ಭಾರವನ್ನೂ ಹೇರಿತು.

" ಓಬಣ್ಣನಾಯಕರನ್ನೂ ಪಟ್ಟಾಭಿಷೇಕವಾಗುವ ವರೆಗೂ ಬಹು ಎಚ್ಚರದಿಂದ ಕಾದುಕೊಳ್ಳಬೇಕು. ಯಾರನ್ನೂ ಸುಲಭವಾಗಿ ನಂಬಿ ಬಳಿಕ

ಎಲ್ಲರೂ ಪಶ್ಚಾತ್ತಾಪ ಪಡಬೇಕಾದಂಥ ಹೊತ್ತು ಬರದಂತೆ ನೋಡಿಕೊಳ್ಳ ಬೇಕು' ಎಂದು ಹತ್ತಾರು ಬಾರಿ ಹೇಳಿ, ಎಚ್ಚರಿಸಿ ಹೋಗಿದ್ದರು ಭುವನಪ್ಪನವರು.

ಆದರೆ ಓಬಣ್ಣನಾಯಕನನ್ನು ಕಾವಲು ಕಾಯುವವರು ಯಾರು? ಯಾರ ರಕ್ಷಣೆಗೆ ಆತನನ್ನು ಒಪ್ಪಿಸಬಹುದು? ತಾನೆ ಹಗಲಿರುಳೂ ಆತ ನನ್ನು ಕಾಯುವುದು ಸಾಧ್ಯವೇ?

ಚಿಂತಿಸಿದಷ್ಟೂ ಆ ಚಿಂತೆ ಹೆಚ್ಚುತ್ತಲೇ ಇತ್ತು. ಬಹಳ ಹೊತ್ತು ಚಿಂತಿಸಿ, ಕಡೆಗೆ ಹೀಗೆ ಮಾಡುವುದು ಉತ್ತಮ ಎಂದು ಯೋಚಿಸಿ, ದೂರದಲ್ಲಿ ಕುಳಿತು ಗಾಳಿ ಹಾಕುತ್ತಿದ್ದ ಅಂತರಂಗದ ದಾಸಿ ಗಿರಿಜವ್ವೆಗೆ ಹೇಳಿದರು:

"ಗಿರಿಜಾ, ಇಂದಿನಿಂದ ರಾಜಕುಮಾರರು ಮಲಗುವ ಕೋಣೆ ಯನ್ನು ಬದಲಿಸಿ ಬಿಡು."

ಇದ್ದಕ್ಕಿದ್ದಂತೇ ನಾಗತಿ ಹೇಳಿದ ಮಾತನ್ನು ಕೇಳಿ, ಆಕೆಯ ಚಿಂತೆಯ ತಲೆ ಬುಡಗಳನ್ನರಿಯದ ಗಿರಿಜವ್ವೆ ಚಕಿತಳಾದಳು. ಆದರೆ ತನ್ನ ಆಶ್ಚರ್ಯ, ಏಕೆಂದು ಕೇಳಬೇಕೆಂಬ ಕುತೂಹಲವನ್ನು ತಲೆ ಎತ್ತ ದಂತೆ ಮುರಿದು—

"ಎಲ್ಲಗೆ ಬದಲಾಯಿಸಲಿ ತಾಯಿ?"

—ಎಂದು ಕೇಳಿದಳು.

"ನಮ್ಮ ತೊಟ್ಟಿಯಲ್ಲೇ ಒಂದು ಸರಿಯಾದ ಕೊಠಡಿ ನೋಡು. ಇಂದಿನಿಂದ ಅವರು ಇಲ್ಲೇ ಮಲಗಲಿ."

"ಅಪ್ಪಣೆ ತಾಯಿ"

—ಎಂದಳು ಗಿರಿಜವ್ವೆ.

"ಹಾಗೇ—ಗಿರಿಜಾ....ಇಂದಿನಿಂದ ನೀನು ಇನ್ನೂ ಒಂದು ಕೆಲಸ ಮಾಡಬೇಕಾಗುತ್ತದೆ."

"ಹೇಳಿ ತಾಯಿ ಏನು ಮಾಡಬೇಕು?"

"ನಿನಗೆ ಈಗಾಗಲೇ ನನ್ನ ಕೆಲಸವೇ ಸಾಕಷ್ಟಿದೆ. ಆದರೂ ನಿನ್ನ ನುಳಿದು ನಾನು ಜೇರೆ ಯಾರನ್ನೂ ಈ ಕೆಲಸಕ್ಕೆ ನಂಬಲಾರೆ. ನೀನೇ

ತಕ್ಕವಳು. ಅದಕ್ಕೆ ಹೇಳುತ್ತಿದ್ದೇನೆ. ನಂಬಿಕೆಯಿಂದ ನಡೆದರೆ ಹೊರಲಾರದಷ್ಟನ್ನು ಹೊರಿಸಿದರು ಎಂದು ನೊಂದುಕೊಳ್ಳಬಾರದು."

"ಹಾಗೆಂದ ನಾಲಗೆಯಲ್ಲಿ ಹುಳು ಸುರಿಯಲಿ ತಾಯಿ. ಏನು ಮಾಡಬೇಕೋ ಹೇಳಿ. ತಾವು ಪಾದದಿಂದ ತೋರಿಸುದುದನ್ನು ನೆತ್ತಿಯಲ್ಲಿ ಹೊತ್ತು ನಡಸುತ್ತೇನೆ."

"ನೀನು ಅಂಥವಳೆಂದು ಬಲ್ಲೆ. ಅದಕ್ಕೇ ಈ ಬಹು ದೊಡ್ಡ ಜವಾಬ್ದಾರಿಯನ್ನು ನಿನ್ನ ಮೇಲೆ ಹೊರಿಸುತ್ತಿದ್ದೇನೆ. ಇಂದಿನಿಂದ ಓಬಣ್ಣ ನಾಯಕನ ಖಾಸಾ ಊಳಿಗವನ್ನು ನೀನೇ ಮಾಡಬೇಕು. ನಿನ್ನ ಹೊರತು ಬೇರೆ ಯಾವ ದಾಸಿಯರೂ ಆಳುಗಳೂ ಅವರಿಗೆ ಅನ್ನ ನೀರು ಕೊಡಕೂಡದು. ಅವರ ಊಟವನ್ನು ಮೊದಲು ಹಕ್ಕಿಗೆ ಹಾಕಿ, ಏನೂ ಅಪಾಯವಿಲ್ಲವೆಂದು ನಂಬಿಕೆ ಮಾಡಿಕೊಂಡು ಕೊಡಬೇಕು. ಅವರ ಸಜ್ಜೆಯನ್ನು ನೀನೇ ಸಿದ್ಧಗೊಳಿಸಬೇಕು. ನನ್ನ ಅಪ್ಪಣೆ ಇಲ್ಲದೆ ಯಾರೂ, ಅವರು ಯಾರೇ ಆದರೂ ಸರಿಯೇ, ಅವರನ್ನು ನೋಡಲು ಬಿಡಕೂಡದು. ಹಾಗೇ ಇಲ್ಲಿಯ ಉಳಿದ ಚಾಕರರ ಚಲನವಲನದ ಮೇಲೂ ಒಂದು ಕಣ್ಣಿಟ್ಟಿರಬೇಕು. ಅವರಾಡುವ ಮಾತನ್ನು ಕಿವಿಯಗಲಿಸಿ ಕೇಳಿ ನನಗೆ ತಿಳಿಸಬೇಕು."

"ಅಪ್ಪಣೆ ತಾಯಿ.... ಆದರೆ.... ಆದರೆ.... ಅಪ್ಪಣೆಯಾದರೆ ಒಂದು ಮಾತು ಬಿನ್ನವಿಸಿಕೊಳ್ಳುತ್ತೇನೆ...."

"ಹೇಳು."

"ತಾಯಿಯವರ ಮಾತು ಕೇಳಿದರೆ, ರಾಜಕುಮಾರರ ಬಗ್ಗೆ ಎಂದೂ ಇಲ್ಲದಷ್ಟು ಕಟ್ಟುಪಾಡುಮಾಡುತ್ತಿರುವಂತೆ ಕಾಣುತ್ತಿದೆ...."

"ನಿಜ. ಗಿರಿಜಾ. ಇದು ಬರೀ ಕಟ್ಟುಪಾಡಿನ ಪ್ರಶ್ನೆಯಲ್ಲ, ಇದವರ ಸಾವು ಬದುಕಿನ ಪ್ರಶ್ನೆ. ಅದಕ್ಕೇ ಮೈಯೆಲ್ಲಾ ಕಣ್ಣಾಗಿರಬೇಕು, ಯಾರನ್ನೂ ನಂಬಕೂಡದು ಎಂದು ಹೇಳಿದ್ದು."

ನಾಗತಿ ಹೇಳಿದ ಮಾತನ್ನು ಕೇಳಿಯೇ ಗಿರಿಜೆಯ ಮೈ ನಡುಗಿ, ಮುಖದ ರಕ್ತವೆಲ್ಲಾ ಬಸಿದು ಹೋಗಿ ಬಿಳುಚಿಕೊಂಡಿತು. ಅವಳ ಭಯ ವಿಕಾರವಾದ ಮುಖವನ್ನು ನೋಡಿ, ನಾಗತಿಯೇ ಕೇಳಿದಳು:

" ಏಕೆ? ಈ ಕೆಲಸ ನಿನ್ನಿಂದಾಗದೇ ಗಿರಿಜಾ ? "

" ಆಗುವುದಿಲ್ಲ ಎಂದು ಹೇಳಲಾರೆ. ಆಗುತ್ತದೆ ಎಂದು ಹೇಳಿ, ಅದನ್ನು ನಡಸುವ ಶಕ್ತಿ ನನಗಿದೆಯೇ ಎಂಬುದೇ ಭಯ. ಈ ಮುಖ್ಯ ಕಾರ್ಯಕ್ಕೆ ನನಗಿಂತಲೂ ಉತ್ತಮರು ಇಲ್ಲವೇ ತಾಯಿ ? "

" ನಿಂತ ನೆಲವೇ ಬಾಯಿತೆಗೆದು ನುಂಗುತ್ತದೆಯೇನೋ ಎಂಬಂಥ ಹೊತ್ತಿಂದು ಪ್ರಾಪ್ತವಾಗಿದೆ ಗಿರಿಜಾ. ಈ ಹೊತ್ತಿನಲ್ಲಿ ನಿನ್ನನ್ನುಳಿದು ಬೇರೆ ಯಾರನ್ನೂ ನಾನು ನಂಬಲಾರೆ. ಯಾರಿಗೆ ಹೇಳಲಿ ? "

" ತಾಯಿಯವರು ಹೇಳಿದ ಕೇಲಸ ಮಾಡಲು ನಾನು ಸಿದ್ಧಳಾಗಿ ಜೇನೆ. ಹಾಗೇ, ನನ್ನನ್ನು ಅಧಿಕ ಪ್ರಸಂಗಿ ಎಂದುಕೊಳ್ಳುವುದಿಲ್ಲವೆಂದು ಆಶ್ವಾಸನವಿತ್ತರೆ ಈ ಕಾರ್ಯ ಮಾಡಲು ನನಗಿಂತ ಉತ್ತಮರಾದವರ ಹೆಸರು ಹೇಳುತ್ತೇನೆ. "

" ಹೇಳು. "

" ಇದು ರಾಜಕುಮಾರರ ಸಾವು ಬದುಕಿನ ಪ್ರಶ್ನೆ ಎಂದು ಅಪ್ಪಣೆ ಕೊಡಿಸಿದಿರಿ. ಅದಕ್ಕೇ ಹೇಳುತ್ತೇನೆ. ಇಂಥ ಪ್ರಸಂಗದಲ್ಲಿ ಕಾವಲು ಕಾಯಲು ಹೆಣ್ಣಿಗಿಂತ ಬಲಶಾಲಿಯಾದ ಗಂಡು ಮೇಲು. ನಾನು ಕಾಯಬಲ್ಲೆ. ಯಾರಾದರೂ ಅವರ ಮೇಲೆ ಬಿದ್ದರೆ, ಅವರ ರಕ್ಷಣೆಗಾಗಿ ಪ್ರಾಣ ಒಪ್ಪಿಸಲೂ ಬಲ್ಲೆ. ಆದರೆ ಹೆಣ್ಣೇ ಅವರನ್ನು ಉಳಿಸುತ್ತೇನೆ ಎಂದರೆ ಅದು ಆಗಬಹುದು, ಆಗದಿರಬಹುದು. ಅದಕ್ಕೇ ನನ್ನ ಜೊತೆಗೆ ಒಬ್ಬ ಗಂಡು ಆಳನ್ನು ನೇಮಿಸುವುದು ಒಳಿತು. ಚಿತ್ತಕ್ಕೆ ಸರಿದೋರಿದಂತೆ ಅಪ್ಪಣೆ ಮಾಡಬೇಕು. "

" ನೀನು ಹೇಳಿದುದು ಸರಿ ಗಿರಿಜಾ. ಆದರೆ ಅಷ್ಟು ನಂಬಿಕೆಗೆ ಅರ್ಹನಾದ ಆಳೇ ನನ್ನ ಕಣ್ಣಿಗೆ ಕಾಣಿಸುತ್ತಿಲ್ಲವಲ್ಲಾ........"

" ಇದ್ದಾರೆ ತಾಯಿ. ಅಂಗರಕ್ಷಕರ ಪಡೆಯ ನಾಯಕರಾದ ಕಸ್ತೂರಿ ನಾಯಕರಿಗೆ ತಾಯಿಯವರು ಈ ಕಾರ್ಯವನ್ನು ಒಪ್ಪಿಸಬಹುದು. "

" ಅಷ್ಟು ದೂರ ಆತನನ್ನೂ ನಾವು ನಂಬಬಹುದೇ ? "

" ನನ್ನನ್ನು ನಂಬಬಹುದಾದರೆ, ಅವರನ್ನು ನಂಬಬಹುದು ತಾಯಿ. ನನಗೆ ನನ್ನಲ್ಲೇ ಇರುವುದಕ್ಕಿಂತ ಹೆಚ್ಚು ನಂಬಿಕೆ ಅವರಲ್ಲಿದೆ. "

" ತೊಟ್ಟಿಲ ಹಗ್ಗವೂ ಹಾವಾಗಿ ಕಡಿವ ಹೊತ್ತು ಇದು ಗಿರಿಜಾ. ಇನ್ನೂ ಯೋಚಿಸಿ ಹೇಳಿ. "

" ತಾಯಿ ನನ್ನ ಮಾತನ್ನು ನಂಬಿ. "

" ನಂಬಿದರೆ ಆತ ರಾಜಕುಮಾರರನ್ನು ಕಾಪಾಡುತ್ತಾನೆಯೇ ? "

" ತಾಯಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಕಾಪಾಡುವಷ್ಟು ಎಚ್ಚರದಿಂದ ಕಾಪಾಡುತ್ತಾರೆ. "

" ದೇವರ ಮೇಲೆ ಭಾರಹಾಕಿ ನಿನ್ನ ಮಾತನ್ನು ನಂಬುತ್ತೇನೆ ಗಿರಿಜಾ. ನಾಳೆ ಏನಾದರೂ ಆದರೆ........? "

" ರಾಜಕುಮಾರರ ಕೂದಲು ಕೊಂಕಿದರೂ ಅದಕ್ಕೆ ನನ್ನ ತಲೆಯ ಬಲಿ ಕೊಡುತ್ತೇನೆ. "

" ಸರಿ, ಹಾಗಾದರೆ ಆತನಿಗೆ ಇತ್ತ ಬಂದುಹೋಗೆಂದು ಹೇಳು. ಹಾಗೇ ರಾಜಕುಮಾರರನ್ನೂ ಇತ್ತ ಕರೆತಾ "

" ಅಪ್ಪಣೆ ತಾಯಿ "

—ಎಂದು ಹೇಳಿ ಗಿರಿಜಾ ತನಗೊಪ್ಪಿಸಿದ ಕೆಲಸ ಮಾಡಲು ಹೋದಳು. ಅವಳು ಹೋದ ಕೊಂಚ ಹೊತ್ತಿನಲ್ಲೇ ಕಸ್ತೂರಿನಾಯಕ ಬಂದು ಕಾಣಿಸಿಕೊಂಡ. ಅವನ ವಂದನೆಯನ್ನು ಸ್ವೀಕರಿಸಿ, ಅವನ ಮುಖವನ್ನೇ ಎರಡು ಗಳಿಗೆ ದಿಟ್ಟಿಸಿ ನೋಡಿದಳು ನಾಗತಿ. ತನ್ನನ್ನೇ ದಿಟ್ಟಿಸಿ ನೋಡುತ್ತಿದ್ದ ನಾಗತಿಯ ಮೊಗವನ್ನು ಪ್ರತಿಯಾಗಿ ನೋಡುವುದು ಸಭ್ಯತೆಯಲ್ಲವೆಂದು ಕಸ್ತೂರಿನಾಯಕ ತಲೆ ತಗ್ಗಿಸಿದ—

" ಇಲ್ಲಿ ನೋಡು "

—ತಲೆ ಬಾಗಿಸಿದ ಕಸ್ತೂರಿನಾಯಕನಿಗೆ ಅಪ್ಪಣೆ ಮಾಡಿದಳು ನಾಗತಿ. ಕಸ್ತೂರಿನಾಯಕ ತಲೆ ಎತ್ತಿ ಅಪ್ಪಣೆಯನ್ನು ಕಾದು ನಾಗತಿಯ ಮೊಗ ನೋಡಿದ. ಅವನ ತೆರೆದ ಕಣ್ಣುಗಳನ್ನು ಮತ್ತೊಮ್ಮೆ ದಿಟ್ಟಿಸಿ ನೋಡಿದಳು ನಾಗತಿ. ಆ ಮೊಗದಲ್ಲಾಗಲಿ, ಕಣ್ಣುಗಳಲ್ಲಾಗಲಿ, ಕಪಟತನ, ದ್ರೋಹ, ಕುತ್ಸಿತ ಬುದ್ಧಿಗಳ ಕುರುಹು ಕಾಣಿಸವೆ, ನಿಷ್ಠೆಯ ದಿಟ್ಟತನ ಎದ್ದುಕಾಣುತ್ತಿತ್ತು. ಹಾಗೇ ನೋಡಿ, ದೃಷ್ಟಿ ತಿರುಗಿಸಿ ಕೇಳಿದಳು—

" ಕಸ್ತೂರಿನಾಯಕ ನೀನೆಯೇ ? "

" ಅಹುದು ತಾಯಿ. ನಾನೇ ಆ ಹೆಸರಿನ ಪಾದಸೇವಕ."

" ನಿನ್ನನ್ನು ನಾವು ಅರಮನೆಯಲ್ಲಿ ಹಲವಾರು ಬಾರಿ ಕಂಡಿದೇವೆ. ಆದರೆ ನಮಗೆ ನಿನ್ನ ಪರಿಚಯವಿಲ್ಲ. ಆದರೂ ನಮ್ಮ ಖಾಸಾದಾಸಿ ಗಿರಿಜವ್ವೆಯ ಮಾತಿನ ಮೇಲೆ ನಿನಗೊಂದು ದೊಡ್ಡ ಜವಾಬ್ದಾರಿಯ ಕೆಲಸ ಒಪ್ಪಿಸಬೇಕೆಂದಿದೇವೆ. ಗಿರಿಜವ್ವೆ ನಿನಗೆ ಚೆನ್ನಾಗಿ ಗೊತ್ತಲ್ಲವೇ ?"

" ಗೊತ್ತು ತಾಯಿ. ಆಕೆಯೂ ನಮ್ಮ ಹಳ್ಳಿಯ ಹೆಣ್ಣೇ."

" ಅಷ್ಟೇ ಪರಿಚಯವೇ ? "

" ಅಲ್ಲ."

" ಮತ್ತೆ........? "

" ಆಕೆ ನನ್ನ ತಮ್ಮನಿಗೆ ಗೊತ್ತಾದ ಹೆಣ್ಣು."

" ಹಾಗೇ ! ಅದು ನಮಗೆ ತಿಳಿದಿರಲಿಲ್ಲ, ನಿನ್ನ ತಮ್ಮನೂ ಅರಮನೆಯ ಉಳಿಗದಲ್ಲಿದ್ದಾನೆಯೆ ? "

" ಇಲ್ಲ, ಸೇನೆಯಲ್ಲಿ."

ಆ ಮಾತನ್ನು ಕೇಳಿ ನಾಗತಿ ಮತ್ತೊಮ್ಮೆ ಕಸ್ತೂರಿನಾಯಕನ ಮೊಗವನ್ನು ದಿಟ್ಟಿಸಿ ನೋಡಿ ಕೇಳಿದಳು--

" ನಿನ್ನನ್ನು ನಾವು ನಂಬಬಹುದೇ ? "

" ಆ ಮಾತಿಗೆ ಉತ್ತರ ಕೊಡುವುದಕ್ಕಿಂತ ತಲೆ ಕತ್ತರಿಸಿ ಪಾದದ ಬಳಿ ಇಡು, ಎಂದು ಅಪ್ಪಣೆಯಾದರೆ ಕೂಡಲೇ ಆ ಕೆಲಸಮಾಡಿ ತೋರಿಸುತ್ತೇನೆ. ಅಪ್ಪಣೆಯಾಗಬೇಕು."

" ನಿನ್ನನ್ನು ನಂಬಬಹುದೇ " ಎಂಬ ನಾಗತಿಯ ಪ್ರಶ್ನೆಯಿಂದ ನೊಂದು ನುಡಿದ ಕಸ್ತೂರಿನಾಯಕ.

" ನಮ್ಮ ಮಾತಿನಿಂದ ನೀನು ನೊಂದುಕೊಳ್ಳಬಾರದು. ನಾನು ನಿನಗೆ ಒಪ್ಪಿಸಲಿರುವ ಕೆಲಸ ಅಷ್ಟು ಗುರುತರವಾದುದರಿಂದ ಅಷ್ಟು ಒತ್ತಿ ಕೇಳಬೇಕಾಯಿತು."

" ತಾಯಿ—ಹೆಚ್ಚು ಮಾತಾಡುತ್ತಿದ್ದೇನೆ ಎಂದು ಕೋಪಿಸಿಕೊಳ್ಳದೆ ಒಂದು ಮಾತನ್ನು ತಿಳಿಸಲು ಅಪ್ಪಣೆಯಾಗಬೇಕು.

" ಹೇಳು."

" ತಾಯಿ—ನಾನು ಅಂಗರಕ್ಷಕರ ಪಡೆಯ ಭಟ. ದೊರೆಗಳ ಮೈ ಕಾಯುವವರು ನಾವು. ಆ ಕಾರ್ಯದಲ್ಲಿ ತಪ್ಪಿದರೆ ತಲೆದಂಡಕೊಡಲು ಒಪ್ಪಿ ವಚನ ಕೊಟ್ಟಿದ್ದೇನೆ. ನಮಗೆ ತಲೆಗಿಂತ ನಾಲಗೆ ಮುಖ್ಯ ನಮ್ಮನ್ನು ನಂಬುವುದೂ ಬಿಡುವುದೂ ತಮ್ಮ ಚಿತ್ತ. ನಂಬಿಕೆಯ ಅನುಗ್ರಹ ಮಾಡಿದರೆ, ಕೊಟ್ಟ ಕೆಲಸ ನಡಸುತ್ತೇನೆ. ಈ ಮಾತು ಬರೀ ಬಡಾಯಿಯಲ್ಲ, ಎಂದು ಮನವರಿಕೆಯಾದ ಮೇಲೇ ನನ್ನನ್ನು ಈ ಪಡೆಯ ಮುಖ್ಯಸ್ಥನನ್ನಾಗಿ ಮಾಡಿದರು, ತೀರಿಕೊಂಡ ಧಣಿಗಳು. ಅವರು ಇದ್ದಿದ್ದರೆ ನಾನು ಹೇಳಬೇಕಾದ ಮಾತನ್ನು ಅವರೇ ತಮಗೆ ಅಪ್ಪಣೆ ಕೊಡಿಸುತ್ತಿದ್ದರು."

" ನೀನು ಅವರಲ್ಲಿ ತೋರಿದ ನಿಷ್ಠೆಯನ್ನೇ ನಮ್ಮಲ್ಲೂ ತೋರಬಲ್ಲೆಯಾ ? "

" ಈ ನಾಯಿ ತಾವು ಬೇರೆ–ಅವರು ಬೇರೆ ಎಂದು ತಿಳಿದಿಲ್ಲ."

ಅವರಿಬ್ಬರ ನಡುವೆ ಇಷ್ಟು ಮಾತು ನಡೆಯುವ ವೇಳೆಗೆ ಗಿರಿಜವ್ವೆ ಬಾಗಿಲಲ್ಲಿ ಕಾಣಿಸಿಕೊಂಡು " ರಾಜಕುಮಾರರು ಬಂದಿದಾರೆ " ಎಂದು ತಿಳಿಸಿದಳು.

" ಅವರನ್ನು ಒಳಗೆ ಕರೆತಾ ಗಿರಿಜಾ."

—ಎಂದಳು ನಾಗತಿ.

ರಾಜಕುಮಾರ ಓಬಣ್ಣನಾಯಕ ಬಂದನೆಂಬುದನ್ನು ಕೇಳಿ, ಕಸ್ತೂರಿನಾಯಕ ತಾನು ಹೊರಗೆ ಹೊರಡಲು ಸಿದ್ಧನಾದ.

" ನನಗಿನ್ನು ಅಪ್ಪಣೆಯೇ ತಾಯಿ ? "–ಎಂದ.

" ಇರು " ಎಂದು ಅವನಿಗೆ ಹೇಳಿ, ಓಬಣ್ಣನಾಯಕನನ್ನು ಒಳಗೆ ಕರೆತಂದ ಗಿರಿಜೆಗೆ—

" ಗಿರಿಜಾ ಒಳಗೆ ಹೋಗಿ ಒಂದು ಬಟ್ಟಲಲ್ಲಿ ಹಾಲು ತಾ " ಎಂದು ಹೇಳಿ, ಓಬಣ್ಣನಾಯಕನತ್ತ ತಿರುಗಿ,

" ಬಾ. ಓಬಣ್ಣಾ ಕುಳಿತುಕೊ " ಎಂದು ತನ್ನ ಪಕ್ಕದಲ್ಲಿಯೇ ಕೂಡಿಸಿಕೊಂಡು, ಅವನಿಗೆ ಕಸ್ತೂರಿ ನಾಯಕನನ್ನು ತೋರಿಸಿ—

" ಈತನ ಪರಿಚಯವಿದೆಯೇ ? "

—ಎಂದು ಕೇಳಿದಳು.

" ಇಲ್ಲ " ಎಂದು ಓಬಣ್ಣನಾಯಕ ತಲೆಯಲ್ಲಾಡಿಸಿದ.

"ಈತ ನಮ್ಮ ಅಂಗರಕ್ಷಕರ ಪಡೆಯ ನಾಯಕ, ಕಸ್ತೂರಿನಾಯಕ." ಎಂದು ಓಬಣ್ಣನಾಯಕನಿಗೆ ಕಸ್ತೂರಿನಾಯಕನ ಪರಿಚಯ ಮಾಡಿಸಿ ಕೊಟ್ಟಳು; ಆ ವೇಳೆಗೆ ಗಿರಿಜೆ ತಂದ ಹಾಲಿನ ಬಟ್ಟಲನ್ನು ಓಬಣ್ಣ ನಾಯಕನ ಕೈಗಿತ್ತು,

" ಇದನ್ನು ಆತನಿಗೆ ಕೊಡು "

—ಎಂದಳು. ಓಬಣ್ಣನಾಯಕ ನಾಗತಿ ಹೇಳಿದಂತೆ ಕಸ್ತೂರಿ ನಾಯಕನ ಕೈಗೆ ಹಾಲಿನ ಬಟ್ಟಲನ್ನು ಕೊಟ್ಟ. ಅನಿರೀಕ್ಷಿತವಾದ ಈ ಪ್ರಸಂಗದಲ್ಲಿ ಏನುಮಾಡಬೇಕೆಂದು ತಿಳಿಯದೆ ಕಸ್ತೂರಿನಾಯಕ ಹಾಲಿನ ಬಟ್ಟಲನ್ನು ಹಾಗೇ ಕೈಯಲ್ಲಿ ಹಿಡಿದು ನಿಂತಿದ್ದ.

" ಆ ಹಾಲು ನೀನು ಕುಡಿಯಲೆಂದೇ ಕೊಟ್ಟದ್ದು ಕಸ್ತೂರಿನಾಯಕ, ಆದರೆ ಕುಡಿಯುವ ಮುನ್ನ ಒಂದು ಮಾತು. ಇಂದು ನಿನಗೆ ಹಾಲಿಟ್ಟ ಧಣಿಯನ್ನು, ಕಾಪಾಡುವ ಭಾರ ನಿನ್ನದು. ಅವರ ಕೂದಲು ಕೊಂಕಿ ದರೂ ಅವರ ಹೊಣೆ ನಿನ್ನದೇ. ನಿನ್ನ ಹೊಟ್ಟೆಯ ಮಗುವಿನಂತೆ ನೀನು ಅವನನ್ನು ರಕ್ಷಿಸಬೇಕು. ಆ ಧೈರ್ಯ ನಿನಗಿದ್ದರೆ ಆ ಹಾಲನ್ನು ಕುಡಿ."

ಆ ಮಾತನ್ನು ಕೇಳಿ, ನಾಗತಿ ತನ್ನನ್ನು ಮತ್ತೆ ಮತ್ತೆ ಇಷ್ಟು ಪರೀ ಕ್ಷೆಗೆ ಗುರಿಮಾಡುತ್ತಿದ್ದಾಳಲ್ಲಾ ಎಂದು ಅಪಾರ ವ್ಯಥೆಗಾಗಿ ಕಸ್ತೂರಿ ನಾಯಕನ ಕಣ್ಣಲ್ಲಿ ತುಂಬಿದ ನೀರು ಹರಿಯುತ್ತಿದ್ದ ಹಾಗೇ, ಹಾಲಿನ ಬಟ್ಟಲನ್ನು ಎರಡೂ ಕೈಗಳಲ್ಲಿ ಹಿಡಿದು ಹೇಳಿದ—

" ಪಾದಸೇವಕನಲ್ಲಿ ಏಕೋ ತಾಯಿಯವರಿಗೆ ಇಂದು ನಂಬಿಕೆ ಬರುವಂತಿಲ್ಲ. ಅದಕ್ಕೇ ಮತ್ತೆ ಮತ್ತೆ ಪರೀಕ್ಷೆ ಮಾಡುತ್ತಿದ್ದೀರಿ. ಆಯಿತು ತಮ್ಮ ಚಿತ್ತ. ಕೈಯಲ್ಲಿ ಹಾಲು ಕೊಟ್ಟದೀರ. ಇದು ಬರೀ ಹಾಲಲ್ಲ, ನನ್ನ ತಾಯಿಯ ಮೊಲೆ ಹಾಲು ಎಂದು ತಿಳಿದು, ಈ ಅಮೃತದ ಸಾಕ್ಷಿಯಾಗಿ ಹೇಳುತ್ತೇನೆ—ನನ್ನ ಜೀವವಿರುವ ವರೆಗೆ, ಅವರ ಜೀವ ನನ್ನ ಜೀವವೆಂದು ತಿಳಿದು ಸೇವೆ ಮಾಡುತ್ತೇನೆ. ಅದಕ್ಕೆ ತಪ್ಪಿದ ದಿನ ತಾಯಿಯವರ ಪಾದಕ್ಕೆ ನನ್ನ ತಲೆ ತಂದು ಒಪ್ಪಿಸುತ್ತೇನೆ. ಇದಕ್ಕೆ ಸೂರ್ಯ ಚಂದ್ರರೇ ಸಾಕ್ಷಿ."

—ಎಂದು ಹೇಳಿ ಕಸ್ತೂರಿನಾಯಕ ಒಂದೇ ಬಾರಿಗೆ ಬಟ್ಟಲಿನಲ್ಲಿದ್ದ ಹಾಲನ್ನೆಲ್ಲಾ ಕುಡಿದು ಹೇಳಿದ.

"ಹಾಲು ಕೊಟ್ಟು ಪರೀಕ್ಷಿಸಿದಿರಿ ತಾಯಿ. ಇನ್ನೂ ಬೇಕಾದರೆ ಹಾಲಹಲವನ್ನೂ ಕೊಟ್ಟು ಈ ನಾಯಿಯನ್ನು ಪರೀಕ್ಷಿಸಿ ನೋಡಬಹುದು."

ಆತನಾಡಿದ ಮಾತನ್ನು ನಾಗತಿ ಮುಟ್ಟಿ ನೋಡಬಹುದಾಗಿದ್ದರೆ, ಆ ಒಂದೊಂದು ಮಾತಿನಲ್ಲೂ ಅನಂತ ಯಾತನೆ ತುಂಬಿ ತುಳುಕುತ್ತಿರುವು ದನ್ನು ಕಾಣಬಹುದಾಗಿತ್ತು. ಆದರೆ ಕಣ್ಣು ಕಾಣಲಾಗದುದನ್ನು ಕರುಳು ಗುರುತಿಸಿತು. ಅವನ ಮಾತಿನಿಂದ ಹೃದಯವನ್ನು ಅರಿತುಕೊಂಡ ನಾಗತಿ, ಅದುವರೆಗೂ ನಾಗತಿಯಂತೆ ಮಾತನಾಡುತ್ತಿದ್ದವಳು ತನ್ನ ಧ್ವನಿ ಯನ್ನು ಬದಲಾಯಿಸಿ, ಆತ್ಮೀಯತೆಯ ಧ್ವನಿಯಲ್ಲಿ ಹೇಳಿದಳು:

"ನಿನ್ನನ್ನು ಇಷ್ಟು ಪರೀಕ್ಷೆಮಾಡಿದೆನೆಂದುಕೊಳ್ಳಬೇಡ ಕಸ್ತೂರಿ ನಾಯಕ. ನಿಷ್ಠಾವಂತನು ನೊಂದುಕೊಂಡರೆ ನಮಗೆ ಶ್ರೇಯಸ್ಸಾಗುವು ದಿಲ್ಲ. ಹೀಗೆ ಪರೀಕ್ಷಿಸಿ, ನಿನ್ನಷ್ಟೇ ನಮಗೂ ನೋವಾಗಿದೆ. ಆದರೇನು ಮಾಡಲಿ. ನಾಯಕರು ಹೋಗುವಾಗ ಬಹು ದೊಡ್ಡ ಜವಾಬದಾರಿ ಯನ್ನು ನಮ್ಮ ಹೆಗಲ ಮೇಲೆ ಹೇರಿ ಹೋಗಿದಾರೆ. ಎಷ್ಟೆಂದರೂ ನಾವು ಹೆಂಗಸರು. ಆ ದೊಡ್ಡ ಭಾರವನ್ನು ನಾವೊಬ್ಬರೇ ಹೊರುವ ಶಕ್ತಿಯಿಲ್ಲ. ಅದಕ್ಕೇ ಅದನ್ನು ಇತರರಿಗೂ ಹಂಚಿಕೊಡುತ್ತಿದೇವೆ. ಆದರೆ ಹಾಗೆ ಪಾಲುಹಂಚಿಕೊಡುವ ಮೊದಲು ಇಷ್ಟು ಪರೀಕ್ಷೆಮಾಡಲೇಬೇಕಾದಂಥ ಪರಿಸ್ಥಿತಿ ಇಂದು ಬಂದಿದೆ. ಇಂದು ನಿನಗೆ ಹಾಲು ಕೊಟ್ಟವರು, ನಾಳೆ, ನಿನಗೆ, ನಮಗೆ ಎಲ್ಲರಿಗೂ ನಾಯಕರಾಗಿ ಆಳಬೇಕಾದವರು. ಆಗದ ಕೆಲವು ಜನ ಅವರ ಜೀವಕ್ಕೆ ಅಪಾಯ ತರಬಹುದು ಎಂದು ಕೇಳಿದೆವು. ಅದಕ್ಕೇ ಆ ಭೀತಿಯಿಂದ ಅವರನ್ನು ರಕ್ಷಿಸಲು ಈ ದಿನ ನಿನ್ನನ್ನು ಇಲ್ಲಿಗೆ ಕರೆಸಿದೆವು. ಆಯಿತು ನಮ್ಮ ಭಾರ ತೀರಿತು. ಅವರ ಜೀವವನ್ನು ನಿನ್ನ ಕೈಗೆ ಒಪ್ಪಿಸಿದೇವೆ. ಅವನ್ನು ಕಾಪಾಡುವ ಭಾರ, ಇಂದಿನಿಂದ, ಈ ಗಳಿಗೆಯಿಂದ ನಿನ್ನದು. ಒಳಕಾವಲಿಗೆ ನಿನ್ನೊಂದಿಗೆ ಗಿರಿಜೆಯನ್ನು ನೇಮಿಸಿದೇವೆ!"

—ಎಂದು, ಓಬಣ್ಣನಾಯಕನತ್ತ ತಿರುಗಿ—

“ಓಬಣ್ಣಾ. ನೀನವರ ಧಣಿ, ದೊರೆ. ಆದರೆ ನಿನ್ನ ರಕ್ಷಣೆಯ ವಿಷಯದಲ್ಲಿ ಮಾತ್ರ ಅವರು ಹೇಳಿದಂತೆ ಕೇಳಬೇಕು. ನಮ್ಮ ಮಾತಿಗೆ ಎಷ್ಟು ಬೆಲೆಯೋ, ಅಷ್ಟೇ ಬೆಲೆಯೇ ಅವರ ಮಾತಿಗೂ ದೊರೆಯಬೇಕು. ತಿಳಿಯಿತೇ ? ”

—ಎಂದಳು. “ ನೀವಿಬ್ಬರೂ ಇಲ್ಲಿ ಬನ್ನಿ” ಎಂದು ದೂರದಲ್ಲಿ ನಿಂತಿದ್ದ ಗಿರಿಜ, ಕಸ್ತೂರಿನಾಯಕ ಇಬ್ಬರನ್ನೂ ತನ್ನ ಬಳಿ ಕರೆದಳು. ಅವರಿಬ್ಬರೂ ಜೊತೆಯಾಗಿ, ನಾಗತಿ ಕುಳಿತಿದ್ದ ಆಸನದ ಬಳಿಸಾರಿ ನಿಂತರು. ಅವರಿಬ್ಬರ ಮುಖವನ್ನೂ ಮಮತೆ ತುಂಬಿದ ನೋಟದಿಂದ ನೋಡುತ್ತಾ ನಾಗತಿ ಹೇಳಿದಳು—

“ ನೋಡು ಗೀರಿಜಾ-ನಮ್ಮ ಓಬಣ್ಣನಿಗೆ ತಂದೆತಾಯಿಗಳಿಲ್ಲ, ತಾಯಿ ತಂದೆ ಎರಡೂ ಆಗಿ ನೋಡಿಕೊಳ್ಳುತ್ತಿದ್ದ ಗೌರವ್ವನಾಗತಿ ಸತ್ತು ಸ್ವರ್ಗ ದಲ್ಲಿದ್ದಾರೆ. ಈಗ ಅವನಿಗೆ ನಾನು ತಾಯಿ ಎಂದುಕೊಂಡಿದ್ದೆ. ಆದರೆ ಅವನನ್ನು ಕಾಪಾಡುವಷ್ಟು ಶಕ್ತಿ ನನಗಿಲ್ಲ. ಅದಕ್ಕೇ ಅವನನ್ನು ನಿಮಗೆ ಒಪ್ಪಿಸುತ್ತಿದ್ದೇನೆ. ಇಂದಿನಿಂದ ನೀವಿಬ್ಬರೂ ಅವನಿಗೆ ತಾಯಿ-ತಂದೆ. ಒಪ್ಪಿಸಿಕೊಳ್ಳಿ.”

—ಎಂದು ಓಬಣ್ಣನಾಯಕನ ಕೈಗಳನ್ನು ಅವರಿಬ್ಬರ ಕೈಗಳಲ್ಲಿ ಟ್ಟಳು.”

ನಾಗತಿಯ ಮಾತಿಗೆ ಅವರಿಬ್ಬರೂ ಉತ್ತರಕೊಡಲಿಲ್ಲ. ಉತ್ತರದ ಮಾತನಾಡುವ ಶಕ್ತಿ, ದುಃಖತುಂಬಿ ಬಿಗಿದ ಅವರ ಕಂಠಗಳಿಗಿರಲಿಲ್ಲ.

೮

“ ಸಾಕು. ಈಗಾದ ಹಗರಣವೇ ಸಾಕು. ಇನ್ನು ಹೆಚ್ಚಿನದು ಬೇಡ. ಸಾಕು....ಸಾಕು....ನಿಜ.... ನನಗೂ ಸಾಕಾಗಿದೆ ದೇಸಣ್ಣ. ಹಗರಣ ಸಾಕು....ಈಗ ಬೇಕಾಗಿರುವುದು ಹಗರಣವಲ್ಲ, ಮಾರಣ ಹೋಮ. ಅದಕ್ಕೆ ಮೊದಲ ಬಲಿ-ನಿನ್ನ ತಲೆ ! ”

—ಆ ಮಾತುಗಳನ್ನು ಕೇಳಿದ ಗೋಡೆಗಳೂ ಭೀತಿಯಿಂದ ನಡುಗಿ ಮರಗಟ್ಟುವಷ್ಟು ಕ್ರೋಧಕರ್ಕಶವಾದ ಧ್ವನಿಯಲ್ಲಿ ತನಗೆ ತಾನೇ ಹೇಳಿಕೊಂಡ ಮುದ್ದಣ್ಣ.

ಅರಮನೆಯಲ್ಲಿ ರಹಸ್ಯವಾಗಿ, ನಾಗತಿಯವರಿಂದ ದತ್ತು ಸ್ವೀಕಾರ ವಾಯಿತು; ಇನ್ನು ಮೂರು ದಿನಕ್ಕೆ ಪಟ್ಟಾಭಿಷೇಕ; ಈ ತೀರ್ಮಾನವಾದ ರಹಸ್ಯಸಭೆಯಲ್ಲಿ ದಳವಾಯಿ ದೇಸಣ್ಣನವರೂ ಇದ್ದರು ಎಂಬುದನ್ನು ಕೇಳಿದ ಮುದ್ದಣ್ಣ ಉಕ್ಕಿಬಂದ ಕ್ರೋಧದಲ್ಲಿ ಕೆಣಕಿದ ಸರ್ಪವಾಗಿದ್ದ.

ಪಟ್ಟಾಭಿಷೇಕದ ಹಿಂದಿನ ದಿನದ ವರೆಗೂ ಈ ಸುದ್ದಿಯನ್ನು ಯಾರಿಗೂ ತಿಳಿಯದಂತೆ ರಹಸ್ಯವಾಗಿಟ್ಟಿರಬೇಕೆಂದು ಆ ಸಭೆಯಲ್ಲೇ ತೀರ್ಮಾನವಾಗಿತ್ತು. ಆದರೆ ತಮ್ಮನಲ್ಲಿ ನಂಬಿಕೆಯಿಟ್ಟ ಲಿಂಗಣ್ಣ ನಾಯಕನಿಂದ ಅದು ಚಿಕ್ಕಣ್ಣನಾಯಕನಿಗೆ ತಿಳಿದು, ಆತನ ಮೂಲಕ ಅದು ಮುದ್ದಣ್ಣನ ಕಿವಿ ಸೇರಿತ್ತು.

ಆ ಸುದ್ದಿಯನ್ನು ಕೇಳಿದ ಕೂಡಲೇ ಮುದ್ದಣ್ಣ ಹೃದಯದಲ್ಲಿ ದೇಸಣ್ಣನ ಬಗ್ಗೆ ಇದ್ದ ಅಸಮಾಧಾನ, ದ್ವೇಷದ ದಳ್ಳುರಿಯಾಗಿ ಥಳಿಸಿತು. ತನ್ನ ಒಳಹಂಚಿಕೆಯ ಕಾರ್ಯದಲ್ಲಿ ದೇಸಣ್ಣ ನೆರವಾಗುವನೆಂಬ ನಂಬಿಕೆ ಮುದ್ದಣ್ಣನಿಗಿರಲಿಲ್ಲ. ಅದನ್ನು ಆತ ಯಾರಿಗೂ ತಿಳಿಸಿರಲಿಲ್ಲ. ಅದನ್ನು ಅರಿತಿದ್ದವರು ಅವನ ತಮ್ಮಂದಿರು ರಾಯಣ್ಣ-ಚುಕ್ಕಣ್ಣ ಇಬ್ಬರೇ. ನಾಲ್ಕನೆಯವರು ಯಾರಿಗೂ ಅದು ತಿಳಿಯದು. ದಳವಾಯಿಗಳಲ್ಲಿ, ತನ್ಮೂಲಕ ಸೇನೆಯಲ್ಲಿ ಅರಮನೆಯವರ ವಿರುದ್ಧ ಅಸಮಾಧಾನ ಹಬ್ಬಿಸುವುದರಲ್ಲಿ ಉತ್ತಮಸಾಧನವೆಂದು ಮಾತ್ರ ಆತ ದೇಸಣ್ಣನನ್ನು ನಂಬಿದ್ದ. ಈಚೀಚೆಗೆ ಆ ನಂಬಿಕೆಯೂ ಕಡಮೆಯಾಗಿತ್ತು. ಎಂತಲೇ ಆತನ ಓಡಾಟದ ಮೇಲೂ ತನ್ನ ಬೇಹುಗಾರರ ಕಾವಲು ಹಾಕಿದ್ದ. ಈಚೆಗೆ ಒಂದೆರಡು ಬಾರಿ ದೇಸಣ್ಣ ಒಂಟಿಯಾಗಿ ಭುವನಪ್ಪನವರನ್ನು ಕಂಡುದೂ ಆತನಿಗೆ ತಿಳಿದಿತ್ತು. ಆದರೆ ತಮಗೆ ಸುಳಿವೂ ಕೊಡದೆ, ಆತ ಭುವನಪ್ಪನವರ ಪಕ್ಷ ಸೇರಬಹುದೆಂದು ಮುದ್ದಣ್ಣ ಲೆಕ್ಕಹಾಕಿರಲಿಲ್ಲ. ಇಂದಲ್ಲ ನಾಳೆ ದೇಸಣ್ಣ ತನಗೆ ವಿರೋಧಿ ಎಂದು ಅರಿತುಕೊಂಡಿದ್ದ ಮುದ್ದಣ್ಣನಿಗೂ ಇದು ಅನಿರೀಕ್ಷಿತ ಆಘಾತವಾಗಿ ಅವನು ಹಾಕಿದ ಲೆಕ್ಕವೆಲ್ಲಾ ತಲೆಕೆಳಗಾಗಿತ್ತು. ಆ ಕೂಡಲೇ ಅವನ ಮನಸ್ಸಿಗೆ ಬಂದ ವಿಚಾರ—ಇನ್ನು ದೇಸಣ್ಣನ ತಲೆ ಉಳಿಸಕೂಡದು, ಉಳಿಸಿದರೆ ತಮ್ಮ ತಲೆ ಉಳಿಯುವುದಿಲ್ಲ ಎಂಬುದು. ಆದರೆ ಅದಕ್ಕೆ ಸಿದ್ಧತೆಮಾಡುವ ಮೊದಲು ಕಡೆಯ ಬಾರಿಗೆ

ದೇಸಣ್ಣನೊಂದಿಗೆ ಮಾತಾಡಿ, ಆತನ ನಿಲುವು ಹೀಗೇ ಎಂಬುದನ್ನು ಕಂಡುಕೊಂಡು ಬರಬೇಕೆಂದು, ದೇಸಣ್ಣನ ಮನೆಗೆ ಧಾವಿಸಿದ್ದ.

ಮುದ್ದಣ್ಣ ದೇಸಣ್ಣನ ಮನೆಗೆ ಹೋದಾಗ ದೇಸಣ್ಣ ಮನೆಯಲ್ಲಿರಲಿಲ್ಲ. ಸಂಜೆಯ ಹೊತ್ತಾದುದರಿಂದ ತನ್ನ ಆರಾಧ್ಯ ದೇವತೆಯಾದ ಗಣಪತಿಯ ದೇವಸ್ಥಾನಕ್ಕೆ ಹೋಗಿದ್ದಾನೆಂದು ಆಳುಗಳಿಂದ ತಿಳಿದು, ಆತನನ್ನು ಹುಡುಕಿಕೊಂಡು ಅಲ್ಲಿಗೇ ಹೋದ.

ಮದಕರಿನಾಯಕರು ಸಾಯುವ ಮುನ್ನ ಕಟ್ಟಿಸಿದ ಟೀಕಿನ ಬಾಗಿಲಿನಿಂದ ಸ್ವಲ್ಪ ಮೇಲೆ, ಖಾಸಾ ಗರಡಿಯ ಮನೆಯ ಬಳಿ ಗಣಪತಿಯ ದೇವಾಲಯವಿತ್ತು. ಗಣಪತಿಯ ದೇವಾಲಯ ದುರ್ಗದಲ್ಲೆಲ್ಲ ಬಹು ಚಿಕ್ಕ ದೇವಾಲಯವಾದರೂ ಅದರ ಖ್ಯಾತಿ ದುರ್ಗದಾಚೆಗೂ ವ್ಯಾಪಿಸಿತ್ತು. ಮಲಗಿದ ಆನೆಯಂತೆ ತೋರುವ ದೈತ್ಯಶಿಲೆಯ ಪಾರ್ಶ್ವದಲ್ಲಿ ತಾನೇ ಒಲಿದು ಒಡಮೂಡಿದ್ದ ವಿಘ್ನೇಶ್ವರ. ನಾಯಕರಿಂದ ಹಿಡಿದು ಸಾಮಾನ್ಯ ಪ್ರಜೆಯವರೆಗೆ ಪ್ರತಿಯೊಬ್ಬರಿಗೂ ಆತನೆಂದರೆ ಭಕ್ತಿ; ದುರ್ಗದ ಅಭಿಮಾನಿ ದೇವತೆಗಳಾದ ಸಿದ್ಧರಿಂದ ಪೂಜೆ ಕೈಗೊಳ್ಳಲು ಬಂದವನೆಂದು ನಂಬಿಕೆ. ಆತನಿಗೆ ಬೇಕಾಗಿದ್ದರೆ, ಎಷ್ಟು ದೊಡ್ಡದು ಬೇಕಾಗಿದ್ದರೆ ಅಷ್ಟು ದೊಡ್ಡ ದೇವಾಲಯವನ್ನು ಕಟ್ಟಿಸಿಕೊಳ್ಳಬಹುದಾಗಿತ್ತು. ಆದರೆ ಆತನಿಗೆ ದೇವಾಲಯದ ಆಡಂಬರಕ್ಕಿಂತ ಶುದ್ಧ ಭಕ್ತಿಯೇ ಹೆಚ್ಚಿನದು ಎಂದು ತೋರಿತೇನೋ! ದುರ್ಗದಲ್ಲಿ ನಾಯಕರ ಮನೆತನವನ್ನು ಸ್ಥಾಪಿಸಿದ ಮತ್ತಿ ತಿಮ್ಮಣ್ಣನಾಯಕ, ಈ ವಿನಾಯಕನಿಗೂ ದೊಡ್ಡ ಗುಡಿಯೊಂದನ್ನು ಕಟ್ಟಬೇಕು ಎಂದುಕೊಂಡಾಗ, 'ಅದು ಕೂಡದು. ಬಿಸಿಲು ಮಳೆಗೆ ಅಡ್ಡವಾಗಿ ಗರ್ಭಾಂಕಣವೊಂದನ್ನು ಕಟ್ಟಿಸು ಸಾಕು, ಎಂದು ಕನಸಿನಲ್ಲಿ ಅಪ್ಪಣೆಯಾಯಿತಂತೆ. ಆದುದರಿಂದ ಅಷ್ಟು ಪ್ರಸಿದ್ಧನಾದ ಗಣಾಧಿಪನಿಗೆ ಇರುವುದು ಬರೀ ನಾಲ್ಕಡಿ ಚೌಕದ ಒಂದು ಗರ್ಭಗೃಹ, ಅದರ ಮುಂದೆ ಹತ್ತು ಜನ ಕುಳಿತುಕೊಳ್ಳಬಹುದಾದಂಥ ಸಣ್ಣ ಕೈಸಾಲೆ, ಅಷ್ಟೇ. ನೂರಾರು ಜನ ನಿತ್ಯವೂ ಹರಸಿಕೊಳ್ಳುವ ಆ ಗಣೇಶ, ದೇಸಣ್ಣನಿಗೆ ಆಪತ್ಕಾಲದ ದೇವತೆಯೇ ಅಲ್ಲ. ನಿತ್ಯದ ಆರಾಧ್ಯ ದೇವತೆ. ಹಗಲು-ಸಂಜೆ ಎರಡು ಹೊತ್ತೂ ಅಲ್ಲಿಗೆ ಹೋಗಿ ಪೂಜೆ ಮಾಡಿಸಿಕೊಂಡು

ಬಂದಮೇಲೇ ಊಟ, ನಿದ್ರೆ. ಎಂದಿನಂತೆ ಅಂದೂ ಅಲ್ಲಿಗೆ ಹೋಗಿದ್ದ ದೇಸಣ್ಣ ಪೂಜೆ ಮುಗಿಸಿಕೊಂಡು ಹೊರಬರುವುದಕ್ಕೂ, ಮುದ್ದಣ್ಣ ಇದಿರಿಗೆ ಬರುವುದಕ್ಕೂ ಸರಿಹೋಯಿತು.

ದೇವಾಲಯದಿಂದ ಹೊರಬರುತ್ತಿದ್ದಂತೆಯೇ ಮುದ್ದಣ್ಣನ ಮುಖವನ್ನು ನೋಡಿ, ದೇಸಣ್ಣನ ಮನಸ್ಸು ಮುಳ್ಳಾಯಿತು. ದೇವಾರಾಧನೆಯಿಂದ ದೊರೆತಿದ್ದ ಶಾಂತಿ ಚೆದರಿ ಹೋಗಿ, 'ಏಕೋ ಶಕುನ ಚೆನ್ನಾಗಿಲ್ಲ' ಎನಿಸಿತು. ಆದರೂ ಮನದಲ್ಲಿ ಮೂಡಿದ ಕಹಿಯನ್ನು ಮಾತಿನಲ್ಲಿ ತೋರಗೊಡದೆ—

"ಏನು ಮುದ್ದಣ್ಣ, ಇಷ್ಟು ದೂರ ಬಂದದ್ದು ?"
—ಎಂದು ಕೇಳಿದ.

"ಮಗುವನ್ನು ಜಿಗುಟುವವರೂ ನೀವೇ, ಏಕೆ ಅಳುತ್ತೀ ಎಂದು ಕೇಳುವವರೂ ನೀವೇ."

—ಎಂದ ಮುದ್ದಣ್ಣ ನಗುತ್ತಾ. ಆ ನಗುವಿನಲ್ಲಡಗಿದ ಕೃತ್ರಿಮ ಅದರ ಟೊಳ್ಳು ದನಿಯಲ್ಲಿ ಮೈವೆತ್ತಿತ್ತು. ಮುದ್ದಣ್ಣನ ಮುಖದರ್ಶನದಿಂದ ಮೂಡಿದ ಬೇಸರವನ್ನು ಆ ನಗು ಮತ್ತಷ್ಟು ಬೆಳೆಸಿತು. "ನಿನ್ನೊಂದಿಗೆ ಮಾತೂ ಬೇಡ, ನಗೆಯೂ ಬೇಡ" ಎಂದು ಹೇಳಬೇಕೆನಿಸಿತು. ಆದರೂ ವ್ಯವಹಾರದ ಸೌಜನ್ಯಕ್ಕೆ ಕಟ್ಟು ಬಿದ್ದು, ತಾನೂ ನಗುತ್ತಾ ಕೇಳಿದ ದೇಸಣ್ಣ :

"ಏಕೋ ಒಗಟೆಯಂತೆ ಮಾತಾಡುತ್ತಿದೀಯ. ಏನು, ಸಮಾಚಾರ?"

"ಏನೂ ಇಲ್ಲ. ನಿಮ್ಮನ್ನೇ ನೋಡಬೇಕೆಂದು ಬಂದೆ. ಮನೆಗೆ ಹೋಗಿದ್ದೆ, ಅಲ್ಲಿ ಇಲ್ಲಿರುವುದಾಗಿ ತಿಳಿಯಿತು, ಹುಡುಕಿಕೊಂಡು ಬಂದೆ."

"ಅಷ್ಟು ಅವಸರದ ಮಾತಾಡುವುದಿತ್ತೆ ?"

"ಹೂ, ಅವಸರ-ನನಗೆ, ನಿಮಗೆ ಹೇಗೋ ನಾನು ಕಾಣೆ. ಅವಸರಕ್ಕಿಂತ ಹೆಚ್ಚಾಗಿ ಭಯ, ಅದಕ್ಕೇ ಓಡಿ ಬಂದೆ."

"ಅದೇನು ಅಂಥ ಭಯ ಮುದ್ದಣ್ಣ ?"

"ನಾವು ನಿಂತಿರುವುದೇ ದೇವಾಲಯದ ಇದಿರು. ಅಲ್ಲಿಯೇ ಗರಡಿಯ ಮನೆ, ಬದಿಯಲ್ಲೇ ರಾಜಮಾರ್ಗ. ಇಲ್ಲಿ ದಳವಾಯಿಗಳಿಬ್ಬರು ನಿಂತು

ಮಾತನಾಡುವುದು ಸೂಕ್ತವಾಗಲಾರದು. ಸ್ವಲ್ಪ ಹೊತ್ತು ಬಿಡುವಿದ್ದರೆ, ಬೇರೆಯವರ ಕಿವಿಗೆ ಬೀಳದಂಥ ಮಾತಾಡುವುದಿತ್ತು, ಅವಕಾಶವಿದೆಯೇ?"

—ಮಂಜಿನಂತೆ ಕೊರೆಯುವ ಸ್ವರದಲ್ಲಿ ಕೇಳಿದ ಮುದ್ದಣ್ಣ.

"ಈಗೇನು ದಂಡಿಲ್ಲ, ದಾಳಿಯಿಲ್ಲ, ಹೊತ್ತೆಲ್ಲಾ ನಮ್ಮದೇ. ಬನ್ನಿ, ಇಲ್ಲೇ ಎಲ್ಲಿಯಾದರೂ ಕುಳಿತು ಮಾತನಾಡೋಣ."

—ಎಂದ ದೇಸಣ್ಣ.

ದೇವಾಲಯದಿಂದ ಹೊರಟ ಇಬ್ಬರೂ ನಿಧಾನವಾಗಿ, ಟೇಕಿನ ಬಾಗಿಲತ್ತ ನಡೆದರು. ಮುದ್ದಣ್ಣನ ಮಾತು ರೀತಿಯಿಂದಾಗಿ ದೇಸಣ್ಣನ ತಲೆಯಲ್ಲಿ ನೂರು ಚಿಂತೆಗಳು ತಲೆ ಎತ್ತಿದ್ದುವು. 'ಏನಿರಬಹುದು, ಏನಿರಬಹುದು' ಎಂದು ಚಿಂತಿಸುತ್ತಾ, ಗುಡ್ಡದ ಬಂಡೆಗಳ ಮೇಲೇ ನಿರ್ಮಿಸಿದ ಮಾರ್ಗದಲ್ಲಿ, ಆನೆ ಕುದುರೆಗಳು ಓಡಾಡುವಾಗ ಅವುಗಳ ಹೆಜ್ಜೆ ಜಾರದಿರಲೆಂದು, ಕಲ್ಲಿನಲ್ಲಿ ಕೊರೆದ ಹೆಜ್ಜೆಗಳಲ್ಲಿ ಹೆಜ್ಜೆ ಇಡುತ್ತಾ ಮೌನವಾಗಿ ನಡೆದ.

ಟೇಕಿನ ಬಾಗಿಲ ಬಳಿ ಬಂದ ಮುದ್ದಣ್ಣ "ಇಲ್ಲಿಯೇ ಬಾಗಿಲ ಮೇಲಿನ ಕಾವಲು ಬತೇರಿಯಲ್ಲಿ ಕುಳಿತುಕೊಳ್ಳೋಣ" ಎಂದು ಹೇಳಿ, ಬಾಗಿಲ ಕಾವಲುಗಾರನನ್ನು ಕರೆದು ಯಾರನ್ನೂ ಮೇಲೆ ಬಿಡಬೇಡ" ಎಂದು ಅಪ್ಪಣೆಮಾಡಿ, ದೇಸಣ್ಣನೊಂದಿಗೆ ಬತೇರಿ ಹತ್ತಿದ. ಬತೇರಿಯ ಕಟ್ಟೆಯ ಬಳಿ ಕಾವಲು ನಿಂತಿದ್ದವರಿಗೆ, ಮತ್ತೆ ಕರೆಯುವ ವರೆಗೆ ಕೆಳಗೆ ಇರಬೇಕೆಂದು ಅಪ್ಪಣೆ ಮಾಡಿ, ಅವರು ಕೆಳಗೆ ಇಳಿದು ಹೋಗುವ ವರೆಗೂ ಸುಮ್ಮನಿದ್ದು, ದೇಸಣ್ಣನ ಮುಖದತ್ತ ನೋಡದೆ, ಅಂಬುಗಂಡಿಯಿಂದ ಕೆಳಗೆ ಕಾಣುವ ಹುಲಿಮುಖದ ಮೆಟ್ಟಲುಗಳನ್ನು ನೋಡುತ್ತಾ ಹೇಳಿದ—

"ದಳವಾಯಿಗಳು ದಳವಾಯಿಗಳ ನಡುವೆ ಯಾವ ಮುಚ್ಚು ಮರೆಯೂ ಇಲ್ಲವೆಂದುಕೊಂಡಿದ್ದೆ, ದೇಸಣ್ಣನವರೇ. ಆದರೆ ನೀವು ಇಂದು ನನ್ನ ನಂಬಿಕೆಯನ್ನು ಸುಳ್ಳುಮಾಡಿದಿರಿ."

ತನ್ನ ಮಾತು ಮಬ್ಬು ಕವಿದ ಸಂಜೆಯ ಶಾಂತವಾತಾವರಣದಲ್ಲಿ ಬಹು ದೂರ ತೇಲಿ ಹೋದಷ್ಟು ಮಿದುವಾಗಿ, ಆದರೆ ಅಷ್ಟೇ ಗಡುಸಾಗಿ ಹೇಳಿದ ಮುದ್ದಣ್ಣ. ಆ ಮಾತನ್ನು ಕೇಳಿ ದೇಸಣ್ಣನಿಗೆ ಅನಿರೀಕ್ಷಿತವಾಗಿ ಕೆಂಡವನ್ನು ಮುಟ್ಟಿದಂತಾಯಿತು.

" ಇದೇನು ಮಾತು ಮುದ್ದಣ್ಣ? "

" ಏನು ಮಾತೆಂದು ನೀವೇ ಬಲ್ಲಿರಿ. ನಿಮಗೆ ಗೊತ್ತಿರುವ ಮಾತನ್ನು ನಮ್ಮ ಬಾಯಿಂದ ಹೊರಡಿಸಬೇಕೇ ದೇಸಣ್ಣನವರೇ ? "

ನಿಜವಾಗಿಯೂ ನಿನ್ನ ಮಾತು ನನಗೆ ಅರ್ಥವಾಗುತ್ತಿಲ್ಲ."

" ಹೇಗೆ ಅರ್ಥವಾಗುವುದು ಹೇಳಿ. ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ, ಅದಕ್ಕೆ ಕಾಣದಿರಬಹುದು. ಆದರೆ ಲೋಕ ಕಾಣು ವುದಿಲ್ಲವೇ ? "

—ಅಣಕದ ಹುಸಿನಗೆ ನಗುತ್ತಾ ಹೇಳಿದ ಮುದ್ದಣ್ಣ. ಆ ನಗೆಯ ನಂಜು, ದೇಸಣ್ಣನ ದೇಹಾದ್ಯಂತವೂ ವ್ಯಾಪಿಸಿ, ಎಂದೂ, ಯಾರಿಂದಲೂ ಆ ಬಗೆಯ ಮಾತನ್ನು ಕೇಳದಿದ್ದ ದೇಸಣ್ಣನ ಮೈ ಬಿಗಿಯಾಗಿ ನರಗಳು ಬಿಗಿದುವು.

" ಹೇಳಬೇಕಾದದ್ದನ್ನು ನೇರವಾಗಿ ಹೇಳಬಹುದು ಮುದ್ದಣ್ಣ."— ಎಂದ ದೇಸಣ್ಣ, ಬಿಗಿಯುತ್ತಿದ್ದ ಧ್ವನಿಯಲ್ಲಿ.

" ನೇರವಾಗಿ ಮಾತನಾಡಬೇಕೆಂದೇ ತಮ್ಮನ್ನು ಹುಡುಕಿಕೊಂಡು ಬಂದುದು ದೇಸಣ್ಣನವರೇ."

—ಸವಾಲಿಗೆ ಜವಾಬು ಕೊಡುವವನಂತೆ ಉತ್ತರ ಕೊಟ್ಟ ಮುದ್ದಣ್ಣ.

" ಅದೇನು ಹೇಳು ? "

—ದ್ವಂದ್ವದಲ್ಲಿ ಇದಿರಾಳಿಗೆ ಹಸ್ತಲಾಘವವಿತ್ತು 'ಹೂ, ಆರಂಭಿಸು' ಎಂದು ಹೇಳುವ ಒಗರಿತ್ತು ದೇಸಣ್ಣನ ಮಾತಿನಲ್ಲಿ.

" ನಾವು, ಕಿರಿಯರು ಹಿರಿಯರನ್ನು ನಂಬಿದೆವು. ಅವರ ನಡೆ ಯಲ್ಲಾಗಲಿ, ನುಡಿಯಲ್ಲಾಗಲಿ ಕವಲು ಇರಬಹುದು ಎಂದು ಕನಸು ಮನಸ್ಸಿನಲ್ಲಿಯೂ ಊಹಿಸದೆ, ಅವರು ತೋರಿದ ದಾರಿ ಹಿಡಿದು, ಅವರು ಆಡಲು ಹಿಂಜರಿದ ಮಾತನ್ನು ಅವರಿಗಾಗಿ ನಾವು ನುಡಿದು, ಅರಮನೆ ಯವರ ಅಸಂತೋಷಕ್ಕೆ ಪಾತ್ರರಾದೆವು. ಇದೆಲ್ಲವೂ ನಿಮಗೆ ತಿಳಿಯದ ವಿಷಯವಲ್ಲ."

—ಎಂದು ಕಟುವಾದ ಆಪಾದನೆ ಹೊರಿಸುವ ಧ್ವನಿಯಲ್ಲಿ ಹೇಳಿ, ನಡುವೆಯೇ ಮಾತನ್ನು ನಿಲ್ಲಿಸಿದ.

"ಆಯಿತು. ಮುಂದೆ...."

"ಮುಂದೆ....ನೀವು ಹಿರಿಯರು ಏನನ್ನು ಮಾಡಬಾರದಿತ್ತೋ ಅದನ್ನು ಮಾಡಿದಿರಿ."

"ಅದೇನು ಬಾಯಿಬಿಟ್ಟು ಹೇಳು ಮುದ್ದಣ್ಣ, ಸುತ್ತುಬಳಸಿನ ಮಾತಿನ ಅಗತ್ಯವಿಲ್ಲ ನನಗೆ."

"ಏನು ಮಾಡಿದಿರಿ? ಏನು ಮಾಡಿದಿರಾ—ನಂಬಿದ ನಮ್ಮ ಕುತ್ತಿಗೆ ಕೊಯ್ದಿರಿ. ನಮಗೆ ಸುಳಿವೂ ಕೊಡದೆ ಅರಮನೆಯವರೊಂದಿಗೆ, ಮಂತ್ರಿಗಳೊಂದಿಗೆ ಒಂದಾಗಿ, ಅವರ ಸಂಚುಗೆದ್ದು, ನಮ್ಮ ಮೇಲೆ ಕಪ್ಪಾಗುವಂತೆ ಮಾಡಿದಿರಿ....!"

"ನಾನೇ....ನಾನೇ....!"

—ಆ ಆಪಾದನೆಯ ಉಗ್ರತೆಯಿಂದ ತಬ್ಬಿಬ್ಬಲಾಗಿ ಕೇಳಿದ ದೇಸಣ್ಣ.

"ಅಹುದು—ನೀವೇ" ದೇಸಣ್ಣನ ಮೊಗದತ್ತ ಬೆರಳುಮಾಡಿ ಹೇಳಿದ ಮುದ್ದಣ್ಣ—"ನೀವೇ, ಹಿರಿಯ ದಳವಾಯಿಗಳು. ಬೇರೆ ಯಾರೂ ಅಲ್ಲ. ನಮ್ಮನ್ನು ಕೆಟ್ಟವರನ್ನಾಗಿ ಮಾಡಿ, ನೀವು ಅರಮನೆಯವರ ಜೊತೆ ಸೇರಿದಿರಿ. 'ನಿಮ್ಮ ಸ್ನೇಹ ಸಾಕು. ಇನ್ನು ನನ್ನ ದಾರಿ ನನಗೆ, ನಿಮ್ಮದು ನಿಮಗೆ' ಎಂದಿದ್ದರೆ ನಾವಾರೂ ಅಡ್ಡವಾಗುತ್ತಿರಲಿಲ್ಲ."

"ಈಗಾದ ಭಂಡಾರ ದ್ರೋಹವೇನು ಮುದ್ದಣ್ಣ?"

"ಅರಮನೆಯವರು ಯಾರಿಗೂ ಸುಳಿವು ಕೊಡದೆ, ದತ್ತು ಸ್ವೀಕಾರ ನಡಸಿ, ಪಟ್ಟಾಭಿಷೇಕಕ್ಕೂ ಮುಹೂರ್ತ ನಿಶ್ಚಯಮಾಡಿ ಇದೆಲ್ಲವೂ ತೀರ್ಮಾನವಾದ ರಹಸ್ಯ ಸಭೆಯಲ್ಲಿ ನೀವಿದ್ದೀರಿ. ಆದರೆ ಅದಕ್ಕೆ ಮೊದಲಾಗಲಿ, ಆ ಬಳಿಕಲಾಗಲಿ ನಮಗೆ, ನಿಮ್ಮನ್ನು ನಂಬಿದವರಿಗೆ, ನಿಮಗೆ ಬೆಂಬಲವಾಗಿದ್ದವರಿಗೆ ಒಂದು ಮಾತನ್ನೂ ಹೇಳಲಿಲ್ಲ. ಇದು ದ್ರೋಹವಲ್ಲವಾದರೆ ಮತ್ತೇನು? ಏನು ಹೆಸರಿಡಬೇಕು. ಇದಕ್ಕೆ—ಜ್ಞಾನವೃದ್ಧರೂ, ವಯೋವೃದ್ಧರೂ ಆದ ಹಿರಿಯ ದಳವಾಯಿಗಳೇ ಅಪ್ಪಣೆ ಕೊಡಿಸಬೇಕು.

ಯಾವುದನ್ನು ತಾವು ಅತ್ಯಂತ ರಹಸ್ಯವೆಂದು ಪಾಲಿಸಬೇಕೆಂದಿ

ದ್ದರೋ, ಅದು ಈಗಾಗಲೇ ಹೊರಬಿದ್ದುದನ್ನರಿತು ದೇಸಣ್ಣ ಪಾತಾಳಕ್ಕೆ ಇಳಿದು ಹೋದ. ಉರಿದ ಗಾಯದ ಮೇಲೆ ಚೆಲ್ಲಿದ ಉಪ್ಪುನೀರಿನಂತಿದ್ದ ಆ ಮಾತಿಗೆ ಏನೂ ಉತ್ತರಕೊಡಲಾಗದೆ, ತಲೆತಗ್ಗಿಸಿದ.

"ದೊಡ್ಡ ದಳವಾಯಿಗಳು ಮಾತನಾಡಬೇಕು. ಈ ರಹಸ್ಯ ಯಾರಿಗೂ ತಿಳಿಯುವುದಿಲ್ಲ ಎಂದಿದ್ದಿರೇನೋ. ಆದರೆ ಮನಸ್ಸುಮಾಡಿದರೆ ಗೊತ್ತು ಹಚ್ಚಲಾಗದ ರಹಸ್ಯ ಯಾವುದೂ ಇಲ್ಲ. ಆಯಿತು—ಗುಟ್ಟು ಬಯಲಾಯಿತು! ಈಗ ಮುಂದೇನು ಮಾಡುವಿರೋ ಅದನ್ನಾದರೂ ಹೇಳಿದರೆ ಮಹೋಪಕಾರ ಮಾಡಿದಂತಾಗುವುದು."

"ಅರಮನೆಯವರ ತೀರ್ಮಾನದ ವಿರುದ್ಧ ನಾವೇನು ತಾನೇ ಮಾಡಬಹುದು ಮುದ್ದಣ್ಣ? ನಾವು ಹೇಳಬೇಕಾದುದನ್ನು ಹೇಳಿಯಾಯಿತು. ಮುಂದಿನದು ಅವರ ಚಿತ್ತ. ಇಷ್ಟು ದಿನ ನಮ್ಮನ್ನು ಇಂಥ ವಿಷಯಗಳಲ್ಲಿ ಕೆಲಸಕ್ಕೆ ಬಾರದವರಂತೆ ಕಾಣುತ್ತಿದ್ದವರು ಈಗ, ಕೆಲಸಮಾಡುವ ಮೊದಲು ನಮಗೆ ತಿಳಿಸಿ ಮಾಡುತ್ತಿದ್ದಾರೆ. ಸಾಲದೇ?"

"ಸಾಲದು."

ಹರಿತವಾದ ಕತ್ತಿಯ ಬೀಸಿನಂತಿತ್ತು ಮುದ್ದಣ್ಣನ ಮಾತು.

"ಮತ್ತೆ ಏನಾಗಬೇಕಿತ್ತು?"

"ನ್ಯಾಯದ ಮಾತಿಗೆ ಬೆಲೆ ಬರಬೇಕಾಗಿತ್ತು. ಬೆಲೆ ಬರಲಿ ಬಿಡಲಿ, ಕಡೆಯವರೆಗೂ ನಾವು ಅದಕ್ಕಾಗಿ ಹೋರಾಡಬೇಕಾಗಿತ್ತು. ದಳವಾಯಿಗಳು ಆಡಿದ ಮಾತು, ಬಿಟ್ಟ ಬಾಣ ಎರಡೂ ಹುಸಿಯಾಗುವುದಿಲ್ಲ ಎಂದು ತೋರಿಕೊಡಬೇಕಾಗಿತ್ತು."

"ಹಟಹಿಡಿದು ಅರಮನೆಯವರ ಮೇಲೆ ದ್ವೇಷ ಸಾಧಿಸಬೇಕೇ?"

"ದ್ವೇಷ ಸಾಧಿಸುವುದು ಬೇರೆಯ ಮಾತಾಯಿತು. ಆದರೆ ಹಟ ಬಿಡಬೇಕಾಗಿರಲಿಲ್ಲ. ಸತ್ಯದ ಬಲವಿದ್ದಲ್ಲಿ ಹಟವಿಲ್ಲವೆ ಹೋದರೆ, ಬೇರೆ ಯಾವಾಗ ಛಲಕ್ಕೆ ಸಮಯ?"

"ಈಗ ಅದೆಲ್ಲವೂ ಆಯಿತು. ಹಿಂದಾದುದನ್ನು ಚಿಂತಿಸಿ ಫಲವೇನು? ಮುಂದೆ ಆಗಬೇಕಾದುದನ್ನು ಯೋಚಿಸು ಮುದ್ದಣ್ಣ."

"ಅದಕ್ಕೆಂದೇ ನಿಮ್ಮಲ್ಲಿಗೆ ನಾನು ಬಂದದ್ದು."

"ಏನು ಮಾಡಬೇಕೆನ್ನುತ್ತೀಯ?"

"ಪಟ್ಟಾಭಿಷೇಕಕ್ಕೆಂದು ಹತ್ತು ಜನ ಕಲೆತಾಗಲೇ, ಎದ್ದುನಿಂತು 'ಇದು ನಮಗೆ ಒಪ್ಪಿಗೆಯಿಲ್ಲ, ನಮ್ಮ ಮನಸು ಮುರಿದು ಪಟ್ಟಾಭಿಷೇಕ ಮಾಡುವಂತಿದ್ದರೆ ಮಾಡಿ' ಎಂದು ಸಾರಬೇಕು. ಅದು ಕಡೆಯ ಘಟ್ಟ. ಅಲ್ಲೂ ನಮ್ಮ ಮಾತಿಗೆ ಬೆಲೆ ಬರದಿದ್ದಲ್ಲಿ 'ನೀವು ಕೊಟ್ಟ ಕತ್ತಿ ನೀವು ಒಪ್ಪಿಸಿಕೊಳ್ಳಿ' ಎಂದು ಹೇಳಿ ಹೊರಬರಬೇಕು. ದಳವಾಯಿಗಳ ಹಿರಿಯರಾಗಿ ನೀವು ಈ ಮಾತನ್ನು ಅಂದು ಹೇಳಬೇಕು. ಇದು ಒಪ್ಪಿಗೆ ಇದೆಯೇ ನಿಮಗೆ?"

—ಕರ್ಕಶತೆ ತಾನೇ ತಾನಾಗಿ ತಾಂಡವವಾಡುವ ಧ್ವನಿಯಲ್ಲಿ ಕೇಳಿದ ಮುದ್ದಣ್ಣ. ಪರಿಸ್ಥಿತಿ ಕೈಮೀರಿ ಪ್ರಕೋಪಕ್ಕೆ ಹೋಗುತ್ತಿರು ವುದನ್ನರಿತು, ಹೇಗಾದರೂ ಅದು ಆ ಮಟ್ಟಕ್ಕೆ ಹೋಗದಂತೆ ತಡೆಯ ಬೇಕೆಂದು ನಿಶ್ಚಯಿಸಿ, ಹೇಳಿದ ದೇಸಣ್ಣ.

"ಅದು ತುಂಬಾ ತುಟಿಮೀರಿದ ಮಾತಾಯಿತು ಮುದ್ದಣ್ಣ. ಎಷ್ಟೆಂದರೂ, ನಾವೂ, ದಳವಾಯಿಗಳು ಅರಮನೆಯ ಉಪ್ಪುಂಡ ಜನ. ಧಣಿಯ ಎದುರಿಗೆ ಮರೆತು ಮಾತನಾಡುವುದು ದೇವರು ಒಪ್ಪದ ಮಾತು. ನನ್ನಲ್ಲಿ ಇನ್ನು ನಂಬಿಕೆ ಇರುವುದಾದರೆ ಕೇಳು ಮುದ್ದಣ್ಣ-ಈ ಮಾತನ್ನು ಇಲ್ಲಿಗೆ ಬಿಡು. ಶಿವನ ಪಾದಸಾಕ್ಷಿಯಾಗಿ ಹೇಳುತ್ತೇನೆ. ಈಗ ನಾಗತಿ ಯವರು ಅಂದುಕೊಂಡಿರುವ ಕೆಲಸದಿಂದ ಯಾರಿಗೂ ಕೆಡಕಾಗುವುದಿಲ್ಲ. ಎಲ್ಲವೂ ಒಳತಿನಲ್ಲೇ ಪರಿಣಾಮವಾಗುತ್ತದೆ. ಈಗಾದ ಹಗರಣವೇ ಸಾಕು. ಹಗರಣಕ್ಕೆ ದಾರಿ ಮಾಡಬೇಡ. ಇಷ್ಟಕ್ಕಿಂತ ಹೆಚ್ಚು ನಾನು ಇಂದು ಹೇಳಲಾರೆ. ತಾಳ್ಮೆಯಿಂದ ಕಾದು ನೋಡಿದರೆ, ನಿನಗೇ, ಇಂದಲ್ಲ ನಾಳೆ ನನ್ನ ಮಾತು ಸರಿ ಎಂದು ಮನವರಿಕೆಯಾಗುತ್ತದೆ. ಅಷ್ಟು ಸಹನೆಯಿರಲಿ."

"ಇದಾರು-ಭುವನಪ್ಪನವರು ಕಲಿಸಿದ ಪಾಠವೇ ದೇಸಣ್ಣನವರೇ? ಕಲಿತ ಪಾಠವನ್ನು ಸರಿಯಾಗಿ ಒಪ್ಪಿಸಿದಿರಿ. ಹೀಗಾಗಬಾರದು ಹೀಗಾಗ ಬಾರದು, ಎಂದು ನಾನು ಬಯಸಿದೆ. ಆದರೆ ನನ್ನ ಬಯಕೆ ನೆರವೇರ ಲಿಲ್ಲ. ಯಾವುದು ಹೇಗಾಗಬೇಕೋ, ಹಾಗೆ ಆಗಬೇಕು. ಯಾರು ತಾನೇ ಅದನ್ನು ತಪ್ಪಿಸಲು ಸಾಧ್ಯ? ಅಲ್ಲವೇ ದೇಸಣ್ಣನವರೇ?"

—ದೇಸಣ್ಣನ ಮಾತಿಗೆ ಒಪ್ಪಿದಂತೆ ನುಡಿದ ಮುದ್ದಣ್ಣನ ಅಂತರಾಳದಲ್ಲಿ ವಿದ್ರೋಹದ ಜ್ವಾಲಾಮುಖಿ ಉರಿಯುತ್ತಿದ್ದುದು ಅರಿವಾಗಿ, ದೇಸಣ್ಣ ಹೇಳಿದ—

" ನಿಜ. ಏನಾಗಬೇಕೋ ಅದೇ ಆಗುವುದು. ದೈವೇಚ್ಛೆಗೆ ಯಾರು ಇದಿರು ? "

" ನಿಜ. ನಿಜ. ಯಾರೂ ಇದಿರಾಗುವುದು ಸಾಧ್ಯವಿಲ್ಲ. ಆಯಿತು ದೇಸಣ್ಣನವರೇ, ಇಷ್ಟು ಮಾತನ್ನು ನಿಮ್ಮನ್ನು ಕೇಳಬೇಕು ಎಂದು ಬಂದೆ–ಮನಸ್ಸು ತಡೆಯದೆ. ಆಯಿತು. ಇದಕ್ಕೂ ನಮಗೂ ಇನ್ನೇನು ಸಂಬಂಧ ? ದುರ್ಗದ ಆಡಳಿತ ಹೇಗಾದರೂ ನಡೆಯಲಿ, ಯಾರಾದರೂ ನಡಸಿಕೊಳ್ಳಲಿ "

—ಎಂದು ನಮ್ರವಾದ ಧ್ವನಿಯಲ್ಲಿ ಹೇಳಿ, ಅದಕ್ಕೆ ದೇಸಣ್ಣ ಉತ್ತರವಾಗಿ ಹೇಳುವ ಮಾತನ್ನು ಕೇಳದೆ, ಅಲ್ಲಿಂದ ವೇಗವಾಗಿ ಹೊರಟು ತನ್ನ ಮನೆಗೆ ಬಂದಿದ್ದ ಮುದ್ದಣ್ಣ.

" ಈಗಾದ ಹಗರಣವೇ ಸಾಕು. ಇನ್ನು ಹೆಚ್ಚಿನ ಹಗರಣ ಬೇಡ " ಎಂದು ದೇಸಣ್ಣ ಹೇಳಿದ ಮಾತು ಮುದ್ದಣ್ಣನ ಎದೆಯಲ್ಲಿ, ಮತ್ತೆ ಮತ್ತೆ ಮಾರ್ನುಡಿದು, ಹೊರಳಿವತ್ತ ಇರಿಯುತ್ತಿತ್ತು, ಮತ್ತೆ ಮತ್ತೆ ತನಗೆ ತಾನೇ, ಆ ಮಾತಿಗೆ ಉತ್ತರ ಕೊಡುವಂತೆ ಹೇಳಿಕೊಂಡ.

" ನಿಜ ದೇಸಣ್ಣಾ—ಇನ್ನು ಹಗರಣ ಸಾಕು. ಈಗ ಆಗಬೇಕಾದುದು ಹಗರಣವಲ್ಲ ಮಾರಣಹೋಮ."

ಈ ಮಾತನ್ನು ತನಗೆ ತಾನೇ ಹೇಳಿಕೊಳ್ಳುತ್ತಾ ಗಹಗಹಿಸಿ ನಕ್ಕ. ಆ ನಗುವಿನ ಧ್ವನಿ ಹಜಾರದಿಂದ ದಾಟಿ, ಮನೆಯನ್ನೆಲ್ಲಾ ವ್ಯಾಪಿಸಿ, ಮಲಗಿದ್ದ ಬೇಟೆಯ ನಾಯಿಗಳು ಎದ್ದು ಭೀಕರವಾಗಿ ಮೊರೆದು ಬಗುಳುವಂತೆ ಮಾಡಿತು. ಅದರ ಬಗುಳುವಿಕೆಯಿಂದ ಎಚ್ಚರವಾದ ಡೇಗೆಗಳು, ಬೇಟೆಯ ಹೊತ್ತು ಬಂದಿತೇನೋ ಎಂದು ತಿಳಿದು ಹರಿತವಾದ ಕೀಚು ಧ್ವನಿಯಲ್ಲಿ ಸಿಳ್ಳು ಹಾಕಿದುವು.

ಬೇಟೆಯ ನಾಯಿಗಳು ಬಗುಳಿದುವು, ದೀವದ ಹದ್ದು ಡೇಗೆ ಚೀರಿದುವು. ಮುದ್ದಣ್ಣ ನಗುತ್ತಲೇ ಇದ್ದ.

ಕಾಳರಾತ್ರಿ

೧

ಚೈತ್ರ ಶುದ್ಧ ಪಾಡ್ಯಮಿಯ ದಿನ, ಯುಗಾದಿಯ ಮಂಗಳ ಮುಹೂರ್ತದಲ್ಲಿ ಓಬಣ್ಣನಾಯಕರ ಪಟ್ಟಾಭಿಷೇಕ ನಡೆಯಿತೆಂಬ ವಾರ್ತೆಯನ್ನು ಸಾಲು ಫಿರಂಗಿಗಳ ಸದ್ದು, ಕಹಳೆ, ಭೇರಿಗಳ ಮೊಳಗು ದೇಶಕ್ಕೆಲ್ಲಾ ಸಾರಿದುವು. ವರ್ಷದಾದಿದಿನದಂದು, ದುರ್ಗದಲ್ಲಿ ನೂತನ ರಾಜ್ಯಾರಂಭ ವಾಯಿತು.

ಸಂಪಗೆಯ ಸಿದ್ಧೇಶ್ವರನ ದೇವಾಲಯದ ಪ್ರಾಕಾರದಲ್ಲಿ ನಿರ್ಮಿತ ವಾದ ಪಟ್ಟಾಭಿಷೇಕ ಪೀಠದ ಮೇಲೆ ಕುಳಿತು, ರಾಜ್ಯಾಭಿಷೇಕ ಮಾಡಿಸಿ ಕೊಂಡ. ಸಕಲ ದೇವತೆಗಳ ಪ್ರಸಾದಾಶೀರ್ವಾದ ಸ್ವೀಕರಿಸಿ, ಚಿತ್ರ ದುರ್ಗದ ನಾಯಕರಿಗೆ ಸಿದ್ಧರು ದಯಪಾಲಿಸಿದ್ದ, ಸಿದ್ಧಮೂಲಿಕೆ, ಕೈ ಅಂಬನ್ನು ಹಿಡಿದು, ಹಣೆಗೆ ದೆಸೆಗಟ್ಟಿನ ಧೂಳಿತವನ್ನು ಧರಿಸಿ, ಮಂತ್ರ ಘೋಷದೊಂದಿಗೆ ಬೆರೆತು, ನೂರಾರು ಚಿನ್ನದ ಕಹಳೆ ಕೂಗುತ್ತಿರಲು, ವಂಧಿಮಾಗಧರಿಂದ “ ರಾಜಾಧಿರಾಜ ಶ್ರೀಮನ್ಮಹಾನಾಯಕಾಚಾರ್ಯ ” ಎಂದು ಪರಾಕು ಹೇಳಿಸಿಕೊಂಡ. ಮಂತ್ರಿ ಮಾಂಡಲಿಕರಿಂದ ನಜರು ಮುಜುರೆಯನ್ನು ಒಪ್ಪಿಸಿಕೊಂಡ. ಚಿನ್ನದ ಅಂಬಾರಿಯಲ್ಲಿ ಕುಳಿತು ಮೇಲು ದುರ್ಗ, ಕೆಳದುರ್ಗಗಳಲ್ಲಿ ಮೆರವಣಿಗೆಯಾಯಿತು. ಸಿದ್ದಯ್ಯನ ಬಾಗಿಲ ಮುಂದಿನ ಬಯಲಿನಲ್ಲಿ ಬಗೆಬಗೆಯ ಮಲ್ಲಗಾಳಗ, ಬೇರೆ ಬೇರೆ ಪ್ರಾಣಿಗಳ ಕಾಳಗಗಳು ನಡೆದು, ನೋಡಿದ ಜನರ ಮನಸು ಉಲ್ಲಾಸ ವಾಯಿತು.

ಮೂರು ಮೂರು ದಿನ ದುರ್ಗ ಹೊಸ ಮದುವಣಗಿತ್ತಿಯಂತೆ ನಲಿಯಿತು.

ಮದಕರಿನಾಯಕರ ಬಯಕೆ ತೀರಿತು; ಓಬಣ್ಣನಾಯಕ ದುರ್ಗದ ನಾಯಕನಾದ. ನಾಗತಿ ತಾನು ಹೊತ್ತ ಹೊರೆ ನೆತ್ತಿಯಿಂದ ಇಳಿಯಿತು ಎಂದು ಸಮಾಧಾನದ ನಿಟ್ಟುಸಿರಿಟ್ಟಳು, ಅಷ್ಟೇ.

ನಾಗತಿಯೊಬ್ಬಳಿಗೇನು, ಎಲ್ಲರಿಗೂ ಅಷ್ಟೇ. ಆಗಬೇಕಾದ ಕೆಲಸ, ಹೆದರಿದ ಅಡ್ಡಿ ಆತಂಕಗಳೊಂದೂ ಇಲ್ಲದೆ ಮುಗಿದು ಹೋಯಿತಲ್ಲಾ

ಎಂದು ಸಮಾಧಾನವಾಯಿತು. ಅದಕ್ಕಿಂತ ಹೆಚ್ಚಿನ ಹರ್ಷ, ಪಟ್ಟ ಕಟ್ಟಿಸಿ ಕೊಂಡವರಿಗಾಗಲಿ ಪಟ್ಟ ಕಟ್ಟಿದವರಿಗಾಗಲಿ ಇಲ್ಲ. ಎಲ್ಲರಿಗೂ ಕೆಲಸ ನಡೆಯಿತು ಎಂಬ ಸಮಾಧಾನವೇ ವಿನಾ, ಅದು ಹೇಗೆ ನಡೆಯಬೇಕಾಗಿತ್ತೋ, ಎಷ್ಟು ಹರ್ಷದಿಂದ, ವಿಜೃಂಭಣೆಯಿಂದ ನಡೆಯಬೇಕಾಗಿತ್ತೋ ಹಾಗೆ ನಡೆಯಲಿಲ್ಲ ಎಂಬ ಅರಕೆ ಎಲ್ಲರಲ್ಲೂ ಇತ್ತು. ದೊರೆಗಳಾದವರಿಗೂ ಇತ್ತು; ಹೊಸ ದೊರೆಯನ್ನು ಪಡೆದ ಪ್ರಜೆಗಳಿಗೂ ಇತ್ತು.

ಪ್ರಜೆಗಳ ಪಾಲಿಗೆ ಪಟ್ಟಾಭಿಷೇಕದ ವಾರ್ತೆ ಆಕಸ್ಮಿಕವಾಗಿ ಬಂದಿತ್ತು. ಹಿಂದಿನ ದಿನ ಊರ ಜನವೆಲ್ಲಾ ಮರುದಿನದ ಹಬ್ಬಕ್ಕೆ ಸಿದ್ಧತೆಮಾಡಿಕೊಳ್ಳುತ್ತಿರುವಾಗ, ಮರುದಿನ ಹೊಸ ದೊರೆಯ ಪಟ್ಟಾಭಿಷೇಕಕ್ಕೂ ಸಿದ್ಧರಾಗಬೇಕೆಂಬ ವಾರ್ತೆ ಬಂದು ಅವರನ್ನು ಚಕಿತಗೊಳಿಸಿತ್ತು. ಅಷ್ಟೇ ಮಟ್ಟಿಗೆ ಅಸಮಾಧಾನವನ್ನು ಉಂಟುಮಾಡಿತ್ತು.

“ಪಟ್ಟಾಭಿಷೇಕವೆಂದರೆ, ಇದೇನು ದಿನನಿತ್ಯ ನಡೆವ ಹಬ್ಬ ಹರಿದಿನವೇ? ವರ್ಷಕ್ಕೊಂದು ಬಾರಿ ನಡೆವ ವರ್ಧಂತಿ ಉತ್ಸವವೇ? ಪುಣ್ಯವಿದ್ದರೆ ಜನ್ಮದಲ್ಲಿ ಒಂದು ಬಾರಿಯೊ, ಎರಡು ಬಾರಿಯೊ ಕಾಣಬಹುದಾದ ಅಪೂರ್ವ ಉತ್ಸವ. ಅದನ್ನಿಷ್ಟು ಅವಸರವಾಗಿ ಮುಗಿಸಿದರೆ ಏನಾದಹಾಗಾಯಿತು. ಹಬ್ಬದ ಊಟಕ್ಕೆ ಕರೆದು ಅರೆ ಹೊಟ್ಟೆ ಊಟಕ್ಕಿಟ್ಟ ಹಾಗೆ ಮಾಡಿದರು ಅರಮನೆಯವರು.”

—ಎಂದು ಊರಿನ ಜನವೆಲ್ಲಾ ಆಡಿಕೊಂಡಿತು.

“ಏನಾದರಾಗಲಿ. ಪಟ್ಟಾಭಿಷೇಕ ಹೇಗೆ ನಡೆಯುವುದೋ ನೋಡೋಣ” ಎಂದು, ಪಟ್ಟಾಭಿಷೇಕ ನಡೆದ ಸಂಪಗೆ ಸಿದ್ಧೇಶ್ವರನ ದೇವಾಲಯದ ಬಳಿ ದಟ್ಟಣಿಸಿದ ಜನ ಜಂಗುಳಿಗೆ ಅಲ್ಲಿಯೂ ನಿರಾಶೆಯೇ ಕೈಗಟ್ಟಿತು. ಮುಕ್ಕಾಲು ಪಾಲು ಜನಕ್ಕೆ ಹೊಸ ದೊರೆಯ ಮುಖವೇ ಕಾಣಲಿಲ್ಲ. ಹೊಸ ದೊರೆಗಳು ಬಂದರು ಬಂದರು ಎಂದು ಜನ ಆಡಿಕೊಳ್ಳುತ್ತಿದ್ದ ಹಾಗೆ, ಅವರು ಬಂದು ದೇವಾಲಯದೊಳಗೆ ಹೋಗಿದ್ದರು. ಜನ ಕಂಡುದು ದೊರೆಯಲ್ಲ—ಅವರ ಸುತ್ತ ನಿಂತ ಬಿಚ್ಚುಗತ್ತಿಯ ಪಹರೆ.

“ಇವೇನಿದು ಹೊಸ ದೊರೆಯ ಮೆರವಣಿಗೆಯೋ, ಸೆರೆತಂದ ದಿಬ್ಬಣವೋ. ಸೈನಿಕರ ಕತ್ತಿ ನೋಡಲಿಕ್ಕೆ, ಅವರ ಬಾಯ ಬಯ್ಗಳು

ಕೇಳಲಿಕ್ಕೆ ಬಂದ ಹಾಗಾಯಿತು. ನಾವೇನು ದೊರೇನ ಕೊಲ್ಲಲಿಕ್ಕೆ ಬಂದಿದ್ದೇವೇ? ನೋಡಲಿಕ್ಕೆ, ನೋಡಿ ಸಂತೋಷಪಡಲು ಬಂದವರ ಮೇಲೇ ಇಷ್ಟು ಕಟ್ಟು ಕಾವಲು ಆದರೆ, ಇನ್ನು ಈತನ ಆಳ್ವಿಕೆಯಲ್ಲಿ ನಾವು ಬದುಕಿ ಉಳಿದ ಹಾಗೇ ಆಯಿತು. "

—ಎಂದು ಹೆಚ್ಚು ಪಾಲಿನ ಜನ ಮುಖದ ಮೇಲೆ ಅಸಮಾಧಾನದ ಕೆಂಡವನ್ನು ಹೊತ್ತು ಕೆಳಗಿಳಿದು ಬಂದರು.

" ಇಂಥಾ ಪಟ್ಟಾಭಿಷೇಕಾನ ಊರಿನಲ್ಲಿ ಮಾಡೋದಕ್ಕಿಂತ ಕಾಡಿನಲ್ಲಿ ಮಾಡಿದ್ದರೆ ಚೆನ್ನಾಗಿತ್ತು. ಈ ವೈಭವಕ್ಕೆ ಊರೂಟ, ಊರು ಮೆರವಣಿಗೆ ಏಕೆ ಬೇಕಾಗಿತ್ತೊ ? "

ಎಂದು ಆಡಿಕೊಂಡವರ ಸಂಖ್ಯೆಯೂ ಕಡಮೆಯಿರಲಿಲ್ಲ.

" ಸರಿ ಸರಿ. ಹೇಗೋ ಏನೋ. ಅಂತೂ ಪಟ್ಟಾಭಿಷೇಕ ಅಂತ ಮುಗಿದು, ಸಿಂಹಾಸನದ ಮೇಲೆ ದೊರೆ ಎಂತ ಒಬ್ಬ ಕುಳಿತುಕೊಂಡನಲ್ಲ. ಅಷ್ಟೇ ಸಮಾಧಾನ. ಅದೇ ಆಗುವುದೋ ಇಲ್ಲವೋ, ಅಷ್ಟಾಗಬೇಕಾದರೆ ಎಷ್ಟು ತಲೆ ಉರುಳಿ, ಎಷ್ಟು ರಕ್ತ ಹರಿಯಬೇಕೋ ಅಂತ ಹೆದರಿಕೆಯಾಗಿತ್ತು. ಹೇಗೋ ಮುಗಿಯಿತಲ್ಲ. ಸದ್ಯ, ಪೀಡೆ ಬಗೆಹರಿಯಿತು."

—ಎಂದುಕೊಂಡರು, ಅರಬರೆ ಅರಮನೆಯ ಸುದ್ದಿ ತಿಳಿದ ಜನ.

ಹೇಗೆ ಹೇಗೆ ಅಂದುಕೊಂಡರೂ, ಹೇಗೆ ಸಮಾಧಾನ ಪಟ್ಟುಕೊಂಡರೂ, ಏನು ಅಸಮಾಧಾನದ ಮಾತನಾಡಿದರೂ-ಯಾವುದೋ ನಿರೀಕ್ಷಿತ ಆನಂದದಿಂದ ವಂಚಿತರಾದೆವೆಂಬ ಆವೃತ್ತಿ ಮಾತ್ರ ಎಲ್ಲರಲ್ಲಿಯೂ ಹಬ್ಬಿತ್ತು.

ಆದರೆ ಎಲ್ಲರಿಗಿಂತ ಹೆಚ್ಚು ಅಸಮಾಧಾನ ಸೇನೆಯವರಿಗೆ.

ಸಾಧಾರಣವಾಗಿ, ಪ್ರತಿಯೊಂದು ಬಾರಿಯೂ ಪಟ್ಟಾಭಿಷೇಕ ನಡೆದಾಗ ಸೇನೆಗೆ ಸೇರಿದ ಜನಕ್ಕೆಲ್ಲಾ ಒಂದು ತಿಂಗಳ ಸಂಬಳವನ್ನು 'ಪಟ್ಟದ ಕಾಣಿಕೆ' ಎಂದು ಕೊಡುವುದು ವಾಡಿಕೆಯಾಗಿತ್ತು. ಈ ಬಾರಿಯೂ ಹಾಗೇ ತಮಗೆ ಪಟ್ಟದ ಕಾಣಿಕೆ ದೊರೆಯುವುದೆಂದು ನಂಬಿದ್ದರವರು.

ಆ ನಂಬಿಕೆಯಿಂದ ಪಟ್ಟಕಾಣಿಕೆಯನ್ನು ಪಡೆಯಲು ಹೋದ ಜನ

ಅರ್ಧ ತಿಂಗಳ ಸಂಬಳದ ಇನಾಮನ್ನು ಪಡೆದು, ಎದೆಯಲ್ಲಿ ಉರಿಹೊತ್ತು ಹಿಂದಿರುಗಿದ್ದರು. ಈ ಅಸಮಾಧಾನ, ಅತೃಪ್ತಿ ದಂಡಿನಲ್ಲೆಲ್ಲಾ ಕಾಳ್ಗಿಚ್ಚಿನಂತೆ ಹರಡಿತ್ತು.

"ಮಾಮೂಲು ಪಟ್ಟದ ಕಾಣಿಕೆ ತೆಗೆದುಕೊಳ್ಳಲು ಹೋದ ನಮ್ಮನ್ನು ಅರಮನೆಯವರು ತಿರುಪೆಯಂತೆ ಕಂಡರು. ಬ್ರಾಹ್ಮಣರಿಗೆ ಕಡಮೆಮಾಡಲಿಲ್ಲ, ಭಿಕ್ಷುಕರಿಗೆ ಕಡಮೆ ಮಾಡಲಿಲ್ಲ. ದಾನ ಧರ್ಮ ಎಲ್ಲಾ ಮಾಮೂಲಿನಂತೆ—ಸೇನೆಯವರಿಗೆ ಮಾತ್ರ ಪಂಗನಾಮ."

—ಎಂದು ಕಂಡಕಂಡಲ್ಲಿ ಆಡಿಕೊಂಡು ತಿರುಗಿದರು ಸೇನೆಯ ಜನ. ತಮ್ಮತಮ್ಮಲ್ಲೇ ಈ ದುಃಖವನ್ನು ತೋಡಿಕೊಂಡರು. "ಈ ಅಪಮಾನ ಸಹಿಸಬಾರದು" ಎಂದು ಹಲ್ಲುಕಡಿದು ಕೆಲವರು ಎಲ್ಲರ ಕಿವಿಯಲ್ಲೂ ಊದಿದರು. ಕೆಲವರು ಬೇರೆಯವರ ಕಿವಿಗೆ ತಮ್ಮ ಮಾತು ಬೀಳಬಾರದು ಎಂದು ಗುಟ್ಟಾಗಿ ಹೇಳಿಕೊಂಡರೆ, ಮತ್ತೆ ಕೆಲವರು "ಬೇಕಾದರೆ ನಾಯಕರ ಮುಖದಿದಿರೇ ಈ ಮಾತು ಹೇಳುತ್ತೇವೆ" ಎಂದು ತಮ್ಮ ಪೌರುಷವನ್ನು ಮೆರೆಸಿದರು.

ಬತೇರಿಗಳಲ್ಲಿ, ಮದ್ದಿನ ಉಗ್ರಾಣದಲ್ಲಿ, ಮದ್ದಿನ ಅರೆಗಲ್ಲಿನ ಮನೆಯಲ್ಲಿ, ಕೋಟೆ ಕೊತ್ತಳದಲ್ಲಿ, ಕಾವಲು ಗೋಪುರಗಳಲ್ಲಿ,—ಎಲ್ಲಿ ಇಬ್ಬರು ಸೇನೆಯವರು ಕಲೆಯಬಹುದೋ ಅಲ್ಲೆಲ್ಲಾ ಇದೇ ಮಾತಾಯಿತು.

ಈ ಸುದ್ದಿ ಅರಮನೆಯವರ ಕಿವಿಗೂ ಬಿದ್ದು, ನಾಗತಿಯ ಮೋರೆಯ ಮೇಲೆ ಚಿಂತೆಯ ಸುಕ್ಕುಗಳು ನಿರಿಗಟ್ಟಿದುವು. ಅಲ್ಲಲ್ಲಿ ಹಬ್ಬಿದ ಗುಸು ಗುಸು ಮಾತಿನ ನಂಜುಹೊಗೆ ಸೋಕಿ ಆಕೆಯ ಮುಖ ಬಿಳಿಚಿಕೊಂಡಿತು. ಎಷ್ಟೋ ಪ್ರಯತ್ನಪಟ್ಟು ಒಂದು ಗಂಡಾಂತರದಿಂದ ತಲೆತಪ್ಪಿಸಿಕೊಂಡು ಬರುತ್ತಿದ್ದಂತೆಯೇ, ಮತ್ತೊಂದು ಹಿಂದಿನದಕ್ಕೂ ಭಯಾನಕವಾದ ಭೀತಿ "ಧಾತು" ಎಂದು ತನ್ನ ಕರಾಳವಾದ ಬಾಯಿ ತೆರದು ಇದಿರು ನಿಂತಂತಾಯಿತು. ಸುಳಿವ ನೆರಳು, ಹೆಜ್ಜೆ ಸದ್ದಿಗೂ ಎದೆ ಹಾರುವಂತಾಯಿತು ಅರಮನೆಯಲ್ಲಿ. ಇದರಿಂದ ಪಾರಾಗಲು ಚಿನ್ನದ ಮನೆಯವರನ್ನು ಕರೆದು, 'ಬೊಕ್ಕಸದಲ್ಲಿ ಹಣವಿದ್ದರೆ, ಉಳಿದರ್ಧ ಪಟ್ಟಗಾಣಿಕೆಯನ್ನು ಕೊಟ್ಟುಬಿಡಿ' ಎಂದು ಹೇಳಿದಳು. ಆದರೆ ಬೊಕ್ಕಸದಲ್ಲಿ ಹಣವಿರಲಿಲ್ಲ.

ಅವರು ನಿರುಪಾಯರಾಗಿದ್ದರು.

" ದುರ್ಗಕ್ಕಿಂದು ವಿಷಮ ಪರಿಸ್ಥಿತಿ ಪ್ರಾಪ್ತವಾಗಿದೆ ತಾಯಿ. ಈ ಘಟ್ಟದಿಂದ ಹೇಗೆ ಪಾರಾಗುವುದೆಂದು ನಮಗೇ ಬುದ್ಧಿ ತೋಚುತ್ತಿಲ್ಲ. ನಾಯಕರು ಇದ್ದಕ್ಕಿದ್ದಂತೆಯೇ ಮೃತರಾದುದು ನಮ್ಮೆಲ್ಲರನ್ನೂ ಬಿಕ್ಕಟ್ಟಿಗೆ ಸಿಕ್ಕಿಸಿವೆ. ಅಲ್ಲಲ್ಲಿಂದ ವಸೂಲಾಗಬೇಕಾದ ಕಂದಾಯ, ಸುಂಕಗಳು ಬಾಕಿ ಇವೆ. ಅಲ್ಲದೆ ನಾಯಕರ ಅಂತ್ಯಕ್ರಿಯೆಗಳಿಗಾಗಿ ಅಪಾರ ಹಣ ವೆಚ್ಚವಾಗಿದೆ. ಇದರ ಮೇಲೆ ಪಟ್ಟಾಭಿಷೇಕದ ವೆಚ್ಚ, ದಾನಧರ್ಮ ಇನಾಮುಗಳಿಗೆಂದೂ ಕೈಮೀರಿ ವೆಚ್ಚಮಾಡಿದ್ದಾಗಿದೆ. ಈಗಿರುವ ಅಲ್ಪ ಸ್ವಲ್ಪವನ್ನು ಸೈನಿಕರ ಪಟ್ಟಗಾಣಿಕೆಗೆಂದು ಕೊಟ್ಟಲ್ಲಿ ಭಂಡಾರದಲ್ಲಿ ಏನೂ ಉಳಿಯುವುದಿಲ್ಲ. ಇರುವುದೂ, ಅವರೆಲ್ಲರಿಗೂ ಬಾಕಿಯಾಗುವ ಪಟ್ಟಗಾಣಿಕೆ ಕೊಡಲು ಸಾಲುವುದಿಲ್ಲ. ಅದಕ್ಕೆಂದೇ ಅರ್ಧ ಪಟ್ಟಗಾಣಿಕೆ ಕೊಡಬೇಕೆಂದು ತೀರ್ಮಾನಿಸಿದೆವು."

ಭಂಡಾರ ಬರಿದಾಗಿದೆಯೆಂದು ಚಿನ್ನದ ಮನೆಯ ಕರಣಿಕರು ಹೇಳಿದುದನ್ನು ಕೇಳಿ ನಾಗತಿ ಪಾತಾಳಕ್ಕೆ ಕುಸಿದು ಹೋದಳು.

" ಹಾಗಾದರೆ....ಹಾಗಾದರೆ....ಇದರಿಂದ ಪಾರಾಗಲು ಏನೂ ದಾರಿಯೇ ಇಲ್ಲವೆ ? "

—ನಿರಾಶೆಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾ ಕೇಳಿದಳು ನಾಗತಿ."

" ನನಗಂತೂ ಏನೂ ತೋಚುತ್ತಿಲ್ಲ."

" ಸೈನಿಕರಿಗೇ ಭಂಡಾರದ ಪರಿಸ್ಥಿತಿಯನ್ನು ವಿವರಿಸಿ ಹೇಳಿದರಾಗದೇ ? "

—ಮುಳುಗುವವನು ಹುಲ್ಲುಕಡ್ಡಿಗೇ ಜೋತುಬೀಳುವಂತೆ ಕೇಳಿದಳು.

" ಅದು ಇದ್ದದ್ದೂ ಅಪಾಯ."

" ಹೇಗೆ ? "

" ಭಂಡಾರ ಬರಿದಾಗಿದೆಯೆಂದು ಹೇಳುವುದು ದೊಂಬಿಗೆ ಕರೆದು ವೀಳ್ಯ ಕೊಟ್ಟಂತೆ. ಮುಂದಿನ ತಿಂಗಳ ಸಂಬಳಕ್ಕೆ ಭಂಡಾರದಲ್ಲಿ ಹಣವಿಲ್ಲ ಎಂದು ತಿಳಿದರೆ, ಜನ, ಹಸಿದ ತೋಳಗಳಂತೆ ಮೇಲೆ ಬೀಳುತ್ತಾರೆ."

“ ಹಾಗಾದರೆ ಏನೂ ದಾರಿಯೇ ಇಲ್ಲವೇ ? ”

“ ದಳವಾಯಿಗಳು ಮನಸ್ಸು ಮಾಡಿದರೆ, ಹೇಗಾದರೂ ಸೈನಿಕರನ್ನು ಹತೋಟಿಗೆ ತರಬಹುದು.”

ದಳವಾಯಿಗಳ ಹೆಸರನ್ನು ಕೇಳಿದ ಕೂಡಲೇ ನಾಗತಿಗೆ ಹಾವು ಸೋಕಿದಂತಾಯಿತು; ಕತ್ತಲೆಯಿಂದ ಹೊರಬರಲು ಯತ್ನಿಸಿದವನು ಕಾಲುಜಾರಿ ಮತ್ತಷ್ಟು ಆಳವಾದ, ದಟ್ಟವಾದ ಕತ್ತಲೆಗೆ ಜಾರಿ ಬಿದ್ದಂತಾಯಿತು.

“ ದಳವಾಯಿಗಳಲ್ಲದೆ ಬೇರೆ ಯಾರೂ ಅವರನ್ನು ಹತೋಟಿಗೆ ತರಲಾರರೇ ? ”

“ ಯಾರಾದರೂ ಪ್ರಯತ್ನಿಸಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಾಗಬಹುದೆಂಬ ನಂಬಿಕೆಯಿಲ್ಲ. ದಳವಾಯಿಗಳ ಮುಖ್ಯಸ್ಥರಾದ ದೇಸಣ್ಣನವರನ್ನು ಕರೆಸಿ ಒಂದು ಮಾತು ಹೇಳಿ ತಾಯಿ. ಸೇನೆಯವರಿಗೆಲ್ಲಾ ಅವರ ಮಾತಿನಲ್ಲಿ ಹೆಚ್ಚು ಗೌರವವಿದೆ, ಪ್ರೀತಿಯೂ ಇದೆ. ಅವರು ಹೇಳಿದರೆ ಏನಾದರೂ ಉಪಯೋಗವಾಗಬಹುದು.”

ಬೇರೆ ದಾರಿಯೇ ಕಾಣದೆ, ನಾಗತಿ ಕರಣಿಕರ ಸಲಹೆಯಂತೆ ನಡೆಯಲು ಒಪ್ಪಿದಳು.

ಅದರಂತೆಯೇ ಓಬಣ್ಣನಾಯಕನ ಪಟ್ಟಾಭಿಷೇಕದನಂತರ ಪ್ರಧಾನಿ ಪಟ್ಟವನ್ನು ಒಪ್ಪಿಕೊಂಡ ಲಿಂಗಣ್ಣನಾಯಕರನ್ನು ಕರಸಿ, ಕರಣಿಕರು ಹೇಳಿದ ಮಾತನ್ನು ತಿಳಿಸಿದಳು. ಆಕೆ ಹೇಳಿದುದನ್ನೆಲ್ಲಾ ಸಾವಧಾನವಾಗಿ ಕೇಳಿ ಲಿಂಗಣ್ಣನಾಯಕ ‘ ಹಾಗೆಯೇ ಮಾಡುತ್ತೇನೆ ’ ಎಂದ.

“ ಆದರೆ ಏನು ಮಾಡುವಾಗಲೂ ಭುವನಪ್ಪನವರನ್ನು ಒಂದು ಮಾತು ಕೇಳಿ, ಅವರ ಸಲಹೆಯಂತೆ ಮಾಡು ಲಿಂಗಣ್ಣ, ಎಂಥ ಕತ್ತಲಿನಲ್ಲೂ ಅವರೇ ನಮಗೆ ದಾರಿತೋರುವ ದೀಪಸ್ತಂಭ.”

—ಎಂದಳು ನಾಗತಿ.

“ ಅವರನ್ನು ಬಿಟ್ಟು ನಾನಾವ ಕೆಲಸವನ್ನೂ ಮಾಡುವುದಿಲ್ಲ, ಚಿಕ್ಕಮ್ಮ. ಅವರ ಮನಸಿಗೆ ಸಮಾಧಾನವಾಗಲೆಂದು ಮಾತ್ರ ನಾನು ಈ

ಅಧಿಕಾರವನ್ನು ವಹಿಸಿಕೊಂಡಿದೇನೆ. ಅವರು ಕುಳಿತ ಪೀಠದ ಮೇಲೆ ಕುಳಿತುಕೊಳ್ಳುವ ಯೋಗ್ಯತೆ ನನ್ನದಲ್ಲವೆನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ನಾನೆಷ್ಟು ಬೇಡವೆಂದರೂ ಅವರು ಕೇಳಲಿಲ್ಲ. ಅವರೇ ಇದ್ದಿದ್ದರೆ, ಪರಿಸ್ಥಿತಿ ಇಷ್ಟು ಹದಗೆಡುತ್ತಿರಲಿಲ್ಲವೇನೋ ! ಆಯಿತು. ಅವರನ್ನು ಹೋಗಿ ನೋಡಿ, ಅವರ ಸಲಹೆ ಪಡೆದು ಬಳಿಕ ದೇಸಣ್ಣನವರನ್ನು ಕರಸಿ ಮಾತಾಡುತ್ತೇನೆ. ಅವರೂ ನಮಗೆ ನೆರವಾಗಿ ನಿಲ್ಲುತ್ತಾರೆಂಬ ನಂಬಿಕೆ ನನಗಿದೆ. ಅವರೆಲ್ಲರ ನೆರವು, ದೇವತಾನುಗ್ರಹ ಎರಡೂ ಇದ್ದರೆ, ಗುಡ್ಡದಂತೆ ಬಂದ ವಿಪತ್ತು ಮೋಡದಂತೆ ಕರಗಿಹೋಗಬಹುದು. ಆದರೆ ನೀವು ಅದಾವುದನ್ನೂ ಹಚ್ಚಿಕೊಂಡು ಕೊರಗಬೇಡಿ."

"ನಾನೂ ಹಾಗೇ ಅಂದುಕೊಳ್ಳುತ್ತೇನೆ ಲಿಂಗಣ್ಣ—ನೀವೆಲ್ಲಾ ಇರುವಾಗ ಏನು ಭಯ ಎಂದು. ಆದರೂ, ಈ ಹಾಳು ಮನಸ್ಸು ಕೇಳುವುದಿಲ್ಲ. ಬೇಡ ಬೇಡವೆಂದರೂ ತುಡಿದುಕೊಳ್ಳುತ್ತದೆ. ಏನೋ-ಎಲ್ಲವೂ ಸಮಾಧಾನವಾಗಿ ಮುಗಿದು, ಒಂದು ಸ್ಥಿಮಿತಕ್ಕೆ ಬಂದಾಗಲೇ ಈ ಜೀವಕ್ಕೆ ಸಮಾಧಾನ. ಏಕೋ, ಒಂದೊಂದು ವೇಳೆ ಇಷ್ಟು ಅವಸರಮಾಡಿ ಓಬಣ್ಣನಿಗೆ ಪಟ್ಟಕಟ್ಟಿ ಆತನ ಕತ್ತಿಗೆ ಮೃತ್ಯುಪಾಶವನ್ನು ಕಟ್ಟಿದೆನೇನೋ ಎನಿಸಿ ಭಯವಾಗುತ್ತದೆ. ಎಷ್ಟೆಷ್ಟು ರೀತಿಯಲ್ಲಿ ಸಮಾಧಾನ ಮಾಡಿಕೊಂಡರೂ ಈ ಜೀವಕ್ಕೆ ಸಮಾಧಾನವಾಗುವುದಿಲ್ಲ. ಈ ಭಯ, ಕೊರಗೆಲ್ಲಾ ಎಂದು, ಯಾರಿಂದ, ಹೇಗೆ ನಿವಾರಣೆಯಾಗುವುದೋ ಶಿವನೇ ಬಲ್ಲ. ಆದರೆ ಲಿಂಗಣ್ಣ; ಇದೆಲ್ಲಾ ಒಂದು ಗೊತ್ತಿಗೆ ಬರುವ ವರೆಗೂ ನೀನೂ ಮೈಯಲ್ಲಾ ಕಣ್ಣಾಗಿರುವುದು ಮೇಲು."

"ನಿಮ್ಮ ಆಶೀರ್ವಾದ ರಕ್ಷೆ ಇರುವ ವರೆಗೂ ನನಗಾವ ಭೀತಿಯೂ ಇಲ್ಲ ಚಿಕ್ಕಮ್ಮ, ಇಲ್ಲದನ್ನು ಹಚ್ಚಿಕೊಂಡು ನೀವು ಕೊರಗಬೇಡಿ."

—ತನ್ನ ನಗುವಿನಿಂದ ಆಕೆಯ ಭೀತಿಯನ್ನು ನಿವಾರಿಸಲೆತ್ನಿಸುತ್ತಾ ಹೇಳಿದ ಲಿಂಗಣ್ಣನಾಯಕ.

"ನೀನು ಕಾಣೆ ಲಿಂಗಣ್ಣ, ನಾನು ಮಹಾ ನಿರ್ಭಾಗ್ಯೆ. ನಾಯಕರ ಕೈಹಿಡಿದು ಬಂದೆ—ಆದರೆ ಅವರು ಇದ್ದಷ್ಟು ದಿನವೂ ಪತಿ ಸುಖ ಕಾಣಲಿಲ್ಲ. ಅವರು ಹೋದಾಗ ಅವರೊಂದಿಗೆ ಸ್ವರ್ಗ ಸೇರುವ ಭಾಗ್ಯವೂ

ನನ್ನದಾಗಲಿಲ್ಲ. ದುರ್ವಿಧಿ ನನ್ನ ಹಣೆಯಲ್ಲಿ ಇನ್ನೂ ಏನೇನು ದುಃಖ ವನ್ನು ಬರೆದಿದೆಯೋ! ಇನ್ನೂ ಏನು ಕಾಣಬೇಕೋ, ಏನು ಕೇಳಬೇಕೋ ಎಂದು ಗಾಬರಿಯಾಗುತ್ತದೆ. ನಾನು ಬಯಸುವುದಿಷ್ಟೇ—ಬರುವ ಕೇಡೆಲ್ಲ ನನಗೆ ಬರಲಿ, ನಿಮ್ಮೆಲ್ಲರಿಗೂ ಒಳಿತಾಗಲಿ."

"ಸರಿ, ಸರಿ. ನೀನು ಕಡ್ಡಿಯನ್ನು ಗುಡ್ಡ ಎಂದುಕೊಂಡು ಕೊರಗು ತ್ತೀಯ. ಈಗೇನು ಅಂಥ ಭೀತಿ ಬಂದಿರುವುದು?"

"ಸೈನಿಕರ ಅತೃಪ್ತಿ ಸೆರಗಿನಲ್ಲಿ ಕಟ್ಟಿಕೊಂಡ ಬೆಂಕಿ ಲಿಂಗಣ್ಣ. ರಕ್ತ ದಲ್ಲಿ ಕೈ ಮೈ ಮುಳುಗಿಸಿದ ಜನ ಅವರು. ಹಾವಿನೊಂದಿಗೆ ಸರಸವಾಡಿ ದಂತೆ, ಅವರ ಸ್ನೇಹ. ಅವರು ಮುನಿದಿದ್ದಾರೆಂದೇ ನನಗಷ್ಟು ಗಾಬರಿ."

"ನಿನ್ನದು ಹುಚ್ಚು ಭೀತಿ ಚಿಕ್ಕಮ್ಮ. ಸೈನಿಕರೆಂದರೇನು ಸ್ವರ್ಗ ದಿಂದ ಇಳಿದು ಬಂದವರೇ. ಒಳ್ಳೆಯ ಮಾತಿಗೆ ದಾರಿಗೆ ಬಂದರೆ ಸರಿ. ಇಲ್ಲವಾದರೆ ಗದ್ದಲ ಮಾಡುವ ನಾಲ್ಕು ಜನರನ್ನು ತೋಫಿನ ಬಾಯಿಗೆ ಕಟ್ಟಿ ಹಾರಿಸಿದರೆ, ಉಳಿದವರು ಹಲ್ಲು ಕಿತ್ತ ಹಾವುಗಳಂತೆ ದಾರಿಗೆ ಬರುತ್ತಾರೆ........"

"ನಿನ್ನ ದಮ್ಮಯ್ಯ ಲಿಂಗಣ್ಣ—ಏನೇ ಆಗಲಿ, ಅಷ್ಟಕ್ಕೆ ಮಾತ್ರ ದುಡುಕಬೇಡ. ಒಂದು ಜೀವವನ್ನು ಕೊಂದರೆ ಅದು ಹತ್ತು ಜೀವನ ಬಲಿ ಬೇಡುವ ಪಿಶಾಚಿಯಾಗಿ ಅಲೆಯುತ್ತದೆ. ಏನಾಗುವುದಿದ್ದರೂ ಅದು ಸ್ನೇಹದಲ್ಲಿ ಸಮಾಧಾನದಲ್ಲಿ ಆಗಲಿ. ನನ್ನ ಮಾತು ಮರೆಯಬೇಡ ಲಿಂಗಣ್ಣ. ದುಡುಕಿದ ಬಳಿಕ ಎಷ್ಟು ಪಶ್ಚಾತ್ತಾಪಪಟ್ಟರೂ ಪ್ರಯೋಜನ ವಾಗುವುದಿಲ್ಲ."

—ಲಿಂಗಣ್ಣನಾಯಕನನ್ನು ಅಂಗಲಾಚಿ ಬೇಡುವಳಂತೆ ಕೇಳಿದಳು ನಾಗತಿ.

"ಆಗಲಿ. ನಿನ್ನ ಮಾತು ಮರೆಯುವುದಿಲ್ಲ."

—ಎಂದು ನಾಗತಿಗೆ ಲಿಂಗಣ್ಣನಾಯಕ ಆಶ್ವಾಸವಿತ್ತ. ಆದರೆ ನಾಗತಿಯ ಜೀವಕ್ಕೆ ಆ ಕೊರಗಿನ ಉರಿ ಹಚ್ಚಿದವರ ಬಗ್ಗೆ ಅವನ ಹೃದ ಯದಲ್ಲಿ ಉಗ್ರಕ್ರೋಧ ಕೆದರಿತ್ತು.

೨

ಪಟ್ಟದ ಕಾಣಿಕೆಯ ಸಂದರ್ಭದಲ್ಲಿ ಮೂಡಿದ ಅತೃಪ್ತಿಯನ್ನು ಹೇಗೆ ತಣಿಸಿ ಶಾಂತಗೊಳಿಸಬೇಕೆಂಬ ಚಿಂತೆ ಒಂದು ಕಡೆಯಲ್ಲಿ ನಡೆದಿದ್ದರೆ, ಮತ್ತೊಂದು ಕಡೆಯಲ್ಲಿ ಅದಕ್ಕೆ ಎಣ್ಣೆ ಹೊಯ್ದು, ಗಾಳಿ ಬೀಸಿ, ದಳ್ಳುರಿಯಾಗಿ ಮಾಡಬೇಕೆಂಬ ಪ್ರಯತ್ನ ನಡೆಯುತ್ತಿತ್ತು. ಅದಕ್ಕಾಗಿಯೇ ಅಂದು ದಳವಾಯಿ ಮುದ್ದಣ್ಣನ ಮನೆಯ ನೆಲಮಾಳಿಗೆಯಲ್ಲಿ ಆಪ್ತ ಸಭೆ ಸೇರಿತ್ತು. ದಳವಾಯಿ ಮುದ್ದಣ್ಣ ಅವನ ಇಬ್ಬರು ಸೋದರರು, ಚಿಕ್ಕಣ್ಣ ನಾಯಕ, ವೀರಣ್ಣ, ಮತ್ತೆ ನಾಲ್ಕಾರು ಜನ ಮುದ್ದಣ್ಣನ ನಂಬಿಕೆಗೆ ಪಾತ್ರರಾಗಿದ್ದ ಸೇನೆಯ ಅಧಿಕಾರಿಗಳು—ಇಷ್ಟು ಜನವೂ ಸಮಾಲೋಚನೆಗೆ ಕಲೆತಿದ್ದರು. ಗಾಜಿನ ಗೋಳಗಳ ನಡುವೆ ಹೊತ್ತಿಸಿಟ್ಟ, ಸೂರಿನಿಂದ ಇಳಿಬಿಟ್ಟ ದೀಪಗಳು ಚೆಲ್ಲಿದ ಅರೆಬೆಳಕಿನಲ್ಲಿ, ಅಲ್ಲಿ ನೆರೆದವರ ಮೊಗದ ಮೇಲೆ ಅರೆಗತ್ತಲೆ ಬಿದ್ದು, ಕರಾಳತೆಯ ಛಾಯೆಯನ್ನು ಕವಿಸಿ, ಆ ಮೊಗಗಳು, ಅವುಗಳೊಡೆಯರ ಹೃದಯದ ಕರಾಳತೆಗೆ ಕನ್ನಡಿಯಂತಿದ್ದುವು. ತಮ್ಮ ಹೃದಯದಲ್ಲಿಯ ಭಾವನೆಯ ಭಯಂಕರತೆಗೆ ತಾವೇ ಬೆದರಿ, ಅವಕ್ಕೆ ನುಡಿಗೊಡಲು ಹೆದರಿದವರಂತೆ ಎಲ್ಲರೂ ಸುಮ್ಮನಿದ್ದರು. ಕಡೆಗೆ ಮುದ್ದಣ್ಣನೇ ಆ ಮೌನವನ್ನು ಮುರಿದು ಹೇಳಿದ.

“ ಈ ಮೀನ ಮೇಷದಿಂದ ಇನ್ನು ಉಪಯೋಗವಿಲ್ಲ. ಇಂದು ಯಾವುದಾದರೊಂದು ಇತ್ಯರ್ಥವಾಗಬೇಕು. ನಾವೀಗ ಕೈಗೊಂಡ ಕೆಲಸವನ್ನು ಕೊನೆಮುಟ್ಟಿಸಬೇಕೋ, ಅಥವಾ ಇಲ್ಲಿಗೇ ಬಿಟ್ಟುಬಿಡುವುದೋ ಯಾವುದೂ ತೀರ್ಮಾನವಾಗಬೇಕು. ಹಾಗೆ ಮಾಡದೆ ಇಂದೇನಾಗುವುದೋ ನೋಡೋಣ, ನಾಳೆ ಏನಾಗುವುದೋ ನೋಡೋಣ ಎಂದು ಕುಳಿತರೆ, ನಮ್ಮ ಜೀವಕ್ಕೆ ವಿಷವಾಗಬಹುದು. ”

“ ಈಗ ಏನು ಮಾಡಬೇಕೆಂದು ನಿಮ್ಮ ಯೋಚನೆ ಮುದ್ದಣ್ಣನವರೆ?” —ಚಿಕ್ಕಣ್ಣನಾಯಕ ಕೇಳಿದ.

“ ನಾನೇನು ಮಾಡಬೇಕೆಂಬುವನ್ನು ನಾನಾಗಲೇ ನಿರ್ಧರಿಸಿದ್ದೇನೆ. ನೀವೇನು ಮಾಡುವಿರೆಂಬುದನ್ನು ಹೇಳಿ ನಾಯಕರೇ. ನೀವು ಬಲವಾಗಿ

ನಿಂತರೇ ನಮಗೆ ಬಲ. ಅನ್ಯಾಯವಾಗಿರುವುದು ನಿಮಗೆ. ನಾವು ನಿಮ್ಮ ಪಕ್ಷ ಕಟ್ಟಿ ನಿಂತರೆ, ನಾಳೆ ನೀವೂ ನಿಮ್ಮ ಅಣ್ಣನವರಂತೆ ಅತ್ತ ಕಡೆಯೇ ಜಾರಿಕೊಂಡರೆ ನಮ್ಮ ಗತಿ ಅತೋಭ್ರಷ್ಟ ತತೋಭ್ರಷ್ಟ ಆಗುತ್ತದೆ. ಆದುದರಿಂದ ನೀವು ಹೇಳಿ—ನಿಮಗಾಗಿ ನಾವು ಹೋರಾಡಬೇಕೇ, ಬೇಡವೇ ? ” ಮುದ್ದಣ್ಣ ಕೆಣಕಿ ಕೇಳಿದ.

“ ನಾನಾಗಲೇ ಹತ್ತು ಬಾರಿ ಹೇಳಿದೇನೆ—ನೀವು ಹೇಳಿದಂತೆ ಮಾಡಲು ನಾನು ಸಿದ್ಧ.

“ ನಾವು ಬಯಸಿದ ಗುರಿಯನ್ನು ಮುಟ್ಟುವುದು ಬಹಳ ಕಷ್ಟದ ಕೆಲಸ ನಾಯಕರೇ. ಅಗತ್ಯ ಬಿದ್ದರೆ, ಉದ್ದಕ್ಕೂ ಆಪ್ತೇಷ್ಟರ ರಕ್ತದ ಕೆಸರಿನಲ್ಲಿಯೇ ನಡೆಯಬೇಕಾಗಬಹುದು. ಅದಕ್ಕೂ ಸಿದ್ಧವಾಗಿದೀರಾ ?”

“ ನಮ್ಮ ಹಿತವನ್ನು ಕಡೆಗಣಿಸಿ ನಡೆದವರು ನಮಗೆ ಆಪ್ತೇಷ್ಟರಲ್ಲ ದಳವಾಯಿಗಳೇ. ಅವರು ನಮ್ಮ ಶತ್ರುಗಳು. ಅವರ ಬಗ್ಗೆ ನನಗೆ ಏನೂ ಕರುಣೆಯಿಲ್ಲ. ”

“ ಈ ಮಾತು ಸತ್ಯವೇ ? ”

“ ಹೇಗೆ ಹೇಳಿದರೆ, ಏನು ಮಾಡಿದರೆ ನನ್ನಲ್ಲಿ ನಿಮಗೆ ನಂಬಿಕೆಯಾಗುತ್ತದೆ ಹೇಳಿ. ಹಾಗೆ ಮಾಡಿ ತೋರಿಸಲು ನಾನು ಸಿದ್ಧನಾಗಿದ್ದೇನೆ. ”

“ ಅಷ್ಟು ಹೇಳಿದರೆ ಸಾಕು, ನನಗೆ ನಂಬಿಕೆಯಾಗುತ್ತದೆ. ನಾಯಕರದು ಆಯಿತು. ಉಳಿದವರು ಏನು ಹೇಳುತ್ತಾರೆ. ”

“ ನಾವೆಲ್ಲಾ ನೀವು ಹೇಳಿದಂತೆ ಮಾಡುವುದಕ್ಕೆ ಸಿದ್ಧವಾಗಿದೇವೆ. ”

—ಉಳಿದವರ ಪರವಾಗಿ ರಾಯಣ್ಣನೇ ಭರವಸೆಕೊಟ್ಟ.

“ ನಿಮ್ಮ ನಿಮ್ಮ ದಳಗಳು ? ”

“ ಅವೂ ನಾವು ಹೇಳಿದಂತೆ ಕೇಳಲು ಸಿದ್ಧವಾಗಿವೆ. ಪಟ್ಟಕಾಣಿಕೆ ಸಲ್ಲಲಿಲ್ಲವೆಂದು ಅವರೆಲ್ಲಾ ಕೆರಳಿದಾರೆ. ಅದು ಪೂರ್ಣವಾಗಿ ನಮಗೆ ಲಾಭವಾಗಬೇಕೆಂದರೆ, ಚಿಕ್ಕಣ್ಣನಾಯಕರು ತಾವು ಪಟ್ಟಕ್ಕೆ ಬಂದರೆ, ಇಮ್ಮಡಿಯಾಗಿ ಈ ಋಣ ತೀರಿಸುತ್ತೇವೆ ಎಂದು ಹೇಳುವ ಅಧಿಕಾರವನ್ನು ನಮಗೆ ಕೊಟ್ಟರೆ, ಅದರಿಂದ ಅವರೆಲ್ಲರನ್ನೂ ನಮ್ಮ ಕಡೆ ಎಳೆದುಕೊಳ್ಳಲು ಹೆಚ್ಚು ಅನುಕೂಲವಾಗುತ್ತದೆ. ”

—ಮುದ್ದಣ್ಣನ ಮತ್ತೊಬ್ಬ ಸಹೋದರ ಚುಕ್ಕಣ್ಣ ಹೇಳಿದ.

" ನಮ್ಮ ಪರವಾಗಿ ಅಗತ್ಯವಾದ ಮಾತನ್ನು ನೀವೇ ಕೊಡಬಹುದು. ನೀವು ಕೊಟ್ಟ ಮಾತನ್ನು ನಡೆಸುವ ಭಾರ ನಮ್ಮದು.

" ನಾಯಕರು ಅಷ್ಟು ಹೇಳಿದರೆ ನಮ್ಮ ಕೆಲಸ ಮುಕ್ಕಾಲು ಆದಂತೆಯೇ. ಆದರೆ ಅದು ಸಂಪೂರ್ಣವಾಗಿ ಯಶಸ್ವಿಯಾಗಲು ಇನ್ನು ಒಂದು ಕೆಲಸ ಮಾಡಬೇಕಾದದ್ದಿದೆ ಅಣ್ಣ.

—ಚುಕ್ಕಣ್ಣ ಮುದ್ದಣ್ಣನಿಗೆ ಹೇಳಿದ.

" ಏನು ? "

" ಹೇಗಾದರೂ ದೊಡ್ಡ ದಳವಾಯಿಗಳ ಬಾಯಿ ಕಟ್ಟಬೇಕು. ಸೇನೆ ಯವರನ್ನು ಸಮಾಧಾನಪಡಿಸುವ ಹೊಣೆಹೊತ್ತ ಅವರು ಒಬ್ಬೊಬ್ಬರಾಗಿ ಸೇನೆಯ ಅಧಿಕಾರಿಗಳನ್ನು ಕರಸಿಕೊಂಡು ಮಾತನಾಡಿ, ಅವರ ಬುದ್ಧಿ ತಿರುಗಿಸುತ್ತಿದ್ದಾರೆ. ಹೇಗಾದರೂ ಅದು ನಿಲ್ಲಬೇಕು."

" ದಳವಾಯಿ ದೇಸಣ್ಣ ನಮ್ಮ ವಿರೋಧವಾಗಿ ಇಷ್ಟು ದೂರ ಹೋಗ ಬಹುದೆಂದು ನಾನು ನಂಬಿರಲಿಲ್ಲ. ಅದರ ಫಲ ಉಣ್ಣುತ್ತಾನೆ ಇರಲಿ, ಅದಕ್ಕೆ ಮೊದಲು, ಇನ್ನೆರಡು ಮೂರು ದಿನಗಳಲ್ಲಿ, ನಾನು ನಿಮಗೆ ಹೇಳಿದ ಕೆಲಸವನ್ನು ಮಾಡಿ. ಆದರೆ ನಾನು ಊಹಿಸಿದಂತೆ ಆದರೆ, ಬಳಿಕ ಎಲ್ಲವೂ ನಮಗೆ ಅನುಕೂಲವಾಗಿಯೇ ಆಗುತ್ತದೆ. ಒಂದು ವೇಳೆ ಹಾಗಾಗದಿದ್ದರೆ, ಮುಂದಿನ ದಾರಿ ಏನೆಂಬುದೂ ನನಗೆ ಗೊತ್ತಿದೆ. ಆದರೆ ನೀವು ಮಾತ್ರ ನಾನು ಯಾವಾಗ ಏನು ಹೇಳಿದರೆ ಅದನ್ನು ಮಾಡಲು ಹಿಂಜರಿಯಬಾರದು. ಆ ಭರವಸೆಯನ್ನು ನನಗೆ ಕೊಡಬೇಕು."

" ನಾವು ಸಿದ್ಧರಾಗಿದ್ದೇವೆ."

—ನೆರೆದವರೆಲ್ಲರೂ ಒಟ್ಟಾಗಿ ಮುದ್ದಣ್ಣನ ಮಾತಿಗೆ ಉತ್ತರ ಕೊಟ್ಟರು.

" ಸಿದ್ಧವಾಗಿರುವುದಾದರೆ, ನಾಳೆ ನಮ್ಮೆಲ್ಲರ ಪ್ರಭುವಾಗಲಿರುವ ಚಿಕ್ಕಣ್ಣನಾಯಕರ ಪಾದ ಮುಟ್ಟಿ ಆಣೆ ಮಾಡಿ ಹೇಳಿ. ಹಾಗೇ ಇಂದು ನಾವೆಲ್ಲಾ ಚಿಕ್ಕಣ್ಣನಾಯಕರನ್ನೇ ದುರ್ಗದ ನಿಜವಾದ ದೊರೆ ಎಂದು ಒಪ್ಪಬೇಕು. ನಿಮಗೆ ಒಪ್ಪಿಗೆ ಇದೆಯೇ ? "

"ಒಪ್ಪಿದೇವೆ."

"ಹಾಗಾದರೆ ಇದನ್ನು ತೆಗೆದುಕೊಳ್ಳಿ. ಅವರ ಹಣೆಗೆ ನಿಮ್ಮ ರಕ್ತ ಕುಂಕುಮವನ್ನಿಟ್ಟು ಆ ಮಾತು ಹೇಳಿ"

—ಎಂದು ಮುದ್ದಣ್ಣ ತನ್ನ ಸೊಂಟದಲ್ಲಿದ್ದ ಕರ್ನಾಟಕ ಬಾಕು ವನ್ನು ತೆಗೆದು, ಅದರಿಂದ ತನ್ನ ತೋಳನ್ನು ಸೀಳಿ, ಚಿಮ್ಮಿ ಬಂದ ರಕ್ತದಿಂದ ಚಿಕ್ಕಣ್ಣನಾಯಕನ ಹಣೆಗೆ ಕುಂಕುಮವಿಟ್ಟು ಹೇಳಿದ—

"ಚಿಕ್ಕಣ್ಣನಾಯಕರೇ ದುರ್ಗದ ದೊರೆ!"

ಉಳಿದವರೂ ಮುದ್ದಣ್ಣ ಮಾಡಿದಂತೆಯೇ ಮಾಡಿದರು. ಲಲಾಟ ದಲ್ಲಿ ರಕ್ತ ಕುಂಕುಮವನ್ನು ಧರಿಸಿದ ಚಿಕ್ಕಣ್ಣನಾಯಕ, ಅವರ ಅಸೀಮ ಪ್ರೇಮದಿಂದ ಪ್ರಚೋದಿತನಾದವನಂತೆ ಎದ್ದು ನಿಂತು ಹೇಳಿದ—

"ನನ್ನ ಹಣೆಗೆ ರಕ್ತ ಕುಂಕುಮವಿಟ್ಟು ನನ್ನನ್ನು ನಿಮ್ಮ ದೊರೆ ಎಂದು ಸಾರಿದೀರ. ನಿಮ್ಮ ಉಪಕಾರವನ್ನು ನಾನೆಂದಿಗೂ ಮರೆಯು ವುದಿಲ್ಲ. ಅಗತ್ಯ ಬಂದರೆ ನಿಮಗಾಗಿ ಪ್ರಾಣ ಕೊಡಲೂ ನಾನು ಸಿದ್ಧನಾಗಿ ದ್ದೇನೆ. ಅದಕ್ಕೆ ಕುರುಹಾಗಿ, ನೀವು ಕೈಕೊಂಡ ಕಾರ್ಯದಲ್ಲಿ ಜಯವಾಗ ಲೆಂದು ಹಾರೈಸಿ ನಾನೂ ನಿಮ್ಮ ಹಣೆಗೆ ಕುಂಕುಮವಿಡುತ್ತೇನೆ."

—ಎಂದು, ಚಿಕ್ಕಣ್ಣನಾಯಕ ಕಠಾರಿಯಿಂದ ತನ್ನ ತೋಳನ್ನು ಸೀಳಿ, ಜಲ್ಲೆಂದು ಚಿಮ್ಮಿದ ರಕ್ತದಲ್ಲಿ ಕೈಬೆರಳನ್ನದ್ದಿ, ತನ್ನ ಬೆಂಬಲವಾಗಿ ನಿಂತ ಎಲ್ಲರ ಹಣೆಗೂ ರಕ್ತದ ತಿಲಕವನ್ನಿಟ್ಟ.

ಅದನ್ನು ಕಂಡು ಮುದ್ದಣ್ಣ ತೃಪ್ತಿಯ ನಗು ನಗುತ್ತಾ ಹೇಳಿದ—

"ಇಂದು ನಾವು ಕೈಕೊಂಡ ಕಾರ್ಯ ನೆರವೇರಿಸಲು ತೊಟ್ಟ ಪಣಕ್ಕೆ ರಕ್ತಮುದ್ರೆ ಬಿದ್ದಿದೆ. ಅನ್ಯಾಯದ ವಿರುದ್ಧ ನಾವು ಹೂಡಿದ ಹೋರಾಟದಲ್ಲಿ ನಮಗೆ ಇದಿರಾದವರ ನೆತ್ತರ ಹೊಳೆ ಹೀಗೆ ಹರಿಯುವು ದೆಂಬುದಕ್ಕೆ ಈ ರಕ್ತ ಸಾಕ್ಷಿಯಾಗಲಿ. ಹೇಳಿ, ಚಿಕ್ಕಣ್ಣನಾಯಕರಿಗೆ ಜಯವಾಗಲಿ!"

ಮುದ್ದಣ್ಣನ ಮಾತು ಕೇಳಿ ಉಳಿದವರೂ ಹೇಳಿದರು—

"ಚಿಕ್ಕಣ್ಣನಾಯಕರಿಗೆ ಜಯವಾಗಲಿ! ಅವರ ಹಗೆಗೆ ಸಾವಾಗಲಿ!"

ಆ ಜಯಘೋಷ ಅಡಗಿದ ಬಳಿಕ ಮುದ್ದಣ್ಣ ಹೇಳಿದ—

“ ನಾಳಿನಿಂದ ನಮ್ಮ ಕೆಲಸ ಚುರುಕಾಗಿ ಆರಂಭವಾಗಬೇಕು. ಇವರಲ್ಲಿ ಯಾರೂ, ಒಪ್ಪಿಸಿದ ಕೆಲಸ ಮಾಡಲು ಹಿಂಜರಿಯಬಾರದು. ನಾವು ಕೈಗೊಂಡ ಕೆಲಸ ಸಫಲವಾಗಲು, ವೀರಣ್ಣಾ, ನಿನ್ನಿಂದ ಆಗ ಬೇಕಾದ ಕೆಲಸ ಹೆಚ್ಚಿನದಾಗಿದೆ. ನಾನು ಹಿಂದೆ ಹೇಳಿದ ಕೆಲಸವನ್ನು ನೀನು ಮಾಡಲೇ ಬೇಕು. ಅರಮನೆಯ ಚಲನವಲನಗಳನ್ನು ಕಾಣಲು ನೀನೇ ನಮ್ಮ ಕಣ್ಣು. ಅಲ್ಲಿ ನಮಗಾರಿಗೂ ಪ್ರವೇಶವಿಲ್ಲ. ಆ ಕೆಲಸವನ್ನು ಸಮರ್ಪಕವಾಗಿ ಮಾಡು. ಅದು ಮುಗಿದ ಮರುದಿನವೇ ನಾಯಕರಿಗೆ ಹೇಳಿ ನಿನಗೆ ದಳವಾಯಿ ಪಟ್ಟ ಕೊಡಿಸುವ ಭಾರ ನನ್ನದು.”

ಮುದ್ದಣ್ಣ ಹೇಳಿದ ಮಾತನ್ನು ಕೇಳಿ ವೀರಣ್ಣನ ಕಣ್ಣಲ್ಲಿ ಹೊಸ ಆಸೆ ಹೆಬ್ಬಯಕೆ, ಗಾಳಿ ಬೀಸಿದ ಉರಿಯಂತೆ ಪ್ರಜ್ವಲಿಸಿತು.

“ ಆತ್ಮಸಾಕ್ಷಿಯಾಗಿ ನೀವು ಹೇಳಿದ ಕೆಲಸವನ್ನು ನಾನು ಮಾಡು ತ್ತೇನೆ.”

—ಎಂದು ವೀರಣ್ಣನೂ ವಚನವಿತ್ತ.

“ ಸರಿ. ಆದರೆ ಈ ಮಾತು ಮಾತ್ರ ಚೆನ್ನಾಗಿ ನೆನಪಿರಲಿ. ಇಲ್ಲಿ ಇಂದು ನಡೆದ ಮಾತು, ಮುಂದೆ ನಮ್ಮ ನಮ್ಮಲ್ಲಿ ನಡೆವ ವಿಚಾರ ನಮ್ಮ ಹೊರತು ಬೇರೆ ಯಾರ ಕಿವಿಗೂ ಬೀಳಬಾರದು. ಬಿದ್ದರೆ ಅರಮನೆ ಯವರು ನಮ್ಮನ್ನು ಶೂಲಕ್ಕೇರಿಸುವುದು ಖಂಡಿತ. ಒಂದು ವೇಳೆ ಅವರು ದಯೆ ತೋರಿದರೂ, ನನ್ನ ಕತ್ತಿಗೆ ದಯೆಯಿಲ್ಲ ಎಂಬುದನ್ನು ಯಾರೂ ಮರೆಯಬಾರದು.”

ಮುದ್ದಣ್ಣನ ಕತ್ತಿಗೆ ದಯೆಯಿಲ್ಲವೆಂಬ ಮಾತನ್ನು ಆತ ಬಾಯಿ ಬಿಟ್ಟು ಹೇಳಬೇಕಾಗಿರಲಿಲ್ಲ. ಆತ ಹೇಳದೆಯೇ ಎಲ್ಲರಿಗೂ ಅದು ತಿಳಿ ದಿತ್ತು. ಆದುದರಿಂದ ಯಾರೂ ಆತನ ಮಾತಿಗೆ ಪ್ರತಿಯಾಡಲಿಲ್ಲ.

ಅಂದು ಆಡಬೇಕಾಗಿದ್ದ ಮಾತುಕತೆಗಳೆಲ್ಲವೂ ಮುಗಿಯಿತೆಂದು ಮುದ್ದಣ್ಣ ಸೂಚಿಸಿದ ಬಳಿಕ ಒಬ್ಬೊಬ್ಬರಾಗಿ ಎದ್ದು ಚೆದರಿದರು. ಕಡೆಗೆ ನೆಲಮಾಳಿಗೆಗೆಲ್ಲಾ ಒಬ್ಬನೇ ಆಗಿ ಉಳಿದ ಮುದ್ದಣ್ಣ, ಅಷ್ಟು ಹೊತ್ತು ನೆಲದ ಮೇಲೆ ಬಿದ್ದಿದ್ದ ರಕ್ತದ ಕಲೆಯನ್ನೇ ನೋಡುತ್ತಾ ಕುಳಿತಿದ್ದು, ಬಳಿಕ ತನಗೆ ತಾನೇ ಹೇಳಿಕೊಂಡ--

“ ರಕ್ತದ ಮಳೆ ಕರೆಯಲು ಆರಂಭವಾಯಿತು. ಇನ್ನದು ಹುಚ್ಚು ಮಳೆಯಾಗಿ ಹುಯ್ಯಬೇಕು.

೩

ನೀಲ ಬಾಂದಳದ ಶಾಂತಗರ್ಭದಿಂದ ಒಮ್ಮಿಂದೊಮ್ಮೆಯೇ ಬರ ಸಿಡಿಲು ಬಡಿದಂತಾಗಿ, ಅರಮನೆ ಕಂಗಾಲಾಗಿ ಕಣ್ಣರಳಿಸಿ ನೋಡಿತು, ಹಗಲು ಹರಿಯುತ್ತಿದ್ದ ಹಾಗೇ ಅರಮನೆಯ ಮುಂದೆ ನೆರೆದ ನೂರಾರು ಸೈನಿಕರನ್ನು ನೋಡಿ. ಅವರ ಘೋಷಧ್ವನಿ ದಿಕ್ಕುಗಳನ್ನು ತುಂಬಿ, ಅರಮನೆಯ ಸುತ್ತಲ ಕೋಟೆಯ ಭಟರು ಅಪಾಯ ಕಹಳೆಯನ್ನು ಮೊಳಗಿಸುವಂತೆ ಮಾಡಿತು. ಅವರು ಧರಿಸಿದ ಶಸ್ತ್ರಾಸ್ತ್ರಗಳು ಮುಂಜಾವಿನ ಎಳೆಬಿಸಿಲಿನಲ್ಲಿ ಥಳಥಳಿಸಿ, ಕಂಡವರ ಎದೆಯಲ್ಲಿ ಭಯವನ್ನು ಬಿತ್ತಿದುವು. ಅರಮನೆಯ ರಕ್ಷಣೆಯನ್ನು ಹೊತ್ತ ಅಂಗರಕ್ಷಕರ ಪಡೆ, ಈ ಅನಿರೀಕ್ಷಿತ ಘಟನೆಯಿಂದ ಒಂದು ಗಳಿಗೆ ದಿಗ್ಭ್ರಾಂತವಾಗಿ ಮರುಗಳಿಗೆಯೇ ಚೇತರಿಸಿಕೊಂಡು, ಕತ್ತಿ, ಕೋವಿ, ಬಿಲ್ಲು ಬಾಣ, ಗಂಡುಗೊಡಲಿ, ಭಲ್ಲೆಗಳನ್ನು ಧರಿಸಿ, ಭೀಷಣ ನಿರ್ಧಾರದಿಂದ ಬಿಗಿದ ಮೊಗಹೊತ್ತು ಕಾವಲು ನಿಂತರು. ಒಂದಿಬ್ಬರು ಈ ಸುದ್ದಿಯನ್ನು ಪ್ರಧಾನಿಗಳಿಗೆ ತಿಳಿಸಲು, ಕಳ್ಳದಾರಿಗಳಲ್ಲಿ ಓಡಿದರು. ಅರಮನೆಯ ಮಹಾದ್ವಾರದ ಬಾಗಿಲು ಮುಚ್ಚಲ್ಪಟ್ಟು, ಮಹಾದ್ವಾರದ ಮೇಲಿನ ಕಾವಲು ಗೋಪುರದಿಂದ ಫಿರಂಗಿ ಅನಿರೀಕ್ಷಿತವಾದ ಸೈನಿಕರ ವರ್ತನೆಯಿಂದ ಆಶ್ಚರ್ಯಗೊಂಡಂತೆ ಇಣಿಕಿ ನೋಡಿತು.

ಇವೆಲ್ಲವನ್ನೂ ನೋಡುತ್ತಿದ್ದ ಸೈನಿಕರ ಗುಂಪು, ಯಾವ ಕಾರ್ಯಕ್ಕೂ ಅಡ್ಡಿಪಡಿಸದೆ, ಒಂದೇ ಸಮನೆ, ಆ ಕೂಗಿನ ಆಘಾತಕ್ಕೇ ಅರಮನೆಯ ಸುತ್ತಲ ಕೋಟೆ ಬಿರಿಯುವಂತೆ ಬೊಬ್ಬಿರಿದು ಕೂಗುತ್ತಿತ್ತು—‘ ನಾವು ನಾಯಕರನ್ನು ನೋಡಬೇಕು ! ’ ಗಳಿಗೆ ಗಳಿಗೆಗೆ ಅವರ ಆರ್ಭಟ ಹೆಚ್ಚುತ್ತಿತ್ತು.

ಆ ಸುದ್ದಿ ದುರ್ಗದಲ್ಲೆಲ್ಲಾ ಕಾಳ್ಗಿಚ್ಚಿನಂತೆ ಹರಡಿ ನೂರಾರು ಮಂದಿ ಜನ ಈ ಸೋಜಿಗವನ್ನು ನೋಡಲು ನೆರೆದರು.

ಅರಮನೆಯ ಹೊರಗಿದ್ದಷ್ಟೇ ಗಡಿಬಿಡಿ, ಅರಮನೆಯ ಒಳಗೂ ತುಂಬಿತ್ತು. ದಾಸ ದಾಸಿಯರು ಗಾಬರಿಯಾಗಿ, ಏನು ಮಾಡಬೇಕೆಂದು ತೋಚದೆ, ನಿಂತಲ್ಲಿ ಕಡೆದ ವಿಗ್ರಹದಂತೆ ನಿಂತಿದ್ದರು. ಕೆಲವರು ಅಳ್ಳೆದೆಯ ಹೆಣ್ಣುಗಳು ಬಿಕ್ಕಳಿಸಿ ಅಳಲಾರಂಭಿಸಿದ್ದರು. ಹೊರಗಿನಿಂದ ಸೈನಿಕರ ಅಬ್ಬರ ಕೇಳಿ ಬಂದಾಗ ಒಮ್ಮೆ, ಇವರೂ ಭೂಕಂಪವಾದಂತೆ ನಡುಗುವರು. ಈ ಗಳಿಗೆಯೇನೋ, ಮುಂದಿನ ಗಳಿಗೆಯೇನೋ ಎಂಬ ಭೀತಿ ಎಲ್ಲರ ಹೃದಯವನ್ನೂ ಹಿಂಡುತ್ತಿತ್ತು. ಭೀತಿ, ಅನಿಶ್ಚಯಗಳ ಪ್ರೇತಗಳಂತೆ ಅಲ್ಲಲ್ಲಿ ಸುತ್ತುವರು. ಯಾರಿಗೂ ಏನು ಕೆಲಸ ಮಾಡಲೂ ತೋಚದು. ಮಾರ್ಗದರ್ಶನ ಮಾಡಬಹುದಾಗಿದ್ದ ನಾಗತಿ, ಈ ಘಟನೆಯಿಂದ ಗಾಬರಿಯಾಗಿ, ನೆಲಮನೆಯ ಮಾರ್ಗದಿಂದ ಪ್ರಧಾನಿಯಾದ ಲಿಂಗಣ್ಣನಾಯಕನನ್ನು ಕರೆತರಲು ಕಳಿಸಿ, ಮುಂದೇನು ಮಾಡಬೇಕೆಂದು ತೋಚದೆ, ಪೂಜಾಲಯದಲ್ಲಿ ವಿಗ್ರಹದ ಮುಂದೆ ಕಂಬನಿಗರೆಯುತ್ತಾ ಕೆಡೆದಿದ್ದಳು. ಸೈನಿಕರ ಕೂಗಿನಿಂದ ಎಚ್ಚರವಾಗಿ ಎದ್ದು ಬಂದ ಓಬಣ್ಣನಾಯಕ ಭೀತನಾಗಿ ನಡುಗುತ್ತಾ ನಿಂತಿದ್ದ.

"ನಾಯಕರು ಬೇಕು! ನಾಯಕರನ್ನು ನಾವು ನೋಡಬೇಕು!" ಎಂಬ ಸೈನಿಕರು ಚೀತ್ಕರಿಸಿದುದನ್ನು ಕೇಳಿದಾಗ ಒಮ್ಮೆ ಅವನ ಮೈ ಬಿರುಗಾಳಿ ಬೀಸಿದ ಚಿಗುರೆಲೆಯಂತೆ ಕಂಪಿಸುವುದು. ಆಗ ತಾನೇ ಹದಿನಾರು ವರ್ಷಗಳು ದಾಟಿದ, ಯಾವ ಬಗೆಯ ಗಂಡಾಂತರಗಳಿಗೂ ಸಿಲುಕಿ ಧೀರನಾಗದ ಅವನ ಹೃದಯ ಬಾಯಿತೆರೆದ ಹಾವಿನ ಮುಂದೆ ಕುಳಿತ ಕಪ್ಪೆಯಂತೆ ಕಂಪಿಸುತ್ತಿತ್ತು. ಅವನೂ ಏನು ಮಾಡಬೇಕೆಂದು ತೋಚದೆ ಅಲ್ಲಲ್ಲಿ ಸುತ್ತಾಡುತಿದ್ದು, ಕಡೆಗೆ ಮಂಚದ ಮೇಲೆ ಮುಖ ಅಡಿಯಾಗಿ ಬಿದ್ದು ನಡುಗುತ್ತಿದ್ದ. ಕಣ್ಣೆತ್ತಿ ಸುತ್ತ ನೋಡಲು ಅವನಿಗೆ ಶಕ್ತಿ ಇದ್ದಂತಿರಲಿಲ್ಲ

ಓಬಣ್ಣನಾಯಕನ ದುಃಸ್ಥಿತಿಯನ್ನೂ, ನಾಗತಿಯ ದುಃಖವನ್ನೂ ನೋಡಲಾಗದೆ ಗಿರಿಜವ್ವೆಯ ಕಣ್ಣುಗಳಿಂದಲೂ ಕಂಬನಿ ಕೋಡಿಗಟ್ಟಿ ಹರಿಯುತ್ತಿತ್ತು. ಆದರೆ, ಆಕೆಯ ಕೈ, ಗೋಡೆಗೆ ತೂಗಿಸಿದ್ದ ಕತ್ತಿಯನ್ನು ಹಿಡಿದು ನಿಂತಿತ್ತು. ಕಂಬನಿಯ ಧಾರೆ ಹೊಳೆವ ಅವಳ ಮೊಗದ ಮೇಲೆ

‘ ಏನಾದರಾಗಲಿ, ಯಾರೂ ನನ್ನವರನ್ನು ನೋಯಿಸಲು ಬಿಡೆ’ ಎಂಬ ವೀರ ನಿರ್ಧಾರ ಮೂಡಿತ್ತು. ಬಾಗಿಲ ಬಳಿ, ಹಿರಿದ ಕತ್ತಿ ಹಿಡಿದು ನಿಂತಿದ್ದಳು ಗಿರಿಜವ್ವೆ.

ನಾಗತಿಯಟ್ಟದ ಆಳಿನಿಂದ ಸುದ್ದಿಯನ್ನು ತಿಳಿದ ಲಿಂಗಣ್ಣನಾಯಕ ಅಂತಃಪುರಕ್ಕೆ ನೇರವಾಗಿ ಬರುವ ನೆಲಮಾರ್ಗದಲ್ಲಿ ಓಡಿಬಂದ. ಬರುವಾಗ ‘ ಎಲ್ಲಿ, ಎಲ್ಲಿ ನಾಗತಿಯವರು ! ಎಲ್ಲಿ, ಏನಾಯಿತು ? ’ ಎಂದು ಕೇಳುತ್ತಲೇ, ಬಿಚ್ಚುಗತ್ತಿ ಹಿಡಿದು ಓಡಿಬಂದ. ಅವನ ಪ್ರಶ್ನೆಗೆ, ಗಿರಿಜವ್ವೆಯ ಮೂಕನೋಟ, ನೆಲದಲ್ಲಿ ಕೆಡೆದೆ ನಾಗತಿಯತ್ತ ನೋಡಿ ಉತ್ತರಕೊಟ್ಟಿತು.

ಲಿಂಗಣ್ಣನಾಯಕನ ಧ್ವನಿಯನ್ನು ಕೇಳಿದ ಓಬಣ್ಣನಾಯಕ ಒಂದೇ ಹಾರಿಗೆ ಮಂಚದಿಂದ ಹಾರಿ, ಲಿಂಗಣ್ಣನಾಯಕನನ್ನು ತಬ್ಬಿ ನಡುಗಲಾರಂಭಿಸಿದ. ಭೀತಿಯಿಂದ ನಡುಗುತ್ತಾ ನಿಂತ ನಾಯಕನ ಬೆನ್ನು ಸೇವರಿಸುತ್ತಾ, ಅವನ ಕೂಗು ಕೇಳಿ ಮೇಲೆದ್ದು, ದೀನ ಅಸಹಾಯಕತೆ ತುಂಬಿ ತುಳುಕುವ ಕಂಗಳಿಂದ ತನ್ನತ್ತ ತಿರುಗಿದ ನಾಗತಿಯ ಮೊಗವನ್ನು ನೋಡಿದ, ಲಿಂಗಣ್ಣನಾಯಕ. ಅವನ ಹೃದಯದಲ್ಲಿ ಪ್ರಚಂಡ ಕ್ರೋಧ ಕಾಳ್ಗಿಚ್ಚಿನಂತೆ ಉರಿಯಲಾರಂಭಿಸಿತು.

“ ಲಿಂಗಣ್ಣಾ — ಏನು ಗತಿ ? ”

— ಅಷ್ಟು ಕೇಳುತ್ತಿದ್ದ ಹಾಗೇ ನಾಗತಿಯ ನಾಲಗೆಯ ದ್ರವವಾರಿ, ನುಡಿ ನಿಂತುಹೋಯಿತು. ಆ ಮೂರು ಮಾತುಗಳಲ್ಲಿ ಹುದುಗಿದ್ದ ನೋವು, ಭಯ, ದೈನ್ಯ, ಅಸಹಾಯಕತೆಗಳು ಲಿಂಗಣ್ಣನಾಯಕನ ಹೃದಯವನ್ನು ಹಿಡಿದು ಹಿಂಡಿದುವು.

“ ಹೆದರಬೇಡಿ. ಚಿಕ್ಕಮ್ಮ, ನಾನು ಜೀವಂತನಾಗಿರುವ ವರೆಗೂ ಏನೂ ಭಯವಿಲ್ಲ.”

— ಎಂದ ಲಿಂಗಣ್ಣನಾಯಕ. ಅವನ ಆಶ್ವಾಸನದ ಮಾತು, ಅವನೊಳಗೆ ಹೊತ್ತಿ ಹೊಮ್ಮುತ್ತಿದ್ದ ಕ್ರೋಧಜ್ವಾಲೆಯ ಆಸ್ಫೋಟನವಾದ ಕಿಡಿಗಳಂತಿದ್ದುವು.

“ ಏನೂ ಭಯವಿಲ್ಲ, ಹೀಗೇಕೆ ನರೆದಿದಾರೋ ನಾನು ವಿಚಾರಿಸುತ್ತೇನೆ. ವಿಚಾರಿಸಿಕೊಂಡು ಬರುವ ವರೆಗೆ ನೀನಿಲ್ಲಿ ಕಾವಲಿರು ಗಿರಿಜವ್ವ.

ಕಸ್ತೂರಿನಾಯಕನನ್ನು, ಇನ್ನಿಬ್ಬರು ಭಟರನ್ನು ಕಳಿಸುತ್ತೇನೆ. ನನ್ನ ಪರವಾಗಿ ಅವರಿಗೆ ಹೇಳು ನಾಯಕರ, ಚಿಕ್ಕಮ್ಮನವರ ಕೂದಲು ಕೊಂಕಿವರೂ, ಅವರ ಮೈಸೀಳಿ ರಕ್ತ ಕುಡಿಯುತ್ತೇನೆ ಎಂದು. ಓಬಣ್ಣಾ, ಗಾಬರಿಯಾಗಬೇಡ. ”

—ಎಂದು ನುಡಿದು ಹೊರಡಲನುವಾದ. ಹೊರಗೆ ಹೋಗಲು ತಿರುಗಿದುವನ್ನು ಕಂಡ ಕೂಡಲೇ, ನಾಗತಿ ಕುಳಿತ ಸ್ಥಳದಿಂದ ಛಂಗನೆ ಹಾರಿ, ಅವನ ಕೈಹಿಡಿದು—

“ ಬೇಡ ಲಿಂಗಣ್ಣಾ, ಅವರ ಇದಿರು ನೀನು ಹೋಗಬೇಡ. ಅವರ ಕೂಗು ನೋಡಿದರೆ ಕೆರಳಿಬಂದಂತಿದೆ. ನಿನಗೇನಾದರೂ ಅಪಾಯವಾದರೆ ನಾನು ಬದುಕಿರಲಾರೆ. ”

—ಎಂದು ಅಂಗಲಾಚಿದರು.

“ ಅಪಾಯ ! ನನಗೆ ! ನನ್ನ ಮೈಮೇಲೆ ಕೈ ಎತ್ತುವ ಗಂಡು ಇನ್ನೂ ದುರ್ಗದಲ್ಲಿ ಹುಟ್ಟಿಲ್ಲ, ಚಿಕ್ಕಮ್ಮ. ಹೆದರಬೇಡಿ. ಸೊಕ್ಕಿದ ನಾಯಿಗಳಿಗೆ ತಕ್ಕ ಬುದ್ಧಿ ಕಲಿಸಿ ಬರುತ್ತೇನೆ. ”

—ಲಿಂಗಣ್ಣನಾಯಕ ನಾಗತಿಯ ಭೀತಿಯನ್ನು ನಿವಾರಿಸಲು ನಗುತ್ತಾ ಹೇಳಿದ.

“ ಇಲ್ಲ, ನೀನೇನು ಹೇಳಿದರೂ ನನಗೆ ಭಯವೇ ! ”

“ ಹಾಗೆಂದು ಇಲ್ಲಿ ಹೆದರಿ ನಡುಗುತ್ತಾ ಕುಳಿತರೆ ಈ ಭೀತಿ ನಿವಾರಣೆಯಾಗುವುದೇ ಚಿಕ್ಕಮ್ಮ. ಎದುರಾಗಿ ಹೋಗಿ ನಿಂತು ಕೇಳುತ್ತೇನೆ. ಸೊಕ್ಕಿ ನುಡಿವವರ ನಾಲಗೆ ಕತ್ತರಿಸಿ ಹಾಕುತ್ತೇನೆ. ಎರಡು ತಲೆ ಉರುಳಿದರೆ ಈ ಪುಂಡಾಟವೆಲ್ಲಾ ಹುಟ್ಟಡಗಿ ಹೋಗುತ್ತದೆ. ಅರಮನೆ ಅರಕ್ಷಿತವಾದ ಅರಣ್ಯವಲ್ಲ. ಗುಂಡಿನೇಟು ಬಿದ್ದರೆ, ಕೂಗಿ ಬೊಬ್ಬೆ ಹಾಕುವ ಈ ಗಂಡುತನ ಎಲ್ಲಿ ಉಳಿಯುವುದೊ ನೋಡುತ್ತೇನೆ. ”

“ ಅದೇ ನನಗೆ ಭೀತಿ ಲಿಂಗಣ್ಣ. ”

“ ಏನು ಭೀತಿ ಚಿಕ್ಕಮ್ಮ ! ”

“ ಎಲ್ಲಿ ಸಿಟ್ಟಿಗೆ ಕೈ ಕೊಟ್ಟು, ಅಪಾಯವನ್ನು ಆಹ್ವಾನಿಸುತ್ತೀಯೋ ಎಂದು. ಕೆರಳಿದ ಜನ ರಕ್ತ ಕಂಡು ಉಡುಗುವುದಿಲ್ಲ ಲಿಂಗಣ್ಣ. ಕಳ್ಳುಕುಡಿ

ದಂತೆ ಉನ್ಮತ್ತವಾಗುತ್ತದೆ. ಎಲ್ಲಿ ಹಾಗಾಗುತ್ತದೆಯೋ ಎಂದೇ ನನಗೆ ಭಯ. ಹೋಗು ಮಾತನಾಡು, ಮಾತಿನಲ್ಲಿ ಸೋತರೂ ಸರಿಯೇ ಲಿಂಗಣ್ಣ, ಎಲ್ಲಾ ಮಾತಿನಲ್ಲಿ ಸಮಾಧಾನವಾಗಲಿ. ಏನಾದರಾಗಲಿ, ರಕ್ತದ ಬೆಂಕಿ ಹೊತ್ತದಿರಲಿ."

"ಅಗತ್ಯ ಕಂಡಂತೆ ಮಾಡುತ್ತೇನೆ ನನ್ನನ್ನು ಬಿಡಿ ಚಿಕ್ಕಮ್ಮ."

"ಊಹೂ, ನಾನು ಕೇಳಿದಂತೆ ವಚನ ಕೊಡುವ ವರೆಗೂ ಬಿಡುವುದಿಲ್ಲ."

"ಏನು ವಚನ ಕೊಡಲಿ ಚಿಕ್ಕಮ್ಮ?...."

ಸಹನೆ ಮೀರುತ್ತಾ ಕೇಳಿದ ಲಿಂಗಣ್ಣನಾಯಕ.

"ಏನಾದರಾಗಲಿ, ಹಿಂಸೆಗೆ ಎಡೆಕೊಡುವುದಿಲ್ಲವೆಂದು ನನ್ನ ತಲೆ ಮುಟ್ಟಿ ಹೇಳು."

"ಹಾಗೇ ಆಗಲಿ ಚಿಕ್ಕಮ್ಮ. ನಿಮ್ಮ ನೆತ್ತಿಯಾಣೆ-ಹಿಂಸೆಗೆ ಮನ ಮಾಡುವುದಿಲ್ಲ."

—ಎಂದು ವಚನ ಕೊಟ್ಟವನೇ ಲಿಂಗಣ್ಣನಾಯಕ ಅರಮನೆಯ ಮಹಾದ್ವಾರದತ್ತ ಧಾವಿಸಿದ. ಅವನ ಹಿಂದೆಯೇ ಹತ್ತಾರು ಜನ ಅಂಗ ರಕ್ಷಕರೂ ಧಾವಿಸಿದರು.

ಲಿಂಗಣ್ಣನಾಯಕ ವಚನ ಕೊಟ್ಟರೂ ನಾಗತಿಗೆ ನಂಬಿಕೆಯಾಗ ಲಿಲ್ಲ. ಏನಾಗುವುದೋ ಎಲ್ಲಿ ಮಾತು ಸೋತು, ಕೈ ಮಡುಕುವುದೋ ಎಂದು ಹೆದರಿ, ತನ್ನೊಂದಿಗೆ ಓಬಣ್ಣನಾಯಕ, ಗಿರಿಜವ್ವೆಯರನ್ನೂ, ನಾಲ್ಕು ಮಂದಿ ಬಿಚ್ಚುಗತ್ತಿಯ ಪಹರೆಯವರನ್ನೂ ಕರೆದುಕೊಂಡು, ಮೇಲುಪ್ಪರಿಗೆಯಿಂದ ನಡೆದು, ಮಹಾದ್ವಾರದ ಕಾವಲು ಗೋಪುರದ ಬಳಿ ಬಂದು, ಅವರ ಮರೆಯಲ್ಲಿ ಕೆಳಗೆ ನಡೆಯುವುದನ್ನು ನೋಡುತ್ತಾ ನಿಂತಳು.

ಮುಚ್ಚಿದ ಮಹಾದ್ವಾರದ ಬಾಗಿಲ ಪಕ್ಕದ ದಿಡ್ಡಿಯ ಬಾಗಿಲನ್ನು ತೆಗೆದುಕೊಂಡು ಲಿಂಗಣ್ಣನಾಯಕ ಹೊರಬಂದ. ಅವನ ಮುಂದೆ ನಾಲ್ಕು ಮಂದಿ ಬಿಚ್ಚುಗತ್ತಿ ಹಿಡಿದವರು ನುಗ್ಗಿ, ನೆರೆದ ಸೈನಿಕರಿಗೆ ಎದುರಾಗಿ ನಿಂತರು. ಹಿಂದೆ ಹತ್ತು ಜನ ಸುತ್ತುವರಿದು, ಬಿಲ್ಲುಗಳಿಗೆ ಬಾಣವನ್ನು ಹೂಡಿ ನಿಂತರು.

ಲಿಂಗಣ್ಣನಾಯಕ ಹೊರಬರುತ್ತಿದ್ದ ಹಾಗೇ 'ಲಿಂಗಣ್ಣನಾಯಕರು ಬಂದರು-ಲಿಂಗಣ್ಣನಾಯಕರು ಬಂದರು....ಎಂಬ ಸುದ್ದಿ ಹರಡಿ, ಕೂಗುತ್ತಿದ್ದ ಸೈನಿಕರ ನಾಲಗೆಗೆ ಕಡಿವಾಣ ಬಿಗಿದಂತಾಗಿ, ಕೂಗು ನಿಲ್ಲಿಸಿ, ಮಹಾದ್ವಾರದಿಂದ ಮುಂದೆ ಬಂದು, 'ಪಹರೆ ಕಟ್ಟೆಯ ಮೇಲೆ ನಿಂತ ಲಿಂಗಣ್ಣನಾಯಕನನ್ನು ನೋಡಿದರು.

ಆಪತ್ತಿನ ಅವಸರದ ಕರೆ ಕೇಳಿ ಓಡಿ ಬಂದ ಲಿಂಗಣ್ಣನಾಯಕ ತೊಟ್ಟ ಅಂಗಿಯ ಕಸೆಯನ್ನು ಬಿಗಿಯದೆ, ಅಗೆತೆರೆದ ಅಂಗಿಯ ಮರೆಯಿಂದ ಉಬ್ಬಿದ ಹರವಾದ ಎದೆ ಉಕ್ಕಿನ ಕವಚದಂತೆ ಕಾಣಿಸುತ್ತಿತ್ತು. ತಲೆಯ ಮೇಲೆ ಪಾಗನ್ನಿಡದೆ, ಚಂಡಿಕೆಯ ಕೂದಲು ಕೆದರಿ ಗಾಳಿಗೆ ಹಾರುತ್ತಿತ್ತು. ಅವನ ಬಲಿಷ್ಠವಾದ ಮೈ, ಏನು ಬಂದರೂ ಎದುರಿಸುವೆನೆನ್ನುವಂತೆ, ಕಲ್ಲಿನ ಕಂಬದಂತೆ ಸೆಟೆದು ನಿಂತಿತ್ತು. ಕೈಯಲ್ಲಿ ಹಿಡಿದೆತ್ತಿದ ಬಿಚ್ಚುಗತ್ತಿ, ಎಳೆ ಬಿಸಿಲಿನಲ್ಲಿ ಅವನೊಳಗೆ ಉರಿಯುತ್ತಿದ್ದ ಕ್ರೋಧದಂತೆ ಲಕಲಕಿಸುತ್ತಿತ್ತು. ತನ್ನನ್ನು ಕಂಡು ಸದ್ದಡಗಿಸಿ ನಿಂತ ಸೈನಿಕರನ್ನು ಕಂಡು, ಗದ್ದರಿಸಿ ಕೇಳಿದ—

"ಏನಾಗಬೇಕು ನಿಮಗೆ?"

ಅವನ ಪ್ರಶ್ನೆಗೆ ಯಾರೂ ಕೂಡಲೇ ಉತ್ತರ ಕೊಡಲಿಲ್ಲ. ಅದನ್ನು ಕಂಡು ಧ್ವನಿಯನ್ನು ಮತ್ತಷ್ಟು ಏರಿಸಿ ಕೇಳಿದ ಲಿಂಗಣ್ಣನಾಯಕ—

"ನಿಮಗೇನು ಬೇಕು, ಹೇಳಿ. ಇಷ್ಟರ ವರೆಗೂ ಕೂಗುತ್ತಿದ್ದವರು ಈಗೇಕೆ ಬಾಯಿ ಸತ್ತವರಂತೆ ನಿಂತಿರಿ. ಹೇಳಿ, ಏನಾಗಬೇಕು ನಿಮಗೆ?"

"ನಾಯಕರನ್ನು ಕಾಣಬೇಕು ನಾವು."

—ಅನಿರೀಕ್ಷಿತ ಆಘಾತದಿಂದ ಚೇತರಿಸಿಕೊಂಡ ಒಂದೆರಡು ಕಂಠಗಳು ಗುಂಪಿನಲ್ಲಿ ಕೂಗಿದುವು.

"ನಾಯಕರನ್ನು ಕಾಣಬರುವವರ ರೀತಿ ಇದಲ್ಲ. ನಿಮ್ಮಲ್ಲಿ ಯಾರಾದರೂ ಮುಖಂಡರಿದ್ದರೆ ಬಂದು ನಿಮ್ಮ ಅಹವಾಲು ಏನಿದೆಯೋ ಹೇಳಿ. ಅಗತ್ಯವಿದ್ದರೆ ನಾನೇ ನಿಮ್ಮನ್ನು ನಾಯಕರ ಬಳಿ ಕರೆದೊಯ್ಯುತ್ತೇನೆ. ಯಾರು ನಿಮ್ಮ ಮುಖಂಡರು, ಮುಂದಕ್ಕೆ ಕಳಿಸಿ ಅವರನ್ನು."

ಸವಾಲಿನಂತಿತ್ತು ಲಿಂಗಣ್ಣನಾಯಕನ ಕರೆ. ಅದಕ್ಕೆ ಬೆದರಿದಂತೆ ಗುಂಪು ಒಂದು ಹೆಜ್ಜೆ ಹಿಂದೆ ಸರಿಯಿತು. ಒಂದೆರಡು ಗಳಿಗೆ ಗಟ್ಟಿ ಮಾತಾಡುವುದೂ ಕೇಳದೆ, ತಮ್ಮತಮ್ಮೊಳಗೇ ಮಾತನಾಡಿಕೊಳ್ಳುವ ಪಿಸುದನಿಯ ಸದ್ದು ಕೇಳಿತು.

"ನಿಮಗೆ ಯಾರೂ ಮುಖಂಡರಿಲ್ಲವೇ?"

—ಅವರಿಂದ ಉತ್ತರ ಬರದುದನ್ನು ಕಂಡು ಲಿಂಗಣ್ಣನಾಯಕನೇ ಕೇಳಿದ. ಅವನ ಮಾತು ಕೇಳಿ ಎರಡು ಗಳಿಗೆ ಗುಂಪಿನಲ್ಲಿ ಏನೋ ತುಯ್ದಾಟವಾದಂತಾಗಿ, ಮುದ್ದಣ್ಣನ ತಮ್ಮ ರಾಯಣ್ಣ, ವೀರಣ್ಣನೊಡನೆ ಮುಂದೆ ಬಂದ. ಮುಂದೆ ಬಂದ ಅವರಿಬ್ಬರನ್ನೂ ಕಂಡು ಲಿಂಗಣ್ಣನಾಯಕ ಅಬ್ಬರಿಸಿ ಕೇಳಿದ—

"ವಿಪರೀತ ನಡತೆಯ ಅರ್ಥವೇನು? ಏನಾಗಬೇಕು ನಿಮಗೆ?"

"ನಾವು ನಾಯಕರನ್ನು ಕಾಣಬೇಕು."

"ಏಕೆ?"

"ಅದು ನಾಯಕರೊಂದಿಗೆ ಹೇಳಬೇಕಾದ ಮಾತು?"

—ಲಿಂಗಣ್ಣನಾಯಕನ ಪ್ರಶ್ನೆಗೆ ರಾಯಣ್ಣ ಉದ್ಧಟತನದಿಂದ ಉತ್ತರ ಕೊಟ್ಟ. ಅವನ ಉದ್ಧಟತನವನ್ನು ಕಂಡು, ಅವನನ್ನು ಹಿಡಿದು ಅವನ ನಾಲಗೆಯನ್ನು ಹೊರಗೆಳೆದು ಸೀಳಬೇಕೆನ್ನುವಷ್ಟು ಸಿಟ್ಟು ಬಂತು ಲಿಂಗಣ್ಣನಾಯಕನಿಗೆ. ಆದರೂ ಅದನ್ನು ಹೊರತೋರಗೊಡದೆ—

"ನೀವು ದಳವಾಯಿ ಮುದ್ದಣ್ಣನವರ ತಮ್ಮಂದಿರು ರಾಯಣ್ಣನವರಲ್ಲವೇ?" ಎಂದು ಹೇಳಿದ.

"ಅಹುದು."

"ನಾಯಕರನ್ನು ಕಾಣುವ ರೀತಿ–ರಿವಾಜು ನಿಮಗೆ ಗೊತ್ತಿಲ್ಲವೇ? ಗುಂಪು ಕಟ್ಟಿಕೊಂಡು ಬಂದು ಗುಲ್ಲೆಬ್ಬಿಸುವುದು ಕ್ರಮವಲ್ಲ."

"ಇರಬಹುದು. ನಾಯಕರೇ ರೀತಿ-ರಿವಾಜು ಮುರಿದು, ನಮ್ಮ ಮೋರೆಗೆ ಮಸಿ ಬಳಿದ ಮೇಲೆಯೇ ನಾವೂ ರೀತಿ–ರಿವಾಜು ಮುರಿದಿರುವುದು."

—ರಾಯಣ್ಣನ ಉದ್ಧಟತನದಿಂದ ಏನೋ ಧೈರ್ಯಗೊಂಡಂತೆ ಹೇಳಿದ

ವೀರಣ್ಣ. “ ಇವನಿಗೂ ಇಷ್ಟು ಧೈರ್ಯ ಬಂತೆ ! ” ಎನ್ನುವ ಆಶ್ಚರ್ಯಸೂಸುವ ನೋಟದಿಂದ ನೋಡುತ್ತಾ ಹೇಳಿದ ಲಿಂಗಣ್ಣನಾಯಕ—

“ ನಾಯಕರ ನಡತೆಯನ್ನು ಪ್ರಶ್ನಿಸುವ ಸಾಹಸ ಸೈನಿಕರಿಗೆ ಬಂದುದು ಆಶ್ಚರ್ಯವೇ ಸರಿ. ಆ ವಿಚಾರ ಮುಂದಕ್ಕಾಗಲಿ. ನಿಮ್ಮ ಬೇಡಿಕೆಯನ್ನು ವಿಚಾರಿಸುವ ಅಧಿಕಾರವನ್ನು ನಾಯಕರು ನನಗಿತ್ತಿದಾರೆ. ಏನು ಬೇಕು ಹೇಳಿ ? ”

“ ನಾಯಕರನ್ನೇ ನೋಡಿ ಕೇಳಬೇಕೆಂದು ಬಂದಿದೇವೆ ನಾವು.”

—ರಾಯಣ್ಣ-ವೀರಣ್ಣ ಇಬ್ಬರೂ ಒಟ್ಟಾಗಿ ಹೇಳಿದರು.

“ ನಾನು ಯಾರೆಂಬುದು ಗೊತ್ತೇ ನಿಮಗೆ ? ”

—ಉಕ್ಕಿಬಂದ ಸಿಟ್ಟನ್ನು ತಡೆಹಿಡಿಯುತ್ತಾ, ಚಂಡಿಹಿಡಿದ ಮಗುವಿಗೆ ಸಮಾಧಾನ ಹೇಳುವ ತಾಯಿಯ ಧ್ವನಿಯಲ್ಲಿ ಕೇಳಿದ ಲಿಂಗಣ್ಣನಾಯಕ.

“ ಬಲ್ಲೆವು. ನೀವು ಪ್ರಧಾನಿಗಳು.”

“ ಅಷ್ಟಾದರೂ ಪ್ರಜ್ಞೆ ಉಳಿದಿರುವುದು ನಮ್ಮ ಭಾಗ್ಯ. ನಾನು ಪ್ರಧಾನಿ ಎಂದು ನಿಮಗೆ ಗೊತ್ತಿದ್ದರೆ, ನನ್ನ ಸಮ್ಮತಿ ಇಲ್ಲದೆ ನಾಯಕರು ಏನನ್ನೂ ಮಾಡುವುದಿಲ್ಲ, ಯಾರನ್ನೂ ನೋಡುವುದಿಲ್ಲ ಎಂಬುದೂ ನಿಮಗೆ ತಿಳಿದಿರಬೇಕು. ಎಂತಲೇ ಕೇಳುತ್ತಿದ್ದೇನೆ. ನಿಮಗೇನು ಬೇಕೋ ಹೇಳಿ. ಅಗತ್ಯವಾದುದನ್ನು ಮಾಡುತ್ತೇನೆ. ಹಾಗಲ್ಲದೆ ಅವಿನಯವನ್ನೆ ಮೆರಸಬೇಕೆಂದು ಬಂದಿದ್ದರೆ, ತಲೆ ಕೊಟ್ಟಾದರೂ ಅರಮನೆಯ ಮರ್ಯಾದೆಯನ್ನು ರಕ್ಷಿಸುವ ಬಲ ಈ ತೋಳುಗಳಿಗಿದೆ.”

—ಎಂದು ಎದೆಯ ಮೇಲೆ ಕೈಗಟ್ಟಿ, ಸೆಟೆದು ನಿಂತು ಹೇಳಿದ ಲಿಂಗಣ್ಣನಾಯಕ. ಅವನ ಮಾತನ್ನು ಕೇಳಿ, ನಿಲುವನ್ನು ಕಂಡು ರಾಯಣ್ಣ ವೀರಣ್ಣ ಇಬ್ಬರೂ ಒಬ್ಬರ ಮೊಗವನ್ನೊಬ್ಬರು ನೋಡುತ್ತಾ ನಿಂತರು. ಗುಂಪೂ ಉಸಿರು ಬಿಗಿಹಿಡಿದು ಅವರ ಮಾತನ್ನಾಲಿಸುತ್ತಿತ್ತು.

“ ನಮಗೆ ಸಲ್ಲಬೇಕಾಗಿದ್ದ ಪಟ್ಟಗಾಣಿಕೆಯನ್ನು ಕೇಳಲು ನಾವು ಬಂದಿದೇವೆ.”

—ಸ್ವಲ್ಪ ಹೊತ್ತಾದ ಬಳಿಕ ತಗ್ಗಿದ ಧ್ವನಿಯಲ್ಲಿ ವೀರಣ್ಣ ಹೇಳಿದ.

“ ನಿಮಗೆ ಸಲ್ಲಬೇಕಾದ ಪಟ್ಟಗಾಣಿಕೆ ಈಗಾಗಲೇ ಸಂದಾಯ

ವಾಗಿರಬೇಕು. ಸಂದಾಯವಾಗಿದೆ ಎಂದು ಅರಮನೆಗೆ ಚಿನ್ನದ ಮನೆಯ ಕರಣಿಕರು ವರದಿ ಮಾಡಿದಾರೆ."

"ಕೊಡಬೇಕಾದಷ್ಟನ್ನೂ ನಮಗೆ ಕೊಟ್ಟಿಲ್ಲ."

"ಎಷ್ಟು ಕೊಡಬೇಕೆಂದು ಅರಮನೆಯಿಂದ ಅಪ್ಪಣೆಯಾಯಿತೋ ಅಷ್ಟನ್ನು ಕೊಟ್ಟಿದ್ದಾರೆ. ಅರಮನೆಯ ಚಿತ್ತಕ್ಕೆ ಎಷ್ಟು ಕೊಡುವುದು ಸಾಧ್ಯವೋ ಅಷ್ಟನ್ನು ಕೊಡಲು ಅಪ್ಪಣೆಮಾಡಿದಾರೆ."

"ಅದಾಗದು. ನಮಗೆ ಮಾಮೂಲು ಸಲ್ಲಬೇಕು."

"ಕೊಡುವುದು ಬಿಡುವುದು ಅರಮನೆಯ ಚಿತ್ತ. ಇದು ಸಂಬಳ ವಲ್ಲ, ಉಡುಗೊರೆ. ಕೊಟ್ಟಷ್ಟು, ತೆಗೆದುಕೊಂಡು ಸಂತೋಷಪಡ ಬೇಕು, ನೀವು."

"ವಾಡಿಕೆ ತಪ್ಪಿಸುವುದು ನಮಗೆ ಅವಮಾನ. ದುರ್ಗಕ್ಕಾಗಿ ಪ್ರಾಣ ಒಪ್ಪಿಸಲು ಸಿದ್ಧವಾಗಿರುವವರಿಗೆ ಅರಮನೆಯವರು ಈ ರೀತಿ ಅಪಮಾನ ಮಾಡಬಾರದು."—ರಾಯಣ್ಣ ಸಿಟ್ಟಿನಿಂದ ಹೇಳಿದ.

"ಇಂಥ ಮಾತನ್ನು ತನ್ನ ಊಳಿಗದ ಸೈನಿಕರಿಂದ ಕೇಳುವುದೂ ಅರಮನೆಗೆ ಅಪಮಾನ. ಮೀರಿ ನಡೆದವರಿಗೆ ಶಿಕ್ಷೆ ಏನೆಂಬುದು ಗೊತ್ತಿಲ್ಲವೇ ನಿಮಗೆ? ದಂಡಿನವರು ತಮಗೆ ಬೇಕಾದ ಮಾತನ್ನು ದಳವಾಯಿಗಳ ಬಾಯಲ್ಲಿ ಹೇಳಿಸಬೇಕು."

ದಳವಾಯಿಗಳ ಮಧ್ಯಸ್ತಿಕೆ ನಮಗೆ ಬೇಕಾಗಿಲ್ಲ. ನಾಯಕರನ್ನೇ ಕೇಳುತ್ತೇವೆ.

"ಮಾತು ಅತಿಯಾಯಿತು ರಾಯಣ್ಣ."

—ತಣ್ಣಗೆ ಹೊಳೆವ ಉಕ್ಕಿನ ಅಲಗಿನಂತಿತ್ತು ಲಿಂಗಣ್ಣನಾಯಕನ ಮಾತು.

"ಅತಿಯಾದರೆ ತಲೆಯೊಪ್ಪಿಸಲು ಸಿದ್ಧವಾಗಿ ಬಂದಿದೇವೆ. ಅಹುದೋ ಅಲ್ಲವೋ ಕೇಳಿನೋಡಿ."

—ಎಂದ ರಾಯಣ್ಣ ಗುಂಪಿನತ್ತ ತಿರುಗಿ. ಅವನ ಮೊಗವನ್ನು ಕಂಡು ಗುಂಪು ಉದ್ರೇಕಗೊಂಡು "ಪಟ್ಟಗಾಣಿಕೆ, ಇಲ್ಲವೇ ಪ್ರಾಣ !" ಎಂದು ಚೀರಿತು.

"ಕೇಳಿದಿರಾ ಅವರ ಮಾತನ್ನು ?"

—ರಾಯಣ್ಣ ಕೆಣಕಿ ಕೇಳಿದ."

"ಹಾಗಾದರೆ....ಹಾಗಾದರೆ...." ಉಕ್ಕಿಬಂದ ಸಿಟ್ಟಿನ ಮಾತನ್ನು ನಾಗತಿಗಿತ್ತ ವಚನದ ಮಾತಿನ ನೆನಪಿನಿಂದ ತಡೆಹಿಡಿದು ಹೇಳಿದ— "ಹಾಗಾದರೆ ನೀವು ನಾಯಕರನ್ನು ಕಾಣಲಾರಿರಿ."

"ನೋಡಿಯೇ ನೋಡುತ್ತೇವೆ. ಯಾರೂ ನಮ್ಮನ್ನು ತಡೆಯಲಾಗದು."

"ಹಾಗೆ ಮುಂದೆ ನುಗ್ಗುವ ಗಂಡು ನನ್ನ ಹೆಣದ ಮೇಲೆ ನಡೆಯ ಬೇಕಾಗುತ್ತದೆ. ಮುಂದೆ ಬರುವವರು ಬನ್ನಿ."

—ಎಂದು ತಾಳ್ಮೆ ಸೋತು ಕತ್ತಿಎತ್ತಿ ಬೀಸಲು ಸಿದ್ಧವಾಗಿ ಹೇಳಿದ ಲಿಂಗಣ್ಣನಾಯಕ.

ರಾಯಣ್ಣ ಮುಂದೆ ನಡೆಯಲು ಹೆಜ್ಜೆಹಾಕಿದ. ವೀರಣ್ಣನೂ ಅವನನ್ನು ಹಿಂಬಾಲಿಸಲು ಹೆಜ್ಜೆ ಎತ್ತಿದ ಕೂಡಲೇ ಲಿಂಗಣ್ಣನಾಯಕನ ಅಂಗರಕ್ಷಕರು ಕತ್ತಿ ಸೆಳೆದು ಮುಂದೆ ನುಗ್ಗಿದರು. ರಾಯಣ್ಣನೂ ಕತ್ತಿ ಸೆಳೆದ. ಇದ್ದಕ್ಕಿದ್ದ ಹಾಗೇ ಗುಂಪಿನಲ್ಲಿ ಅಲ್ಲಕಲ್ಲೋಲವಾಗಿ ಗುಂಪು ಹುಚ್ಚಾಗಿ ಚೀರಿ, ಮುಂದೆ ತುಯ್ದಿತು.

"ನಿಲ್ಲಿ"

—ನಾಗತಿಯ ತಾರಸ್ವರದ ಕೂಗು ಗುಂಪಿನ ಗದ್ದಲವನ್ನು ಕತ್ತರಿಸಿ ಕೇಳಿ ಬಂದಿತು. ಹರಿತವಾದ ಮಾತು ಕೇಳಿ ಹೆದರಿದಂತೆ ಗುಂಪು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಎಳೆದು ಧ್ವನಿಬಂದತ್ತ ದಿಟ್ಟಿಸಿ ನೋಡಿತು.

ಕೆಳಗೆ ನಡೆಯುವುವನ್ನು, ಮರೆಯಾಗಿ ನಿಂತು ನೋಡುತ್ತಿದ್ದ ನಾಗತಿ, ಪರಿಸ್ಥಿತಿ ಕೈಮೀರಿ ಹೋಗುವುದನ್ನು ನೋಡಿ ತಡೆಯಲಾರದೆ, ಹೊರಬಂದು, ಗುಂಪಿಗೆ ಕಾಣಿಸುವಂತೆ ನಿಂತು ಕೇಳಿದಳು.

"ನಿಮಗೇನಾಗಬೇಕು ?"

"ನಮಗೆ ಪಟ್ಟಕಾಣಿಕೆ ಸಲ್ಲಬೇಕು."

ಹತ್ತಾರು ಕಂಠ ಕೂಗಿ ಹೇಳಿದುವು. ನಾಗತಿ ಕೆಳಗೆ ಕಿಕ್ಕಿರಿದ ಗುಂಪನ್ನು ಸುತ್ತಲೂ ಕಣ್ಣಾಡಿಸಿ ನೋಡಿದಳು. ಕೆರಳಿದ ಪಶುವಿನ ಮಂದೆಯಂತೆ ಗುಂಪು ಹಿಂದು ಮುಂದೆ ತುಯ್ಯುತ್ತಿತ್ತು.

" ಗಿರಿಜವ್ವೆ, ಅವರಿಗೆ ನಾವು ಕೆಳಗಿಳಿದು ಬರುವ ವರೆಗೂ ಸುಮ್ಮ ನಿರುವಂತೆ ಹೇಳು."

" ಆ್ಞ....ನೀವೇ ಕೆಳಗೆ ಹೋಗುತ್ತೀರಾ ತಾಯಿ ? "

ಗಿರಿಜವ್ವೆ ಭೀತಳಾಗಿ ಕೇಳಿದಳು.

" ನಾನೊಬ್ಬಳೇ ಹೋಗುವುದಿಲ್ಲ. ನೀನೂ ನನ್ನ ಜೊತೆಗಿರು. ಎಲ್ಲಕ್ಕಿಂತ ಹೆಚ್ಚಾಗಿ ಶಿವ ನಮ್ಮ ಬೆಂಬಲಕ್ಕಿದ್ದಾನೆ. ಹೆದರಬೇಡ ಗಿರಿ ಜವ್ವೆ. ನಾವು ಹೇಳಿದಷ್ಟನ್ನು ಹೇಳಿ, ನಮ್ಮ ಜೊತೆಗೆ ಬಾ. ನಾಯಕರನ್ನು ಪಹರೆಯವರು ಒಳಗೆ ಕರೆದೊಯ್ಯಲಿ " ಎಂದು ಹೇಳಿ ನಾಗತಿ ಗೋಪುರ ದಿಂದ ಕೆಳಗಿಳಿದಳು. ಗಿರಿಜವ್ವೆ—

" ನಾಗತಿಯವರೇ ಕೆಳಗೆ ಬರುತ್ತಿದ್ದಾರೆ. ತಡೆಯಿರಿ ! "

ಎಂದು ಗುಂಪಿಗೆ ಕೂಗಿ ಹೇಳಿದಳು. ಅವಳ ಧ್ವನಿಯನ್ನು ಕೇಳಿ ವೀರಣ್ಣ ಚಕಿತನಾಗಿ ತಲೆ ಎತ್ತಿ ನೋಡಿದ, ಗಿರಿಜವ್ವೆಯೂ ಅವನನ್ನು ನೋಡಿದಳು. ನೋಡಿದ ಕೂಡಲೇ ಕಣ್ಣಲ್ಲಿ ಕಾಡುಗಿಚ್ಚು ಹೊಕ್ಕಂತೆ ತಲೆಬಾಗಿಸಿದಳು. ಅವಳ ಮಾತು ಕೇಳಿ, ಮಂತ್ರ ಹಾಕಿದಂತೆ ಗುಂಪು ಸ್ತಬ್ಧವಾಯಿತು.

ನಾಗತಿ ಮಹಾದ್ವಾರದ ದಿಡ್ಡಿಯ ಬಾಗಿಲು ತೆಗೆದು ಹೊರಬಂದ ಕೂಡಲೇ, ಲಿಂಗಣ್ಣನಾಯಕ ಆಕೆಯ ಬಳಿ ಧಾವಿಸಿ ಹೇಳಿದ—

" ನೀವಿಲ್ಲಿ ಬರಬೇಡಿ ಚಿಕ್ಕಮ್ಮ, ಒಳಗೆ ಹೋಗಿ. ಇದು ಉನ್ಮತ್ತ ಮಂದೆ. ಇವರ ವಿಚಾರ ನಮಗೆ ಬಿಡಿ."

" ನನಗೇನೂ ಭಯವಿಲ್ಲ ಲಿಂಗಣ್ಣ. ಒಂದು ಗಳಿಗೆ ಸುಮ್ಮನಿರು. ನಮ್ಮ ಮಕ್ಕಳು ನಮಗೇನೂ ಮಾಡಲಾರರು " ಎಂದು ಹೇಳಿ, ಮೂರ್ತಿ ವೆತ್ತ ಗಾಂಭೀರ್ಯದಂತೆ, ಮುಂದೆ ನಡೆದು, ಗುಂಪಿನ ಮುಖಂಡನಾಗಿ ನಿಂತಿದ್ದ ರಾಯಣ್ಣ, ವೀರಣ್ಣನ ಬಳಿ ಸಾರಿ, ತನ್ನ ಸುತ್ತ ಬಂದ ಅಂಗ ರಕ್ಷಕರಿಗೆ—

" ಆಚೆ ಇರಿ. ನಿಮ್ಮ ಅಗತ್ಯ ನಮಗಿಲ್ಲ. ನಮ್ಮ ಮಕ್ಕಳ ಪ್ರೀತಿ ನಮ್ಮನ್ನು ಕಾಪಾಡದೆ ಹೋದರೆ, ಯಾರ ಕತ್ತಿಯೂ ನಮ್ಮನ್ನು ಕಾಪಾಡ ಲಾರದು.

—ಎಂದಳು. ಅಂಗರಕ್ಷಕ ಪಡೆ, ಅವರೊಂದಿಗೆ ಬಂದ ಲಿಂಗಣ್ಣ ನಾಯಕನೊಂದಿಗೆ ಹತ್ತು ಹೆಜ್ಜೆ ಹಿಂದೆ ಸರಿದು ನಿಂತಿತು. ತನ್ನ ಸುತ್ತ ನಿಂತ ಗುಂಪನ್ನು ದಿಟ್ಟಿಸಿ ನೋಡಿ ನಾಗತಿ, ತನ್ನ ಪಕ್ಕದಲ್ಲಿ ನಿಂತ ಗಿರಿಜವ್ವೆಗೆ ಹೇಳಿದಳು:

" ಅವರ ಪ್ರಶ್ನೆಗೆ ನಾವೇ ಉತ್ತರ ಕೊಟ್ಟರೆ ತೃಪ್ತಿಯಾಗುವುದೇ ಕೇಳು ಗಿರಿಜವ್ವೆ ? "

" ತಾವು ಅಪ್ಪಣೆ ಕೊಡಿಸಿದುದನ್ನು ಕೇಳಲು ಸಿದ್ಧವಾಗಿದೇವೆ."

—ಎಂದ ರಾಯಣ್ಣ ನಾಗತಿಯ ಗಾಂಭೀರ್ಯದಿದಿರು ಸೋತು. ಎಂದೂ ನಾಗತಿಯನ್ನು ಕಾಣದ ಗುಂಪು ಆಕೆಯನ್ನು ಕಂಡು, ಸಹಜವಾಗಿ ಮೂಡಿ ಬಂದ ಗೌರವದ ಭಾವನೆಯಿಂದ ಪ್ರೇರಿತವಾಗಿ, ತನಗೆ ತಾನೇ ಹತ್ತು ಹೆಜ್ಜೆ ಹಿಂದೆ ಸರಿದು, ಉಸಿರು ಬಿಗಿಹಿಡಿದು ಆಕೆಯಾಡುವ ಮಾತನ್ನು ಕೇಳಿತು.

" ಪಟ್ಟಗಾಣಿಕೆ ಬೇಕು ಎಂದು ಬಂದಿದೀರಲ್ಲವೇ ನೀವು ? "

" ಆಹುದು ತಾಯಿ."

" ತಾಯಿ, ಎಂದು ಹೇಳುತ್ತಿದೀರ ರಾಯಣ್ಣನವರೇ. ತಾಯಿಯನ್ನು ಕಾಣಬರುವ ರೀತಿಯೇ ಇದು ? ಇಷ್ಟು ಗದ್ದಲ ಮಾಡಬೇಕೇ ನಮ್ಮನ್ನು ಕಾಣಲು."

" ನಮ್ಮನ್ನು ತಪ್ಪು ತಿಳಿದುಕೊಳ್ಳಬಾರದು........"

—ವೀರಣ್ಣ ತಗ್ಗಿಸಿದ ತಲೆಯನ್ನು ತಗ್ಗಿಸಿಯೇ ತಡವರಿಸುತ್ತಾ ಹೇಳಿದ.

" ನಾನೇ ನಿಮ್ಮನ್ನು ತಪ್ಪು ತಿಳಿದುಕೊಳ್ಳುವುದು. ನಿಮ್ಮ ಹೃದಯ ನಾವು ಕಾಣೆವೆ ? ಆದದ್ದಾಯಿತು. ನಿಮಗೇನು ಬೇಕು ಹೇಳಿ ? "

" ಪಟ್ಟಗಾಣಿಕೆ, ನಮಗೆ ಕೊಡಬೇಕಾದ ಮಾಮೂಲು ತಪ್ಪಿಸಿದಾರೆ. ಅದು ಸಲ್ಲಬೇಕು."

—ರಾಯಣ್ಣ ಹೋದ ಸಿಟ್ಟನ್ನು ಮತ್ತೆ ತಂದುಕೊಳ್ಳುತ್ತಾ ಹೇಳಿದ.

" ನಿಜ. ನಿಮಗೆ ಪಟ್ಟಗಾಣಿಕೆ ಸಲ್ಲಬೇಕು. ಸಲ್ಲುವಷ್ಟು ಸಂದಿಲ್ಲ. ನಮಗೂ ಅದು ತಿಳಿದಿದೆ. ಆದರೆ ನಾವು ಏಕೆ ಕೊಡಲಾಗಲಿಲ್ಲವೆಂಬುದು

ನಿಮಗೆ ತಿಳಿದಿಲ್ಲ. ಮಕ್ಕಳಲ್ಲಿ ಮುಚ್ಚುಮರೆ ಏಕೆ? ನಿಜವಾದ ಕಾರಣ ಹೇಳಲೇ ? ಹೇಳಿದರೆ ನಂಬುತ್ತೀರಾ ರಾಯಣ್ಣನವರೇ "

" ಹೇಳಿ ತಾಯಿ."

" ನಿಜ ಹೇಳಬೇಕೆಂದರೆ ನಿಮಗೆ ಕೊಡಬೇಕಾದಷ್ಟು ಪಟ್ಟಗಾಣಿಕೆ ಕೊಡದೆ ಅಪಮಾನ ಮಾಡಬೇಕೆಂಬ ಇಚ್ಛೆ ನಮಗಿಲ್ಲ. ಯಾರಿಗೂ ಅಪಮಾನ ಮಾಡಬೇಕೆಂಬ ಇಚ್ಛೆ ನಮಗಿಲ್ಲ. ನೀವು ಹಾಗೆ ಭಾವಿಸುವುದು ನಮಗೆ ಶ್ರೇಯಸ್ಸಲ್ಲ. ನಿಮಗೆ ಕೊಡಬೇಕಾದಷ್ಟನ್ನು ಕೊಡುವ ಶಕ್ತಿ ಸದ್ಯಕ್ಕೆ ಭಂಡಾರಕ್ಕಿಲ್ಲ. ಆ ಶಕ್ತಿ ಬಂದಾಗ ತಪ್ಪದೆ ಸಲ್ಲಿಸುತ್ತೀವೆಂದು ನಾವು ವಚನ ಕೊಡುತ್ತೇವೆ. ಆಗಬಹುದೇ ? "

" ಭಂಡಾರದಲ್ಲಿ ಹಣವಿಲ್ಲವೆಂಬ ಮಾತನ್ನು ನಾವು ನಂಬುವುದಿಲ್ಲ. ಅದು ನಮ್ಮನ್ನು ನಂಬಿಸಿ ಮೋಸಗೊಳಿಸುವ ಮಾತು."

ರಾಯಣ್ಣನಾಡಿದ ಆ ಮಾತು ಕೇಳಿ, ನಾಗತಿಯ ಹೃದಯದ ಮೇಲೆ ನೂರಾರು ಚಾಟಿಯಿಂದ ಒಮ್ಮೆಲೆ ಹೊಡೆದಂತಾಗಿ, ಆಕೆಯ ಮುಖ ಬಿಳುಪೇರಿತು. ಗಿರಿಜವ್ವೆಯ ಮುಖ ಸಿಟ್ಟನಿಂದ ಕೆಂಪೇರಿತು.

" ನಾಯಿ ! ನಾಲಗೆಯನ್ನು ಬಿಗಿಹಿಡಿದು ಮಾತಾಡು."

—ಎಂದು ಕ್ರೋಧೋದ್ದೀಪಿತನಾದ ಲಿಂಗಣ್ಣನಾಯಕ ಮುಂದೆ ನುಗ್ಗಿದ. ಮುಂದೆ ಹಾರಿದ ಅವನು ರಾಯಣ್ಣನ ಮೇಲೆ ಬೀಳದಂತೆ ನಾಗತಿ ತೋಳು ಚಾಚಿ ತಡೆಹಿಡಿದು—

" ಲಿಂಗಣ್ಣ, ತಾಯಿ ಮಕ್ಕಳ ಮಾತಿನ ನಡುವೆ ನುಗ್ಗಬೇಡ."

ಎಂದಳು. ಲಿಂಗಣ್ಣನಾಯಕ ಆ ಮಾತಿನ ಕರ್ಕಶತೆಯ ಏಟು ತಿಂದು ಅವಾಕ್ಕಾಗಿ ಹಿಂದೆ ಸರಿದ.

" ಗಿರಿಜವ್ವೆ, ಬಾ ಇಲ್ಲಿ " ಎಂದು ನಾಗತಿ ಗಿರಿಜವ್ವೆಯನ್ನು ಹತ್ತಿರ ಕರೆದು ಅವಳ ಕಿವಿಯೊಳಗೆ ಏನೋ ಮಾತು ಹೇಳಿ ಅವಳು ಮಹಾದ್ವಾರವನ್ನು ದಾಟಿ ಅರಮನೆಯೊಳಗೆ ಹೋಗುವ ವರೆಗೂ ಸುಮ್ಮನಿದ್ದು ಬಳಿಕ ಹೇಳಿದಳು—

" ನಿಜ ರಾಯಣ್ಣನವರೇ, ನಿಮ್ಮ ಮಾತು ನಿಜ. ನಾವೇ ತಪ್ಪಾಡಿದೆವು. ನಿಮಗೆ ಕೊಡಬಹುದಾದ ಹಣವಿದ್ದೂ ಇಲ್ಲ ಎಂದೆವು. ಪಟ್ಟಗಾಣಿಕೆ

ಕೊಡುತ್ತೇವೆ. ತೆಗೆದುಕೊಂಡು ಹೋಗಿ. ”

—ನಾಗತಿಯ ಮಾತನ್ನು ಕೇಳಿ ಲೋಕ ದಿಗ್ವಿಜಯಿಯಾದಂತೆ ರಾಯಣ್ಣ ಸುತ್ತ ನೆರೆದವರ ಮುಖ ನೋಡಿದ.

ಗುಂಪು ಮುಂದೇನಾಗುವುದೋ ಎಂದು ಕಾಯುತ್ತಿತ್ತು. ನಾಗತಿಯೂ ನೆಲಕ್ಕೆ ಬಾಗಿಸಿದ ತಲೆಯನ್ನು ಮೇಲೆತ್ತದೆ ಗಿರಿಜವ್ವೆ ಬರುವುದನ್ನು ಕಾಯುತ್ತಿದ್ದಳು.

ಸ್ವಲ್ಪ ಹೊತ್ತಿನಲ್ಲೇ ಗಿರಿಜವ್ವೆ ದೊಡ್ಡ ದೊಡ್ಡ ಹೆಡಿಗೆಗಳನ್ನು ಹೊತ್ತ ನಾಲ್ಕುಜನ ಅಂತಃಪುರದ ಆಳುಗಳೊಂದಿಗೆ ಹೊರಬಂದಳು. ಆಳುಗಳು ಹೊತ್ತುತಂದ ಹೆಡಿಗೆಗಳನ್ನು ನಾಗತಿಯ ಮುಂದಿಟ್ಟು ದೂರ ಸರಿದರು. ಗಿರಿಜವ್ವೆ ತೋಳಲ್ಲಿ ಮುಖಮುಚ್ಚಿ ನಿಂತಳು. ರೇಶಿಮೆಯ ಬಟ್ಟೆ ಹೊದಿಸಿದ ಆ ಹೆಡಿಗೆಗಳನ್ನು ನೋಡಿ, ನಾಗತಿಯ ಮುಖದ ಮೇಲೆ ಒಂದು ಗಳಿಗೆ ಅಪಾರ ಯಾತನೆಯ ಛಾಯೆ ಸುಳಿದು ಮರೆಯಾಯಿತು.

“ ಬನ್ನಿ ರಾಯಣ್ಣ. ನಿಮಗೆ ಸಲ್ಲಬೇಕಾದ ಪಟ್ಟಗಾಣಿಕೆ ತೆಗೆದುಕೊಳ್ಳಿ. ನಾವಿದ್ದು ನಮ್ಮ ಮಕ್ಕಳಾರಿಗೂ ಅಸಮಾಧಾನವಾಗುವುದು ಬೇಡ. ಇದೋ-ಸಂತೋಷವಾಗಿ ತೆಗೆದುಕೊಳ್ಳಿ. ”

—ಎಂದು, ಹೆಡಿಗೆಗಳ ಮೇಲೆ ಹೊದಿಸಿದ ಬಟ್ಟೆಯನ್ನು ಸರಿಸಿದಳು. ತೆರೆದ ಹೆಡಿಗೆಯನ್ನು ನೋಡಲು ಮುಂದೆ ಬಾಗಿದ ರಾಯಣ್ಣ, ಘಟಸರ್ಪವನ್ನು ಕಂಡಂತೆ ಬೆಚ್ಚಿ ಹಿಂದೆ ಸರಿದ.

ಗುಂಪೂ ನೋಡಿತು,

—ಬಲಿತ ಬಿಸಿಲಿನ ಕಾಂತಿಯಲ್ಲಿ, ಹೆಡಿಗೆಗಳ ತುಂಬಾ ಥಳಥಳಿಸಿ, ನೋಡುವ ಕಣ್ಣನ್ನು ಕೊರೈಸುತ್ತಿದ್ದ, ನಾಗತಿ ತೊಡುವ ಆಭರಣಗಳನ್ನು.

“ ತೆಗೆದುಕೊಳ್ಳಿ. ನಮ್ಮ ಭಂಡಾರದಲ್ಲಿ ಇದು ವಿನಾ, ಕಿವಿಯಲ್ಲಿರುವ ಓಲೆಯೊಂದನ್ನುಳಿದು ಬೇರಾವ ಧನವೂ ಇಲ್ಲ. ನಮ್ಮ ಬಳಿ ಬಂದವರು ಯಾರೂ ಅಸಮಾಧಾನವಾಗಿ ಹೋಗಬಾರದು. ಇರುವುದನ್ನು ಸಂತೋಷವಾಗಿ ಹಂಚಿಕೊಂಡು, ನಗುನಗುತ್ತಾ ಹೋಗಿ. ನೀವು ಕೊರಗಿದರೆ ನಾವು ಬದುಕಿದ್ದೇನು ಫಲ. ಗಿರಿಜವ್ವೇ, ಬಾ ಹೋಗೋಣ. ಲಿಂಗಣ್ಣಾ, ಸೈನಿಕರ ಮೇಲೆ ಯಾರಾದರೂ ಕೈಮಾಡಿದರೆ, ನಮ್ಮ ಜೀವದಾಣೆ. ”

—ಎಂದು ನಾಗತಿ, ಯಾರ ಕಡೆಗೂ ನೋಡದೆ ಹೆಡಗೆಗಳತ್ತ ಬೆನ್ನು ಮಾಡಿ, ಮಹಾದ್ವಾರದತ್ತ ನಡೆದಳು.

ಲಿಂಗಣ್ಣನಾಯಕ ಗರಬಡಿದವನಂತೆ ನಿಂತಿದ್ದ. ಗುಂಪೂ ಗರಬಡಿದಂತೆ ನಿಂತಿತ್ತು. ಎಲ್ಲರ ಕಣ್ಣುಗಳೂ ಹೆಡಿಗೆಯಲ್ಲಿ ಬಗೆಬಗೆಯ ಬಣ್ಣದ ರತ್ನರಾಶಿ ಥಳಥಳಿಸುತ್ತಿದ್ದ ಆಭರಣಗಳನ್ನು ನೋಡುತ್ತಿತ್ತು.

ಆದರೆ ಅದನ್ನು ತೆಗೆದುಕೊಳ್ಳಲು ಒಂದು ಕೈ ಕೂಡಾ ಮುಂದಾಗಲಿಲ್ಲ.

೪

ಲಿಂಗಣ್ಣನಾಯಕನಿಂದ ನಡೆದುದನ್ನು ಕೇಳಿ, ಭುವನಪ್ಪನವರು ನೆಲಕ್ಕಿಳಿದು ಹೋದರು. ಪೂಜೆಯಲ್ಲಿ ಕುಳಿತಿದ್ದ ಅವರು ಅರಮನೆಯ ಬಳಿ ಏನೋ ವಿಪರೀತ ನಡೆಯುತ್ತಿದೆಯೆಂದು ಕೇಳಿ, ಧಾವಿಸಿ ಓಡಿ ಬಂದಿದ್ದರು. ದೇಸಣ್ಣನೂ ಓಡಿಬಂದಿದ್ದ. ಆದರೆ ಅವರು ಬರುವ ವೇಳೆಗೆ ಗುಂಪು ಕರಗುತ್ತಿತ್ತು. ಗುಂಪಿನ ಇದಿರು ಇಟ್ಟ ಆಭರಣಗಳ ಹೆಡಿಗೆಗಳು ಇಟ್ಟಂತೆಯೇ ಇದ್ದುವು. ಅದನ್ನು ನೋಡಿ, ನಡೆದುದನ್ನು ಕೇಳಿ ದೇಸಣ್ಣ ಸಿಟ್ಟಿನಲ್ಲಿ ಸಿಡಿಲಾದ.

" ಇದು ಎಲ್ಲಾ ಯಾರ ಆಟವೆಂದು ನಾನು ಬಲ್ಲೆ ". ಇದನ್ನು ನಿಲ್ಲಿಸುತ್ತಾನೋ ಇಲ್ಲವೋ ಕೊನೆಯ ಬಾರಿಗೆ ಕೇಳಿಯೇಬಿಡುತ್ತೇನೆ! "

—ಎಂದು ಅಬ್ಬರಿಸಿದ ಆತ. ಕ್ರೋಧದಿಂದ ಆತನ ಮೈ ಕಂಪಿಸುತ್ತಿತ್ತು.

" ಯಾರ ಆಟ ಇದು ದಳವಾಯಿಗಳೇ ? "

—ಲಿಂಗಣ್ಣನಾಯಕನೂ ಸಿಟ್ಟಿನಲ್ಲಿ, ಹೆಡೆಯಪ್ಪಳಿಸುವ ಸರ್ಪದಂತೆ, ನೆಲಕ್ಕೆ ಕೈ ಬಡಿದು ಕೇಳಿದ.

" ಯಾರೆಂದು, ನಾನು ಬಲ್ಲೆ. "

" ಯಾರೆಂದು ಹೇಳಿರಿ ಈಗಲೇ ಆ ನಾಯಿಯನ್ನು ಹೆಡೆಮುರಿಗೆ ಕಟ್ಟಿಸಿ ತಂದು, ನೀರು ಕೇಳುವ ತನಕ ಚಾಟಿಯಲ್ಲಿ ಹೊಡೆಯುತ್ತೇನೆ. ಎಲ್ಲಿಂದ ಈ ಉದ್ಧಟತನ ಬಂದಿತೆಂದು? ಅವನಾರು ಹೆಸರು ಹೇಳಿ ? "

—ಎದ್ದು ನಿಂತು ಹೇಳಿದ ಲಿಂಗಣ್ಣನಾಯಕ.

"ಲಿಂಗಣ್ಣ, ಅಷ್ಟು ದುಡುಕು ಬೇಡ. ಅದರಿಂದ ಹೆಚ್ಚಿನ ಅಪಾಯವಾಗುತ್ತದೆ. ಹಿಂಸೆಯಿಂದ ಪರಿಹಾರವಾಗುವುದಲ್ಲ ಇದು. ಇದನ್ನು ಅಡಗಿಸಲು ಜಾಣ್ಮೆ ಬೇಕು. ಅಷ್ಟೇ ತಾಳ್ಮೆ ಬೇಕು."

—ಎಂದು ಭುವನಪ್ಪನವರು ಅವನ ಕೈ ಹಿಡಿದು ಹೇಳಿದರು.

"ನಾಯಕರು ದುಡುಕಬಾರದು. ದಂಡಕ್ಕಿಂತ ಮೊದಲು ಸಾನು ಪ್ರಯೋಗ ಮಾಡಿನೋಡೋಣ. ಕಡೆಗೆ ದಂಡವೇ ಅಗತ್ಯವಾದರೆ, ನನ್ನ ತೋಳಲ್ಲಿನ್ನೂ ರಕ್ತವಿದೆ. ಆದರೆ ಅದಕ್ಕೆ ಮೊದಲು ಒಮ್ಮೆ ಅವನನ್ನು ಕಂಡು ಬರುತ್ತೇನೆ. ಬಳಿಕ ಮುಂದಿನ ಮಾತು."

—ದೇಸಣ್ಣ ಹೇಳಿದ.

"ನೀವು ಹೋಗಿ ಅವನನ್ನು ನೋಡುವುದೇ ದೇಸಣ್ಣ, ಬೇಡ. ನಾನು ಹೋಗಿಬರುತ್ತೇನೆ."

—ಭುವನಪ್ಪನವರು ಹೇಳಿದರು.

"ಊಹೂ. ನನ್ನಿಂದ ಆರಂಭವಾದುದು ಇದು. ನನ್ನಿಂದಲೇ ಇದು ಮುಗಿಯಲಿ" ಎಂದು ದೇಸಣ್ಣ, ಅವರ ಅಪ್ಪಣೆಗೂ ಅನುಮತಿಗೂ ಕಾಯದೆ, ಧಡಧಡನೆ ದಳವಾಯಿ ಮುದ್ದಣ್ಣನ ಮನೆಯತ್ತ ಹೊರಟ.

ಸಿಟ್ಟುಬೆಂಕಿಯಾದ ದೇಸಣ್ಣ ಮುದ್ದಣ್ಣನ ಮನೆಗೆ ಬಂದಾಗ, ಮುದ್ದಣ್ಣನೂ ಅಷ್ಟೇ ಕ್ರೋಧೋನ್ಮತ್ತನಾಗಿದ್ದ—ಅರಮನೆಯ ಬಳಿ ನಡೆದುದನ್ನು ಕೇಳಿ, ತನ್ನ ಪ್ರಯತ್ನ ವಿಫಲವಾದುದನ್ನರಿತು. ಆ ನಿರಾಸೆಯ ಆಜ್ಯಾಹುತಿಯಿಂದ ಅವನ ರೋಷಾಗ್ನಿ ಧಗಧಗಿಸುತ್ತಿತ್ತು. ಕಂಡವರ ಮೇಲೆ ಕವಿದು ಬೀಳುವ ಉನ್ಮತ್ತ ಪಶುವಿನಂತಿದ್ದ ಆತ. ಏನು ಮಾಡಲಿ, ಯಾರ ಮೇಲೆ ಬೀಳಲಿ ಎಂದು ಶತಪಥಿಸುತ್ತಿರುವಾಗಲೇ, ದೇಸಣ್ಣ ಒಳಗೆ ನುಗ್ಗಿ ಬಂದು ಕೂಗಿದ—

"ಮುದ್ದಣ್ಣ—ನಿನ್ನ ಶನಿಸಂಚಿಗೆ ಇಂದು ಕೊನೆ!"

ಆ ಕೂಗನ್ನು ಕೇಳಿ ಮುದ್ದಣ್ಣ ತಟಕ್ಕನೆ ಸೆಟೆದು ನಿಂತು ದೇಸಣ್ಣನತ್ತ ನೋಡಿದ. ಒರೆಯಿಂದ ಹಿರಿದ ಕತ್ತಿಯನ್ನು ಕೈಯಲ್ಲಿ ಹಿಡಿದು ನಿಂತ ದೇಸಣ್ಣನನ್ನು ಕಂಡು, ಮುದ್ದಣ್ಣನ ಕ್ರೋಧೋದ್ದೀಪಿತ ಕಣ್ಣು

ಗಳಲ್ಲಿ ಭಯಂಕರ ದ್ವೇಷದ ರಾವುಬೆಳಕು ಉಕ್ಕಿಬಂತು. ಕಿಗ್ಗಣ್ಣು ಮಾಡಿ, ದೇಸಣ್ಣ ನನ್ನೇ ನೋಡುತ್ತಾ, ಒಣನಗೆ ನಕ್ಕು ಹೇಳಿದ—

"ಓ, ದೊಡ್ಡ ದಳವಾಯಿಗಳು! ಬರಬೇಕು. ಇದೇನು ಏಕಾಏಕಿ ಯಾಗಿ? ಅದೂ ಕತ್ತಿಹಿಡಿದು."

"ಒಣ ಉಪಚಾರದ ಮಾತುಗಳನ್ನು ಕೇಳಲು ಬಂದಿಲ್ಲ ನಾನು ಮುದ್ದಣ್ಣ."

"ಮತ್ತೆ!........?"

"ಇಂದು ಯಾವುದಾದರೊಂದು ಮಾತು ಇತ್ಯರ್ಥವಾಗಬೇಕು."

"ಅಗತ್ಯವಾಗಿ. ಯಾವ ಮಾತು ಇತ್ಯರ್ಥವಾಗಬೇಕೆಂದು ಹೇಳಿ ದರೆ ಅಗತ್ಯವಾಗಿ ಇತ್ಯರ್ಥಮಾಡುತ್ತೇನೆ. ಅದಕ್ಕೆ ಈ ಹಿರಿದ ಕತ್ತಿಯ ಬೆದರಿಗೆ ಅಗತ್ಯವೇ? ನಾವು ವೈರಿಗಳಲ್ಲ."

"ಅದೇ ಇತ್ಯರ್ಥವಾಗಬೇಕಾದುದು." ಮುದ್ದಣ್ಣನ ಮಾತು ಕಿವಿಗೆ ಬೀಳದವನಂತೆ ಹೇಳಿದ ದೇಸಣ್ಣ—"ಇಂದು ನಿನ್ನ ಶನಿಸಂಚು ಕೊನೆಗಂಡು, ನೀನು ನಾಗತಿಯರಲ್ಲಿ ಕ್ಷಮೆಬೇಡಬೇಕು ಇಲ್ಲವೇ...."

"ಇಲ್ಲವೇ....ಮತ್ತೇನು....?"

"ಇಲ್ಲವಾದರೆ ಇಂದು ನಾಗತಿಯವರಿಗಾದ ಅಪಮಾನಕ್ಕೆ ಪ್ರತಿ ಯಾಗಿ ನಿನ್ನತಲೆ, ನನ್ನಕತ್ತಿಗೆ ಬಲಿಯಾಗಬೇಕು."

"ನಾನು....! ನಾಗತಿಯರಿಗೆ....ಅಪಮಾನ....! ಇದೇನು ಮಾತು ಮುದ್ದಣ್ಣ!?"

—ದೇಸಣ್ಣನ ಮಾತು ಕೇಳಿ ಅಚ್ಚರಿಗೊಂಡವನಂತೆ ಕೇಳಿದ ಮುದ್ದಣ್ಣ.

"ಬೆಡಗಿನ ಮಾತುಗಳಿಗೀಗ ಹೊತ್ತಿಲ್ಲ ಮುದ್ದಣ್ಣ—ಹೇಳು ನಿನ್ನ ಶರಣಾಗತಿಯೋ, ನಿನ್ನ ತಲೆಯೋ?"

"ನನ್ನ ತಲೆ!"

—ದೇಸಣ್ಣನ ಮಾತು ಕೇಳಿ, ಹುಚ್ಚುಹಿಡಿದಂತೆ ನಗಲಾರಂಭಿಸಿದ ಮುದ್ದಣ್ಣ. ಆ ನಗೆಯಲ್ಲಿ ರಕ್ತತೃಷೆಯ ಭಯಂಕರ ನಿನಾದವಿತ್ತು.

"ನನ್ನ ತಲೆಯ ಮೇಲೇಕೆ ಅಷ್ಟು ಸಿಟ್ಟು ದೇಸಣ್ಣನವರೇ, ಎಲ್ಲ ರಿಗೂ ಇರುವಂತೆ ನನಗೂ ನನ್ನ ತಲೆಯ ಮೇಲೆ ಅಭಿಮಾನವಿದೆ."

" ಹಾಗಾದರೆ ಶರಣಾಗತನಾಗು. "

" ಆಯಿತು. ನಿಮ್ಮ ಮಾತಿಗೆ ಇದಿರೇ? ಎಲ್ಲಿಗೆ ಬರಬೇಕು ಹೇಳಿ. "

" ಅರಮನೆಗೆ. "

" ಸರಿ. ನಿಮ್ಮ ಮಾತಿನಂತೇ ಆಗಲಿ. " ಎಂದು ದೇಸಣ್ಣನ ಬೆನ್ನ ಕಡೆ ನೋಡುತ್ತಾ " ರಾಯಣ್ಣಾ, ನನ್ನ ಪಾಗು ಕೊಡು. ದಳವಾಯಿಗಳ ಅಪ್ಪಣೆ ನಮಗೂ ಸುಗ್ರೀವಾಜ್ಞೆ. "

—ಎಂದ ಮುದ್ದಣ್ಣ. ತಾನು ಬಂದಾಗ ಅಲ್ಲಿ ಮತ್ತಾರನ್ನೂ ಕಾಣದಿದ್ದ ದೇಸಣ್ಣ, ರಾಯಣ್ಣ ಎಲ್ಲಿ ಬಂದನೆಂದು ಅಚ್ಚರಿಯಿಂದ ತಿರುಗಿ ನೋಡಿದ. ರಾಯಣ್ಣ ಎಲ್ಲಿಯೂ ಕಾಣಲಿಲ್ಲ. ಇದೇನು ವಿಚಿತ್ರವೆಂದು ಮತ್ತೆ ಮುದ್ದಣ್ಣನತ್ತ ತಿರುಗುವುದರೊಳಗಾಗಿ, ಮಿಂಚಿನ ವೇಗದಿಂದ ಮುದ್ದಣ್ಣ, ಕತ್ತಿ ಸೆಳೆದು, ದೇಸಣ್ಣನ ತಲೆಯತ್ತ ಬೀಸಿದ. ಬಿರುಗಾಳಿಯಂತೆ ಬೀಸಿದ ಕತ್ತಿಯ ಸಿಡಿಲೇಟಿಗೆ ಸಿಕ್ಕ ದೇಸಣ್ಣನ ರುಂಡ ಬಾಳೆಯ ದಿಂಡಿನಂತೆ ಕತ್ತರಿಸಿ, ಮುಂಡದಿಂದ ಬೇರೆಯಾಗಿ, ಹತ್ತುಮಾರು ಆಚೆ ಬಿದ್ದು, ರಕ್ತ ಕಾರುತ್ತಾ ಕಾಣೆದಾಡಿತು.

" ಹಹ್ಹಹ್ಹಾ....ಹೊಹ್ಹೊಹ್ಹೋ....ಹ್ಹಹ್ಹಾ....ಹೋ....ತಲೆ! ತಲೆ! ನನ್ನ ತಲೆ ಬೇಕಲ್ಲವೇ ದೇಸಣ್ಣಾ ನಿನಗೆ. "

ಎಂದು ಗಹಗಹಿಸಿ ನಗುತ್ತಾ, ಮುದ್ದಣ್ಣ ಪುಟಿಯುತ್ತಿದ್ದ ದೇಸಣ್ಣನ ರುಂಡವನ್ನು ಕಾಲಿನಿಂದ ಝಾಡಿಸಿ ಒದೆದ. ಕಾಲ ಒದೆತಕ್ಕೆ ಸಿಕ್ಕಿದ ತಲೆ, ಅಷ್ಟು ದೂರ ಹಾರಿ, ಗೋಡೆಗೆ ಬಡಿದು ಪುಟಹಾರಿ ಕೆಳಗೆ ಬಿತ್ತು.

ಮುದ್ದಣ್ಣ ಗಹಗಹಿಸಿ ನಕ್ಕು ಹೇಳಿದ—

" ನೂರಣ ಹೋಮ ಆರಂಭವಾಯಿತು ದೇಸಣ್ಣಾ....ಇದು ಮೊದಲ ಪ್ರಾಣಾಹುತಿ. "

ದೇಸಣ್ಣನ ಕೊಲೆಯ ಸುದ್ದಿ ದುರ್ಗದಲ್ಲೆಲ್ಲಾ ಹರಡಿ, ದುರ್ಗಕ್ಕೆ ದುರ್ಗವೇ ಹಿಮಗಾಳಿ ಸೋಂಕಿದಂತೆ ಗದಗುಟ್ಟಿ ನಡುಗಿತು. ಎಲ್ಲರಿಗೂ ಏನೋ ಒಂದು ಬಗೆಯ ಆತಂಕ, ಏನೋ ಭೀತಿ, ಉಸಿರಿನಲ್ಲೇನೋ ಬಿಗಿತ, ಕಣ್ಣಲ್ಲೇನೋ ಕಾತರ. ದೇಸಣ್ಣನ ಅಭಿಮಾನಿಗಳು ಕೆಲವರು ಕಗ್ಗೊಲೆಯ ಪ್ರತೀಕಾರ ತೀರಿಸಲು, ಪಣತೊಟ್ಟು ಬೀದಿ ಬೀದಿ ಸುತ್ತಲಾರಂಭಿಸಿದರು. ಈ ಕೊಲೆಯ ಕಾರಣದಿಂದ ಅದುವರೆಗೂ ಅಡಗಿದ್ದ ಯಾವ ಯಾವುದ್ದೋ ಅಸೂಯೆ, ವಿರೋಧ, ಅಸಮಾಧಾನಗಳು ಅಲ್ಲಲ್ಲಿ ತಮ್ಮ ಕರಾಳ ಛಾಯೆಯನ್ನು ಕೆಡವಲಾರಂಭಿಸಿ, ದುರ್ಗ, ಯಾವುದೋ ಭಯಂಕರ ಪ್ರೇತಗಳಲೆವ ಮಸಣಕಳೆಯನ್ನು ತಳೆಯಿತು. ದಾಳಿಯಾಗುವ ಸಮಯದಲ್ಲೆಂಬಂತೆ, ಆಯಕಟ್ಟಿನ ಸ್ಥಳಗಳಲ್ಲೆಲ್ಲಾ ಸೇನೆ ಸಜ್ಜಾಗಿ ನಿಂತಿತು. ಕೊತ್ತಳ, ಬತ್ತೇರಿ, ಕೋಟೆಯ ಗೋಡೆಗಳ ಮೇಲಿನ ಅಂಬು ಗಂಡಿಗಳ ಸಂದಿನಿಂದ, ಕೃಷ್ಣಸರ್ಪಗಳಂತೆ ಕೋವಿಗಳು ಬಾಯಿ ತೆರೆದು ಇಣಿಕಿದುವು. ಅರಮನೆಯ ಸುತ್ತಲೂ ಮೂರು ಸುತ್ತಿನ ಕೋಟೆಯ ಮಹಾದ್ವಾರಗಳು ಬಿಗಿದು, ದಿಡ್ಡಿಬಾಗಿಲುಗಳ ಮೂಲಕ ಮಾತ್ರ, ಅದೂ ಕುರುಹುಮೋರಿ, ಸಂಕೇತ ಶಬ್ದವನ್ನು ಹೇಳಿದವರಿಗೆ ಮಾತ್ರ ಓಡಾಡಲು ಬಿಡಲಾಯಿತು. ಹಗಲಿರುಳೂ, ಅರಮನೆಯ ಸುತ್ತಲೂ ಬಿಚ್ಚುಗತ್ತಿಯ ಪಹರೆ ಗಸ್ತು ಸುತ್ತುತ್ತಿತ್ತು. ಈ ಬಿಗಿದ ವಾತಾವರಣದಲ್ಲಿ ಝಾವಕ್ಕೊಮ್ಮೆ ಕಾವಲು ಬದಲಾಯಿಸುವ ಕೂಗು ಕೇಳಿದರೂ, ಜಾವಗಹಳೆಯ ಶೀಳು ದನಿ ಕೇಳಿದರೂ, ಜನ ಮತ್ತೇನಾಯಿತೋ, ಇದು ಮತ್ತಾವ ಘೋರದ ದುರ್ವಾರ್ತೆಯೋ ಎಂದು ಹೆದರಿ ನಡುಗುವಂತಾಯಿತು. ಹಿಂದೆ ಎಂದೆಂದೂ ದುರ್ಗದಲ್ಲಿ ಇಂಥ ಪರಿಸ್ಥಿತಿ ಒದಗಿರಲಿಲ್ಲ.

ಈ ಸುದ್ದಿಯನ್ನು ಕೇಳಿ, ದೇಸಣ್ಣನ ಶವವನ್ನು ಕಾಣಲೆಂದು ಮುದ್ದಣ್ಣನ ಮನೆಯತ್ತ ಮೇನಾದಲ್ಲಿ ಹೋಗಿಬಂದ ನಾಗತಿ, ಹತ್ತಾರು ಮಾರು ದೂರದಲ್ಲಿ, ಕರಿದಾಗಿ ಹೆಪ್ಪುಗಟ್ಟುತ್ತಿದ್ದ ರಕ್ತದ ಮಡುವಿನಲ್ಲಿ ಕೆಡೆದ

ಆತನ ರುಂಡಮುಂಡಗಳನ್ನು ನೋಡಿ ಬಂದಾಗಲಿಂದ ಭೂತ ದರ್ಶನ ಭೀತಳಂತಾಗಿದ್ದಳು. ನಿಂತಲ್ಲಿ ಕುಳಿತಲ್ಲಿ ಕೊಲೆಯ ಘೋರ 'ಭೋ' ಎನ್ನುವ ಆ ಬರಿದಾದ ಮನೆಯ ನೆನಪು ಅವಳಿದುರು ನಿಲ್ಲುತ್ತಿತ್ತು.

ಮುದ್ದಣ್ಣನ ಮನೆಯಲ್ಲಿ ದೇಸಣ್ಣನ ಕೊಲೆಯಾಯಿತೆಂಬ ಸುದ್ದಿಯನ್ನು ಕೇಳಿದ ಕೂಡಲೇ ಲಿಂಗಣ್ಣನಾಯಕ, ಬಿಚ್ಚುಗತ್ತಿಯ ಸೈನಿಕರೊಂದಿಗೆ, ಮುದ್ದಣ್ಣನನ್ನು ಹಿಡಿಯಲು ಅವನ ಮನೆಯತ್ತ ಧಾವಿಸಿದ. ಮುದ್ದಣ್ಣನನ್ನು ಸಿಕ್ಕಲ್ಲಿಯೇ ಸೀಳಬೇಕೆಂಬಷ್ಟು ಕ್ರೋಧ ಅವನ ತೋಳುಗಳಲ್ಲಿ ತಾಂಡವಾಡುತ್ತಿತ್ತು. ಅದಕ್ಕಾಗಿಯೇ ಮನೆಯ ಮೂಲೆ ಮೂಲೆಗಳನ್ನು ಸುತ್ತಿದರೂ, ಮುದ್ದಣ್ಣನಾಗಲಿ, ಅವನ ತಮ್ಮಂದಿರಾಗಲಿ ಎಲ್ಲೂ ಕಾಣಲಿಲ್ಲ. ಅವರಿಗೆ ಕಂಡುದು, ಗೂಟಗಳಿಗೆ ಬಿಗಿದು, ಹೊಸಬರನ್ನು ಕಂಡು, ಕೆರಳಿದ ಕಾಳಿಂಗ ಸರ್ಪದಂತೆ ಮೊರೆಯುತ್ತಾ ಹಿಂಗಾಲುಗಳ ಮೇಲೆ ನಿಂತು, ಮುಂಗೈಗಳಿಂದ ಗಾಳಿಯನ್ನು ಬಗೆಯುತ್ತಾ ಬಗುಳುತ್ತಿದ್ದ ಬೇಟೆಯ ನಾಯಿಗಳು, ಪಂಜರದಲ್ಲಿ ಚಡಪಡಿಸುತ್ತಾ, ವಿಕಾರ ಧ್ವನಿಯಲ್ಲಿ ಸಿಳ್ಳುಹಾಕುವ ಡೇಗೆಗಳು, ಮುಚ್ಚಿದ ಬೋನಿನಲ್ಲಿ ಸುತ್ತಲ ಗಾಳಿ ಬೆದರಿ ನಗುವಂತೆ ಘರ್ಜಿಸುತ್ತಾ ಅತ್ತಿಂದಿತ್ತ ಸುತ್ತುತ್ತಿರುವ ಚಿರತೆಗಳು ಮಾತ್ರ. ರಕ್ತಪಿಪಾಸಿಯಾದ ಪ್ರಾಣಿಗಳು, ಬರಿದಾದ ಮನೆ, ನೆಲದಲ್ಲಿ, ತನ್ನ ರಕ್ತದಲ್ಲೇ ಮುಳುಗಿದ ರುಂಡ ಮುಂಡ–ಇವುಗಳನ್ನು ನೋಡಿದವರ ಮೈ ನಡುಗಿ, ಕಣ್ಣು ತಿರುಗಿ, ಕತ್ತಲಾವರಿಸಿದಂತಾಯಿತು. ಎಂದೆಂದೂ ಮರೆಯಲಾಗದ ಭಯಾನಕ ದೃಶ್ಯವೊಂದು ಅವರ ಚಿತ್ತಪಟಲದಲ್ಲಿ ಚಿತ್ರಿತವಾಯಿತು.

ಕಂಡ ಕೂಡಲೇ ಮುದ್ದಣ್ಣನನ್ನು ಸೀಳಿ ಬಿಡುತ್ತೇನೆ ಎಂದು ಉಕ್ಕಿದ ಲಿಂಗಣ್ಣನಾಯಕನ ಕ್ರೋಧ ಬರಿಮನೆಯನ್ನು ಕಂಡು, ನಿರಾಶೆಗೊಂಡು, ಎಂದೆಂದೂ ತೀರದ ಹಗೆತನದ ಮೂರ್ತಿಯಾಗಿ ಹೆಪ್ಪುಗಟ್ಟಿತು. ಮುದ್ದಣ್ಣನ ತಲೆಯನ್ನು ತಂದವರಿಗೆ ಸಾವಿರ ವರಹ, ಅವನ ತಮ್ಮಂದಿರ ತಲೆಯನ್ನು ತಂದವರಿಗೆ, ತಲೆಗೆ ಐನೂರು ವರಹ, ಅವರು ಅವಿತ ಸ್ಥಳದ ಸುದ್ದಿ ತಂದವರಿಗೆ ಐನೂರು ವರಹ ಬಹುಮಾನ ಕೊಡುವುದಾಗಿ ದುರ್ಗದಲ್ಲೆಲ್ಲಾ ಡಂಗುರ ಸಾರಿಸಿದ.

ಟಮುಟಮಿಸಿ ಗಾಳಿಯಲ್ಲಿ ಬೆರತ ಆ ಡಂಗುರದ ರವದೊಂದಿಗೆ ಈ ದುರಂತದ ಘೋರವಾರ್ತೆ ದುರ್ಗವನ್ನು ದಾಟಿ ಸುತ್ತಮುತ್ತಲ ಹಳ್ಳಿಗಳಲ್ಲೂ ಹರಡಿ, ಅಲ್ಲೂ ಜನರ ಹೃದಯದಲ್ಲಿ ಭೀತಿ ಕವಿಸಿ, ಕಣ್ಣಲ್ಲಿ ಕತ್ತಲು ಕವಿಸಿತು.

ಉಳಿದೆಲ್ಲರಿಗಿಂತಲೂ ಹೆಚ್ಚಾಗಿ, ಈ ಸುದ್ದಿಯನ್ನು ಕೇಳಿ ಬೆದರಿದವನು, ಕಸ್ತೂರಿನಾಯಕ ವೀರಣ್ಣನಾಯಕರನ್ನು ಸಾಕಿ ಸಲಹಿ ಬೆಳಸಿದ, ಅವನ ಸೋದರಮಾವ ಪಾಪನಾಯಕ. ಆತನಿಗಂತೂ ನೆತ್ತಿಯ ಮೇಲೆ ಯಾವುದೋ ಭಯಂಕರ ಕುತ್ತ ಕವಿದುಬಂದಂತಾಗಿತ್ತು. ಅರಮನೆಯ ರಾಜಕಾರಣದ ನಂಜುಗಾಳಿ ಸೋಕಿ, ಮುಖದ ಎರಡು ಕಣ್ಣುಗಳಂತಿದ್ದ ಅಣ್ಣತಮ್ಮಂದಿರಲ್ಲಿ ವಿರಸ ಮೂಡಿದೆಯೆಂದು ಸೊಸೆಯಿಂದ ಕೇಳಿಯೇ ದಿಗಿಲುಗೊಂಡಿದ್ದ ಮುದುಕ, ಈ ಸುದ್ದಿಯನ್ನು ಕೇಳಿಯಂತೂ, ನಡುಗಿ ಹೋದ. ಇದ್ದಕ್ಕಿದ್ದ ಹಾಗೇ ದುರ್ಗದಲ್ಲಿ ಉಂಟಾದ ಈ ಭಯಂಕರ ಪರಿಸ್ಥಿತಿ, ಮೊದಲೇ ವಿರಸಮೂಡಿದ ಅಣ್ಣತಮ್ಮಂದಿರನ್ನು ಯಾವ ದೂರದವರೆಗೆ ಕೊಂಡಯ್ಯಬಹುದೋ ಎಂದು ಊಹಿಸಿಯೇ, ಅವನ ಮುದಿ ಮಿದುಳು, ಚಳಿಹಿಡಿದಂತೆ ಕಂಪಿಸಿತು. ಹಗಲಿರುಳೂ ಇದೇ ಯೋಚನೆಯಾಗಿ, ಬೇರಾವ ಕೆಲಸ ಮಾಡಲೂ ಕೈ ನಡಗುವಂತಾಗಿತ್ತು ಅವನಿಗೆ. ಬೆಳೆದು ಕೊಯಿಲಿಗೆ ಸಿದ್ಧವಾಗುತ್ತಿದ್ದ ಭತ್ತದ ಗದ್ದೆಯ ಚಿಂತೆ ಮಾಡಲೂ ಅವನಿಗೆ ಹೊತ್ತಿದ್ದಂತೆ ಇರಲಿಲ್ಲ. ಇದೇ ಸಾಲದು ಎಂಬಂತೆ, ಎರಡು ದಿನಗಳಿಂದ ಅಣ್ಣತಮ್ಮಂದಿರು ಇಬ್ಬರೂ ಮನೆಗೆ ಬರದೆ, ಏನಾಯಿತೆಂಬ ಸುದ್ದಿಯೂ ತಿಳಿಯದೆ, ಹುಚ್ಚುಹುಚ್ಚಾದ ಯೋಚನೆಗಳ ಘೋಷಣೆಯಿಂದ ದೈತ್ಯಾಕಾರವಾಗಿ ಬೆಳೆದ ಭೀತಿ, ಗಂಡ, ಮೈದುನರು ಮನೆಗೆ ಬರದೆ, ಆ ಚಿಂತೆಯಲ್ಲಿ ಊಟ ನಿದ್ರೆಯನ್ನು ಬಿಟ್ಟು ಕೊರಗುತ್ತಿರುವ ಮುದ್ದಿನ ಸೊಸೆಯನ್ನು ನೋಡಿ ಕ್ರೋಧವಾಗಿ ಮಾರ್ಪಟ್ಟಿತ್ತು. ಅವನಿಗೆ ಸಾಧ್ಯವಿದ್ದಿದ್ದರೆ, ದುರ್ಗ, ಅರಮನೆ, ಸೇನೆ ಎಲ್ಲವನ್ನೂ ಹಿಡಿದು ಅಪ್ಪಳಿಸಿ ಬಿಡುತ್ತಿದ್ದನೋ ಏನೊ—ಅಷ್ಟು ರೋಷ ತುಂಬಿತ್ತು ಅವನ ಎದೆಯಲ್ಲಿ.

"ಇವಕ್ಕೆಲ್ಲಾ ಬೆಂಕಿ ಇಟ್ಟುಬಿಡಬೇಕು ಅನ್ನಿಸುತ್ತದೆ. ಯಾರ ಗ್ರಹಚಾರಕ್ಕೆ ಯಾರ ತಲೆ ಬಲಿ ಬೀಳಬೇಕೋ, ಬ್ಯಾಡಾಂದ್ರೂ ಕೇಳಲಿಲ್ಲ."

—ಎಂದ ಪಾಪನಾಯಕ, ಆ ಮಾತುಗಳಲ್ಲಿ ತನ್ನೆದೆಯ ಕ್ರೋಧವನ್ನೆಲ್ಲಾ ಕಕ್ಕುತ್ತ.

ಉಳಿದ ಅರಮನೆಯ ಪರಿಚಾರಗಿತ್ತಿಯರಂತೆ ಗಿರಿಜವ್ವೆಯೂ ಎರಡು ದಿನಗಳಿಂದ ಮನೆಗೆ ಬಂದಿರಲಿಲ್ಲ. ಪಾಪನಾಯಕನಿಗೇನಾದರೂ ಸುದ್ದಿ ಗೊತ್ತಿದೆಯೇನೋ ಎಂದು ಕೇಳಲು ಬಂದ ಪೂಜಾರಿ ಭೀಮಯ್ಯ ಪಾಪನಾಯಕನನ್ನು "ತನ್ನ ಮಗಳ ಸುದ್ದಿ ಏನಾದರೂ ತಿಳಿಯಿತೆ?" ಎಂದು ಕೇಳಿ, ಪಾಪನಾಯಕನ ಎದೆಯಲ್ಲಿ ಕುದಿಯುತ್ತಿದ್ದ ಸಿಟ್ಟಿನ ಲಾವಾರಸ, ಸಿಡಿದು ಹೊರಹರಿಯಲು ಕಾರಣವಾಗಿದ್ದ. ಪಾಪನಾಯಕನ ಮಾತಿನಲ್ಲಿ ತುಂಬಿ ತುಳುಕುತ್ತಿದ್ದ ದ್ವೇಷ, ಹತ್ತಿರದ ಉರಿಯಂತೆ ಭೀಮಯ್ಯನ ಎದೆಗೂ ತನ್ನ ಝಳವನ್ನು ತಾಕಿಸಿತು. ಎರಡು ದಿನಗಳಿಂದ ಅವನೂ ಚಿಂತೆಮಾಡಿ ಮಾಡಿ ಹೈರಾಣವಾಗಿದ್ದ. ಅವನಿಗೂ ತನ್ನ ಮಗಳು ಈ ಅರಮನೆಯ ಚಾಕರಿಗೆ ಸೇರಲು ಏಕಾದರೂ ಒಪ್ಪಿದೆನೋ ಎಂದು ಪಶ್ಚಾತ್ತಾಪವಾಗಿತ್ತು. ಅರಮನೆಯಲ್ಲಿ ಚಾಕರಿ ದೊರಕಿತೆಂಬ ಉತ್ಸಾಹದಿಂದ ಗಿರಿಜೆ ನಕ್ಕುನಲಿವಾಗ, "ದೊಡ್ಡೋರ ಸೇವೆ ಮಾಡೋ ಭಾಗ್ಯ ಸಿಕ್ಕದೆ ಮಗಾ, ನಿಯತ್ತಿನಿಂದ ಸೇವೆ ಮಾಡು" ಎಂದು ಹೇಳಿ ತಾನೂ ಸಂತೋಷಿಸಿದ್ದ. ಅರಮನೆಯವರ ಅಂತರಂಗದಲ್ಲಿ ಪ್ರೀತಿಯನ್ನು ಗಳಿಸಿ, ಅವಳು ಹಿರಿಯ ನಾಗತಿಯ ಸಜ್ಜೆಯ ದಾಸಿಯಾದುದನ್ನು ಕೇಳಿದಾಗ, ತನ್ನ ಮಗಳ ತಲೆಯ ಮೇಲೆ ಕಿರೀಟ ಮೂಡಿದಷ್ಟು ಸಂತೋಷವಾಗಿತ್ತು ಅವನಿಗೆ. ಅದು ಮುಳ್ಳುಕಿರೀಟವೆಂಬುದು ಅವನಿಗಾಗ ಕಂಡಿರಲಿಲ್ಲ. ಈಗ ಅದು ಅರಿವಾಗಿಯೂ ಉಪಯೋಗವಿರಲಿಲ್ಲ. ಎಂತಲೇ ಅವನಲ್ಲೂ ಪಾಪನಾಯಕನಲ್ಲಿ ಮೂಡಿದಷ್ಟು ಕರ್ಕಶತೆ ಮೂಡದಿದ್ದರೂ, ಏನೋ ಭಯ ಹೊಗೆಯಾಡುತ್ತಿತ್ತು. ಎರಡು ದಿನಗಳ ಕಾಲ ಹೇಗೋ ಆ ಭಾವನೆಯನ್ನು ತಡೆದುಕೊಂಡಿದ್ದ. ಈಗ ಪಾಪನಾಯಕನ ಮಾತು ಕೇಳಿ, ಅವನೂ ತನ್ನ ಹೃದಯದ ಭೀತಿಯನ್ನು ಬೈತಿಡಲಾರದೆ ಹೇಳಿದ:

"ನಿಜ ಪಾಪಣ್ಣ. ಆನೇ ಜಾತ್ರೇಲಿ ನೊಣ ಸತ್ತಿತೂ ಅನ್ನಾರಲ್ಲಾ, ಹಾಗೆಲ್ಲಾಗ್ತದೋ ಅಂತ ನನಗೂ ಭಯ ಆಗ್ತದೆ. ಬಯುಸಿ

ಬಯಸಿ ಕತ್ತಿಗೆ ಮುತ್ತು ಕೊಟ್ಟಂತಾಯ್ತು. ಹನುಮಪ್ಪನೇ ಕಾಪಾಡ ಬೇಕು."

"ಈ ಬದುಕು ಹೀಗೆಂತ ನನಗೆ ಮೊದಲೇ ಗೊತ್ತಿತ್ತು ಪೂಜಾರಯ್ಯ. ಹಾಲು ಕುಡಿದ ಮಕ್ಕಳೇ ಬದುಕೊಲ್ಲ; ಇನ್ನು ವಿಷಾ ಕುಡಿದ ಮಕ್ಕಳು ಬದುಕ್ತಾರಾ. ಈ ಚಾಕರಿ ನಮಗೆ ಬೇಡಾಂತ ಬಡುಕೊಂಡೆ---ಒಬ್ಬರಾದರೂ ನನ್ನ ಮಾತು ಕೇಳಬೇಕಲ್ಲ. ಏನೋ ಕಡಿದು ಕಟ್ಟೆಹಾಕ್ತೀವೀಂತ ಕುಣಿದುಕೊಂಡು ಹೋದರು, ಈ ಘನಂದಾರಿ ಉದ್ಯೋಗಕ್ಕೆ."

"ಅವರನ್ನು ಯಾಕೆ ಅನ್ನಬೇಕು, ಪಾಪಯ್ಯ. ಎಷ್ಟಾದರೂ ಬಿಸೀ ರಕ್ತ. ಹೆಚ್ಚು ದುಡೀಬೇಕು, ಹತ್ತು ಜನಾನ ಆಳಬೇಕು ಅನ್ನೋ ಚಪಲ. ನನಗೇ ಬುದ್ಧಿಗೆ ಮಂಕು ಕವಿದಿತ್ತು. ಹುಡುಗಿ ಚಾಕರಿಗೆ ಸೇರಲೇ ಅಂತ ಕೇಳಿದಾಗ, ಸಂತೋಷವಾಗೇ ಹೂ ಅಂದೆ. ಹೀಗಾಗತದೆ ಅಂತ ಯಾರು ಕಂಡಿದ್ದರು ಹೇಳು?"

"ಇದೆಂಥಾ ದುಡಿಮೆ ಪೂಜಾರಯ್ಯ. ಕಂಡೋರ ಬಾಗಿಲ ಚಾಕರಿ ಮಾಡೋದು. ಪಾಪಿ ಪರದೇಶಿಗಳ ತಲೆ ಕತ್ತರಿಸಿ, ಅವರ ರಕ್ತ ಸುರಿಸಿ ಬಂಗಾರ ಬೆಳಕೋತೀನಿ ಅನ್ನೋ ಬುದ್ಧಿ ಬದುಕೋರ ಬುದ್ಧಿ ಅಲ್ಲ. ದುಡೀಬೇಕು, ಅಂದ್ರೆ ಹಂಗೇ ದುಡೀಬೇಕಾ? ಅದೊಂದೇ ದಾರೀನಾ? ಕುನ್ನಿ ಹಾಗೆ ಕಂಡೋರ ಸೇವೇಲಿ ಬಗುಳಿ ಹೊಟ್ಟೆತುಂಬಿಕೊಳೋದಕ್ಕಿಂತಾ, ಭೂಮಿತಾಯಿ ಸೇವೆ ಮಾಡಿದ್ರೆ ಹೊಟ್ಟೆ ತುಂಬೊಲ್ಲವಾ? ನಾನಾಗಲೇ ಹೇಳಿದೆ ಪೂಜಾರಯ್ಯ, ಪಾಪಿ ಪರದೇಶೀನ ಅಯ್ಯೋ ಅನ್ನಿಸಿ, ಕೋಟಿ ವರಹಾ ದುಡಿಯೋಕ್ಕಿಂತ, ಭೂಮಿತಾಯಿ ಸೇವೆಮಾಡಿ, ತಾನೂ ಹಾಯಾಗಿ ಹಾಲು ಅನ್ನ ಉಂಡು, ಮನೆಬಾಗಿಲಿಗೆ ಬಂದೋರಿಗೆ ಒಪ್ಪತ್ತು ಮುದ್ದೆ ರೊಟ್ಟಿ, ನಗುನಗುತ್ತಾ ಇರೋದು ಸಾವಿರಪಾಲು ಮೇಲು ಅಂತ. ಕೇಳ್ಲಿಲ್ಲಾ, ಬಿಲುಕುಲ್ ನನ್ನ ಮಾತು ಕೇಳ್ಲಿಲ್ಲ. ಎಲ್ಲಾ ಬಂಗಾರ ತಿಂದೇ ಬದುಕೋರ ಹಾಗೆ ಆಡಿದರು. ಅವರಾಟ ಅವರಿಗೇ ಚಂದಾಗಿತ್ತು. ಈಗ್ಯಾರು ಅನುಭವಿಸಬೇಕು ಹೇಳು, ಈ ನರಕಾನ? ಅಲ್ಲವರೇನು ಸುಖಾನೇ ಪಡ್ತಾರೋ, ದುಃಖಾನೇ ಪಡ್ತಿದಾರೋ—ಇಲ್ಲಿ ಏನೂ ಅರೀದ ಈ ಹೆಣ್ಣುಮಕ್ಕ, ಜೀವಕ್ಕೆ ಬೆಂಕಿ ಹಚ್ಚಿಕೊಂಡು, ಬೆಕೋ

ಅನ್ನೋ ಮನೇಲಿ ಪರದೇಶಿ ಅಲೆದಂಗೆ ಆಲೀತವೆ. ಎರಡು ದಿನ ಆಯ್ತು, ಅನ್ನ ನೀರು ಮುಟ್ಟಲ್ಲ. ಜೀವ ಹಿಡಿದುಕೊಂಡು ಇದನ್ನೆಲ್ಲಾ ಹೇಗೆ ನೋಡಲಿ ಹೇಳು."

"ನನ್ನ ಮನೇಲೂ ಹಂಗೇ ಆಗಿದೆ ತಾತಯ್ಯ. ಆ ಹುಚ್ಚಿಮುಂಡೆಗೇನು ಅಂತಃಕರಣ ಬಾಧಿಸುತ್ತಿರಬಹುದು ಹೇಳು. ಗಿರಿಜೆ ಊಟ ತಿಂಡಿಗೆ ಮನೆಗೆ ಬರಲಿಲ್ಲ ಅಂತ ಅವಳೂ ಊಟತಿಂಡಿ ಬಿಟ್ಟು ಮೂಲೆ ಹಿಡಿದು ಮುಲುಗುತಾ ಬಿದ್ದಿದಾಳೆ. ಒಂದೊಂದು ಸಲ ಅವಳಾಡೋ ಮಾತು ಕೇಳಿದರೆ, ಮೈ ಎಲ್ಲಾ ನಡುಕಾ ಹುಟ್ಟುತ್ತೆ; ಅಂತಂಥ ಮಾತಾಡ್ತಾಳೆ. ಒಂದೊಂದ್ಸಲ ಇದ್ದಕ್ಕಿದ್ದ ಹಾಗೇ 'ರಕ್ತ....ರಕ್ತ....ಆಕಾಶದ ತುಂಬ ರಕ್ತ ಹರಡಿದೆ. ಅಯ್ಯಯ್ಯೋ....ಗಿರಿಜಾ ನೀನೂ ಹೋಗಿಬಿಟ್ಟೆಯಾ ಆ ರಕ್ತದ ಹೊಳೇಲಿ' ಅಂತ ಚೀರ್‍ತಾಳೆ. ಏನೋ ದೆವ್ವ ಕಂಡೋಳ ಹಾಗೆ ನಡುಗುತ್ತಾಳೆ. ಅಂಥ ಹೊತ್ತಿನಲ್ಲಿ ಅವಳನ್ನು ಹಿಡಿಯೋದೇ ಕಷ್ಟ. ಅದೇನು ಋಣಾನುಬಂಧಾನೋ, ಗಿರಿಜೆ ಒಬ್ಬಳಿದ್ದರೆ, ಅವಳು ಹೇಳಿದ ಹಾಗೆ ಕೇಳ್ಕೊಂಡಿರ್‍ತಾಳೆ. ಇಲ್ಲಾಂದ್ರೆ—ಆ ಆಂಜನೇಯನೇ ಬರಬೇಕು, ಅವಳನ್ನು ಹಿಡೀಲಿಕ್ಕೆ."

"ಅವಳ ವ್ಯಥೆ ನಮಗೇನು ತಿಳೀತದೆ ಪೂಜಾರಯ್ಯ, ಮೂಕ ಜೀವ ಇದ್ದ ಹಾಗೆ ಅದು. ಎಲ್ಲಾ ಇದ್ದೋರು ನಮಗೇ ಕಕಮಕ ಆಗಿರೋವಾಗ, ಆ ಜೀವಕ್ಕೇನೋ ಎಂತೋ. ಅವಳನ್ನು ನೋಡಿದಾಗಲೆಲ್ಲಾ ನನಗೆ ಯುದ್ಧದ ಮಾತಾಡೋರನ್ನ ಹಿಡಿದು ಮೊದಲು ಸುಡಬೇಕು, ಅನ್ನಿಸುತ್ತೆ ನೋಡು ಪೂಜಾರಯ್ಯ. ಪಾಪ! ಹೇಗಿದ್ದ ಹೆಂಗಸು ಹೇಗಾಗಿ ಹೋದಳು. ನನಗೊಂದೊಂದು ಸಲ ಅನ್ನಿಸುತ್ತೆ ಪೂಜಾರಯ್ಯ, ಈ ಅರಮನೆ, ರಾಜ್ಯ, ಕೋಶ ಎಲ್ಲಾ ಎಕ್ಕಹುಟ್ಟಿ ಹೋಗೋವರೆಗೂ ನನ್ನ ನಿನ್ನಂಥವರು ಹಾಯಾಗಿ ಬದುಕೋದಕ್ಕಾಗುವುದಿಲ್ಲ. ಯಾರೇನು ಈ ಭೂಮೀನ ತಲೇ ಮೇಲೆ ಹಾಕಿಕೊಂಡು ಹೋಗ್ತಾರಾ? ರಾಮ, ಕೃಷ್ಣನಂಥೋರೆ ಈಗಿಲ್ಲ. ಅಶ್ವಮೇಧ ಮಾಡಿದ ಧರ್ಮರಾಯನ ರಾಜ್ಯಾನೇ ಶಾಶ್ವತವಾಗಿ ಉಳಿಯಲಿಲ್ಲ. ಹನುಮಂತರಾಯ ಹಗ್ಗ ಕಡಿವಾಗ, ಪೂಜಾರಯ್ಯ ಶ್ಯಾಮಗೆ ಕೇಳಿದಾಂತ, ಅವರಿಗೆ ಯಾರಿಗೂ ಇಲ್ಲದ್ದು

ತಮಗಾಗ್ತಾದೆ ಅಂತ ಕುಣೀತಾರಲ್ಲಾ ಈ ಹುಚ್ಚಿಗೆ ಏನು ಹೇಳ್ತಿ ? ”

“ ನೀನು ಹೇಳೋದು ಸರಿ ಪಾಪಯ್ಯ, ಆದರೇನು ಮಾಡಲಿಕ್ಕಾಗುತ್ತೆ. ಅವರ ಹುಚ್ಚು ಅವರಿಗೆ ಹಿತ. ನಾವು ಬ್ಯಾಡಾಂದ್ರೆ ಯಾರು ಕೇಳ್ತಾರೆ? ಅದರಾಗೂ ಇಂಥ ಮಾತು ಹೇಳೋಕೆ ಹೋದರೆ. ‘ ಊರಿನ ಮಾತು ನಿನಗೇಕೋ ಮೂದೇವಿ ನಿನ್ನಪಾಡಿಗೆ ನೀನಿರು ’ ಅಂತ ಮೊಕಕೆ ಕೈತಿವೀತಾರೆ.”

“ ಅವರ ಹುಚ್ಚು ಅವರು ಏನಾದರೂ ಹಾಳು ಬಡಿದುಕೊಂಡು ಹೋಗಲಿ, ಪ್ರೀತಿ ಆದರೆ ಬೆತ್ತಲೆ ಕುಣೀಲಿ, ನಾನೇನು ಬೇಡ ಅನ್ನೋದಿಲ್ಲ. ತನ್ನ ಹುಚ್ಚಿನ ಉರಲು ಯಾರಯಾರ ಕುತ್ತಿಗೆಗೋ ಎಳೆಯೋದೇನು ಚಂದ? ಅವರಿಗೆ ರಾಜ್ಯ ಬೇಕಾದರೆ ಅವರು ಸಾಯಲಿ. ಅದು ಬಿಟ್ಟು, ಊರೆಲ್ಲಾ ಸತ್ತು ರಾಜ್ಯ ನನಗಾಗಲಿ ಅಂದರೆ ಯಾವ ದೇವರು ಒಪ್ಪೋ ಮಾತು ಪೂಜಾರಯ್ಯ ? ”

“ ರಾಮದೇವರ ಹೆಂಡತೀನ ರಾವಣ ಕದ್ದುಕೊಂಡು ಹೋದಾಂತ ಹೆಂಡರುಮಕ್ಕಳೂ ಇಲ್ಲದ ಹನುಮಂತ ಸಮುದ್ರ ಹಾರಿದ. ಬಾಲಕ್ಕೆ ಬೆಂಕಿ ಹಚ್ಚಿಸಿಕೊಂಡು, ಊರೆಲ್ಲಾ ಅಲೆದ. ಪರಮಾತ್ಮನ ಆಟಾನೇ ಹಂಗೆ ಪಾಪಯ್ಯ. ಹತ್ತು ಕಿತ್ತು ಒಂದು ಕಟ್ಟುತ್ತಾನೆ; ನೂರು ಕೊಂದು ಒಂದನ್ನ ಬದುಕಿಸ್ತಾನೆ. ಅವನಾಟಕ್ಕೆ ಯಾರು ಬೇಡಾನ್ನೋಕೆ ಆಗ್ತದೆ ಹೇಳು. ”

“ ಏನಾಟಾನೋ ಏನು ಕಾಟಾನೋ, ಸದ್ಯ ಕೋಣನ ಜಗಳದಲ್ಲಿ ಮರ ಬಡವಾಯಿತು ಅನ್ನೋ ಹಾಗೆ, ಈ ಅರಮನೆ ದಳವಾಯಿಗಳ ಕಿತ್ತಾಟದಲ್ಲಿ ಈ ಅಣ್ಣತಮ್ಮದೀರು ಮೊಕ ಕೆಡಿಸಿಕೊಳ್ದೆ ನಗ್ತಾ ನಗ್ತಾ ಇದ್ರೆ ಸಾಕಾಗಿಹೋಗಿದೆ ನನಗೆ. ”

—ಎಂದ ಪಾಪನಾಯಕ. ಭೀಮಯ್ಯನ ಹೃದಯಾಂತರಾಳದ ಬಯಕೆಯೂ ಅಷ್ಟೇ ಆಗಿತ್ತು. ದುರ್ಗದಲ್ಲಿ ಹೊತ್ತಿದ ಬೆಂಕಿಯಲ್ಲಿ ಸಿಕ್ಕು ತನ್ನ ಮಮತೆಯ ಹೂವು ಬಾಡದಿದ್ದರೆ ಸಾಕು.

ಇವರಿಬ್ಬರೂ ಹೀಗೆ ಮಾತನಾಡುತ್ತಾ ಕುಳಿತಿರುವಾಗಲೇ, ದುರ್ಗದತ್ತಣಿಂದ ಬರುತ್ತಿರುವ ಕುದುರೆಯ ಖುರಪುಟದ ಸದ್ದು ಕೇಳಿ ಪಾಪನಾಯಕ ಎದ್ದು ನಿಂತು, ಹುಬ್ಬಿಗೆ ಕೈಯಿಕ್ಕಿ ನೋಡಿದ. ತನ್ನ ಕರಿಯ

ಬಣ್ಣದ ಕುದುರೆಯನ್ನೇರಿ ವೀರಣ್ಣ ಬರುತ್ತಿರುವುದು ಕಾಣಿಸಿತು. ಅವನ ಹೃದಯ ಹೊತ್ತಿದ್ದ ಭಾರ ಅರ್ಧ ಹಗುರಾದಂತಾಗಿ, ಮನೆಯೊಳಗಿದ್ದ ಸೊಸೆಗೆ—

" ನಿನ್ನ ಸರದಾರ ಮೈದುನ ಬಂದ ನೋಡು ಗಂಗಾ "

ಎಂದು ಕೂಗಿ ಹೇಳಿದ. ಅವನ ಮಾತು ಕೇಳಿದ ಕೂಡಲೇ ಗಂಗವ್ವ, ಮನೆಯೊಳಗಿನಿಂದ ಚಿಗರಿಯಂತೆ ಚಿಗಿದು ಅಂಗಳಕ್ಕೆ ಬಂದು, ವೀರಣ್ಣ ಬರುವುದನ್ನೇ ಕಾಯುತ್ತಾ ನಿಂತಳು.

ಸ್ವಲ್ಪ ಹೊತ್ತಿನಲ್ಲೇ ವೀರಣ್ಣನ ಕುದುರೆ ಅಂಗಳಕ್ಕೆ ಬಂದು ನಿಂತಿತು. ವೀರಣ್ಣ ಕುದುರೆಯಿಂದ ಇಳಿಯುತ್ತಿದ್ದ ಹಾಗೇ, ಎಲ್ಲರೂ ಅವನ ಸುತ್ತ ನೆರೆದು ' ದುರ್ಗದಲ್ಲಿ ಏನಾಯಿತು? ಎರಡು ದಿನದಿಂದ ಏಕೆ ಬರಲಿಲ್ಲ? ' ಎಂದು ಒಟ್ಟಿಗೆ ಕೇಳಿದರು. ಆತನನ್ನು ಕಾಣದೆ ಎರಡು ದಿನಗಳಿಂದ ಕಾತರಿಸಿದ ರೊಪ್ಪದ ನಾಯಿ ಅವನನ್ನು ಕಂಡ ಕೂಡಲೇ, ಕಟ್ಟಿದ ಹಗ್ಗವನ್ನು ಕಿತ್ತು, ಅವನ ಸುತ್ತ ಹಾರಾಡಿ, ಅವನ ಕೈಕಾಲುಗಳನ್ನು ನೆಕ್ಕಿತು. ಮೈಮೇಲೆ ಹಾರುತ್ತಿದ್ದ ನಾಯಿಯನ್ನು ದೂರ ತಳ್ಳಿ, ಯಾರ ಪ್ರಶ್ನೆಗೂ ಉತ್ತರ ಕೊಡದೆ, ಲಾಯದಲ್ಲಿ ಕುದುರೆಯನ್ನು ಬಿಗಿದು, ಬಾಗಿಲಲ್ಲಿದ್ದ ಜೊಂಬಿನಲ್ಲಿಯ ನೀರಿನಲ್ಲಿ ಕೈಕಾಲು ಮುಖ ತೊಳೆದು ನೆಟ್ಟಗೆ ಒಳಗೆ ಹೋದ.

ಅವನ ವರ್ತನೆಯನ್ನು ಕಂಡು ಪಾಪನಾಯಕನಿಗೆ ಸಿಟ್ಟು ಬಂತು.

" ಮಾತಾಡಿಸಿದ್ರೆ ಮಾತಾಡಿಸ್ದೋರ ಜ್ಞಾನಾನೇ ಇಲ್ಲ. ಯಾವುದೋ ದೇವರು ಮೈಮೇಲೆ ಬಂದಹೆ ಅಂತ ಕಾಣಸ್ತದೆ. ಇನ್ನೂ ಸಣ್ಣವಯಸ್ನಾಗಿದ್ರೆ ಬಾರುಕೋಲು ತಗೊಂಡು ಮೈ ಹೊಕ್ಕ ಭೂತಾ ಬಿಡಸ್ತಿದ್ದೆ. ಕತ್ತೆಗೆ ಬಂದ್ಹಂಗೆ ವಯಸ್ಸು ಬಂತು. ಆ ಜ್ಞಾನಾ ಮಾತ್ರ ಬರಲಿಲ್ಲ. "

—ಎಂದು ವಟಗುಟ್ಟಿದ. ಗಂಗವ್ವನಿಗೂ ಅವನ ತಾತ್ಸಾರದ ವರ್ತನೆಯನ್ನು ಕಂಡು ಕರುಳು ಕಿವುಚಿದಂತಾಗಿ, ಅವಳಲ್ಲಿದ್ದ ಹೆಣ್ಣು ಮುನಿದಿದ್ದರೂ, ಮಾತೃಹೃದಯ ಆ ಅವಿನಯಕ್ಕೂ ಸಮಾಧಾನವನ್ನು ಹುಡುಕಿ, ತಾನೇ ಬೇರೆಯವರಿಗೆ ಸಮಾಧಾನ ಹೇಳಿತು :

" ಏನು ಮಾವಯ್ಯ, ದೊಡ್ಡೋರೆ ಹೀಗೆ ಸಿಟ್ಟಾದರೆ, ಚಿಕ್ಕೋರಿಗೆ

ಶ್ರೇಯಸ್ಸಾದೀತಾ ? ಎಷ್ಟು ದಣುಕೊಂಡು ಬಂದಿದಾನೋ ಏನೋ, ಕುದುರೆ ಇಂದ ಇಳೀತಿದ್ದ ಹಾಗೇ ಉಸಿರು ತಿರುಗಿಸಿಕೊಳ್ಳಲಿಕ್ಕೂ ಬಿಡದೆ, ಒಂದೇ ಸಲ ಪ್ರಶ್ನೆಮಾಡಿದರೆ ಬೇಜಾರಾಗಲ್ವಾ? ಒಂದ್ಗಳಿಗೆ ದಣಿವಾರಿಸ್ಕೊಂಡ ಮೇಲೆ ನಾವು ಕೇಳದಿದ್ದರೂ ಹೇಳ್ತಾನೆ. ”

“ ಇದು ದಣಿವಲ್ಲಾ, ಮೈ ಸೊಕ್ಕು ಗಂಗಾ. ನನಗ್ಯಾಕೆ? ನೀನುಂಟು-ನಿನ್ನ ಪ್ರೀತಿ ಮೈದುನ ಉಂಟು. ಅವನೇನಾರ ಹೇಳಿದ್ರೆ ನಮ್ಗೂ ವಸಿ ಹೇಳು. ಜೀವಂತ ಇದಾರೆ ಅಂತ ಕೇಳಿದ್ರೆ ಸಾಕು. ಸಂತೋಷ ಆಗ್ತದೆ. ಬಾ ಪೂಜಾರಯ್ಯ, ಸ್ವಲ್ಪ ಹಂಗೆ ಗದ್ದೆ ತಾವ ಹೋಗಿ ಬರಾಣ—ಬೆಳೆದ ಗದ್ದೆ ಕಂಡರೆ, ಪ್ರೋಲಿದನ ಉಳಿಸಾಕಿಲ್ಲ. ”

—ಎಂದು ಪಾಪನಾಯಕ ದೊಣ್ಣೆಯನ್ನು ಹಿಡಿದು, ನೆಲಕ್ಕೆ ಹಾಸಿದ್ದ ಕಂಬಳಿಯನ್ನು ಕೊಡವಿ ಹೆಗಲ ಮೇಲೆ ಹಾಕಿಕೊಂಡು ಹೊರಟ.

ಭೀಮಯ್ಯ. “ ನನ್ನ ಗಿರಿಜೆ ಸುದ್ದಿ ಏನಾರ ಗೊತ್ತದೇನೋ ಕೇಳು ಗಂಗಕ್ಕ. ಆಮೇಲೆ ಹೇಳೋವಂತೆ. ”

—ಎಂದು ಹೇಳಿ, ಪಾಪನಾಯಕನನ್ನು ಹಿಂಬಾಲಿಸಿದ. ಆ ವೃದ್ಧರಿಬ್ಬರ ಬೆನ್ನನ್ನೂ ನೋಡುತ್ತಾ ಒಂದು ಗಳಿಗೆ ಹಾಗೇ ಅಂಗಳದಲ್ಲಿ ನಿಂತಿದ್ದಳು ಗಂಗವ್ವ. ಏಕೋ ಅವಳಿಗೂ ತಟಕ್ಕನೆ ಒಳಗೆ ಹೋಗಲು ಮನಸ್ಸಾಗಲಿಲ್ಲ. ಆದರೆ ಹಸಿದ ಮೈದುನ ತನಗಾಗಿ ಊಟಕ್ಕೆ ಕಾದು ಕುಳಿತಿರಬಹುದೆಂಬ ನೆನಪು ಅವಳನ್ನು ಮನೆಯೊಳಗೆ ಎಳೆಯಿತು.

ಆದರೆ ಆಕೆ ಊಹಿಸಿದಂತೆ, ವೀರಣ್ಣ ಎಂದಿನಂತೆ ಅಡಿಗೆಯ ಮನೆಯೊಳಗೆ ಊಟದ ತಳಿಗೆಯನ್ನಿಟ್ಟುಕೊಂಡು, ತನ್ನ ಅತ್ತಿಗೆ ಬಡಿಸಲು ಬರುವುದನ್ನೇ ಕಾದು ಕುಳಿತಿರಲಿಲ್ಲ. ತೊಟ್ಟ ಬಟ್ಟೆಯನ್ನು ತೆಗೆದು ಹಾಕಿ, ನಡುಮನೆಯೊಳಗೆ ಗೋಡೆಗೆ ಒರಗಿ, ಕಣ್ಣು ಮುಚ್ಚಿ ಕುಳಿತಿದ್ದ. ಅವನ ಮನದೊಳಗಿನ ಯಾವುದೋ ಉಗ್ರಭಾವನೆ, ಬಿಗಿತ ಮೋರೆಯ ಮೇಲೆ ಉರಿಯಾಗಿ ಹೊಳೆದು, ಚಿರಪರಿಚಿತವಾದ ಆ ಮುಖವೂ ಹೊಸ ಕರ್ಕಶತೆ ತುಂಬಿ ಅಪರಿಚಿತವಾದುದಾಗಿ ಕಾಣಿಸಿತು ಗಂಗವ್ವನಿಗೆ. ಆ ಮುಖವನ್ನು ನೋಡಿ, ಅವನನ್ನು ಮಾತನಾಡಿಸುವ ಧೈರ್ಯವಾಗಲಿಲ್ಲ ಅವಳಿಗೆ.

ಸದ್ದು ಮಾಡದಂತೆ ಒಳಗೆ ಹೋಗಿ, ಊಟಕ್ಕೆ ಸಿದ್ಧತೆ ಮಾಡಿ, ಮೃದುವಾದ ಧ್ವನಿಯಲ್ಲಿ 'ತಳಿಗೇಲಿ ಅನ್ನ ಆರಿಹೋಗತಾ ಅದೆ' ಎಂದು ಹೇಳಿದಳು. ಮೊದಲ ಬಾರಿ ಆಕೆ ಹೇಳಿದುದು ವೀರಣ್ಣನ ಕಿವಿಯನ್ನು ಹೊಗಲಿಲ್ಲ. ಕುಳಿತಂತೆಯೇ ಕುಳಿತಿದ್ದ. ಮತ್ತೆ ಒಂದೆರಡು ಬಾರಿ ಕೂಗಿದ ಮೇಲೆ ಎದ್ದು ಬಂದು, ತಟ್ಟೆಯ ಮುಂದೆ ಕುಳಿತು, ಮಾತನಾಡದೆ ಊಟಮಾಡಲಾರಂಭಿಸಿದ. ಅವನ ರೀತಿಯಿಂದ, ತಾನು ಕೇಳದೆ ಅವನೇ ಯಾವ ಮಾತನ್ನೂ ಆಡುವುದಿಲ್ಲವೆಂದು ಮನವರಿಕೆಯಾಗಿ, ತಾನೇ ಅವನನ್ನು ಮಾತನಾಡಿಸಿದಳು ಗಂಗವ್ವ.

"ಏನು ವೀರಣ್ಣಾ, ಎರಡು ದಿನದಿಂದ ಇಬ್ಬರೂ ಮನೆಗೆ ಬರಲಿಲ್ಲ. ಸುದ್ದಿ ತಿಳೀದೇ ಭಾಳ ಭಯವಾಗಿತ್ತು. ನೀನು ಬಂದದ್ದು ನೋಡಿ ಅರ್ಧ ಜೀವ ಬಂದ ಹಂಗಾಯಿತು........"

ಅತ್ತಿಗೆಯ ಮಾತು ಕಿವಿಗೆ ಬಿದ್ದರೂ ಬೀಳದವನಂತೆ ವೀರಣ್ಣ ವೇಗವಾಗಿ ಊಟ ಮುಗಿಸುತ್ತಿದ್ದ. ಅವನ ಮೌನ, ಗಂಗವ್ವನ ಹೃದಯವನ್ನು ಮುಳ್ಳಿನಂತೆ ಇರಿಯುತ್ತಿತ್ತು. ಆ ನೋವನ್ನು ಮುಖದಲ್ಲಾಗಲಿ, ಮಾತಿನಲ್ಲಾಗಲಿ ತೋರಗೊಡದೆ, ಮತ್ತೆ ತಾನೇ ಪ್ರಶ್ನೆ ಮಾಡಿದಳು.

"ಅವರನ್ನೆಲ್ಲಾದರೂ ಕಂಡಿದ್ದೆಯಾ?"

"ಯಾರನ್ನು?"

—ಗುಟುರು ಹಾಕುವವನಂತೆ ಕೇಳಿದ ವೀರಣ್ಣ.

"ನಿನ್ನ ಅಣ್ಣನವರನ್ನು."

"ಊಹೂ. ನನಗೆ ಯಾರ ಸುದ್ದಿಯೂ ತಿಳಿಯದು. ನಾನೆಲ್ಲಿ, ಅವನೆಲ್ಲಿ?"

ಅವನಾಡಿದ ಮಾತು ಕೇಳಿ ಗಂಗವ್ವನ ಎದೆಯಲ್ಲಿ ಧಿಗ್ಗನೆ ದಿಗಿಲು ಕವಿಯಿತು.

"ಇದೇನು ವೀರಣ್ಣಾ ಹೀಗೆ ಮಾತಾಡ್ತೀಯ?"

ಎಂದು ಕಾತರಳಾಗಿ ಕೇಳಿದಳು ಗಂಗವ್ವ.

"ಮತ್ತೆ ಹೇಗೆ ಮಾತಾಡಲಿ ಅತ್ತಿಗೆ. ಅರಮನೇನ ಕಾಪಾಡೋಕೆ ಹೊರಟರೋ ಧೀರರು ಅವರು, ಅವರ ಮುಂದೆ ನಾವು ಯಾವ ಕಾಲಕಸ. ದೊಡ್ಡವರ ಸುದ್ದಿ ನನಗೆ ಏಕೆ?"

ತನ್ನ ಹೃದಯದಲ್ಲಿದ್ದ ಹಾಲಾಹಲವನ್ನೆಲ್ಲಾ ಹೊರಚೆಲ್ಲುವ ಕರ್ಕಶ ವಾದ ಧ್ವನಿಯಲ್ಲಿ ಹೇಳಿದ ವೀರಣ್ಣ.

" ವೀರಣ್ಣಾ...."

ಅವನ ಮಾತು ಕೇಳಿ ಚಾಟಿಯ ಏಟು ತಿಂದವಳಂತೆ ನರಳಿ ಕೂಗಿದಳು ಗಂಗವ್ವ. ಆ ನೋವಿನ ಕೂಗು ಕೇಳಿ, ಅದುವರೆಗೂ ಅತ್ತಿಗೆಯ ಮುಖ ನೋಡದೆ ಊಟಮಾಡುತ್ತಿದ್ದ ವೀರಣ್ಣ ತಟಕ್ಕನೆ ತಲೆ ಎತ್ತಿ ಅವಳ ಮೊಗವನ್ನು ನೋಡಿದ. ಅಪಾರ ಯಾತನೆಯ ರುದ್ರ ನಾಟ್ಯರಂಗ ದಂತಿದ್ದ ಮುಖವನ್ನು ಮೈದುನನಿಗೆ ತೋರಿಸದೆ ಗಂಗವ್ವ ತಟಕ್ಕನೆ ತನ್ನ ತಲೆಯನ್ನು ಕೆಳಗೆ ಬಾಗಿಸಿದಳು. ಅವಳ ಕಣ್ಣಂಚಿನಿಂದ ತುಳುಕಿದ ಕಂಬನಿಯೊಂದು ನೆಲದ ಮೇಲೆ ಬಿದ್ದು ಹರಡಿತು. ಅದನ್ನು ಕಂಡ ಕೂಡಲೇ, ಅದುವರೆಗೂ ಕ್ರೋಧದ ಅಣೆಕಟ್ಟಿನ ಹಿಂದೆ ಒತ್ತಿ ನಿಂತಿದ್ದ ಪ್ರೀತಿ, ಕಟ್ಟನ್ನು ಕಿತ್ತು ನುಗ್ಗಿತು.

" ಅತ್ತಿಗೆ ನಾನು ಪಾಪಿ. ನನ್ನನ್ನು ಪ್ರೀತಿಸಿದ ಯಾರಿಗೂ ನನ್ನಿಂದ ಸುಖ ಇಲ್ಲ. ನನ್ನನ್ನು ಕ್ಷಮಿಸು. "

—ಎಂದು ಕೂಗಿ ಹೇಳಿದವನೇ ವೀರಣ್ಣ, ಅಲ್ಲಿರಲಾರದೆ ಎದ್ದು ಹೋಗಿ, ಕೈತೊಳೆದು ಹಜಾರದಲ್ಲಿಯೇ ಕುಳಿತ. ಮೈದುನನ ಅರೆ ಉಂಡ ತಟ್ಟೆಯ ಎದುರು ಗಂಗವ್ವ ಕುಳಿತಂತೆಯೇ ಕುಳಿತಿದ್ದಳು. ಹತ್ತಾರು ಕಡೆಯಿಂದ ಕವಿದು ಬಂದ ದುಃಖದ ಬೇಗೆಯಲ್ಲಿ ಅವಳಿಗೆ ಪ್ರಪಂಚದ ಅರಿವು ಮರೆತು ಹೋದಂತಾಗಿತ್ತು.

" ಗಂಗಕ್ಕಾ ! " ಎಂದು ಆತುರವಾಗಿ ಕೂಗಿಕೊಂಡು ಒಳನುಗ್ಗಿದ ಗಿರಿಜೆ ಹಜಾರದಲ್ಲಿ ಕುಳಿತ ವೀರಣ್ಣನನ್ನು ಅನಿರೀಕ್ಷಿತವಾಗಿ ಕಂಡು ಒಂದು ಹೆಜ್ಜೆ ಹಿಮ್ಮೆಟ್ಟಿದಳು. ಮರುಗಳಿಗೆಯೇ ಆಘಾತದಿಂದ ಸಾವರಿಸಿ ಕೊಂಡು, ಮುಖದ ಮೇಲೆ ಮುಸುಗನ್ನೆಳೆದುಕೊಂಡು ಅಡಿಗೆಯ ಮನೆಯ ಬಾಗಿಲಿನಲ್ಲಿ ನಿಂತು, ದುಃಖವೇ ಮೂರ್ತಿವೆತ್ತಂತೆ ಕಂಬನಿಗರೆಯುತ್ತಾ ಕುಳಿತ ಗಂಗವ್ವನನ್ನು ಕಂಡು ಬೆಚ್ಚಿ, ಹಾಗೇ ಒಂದು ಗಳಿಗೆ ನಿಂತು ನೋಡಿದಳು. ಒಂದು ಹೆಣ್ಣು ಹೃದಯದ ನೋವು ಇನ್ನೊಂದು ಹೆಣ್ಣು ಹೃದಯವನ್ನು ಸೂಜಿಗಲ್ಲಿನಂತೆ ಸೆಳೆಯಿತು. ಗಂಗವ್ವನ ಬಳಿಗೆ ಧಾವಿಸಿ,

ಆಕೆಯನ್ನು ತನ್ನೆದೆಗೆ ತಬ್ಬಿಕೊಂಡು ಕೇಳಿದಳು ಗಿರಜೆ:

" ಏನಾಯಿತು ಗಂಗಕ್ಕಾ? ಇದೇನಿದು ಎಂದೂ ಇಲ್ಲದ ಅವತಾರ! ದೀಪ ಹಚ್ಚೋ ಹೊತ್ತಿನಲ್ಲಿ ಕಣ್ಣಲ್ಲಿ ನೀರುಹಾಕೋದೆ. ಚೆನ್ನಾಯಿತು ಬಿಡು, ಏನಾಯಿತು ಹೇಳು."

ಗಿರಿಜೆಯ ಸಾಂತ್ವನದಿಂದ ಗಂಗವ್ವನ ದುಃಖ ಕಡಮೆಯಾಗದೆ, ಹೆಚ್ಚಾಗಿ ಹೊರಚೆಲ್ಲಿತು. ಗಿರಿಜೆಯ ಭುಜಕ್ಕೆ ತೋಳನ್ನು ಹಾರದಂತೆ ಹಕಿ ಹೇಳಿದಳು.

" ನಾನಿನ್ನು ಬಹಳ ದಿನ ಬದುಕಬಾರದು ಗಿರಿಜಾ—ಎಲ್ಲಾ ನಗುತಾ ಇರೋವಾಗಲೇ ನಾನು ಕಣ್ಣುಮುಚ್ಚಿಕೊಂಡರೆ ಒಳ್ಳೇದು."

" ಛಿ! ಅದೇನು ಶಕುನದ ಮಾತೂಂತ ಆಡೀಯ ಬಿಡಕ್ಕ. ಕಸ್ತೂರಣ್ಣ, ನೀನು ಹೀಗೆ ಮಾತಾಡಿದೆ ಅಂತ ಕೇಳಿದ್ರೆ ಅಲ್ಲೇ ಎದೆ ಒಡೆದುಕೊಂಡು ಸಾಯ್ತಾನೆ. ಬಿಡು ಅಂಥ ಮಾತಾಡಬಾರದು."

" ಅವರಿಗೂ ನನ್ನ ನೆನಪಿಲ್ಲದ ಹಾಗಾಗಿ ಹೋಗಿದೆ ಗಿರಿಜಾ. ಎರಡ್ದಿನದಿಂದ ಅವರ ಸುದ್ದೀನೇ ಇಲ್ಲ. ಹೇಗಿದಾರೋ ಏನೋ, ಹೇಳೋರೂ ಇಲ್ಲ."

" ಅದಕ್ಕೇ ನಾನು ಬಂದದ್ದು. ಬರುವಾಗ ಕಸ್ತೂರಣ್ಣ ನಿನಗೆ ಹೇಳುವಂತೆ ಹೇಳಿದ."

" ಏನಂತ ? "

" ಗದ್ದಲ ಎಲ್ಲ ಕಡಮೆ ಆದರೆ ನಾಳೆಸಂಜೆಗೆ ಮನೆಗೆ ಬರ್ತೀನಿ. ಏನೂ ಭಯ ಇಲ್ಲಾಂತ ಹೇಳು ಅಂತ."

" ಸದ್ಯ ಬದುಕಿದೆ. ನನಗಂತೂ ದುರ್ಗದಲ್ಲಿ ಏನೇನೊ ಆಗ್ತಾ ಇದೆ ಅಂತ ಕೇಳಿ ಜೀವಾನೆ ಹಾರಿಹೋಗಿತ್ತು. ಯಾರನ್ನು ಕೇಳಿದರೂ ಸರಿಯಾಗಿ ಹೇಳವಲ್ಲರು. ಒಬ್ಬೊಬ್ಬರು ಒಂದೊಂದು ಥರಾ ಹೇಳಿದರು. ನಿಖರವಾಗಿ ಹೀಗೇಂತ ಹೇಳೋರೆ ದಿಕ್ಕಿಲ್ದೆ, ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟ ಹಾಗಾಗಿತ್ತು.

" ಏಕೆ ಅವರು ಹೇಳಲಿಲ್ಲವೇ ? "

—ಗಿರಿಜೆ ವೀರಣ್ಣ ಕುಳಿತಿದ್ದ ಕಡೆ ಕಣ್ಣು ತಿರುಗಿಸಿ ಕೇಳಿದರು.

ಅವಳ ಪ್ರಶ್ನೆಗೆ ಗಂಗವ್ವ ಉತ್ತರ ಕೊಡಲಿಲ್ಲ. ಅವಳ ಮುಖದಿಂದ ಭಾರವಾದ ನಿಟ್ಟುಸಿರಿನಿಂದಲೇ ಗಿರಿಜೆಗೆ ಅರ್ಥವಾಗಿ, ಅವಳ ಮುಖ ಗಂಭೀರವಾಯಿತು. ತಾನೂ ನಿಟ್ಟುಸಿರಿಟ್ಟು ಹೇಳಿದಳು.

" ಹೋಗಲಿ ಬಿಡು. ನಮಗ್ಯಾಕೆ ಬೇರೆಯೋರ ಮಾತು. ಕಸ್ತೂರಣ್ಣ ನನಗೆ ಹೇಳಿದ್ದನ್ನು ಹೇಳಿ ಹೋಗೋಣಾಂತ ಬಂದೆ."

" ನೀವೆಲ್ಲ ಬಂದಿರಿ. ಅವರೂ ಒಂದು ಗಳಿಗೆ ಬಂದು ಮುಖ ತೋರಿಸಿ ಹೋಗಿದ್ದರೆ ಚೆನ್ನಾಗಿತ್ತು ಗಿರಿಜಾ."

—ತನ್ನೆದೆಯಲ್ಲಿ ಮೂಡಿದ ಬಯಕೆಯನ್ನು ಮುಚ್ಚಿಡಲಾಗದೆ ಹೇಳಿದಳು ಗಂಗವ್ವ.

" ಹೂ, ಕಸ್ತೂರಣ್ಣನೂ ಬರಬೇಕೂಂತಲೇ ಇದ್ದ. ಅಪ್ಪಣೇನೂ ಸಿಕ್ಕಿತ್ತು. ಆದರೆ ಇನ್ನೇನು ಹೊರಡಬೇಕು ಅನ್ನುವಾಗ ಏನೋ ಆಯಿತೂಂತ ಪ್ರಧಾನಿಗಳು ಹೇಳಿ ಕಳಿಸಿದರು. ಅದಕ್ಕೇ ಬರಲಾಗಲಿಲ್ಲ."

" ಮತ್ತೇನಾಯಿತು ಗಿರಿಜಾ........ಏನಾದರೂ ಆಗಬಾರದ್ದು...."

—ಉಕ್ಕಿಬಂದ ಕುತೂಹಲವನ್ನು ಅಡಗಿಸಲಾರದೆ ಕೇಳಿದಳು ಗಂಗವ್ವ. ಗಿರಿಜೆ ಹೇಳಿದುದನ್ನು ಕೇಳಿ ಹೊರಗೆ ಕುಳಿತಿದ್ದ ವೀರಣ್ಣನ ಕಿವಿಯೂ ಅರಳಿತು. ಏನು ಹೇಳುವಳೋ ಎಂದು ಆಸಕ್ತಿಯಿಂದ ಕಿವಿ ನಿಮಿರಿಸಿ ಕೇಳಿದ.

" ದುರ್ಗಕ್ಕೆ ಯಾಕೋ ಗ್ರಹಚಾರ ಕೆಟ್ಟಿದೆ ಗಂಗಕ್ಕ. ಇಂಥಾದ್ದಾಗುತ್ತದೆ, ಇಂಥಾದ್ದಾಗುವುದಿಲ್ಲ ಎಂತ ಜೋಯಿಸರೂ ಹೇಳಲಿಕ್ಕೆ ಸಾಧ್ಯವಾಗೋಹಾಗಿಲ್ಲ, ಅಷ್ಟು ವಿಚಿತ್ರವಾಗಿದೆ. ಲೋಕಾನೇ ತಿಳಿದೋರು ಈಗೇನೋ ಮುಂದಿನ ಗಳಿಗೆಯೇನೋ ಎಂತ ತಬ್ಬಿಬ್ಬಲಾಗಿರೋವಾಗ, ನಮ್ಮಂಥ ಹೆಣ್ಣು ಹೆಂಗಸರಿಗೇನು ತಿಳಿಯುತ್ತೆ! ಹೇಳಿದ ಚಾಕರಿ ಬಗುಳಿಕೊಂಡು ಬಂದರಾಯಿತು. ನಾನಿನ್ನು ಬರ್‍ತೀನಿ ಗಂಗವ್ವ, ಮನೇಲಿ ಅಪ್ಪಯ್ಯನ ಜೀವ ಹೊಯ್ದಾಡ್ತಾ ಇರ್‍ತದೆ. ಅವನ ಜೀವಕ್ಕೆ ಅದೊಂದು ಹುಚ್ಚು ಮುಕ್ಕ ಜೇರೆ ಗಂಟು ಬಿದ್ದದೆ. ಅವಳ ಗತಿ ಏನಾಗಿದೆಯೋ ಹೋಗಿ ನೋಡ್ತೀನಿ. ನೀನು ಯಾವುದೂ ಮನಸಿಗೆ ಹಚ್ಚಿಕೋಬೇಡ. ನಾನು ಬರಲೆ ? "

ಗಿರಿಜೆಯ ಮಾತು ಕೇಳಿ, ಮುಗಿಲುದ್ದ ಎದ್ದು ನಿಂತಿದ್ದ ವೀರಣ್ಣನ ಕುತೂಹಲ ಪಾತಾಳಕ್ಕಿಳಿದು ಹೋಯಿತು. ಅವಳಾವುದೋ ತನಗೆ ತಿಳಿದ ಮಾತನ್ನು ಹೇಳದೆ ಮುಚ್ಚಿಟ್ಟಳೆಂಬುದು ಅವನಿಗೆ ಅರಿವಾಯಿತು. ಹಾಗೆಯೇ ಹೇಗಾದರೂ ಮಾಡಿ ಅದೇನೆಂದು ತಿಳಿದುಕೊಳ್ಳಬೇಕೆಂಬ ಕುತೂಹಲವೂ ಬೆಳೆಯಿತು. ಗಿರಿಜೆ ಹೊರಬರುವುದನ್ನೇ ಕಾದು ಕುಳಿತ.

ಗಿರಿಜೆಯಾಡಿದ ಮಾತು ಕೇಳಿ, ಗಂಗವ್ವನಿಗೂ ಭೀಮಯ್ಯ ಮಗಳು ಬರಲಿಲ್ಲವೆಂದು ಚಡಪಡಿಸುತ್ತಿದ್ದುದು ನೆನಪಾಯಿತು.

" ಛಿ ! ನನ್ನ ಮರವಿಗಿಷ್ಟು ! ಹೋಗು. ಯಾವುದೋ ಮಾತಿನಲ್ಲಿ ಇಲ್ಲೇ ಕೂಡಿಸಿಕೊಂಡೆ. ಪೂಜಾರಯ್ಯ ನಿನ್ನ ಕಾಣದೆ ನೀರು ತಪ್ಪಿದ ಮೀನಿನ ಹಾಗೆ ಚಡಪಡಿಸ್ತಿದಾನೆ ಎರಡು ದಿನದಿಂದ. ಅಂದ ಹಾಗೆ— ಈಗ ನೀನೇ ಹೋಗಿ ಎಸರು ಕೂಡಿಸಬೇಕೇನೋ ? "

ಅಪ್ಪಯ್ಯ ಏನು ಮಾಡಿಕೊಂಡಿದಾನೋ ಕಾಣೆ. ಏನಾದರೂ ಮಾಡಿದ್ದರೆ ಆಯಿತು. ಇಲ್ಲದೆ ಹೋದರೆ ಅದು ಎಷ್ಟು ಹೊತ್ತಿನ ಕೆಲಸ."

" ಅದೇನೋ ಬೇಡ. ನಾನು ಮಾಡಿದ್ದೇ ಬೇಕಾದಷ್ಟು ಮಿಕ್ಕಿದೆ. ನಿನಗೂ ಆಗುತ್ತೆ ತಗೊಂಡು ಹೋಗು,"

—ಎಂದು ಹೇಳಿ ಗಂಗವ್ವ ಉಳಿದಿದ್ದ ಅಡಿಗೆಯನ್ನೆಲ್ಲಾ ಬೇರೆ ಮಡಕೆಗಳಿಗೆ ಹಾಕಿ ತೆಗೆದು ಕೊಟ್ಟಳು.

" ಇದೇನಕ್ಕಾ ಎಲ್ಲಾ ಇಟ್ಟುಬಿಟ್ಟೆ, ನಿಮ್ಮದೆಲ್ಲಾ ಊಟ ಆಯಿತೆ ?"

" ಹೂ. ಆಯಿತು."

" ನಿನ್ನದು ? "

—ಗಿರಿಜೆ ಗಂಗವ್ವನ ಮುಖ ನೋಡುತ್ತಾ ಕೇಳಿದಳು.

" ನನ್ನದೂ ಆಯಿತು "

—ಎಂದಳು ಗಂಗವ್ವ ಬೇರೆತ್ತಲೋ ನೋಡುತ್ತ. ಆ ಮಾತಿನ ರೀತಿಯಿಂದಲೇ ಗಿರಿಜೆಗೆ ಗಂಗವ್ವ ಊಟಮಾಡಿಲ್ಲವೆಂಬುದು ಅರಿವಾಯಿತು. ಏನೋ ಹೇಳಬೇಕು ಎಂದುಕೊಂಡಳು—ಆದರೆ ಗಂಗವ್ವ ಅವಳು ಮಾತನಾಡಲು ಅವಕಾಶ ಕೊಡದೆ—

" ಪೂಜಾರಯ್ಯ ಕಾದಿರ್‍ತಾನೆ. ಬೇಗ ಮನೆಗೆ ಹೋಗು ಗಿರಿಜಾ "

ಗಂಗವ್ವ ಹೇಳಿದುದನ್ನು ಕೇಳಿ ಗಿರಿಜೆಗೆ ಊಟದ ವಿಷಯದಲ್ಲಿ ಹೆಚ್ಚು ಮಾತು ಬೆಳೆಸುವುದು ಆಕೆಗೆ ಬೇಕಾಗಿಲ್ಲವೆಂಬುದು ಅರಿವಾಯಿತು. ಮರುಮಾತನಾಡದೆ, ನಿಟ್ಟುಸಿರಿಟ್ಟು ಅಡುಗೆಯ ಪಾತ್ರೆಗಳನ್ನು ತೆಗೆದುಕೊಂಡು ಹೋದಳು. ಗಂಗವ್ವ ಗಿರಿಜೆ ಹೋಗುವುದನ್ನೇ ನೋಡುತ್ತಿದ್ದಳು.

ಗಿರಿಜ ಅಡಿಗೆಯ ಮನೆಯಿಂದ ಹೊರಬಂದುದನ್ನು ಕಂಡು, ಕುಳಿತಿದ್ದ ವೀರಣ್ಣ ಚುರುಕಾಗಿ ಎದ್ದು ನಿಂತು, ಬೇರಾರಿಗೂ ಕೇಳಿಸದಷ್ಟು ತಗ್ಗಿದ ಧ್ವನಿಯಲ್ಲಿ 'ಗಿರಿಜಾ' ಎಂದ.

ಆದರೆ ಅವಳವನಿಗೆ ಉತ್ತರ ಕೊಡದೆ, ಅವನ ಕಡೆಗೂ ನೋಡದೆ, ಅವನು ಅಲ್ಲಿರುವುದೇ ತಿಳಿಯದವಳಂತೆ ವೇಗವಾಗಿ ಹೊರಟು ಹೋದಳು. ಅದನ್ನು ನೋಡಿ ವೀರಣ್ಣನ ಮುಖಕ್ಕೆ ರಾಚಿದಂತಾಗಿ, ಅವನ ಮುಖ ವಿವರ್ಣವಾಗಿ, ನಿಂತವನು ಹಾಗೇ ನೆಲಕ್ಕೆ ಕುಸಿದ.

ಅದನ್ನು ನೋಡಿದ ಗಂಗವ್ವನ ಎದೆಗೆ ಏಕೋ ಬೆಂಕಿ ಹೊತ್ತಿಸಿದಂತಾಯಿತು.

೬

ಗಿರಿಜೆಯ ಎದೆಗೂ ಬೆಂಕಿ ಹೊತ್ತಿತ್ತು. ಗಂಗವ್ವನ ಮನೆಯಿಂದ ಹೊರಬೀಳುವ ವರೆಗೂ ಹೇಗೋ ತನ್ನೆದೆಯ ಅಳಲನ್ನೂ ತೋರಗೊಡದಿದ್ದಳು. ಆದರೆ ಆ ಹೊಸಲನ್ನು ದಾಟಿ, ತಂಪಾದ ಗಾಳಿ ಮುಖಕ್ಕೆ ಸೋಕುತ್ತಲೂ, ಅದುವರೆಗೂ ತಡೆದಿದ್ದ ಕಂಬನಿ ಉಕ್ಕಿ ಬಂದು, ಕಣ್ಣು ಕಾಣದಂತಾಗಿ, ನಡೆಯುವುದು ದುಸ್ತರವಾಯಿತು. ಆ ಮನೆಯಿಂದ ಮರೆಯಾಗುವ ವರೆಗೂ, ಹೇಗೋ ತಡವರಿಸುತ್ತಾ ನಡೆದು, ದಾರಿಯ ಬದಿಯಲ್ಲಿ ಬೆಳೆದಿದ್ದ ಹುಣಿಸೆಯ ಮರದಡಿಯಲ್ಲಿ ನಿಂತು, ದುಃಖಕ್ಕೆ ಬಿಗಿದ ಕಡಿವಾಣವನ್ನು ಸಡಲಿಸಿ ಅತ್ತಳು. ಅದು ಗಳಿಗೆಯ ಅಳುವಲ್ಲ, ಒಂದು ದಿನದ ದುಃಖವಲ್ಲ.

ನಾಯಕರ ವಿರುದ್ಧ ದಂಗೆ ಎದ್ದ ಸೈನಿಕರ ಮುಖಂಡನಾಗಿ ಬಂದ ವೀರಣ್ಣನನ್ನು ಕಂಡಾಗಲಿಂದಲೂ, ಅವಳು ಕಟ್ಟಿಕೊಂಡಿದ್ದ ಯಾವುದೋ

ಭವ್ಯ ಸ್ವಪ್ನ ಸೌಧ ಕಡಿದು ಬಿದ್ದು ಅದರಡಿಯಲ್ಲಿ ಕಂಬನಿಯ ಕಾಸಾರ ನಿರ್ಮಾಣವಾಗಿ, ದಿನದಿನಕ್ಕೆ ಗಳಿಗೆಗಳಿಗೆಗೆ ಅದು ತುಂಬುತ್ತಾ ಬಂದಿತ್ತು.

ನಾಗತಿಗೆ ಬಹಳ ಹತ್ತಿರವಿದ್ದು ಆಕೆಯ ಜೀವನದ ನಿಕಟಪರಿಚಯವನ್ನು ಪಡೆದಿದ್ದ ಗಿರಿಜೆಗೆ, ನಾಗತಿ ಎಂದರೆ ಅಪರೂಪಕ್ಕೆ ನೆಲದ ಮೇಲೆ ಅವತರಿಸಿದ ದೇವತೆ ಎಂಬ ಭಾವನೆಯಿತ್ತು. ಆಕೆಯ ನುಡಿ ಇವಳಿಗೆ ವೇದವಾಕ್ಯವಾಗಿತ್ತು. ನಾಗತಿ ಹೆಜ್ಜೆ ಇಟ್ಟ ಎಡೆಯಲ್ಲಿ ಸ್ವರ್ಗ ನಿರ್ಮಾಣವಾಗುತ್ತದೆ, ಆ ದೇವತೆಯ ಮನಸಿಗೆ ಎಳ್ಳುಕಾಳು ಮುಳ್ಳುಮೊನೆಯಷ್ಟು ನೋವುಂಟು ಮಾಡಿದವರೂ ಆರಾರು ಜನ್ಮ ನರಕದಲ್ಲಿ ನರಳುತ್ತಾರೆ ಎಂಬುದು ಅವಳ ಭದ್ರ ನಂಬಿಕೆಯಾಗಿತ್ತು. ನಾಗತಿಯ ಪ್ರೀತಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಲು ಗಿರಿಜೆ ಸಿದ್ಧವಾಗಿದ್ದಳು. ಆಕೆಯ ಅಪ್ಪಣೆಯಾದರೆ ಕಿಚ್ಚಿನ ಕುಂಡದಲ್ಲಿ ಹಾರಲೂ ಅವಳು ಹಿಂದೆಗೆಯುತ್ತಿರಲಿಲ್ಲ.

ಅಲ್ಲದೆ—ಅಂಥ ನಾಗತಿಗೆ ಯಾರಾದರೂ ಮನನೋಯಿಸಬಹುದು, ಆಕೆ ಕಂಬನಿಗರೆಯುವಂಥ ಕೃತಿಯನ್ನು ಮಾಡಬಹುದು ಎಂಬುದು ಅವಳ ಕಲ್ಪನೆಗೂ ನಿಲುಕದ ಮಾತಾಗಿತ್ತು. ಈಚೀಚೆಗೆ ಬೆಳೆದ ರಾಜಕೀಯ, ನಾಗತಿಯ ಹೂವಿನ ಹೃದಯವನ್ನು ದಿನದಿನವೂ ಹಿಂಡುವುದನ್ನು ಕಂಡು ಅವಳಲ್ಲಿ ಕ್ರೋಧ ಜಾಗ್ರತವಾಗಿತ್ತು. ಸಾಧ್ಯವಿದ್ದಿದ್ದರೆ, ಅವಳು ನಾಗತಿಯ ನೋವಿಗೆ ಕಾರಣವಾದ ಲೋಕಕ್ಕೇ ಬೆಂಕಿ ಇಡಲು ತಯಾರಾಗಿದ್ದಳು. ಆದರೆ ಕೈಸಾಗದೆ, ಷಂಢಕ್ರೋಧದ ಉರಿಮುಷ್ಟಿಯಲ್ಲಿ ಸಿಲುಕಿ ನರಳುತ್ತಿದ್ದ ಗಿರಿಜಾ, ಸೈನಿಕರೇ ಆಕೆಯ ಇದಿರು ಗಟ್ಟಿಸಿ ಮಾತನಾಡುವ ಮಟ್ಟವನ್ನು ಮುಟ್ಟಿದ ದಿನ ಕೆರಳಿದ ಕಾಳಿಯಾಗಿದ್ದಳು, ಆ ದಿನ ಆ ಸೈನಿಕರ ಮುಂದಾಳಾಗಿ ಬಂದ ತನ್ನ ಎದೆಯಾಣ್ಮ ವೀರಣ್ಣನನ್ನು ಕಂಡು ಒಂದು ಗಳಿಗೆ ತನ್ನ ಕಣ್ಣನ್ನೇ ನಂಬುವುದು ಅವಳಿಗೆ ಅಸಾಧ್ಯವಾಗಿತ್ತು. ಆದರೆ ಕನಸಿನಂತೆ ಕಾಣುವ ಆ ಘೋರ ಕಠೋರ ಸತ್ಯವೆಂದು ಮನವರಿಕೆಯಾದ ಗಳಿಗೆಯಲ್ಲಿ ಅವಳ ಬಾಳನ್ನು ಆವರಿಸಿದ್ದ ಸಪ್ತವರ್ಣದ ಸುರಸುಂದರ ಬುದ್ಬುದ ಸಿಡಿಮೊಡೆದು ಸಹಸ್ರ ಪಾಲಾಗಿ ಹೋಯಿತು. ನೂರು ಬಗೆಯ ಕನಸುಗಳ ನರುಗುಂಪು ಬೀರುವ ಬಯಕೆಯ ಹೂವುಗಳು ಅರಳಿದ್ದ

ಅವಳ ಮನೋನಂದನದಲ್ಲಿ ಭಯಂಕರ ನಿರಾಶೆಯ ಮರುಭೂಮಿ ಕಾಲು ಚಾಚಲಾರಂಭಿಸಿತು.

ಈ ಭೀಕರ ಭಾವನೆಯ ವಿರುದ್ಧ ಭಯಂಕರ ಮಾನಸಿಕ ಹೋರಾಟ ಹೂಡಿಯೂ ಅದನ್ನು ಗೆಲ್ಲಲು ಅಸಮರ್ಥಳಾಗಿದ್ದಳು ಗಿರಿಜೆ. ಒಂದು ಬಗೆಯ ನಿರಾಶೆಯ ವಿರುದ್ಧ ಮತ್ತೊಂದು ಬಗೆಯ ಆಸೆಯನ್ನು ಹೂಡಿ ಗೆಲ್ಲಲು ಯತ್ನಿಸಿ, ಗೆಲ್ಲಲಾರದೆ, ಕಳ್ಳ ಉಸುಗಿನಲ್ಲಿ ಸಿಲುಕಿದಾತ ಹೋರಾಟ ವಿಫಲವೆಂದರಿತು, ಗಳಿಗೆಗಳಿಗೆಗೆ ಉಸಿರು ಕಟ್ಟಿ ಕೊಲ್ಲುವ ಸಾವಿ ನಾಳಕ್ಕೆ ಇಳಿಯುವವನಂತೆ, ನಿರಾಶೆಯಲ್ಲಿ ನಿಧಾನವಾಗಿ ಮುಳುಗಲಾರಂಭಿಸಿದ್ದಳು.

ಆದರೆ ಈ ಎರಡು ದಿನ—ಅರಮನೆಯನ್ನು ಹತ್ತಾರು ಬಗೆಯ ಕಾತರತೆ, ಗದ್ದಲುಗಳು ಕವಿದ ಹೊತ್ತಿನಲ್ಲಿ ಅವಳಿಗೆ ತನ್ನ ನಿರಾಶೆಯ ಸಂಪೂರ್ಣ ಚಿತ್ರವನ್ನು ಕಣ್ಣೆದುರಿಗಿಟ್ಟುಕೊಂಡು ನೋಡಲು ಅವಕಾಶವಾಗಿರಲಿಲ್ಲ. ಈಗ ಹಳ್ಳಿಗೆ ಹಿಂದುರುಗಿದ ಮೇಲೆ ಗಂಗವ್ವನ ಕಣ್ಣಲ್ಲಿ ಕಂಬನಿಯನ್ನು ಕಂಡ ಮೇಲೆ, ತನ್ನ ಗಂಡನ ಸುದ್ದಿಗಾಗಿ ಮೈಯೆಲ್ಲ ಕಿವಿಯಾಗಿ ಕಾದು ನಿಂತ ಆ ಮಮತೆಯ ಪುತ್ಥಳಿಗೆ, ವೀರಣ್ಣ ತನ್ನ ಅಣ್ಣನ ಸುದ್ದಿಯನ್ನು ತಿಳಿಮೂ ಹೇಳಲಿಲ್ಲ ಎಂಬುದು ತಿಳಿದಾಗ, ಅದುವರೆಗೂ ಎಲ್ಲೋ ಮಲಗಿದ ನಿರಾಶೆ ಎಚ್ಚತ್ತು ಕುಣಿಯಲಾರಂಭಿಸಿತು.

ವೀರಣ್ಣನನ್ನು ನೋಡಿಯೂ ನೋಡದವಳಂತೆ, ಅವನ ಮಾತು ಕೇಳಿಯೂ ಕೇಳಿಸದವಳಂತೆ, ಹೊರಬಂದಿದ್ದಳಾಕೆ. ಹಾಗೆ ಬರುವಾಗ, ಬಲವಾದ ಮುಳ್ಳಿಗೆ ಸಿಕ್ಕಿದ ನವಿರಾದ ಬಟ್ಟೆಯಂತೆ ಅವಳ ಹೃದಯ ಚಿಂದಿ ಚಿಂದಿಯಾಗಿ ಹರಿದುಹೋಗಿತ್ತು.

ಆ ವ್ಯಥೆಯನ್ನು ತಡೆಯಲಾರದೆ, ಅದನ್ನು ಜೀರೆಯುವರಿಗೆ ತೋರಿಗೊಡಲಾಗದೆ, ಪರದೇಶಿಯಂತೆ ಮಾರ್ಗದ ಬದಿಯ ಮರದ ಕೆಳಗೆ ನಿಂತು ಅಳಲಾರಂಬಿಸಿದಳು ಗಿರಿಜಾ. ಆ ಅಳುವಿನಲ್ಲಿ ಸುತ್ತಲ ಜಗತ್ತಿನ ನೆನಪೇ ಮರೆತು ಹೋಯಿತು ಅವಳಿಗೆ. ಅವಳನ್ನು ವೀರಣ್ಣ ಹಿಂಬಾಲಿಸಿ ಬಂದುದು, ಅವನು ಅವಳ ಪಕ್ಕದಲ್ಲಿಯೇ ನಿಂತು ಹತ್ತಾರು ಬಾರಿ ಕೂಗುವ ವರೆಗೂ ತಿಳಿಯಲಿಲ್ಲ. ಮೈ ಅರಿವು ಮರಳಿದಾಗ, ಬಳಿಯಲ್ಲಿ

ನಿಂತ ಅವನನ್ನು ಕತ್ತಲಲ್ಲಿ ಅಸ್ಪಷ್ಟವಾಗಿ ಕಂಡು, ಚಟಕ್ಕನೆ ದೂರ ಸರಿದು ನಿಂತಳು.

" ನನ್ನ ಮೇಲೆ ಅಷ್ಟು ಸಿಟ್ಟೇ ಗಿರಿಜಾ ? "

—ಅವಳ ನಡತೆಯಿಂದ ತನಗಾದ ವ್ಯಥೆಯೆಲ್ಲವನ್ನೂ ಆ ಮಾತಿನಲ್ಲಿ ತುಂಬಿ ಕೇಳಿದ ವೀರಣ್ಣ; ಅವನ ಮಾತು ಕೇಳಿದ ಕೂಡಲೇ ಒಂದು ಗಳಿಗೆ ಅವಳಿಗೆ ತನ್ನ ಭಯ, ನಿರಾಶೆ ಎಲ್ಲವೂ ಮರೆತು, ಕಣ್ಣಿದಿರು ಆಶೆಯ ಕೋಲುಮಿಂಚು ನರ್ತಿಸಿದಂತಾಯಿತು. ಮಂತ್ರವಾದಿಯ ಮಾಟಕ್ಕೆ ತಟಕ್ಕನೆ ಓಟೆಯಿಂದ ಚಿಗಿತು ಫಲಬಿಡುವ ಮಾವಿನ ಗಿಡದಂತೆ, ಆಶೆಯೊಂದು ಬೆಳೆದು ನಿಂತಿತು. ಇದುವರೆಗೂ ತಾನು ಕಂಡುದೆಲ್ಲಾ ಕರಾಳ ಕನಸು ಮಾತ್ರ, ಸತ್ಯವಲ್ಲವೇನೋ ಎನಿಸಿತು. ಆ ಆಸೆ ತುಂಬಿದ ಕಣ್ಣುಗಳಿಂದಲೇ ಅವನತ್ತ, ಮಾತನಾಡದೆ ನೋಡಿದಳು. ತನ್ನ ಪ್ರಶ್ನೆಗೆ ಅವಳು ಉತ್ತರ ಕೊಡದಿದ್ದುದನ್ನು ಕಂಡು ಅವನೇ ಮತ್ತೆ ಮಾತನಾಡಿದ.

" ಏಕೆ ಗಿರಿಜಾ ! ನನ್ನ ಮಾತಿಗೆ ಉತ್ತರ ಕೊಡುವ ಇಚ್ಛೆಯೂ ನಿನಗಿಲ್ಲದಿದ್ದರೆ ಹೇಳು ಹೊರಟು ಹೋಗುತ್ತೇನೆ. ಬೇಡವಾದರೂ ನಿಂತು ನಿನ್ನ ಮನಸ್ಸನ್ನು ನೋಯಿಸುವ ಮನಸು ನನಗಿಲ್ಲ."

ಯಾವುದೋ ಸುಂದರ ಸ್ವಪ್ನದರ್ಶನದಲ್ಲಿ ತನ್ಮಯಳಾಗಿದ್ದ ಗಿರಿಜೆಗೆ ಆ ಮಾತಿಗೂ ಉತ್ತರ ಕೊಡಬೇಕೆಂಬುದು ತೋಚಲಿಲ್ಲ. ಯಾವುದೋ ಅಮೃತ ತೃಪ್ತಿಯ ಸಮಾಧಿಯಲ್ಲಿದ್ದಂತಿದ್ದಳವಳು.

" ಸರಿ ಹಾಗಾದರೆ. ನಾನಿನ್ನು ಬರುತ್ತೇನೆ ಗಿರಿಜಾ. ಈ ಮಟ್ಟಿಗೆ ನಿನ್ನೆದೆ ಕಲ್ಲಾಗಬಹುದೆಂದು ನಾನು ಕನಸುಮನಸಿನಲ್ಲಿಯೂ ಊಹಿಸಿರಲಿಲ್ಲ. ಕಾಪಾಡುವ ದೈವವೇ ಕಾಡುವ ವಿಧಿಯಾಗಿ ಪರಿಣಮಿಸಿದಾಗ, ಹಿಡಿದ ಹೂಮಾಲೆಯೂ ಸರ್ಪವಾಗಲೇಬೇಕು. ಈಗ ಹಾಗಾಗಿದೆ ಎಂದು ಗೊತ್ತಾಯಿತು. ಬರುತ್ತೇನೆ ಗಿರಿಜಾ. ಎಂದಾದರೂ ನೆನಪು ಬಂದಾಗ ನಿಟ್ಟುಸಿರಿಟ್ಟು ಮರೆತುಬಿಡು ನನ್ನನ್ನು."

—ಎಂದು ವೀರಣ್ಣ ಅವಳತ್ತ ಬೆನ್ನುಮಾಡಿ ಹೊರಟ. ಅವನು ಹೊರಡಲು ಎರಡು ಹೆಜ್ಜೆ ಆಚೆ ಹೋದ ಮೇಲೆ ಗಿರಿಜೆಗೆ ಮೈಯರಿವು ಬಂದು, ಹೊರಡಲಿದ್ದ ಅವನನ್ನು ಕೂಗಿ ತಡೆದಳು.

" ನಿಲ್ಲಿ. ಒಂದು ಗಳಿಗೆ ನಿಲ್ಲಿ."

ಅವಳ ಕಂಠಧ್ವನಿಯಲ್ಲಿದ್ದ ಆರ್ತತೆಯನ್ನು ಗಮನಿಸಿ ಚಕಿತನಾಗಿ ಹಿಂದಕ್ಕೆ ತಿರುಗಿದ ವೀರಣ್ಣ.

" ಏನು ಗಿರಿಜ? ಇಷ್ಟು ಬೇಡಿದ ಮೇಲೆ ಮಾತನಾಡುವ ದಯ ಬಂದಿತೋ? ನನ್ನಲ್ಲಿ ಇಷ್ಟೇಕೆ ಸಿಟ್ಟಾದೆ ಗಿರಿಜಾ?"

—ವೀರಣ್ಣನ ಪ್ರಶ್ನೆಯನ್ನು ಕೇಳಿ ಒಂದು ಗಳಿಗೆ ಅವಳು ಮರೆತಿದ್ದ ಲೋಕವೆಲ್ಲವೂ ಮತ್ತೆ ಕಣ್ಣೆದಿರು ಪ್ರತ್ಯಕ್ಷವಾಯಿತು.

" ನಿಮ್ಮನ್ನೊಂದು ಮಾತು ಕೇಳುತ್ತೇನೆ. ಸತ್ಯವಾದ ಉತ್ತರ ಕೊಡುತ್ತೀರಾ?"

ಅವಳ ಧ್ವನಿಯಲ್ಲಿ ಮೊದಲಿನ ಆರ್ತತೆಯಿರಲಿಲ್ಲ. ಅಪರಾಧಿಯನ್ನು ಪ್ರಶ್ನಿಸುವ ನ್ಯಾಯವಾದಿಯ ಮಾತಿನ ತೀವ್ರತೆಯಿತ್ತು.

" ಕೇಳು ಗಿರಿಜಾ, ನಿನ್ನೊಂದಿಗೆ ನಾನೆಂದೂ ಸುಳ್ಳಾಡುವುದಿಲ್ಲ."

" ಆ ದಿನ ದಂಗೆಕೋರರೊಂದಿಗೆ ನಾಗತಿಯನ್ನು ಅಪಮಾನಿಸಲು ಬಂದಿದ್ದಿರಲ್ಲವೇ ನೀವು?"

" ಹೌದು."

" ನೀವಾಗಿಯೇ ಬಂದಿರಾ? ಅಥವಾ ಯಾರಾದರೂ ಬಲವಂತವಾಗಿ ನಿಮ್ಮನ್ನು ಅಲ್ಲಿಗೆ ಕರೆತಂದರೋ?"

" ಏಕೆ? ಯಾರಾದರೂ ಬಲವಂತವಾಗಿ ಕರೆತರಲು ನಾನೇನು ಹುಸುಳೆಯೇ ಗಿರಿಜಾ?"

" ಅಂದರೆ....ಅಂದರೆ....ನೀವೇ ಮನವೊಪ್ಪಿ ಬಂದಿರಾ ಅಲ್ಲಿಗೆ?"

" ಅಹುದು."

" ಏಕೆ?"

" ಅರಮನೆಯವರು ನಮಗೆ ಮಾಡಿದ ಅಪಮಾನವನ್ನು ಪ್ರತಿಭಟಿಸಲು; ಅವರ ಮುಯ್ಯಿ ತೀರಿಸಲು; ಸೈನಿಕರು ಕಾಲಕಸವಲ್ಲ ಎಂಬುದನ್ನು ತೋರಿಸಿಕೊಡಲು."

" ನಿಜವೇ ಇದು?"

ಆ ಪ್ರಶ್ನೆಯನ್ನು ಕೇಳಿದ ಗಿರಿಜೆಯ ಧ್ವನಿ ಬಹು ವಿಚಿತ್ರವಾಗಿತ್ತು.

ಅವರ ಅಂತರಾಳದಲ್ಲಿ ಯಾವ ಭಾವ ಹುದುಗಿತ್ತೆಂಬುದು ವೀರಣ್ಣನಿಗೆ ಅರಿವಾಗಲಿಲ್ಲ.

"ಹೀಗೇಕೆ ಕೇಳುತ್ತೀಯ ಗಿರಿಜಾ? ನಿನ್ನ ಪ್ರಶ್ನೆಯೇ ನನಗೆ ಅರ್ಥವಾಗುತ್ತಿಲ್ಲ."

"ಊಹೂ. ಹಾಗಲ್ಲ."

"ಅಂದರೆ....?"

"ನನ್ನನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ನೀವಿಲ್ಲ."

"ನಿನ್ನನ್ನು ನಾನು ಅರ್ಥಮಾಡಿಕೊಂಡಿಲ್ಲವೇ ಗಿರಿಜಾ? ನಿನ್ನನ್ನು ನಾನಲ್ಲದೆ ಮತ್ತಾರು ಅರ್ಥಮಾಡಿಕೊಳ್ಳಬಲ್ಲರು. ನನ್ನ ಬಾಳು ನಿನ್ನದು ಗಿರಿಜಾ—ನಿನಗಾಗಿಯೇ ಈ ಹೋರಾಟ."

"ಯಾವ ಹೋರಾಟ? ನಾಗತಿಯವರಿಗೆ ಅಪಮಾನಮಾಡಿದುದೇ? ದೊಂಬಿಯ ಮುಖಂಡರಾಗಿ ಬಂದುದೇ?"

"ಅದೆಲ್ಲವೂ ಆ ಹೋರಾಟದ ಒಂದು ಅಂಗ."

"ಹಾಗಾದರೆ ಏನು ನಿಮ್ಮ ಹೋರಾಟ?"

"ನನ್ನ ಗಿರಿಜೆಯನ್ನು ದಳವಾಯಿಯ ಪತ್ನಿಯನ್ನಾಗಿ ಮಾಡಬೇಕೆಂಬುದೇ ನನ್ನ ಬಾಳ ಹೆಬ್ಬಯಕೆ. ಗಿರಿಜಾ, ಸಾಮಾನ್ಯ ಸೈನಿಕನ ಮಡದಿಯಾಗಲು ತಕ್ಕವಳಲ್ಲ. ಸ್ವರ್ಗದ ಹೂವನ್ನು ನೆಲದಲ್ಲಿ ಹೊರಳಿಸಿದಂತಾಗುತ್ತದೆ ಹಾಗಾದರೆ. ಅದಕ್ಕಾಗಿಯೇ ಈ ಹೋರಾಟವೆಲ್ಲಾ. ಇದರಲ್ಲಿ ನೀನು ನನಗೆ ನೆರವಾಗಬೇಕು ಗಿರಿಜಾ. ನೀನಲ್ಲದೆ ಇದನ್ನು ಜೇರೆಯಾರೂ ಅರ್ಥಮಾಡಿಕೊಳ್ಳಲಾರರು. ಜೇರೆ ಯಾರೂ ನನ್ನಲ್ಲಿ ಸಹಾನುಭೂತಿ ತೋರಿಸಲಾರರು. ಇವರಲ್ಲಿ ನೆರವು ಬಯಸಿ ಬೆನ್ನಲ್ಲಿ ಬಿದ್ದ ಅಣ್ಣನ ಬಳಿ ಹೋದರೆ, ಆತ ಪರಕೀಯನಂತೆ ನಡಸಿಕೊಂಡ. ನನ್ನ ಭವಿಷ್ಯಕ್ಕಿಂತ ಅರಮನೆಯ ಭಕ್ತಿಯೇ ಅವನಿಗೆ ಮಿಗಿಲಾಯಿತು. ನನ್ನ ಬೇಡಿಕೆಯನ್ನವನು ನಿರಾಕರಿಸಿದ ಗಿರಿಜಾ. ಭಿಕ್ಷೆ ಬೇಡ ಬಂದ ನಾಯಿಯಂತೆ ನನ್ನನ್ನು ದೂರಮಾಡಿದ. ಈಗ ನನ್ನ ಪಾಲಿಗೆ ಉಳಿದಿರುವವಳು ನೀನೊಬ್ಬಳೇ ಗಿರಿಜಾ....ನೀನು ಕಾಣೆ ಗಿರಿಜಾ—ದಳವಾಯಿ ಪದವಿಗೂ ನನಗೂ ನಡುವೆ ಇರುವ ಅಂತರ ಬಹು ಅಲ್ಪ. ನಿನ್ನ ಒಂದು ಮಾತಿನಿಂದ ನನ್ನ ಕನಸು ನನಸಾಗುವುದು."

ವೀರಣ್ಣನ ಹೃದಯದಲ್ಲಿದ್ದ ಬಹು ದಿನಗಳ ಬಯಕೆಯ ಉಗ್ರತೆ ಅವನ ಮಾತಿನಲ್ಲಿ ತಾನೇ ತಾನಾಗಿ ಕೂಗಿತು. ಅದರ ಪ್ರಖರತೆಯನ್ನು ಕಂಡು ಬೆಚ್ಚಿದಳು ಗಿರಿಜಾ.

"ನನ್ನಿಂದ ಏನಾಗಬೇಕು ಹೇಳಿ?"

"ಬಹಳ ಸಣ್ಣ ವಿಷಯ. ಒಂದು ಮಾತು?"

"ಏನು ಮಾತು?"

"ನಾವೆಲ್ಲರೂ ಹೊಸ ನಾಯಕರನ್ನು ಕಂಡು ಅವರಿಂದ ಒಂದು ಭರವಸೆ ಪಡೆಯಬೇಕೆಂದಿದೇವೆ."

"ಏನು ಭರವಸೆ?"

"ಸೇನೆಗಾಗುತ್ತಿರುವ ಅಪಮಾನವನ್ನು ತೀರಿಸುವ ಮಾತು ಅದು."

—ವೀರಣ್ಣನ ಮಾತಿನಲ್ಲಿ ಮೊದಲಿದ್ದ ಸ್ವಾಭಾವಿಕತೆ ಮಾಯವಾಗಿ ಏನೋ ಒಂದು ಬಗೆಯ ಕೃತ್ರಿಮತೆ ಅದರ ಸ್ಥಾನವನ್ನು ಆಕ್ರಮಿಸಿದ್ದುದು ಗಿರಿಜೆಗೆ ತಟಕ್ಕನೆ ಅರಿವಾಯಿತು. ಆದರೂ ಅವನ್ನು ತೋರಗೊಡದೆ ಕೇಳಿದಳು.

"ಅದಕ್ಕೆ ನಾನೇನು ಮಾಡಬೇಕು?"

"ಅರಮನೆಯವರು ನಾವು ನಾಯಕರನ್ನು ಕಾಣದಂತೆ ಮಾಡಿದಾರೆ. ನನಗಿಷ್ಟು ಗೊತ್ತು—ಆ ದಿನ ಗಲಭೆಯಾದಂದಿನಿಂದ ಅವರು ಅರಮನೆಯಲ್ಲೂ ಇಲ್ಲ."

—ಆ ಮಾತನ್ನು ಕೇಳಿ ಗಿರಿಜಾ ಭೂತದರ್ಶನವಾದಂತೆ ಬೆಚ್ಚಿದಳು. ಅರಮನೆಯ ಬಹುರಹಸ್ಯದ ಮಾತು ಹೇಗೆ ತಿಳಿಯಿತು ಇವನಿಗೆ? ಆ ಕೂಡಲೇ ಅವಳಲ್ಲಿ ಹೊಸಬಗೆಯ ಎಚ್ಚರಿಕೆಯೊಂದು ಜಾಗೃತವಾಯಿತು. ಚುರುಕಾಗಿ ಕೇಳಿದಳು.

"ಯಾರು ಹೇಳಿದರು ನಿಮಗಿದನ್ನು? ಕಸ್ತೂರಣ್ಣನೇ?"

"ಅಣ್ಣನೇ? ಅಂಥ ಪುಣ್ಯವನ್ನೆ ನಾನು ಪಡೆದು ಬಂದಿಲ್ಲ." ನಿರಾಶೆಯ ಕರ್ಕಶ ಧ್ವನಿಯಲ್ಲಿ ಹೇಳಿದ ವೀರಣ್ಣ. ಅಣ್ಣನಿಂದ ಅರಮನೆಯ ಮಾತು ಹೊರಡಿಸುವುದು, ಮರಳಿನಲ್ಲಿ ಎಣ್ಣೆ ತೆಗೆಯುವುದು ಎರಡೂ ಒಂದೇ."

—ಆ ಮಾತು ಕೇಳಿ ಗಿರಿಜೆಯ ಹೃದಯಕ್ಕಾದ್ದ ಹರ್ಷ ವೀರಣ್ಣನಿಗೆ ಅರಿವಾಗಲಿಲ್ಲ.

" ಹಾಗಾದರೆ ಮತ್ತೆ ಯಾರು ಹೇಳಿದರು ? "

" ಯಾರೆಂಬುದನ್ನು ನಾನು ಹೇಳಲಾರೆ. ಆದರೂ ನಮಗೆ ಅದು ತಿಳಿದಿದೆ. ನೀನು ಮಾಡಬೇಕಾದುದಿಷ್ಟೆ."

" ಏನು ? "

" ನಾಯಕರನ್ನು ಎಲ್ಲಿಟ್ಟಿದ್ದಾರೆಂದು ಹೇಳಬಲ್ಲೆಯಾ ಗಿರಿಜಾ. ಒಮ್ಮೆ ಅವರನ್ನು ನಾವು ಕಂಡರೆ ಈ ಎಲ್ಲ ಹೋರಾಟ ಮುಗಿದು ನನ್ನ ಕನಸು ನನಸಾಗುತ್ತದೆ."

" ನಾಯಕರನ್ನು ಕಾಣಬೇಕೆಂದಿರುವರು ಯಾರು ? "

" ದಳವಾಯಿಗಳು."

" ಯಾವ ದಳವಾಯಿಗಳು? ದಳವಾಯಿಗಳನ್ನು ಕೊಂದ ದಳವಾಯಿಗಳೇ."

" ಅಲ್ಲ. ಬೇರೆಯವರು."

—ವೀರಣ್ಣ ತನ್ನ ಪ್ರಶ್ನೆಗೆ ಸುಳ್ಳು ಹೇಳಿದನೆಂಬುದು ತಟಕ್ಕನೆ ತಿಳಿದು ಗಿರಿಜೆಯ ಹೃದಯಕ್ಕೆ ಅಪಾರ ವ್ಯಥೆಯಾಯಿತು. ಭಯಂಕರ ನಿರಾಶೆ ಕಾಳ್ಗಿಚ್ಚಿನಂತೆ ಧಿಗ್ಗನೆ ಉರಿದೆದ್ದು, ಅವಳೆದೆಯೊಳಗೆ ಹೊಸದಾಗಿ ಚಿಗುರಿದ ಆಸೆಗಳನ್ನೆಲ್ಲವನ್ನು ಸುಟ್ಟು, ಅವನ ಬಗ್ಗೆ ಅನಂತ ತಾತ್ಸಾರವನ್ನು ಬೆಳಸಿತು. ಇಷ್ಟೆಯೋ ಇವನು ಪ್ರೇಮಕ್ಕೆ ಕೊಡುವ ಬೆಲೆ ? ಒಂದು ಗಳಿಗೆ ಯಾವುದೋ ಮಧುರ ಭಾವನೆಯ ಜಲ ಒಸರಿದ ಅವಳ ಹೃದಯ ಮತ್ತೆ ಶಿಲೆಯಾಯಿತು.

" ಯಾರಾದರೂ ನೋಡಿ, ಯಾರಾದರೂ ಬಿಡಿ. ಅದು ನಿಮ್ಮ ನಾಯಕರ ಮಾತು. ಊಳಿಗದ ಹೆಣ್ಣು ನನಗೇಕೆ ಆ ಮಾತೆಲ್ಲಾ."

—ಎಂದಳು ಗಿರಿಜ. ಅವಳ ಮಾತನ್ನು ಕೇಳಿ ಅವನ ಹೃದಯದಲ್ಲಿ ಸಿಟ್ಟು ಉಕ್ಕಿಬಂತು. ಮಸೆದ ಅಲಗಿನಂತೆ ಹರಿತವಾದ ಧ್ವನಿಯಲ್ಲಿ ಕೇಳಿದ.

" ನಿನ್ನಿಂದಲೂ ಇದೇ ಉತ್ತರವೇ ? ನನ್ನವರು ಎಂದು ಕೊಂಡು

ಎಲ್ಲರಿಂದರೂ ಈ ಬೆನ್ನಿರಿತವೇ ಪ್ರತಿಫಲವೇ? ಗಿರಿಜಾ ನನಗೆ ಮೋಸ ಮಾಡಬೇಡ. ನಿಜ ಹೇಳು. ನಾಯಕರು ಎಲ್ಲಿದಾರೆಂಬುದು ನಿನಗೆ ಗೊತ್ತು. ನಿನಗೆ ತಿಳಿಯದ ಅರಮನೆಯ ಗುಟ್ಟು ಯಾವುದೂ ಇಲ್ಲ. ನೀನು ಬಯಸಿದರೆ, ಒಂದು ಮಾತಿನಿಂದ—ಒಂದೇ ಒಂದು ಮಾತಿನಿಂದ ನನ್ನನ್ನು ದಳಪತಿಯನ್ನಾಗಿ ಮಾಡಬಹುದು. ಇಲ್ಲವೇ ನನ್ನ ಬಾಳಿನ ಬಯಕೆಯನ್ನು ಸುಟ್ಟುಬೂದಿಮಾಡಬಹುದು. ನೆಚ್ಚಿದ ಅಣ್ಣ ನನ್ನನ್ನು ಕೈಬಿಟ್ಟ. ನನ್ನ ಪಾಲಿಗೆ ಉಳಿದಿರುವಳು ನೀನೊಬ್ಬಳು. ಹೇಳು—ನೀನೂ ನನ್ನ ಕೈಬಿಡುವೆಯಾ?"

"ನಿಮ್ಮನ್ನು ಕೈಬಿಡಬೇಕೆಂಬ ಬಯಕೆ ನನಗಿಲ್ಲ. ನಿಮಗೂ ಆ ಬಯಕೆ ಇಲ್ಲವಾದರೆ ನನ್ನ ಒಂದೇ ಒಂದು ಮಾತು ನಡಸಿಕೊಡುತ್ತೀರಾ?"

—ಆರ್ತತೆಯೆ ಮೈವೆತ್ತಂತೆ ಕೇಳಿದಳು ಗಿರಿಜಾ.

"ಏನು?"

"ಈ ದಳವಾಯಿತನದ ಹುಚ್ಚು ಬಿಡಿ. ನಿಮಗೆ ಸೇನೆಯೂ ಬೇಡ, ನನಗೆ ಅರಮನೆಯೂ ಬೇಡ. ಈ ಗೊಂದಲವನ್ನು ಬಿಟ್ಟು ನಾವಿಬ್ಬರೇ ಎಲ್ಲಿಯಾದರೂ ಹಾಯಾಗಿ ಬಾಳೋಣ."

ಅವಳ ಮಾತನ್ನು ಕೇಳಿ ಬೆಚ್ಚಿದ ವೀರಣ್ಣ.

"ಏನೆಂದೆ ಗಿರಿಜ—ದಳವಾಯಿತನದ ಹುಚ್ಚು ಬಿಡಬೇಕೇ? ಹುಚ್ಚಲ್ಲ ಗಿರಿಜಾ, ಆ ಬಯಕೆ ನನ್ನ ಬಾಳ ಆಧಾರಸ್ತಂಭ."

"ಸರಿ—ಹಾಗಾದರೆ ನಮ್ಮಿಬ್ಬರಮೂ ಕವಲುದಾರಿ."

—ಎಂದವಳೇ ಗಿರಿಜ ಅವನ ಪ್ರತ್ಯುತ್ತರಕ್ಕೂ ಕಾಯದೆ ವೇಗವಾಗಿ ತನ್ನ ಮನೆಯತ್ತ ನಡೆದಳು. ಅವಳ ತಿರುಗಿದ ಬೆನ್ನು ಇಡೀ ಲೋಕ ತಿರಸ್ಕಾರದಂತೆ ವೀರಣ್ಣನ ಮೊಗದ ಮೇಲೆ ಅಪ್ಪಳಿಸಿ ಅದಮ್ಯ ಕ್ರೋಧ ಅವನೆದೆಯೊಳಗೆ ಕಡೆದು ಬಂತು. ಆ ಕ್ರೋಧದಲ್ಲಿ ಎಚ್ಚರಿಕೆಯನ್ನು ಮರೆತು ಕೂಗಿ ಹೇಳಿದ—

"ಹೋಗು ಗಿರಿಜಾ, ಹೋಗು. ಆದರೆ ನೀನಾಗಲಿ, ನನ್ನ ಅಣ್ಣನಾಗಲಿ ಯಾರೂ ನಾಯಕನನ್ನು ಉಳಿಸಲಾರರು."

ಆ ದಾರುಣ ವಾರ್ತೆಯನ್ನು ಕೇಳಿದ ಗಿರಿಜೆಗೆ ನಿಂತಲ್ಲೇ ನೆಲಕ್ಕೆ

ಕುಸಿಯುವಂತಾಯಿತು. ಏನೋ ಭೀತಿ ಅವಳ ಹೃದಯವನ್ನು ಕವಿಯಿತು. ಕೂಡಲೇ ಏನೋ ನಿರ್ಧಾರಕ್ಕೆ ಬಂದು, ಬಿರುಗಾಳಿಯ ವೇಗದಲ್ಲಿ ಮನೆಯತ್ತ ನಡೆದಳು.

* * * * *

ತನ್ನತ್ತ ಬೆನ್ನು ತಿರುಗಿಸಿ ನಡೆದ ಗಿರಿಜಾ, ಕತ್ತಲೆಯಲ್ಲಿ ಕಣ್ಣಿಗೆ ಕಾಣದಂತೆ ಕರಗಿ ಹೋದಾಗ ವೀರಣ್ಣನಿಗೆ ಅವನ ಪಾಲಿನ ಜಗತ್ತೆಲ್ಲವೂ, ದಗ್ಧವಾಗಿ, ಅವನ ಸುತ್ತಲೂ ಬರಿಯ ಬೂದಿಯೇ ಹರಡಿದಂತಾಯಿತು. ದಹಿಸಿಹೋದ ಬಯಕೆಗಳ ಸ್ಥಾನವನ್ನು ಆಕ್ರಮಿಸಿ, ಭಯಂಕರ ಬಯಕೆಯೊಂದು ಭೂತಾಕಾರವಾಗಿ ಬೆಳೆಯಿತು.

" ಸರಿ. ನನಗಿನ್ನು ಉಳಿದುದು ಅದೊಂದೇ, ಅದನ್ನೇ ಸಾಧಿಸುತ್ತೇನೆ. "

—ಎಂದು ತನಗೆ ತಾನೇ ಹೇಳಿಕೊಂಡವನೇ ವೀರಣ್ಣನೂ ತನ್ನ ಮನೆಯತ್ತ ನಡೆದ. ಮನೆಯ ನೆನಪು ಮರಳಿದ ಕೂಡಲೇ ಮತ್ತೆ ನಿರಾಶೆ ಸೆರೆಯಂತೆ ಕೊಚ್ಚಿತು ಅವನ ಹೃದಯದಲ್ಲಿ. ಮನೆ! ಇನ್ನು ತನಗೆಲ್ಲಿಯ ಮನೆ, ಒಂದೇ ಮನೆ, ಒಂದೇ ಆಶ್ರಯ ಎಂದುಕೊಂಡು, ವೇಗವಾಗಿ ನಡೆದು, ಮನೆಯ ಬಳಿ ಸೇರಿ, ಲಾಯದಲ್ಲಿ ಕಟ್ಟಿದ ಕುದುರೆಯನ್ನು ಬಿಚ್ಚಿದ.

ಕುದುರೆಯ ಸದ್ದು ಕೇಳಿ ಗಂಗವ್ವ ಹೊರಗೆ ಬಂದು, ಕುದುರೆಗೆ ಜೀನು ಹಾಕಿ ಎಲ್ಲಿಗೋ ಹೊರಡಲು ಸಿದ್ಧವಾಗುತ್ತಿದ್ದ ವೀರಣ್ಣನನ್ನು ನೋಡಿ ಚಕಿತಳಾದಳು. ಆದರೆ ಎಲ್ಲಿಗೋ ಹೊರಟಾಗ ' ಎಲ್ಲಿಗೆ ' ಎಂದು ಕೇಳುವುದೆಂದು ಅರಿತ ಗಂಗವ್ವ, ಅವನಾಗಿಯೇ ಹೇಳಿದರೆ ಹೇಳಲಿ ಎಂದು ಅವನನ್ನು ನೋಡುತ್ತಾ ನಿಂತಳು.

ಇನ್ನೇನು ಕುದುರೆಯನ್ನೇರಿ ಹೊರಡಬೇಕು ಎನ್ನುವ ಹೊತ್ತಿನಲ್ಲಿ, ಸದ್ದಾಗದೆ ಬಾಗಿಲ ಬಳಿ ಬಂದು ನಿಂತ ಅತ್ತಿಗೆಯನ್ನು ಕಂಡು, ಆಕೆಯನ್ನು ಬಿಟ್ಟು ಹೋಗಬೇಕಲ್ಲಾ ಎಂದು ಮರುಗಿದ. ಆದರೆ ಆಕೆಗಾಗಿಯಾದರೂ ಅಲ್ಲಿರಲು ಅವನ ಮನಸ್ಸು ಒಪ್ಪಲಿಲ್ಲ. ಅಪಮಾನ ಪ್ರಜ್ಞೆಯಿಂದ ಪ್ರಕ್ಷುಬ್ಧವಾದ ಅವನ ಮನಸ್ಸು ಪ್ರತೀಕಾರಕ್ಕಾಗಿ ಹಾತೊರೆಯುತ್ತಿತ್ತು. ಹೋಗ

ಬೇಕು-ಇವರಾರೂ ತನಗೆ ದೊರಕಿಸಿ ಕೊಡಲು ಮನಸ್ಸುಮಾಡದ ದಳ ವಾಯಿ ಪಟ್ಟವನ್ನು ತನ್ನ ತೋಳ ಬಲ್ಮೆಯಿಂದ ಪಡೆದುಬಂದು ಎಲ್ಲರೆದು ರಿಗೂ ಮೆರಸಬೇಕೆಂದು ಮನಸು ಉಬ್ಬಿ ಉಬ್ಬಿ ಹೇಳುತ್ತಿತ್ತು.

ಆ ಭಾವನೆಯಲ್ಲೇ ಅತ್ತಿಗೆಯ ಕಾಲಿಗೆ ಸಮಸ್ಕಾರ ಮಾಡಿ—

" ನನ್ನನ್ನು ಆಶೀರ್ವಾದ ಮಾಡು ಅತ್ತಿಗೆ, ಹೋಗಿ ಬರುತ್ತೇನೆ. " ಎಂದ.

" ಈ ಹೊತ್ತಿನಲ್ಲಿ—ಎಲ್ಲಿಗೆ ವೀರಣ್ಣ ? "

—ಆ ಪ್ರಶ್ನೆಯನ್ನು ಎಷ್ಟು ಕೇಳಬಾರದೆಂದು ಯತ್ನಿಸಿಯೂ ಸಾಧ್ಯ ವಾಗದೆ ಕೇಳಿದಳು ಗಂಗವ್ವ.

" ಅತ್ತಿಗೆ ಒಂದು ದಿನ ನೀನು ನನಗೆ ಸಾವಿರ ಕುದುರೆಗಳ ಸರದಾರ ನಾಗೆಂದು ಹರಸಿದ್ದೆಯಲ್ಲವೇ ನಾನಿಂದು ಹೊರಟಿರುವುದು ನಿನ್ನ ಹರಕೆ ಯನ್ನು ಸತ್ಯಮಾಡಲಿಕ್ಕಾಗಿ. ಈ ದಿನವೂ ಮತ್ತೊಮ್ಮೆ ಹರಸು ಅತ್ತಿಗೆ. ನಿನ್ನ ಹರಕೆ ಸತ್ಯವಾಗುವ ದಿನ ದೂರವಿಲ್ಲ. "

ಅವನ ಮಾತು ಅವಳಿಗೆ ಅರ್ಥವಾಗದ ಯಾವುದೋ ಒಗಟಿ ಯಂತಿತ್ತು. ಆದರೂ ಅದರ ಅಂತರಾರ್ಥವೇನೆಂದು ಬಿಡಿಸಿ ಕೇಳುವ ಮನಸ್ಸು ಆಕೆಗಾಗಲಿಲ್ಲ.

" ನನ್ನ ಹರಕೆಯೇ. ಅದನ್ನು ನೀನು ಕೇಳಬೇಕೇ ವೀರಣ್ಣ. ನನ್ನ ಹೃದಯ ಪ್ರತಿಗಳಿಗೆಯಲ್ಲೂ ಅದನ್ನೇ ಹಾರೈಸುತ್ತಿದೆ. ಬೇಕೆಂದರೆ ಇನ್ನೂ ಒಂದು ಬಾರಿ ಹರಸುತ್ತೇನೆ—ಸಾವಿರ ಕುದುರೆಗಳ ಸರದಾರ ನಾಗು. "

ಆಕೆಯ ಬಾಯಿಂದ ಬಂದ ತುಂಬು ಹೃದಯದ ಹರಕೆಯನ್ನು ಕೇಳಿ, ವೀರಣ್ಣನ ತೋಳುಗಳಲ್ಲಿ ನೂರು ಆನೆಯ ಬಲಬಂದಂತಾಯಿತು. ಆ ಉತ್ಸಾಹದಲ್ಲೇ ಹೇಳಿದ—

" ಅತ್ತಿಗೆ—ನೀನೊಬ್ಬಳು ನೋಡು ನನಗೆ ಬಾಯಿ ತುಂಬಾ ಹರಸಿ ದವಳು. ಈ ಜಗತ್ತೆಲ್ಲಾ ನನಗೆ ಎದುರು ಬಿದ್ದರೂ ಚಿಂತೆಯಿಲ್ಲ ಅತ್ತಿಗೆ. ನೀನೊಬ್ಬಳು ನನ್ನವಳಾಗಿದ್ದರೆ ಸಾಕು. ಲೋಕವನ್ನೇ ಗೆದ್ದು ತರುತ್ತೇನೆ. ನಾನಿನ್ನು ಬರಲೇ ಅತ್ತಿಗೆ? "

" ಹೋಗಿ ಬಾ ವೀರಣ್ಣ...."

—ಎಂದು ಆ ಮಾತನ್ನು ಪೂರ್ಣಗೊಳಿಸದೆ, ಹೇಳಲೋ ಬೇಡವೋ ಎಂದು ಯೋಚಿಸಿ, ಕಡೆಗೆ ಅದಮ್ಯವಾದ ಆಕಾಂಕ್ಷೆಗೆ ಸೋಲುತ್ತಾ—

" ದುರ್ಗದಲ್ಲಿ ನನ್ನದೂ ಒಂದು ಕೆಲಸ ಮಾಡುತ್ತೀಯಾ ವೀರಣ್ಣಾ ? "

—ಎಂದು ಕೇಳಿದಳು.

" ಒಂದು ಕೆಲಸವೇ ? ಏನಾಗಬೇಕು ಹೇಳು ಅತ್ತಿಗೆ. ನಿನಗೆ ಬೇಕೆಂದರೆ ದುರ್ಗವನ್ನೇ ಮನೆಬಾಗಿಲಿಗೆ ತರುತ್ತೇನೆ. "

" ನೀನೇನೊ ದುರ್ಗವನ್ನು ತರುವಂಥ ಸರದಾರನೇ-ಆದರೆ ಅದನ್ನು ನೀನು ತಂದರೆ ನಾನು ಎಲ್ಲಿ ಇಟ್ಟುಕೊಳ್ಳಲಿ ? ಬಡವಿಗೆ ಆನೆ ದಾನ ಮಾಡಿದ ಹಾಗಾಗುತ್ತೆ. ಅದೇನೂ ಬೇಡ—ನಾನು ಕೇಳುವುದು ಸಣ್ಣ ಮಾತು. "

" ಏನು ಹೇಳು ಅತ್ತಿಗೆ ? ಅದು ಎಂಥ ಮಾತಾದರೂ ನಡಸಿ ಕೊಡುತ್ತೇನೆ. "

" ಕೇಳಿದ ಮೇಲೆ ಸಿಟ್ಟಾದರೆ........"

" ಆ ಮಾತಾಡಬೇಡ ಅತ್ತಿಗೆ. ಮಾಡಿದುದನ್ನು ನೆನೆದು ನನಗೇ ನಾಚಿಕೆಯಾಗುತ್ತಿದೆ........"

" ಹೋಗಲಿ ಬಿಡು. ದುರ್ಗದಲ್ಲಿ ಅವರನ್ನು ಕಂಡರೆ, ಹೇಗಾದರೂ ಬಿಡುವು ಮಾಡಿಕೊಂಡು ಒಂದು ಗಳಿಗೆ ಬಂದು ಮುಖ ತೋರಿಸಿ ಹೋಗ ಬೇಕೆಂದು ಹೇಳು. ಹಾಗೆಯೇ....ಹಾಗೆಯೇ........"

ಆಕೆಯ ಮಾತು ಕೇಳಿ ಮನದಲ್ಲಿ ಮೂಡಿದ ಕಹಿಯನ್ನು ಹಾಗೆಯೇ ಅರಗಿಸಿಕೊಂಡು ಕೇಳಿದ—

" ಏನು ಹೇಳು ಅತ್ತಿಗೆ. "

" ನೋಡು ದುರ್ಗದಲ್ಲಿ ಏನೋ ತುಂಬಾ ಗದ್ದಲ ಎನ್ನುತ್ತಾರೆ. ಯಾವ ಗಳಿಗೆಗೆ ಏನು ವಿಪತ್ತೋ ಎನ್ನುತಾರೆ. ಶಿವನಿಚ್ಛೆ ಹೇಗಿದೆಯೋ ಹಾಗಾಗಲಿ. ಆದರೆ ಹೇಗೂ ನೀನು ದಂಡಿನಲ್ಲಿರುವವನು. ಹಾಗೇನಾದರೂ ಆದರೆ....ಆದರೆ....ಅವರಿಗೆ ಏನೂ ಆಗದ ಹಾಗೆ ನೋಡಿಕೋ ವೀರಣ್ಣ.

ತಮ್ಮ ಕೆಲಸದಲ್ಲಿ ಅವರಿಗೆ ಜೀವದ ಹಂಗೂ ಇರುವುದಿಲ್ಲ. ಅವರಿಗೆ ಹೇಳು ವಷ್ಟು ಶಕ್ತಿ ನನಗಿಲ್ಲ. ಅದಕ್ಕೆ ನಿನ್ನನ್ನೇ ಕೇಳುತ್ತೇನೆ-ನೀನು ಅವರಿಗೆ ಕಣ್ಣಾಗಿ, ತೋಳಾಗಿ ರಕ್ಷಿಸಿ, ಅವರನ್ನಿಲ್ಲಿಗೆ ಕರೆದುಕೊಂಡು ಬರಬೇಕು. ಇದೊಂದು ಮಾತು ನಡಸಿಕೊಡು ವೀರಣ್ಣ. ಸಾಯುವ ವರೆಗೂ ನಿನ್ನ ಉಪಕಾರ ಸ್ಮರಿಸುತ್ತೇನೆ. ”

—ಗಂಡನ ಕ್ಷೇಮದ ಬಗ್ಗೆ ಗಂಗವ್ವನಿಗಿದ್ದ ಕಾತರತೆ ಅವಳ ಒಂದೊಂದು ಮಾತಿನಲ್ಲೂ ವ್ಯಕ್ತವಾಗಿತ್ತು. ಅಂದಿನ ಪರಿಸ್ಥಿತಿಯಲ್ಲಿ ಅವಳ ಬೇಡಿಕೆ, ದುರ್ಗವನ್ನು ತಂದು ಕೊಡುವುದಕ್ಕಿಂತ ಕಷ್ಟದ್ದಾಗಿತ್ತು. ಆದರೆ ಆ ಮಾತನ್ನು, ಮೈಯೆಲ್ಲ ನಾಲಗೆಯಾಗಿ ಕೇಳುತ್ತಿದ್ದ ಅತ್ತಿಗೆಗೆ ಹೇಳ ಲಾರದೇ ಏನು ಹೇಳಬೇಕೆಂದು ತೋಚದೆ ಸುಮ್ಮನೆ ನಿಂತ. ಅವನು ಸುಮ್ಮನೆ ನಿಂತುದನ್ನು ಕಂಡು, ಇದ್ದಕ್ಕಿದ್ದಂತೇ 'ಗಂಗವ್ವನ ಎದೆಯಲ್ಲಿ ಪ್ರಚಂಡಭೀತಿ ಕವಿಯಿತು, ಆ ಭೀತಿಯೇ ಮಾತಾಗಿ ಹೊರಸೂಸಿ ದಂತೆ ಕೇಳಿದಳು:

“ ಏಕೆ ವೀರಣ್ಣಾ ಸುಮ್ಮನಾದೆ. ಇದು ನಿನಗೆ ಸಾಧ್ಯವಿಲ್ಲದ ಮಾತೇ? ನೀನೂ ಇಲ್ಲವೆಂದರೆ ನಾನಾರಲ್ಲಿ ಕೇಳಲಿ ಹೇಳು. ನೀನೇ ನನ್ನ ಧೈರ್‍ಯದ ಕೋಟೆ. ನೀನಲ್ಲದೆ ಈ ಹೊತ್ತಿನಲ್ಲಿ ನನಗೆ ಬೇರೆ ಯಾರು ದಿಕ್ಕು? ಏಕೆಂದು ಹೇಳಲಾರೆ ವೀರಣ್ಣಾ, ಏಕೋ ಈ ಎರಡು ದಿನದಿಂದ, ಬೇಡ ಬೇಡವೆಂದರೂ ಏನೋ ಹುಚ್ಚು ಭೀತಿ ಕಾಡುತ್ತಿದೆ. ನೀನೊಂದು ಧೈರ್‍ಯದ ಮಾತು ಹೇಳಿದರೆ, ಈ ಭೀತಿಯೆಲ್ಲಾ ಕತ್ತರಿಸಿ ಹೋಗುತ್ತದೆ.”

ಅತ್ತಿಗೆಯ ಆ ಮಾತಿಗೆ ಏನು ಹೇಳಬೇಕೆಂದು ವೀರಣ್ಣನಿಗೆ ತೋಚ ಲಿಲ್ಲ. ತನ್ನ ಬೇಡಿಕೆಯನ್ನು ನಡಸಲು ನಿರಾಕರಿಸಿದ ಅಣ್ಣನ ಹೆಸರು ಕೇಳಿದರೆ ಹೊತ್ತಿಹೊಗೆಯಾಡುವಂತಿದ್ದ ಅವನ ಮನಸು, ಗಿರಿಜೆಯ ನಿರಾಕರಣೆಯ ಬಳಿಕ ದ್ವೇಷದ ಅಗ್ನಿಕುಂಡವಾಗಿತ್ತು. ಆ ದ್ವೇಷವನ್ನರ ಸುವ ಪ್ರೇಮಜಲವನ್ನು ವರ್ಷಿಸುತ್ತಾ ಮಾತನಾಡುತ್ತಿರುವ ಅತ್ತಿಗೆಗೆ ಏನು ಹೇಳಬೇಕು? ಅದು ತನ್ನಿಂದ ಆಗದ ಮಾತೆಂದು ಹೇಳಿ ದರೆ....ಆ ಮಾತು ಹೇಳುವುದಕ್ಕಿಂತ ಆಕೆಯ ಕತ್ತನ್ನು ನಿಂತ ನಿಲುವಿನಲ್ಲೇ ಕತ್ತರಿಸುವುದು ಮೇಲು ಎಂದು, ಗಂಗವ್ವನ ಕೋಮಲ ಹೃದಯವನ್ನರಿತ

ವೀರಣ್ಣನಿಗೆ ತಿಳಿದಿತ್ತು. ಆಯಿತು, ನಿನ್ನ ಮಾತು ನಡಸಿಕೊಡುತ್ತೇನೆ ಎನ್ನುವ ಧೈರ್ಯವೂ ಇರಲಿಲ್ಲ ಅವನಿಗೆ. ಅಂದಿನ ಪರಿಸ್ಥಿತಿಯ ಆಳ ಅವನಿಗೆ ತಿಳಿದಿದ್ದಷ್ಟು ಮಟ್ಟಿಗೆ ಬೇರೆ ಯಾರಿಗೂ ತಿಳಿದಿರಲಿಲ್ಲ. ಮುಂದೆ ನಡೆಯಬಹುದಾದ ಘಟನೆಗಳಲ್ಲಿ ಅವನಿಗೆ, ಯಾರ ತಲೆ ಉಳಿಯುವುದು ಎಂದು ಹೇಳುವುದರಲ್ಲಿ, ತನ್ನ ತಲೆಯೇ ಉಳಿದೀತೋ ಇಲ್ಲವೋ ಎಂಬ ನೆಚ್ಚಿಗೆ ಇರಲಿಲ್ಲ. ಹೀಗಿರುವಾಗ ಯಾವುದನ್ನೂ ತಿಳಿಯದೆ, ಪ್ರೀತಿ ಕುರುಡಳಾಗಿ ಬೇಡುತ್ತಿರುವ ಈಕೆಗೆ ಏನೆಂದು ಹೇಳುವುದು? ಅಷ್ಟು ಹೊತ್ತು ಅವನ ಮನದೊಳಗೇ ಪ್ರಚಂಡ ಹೋರಾಟ ನಡೆಯಿತು. ಮರುಗಳಿಗೆಯೇ ತನ್ನನ್ನು ತಾಯಾಗಿ ಸಲಹಿದ ಅತ್ತಿಗೆಯ ಪ್ರೇಮದ ನೆನಪು ಎದೆಯಲ್ಲಿ ಉಕ್ಕಿಬಂದು ಉಳಿದುದೆಲ್ಲವನ್ನು ಮರೆಸಿತು. ತಟಕ್ಕನೆ ಹೇಳಿದ—

" ಅತ್ತಿಗೆ–ಈ ಜಗತ್ತಿನಲ್ಲಿ ನನಗೂ ಉಳಿದಿರುವವಳು ನೀನೊಬ್ಬಳೇ. ಯೋಚಿಸಬೇಡ. ನನ್ನ ತಲೆಕೊಟ್ಟಾದರೂ ನಿನ್ನ ಆ ಮಾತು ನಡಸುತ್ತೇನೆ."

" ನಿಜವೇ....ನಿಜವೇ ವೀರಣ್ಣ. ನನ್ನ ಮಾತು ನಡಸುತ್ತೀಯಾ? ಈ ಎರಡು ದಿನ, ಅವರನ್ನು ಕಾಣದ ಕಣ್ಣು ಏನು ನರಕ ಅನುಭವಿಸಿದೆ ಎಂದು ನಾನು ಹೇಳಲಾರೆ. ಹೇಗಾದರೂ ಮಾಡಿ ಅವರಿಗೆ ಒಂದು ಗಳಿಗೆ ಬನ್ನಿ ಎಂದು ಹೇಳು. ಸಾಧ್ಯವಾದರೆ ಅವರನ್ನು ಹೊತ್ತುಕೊಂಡಾದರೂ ಬಂದು ನನಗೆ ತೋರಿಸಿ, ಮತ್ತೆ ಅವರ ಕೆಲಸಕ್ಕೆ ಕರೆದುಕೊಂಡು ಹೋಗಿ ಬಿಡು. ನೀನೂ ಅಷ್ಟೆ ವೀರಣ್ಣ—ಏನು ಗದ್ದಲವಿದ್ದರೂ, ಒಂದು ಗಳಿಗೆ ಗಾದರೂ ಬಂದುಹೋಗು. ನೀವಿಬ್ಬರೂ ಹೀಗೆ ದಿನಗಟ್ಟಲೆ ಕಣ್ಣಿಗೆ ಬೀಳದೆ ಹೋದರೆ, ನಾನು ಇದ್ದವಳೂ ಅಲ್ಲ, ಸತ್ತವಳೂ ಅಲ್ಲ, ಹಾಗಾಗುತ್ತದೆ. ನನ್ನ ಸ್ಥಿತಿ. ಇದನ್ನು ಯಾರ ಮುಂದಾದರೂ ಹೇಳಿಕೊಂಡರೆ ನಗುತ್ತಾರೆ. ನೀನು ನನ್ನ ಮೈದುನನಲ್ಲ, ಮಗ. ಅದಕ್ಕೇ ನನ್ನೆದೆಯನ್ನೆಲ್ಲಾ ಬಿಚ್ಚಿ ನಿನ್ನೆದುರು ತೋಡಿಕೊಂಡಿದೀನಿ. ನನ್ನ ಅತ್ತಿಗೆ ಎಂಥ ನಾಚಿಕೆಕೆಟ್ಟ ಹೆಣ್ಣು ಎಂದು ನೀನು ನಕ್ಕರೂ ನನಗೆ ಚಿಂತೆಯಿಲ್ಲ. "

" ಅತ್ತಿಗೆ....ಅತ್ತಿಗೆ....ನೀನು ಭಯಂಕರ ಮಾಟಗಾತಿ "

—ಬಿಗಿದ ಧ್ವನಿಯಲ್ಲಿ ಹೇಳಿದ ವೀರಣ್ಣ.

" ಏಕೆ....ನಾನೇನು ಮಾಡಿದೆ? "

—ಅವನ ಮಾತಿನ ಜಾಡು ಅರಿಯಲಾಗದೆ ಕೇಳಿದಳು ಗಂಗವ್ವ.

" ಏನು ಮಾಡಿದೆ?....ನೀನು ಇಂದೇನು ಮಾಡಿದೆ ಎಂಬುದನ್ನು ನಾನಿಂದು ಹೇಳಲಾರೆ ಅತ್ತಿಗೆ. ಆ ದಿನ ಬರಲಿ—ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ ಹೋಗುತ್ತೇನೆ. ಅತ್ತಿಗೆ—ನಿನ್ನ ಮಾತು ಇಂದು ನರಕ ವಿದ್ದಲ್ಲಿ ಸ್ವರ್ಗವನ್ನು ಸೃಜಿಸಿದೆ. ನಾನಿನ್ನು ನಿಲ್ಲಲಾರೆ, ಅತ್ತಿಗೆ. ಬರು ತ್ತೇನೆ. "

—ಎಂದು ಮತ್ತೊಮ್ಮೆ ಅತ್ತಿಗೆಯ ಪಾದಗಳಿಗೆ ವಂದಿಸಿದ ವೀರಣ್ಣ. ಅವಳ ಕಾಲನ್ನು ಅವನ ಕಣ್ಣು ಸೋಕಿದೆಡೆಯಲ್ಲಿ ತೇವವಾಗಿ, ಅವಳನ್ನು ಚಕಿತಗೊಳಿಸಿತು.

ಅವಳು ಬೇರೆ ಮಾತನಾಡಲು ಅವಕಾಶ ಕೊಡದೆ ವೀರಣ್ಣ, ಒಂದೇ ಹಾರಿಗೆ ಕುದುರೆಯನ್ನೇರಿ, ಕುದುರೆಯ ಪಕ್ಕೆಗಳನ್ನು ಔಕಿ, ಲಗಾಮನ್ನು ಸಡಿಲಬಿಟ್ಟು, ನೆತ್ತಿಯ ಮೇಲೆ ಚಪ್ಪರಿಸಿದ. ಕುದುರೆ ಹಾರಿ, ಓಡಿತು.

ಗಂಗವ್ವ ಕುದುರೆಯೊಂದಿಗೆ ಅದರ ಶಬ್ದವೂ ಕತ್ತಲಿನಲ್ಲಿ ಕರಗುವ ವರೆಗೂ ನಿಂತಲ್ಲಿಯೇ ನಿಂತು ನೋಡುತ್ತಿದ್ದವಳು ಪಕ್ಕದಲ್ಲಿಯೇ ಕೆಮ್ಮಿದ ಸದ್ದು ಕೇಳಿ, ಸದ್ದು ಬಂದ ಕಡೆಗೆ ತಟಕ್ಕನೆ ತಿರುಗಿ ನೋಡಿ—

" ಯಾರು ? " ಎಂದಳು.

" ನಾನು " ಎಂದ ಪಾಪನಾಯಕ.

" ನೀವೆಲ್ಲಿದ್ದಿರಿ ಮಾವಯ್ಯ ? "

—ಎಂದಳು ಗಂಗವ್ವ, ತಾನು ಮೈದುನನೊಂದಿಗೆ ಆಡಿದ ಮಾತ ನ್ನೆಲ್ಲಾ ಆತ ಎಲ್ಲಿ ಕೇಳಿಸಿಕೊಂಡನೊ ಎಂದು ನಾಚುತ್ತಾ.

" ನಾಚಬೇಡ ಗಂಗು, ನೀವಿಬ್ಬರೂ ಮಾತನಾಡುತ್ತಿದ್ದುದೆಲ್ಲಾ ಬೇಡವೆಂದರೂ ಕಿವಿಗೆ ಬಿತ್ತು. ವೀರಣ್ಣ ನಿನ್ನನ್ನು ಮಾಟಗಾತಿ ಎಂದುದು ಸುಳ್ಳಲ್ಲ ಗಂಗಾ ? "

" ಏಕೆ ಮಾವಯ್ಯ ? "

" ಕಾಡು ಕುದುರೆಯನ್ನು ಪಳಗಿಸುವ ಶಕ್ತಿ ನಿನ್ನ ಮಾತುಗಳಿಗಿದೆ ಗಂಗಾ, ಕಲ್ಲನ್ನು ಬಂಗಾರವಾಗಿ ಮಾಡುವ ಸಿದ್ಧಜಲ ನಿನ್ನ ಮಮತೆ. "

" ಊಹೂ. ಅವೆಲ್ಲಾ ನನ್ನ ಬಲವಲ್ಲ ಮಾವಯ ನಿತ್ಯ, ಆಶೀರ್ವಾದ ಬಲ. "

" ನನ್ನ ಹರಕೆಗೆ ಏನು ಬಲವಿದೆಯೋ ನನಗೆ ಗೊತ್ತಿಲ್ಲ ಗಂಗಾ. ಆದರೆ ಅದಕ್ಕೆ ಹುಲ್ಲು ಕಡ್ಡಿಯಷ್ಟಾದರೂ ಬಲವಿದ್ದರೆ, ಅದು ನಿನ್ನ ಮುಖದ ನಗುವನ್ನು ಕೋಟಿ ವರ್ಷ ಕಾಪಾಡಲಿ.... ಹೋಗು.... ಈಗಾದರೂ ಮಲಗು. ನಿನ್ನ ಮೈದುನ ಬಂಗಾರದ ಬೆಟ್ಟ ತಂದುಕೊಡುತ್ತೇನೆ ಎಂದು ಹೇಳಿದನಲ್ಲ. ಎಲ್ಲ ಚಿಂತೆಯನ್ನು ಮರೆತು ಮಲಗು. "

—ಎಂದ ಪಾಪನಾಯಕ. ಮನಸಿನಲ್ಲಿಯೇ ಮಾವನ ಪಾದಗಳಿಗೆ ವಂದಿಸಿ ಒಳಗೆ ತೆರಳಿದಳು ಗಂಗವ್ವ.

೭

ಮರುದಿನ, ಎಂದಿನಂತೆಯೇ ಗಿರಿಜಾ ಅಂತಃಪುರಕ್ಕೆ ಊಳಿಗಕ್ಕೆ ಬಂದಾಗ, ಅವಳ ಮುಖವನ್ನು ನೋಡಿ ನಾಗತಿಗೆ ಆಶ್ಚರ್ಯವಾಯಿತು. ಅವಳ ಮುಖವನ್ನು ನೋಡಿದಾಗಲೆಲ್ಲಾ ನಾಗತಿಗೆ, ಮಾವಿನ ಚಿಗುರಿನ ಹೊಳಪಾದ ನರುಗೆಂಪು ಬಣ್ಣದ ಕಪೋಲ, ಅರಳಿದ ಹೂವಿನಂಥ ಕಣ್ಣು, ಹವಳದ ಕುಡಿಯಂಥ ತುಟಿ, ಸಣ್ಣ ಸಂಪಗೆಯಂಥ ಮೂಗು,—ಇದನ್ನು ನೋಡಿ ವಸಂತಕಾಲದ ಉದ್ಯಾನದ ನೆನಪಾಗುತ್ತಿತ್ತು. ಅವಳನ್ನು ನೋಡಿದಾಗ, ಉದ್ಯಾನವನ್ನು ನೋಡಿದಷ್ಟೇ ಸಂತೋಷವಾಗುತ್ತಿತ್ತು. ಆದರೆ ಇಂದು, ಆ ಮುಖ—

ಉದ್ಯಾನವಂತಿರಲಿಲ್ಲ, ಕೆಂಪೇರಿ ಊದಿಕೊಂಡ ಕಣ್ಣುಗಳು, ವಿವರ್ಣವಾಗಿ ಬಿಗಿದುಕೊಂಡ ಮೋರೆ, ಬಾಡಿದ ತುಟಿ, ನಿಟ್ಟುಸಿರ ಬೇಗೆಗೆ ಕಂಪಿಸುವ ನಾಸಿಕ—

ಊಹೂ ಉದ್ಯಾನವಲ್ಲ, ಯಾವುದೋ ಭವ್ಯಮಂದಿರಗಳು ನೆಲಸಮವಾದ ಪಾಳಿನಂತಿತ್ತು ಅವಳ ಮುಖ.

ಅದನ್ನು ಕಂಡು ನಿಬ್ಬೆರಗಾದರು ನಾಗತಿ.

" ಏಕೆ ಗಿರಿಜಾ—ಮೈಯಲ್ಲಿ ಚೆನ್ನಾಗಿಲ್ಲವೇ ? "

" ಚೆನ್ನಾಗಿಲ್ಲದೆ ಏನಾಗಿದೆ ತಾಯಿ ? ಎಂದಿನಂತೆಯೇ ಇದ್ದೇನೆ. "

" ಚೆನ್ನಾಗಿದೀಯ! ಎಂದಿನಂತೆಯೇ ಇದೀಯ! ಅದು ಮೋಸ ಗೊಳಿಸುವ ಮಾತು. ಊಹೂ. ನಿನ್ನ ಮಾತು ನಂಬುವುದಿಲ್ಲ. ಏನೋ ಆಗಿದೆ. ಏನು ಹೇಳು ಗಿರಿಜಾ? ಈ ಭಯದ ಕತ್ತಲು ತುಂಬಿದ ಅರಮನೆ ಯಲ್ಲಿ ನನ್ನಪಾಲಿಗೆ ನೀನೊಬ್ಬಳು ನಗುವಿನ ರವಿಕಿರಣವಾಗಿದ್ದೆ. ನಿನ್ನ ಕಣ್ಣಲ್ಲೂ ಕತ್ತಲೆ ಗೂಡುಕಟ್ಟಿದರೆ, ಹೇಗೆ ಸಹಿಸಲಿ. ಮರೆಮಾಚಬೇಡ. ಏನಾಗಿದೆ ಹೇಳು. "

—ತನ್ನ ಕಣ್ಣಲ್ಲಿನ್ನು ಕಂಬನಿ ಬರುವುದಿಲ್ಲ. ನಿನ್ನೆಯ ರಾತ್ರಿಗೇ ಆದರ ಋಣವೆಲ್ಲಾ ತೀರಿಹೋಯಿತು ಎಂದುಕೊಂಡಿದ್ದಳು ಗಿರಿಜಾ. ಆದರೆ ನಾಗತಿಯ ಮಾತು ಕೇಳಿ, ಅವಳ ನಂಬಿಕೆಯನ್ನು ಸುಳ್ಳುಮಾಡಿ, ಕಣ್ಣಂಚಿನಲ್ಲಿ ಕಂಬನಿ ಕಾಣಿಸಿತು. ಆ ಕಂಬನಿಯೇ ಡೋಲಾಯಮಾನ ವಾಗಿ ತೂಗುತ್ತಿದ್ದ ಅವಳ ಮನಸ್ಸಿಗೆ ನಿರ್ಧಾರದ ಬೆಸುಗೆ ಹಾಕಿತು.

" ನಿಮಗೆ ಏನೋ ಮಾತು ಹೇಳಬೇಕೆಂದು ಬಂದೆ ತಾಯಿ. ಆ ಮಾತಿನಿಂದ ಏನೋ ವ್ಯಥೆಯಾಯಿತು. ಅಷ್ಟೆ. "

" ನಮಗೆ ಹೇಳಲು ನೋವಾಯಿತೇ?"—ಆಶ್ಚರ್ಯದಿಂದ ಕೇಳಿ ದಳು ನಾಗತಿ—" ಅದೇನು ಮಾತು ಗಿರಿಜವ್ವೆ? ಹೇಳು. "

" ಅವ್ವಾ—ನೀವು ಕೂಡಲೇ ಒಂದು ಕೆಲಸ ಮಾಡಬೇಕು. "

" ಏನು? "

" ನಾಯಕರನ್ನು ಎಲ್ಲಿಟ್ಟಿದ್ದೀರೋ ನನಗೆ ತಿಳಿಯದು. ಆದರೆ ಅವರು ಇರುವಲ್ಲಿ ಕಾವಲು ಬಿಗಿಮಾಡಿ. ಹಾಗೇ....ಹಾಗೇ...."

ಒಂದೊಂದು ಮಾತಾಡುವಾಗಲೂ ಕರುಳನ್ನೇ ಹಿಂಜಿ ಹರಡುವಂತೆ ಹೇಳಿದಳು ಗಿರಿಜಾ.

" ಹೂ. "

" ಹಾಗೇ....ದಳವಾಯಿ ದೇಸಣ್ಣನವರನ್ನು ಕೊಂದವರನ್ನು ಹುಡು ಕಿಸುತಿದ್ದೀರಿ ಅಲ್ಲವೆ? "

" ಹೌದು—ಆದರೆ ಅವರೆಲ್ಲೋ ತಲೆತಪ್ಪಿಸಿಕೊಂಡಿದ್ದಾರೆ. "

" ಒಬ್ಬರನ್ನು ಹಿಡಿಸಿ ಕೇಳಿದರೆ, ಅವರು ಎಲ್ಲದಾರೆಂದು ತಿಳಿಯು ತ್ತದೆ ಅವ್ವ. ಅಷ್ಟೇ ಅಲ್ಲ, ಏನು ಸಂಚು ನಡೆಯುತ್ತಿದೆ ಎಂದೂ ತಿಳಿಯುತ್ತದೆ. "

" ಆ್ಞ !....ಯಾರನ್ನು ಹಿಡಿಸಬೇಕು. "

" ಕಸ್ತೂರಿ ನಾಯಕರ ತಮ್ಮನನ್ನು. "

—ತನ್ನ ಕರುಳನ್ನು ಕತ್ತರಿಸಿಟ್ಟು ಹೇಳಿದಳು ಆ ಮಾತನ್ನು ಗಿರಿಜಾ.

" ಯಾರು ?—ಕಸ್ತೂರಿನಾಯಕರ ತಮ್ಮ ವೀರನಾಯಕರನ್ನೇ ? "

—ತನ್ನ ಕಿವಿಯನ್ನೇ ನಂಬಲಾರದವಳಂತೆ ಕೇಳಿದಳು ನಾಗತಿ.

" ಅಹುದು ತಾಯಿ. "

" ಅವರನ್ನು ಹಿಡಿಸಬೇಕೇ ? ಅವರಿಂದ ಸುದ್ದಿ ಹೊರಡಿಸಬೇಕೇ ? "

" ಅವ್ವಾ....ನನ್ನನ್ನು ಹೆಚ್ಚಿಗೆ ಕೆಣಕಿ ಕೇಳಬೇಡಿ. ನಾಯಕರು ಸುರಕ್ಷಿತವಾಗಿರಬೇಕೆಂದರೆ ಅಷ್ಟು ಮಾಡಿ ಅವ್ವ...."

—ಎಂದವಳೇ ಗಿರಿಜೆ ನಾಗತಿಯ ಅಪ್ಪಣೆಯನ್ನು ಕೇಳದೆ ಎದ್ದು ಹೊರಗೆ ಹೋಗಿ ಮರೆಯಾದಳು. ಅವಳ ಮಾತನ್ನು ಕೇಳಿ ನಾಗತಿಗೆ ಸಿಡಿಲು ಹೊಡೆದ ಹಾಗಾಯಿತು. ತತ್ತರಿಸಿ, ಕುಳಿತಲ್ಲೇ ಕುಸಿದಳು.

ಅರಮನೆಯ ಮುಂದೆ ಸೈನಿಕರ ಪ್ರದರ್ಶನ ನಡೆದ ದಿನ ಆಕೆಗೆ ವೀರಣ್ಣ ಕಸ್ತೂರಿನಾಯಕನ ಸೋದರನೆಂದೂ, ಗಿರಿಜೆಗೆ ಗೊತ್ತಾದ ಗಂಡು ಎಂಬುದನ್ನೂ ಕೇಳಿದ್ದಳು. ಈಗ ಗಿರಿಜಾ ತಾನೇ ಹೇಳುತ್ತಿದ್ದಾಳೆ - ವೀರಣ್ಣನನ್ನು ಹಿಡಿಸಬೇಕು ಎಂದು. ಕೂಡಲೇ ನಾಗತಿಗೆ ಅವಳ ವಿವರ್ಣವಾದ ಮುಖದ ಅರ್ಥವಾಗಿ, ಆಕೆಯ ನೆತ್ತಿಯ ಮೇಲೇ ಹತ್ತಾರು ಸಿಡಿಲುಗಳು ಒಟ್ಟಿಗೆ ಸಿಡಿದಂತಾಯಿತು.

ಅಂತಃಪುರದ ಸುತ್ತಲೂ ಕಣ್ಣಾಡಿಸಿ, ಅಲ್ಲಿಯ ಕಣ್ಣು ಕುಕ್ಕುವಂಥ ವೈಭವವನ್ನು ನೋಡಿದಳು. ಬೆಳ್ಳಿಯ ಮಂಚ, ಬೆಳ್ಳಿಯ ತಗಡು ಹೊದಿಸಿದ ಕಂಭಗಳು, ಚಿತ್ರಗೆಲಸದ ಛಾವಣಿ, ನೆಲಕ್ಕೆ ಹಾಸಿದ ರತ್ನಗಂಬಳಿ, ಒಂದೊಂದೂ ಕಣ್ಣು ಕೆಕ್ಕರಿಸಿ ನೋಡಿದುವು ಅವಳತ್ತ. ಒಂದೊಂದೂ, ವಿಲಾಸದ ವಸ್ತುಗಳಂತೆ ಕಾಣದೆ, ನೂರಾರು ಜನರ ಜೀವ ತಿಂದು, ಕಣ್ಣೀರು ಕುಡಿದು ಬೆಳೆದ ದೈತ್ಯವಸ್ತುಗಳಂತೆ ತೋರಿ, ಅವುಗಳ ನಡುವೆ ಕುಳಿತಿರಲೂ ಆಕೆಗೆ ದಿಗಿಲಾಯಿತು.

" ಇವು....ಇವು........ಬೇಕೆಂದರೆ........ಇಷ್ಟು ಬೆಲೆ ಕೊಡಬೇಕೇ ಇದಕ್ಕೆ ? "

ಆ ಭಾವನೆ ಬೆಳೆಬೆಳೆದು ನಾಗತಿಯ ಸುತ್ತಲೂ ಕಿಚ್ಚು ಒಟ್ಟಿದಂತಾಯಿತು. ಜೆಂಕಿಯ ಜೋನಿನಲ್ಲಿ ಸಿಲುಕಿದ ಬಡ ಮೃಗದಂತೆ ಚಡಪಡಿಸಿದಳು ನಾಗತಿ.

ತಾನು ಕುಳಿತ ನೆಲದ ಮೇಲೆ, ತನ್ನ ತಲೆಯ ಮೇಲಿನ ಛಾವಣಿಯ ಮೇಲೆ,—ತನ್ನ ಮೇಲೆಯೇ ಅವಳಿಗೆ ಹೇಸಿಗೆಯಾಯಿತು. ಭಗಭಗನೆ ಉರಿಯುತ್ತಿದ್ದ ಕಣ್ಣುಗಳನ್ನು ಮುಚ್ಚಲೆಂದು ಕೈ ಎತ್ತಿದಳು. ಅವಳ ಕೈ ಅವಳಿಗೆ, ಕೈಯಂತೆ ಕಾಣಿಸದೆ, ಜೀವಾಕರ್ಷಣಕ್ಕಾಗಿ ಹೆಡೆಯಗಲಿಸಿದ ಸರ್ಪದಂತೆ ತೋರಿತು. ಭೀತಳಾಗಿ ಆ ಕೈಯನ್ನು ನೆಲಕ್ಕೆ ಚೆಲ್ಲಿದಳು.

ಅರಸೊತ್ತಿಗೆಯ ಬಗ್ಗೆ ನಾಗತಿಗೆ ಎಂದೂ ಹುಚ್ಚು ಭ್ರಮೆ ಇರಲಿಲ್ಲ. ಈಗಂತೂ ಇದ್ದದ್ದೂ ನಿರಸನವಾಗಿ, ಕಣ್ಣು ಹೊರಳಿದಲ್ಲಿ,ದ್ವೇಷ, ಕೊಲೆ, ಸಾವು, ರಕ್ತ, ಕಣ್ಣೀರು, ನಿಟ್ಟುಸಿರುಗಳೇ ಕಾಣಿಸಿ ತಲೆಯ ಮೇಲೆ ಹೊತ್ತ ಈ ಬೆಂಕಿಯ ಹೊರೆಯನ್ನು ಎಷ್ಟು ಬೇಗ ಬಿಸುಟುವೆನೊ ಎಂದು ಕಾತರಿಸತೊಡಗಿದಳು. ಸ್ನೇಹ, ದಯೆ, ವಾತ್ಸಲ್ಯ, ಸಹಾನುಭೂತಿಗಳು ಅಮೃತ ಜಲಸೇಚನೆಗಾಗಿ ಹಾತೊರೆಯತೊಡಗಿತು, ಮನಸಿನ ಹೊರಾಟದ ಬೇಗೆಯಲ್ಲಿ ಬೆಂದ ಆಕೆಯ ಮೈ....ಮನಸು.

“ದೇವಾ, ದೇವಾ, ಈ ವಿಷವೃಷ್ಟಿಗೆ ಕೊನೆಯೆಂದು? ಈ ಅಗ್ನಿ ತಾಂಡವದಿಂದ ಎಂದು ಮುಕ್ತಿ ತಂದೆ? ನಿನ್ನ ಮಕ್ಕಳ ನೆತ್ತಿಯ ಮೇಲೆ ಅರಸೊತ್ತಿಗೆಯ ಸರ್ಪಛತ್ರವನ್ನೇಕೆ ಇಟ್ಟೆ? ಕೊನೆಮಾಡು, ಕೊನೆಮಾಡ ಬೇಗ ಕೊನೆಮಾಡು, ಈ ಮಾರಣ ಹೋಮವನ್ನು. ನಿನ್ನ ಅಪಾರ ದಯೆಯ ಅಮೃತ ವರ್ಷಕರೆದು, ಲೋಕಕ್ಕೆ ಹತ್ತಿದ ಈ ಕಿಚ್ಚನ್ನು ಆರಿಸು ತಂದೆ. ಕಂಬನಿಯ ಮುಳ್ಳನ್ನು ಕಿತ್ತು ನಗೆಮಲ್ಲಿಗೆಯನ್ನು ಬೆಳಸು, ನಿರಪರಾಧಿಗಳ ನಿಟ್ಟುಸಿರಿನ ಬೇಗೆಯಲ್ಲಿ ಈ ಲೋಕ ದಹಿಸಿಹೋಗದಿರಲಿ, ದೇವಾ.”

....ಎಂದು ಪೂಜಾಪುಷ್ಪದಂತೆ, ತನ್ನ ಹೃದಯವನ್ನೇ ತೂರಿ ಬೇಡಿದಳು ನಾಗತಿ. ಕುಳಿತಿರಲಾಗದೆ ಹಾಸಿನಲ್ಲಿ ಹೊರಳಿ ಹೊಯ್ದಾಡಿದಳು.

ನಾಗತಿ ತನ್ನ ಅಂತರಂಗದ ಚಿತ್ತಕ್ಷೋಭೆಯಲ್ಲಿ ಹೊಯ್ದಾಡುತ್ತಿರುವಾಗಲೇ ಆಳು ಕಾಣಿಸಿಕೊಂಡು “ಲಿಂಗಣ್ಣನಾಯಕರು ಕಾಣಲು ಬಂದಿದಾರೆ” ಎಂದು ಹೇಳಿದ

" ಒಳಗೆ ಬಿಡು "

—ಎಂದು ಆಳಿಗೆ ಹೇಳಿ ನಾಗತಿ, ತನ್ನ ಕಣ್ಣಿನಿಂದ ಹರಿಯುತ್ತಿದ್ದ ಕಂಬನಿಯನ್ನು ಒರಸಿಕೊಂಡು, ಮುಖದ ಮೇಲೆ ಇಲ್ಲದ ಪ್ರಸನ್ನತೆಯನ್ನು ತಂದುಕೊಳ್ಳಲು ಯತ್ನಿಸುತ್ತಿರುವಾಗಲೇ ಲಿಂಗಣ್ಣನಾಯಕ ಒಳಗೆ ಬಂದ. ದುಃಖದ ಪಶು ತುಳಿದ ನಾಗತಿಯ ಮೊಗವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು.

" ಇದೇನು ಚಿಕ್ಕಮ್ಮ.... ಹೀಗೆ? "

—ಎಂದು ಕೇಳಿದ.

" ನನ್ನ ಚಿಂತೆ ಇಂದಿನದೆ? ಎಂದೂ ಇದ್ದದ್ದೇ? ಹತ್ತುವುದಲ್ಲ, ಹರಿಯುವುದಲ್ಲ. ಅದು ಹೋಗಲಿ. ಏನು ಬಂದದ್ದು ಲಿಂಗಣ್ಣ ? "

" ನಿನ್ನೆ ರಾತ್ರಿ ಒಂದು ಸುದ್ದಿ ಕೇಳಿದೆ. ಏನು ಮಾಡಬೇಕೋ ತಿಳಿಯಲಿಲ್ಲ; ಎಷ್ಟು ಚಿಂತಿಸಿದರೂ ಬಗೆಹರಿಯಲಿಲ್ಲ. ಅದಕ್ಕೇ ಹಗಲಾಗುವುದನ್ನೇ ಕಾದು ನಿನ್ನನ್ನು ನೋಡಲು ಬಂದೆ. "

—ಚಿಂತೆಯಿಂದ ಭಾರವಾದ ಧ್ವನಿಯಲ್ಲಿ ಹೇಳಿದ ಲಿಂಗಣ್ಣನಾಯಕ. ಅವನ ಮಾತನ್ನು ಕೇಳಿ, ನಾಗತಿಗೆ ಆ ದಿನ ತಾನು ಎದ್ದ ಹೊತ್ತು ಒಳ್ಳೆಯದಲ್ಲ ಎನಿಸಿ, ಮತ್ತೇನು ಕೇಡಿನ ಸುದ್ದಿಯೋ ಎಂದು ಗಾಬರಿಯಾದಳು. ಆದರೂ ಅದನ್ನು ತೋರಗೊಡದೆ ಕೇಳಿದಳು.

" ಏನು ಸುದ್ದಿ ಲಿಂಗಣ್ಣ ? "

" ಇಷ್ಟು ದಿನ ಈ ವಿಷಯವಲ್ಲಿ ಉಭ-ಶುಭ ನುಡಿಯದಿದ್ದ ಚಿಕ್ಕಣ್ಣ, ನಿನ್ನೆ ತಾನಾಗಿಯೇ ಒಂದು ಮಾತು ಹೇಳಿದ. "

" ಏನಂತೆ ? "

" ನಾವು ಅವನ ಒಂದು ಮಾತಿಗೆ ಒಪ್ಪುವುದಾದರೆ, ಈಗ ಹೊತ್ತಿರುವ ದ್ವೇಷದ ಕಿಚ್ಚನ್ನು ತಣಿಸಿ, ಶಾಂತಿ ನೆಲಸುವಂತೆ ಮಾಡುತ್ತಾನಂತೆ "

—ಲಿಂಗಣ್ಣನಾಯಕನ ಮಾತು ಕೇಳಿ ನಾಗತಿಯ ಕಿವಿಗೆ ಅಮೃತ ವರ್ಷವಾದಂತಾಯಿತು. ಒಂದೇ ಮಾತಿಗೆ ಆಕೆಯ ದುಃಖವೆಲ್ಲಾ ಅಡಗಿ ಹೋಗಿ, ಮುಖದ ಮೇಲೆ ಆಸೆ ಲಾಸ್ಯವಾಡಿತು.

" ಆ ! ನಿಜವೇ. ನಿಜಕ್ಕೂ ಹಾಗೆ ಮಾಡುತ್ತಾನಂತೆಯೇ ? ಅವನ

ಹೊಟ್ಟೆ ತಣ್ಣಗಿರಲಿ ಲಿಂಗಣ್ಣಾ–ನನಗೆಷ್ಟು ದೂರವಾದ ಎಂದುಕೊಂಡರೂ ನನಗೆ ಅವನೇ ಸಂತೋಷದ ಸುದ್ದಿ ಹೇಳುವವನಾದ. ನಿಜವಾಗಿಯೂ ನಾವು ಅಂದುಕೊಂಡಷ್ಟು ಕೆಟ್ಟವನಲ್ಲ ಚಿಕ್ಕಣ್ಣ. ಎಂಥ ಒಳ್ಳೆ ಸುದ್ದಿ ತಂದೆ ಲಿಂಗಣ್ಣ. ಏನಂತೆ ಅವನ ಮಾತು? ಅವನು ಕೇಳಿದುದನ್ನು ಕೊಡುತ್ತೇನೆ ಎನ್ನು."

ಅಪರೂಪವಾಗಿ ಬಂದ ಈ ಶಾಂತಿಯ ವಾರ್ತೆಯನ್ನು ಕೇಳಿ, ನಾಗತಿಗೆ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಅವಳ ಸಂತೋಷವನ್ನು ಕಂಡು ಲಿಂಗಣ್ಣನಾಯಕನಿಗೆ ಸಂತೋಷವಾಗಲಿಲ್ಲ. ವ್ಯಥೆಯಾಯಿತು.

"ನಿನ್ನದು ಬಹಳ ವಿಚಿತ್ರ ಸ್ವಭಾವ ಚಿಕ್ಕಮ್ಮ. ಏನೆಂದು ತಿಳಿದುಕೊಳ್ಳದೆಯೇ, ಅದರ ಸಾಧಕ-ಬಾಧಕಗಳನ್ನು ವಿಚಾರಿಸದೆಯೇ ಹಿಗ್ಗಿಬಿಟ್ಟರೆ ಹೇಗೆ?"

"ಸಾಧಕ–ಬಾಧಕ, ಅಳೆಯುವುದು-ಸುರಿಯುವುದು ಎಲ್ಲಾ ಪ್ರಧಾನಿಪಟ್ಟ ಹೊತ್ತವರಿಗಿರಲಿ. ನನ್ನ ಮಕ್ಕಳು ಸಂತೋಷವಾಗಿರುವಂಥ ಸುದ್ದಿ ಕೇಳಿದರೆ ಸಾಕು, ನನಗೆ."

"ಆದರೆ, ಅದೇನೆಂದು ಕೇಳುವಷ್ಟು ತಾಳ್ಮೆಯೂ ಬೇಡವೇ? ನೀನೇ ಇಷ್ಟು ಹುಡುಗರ ಹಾಗಾಡಿದರೆ ನಮ್ಮಗತಿಯೇನು ಹೇಳು."

ಲಿಂಗಣ್ಣನಾಯಕನ ಮಾತುಕೇಳಿ, ವಯಸ್ಸಿಗೆ ಮೀರಿದ ಅವನ ಗಾಂಭೀರ್ಯವನ್ನು ಕಂಡು ಆಕೆಗೆ ನಗು ಬಂತು. ದೊಡ್ಡ ನಗು ನಕ್ಕು ಹೇಳಿದಳು:

"ಪ್ರಧಾನಿಪಟ್ಟ ಕಟ್ಟಿಕೊಂಡು ಗಾಂಭೀರ್ಯದ ಗೊಂಬೆಯಾಗಿ ಹೋದೆ ನೀನು. ಹೋಗಲಿ-ಅದೇನು ಹೇಳು. ಆಮೇಲೆ ನೀನು ನನ್ನನ್ನು ಹಳಿಯುವುದು, ನಾನು ನಿನ್ನನ್ನು ಅನ್ನುವುದು ಮಾಡೋಣ!"

ನಾಗತಿಯ ಹರ್ಷ ಸಾಂಕ್ರಾಮಿಕವಾದಂತಿತ್ತು. ಅದರ ಇದಿರು ಯಾರ ಗಾಂಭೀರ್ಯವೂ ಉಳಿಯುವಂತಿರಲಿಲ್ಲ. ಆಕೆ ಅಷ್ಟು ಹರ್ಷಚಿತ್ತಳಾಗಿದ್ದುದನ್ನು ಕಂಡು ಎಷ್ಟೋ ಅಪರೂಪವಾಗಿತ್ತು. ತನ್ನ ತಲೆಯ ಬಲಿಯನ್ನಾದರೂ ಕೊಟ್ಟು ಆ ನಗೆಯನ್ನು ರಕ್ಷಿಸಬೇಕು ಎನಿಸಿತು ಲಿಂಗಣ್ಣನಾಯಕನಿಗೆ.

" ಚಿಕ್ಕಣ್ಣ ಹೇಳುವುದಿಷ್ಟು-ದೇಸಣ್ಣನವರ ಕೊಲೆಮಾಡಿದ ಅಪರಾಧಕ್ಕಾಗಿ ಮುದ್ದಣ್ಣನವರ ಸೆರೆ ಹಿಡಿಯಬೇಕು. ಅವನ ತಲೆ ತಂದವರಿಗೆ ಬಹುಮಾನ ಕೊಡಲಾಗುವುದು ಎಂದು ದರ್ಬಾರಿನಿಂದ ಅಪ್ಪಣೆ ಹೊರಟಿದೆಯಷ್ಟೆ........"

" ಸರಿ!"

" ಅರಮನೆಯವರು ಆ ಆಜ್ಞೆಯನ್ನು ಹಿಂತೆಗೆದುಕೊಂಡು, ಮುದ್ದಣ್ಣ ಮತ್ತು ಅವನ ತಮ್ಮಂದಿರಿಗೆ ಕ್ಷಮೆದೋರುವ ವಾಗ್ದಾನಮಾಡಬೇಕು. "

" ಹೂ. "

—ಆ ಮಾತನಾಡುವಾಗ ಅಪಾರವ್ಯಥೆಯಾದರೂ ಆ ಮಾತನ್ನಾಡಿದಳು ನಾಗತಿ.

" ನಾವು ಹಾಗೆ ಮಾಡುವುದಾದರೆ ಚಿಕ್ಕಣ್ಣ, ದಳವಾಯಿಗಳು ತುಂಬಿದ ಓಲಗದಲ್ಲಿ ನಮ್ಮ ಮುಂದೆ ತಪ್ಪು ಒಪ್ಪಿಕೊಂಡು ಕ್ಷಮೆ ಬೇಡುವಂತೆ ಮಾಡುವುದಲ್ಲದೆ, ಅವರು ಹೊಸ ನಾಯಕರಿಗೆ ನಿಷ್ಠರಾಗಿ ನಡೆದುಕೊಳ್ಳುವ ಪ್ರಮಾಣ ಸ್ವೀಕರಿಸುವಂತೆ ಮಾಡುತ್ತಾನಂತೆ. ಇದರಿಂದ ದುರ್ಗದಲ್ಲಿ ಹೊತ್ತಿರುವ ಅಶಾಂತಿ ತೊಲಗಿ ಹೋಗುತ್ತದೆ. ಚಿಕ್ಕಮ್ಮನವರಿಗೆ ಇದನ್ನು ಹೇಳಿ ಒಪ್ಪಿಸು ಎಂದ. "

ಆ ಮಾತನ್ನು ಕೇಳಿ ನಾಗತಿ ಎರಡು ಗಳಿಗೆ ಚಿಂತಿಸಿ, ಬಳಿಕ ನಿರ್ಧಾರಕ್ಕೆ ಬಂದು ಹೇಳಿದಳು.

" ಅದಕ್ಕೆ ನನ್ನದೇನೂ ಅಡ್ಡಿಯಿಲ್ಲವೆಂದು ಹೇಳು ಲಿಂಗಣ್ಣ. "

" ಚೆನ್ನಾಗಿ ಯೋಚಿಸಿ ಹೇಳಿ ಚಿಕ್ಕಮ್ಮ. "

" ಯೋಚಿಸಬಹುದಾದಷ್ಟನ್ನು ಯೋಚಿಸಿದೆ ಲಿಂಗಣ್ಣ, ಆದರೂ ಏನು ಯೋಚಿಸಬೇಕೆಂದು ಹೇಳು ? "

" ಈ ಕ್ಷಮಾದಾನದಿಂದ ದೇಸಣ್ಣನವರ ಅಭಿಮಾನಿಗಳಿಗೆ ಅತೃಪ್ತಿಯಾಗಬಹುದು—ಇದು ಮೊದಲ ವಿಷಯ. "

" ನಿಜ. ಹಾಗೆಂದು ಹಟಹಿಡಿದು ಮುದ್ದಣ್ಣನ ತಲೆ ತೆಗೆದುಕೊಂಡರೆ, ಆ ಗುಂಪು ಕಡೆಯ ವರೆಗೂ ವಿರೋಧಿಯಾಗಿಯೇ ಉಳಿಯುತ್ತದಲ್ಲಾ ? ಮುದ್ದಣ್ಣನನ್ನು ಕೊಂದರೂ, ನಾವು ದೇಸಣ್ಣನವರನ್ನು

ಉಳಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ, ಮುದ್ದಣ್ಣನ ಕೊಲೆಯಿಂದ ಈ ದ್ವೇಷಪರಂಪರೆ ಬೆಳೆಯಲು ನಾವೇ ಅವಕಾಶ ಮಾಡಿಕೊಟ್ಟಂತಾಗುತ್ತದಲ್ಲಾ. ದೇಸಣ್ಣನವರ ಕೊಲೆಯಿಂದ ಅನ್ಯಾಯವಾಯಿತು. ನಿಜ. ಆದರೆ ಅದನ್ನು ಸರಿಪಡಿಸುವ ಕಾಲ ನಮ್ಮ ಕೈಮೀರಿ ಹೋಯಿತು. ಈಗ, ನಮಗೆ ಅವರಾಗಿಯೇ ಅವಕಾಶ ಒದಗಿಸಿ ಕೊಟ್ಟಿರುವಾಗ, ಈ ಸಾವನ್ನಾದರೂ ತಪ್ಪಿಸಿ ಶಾಂತಿ ನೆಲಸುವಂತೆ ಮಾಡೋಣ ಲಿಂಗಣ್ಣ. ಬೇರೆ ದಾರಿ ಕಾಣದೆ ನಾನು ಮೊದಲ ಅಪ್ಪಣೆಗೆ ಒಪ್ಪಿದ್ದೆ. ಈ ಕೊಲೆ ರಕ್ತಬೀಜಾಸುರನ ರಕ್ತವಿದ್ದಂತೆ ಒಂದು ಹನಿ ಬಿದ್ದಲ್ಲಿ, ಮತ್ತೊಂದು ಕೊಲೆ ಹುಟ್ಟಿಕೊಳ್ಳುತ್ತದೆ. ಎಲ್ಲಾದರೂ ಇದು ಕೊನೆಗಾಣದೆ ನಾವಾರೂ ಉಳಿಯುವುದು ಸಾಧ್ಯವಿಲ್ಲ. ಆದ್ದರಿಂದ ಈ ಕೊಲೆಯ ವಿಷವ್ಯೂಹದಿಂದ ಪಾರಾಗಲು ಒಂದು ಅವಕಾಶ ಸಿಕ್ಕಿದೆ. ಆಗಲಿ ಅನ್ನು, ದೇಸಣ್ಣನವರ ಅಭಿಮಾನಿಗಳು ಅತೃಪ್ತರಾದರೆ, ನಾನು ಅವರ ಕಾಲು ಕಟ್ಟಿಕೊಂಡು ಸಮಾಧಾನ ಹೇಳುತ್ತೇನೆ. ಆಗದೆ ? ”

—ಕಾತರಳಾಗಿ ಕೇಳಿದಳು ನಾಗತಿ.

“ ಅದು ಆಗಲಾರದಂಥ ಅಸಾಧ್ಯ ಕೆಲಸವೇನಲ್ಲ ಚಿಕ್ಕವ್ವ. ದೇಸಣ್ಣನವರ ಅಭಿಮಾನಿಗಳಾರೂ ರಕ್ತಪಿಪಾಸಿಗಳಾದ ದಾನವರಲ್ಲ. ಅಲ್ಲದೆ ಅವರ ಅಭಿಮಾನಿಗಳಲ್ಲಿ ನಾನೇ ಮುಖ್ಯನಲ್ಲವೇ ? ಆದರೂ........”

“ ಮತ್ತೆ ಏನು ಆದರೂ.........? ”

“ ಆದರೂ ...ಹೀಗಾಗಬಹುದಾದರೂ....ಈ ಮಾತುಗಳನ್ನು ಎಷ್ಟರ ಮಟ್ಟಿಗೆ ನಂಬಬಹುದು ಎಂಬುದೇ ನನಗೆ ಯೋಚನೆಯಾಗಿದೆ. ತೋರಿಕೆಗೆ ಬಹು ಸರಳವಾಗಿ ಸುಂದರವಾಗಿ ಕಾಣುವ ಈ ಮಾತುಗಳ ಗರ್ಭದಲ್ಲಿ ಎಲ್ಲಿ ಕುತಂತ್ರದ ಕಾಳಸರ್ಪ ಹುದುಗಿದೆಯೋ ಎಂದು ನನಗೆ ಚಿಂತೆಯಾಗಿದೆ.”

“ ನೀನು ಪ್ರಧಾನಿಪಟ್ಟ ಕಟ್ಟಿಸಿಕೊಂಡು ಕೆಟ್ಟೆ ಲಿಂಗಣ್ಣ. ಈ ಸಂಶಯದ ಬುದ್ಧಿ ಒಳಿತಲ್ಲ. ಅದು ಹಸುಮಗುವಿನ ನಗೆಯಲ್ಲೂ ಕುತ್ಸಿತವನ್ನು ಕಾಣುವಂತೆ ಮಾಡುತ್ತದೆ.”

“ ಅದು ನಿಜ ಚಿಕ್ಕವ್ವ. ಆದರೂ ಇದು ಬಹಳ ದೊಡ್ಡ ಜವಾಬ

ದಾರಿ. ಕೊಂಚ ಹೆಚ್ಚು ಕಡಮೆಯಾದರೂ, ನಾವು ಇಷ್ಟು ಪಷ್ಟಪಟ್ಟು ಸಾಧಿಸಿದ ಕೆಲಸ ಮಣ್ಣುಪಾಲಾಗಿ ಹೋಗುತ್ತದೆ. ಒಂದು ಕಡೆ ಆ ಚಿಂತೆ ಇನ್ನೊಂದು ಕಡೆ,...."

"ಇನ್ನೊಂದು ಕಡೆ ಏನು ?"

"ಎಂದೂ ಇಲ್ಲದೆ ಚಿಕ್ಕಣ್ಣನಾಯಕನ ಹೃದಯದಲ್ಲಿ ಒಳ್ಳೆಯ ತನ ಇದ್ದಕ್ಕಿದ್ದ ಹಾಗೇ ಎಲ್ಲಿಂದ, ಏಕೆ ಬಂದಿತು ಎಂಬ ಚಿಂತೆ."

"ಎಂಥ ಹುಚ್ಚುಚಿಂತೆ ನಿನ್ನದು ಲಿಂಗಣ್ಣಾ, ನಿನ್ನನ್ನು ಹಡೆದ ತಾಯಿಯೇ ಚಿಕ್ಕಣ್ಣನನ್ನೂ ಹಡೆದವಳು ಎಂಬುದನ್ನು ಮರೆತು ಬಿಟ್ಟೆಯಾ? ಇರಬಹುದು; ಒಂದು ಗಳಿಗೆ ಅವನ ಬುದ್ಧಿಗೂ ಗ್ರಹಣ ಹಿಡಿದಿರಬಹುದು. ಈಗ ಅದು ಬಿಟ್ಟುಹೋಯಿತು ಎಂದು ಹರ್ಷಿಸದೆ, ಬೆಳಕಿನಲ್ಲೂ ಕತ್ತಲೆಲ್ಲಾದರೂ ಕಾಣುತ್ತದೆಯೇ ಎಂದು ಹುಡುಕುವುದೇಕೆ? ಚಿಕ್ಕಣ್ಣನ ಈ ಮಾತಿನಲ್ಲಿ ಮೋಸವಿಲ್ಲೆಂದು ನನಗೆ ನಂಬಿಕೆ ಇದೆ ಲಿಂಗಣ್ಣ."

"ಯಾವ ಆಧಾರದ ಮೇಲಿನ ನಂಬಿಕೆ ಚಿಕ್ಕಮ್ಮಾ?"

"ನನ್ನ ದೇವರ ಮೇಲಿನ ಆಧಾರದ ನಂಬಿಕೆ. ನೀನು ಬರುವುದಕ್ಕಿಂತ ಒಂದು ಗಳಿಗೆ ಮುಂಚೆ ಏನಾಯಿತೆಂದು ನಿನಗೆ ತಿಳಿಯದು.

"ಏನಾಯಿತು ?"

"ನನ್ನ ಗಿರಿಜೆಯ ದುಃಖವನ್ನು ನೋಡಲಾಗದೆ ದೇವರೇ–ಈ ಕೊಲೆ ನಿಲ್ಲಿಸು, ಶಾಂತಿಯನ್ನುತಾ ಎಂದು ಬೇಡಿದೆ. ಅವನ ರೂಪವಾಗಿ ನೀನು ಈ ಶಾಂತಿಯ ಮಾತನ್ನು ತಂದೆ. ಹೇಳು, ಇದು ಯಾರ ಕೈವಾಡ? ನನ್ನದೇ, ನಿನ್ನದೇ, ಚಿಕ್ಕಣ್ಣನದೇ, ಆ ಹಾಳು ದಳವಾಯಿಯದೇ? ಊಹೂ ಯಾರದೂ ಅಲ್ಲ. ಇಷ್ಟು ದಿನ ನನ್ನನ್ನು ಕಾಡಿಸಿದ ಅವನು. ಇಷ್ಟು ದಿನ ಬೇಡಿಕೊಂಡೆ. ಅವನ ಕಿವಿಗೆ ಬೀಳಲಿಲ್ಲ. ಈ ದಿನ ನನ್ನ ಮಾತು ಅವನ ಕಿವಿಗೆ ಬಿತ್ತು. ಕೂಡಲೇ ನಡೆಸಿಕೊಟ್ಟ. ನೀನು ತಂದ ಮಾತು, ನಿನ್ನದಲ್ಲ ಲಿಂಗಣ್ಣ, ಆ ತಂದೆ ನನಗೆ ಹೇಳಿಕಳಿಸಿದ ಮಾತು. ಅಬ್ಬಾ–ಒಂದು ಗಳಿಗೆ ನಾನೂ ಎಷ್ಟು ಹೆದರಿದ್ದೆ. ಹುಚ್ಚು ಹುಡುಗಿ ಗಿರಿಜಾ, ಎಷ್ಟು ಬೇಗ ಬಾಡಿ ಹೋದಳು ಈ ದುಃಖದ ಉರಿಯಲ್ಲಿ. ಸ್ವಾಮಿಯೇ ಕಾಪಾಡಿದ. ಈ ದೇವರ ಲೀಲೆ ಎಷ್ಟು ವಿಚಿತ್ರ

ನೋಡು ಲಿಂಗಣ್ಣ. ನನಗೆ ಬೇಗ, ಶಾಂತಿ ನೀಡು ಎಂದರೆ ಕೇಳಲಿಲ್ಲ. 'ನಮ್ಮಪ್ಪ, ನನ್ನ ಉರಿಯಲ್ಲಿ ಆ ಹೂವೂ ಬಾಡಬೇಕೇ ?' ಎಂದು ಕೇಳಿದರೆ, ಕೂಡಲೇ ಓಡಿಬಂದ. ಸದ್ಯ. ಅವಳ ಕಿವಿಗೆ ಆದಷ್ಟು ಬೇಗ ಈ ಹಾಲು ಹುಯ್ಯಬೇಕು."

ನಾಗತಿಯ ಹರ್ಷ, ಉತ್ಸಾಹ, ನಂಬಿಕೆಗಳ ಬಿಸಿಯು ಸೋಂಕಿ, ಲಿಂಗಣ್ಣನಾಯಕನ ತಲೆಯನ್ನು ಕವಿದಿದ್ದ ಸಂದೇಹದ ಮೋಡವೂ ಚೆದರಿ ಅವನ ತಲೆಯ ಮೇಲಿನ ಭಾರವೂ ಕಡಮೆಯಾಯಿತು.

" ಗಿರಿಜವ್ವೆಗೇನು ದುಃಖಬಂದಿತ್ತು ಚಿಕ್ಕಮ್ಮ ? "

ಗಿರಿಜೆ ಹೇಳಿದ ಮಾತು, ಆ ಮಾತು ಹೇಳುವ ಮೊದಲು ಅವಳು ಪಟ್ಟಿದ್ದ ದುಃಖ, ಹೇಳುವಾಗಿನ ಅವಳ ಯಾತನೆ, ಆ ಬಳಿಕಿನ ಜೇಗೆಯನ್ನು ಲಿಂಗಣ್ಣನಾಯಕನ ಕಣ್ಣಿಗೆ ಕಟ್ಟುವಂತೆ ಹೇಳಿ—

" ಯಾರುಯಾರನ್ನು ಎಷ್ಟು ಪರೀಕ್ಷಿಸಿ ನೋಡಿದರೂ ತೃಪ್ತಿಯಿಲ್ಲ ನನ್ನಪ್ಪನಿಗೆ. ನನ್ನದಾಯಿತು, ನಿನ್ನದಾಯಿತು, ದೇಸಣ್ಣನವರದಾಯಿತು, ಭುವನಪ್ಪನವರದಾಯಿತು, ಕಡೆಗೆ ಈ ಹುಡುಗಿ ಇನ್ನೂ ಕಟ್ಟಿಕೊಳ್ಳದಿದ್ದ ತಾಳಿಗೇ ಕೈಹಾಕಿ 'ಇದೂ ಬೇಕು ಕೊಡು' ಎನ್ನುವುದೇ ಹಾಳಾದವನು. ಈ ಹುಡುಗಿ ಅದಕ್ಕೆ ಹೆದರಿ 'ಇಲ್ಲ' ಎಂದಿದ್ದರೆ ಅದನ್ನೂ ಕಿತ್ತುಕೊಂಡೇ ಬಿಡುತ್ತಿದ್ದನೇನೋ ಹಟಮಾರಿ. 'ಆಯಿತು. ನಿನ್ನಿಚ್ಛೆ ಬಂದ ಹಾಗೆ ಮಾಡು' ಎಂದಳು. ಆ ಮಾತು ಹೇಳಿ ಬದುಕಿದಳು ಅವಳು. ಅವಳೊಂದಿಗೆ ನಮ್ಮನ್ನೂ ಬದುಕಿಸಿದ. ಎಲ್ಲಿ ಹೋಗಿ ಅಳುತ್ತಾ ಮಲಗಿದಾಳೋ ಮೊದಲು ಅವಳಿಗೆ ಇವನ್ನು ಹೇಳಬೇಕು."

" ನಿಮ್ಮದು ತುಂಬಾ ನಂಬಿಕೆಯ ಸ್ವಭಾವ ಚಿಕ್ಕಮ್ಮ—ಅಷ್ಟೇ ಕೋಮಲ."

—ಅಚ್ಚರಿ-ಮೆಚ್ಚುಗೆಗಳೆರಡೂ ಬೆರೆತ ಧ್ವನಿಯಲ್ಲಿ ಹೇಳಿದ ಲಿಂಗಣ್ಣನಾಯಕ."

" ನಂಬಿಕೆಯ ಸ್ವಭಾವವಲ್ಲ, ಅವನನ್ನು ನಂಬುವ ಸ್ವಭಾವ ಅನ್ನು. ನಂಬಿದವರನ್ನು ಸ್ವಾಮಿ ಕೈ ಬಿಡುವುದಿಲ್ಲ ಲಿಂಗಣ್ಣ. ಆತನ ಪ್ರೇರಣೆಯಾದ ಹಾಗೆ ಮಾಡುವ ಶಕ್ತಿ ಮಾತ್ರ ನಮಗೆ ಬೇಕು."

“ ನೀವೇನೋ ನಂಬುತ್ತೀರಿ ಚಿಕ್ಕಮ್ಮ. ಆದರೆ ನಿಮ್ಮ ಮಾತನ್ನು ನಂಬಲು ನಮಗೆ ಕಷ್ಟವಾಗುತ್ತದೆ.”

“ ಅಂತೂ ನಾನು ನಂಬಿಕೆಗೆ ಅರ್ಹಳಲ್ಲ ಎನ್ನು. ಹುಚ್ಚು ಹುಡುಗ-ನಿನಗಿನ್ನೂ ಅನುಭವ ಸಾಲದು. ಆದಕ್ಕೇ ಎಲ್ಲವನ್ನೂ ನಾಶಮಾಡುತ್ತೇನೆ ಎಂತ ಕುಣಿಯುತ್ತೀಯೆ-ಎಲ್ಲವನ್ನೂ ನಡಸುವವನು ಅವನು ಎನ್ನುವುದನ್ನು ಮರೆತು, ಅವತ್ತು ಅರಮನೆಯ ಮುಂದೆ ಸೈನಿಕರು ನುಗ್ಗಿದಾಗಲೂ ಹಾಗೇ ಮಾಡಿದೆ. ಕತ್ತರಿಸುತ್ತೇನೆ, ಕಡಿಯುತ್ತೇನೆ, ಕತ್ತಿ ಕೋವಿ ಅಂತ ಕುಣಿದಾಡಿದೆ. ನಾನು ಅವರೊಂದಿಗೆ ಮಾತಾಡುತ್ತೇನೆ ಎಂದಾಗ ಹೆದರಿದೆ. ಆದರೆ ನಾನು, ನನ್ನನ್ನು ಪ್ರೇರೇಪಿಸಿದ ಸ್ವಾಮಿಯನ್ನು ನಂಬಿ ಮುಂದೆ ಹೋದೆ. ಎಲ್ಲವೂ ಸಮಾಧಾನವಾಗಿ ಮುಗಿಯಿತು. ವಿನಾ ಕಾರಣ ಅಷ್ಟು ರಕ್ತ ಹರಿಯುವುದು ತಪ್ಪಿತು. ಅಲ್ಲವೇ ? ”

“ ಆ ದಿನ ನಿಜವಾಗಿಯೂ ನನಗೆ ಏನಾಗುವುದೋ ಎಂದು ಹೆದರಿಕೆಯಾಗಿತ್ತು. ಆ ಪಶು ಮಂದೆ ನಿಮ್ಮನ್ನೇನು ಮಾಡುವುದೋ ಎಂದು ದಿಗಿಲಾಗಿತ್ತು.

“ ಅದಕ್ಕೇ ನಿನ್ನನ್ನು ಹುಚ್ಚು ಹುಡುಗ ಎನ್ನುವುದು ನಾನು. ಅವರನ್ನು ಪಶುಮಂದೆ ಎಂದೆ. ಆಯಿತು—ನಾವೇನು ದೇವತೆಗಳೇ ? ಅಲ್ಲ. ಪ್ರತಿಯೊಬ್ಬ ಮನುಷ್ಯರಲ್ಲೂ ಪಶುತ್ವವೂ ಇದೆ, ದೈವತ್ವವೂ ಇದೆ. ಆದರೆ ನಾವು ಪಶುತನವನ್ನೇ ಲೆಕ್ಕ ಹಾಕಿ ನಡೆದರೆ, ಕಣ್ಣೀರು ತಪ್ಪುವುದಿಲ್ಲ. ದೈವತ್ವವನ್ನು ಗುರುತಿಸಿ ನಡೆದರೆ ಏನೂ ಅಪಾಯವಾಗುವುದಿಲ್ಲ ಹೋಗು—ಚಿಕ್ಕಣ್ಣನಿಗೆ ನಾವಿದನ್ನು ಒಪ್ಪಿದೇವೆ ಎಂದು ಹೇಳು. ಆದಷ್ಟು ಬೇಗ ಈ ಕಿಚ್ಚು ಆರಲಿ. ದೇವರ ಮೇಲೆ ಭಾರ ಹಾಕಿ ಕೆಲಸ ಮಾಡು ಲಿಂಗಣ್ಣ. ಕೆಡಕೇನೂ ಆಗುವುದಿಲ್ಲ ”—ಎಂದಳು ನಾಗತಿ. ಆಕೆಯ ಮಾತಿಗೆ ಬೇಡ ಎನ್ನುವ ಧೈರ್ಯ ಲಿಂಗಣ್ಣನಾಯಕನಿಗಾಗಲಿಲ್ಲ ; ‘ಬೇಡ’ ಎನ್ನಲು ಕಾರಣವೂ ಕಾಣಲಿಲ್ಲ.

“ ದೇವರಿದಾನೋ ಇಲ್ಲವೋ ನಾನು ಕಾಣೆ. ನನಗೆ ಕಾಣುವವಳು ನೀನು. ನಿನ್ನ ಮೇಲೆ ಭಾರ ಹಾಕಿ, ನೀನು ಹೇಳಿದ ಹಾಗೆ ಮಾಡುತ್ತೇನೆ ” —ಎಂದು ಹೇಳಿ ಲಿಂಗಣ್ಣನಾಯಕ ಹೊರಟುಹೋದ.

ಅವನು ಹೋಗುವ ವರೆಗೂ ಸುಮ್ಮನಿದ್ದು ಬಳಿಕ ನಾಗತಿ "ಗಿರಿಜಾ....ಗಿರಿಜಾ...." ಎಂದು ಕೂಗಿದಳು. ಆದರೆ ಎಂದಿನಂತೆ, ಅವಳ ಕೂಗು ಕೇಳುತ್ತಿದ್ದ ಹಾಗೇ ಗಿರಿಜೆ ಕಾಣಿಸಿಕೊಳ್ಳಲಿಲ್ಲ.

" ಹೂ. ದಾಸಿಯರು ನಮ್ಮನ್ನು ಹುಡುಕಿಕೊಂಡು ಬರಬೇಕು. ನಮ್ಮ ಕೂಗು ಕೇಳೀತೇ ಎಂದು ಕಾಯುತ್ತಿರಬೇಕು. ಅದು ತಪ್ಪಿ ಈಗ ನಾವೇ ದಾಸಿಯರನ್ನು ಹುಡುಕಿಕೊಂಡು ಹೋಗುವ ಕಾಲ ಬಂದ ಹಾಗಾಯಿತು."

—ಎಂದುಕೊಳ್ಳುತ್ತಾ ನಾಗತಿ, ತನ್ನ ಕರೆಗೆ ಓಗೊಡದಿದ್ದ ಗಿರಿಜೆಯನ್ನು ಹುಡುಕಿಕೊಂಡು ಹೊರಟಳು.

ಆಕೆಯ ಹೃದಯದಲ್ಲಿ ಲಾಸ್ಯವಾಡುತ್ತಿದ್ದ ಹರ್ಷಕ್ಕೆ ತಾಳಹಾಕಿದಂತೆ, ಗಿರಿಜೆಯನ್ನು ಹುಡುಕಿಕೊಂಡು ಹೊರಟ ನಾಗತಿಯ ಹೆಜ್ಜೆ ಹಗುರವಾಗಿ, ಚಿಮ್ಮಿ ನಡೆಯಿತು.

೮

ಚಿಕ್ಕಣ್ಣನಾಯಕನ ಸಂಧಾನದಿಂದ ದುರ್ಗಕ್ಕೆ ಹಿಡಿದ ಗ್ರಹಣ ಸ್ವಲ್ಪ ಮಟ್ಟಿಗೆ ಬಿಟ್ಟಂತಾಗಿತ್ತು. ರಣಬಯಲಿನಲ್ಲಿ ರಚಿತವಾದ ನೆಲೆಮನೆಯೊಂದರಲ್ಲಿ ಬಚ್ಚಿಡಲ್ಪಟ್ಟಿದ್ದ ಓಬಣ್ಣನಾಯಕನನ್ನು ಮೂರು ದಿನಗಳ ಕಾಲ ಕಣ್ಣರೆಪ್ಪೆ ಹೊಯ್ಯದೆ ಕಟ್ಟೆಚ್ಚರದಿಂದ ಕಾದ ಕಸ್ತೂರಿನಾಯಕನಿಗೆ, ಆ ದಿನ ನಾಗತಿಯಿಂದ, ತನ್ನ ಹಳ್ಳಿಗೆ ಹೋಗಿಬರಲು ಬಿಡುವು ದೊರೆತಿತ್ತು. ಯಾವ ಗಳಿಗೆಗೆ ಏನು ವಿಪತ್ತು ಬರುವುದೋ, ಎಂಥ ಘೋರವನ್ನು ಎದುರಿಸಬೇಕಾಗುವುದೋ ಎಂಬ ಭೀತಿ ನಿರೀಕ್ಷೆಯಿಂದ ಬಿಗಿದಿದ್ದ ಅವನ ಮೈಯ ನರಗಳು, ಅನಿರೀಕ್ಷಿತವಾಗಿ ದೊರಕಿದ ನಾಗತಿಯ ಅನುಮತಿಯಿಂದ ಸಡಿಲವಾಗಿ, ಅವನ ಹೃದಯ ಹಳ್ಳಿಯನ್ನು ಸೇರಲು ಆತುರವಾಗಿತ್ತು. ಎಂತಲೇ ನಾಗತಿಯ ಅಪ್ಪಣೆಯಂತೆ ನಾಯಕರನ್ನು ಸುರಂಗ ಮಾರ್ಗದ ಮೂಲಕ ಅರಮನೆಗೆ ತಲುಪಿಸಿದವನೇ, ನಾಗತಿಯವರೇ ಉಂಡು ಹೋಗೆಂದು ಹೇಳಿದರೂ ವಿನಯವಾಗಿಯೇ ಕ್ಷಮೆಯನ್ನು ಕೋರಿ, ಹಳ್ಳಿಗೆ ಹೊರಟಿದ್ದ. ಆದರೆ ಹಾಗೆ ಹೋಗುವಾಗಲೂ ಅವನು ತನ್ನ ಹೊಣೆಗಾರಿಕೆಯನ್ನು ಮರೆತಿರಲಿಲ್ಲ. ಗಿರಿಜೆಯನ್ನು ಒಂದು ಪಕ್ಕಕ್ಕೆ ಕರೆದು, 'ಏನಾದರೂ

ಆದರೆ ಕೂಡಲೇ ಸುದ್ದಿ ಕಳಿಸು' ಎಂದು ಹೇಳಿ ಅರಮನೆಯಿಂದ ಹೊರ ಬಿದ್ದವನು, ಕುದುರೆಯನ್ನೇರಿ, ಹಳ್ಳಿಯತ್ತ ದೌಡಾಯಿಸಿದ.

ಇದ್ದಕ್ಕಿದ್ದ ಹಾಗೇ ಮನೆಗೆ ಬಂದ ಗಂಡನನ್ನು ಕಂಡು, ಗಂಗವ್ವನಿಗೆ ಪ್ರಪಂಚವೇ ದೊರೆತಷ್ಟು ಹರ್ಷವಾಯಿತು. ಒಂದು ಗಳಿಗೆ ಅವಳು ತನ್ನ ಕಣ್ಣನ್ನೇ ನಂಬಲಿಲ್ಲ. ಮೂರು ದಿನದಿಂದ ಮನೆಗೆ ಬರದ ಗಂಡ, ಇಂದು ಇದ್ದಕ್ಕಿದ್ದ ಹಾಗೇ ಹಗಲು ಹೊತ್ತಿನಲ್ಲೇ ಮನೆಗೆ ಬಂದಿದಾನೆ? ಆತನನ್ನು ನೋಡಿ ಅವಳಿಗೆ ಏನು ಮಾಡಬೇಕೆಂಬುದೂ ತೋಚಲಿಲ್ಲ. ದಿನದ ಹಾಗಿದ್ದರೆ, ಗಂಡ ಬಂದಕೂಡಲೇ ಕೈಕಾಲಿಗೆ ನೀರು ಕೊಟ್ಟು ಉಪಚರಿಸಬೇಕಾಗಿತ್ತು. ಆದರೆ ಇಂದು ಅವಳಿಗೆ ಅದಾವುದೂ ತೋಚುತ್ತಿಲ್ಲ. ಅಂಗಳದಲ್ಲಿ ಕುದುರೆಯಿಂದಿಳಿದು ಮನೆ ಬಾಗಿಲಿಗೆ ಬಂದ ಗಂಡನನ್ನು ಕಂಡು, ಏನು ಮಾಡಬೇಕೆಂದು ತೋಚದೆ, ಹಜಾರವನ್ನು ಒಂದೆರಡು ಬಾರಿ ಸುತ್ತಿದಳು. ಬಾಗಿಲಲ್ಲಿ ನಿಂತ ಕಸ್ತೂರಿನಾಯಕ ಕಾಲು ತೊಳೆಯದೆಯೇ ಒಳಗೆ ಬರಲಾರದೆ ಅಲ್ಲೇ ನಿಂತು, 'ಗಂಗಾ' ಎಂದು ಕೂಗಿದ. ಆ ಎರಡಕ್ಷರದ ಕೂಗು ಅದೇನು ಮೋಡಿ ಮಾಡಿತೋ! ಲೋಕವನ್ನೇ ಮರೆತು, ಅವನತ್ತ ಹಾರಿ ತಬ್ಬಿಕೊಂಡಳು. ಕಸ್ತೂರಿನಾಯಕನಿಗೂ ಅದರಿಂದ ಮತ್ತು ಬಂದಂತಾಗಿ, ಅವನ ತೋಳು, ಅವಳನ್ನು ತನ್ನೆದೆಗೆ ಬಿಗಿದುಕೊಂಡಿತು. ಅರೆಚಣ ಈ ಮೈಮರೆವು. ಬಳಿಕ ಸಾಧಾರಣವಾಗಿ ಹೆಣ್ಣಿಗೆ ಸುತ್ತಲ ಜಗತ್ತಿನ ಅರಿವಾಗಬೇಕಿತ್ತು. ಆದರೆ ಈ ದಿನ ಅವಳನ್ನು ಕವಿದಿದ್ದ ಮಾಯೆ ಬಲವಾಗಿದ್ದುದರಿಂದ, ಅವಳು ತಾನಾಗಿಯೇ ಲೋಕಕ್ಕೆ ಬರುವ ಸ್ಥಿತಿಯಲ್ಲಿರಲಿಲ್ಲ. ಕಸ್ತೂರಿನಾಯಕನೇ ಪ್ರಜ್ಞೆ ತಂದುಕೊಂಡು ತೋಳು ಸಡಲಿಸಿದರೆ, ಅವಳೆಲ್ಲಿ ನೆಲಕ್ಕೆ ಕಳಚಿ ಬೀಳುವಳೋ ಎಂದು ಹೆದರಿ, ಹಾಗೇ ಹಗುರಾಗಿ ಹಿಡಿದು—

"ಮಾವಯ್ಯ ಮನೆಯಲ್ಲಿಲ್ಲವೇ ಗಂಗಾ ?"

— ಎಂದು ಕೇಳಿದ.

"ಆ........"

—ಕಸ್ತೂರಿನಾಯಕನ ಮಾತೇ ಅರ್ಥವಾಗದಂತೆ ಕೇಳಿದಳು ಗಂಗವ್ವ.

“ಅಯ್ಯೋ ಹುಚ್ಚಿ! ಕೇಳಿದ ಮಾತೂ ಅರ್ಥವಾಗದಷ್ಟು ಮೈ ಮರೆವೇ ? ಮಾವಯ್ಯ ಮನೆಯಲ್ಲಿಲ್ಲವೇ ಗಂಗಾ ?”

“ಸದ್ಯ ಬದುಕಿದೆ. ಇದೇನು ಹುಚ್ಚು ಗಂಗಾ. ಮಾವಯ್ಯ ಮನೆಯಲ್ಲಿದ್ದರೆ ಏನು ಗತಿ ?”

“ಹುಚ್ಚು ಹಿಡಿಸಿದ ನೀವೇ ಹಾಗೆ ಹೇಳಿದರೆ ನಾನೇನು ಮಾಡಲಿ. ಮಾವಯ್ಯ ಸಿಟ್ಟಾಗಿದ್ದರೆ ತಪ್ಪು ನಿಮ್ಮದೇ ಎಂದು ಹೇಳಿಬಿಡುತ್ತಿದ್ದೆ.”

“ಅಂತೂ ಮಾವಯ್ಯ ನನ್ನನ್ನ ಬಯ್ಯುವ ಹಾಗೆ ಮಾಡಿ ನೀನು ಸಂತೋಷಪಡುತ್ತಿದ್ದಿಯಲ್ಲವೇ ? ಎಂಥ ಕಲ್ಲು ಹೃದಯವೇ ನಿನ್ನದು.”

“ಹೂ. ನನ್ನದು ಕಲ್ಲು ಹೃದಯ. ಮೂರು ದಿನದಿಂದ ಮುಖ ತೋರಿಸದೆ, ಕಣ್ಣೀರಿನಲ್ಲಿ ಕೈತೊಳೆಸಿದ ನಿಮ್ಮದು ಕಲ್ಲು ಹೃದಯವೋ, ನನ್ನದೋ ? ಅಬ್ಬ—ಎಷ್ಟು ಹೆದರಿಸಿಬಿಟ್ಟಿದ್ದಿರಿ ನೀವು. ನನ್ನ ಜೀವ ಹಿಡಿಯಾಗಿಹೋಗಿತ್ತು.”

“ಈಗ ಉಬ್ಬಿ ಮನೆತುಂಬಾ ಹಿಡಿಸುವಷ್ಟಾಯಿತಲ್ಲವೇ ಅಲ್ಲಾ—ನಾನು ಮನೆಯೊಳಗೆ ಬರಬೇಕೊ, ಹೀಗೇ ಬಿಸಿಲಿನಲ್ಲಿ ನಿಂತಿರುವ ಶಿಕ್ಷೆ ವಿಧಿಸುತ್ತೀಯೋ ?”

ಆಗ ಗಂಗವ್ವನಿಗೆ ಗಂಡನಿಗೆ ಕೈಕಾಲಿಗೆ ನೀರು ಕೊಡಲಿಲ್ಲವೆಂಬುದು ನೆನಪಾಗಿ ನಾಚಿಕೆಯಾಯಿತು. ಆದರೂ ಅದನ್ನು ತೋರಗೊಡದೆ—

“ಮೂರು ಮೂರು ದಿನ ಕಾಡಿಸಿದಿರಲ್ಲಾ ಅದಕ್ಕೆ ಅಷ್ಟಾದರೂ ಶಿಕ್ಷೆಯಾಗಲಿ”

—ಎಂದು ನಗುತ್ತ ಹೇಳಿ, ನೀರು ತರಲು ಮನೆಯೊಳಗೆ ಹೋದಳು. ನೀರು ತರಲು ಹೋಗುವಾಗಲೂ, ಅವಳ ಹೆಜ್ಜೆಯಲ್ಲಿ ಗಂಡನಿಗಾಗಿ ಲೋಕವನ್ನೇ ಗೆದ್ದುತರುವ ಸಂಭ್ರಮವಿತ್ತು. ಅವಳ ಉತ್ಸಾಹವನ್ನು ಕಂಡು ಕಸ್ತೂರಿನಾಯಕನಿಗೆ ಎಷ್ಟು ಸಂತೋಷಹಾಯಿತೋ, ಅಷ್ಟೇ ಮೂರು ದಿನ ಈ ಮುದ್ದು ಜೀವವನ್ನು ಬಳಲಿಸಿದೆನಲ್ಲಾ ಎಂದು ದುಃಖವೂ ಆಯಿತು. ಆ ದುಃಖದ ಕಾವಿಲ್ಲದಿದ್ದರೆ, ಸಂತೋಷದ ಹೂವು ಇಷ್ಟು ಭೋಗವಾಗಿ ಅರಳುತ್ತಿತ್ತೋ ಎಂದು ಯೋಚಿಸುತ್ತ ನಿಂತಿದ್ದ.

ಅವನು ಹಾಗೆ ನಿಂತಿರುವಾಗಲೇ ಗದ್ದೆಯಿಂದ ಪಾಪನಾಯಕ ಮನೆಗೆ ಹಿಂದಿರುಗಿ, ಬಿಸಿಲಿನಲ್ಲಿ, ಹೊರಗೆ ನಿಂತ ಕಸ್ತೂರಿನಾಯಕನನ್ನು ನೋಡಿ—

“ ಅರಮನೆ ಬಿಡ್ತಾ ಅಪ್ಪಯ್ಯಾ, ಇದೇನು ಬಿಸಿಲಿನಾಗೇ ನಿಂತಿದಿ. ಮೂರು ದಿನದಿಂದ ಬರಲಿಲ್ಲಾಂತ ಶಿಕ್ಷೆ ಕೊಟ್ಟಳೋ ಕೈಹಿಡಿದೋಳು ”— ಎಂದು ಕೇಳಿ ನಕ್ಕ.

“ ಊಹು. ನೀರು ತರಲಿಕ್ಕೆ ಹೋಗಿದಾಳೆ. ಗದ್ದೆ ಕೆಲಸ ಮುಗಿಯಿತೇ ಮಾವಯ್ಯ. ”

“ ಒಂದು ದಿನ, ಒಪ್ಪತ್ತಿನಾಗೆ ಮುಗಿಯುತ್ತೇ ಅದು? ಅಲ್ಲಿಗೇ ಬುತ್ತಿ ತಗೊಂಡು ಹೋಗೋಣಾಂತ ಬಂದೆ. ”

“ ಗಂಗೆ ಹೇಳಿದ್ರೆ ತರತಾ ಇದ್ದಳಲ್ಲ. ”

“ ಹೂ. ಅಪರೂಪಕ್ಕೆ ನೀನು ಬಂದ ಮೇಲೆ ಅವಳಿಗೆ ನಮ್ಮ ನೆಪ್ಪ ಉಳಿದೀತಾ ?....ಲೇ....ಹೆಣ್ಣೆ....ಎಷ್ಟೊತ್ತು ನೀರು ತರೋದು ? ಗಂಡಸರು ಬಾಗಿಲಲ್ಲಿ ನಿಂತಿದ್ದಾರೆ ಅನ್ನೋ ಜ್ಞಾನ ಇಲ್ಲವಾ ”

—ಎಂದು ತೋರಿಕೆಯ ಕ್ರೋಧವನ್ನು ತೋರಿ, ಅಬ್ಬರಿಸಿದ. ಅದನ್ನು ಕಂಡು ಕಸ್ತೂರಿನಾಯಕನಿಗೆ ನಗು ಬಂತು. ಬಾಗಿಲಲ್ಲಿ ಮಾವನ ಕೂಗು ಕೇಳಿ, ಬೇಗ ನೀರು ತಂದ ಗಂಗವ್ವನಿಗೆ ಒಂದು ನಿಮಿಷ “ ಈ ಮಾವಯ್ಯ ಈಗಲೇ ಬರಬೇಕಾಗಿತ್ತೆ. ಇನ್ನೊಂದು ಗಳಿಗೆ ಬಿಟ್ಟುಕೊಂಡು ಬಂದಿದ್ದರೆ ಆಗಿತ್ತು ” ಎಂದುಕೊಂಡು, ಮರುಗಳಿಗೆಯೇ ತನ್ನ ಯೋಚನೆಗಾಗಿ ತಾನೇ ನಾಚಿದಳು.

“ ಅತ್ತೆವ್ವಾ ಇದ್ದಾಗಲೂ ಹೆಂಗಸರನ್ನು ಹೀಗೇ ಹೆದರಿಸಿಕೊಂಡು ಮುಕ್ತಿದ್ಯಾ ಮಾವಯ್ಯ ”

—ಕಸ್ತೂರಿನಾಯಕ ಕಾಲುತೊಳೆದುಕೊಳ್ಳುತ್ತಾ ಕೇಳಿದ.

“ ಊಹೂ. ಆಗ ಮಾತೇ ಇರ್ಲಿಲ್ಲ. ”

“ ಮತ್ತೆ ? ”

“ ನಾಲಗೆ ಮಾಡೋ ಕೆಲಸ ಬಾರುಕೋಲು ಮಾಡ್ತಿತ್ತು. ಈಗೇನದೆ ಕಲಿಕಾಲ ಬಂದು ಎಲ್ಲಾ ಕೆಟ್ಹೋಯ್ತು. ಸಣ್ಣೋರಿಗೆ ದೊಡ್ಡೋರ ಹೆದರಿ

ಕೇನೇ ಇಲ್ಲದ್ಹಂಗಾಗಿದೆ. ಅಂದಹಾಗೆ ದುರ್ಗದ ಗದ್ದಲ ಎಲ್ಲಿಗೆ ಬಂತು ? ”

ಕಾಲುತೊಳೆಯಲು ನೀರು ಹಿಡಿದು ನಿಂತ ಪಾಪನಾಯಕ ಅಲ್ಲೇ ಮಾತಿಗೆ ನಿಂತುದನ್ನು ಕಂಡು, ಹೀಗೇ ಬಿಟ್ಟರೆ ಸಂಜೆಯವರೆಗೂ ಅಲ್ಲೇ ನಿಲ್ಲಬಹುದೆಂದು ಹೆದರಿ ಗಂಗವ್ವ ಆ ಮಾತಿನ ಸರಪಣಿ ಮುರಿಯಲು,

“ ತಟ್ಟೆ ಇಟ್ಟು ಬಡಿಸಿದೀನಿ. ಪದಾರ್ಥ ಆರಿ ಹೋಗ್ತದೆ ” ಎಂದಳು.

“ ನೊಡ್ದ್ಯಾ ಅಪ್ಪಯ್ಯ, ಮುದುಕಾ ನಿನ್ನ ಬುಡುಬುಡಿಕೆ ಮುಚ್ಚು ಎಂತ ಎಷ್ಟು ನಯವಾಗಿ ಹೇಳ್ತದೆ ಈ ಹೆಣ್ಣು ! ”

—ಎಂದು ಹೇಳಿ, ನಗುತ್ತಾ ಬೇಗ ಕಾಲು ಮುಖ ತೊಳೆದುಕೊಂಡು, ಒಳಗೆ ಬಂದು—

“ ಗಂಗಾ, ಇವತ್ತು ನನಗೂ ಇಲ್ಲೇ ನೀಡಿಬಿಡು. ಒಂದೇ ಸಲ ಉಂಡು ಗದ್ದೆ ತಾವ ಹೋಗುತೀನಿ ”—ಎಂದ.

“ ಹೂ. ನಿಮಗೂ ತಳಿಗೆ ಇಟ್ಟಿದೀನಿ. ”

—ಎಂದಳು ಗಂಗಾ. ಇಬ್ಬರೂ ಹೋಗಿ ಊಟಕ್ಕೆ ಕುಳಿತಿದ್ದರು. ಊಟಮಾಡುತ್ತಾ ಕಸ್ತೂರಿನಾಯಕ ಹೇಳಿದ—

“ ಅಡಿಗೆ ತುಂಬಾ ರುಚಿಯಾಗಿದೆ ಗಂಗಾ. ಇಂಥ ಊಟ ಕಂಡು ಎಷ್ಟು ವರ್ಷವಾಗಿತ್ತೋ ಅನ್ನಿಸುತ್ತೆ. ಅರಮನೇರು ಇಡುತಿದ್ದ ಊಟಾ ಕೂಡಾ ಇಷ್ಟು ರುಚಿಕಟ್ಟಾಗಿರಲಿಲ್ಲ. ”

“ ಹೂಕಣಪ್ಪಯ್ಯಾ. ಮಡದಿ ಇಕ್ಕದಿದ್ದ ಊಟ, ಒಗ್ಗರಣೆ ಇಲ್ಲದ ಎಸರಿನಂಗೆ. ಏನಿದ್ದರೂ ರುಚಿಕಾಣಲ್ಲ. ” ಎಂದು, ಒಂದು ಗಳಿಗೆ ತಡೆದು “ ಮೊದಲೇ ನನ್ನ ಮಾತು ಕೇಳಿದ್ರೆ ದಿನಾ ಇಂಥ ಊಟ ಉಂಡು ದೊರೆ ಇದ್ದಂಗಿರಬೋದಾಗಿತ್ತು. ಕೇಳಲಿಲ್ಲ. ಅನುಭವಿಸ್ತಿದೀರಿ. ”

—ಎಂದ ಪಾಪನಾಯಕ ಆ ಮಾತನ್ನು ಆಡಬಾರದು ಎಂದು ಕೊಂಡರೂ, ಆಡದೆ ಇರಲು ಸಾಧ್ಯವಾಗದೆ.

“ ನಿನ್ನ ಯಾವ ಮಾತು ಕೇಳಲಿಲ್ಲ ಮಾವಯ್ಯ ? ”

—ಪಾಪನಾಯಕನ ಮಾತಿನ ಜಾಡು ತಿಳಿಯದೆ ಕೇಳಿದ ಕಸ್ತೂರಿ ನಾಯಕ.

“ ಈ ಅರಮನೆ ಚಾಕರಿ ಬೇಡಾಂತ ಹೇಳಲಿಲ್ಲವೇ ? ಈ ಚಾಕರೀಲಿ ಏನಿದೆ ಅಪ್ಪಯ್ಯ ? ಎಷ್ಟು ಸೇವೆಮಾಡಿದರೆ ತಾನೇ ಏನು ಕೊಟ್ಟಾರು ಅರಮನೆಯೋರು. ಹೆಚ್ಚೆಂದರೆ ಬಂಗಾರ ಕೊಟ್ಟಾರು. ಅದ್ರೆ

ಬಂಗಾರ ತಿಂದು ಬದುಕಿದೋರು ಎಲ್ಲಿದಾರೆ? ಎಷ್ಟು ಜೇರೆ ಕಡಿ ದುಡಿದರೂ ಮನುಷ್ಯ ಭೂಮಿತಾಯಿ ಕೊಟ್ಟಿದ್ದು ಉಂಡೇ ಬದುಕಬೇಕು. ಅಲ್ಲವಾ ? ಅದಕ್ಕೇ ನಾನು ಹೇಳೋದು. ಅವರಿವರ ಚಾಕರಿಮಾಡೋಕಿಂತ ಈ ಭೂಮಿತಾಯಿ ಸೇವೆ ಮಾಡಿದರೆ, ಮನುಷ್ಯ ಕೆಡೋಕಿಲ್ಲಾಂತ."

"ನಿಜ ಮಾವಯ್ಯ, ಆದರೆ ಹಾಲುಂಬಳಿ ಕೊಟ್ಟ ಧಣಿಸೇವೆ ಮಾಡಬೇಡವಾ ?"

"ಅದಿಲ್ಲಾನ್ನಾಕಾಗ್ದೇನೇ, ಹೋಗಲಿ ಅಂತ ಸುಮ್ಮನಾದೆ. ಆದರೂ ಆ ಸೇವೆ ಅಲ್ಲ ಅಪ್ಪಯ್ಯ."

—ಖಚಿತ ನಿರ್ಧಾರದ ಧ್ವನಿಯಲ್ಲಿ ಹೇಳಿದ ಪಾಪನಾಯಕ.

"ಏಕೆ ಮಾವಯ್ಯ ?"

"ನೋಡು—ಅದು ಎಷ್ಟಂದರೂ ಧಣಿಸೇವೆ. ಅದು ಆಡಿದರೆ ಅರಗಿಳಿ, ಕಾಡಿದರೆ ಘಟಸರ್ಪ. ಆದರೆ ಭೂತಾಯಿ ಸೇವೆ ಹಾಗಲ್ಲ. ಎಷ್ಟಂದರೂ ತಾಯಿ. ಮಾರು ಹೆಚ್ಚು ಮಾರು ಕಡಮೆ ಆದರೂ ಮಾತಾಡಾಕಿಲ್ಲ. ಒಪ್ಪತ್ತು ಸೇವೆಬಿಟ್ಟು ಮಲಗಿದ್ರೂ ಮುನಿಸಿಕೊಳ್ಳೋಕಿಲ್ಲ. ನಂಬಿದ ಹೊಟ್ಟೆಮೇಲೆ ಹೊಡೆಯೋದಿಲ್ಲ. ಸೇವೆ ಮಾಡಿದರೆ, ಕೊಡೋದರಲ್ಲಿ ಜೇರಿಯೋನ ಹಾಗೆ ಚೌಕಾಸಿ ಮಾಡ್ತಾಳೆಯೇ ನಮ್ಮವ್ವ. ನೀನು ತಿಂದು ಸಾಕಾದರೆ, ಊರಿಗೆಲ್ಲಾ ಕೊಡುವಷ್ಟು ಕೊಡ್ತಾಳೆ. ಇಂಥ ತಾಯೀನ ಮರೆತು, ಕಂಡೋರ ಗಾಣಕ್ಕೆ ಕತ್ತುಕೊಟ್ಟರೆ ಏನು ಬಂತು ಹೇಳು."

ಪಾಪನಾಯಕ ಆಡಿದ ಒಂದೊಂದು ಮಾತಿನಲ್ಲೂ ಅಪ್ಪಟ ಸತ್ಯ ಅಪರಂಜಿಯಂತೆ ಹೊಳೆಯುತ್ತಿದ್ದುದು ಕಸ್ತೂರಿನಾಯಕನಿಗೆ ಮನವರಿಕೆಯಾಯಿತು. ಒಂದು ಗಳಿಗೆ, ತಾನು ಅರಮನೆಯ ಊಳಿಗಕ್ಕೆ ಏಕೆ ಸೇರಿದೆನೋ ಎಂದು ಪಶ್ಚಾತ್ತಾಪವಾಯಿತು. ಹಾಗೆ—ತಾನು ಈ ಸ್ವರ್ಗಸುಖದಲ್ಲಿ ಮೈಮರೆತಿರುವಾಗ, ಅರಮನೆಯಿಂದ ಎಲ್ಲಿ ಅವಸರದ ಕರೆ ಬಂದು, ಈ ಸುಖಕ್ಕೆ ಭಂಗತರುತ್ತದೆಯೋ ಎಂದು ಹೆದರಿಕೆಯಾಯಿತು. ಹಾಗೇ ಅರಮನೆಯ ನೆನಪಾದಾಗ, ನಾಗತಿಯಡೂ ನೆನಪಾಯಿತು.

"ನಿನ್ನ ಮಾತು ನಿಜ ಮಾವಯ್ಯ. ನಮಗೂ ಒಂದೊಂದು ಸಲ ಈ ಚಾಕರಿ ಬಿಟ್ಟುಬಿಡೋಣ ಅನ್ನಿಸುತ್ತದೆ. ಆದರೆ ದೊಡ್ಡ ನಾಗತಿಯವರು ಇದಾರಲ್ಲಾ, ಅವರೂ ಭೂಮಿತೂಕದ ತಾಯಿ. ಆಕೆ

ಸೇವೆ ಮಾಡೋದೂ ಒಂದು ಪುಣ್ಯ ಅನ್ನಿಸುತ್ತದೆ ಮಾವಯ್ಯ."

"ಹೂ. ಪೂಜಾರಯ್ಯನ ಹುಡುಗೀನೂ ಹಾಗೇ ಅನ್ತದೆ. ಎಲ್ಲಾರ ಕೈಲೂ ಹಾಗನ್ನಿಸಿಕೊಳ್ಳೋ ಹೆಂಗಸು ದೇವತೇನೇ ಸರಿ. ಆದರೆ ಅಂಥವರಿಗೂ ಅಯ್ಯೋ ಅನ್ನಿಸುತ್ತಾರಲ್ಲಾ ಈ ಹಾಳಾದೋರು. ಅದೆಲ್ಲಾ ಎಲ್ಲಿಗೆ ಬಂತು ?"

"ಏನೋ ಎಲ್ಲಾ ಸುಖವಾಗೇ ಮುಗಿಯೋ ಹಾಗೆ ಕಾಣ್ತಾ ಇದೆ. ಅದಕ್ಕೇ ಮನೆಗೆ ಹೋಗಿ ಬಾ ಅಂದರು ನಾಗತಿಯವರು. ಆದ್ರೆ ಈ ಮೂರು ದಿನ ನಾವು ಪಟ್ಟ ಪಾಡು, ನನ್ನ ಶತ್ರುವಿಗೂ ಬೇಡ ಮಾವಯ್ಯ. ಯಾವ ಗಳಿಗೇಲಿ ಏನೋಂತ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾದದ್ದಾಯಿತು. ಸದ್ಯ ಗುಡ್ಡದ ಹಾಗೆ ಬಂದುದು ಹೇಗೋ ಪಾರಾಯಿತು."

"ನಿಮ್ಮ ನಿಯತ್ತು ಚೆನ್ನಾಗಿದ್ರೆ ಭಗವಂತ ಕೈ ಬಿಡೋಲ್ಲ. ಏನೋ ಇದೆಲ್ಲಾ ಗ್ರಾಚಾರ ಕಳೀತಲ್ಲಾ, ಇನ್ನೆಲ್ಲಾ ಒಳ್ಳೇದಾಗ್ತದೆ."

—ಎಂದ ಪಾಪನಾಯಕ, ಗಂಗವ್ವ ತಳಿಗೆಯಲ್ಲಿ ತುಂಬಿದ ಮಜ್ಜಿಗೆಯನ್ನು, ತಟ್ಟೆಯನ್ನೇ ಎತ್ತಿ ಕುಡಿಯುತ್ತಾ.

"ನಿನ್ನ ಬಾಯ ಹರಕೆ ಸತ್ಯವಾಗಲಿ."

—ಎಂದ ಕಸ್ತೂರಿನಾಯಕ.

ಗಂಗವ್ವ ಅವರ ಮಾತಿನ ನಡುವೆ ಏನೂ ಮಾತನಾಡದಿದ್ದರೂ ಅವಳ ಹೃದಯವೂ ಅದೇ ಮಾತನ್ನೇ ಹಾರೈಸುತ್ತಿತ್ತು.

೯

ಭುವನಪ್ಪನವರ ಹೃದಯದಲ್ಲಿ ಮಾತ್ರ ಅರ್ಥವಾಗದ ಅಶಾಂತಿ ಹೊತ್ತಿ ಹೊಗೆಯಾಡುತ್ತಿತ್ತು. ಲಿಂಗಣ್ಣನಾಯಕನಿಂದ, ಚಿಕ್ಕಣ್ಣನಾಯಕನ ಸಲಹೆ, ಅದಕ್ಕೆ ನಾಗತಿ ಒಪ್ಪಿದುದು ಎಲ್ಲವನ್ನೂ ಕೇಳಿ,—

"ಏನೋ ದುರ್ಗಕ್ಕೆ ಒದಗಿದ ವಿಪತ್ತು ಇಷ್ಟರಲ್ಲೇ ಪರಿಹಾರವಾಗಬೇಕೆಂದು ಭೂತನಾಥೇಶ್ವರನ ಚಿತ್ತವೇನೋ, ಆಗಲಿ ಬಿಡು ಲಿಂಗಣ್ಣ. ಎಷ್ಟು ಕೊಲೆಯಾಗಬೇಕೋ, ಎಷ್ಟು ತಲೆ ಬಲಿಯಾಗಿ ಶಾಂತಿ ಬರಬೇಕೊ ಎಂದು ಹೆದರಿದ್ದೆ. ಒಂದಕ್ಕೇ ಮುಗಿಯಿತಲ್ಲ, ಈಶ್ವರನ ಅನುಗ್ರಹ ದೊಡ್ಡದು."

—ಎಂದಿದ್ದರು.

"ಹಾಗಾದರೆ ನನಗೂ ಸಮಾಧಾನವೇ. ಆದರೆ ಏನಾದರೂ ಕುತಂತ್ರ ನಡೆದರೆ...."

ಹಾಗೂ ಇರಬಹುದು ಲಿಂಗಣ್ಣ. ಆ ಸಂಭವವೂ ಇಲ್ಲವೆನ್ನುವುದಿಲ್ಲ. ಆದರೆ ಅವರಾಗಿ ಸ್ನೇಹ ಹಸ್ತ ಚಾಚಿದಾಗ, ನಾವೇ ದೂರ ಸರಿದು ನಿಂತು, ಅಗತ್ಯವಿಲ್ಲದ ಕೊಲೆಗೆ ಕಾರಣರಾದರೆಂಬ ಅಪಖ್ಯಾತಿ ಹೊರುವುದೇಕೆ ? ಅವರು ಸ್ನೇಹವನ್ನು ಬಯಸಿದರೆ ಸ್ನೇಹವಾಗಲಿ. ಆದರೆ ಹಾಗೆಂದು ನಾವು ಮೈಮರೆಯುವುದೂ ಬೇಡ. ನಮ್ಮ ಎಚ್ಚರಿಕೆಯಲ್ಲಿ ನಾವಿದ್ದು, ಅವರು ಕರೆದಷ್ಟು ದೂರ ಹೋಗೋಣ. ಅದರಿಂದ ಒಳಿತೇ ಆಗುವುದು. ಆದುದರಿಂದ ನಾಗತಿಯವರು ಹೇಳಿದಂತೆ ಓಲಗವನ್ನು ಕರೆದು, ಈ ವಿಷಯವನ್ನು ಇತ್ಯರ್ಥ ಮಾಡಿ. ಆದರೆ ತುಂಬಿದ ಓಲಗ ಮಾತ್ರ ಬೇಡ."

"ಏಕೆ? ಅವರೇ ಆಗಬಹುದು ಎಂತ ಹೇಳಿದರಲ್ಲಾ...."

"ಆದರೂ, ನೀನೂ ಕೊಂಚ ವಿವೇಚನೆ ಉಪಯೋಗಿಸಬೇಕು ಲಿಂಗಣ್ಣ. ತುಂಬಿದೋಲಗದಲ್ಲಿ ತಪ್ಪು ಒಪ್ಪಿಕೊಳ್ಳುವುದು ಎಂಥವರಿಗೂ ಅಪಮಾನ. ಅದರಲ್ಲೂ ನಾಳೆಯೂ ದಳವಾಯಿಗಳಾಗಿರಬೇಕಾದವರು ಹಾಗೆ ಮಾಡಿದರೆಂದರೆ, ಅವರು ಆಳಬೇಕಾದವರಿಗೆ ಅವರಲ್ಲಿ ಗೌರವವಿರುತ್ತದೆಯೇ? ಆದುದರಿಂದ ಅದು ಬೇಡ, ಸೋತು ಬಂದವರಲ್ಲಿ ಸೇಡು ತೀರಿಸುವುದಕ್ಕಿಂತ ಔದಾರ್ಯ ತೋರುವುದು ಮಿಗಿಲಾದ ನಡತೆ. ನನಗೇನೋ ಹೀಗೆ ತೋರುತ್ತದೆ; ಈ ಕೆಲಸ ಮುಗಿಯಲು ಎಷ್ಟು ಜನ ಬೇಕೋ ಅಷ್ಟು ಜನ ಸಭೆಯಲ್ಲಿರಲಿ. ಹೆಚ್ಚಿನವರಾರಿಗೂ ಪ್ರವೇಶ ಕೊಡಬೇಡ. ನೋಡು—ನಿನಗೆ ಸರಿ ಕಂಡಂತೆ ಮಾಡು."

"ನಿಮ್ಮ ಮಾತು ನನಗೂ ಒಪ್ಪಿಗೆಯೇ ಭುವನಪ್ಪನವರೇ. ಆದರೆ ನೀನಂತೂ ಬಂದೇ ಬರಬೇಕು."

"ಅದು ಬೇಡ."

"ಏಕೆ ?"

"ಮುದ್ದಣ್ಣನಿಗೆ ಮೊದಲೇ ಇದೆಲ್ಲಾ ನನ್ನ ಪಿತೂರಿ ಎಂದು ಅಸಮಾಧಾನವಿದೆ. ಆ ಅಸಮಾಧಾನವೇ ಇಷ್ಟು ಅನಾಹುತಕ್ಕೆ ಕಾರಣವಾಯಿತು. ಈಗ ಆತ ತಪ್ಪಿತಸ್ಥನೆಂದು ಮೋರೆ ಕೆಳಗೆ ಹಾಕಿ ನಿಲ್ಲುವಾಗ ನಾನು ಎದುರಿ

ಗಿದ್ದರೆ, ಜಾರಿದವರನ್ನು ಕಂಡು ಹಲ್ಲು ಕಿರಿದಂತಾಗುತ್ತದೆ. ತೋರಿಕೆಗೆ ಏನೂ ಕಾಣದಿದ್ದರೂ, ಮನಸಿನಲ್ಲಿ ಆ ಮುನಿಸು ಉಳಿಯುತ್ತದೆ. ಅದು ಕೂಡದು. ಅಂಥ ಗುಪ್ತ ಮುನಿಸು, ಪ್ರಕಟ ಕ್ರೋಧಕ್ಕಿಂತ ಹೆಚ್ಚು ಅಪಾಯ ಕಾರಿ. ಈ ಓಲಗ ಸೇರುತ್ತಿರುವುದು ದ್ವೇಷ ಅಸೂಯೆಯನ್ನು ತೊಳೆದು, ಶಾಂತಿ ಸ್ನೇಹವನ್ನು ನೆಲೆಗೊಳಿಸಲು. ಆದುದರಿಂದ ಅಲ್ಲಿ ಯಾವ ಬಗೆಯ ಅಪಸ್ವರಕ್ಕೂ ಅವಕಾಶವಿಲ್ಲದಿರಲಿ. ನೀನೂ ಅಷ್ಟೆ; ನಿನ್ನ ಸಿಟ್ಟನ್ನು ತೋರಿಸಲು ಹೋಗಬೇಡ. ಸತ್ಯಕ್ಕೇ ಆದರೂ ಅಹಂಕಾರ ಶೋಭಿಸುವ ಆಭರಣವಲ್ಲ."

"ಅದನ್ನೆಲ್ಲಾ ಒಪ್ಪಿಕೊಂಡೆ. ಆದರೆ ನೀವು ಹಿರಿಯರು ಎದುರಿಗಿದ್ದಿದ್ದರೆ ಚೆನ್ನಾಗಿತ್ತು."

"ಎದುರಿಗಿದ್ದಾಗಲಿ, ಮರೆಯಲ್ಲಿದ್ದಾಗಲಿ, ನಾವು ಹಿರಿಯರು ಮಾಡಬಹುದಾದುದೇನು—ಎಲ್ಲವೂ ಒಳಿತಾಗಲಿ, ಎಂದು ಹರಸುವುದು ತಾನೇ. ಆ ಕೆಲಸವನ್ನು ಎಲ್ಲಿದ್ದರೂ ನಾನು ಮಾಡುತ್ತೇನೆ. ಹೋಗು—ನಿರ್ವಿಘ್ನವಾಗಿ ಈ ಕೆಲಸ ಮುಗಿಸು. ಅದು ಮುಗಿದ ಮೇಲೆ ಏನಾಯಿತೆಂದು ತಿಳಿಸು."

—ಎಂದು ಲಿಂಗಣ್ಣನಾಯಕನಿಗೆ, ಹಿಂದಿನ ದಿನ ಸಮಾಧಾನ ಹೇಳಿ ಕಳಿಸಿದ್ದರು ಭುವನಪ್ಪನವರು. ಅವರ ಮಾತಿನಿಂದ ಲಿಂಗಣ್ಣನಾಯಕನಿಗೆ ಸಮಾಧಾನವಾಗಿತ್ತು. ಆದರೆ ಅವರಿಗೇ ಸಮಾಧಾನವಾಗಿರಲಿಲ್ಲ. ಎಷ್ಟು ವಿಧವಾಗಿ ತಮಗೆ ತಾವೇ ಸಮಾಧಾನ ಹೇಳಿಕೊಂಡರೂ, ಮನಸಿಗೆ ಶಾಂತಿ ದೊರೆಯದೆ, ಅಶಾಂತಿಯೇ ಕಿಡಿಗೆದರುತ್ತಿತ್ತು. ಇರುಳೆಲ್ಲಾ ನಿದ್ರೆಯಿಲ್ಲದೆ ಕಳೆದ ಅವರು, ಹಗಲು ಎದ್ದವರು ಎದ್ದಹಾಗೇ, ದಿನದ ಪ್ರಾತರಾಹ್ನಿಕವನ್ನು ಮುಗಿಸದೆ ಹಜಾರದಲ್ಲಿ ಬಂದು ಕುಳಿತಿದ್ದರು, ಓಲಗದಿಂದ ಸುದ್ದಿ ಬರುವುದನ್ನೇ ಕಾಯುತ್ತಾ.

"ಸ್ನಾನಕ್ಕೇಳಿ ಅಪ್ಪಾಜಿ" ಎಂದ ಮಗನಿಗೆ,

"ಮೈಗೇನು, ಮನಸಿಗೂ ಸ್ನಾನ ಬೇಕು. ಆದರೆ ಅದಕ್ಕಿನ್ನೂ ಹೊತ್ತು ಬಂದಿಲ್ಲ, ಆ ಹೊತ್ತು ಬಂದಾಗ ಎದ್ದು ಸ್ನಾನ ಮುಗಿಸುತ್ತೇನೆ."

—ಎಂದು ಹೇಳಿಕಳಿಸಿ 'ಈಗ ಓಲಗ ಆರಂಭವಾಗಿರಬೇಕು.... ಇಷ್ಟು ಹೊತ್ತಿಗೆ ಅಲ್ಲಿ ಎಲ್ಲಾ ಕಲೆತಿರಬೇಕು' ಎಂದು ತಾವೇ ಲೆಕ್ಕ

ಹಾಕುತ್ತಾ, ಕಣ್ಣು ಮುಚ್ಚಿ ಉಯ್ಯಾಲೆಯಲ್ಲಿ ಕುಳಿತು ತೂಗಿಕೊಳ್ಳು ತ್ತಿರುವಾಗ ಬಾಗಿಲ ಬಳಿ ಏನೋ ಗಲಭೆಯಾದಂತಾಗಿ, ತಟಕ್ಕನೆ ಕಣ್ಣು ಬಿಟ್ಟರು. ಏಕೋ ಇದ್ದಕ್ಕಿದ್ದ ಹಾಗೆ ಅವರ ಮೈಯನ್ನು ಭೀತಿಯಾ ವರಿಸಿ ಬೆವರಲಾರಂಭಿಸಿದರು. ಕೂಡಲೇ ಉಯ್ಯಾಲೆಯಿಂದ ಚಿಗಿದು ಬಾಗಿಲ ಬಳಿ 'ಏನು....ಏನು!........ಏನಾಯಿತು?' ಎಂದು ಕೇಳುತ್ತಾ ನುಗ್ಗಿದವರು, ತಮ್ಮ ಇದುರಿಗೆ ಬಂದವರನ್ನು ನೋಡಿ, ಹೆದರಿ ಮುಗ್ಗರಿಸಿ–

"ನೀನಾರು?....ಏನಿದರ ಅರ್ಥ?"

—ಎಂದು ಕೇಳಿದರು, ಮೈ ಕೈ ಮೇಲೆ ಕತ್ತಿಯಿಂದ ಕತ್ತರಿಸಿದ ಗಾಯುಗಳಿಂದ ನೆತ್ತರು ಹರಿಸುತ್ತಾ, ಬಳಲಿಕೆ ನೋವುಗಳಿಂದ ಕಂಪಿಸು ತ್ತಿದ್ದ ಸೈನಿಕನನ್ನು ನೋಡಿ.

"ನಾನು....ನಾನು....ವೀರಣ್ಣ....ಕಸ್ತೂರಿನಾಯಕನ ತಮ್ಮ........ ಬೇಗ ಅರಮನೆಗೆ ಓಡಿ ಭುವನಪ್ಪನವರೇ....ನಾಯಕರು ಈ ಓಲಗಕ್ಕೆ ಬರದಂತೆ ತಡೆಯಿರಿ....ಇದು ದಳವಾಯಿಯ ಒಳಸಂಚು....ಈ ಓಲಗಕ್ಕೆ ಬರದಂತೆ ತಡೆಯಿರಿ....ಇದು ದಳವಾಯಿಯ ಒಳಸಂಚು....ನಾನು ಅವ ರಿಗೆ ದ್ರೋಹ ಮಾಡುತ್ತೇನೆಂದು ಸೆರೆಯಲ್ಲಿಟ್ಟಿದ್ದರು........ತಪ್ಪಿಸಿಕೊಂಡು ಬಂದೆ....ಓಡಿ ಹೋಗಿ ಭುವನಪ್ಪನವರೇ...."

—ಎಂದವನು ಹಾಗೆಯೇ ಮೂರ್ಛೆಬಿದ್ದ. ಅವನ ಪೂರಾ ಮಾತು ಕಿವಿಗೆ ಬೀಳುವ ಮೊದಲೇ ಭುವನಪ್ಪನವರು ವೀರಣ್ಣನ ಕೈಯಲ್ಲಿದ್ದ ಕತ್ತಿ ಯನ್ನು ಕಸಿದುಕೊಂಡು, ಆಳುಗಳಿಗೆ ಅವನಿಗೆ ಶೈತ್ಯೋಪಚಾರವನ್ನು ಮಾಡುವಂತೆ ಹೇಳಿ, ಮೈಮೇಲೆ ಬಟ್ಟೆಯನ್ನು ಹಾಕದೆಯೇ ಅರಮನೆ ಯತ್ತ ಓಡಿದರು—ಹಗಲಿನಲ್ಲಿ, ಬರಿ ಮೈಯಲ್ಲಿ, ಖಡ್ಗ ಹಿಡಿದು ಓಡುತ್ತಿ ರುವ ಅವರನ್ನು ಕಂಡ ಜನ ಸೋಜಿಗಬಟ್ಟು ಮನನಟ್ಟು ನೋಡುತ್ತಿದ್ದು ದರ ಪರಿವೆಯೂ ಇಲ್ಲದೆ.

ವೃದ್ಧಾಪ್ಯ, ಭೀತಿ, ಆತುರ, ಕಾತರಗಳ ಬಲೆಗೆ ಸಿಲುಕದ ಕಾಲು ಓಡಲಾರದೆ ಮುಗ್ಗರಿಸುತ್ತಿತ್ತು. ಅವರ ಎದೆ ಬಿರಿಯುವಂತೆ ಮಾಡು ತ್ತಿತ್ತು. ಕಣ್ಣುಗಳು ಸುತ್ತಿಕೊಂಡು ಬರುತ್ತಿದ್ದುವು. ಆದರೆ ಅದಾವುದರ ಪರಿವೆಯೂ ಇಲ್ಲದೆ, ಎದುರಿಗೆ ಕಂಡವರನ್ನು "ಬನ್ನಿ, ಬನ್ನಿ, ದ್ರೋಹ ವಾಗುತ್ತಿದೆ" ಎಂದು ಕೂಗುತ್ತ ಓಡಿದರು.

ಅವರ ಕಿವಿಯಲ್ಲಿ ಬಿರುಗಾಳಿ ಮೊರೆಯುತ್ತಿದ್ದಂತೆ ಸದ್ದಾಗುತ್ತಿ

ದ್ದರೂ, ಸಂಪಗೆ ಸಿದ್ಧೇಶ್ವರನ ದೇವಾಲಯವನ್ನು ದಾಟುತ್ತಿದ್ದಂತೆಯೇ ಅರಮನೆಯ ಬಳಿಯಿಂದ " ಹೋ " ಎಂಬ ಹುಯಿಲು ಕೇಳಿಬಂದಿತು.

ಆ ಕೂಗು ಕಿವಿಗೆ ಬಿದ್ದಕೂಡಲೇ ಭುವನಪ್ಪನವರು, " ಗುಂಡಿನೇಟು ತಗುಲಿದವರಂತೆ ಸ್ವಾಮಿ, ನಿನ್ನ ದಯೆ ತೊಲಗಿತೇ " ಎಂದು ಬೇಡಿ ಕೆಳಗುರುಳಿದರು.

ಅರಮನೆಯ ಬಳಿ ಕೂಗನ್ನು ಕೇಳಿ ಓಡುತ್ತಿದ್ದ ಜನಜಂಗುಳಿ ದಾರಿಯಲ್ಲಿ ಬಿದ್ದ ಅವರ ಪರಿವೆಯಿಲ್ಲದೆ, ಅವರನ್ನು ತುಳಿದುಕೊಂಡೇ ಅರಮನೆಯತ್ತ ಓಡಿತು.

ಹತ್ತಾರು ಜನರ ತುಳಿತಕ್ಕೆ ಸಿಕ್ಕಿ ಅವರ ಮೂಗು ಬಾಯಿಗಳಿಂದ ರಕ್ತ ಛಿಲ್ಲೆಂದು ಚಿಮ್ಮಿ ನೆಲವನ್ನು ತೋಯಿಸಿತು. ಆದರೆ ಕೆಳಗುರುಳಿದ ಭುವನಪ್ಪನವರ ಮೈ ಅಲುಗಾಡಲಿಲ್ಲ. ಅವರ ಕೈ ಕತ್ತಿಯನ್ನು ಹಿಡಿದೇ ಇತ್ತು.

೧೦

ಮೂರು ನಾಲ್ಕು ದಿನಗಳಿಂದ ನಿದ್ದೆಗೆಟ್ಟಿದ್ದರ ಫಲವಾಗಿ ಹೊತ್ತಾಗಿ ಎದ್ದಿದ್ದ ಕಸ್ತೂರಿನಾಯಕ. ಅರಮನೆಗೆ ಹೋಗುವ ಹೊತ್ತು ಮೀರಿದಂತೆ ಹೆದರಿ ಅವಸರದಿಂದ ಊಟ ಮುಗಿಸುತ್ತಿರುವಾಗ, ಅವನ ಜೊತೆಗೆ ಹೋಗ ಬೇಕೆಂದು ಗಿರಿಜೆಯೂ ಅಲ್ಲಿಗೆ ಬಂದಳು. ಅವಳ ಮುಖವನ್ನು ನೋಡಿ ಗಂಗವ್ವ.

" ಏಕೆ ಗಿರಿಜಾ. ರಾತ್ರಿ ಎಲ್ಲ ನಿದ್ದೆ ಮಾಡಿದ ಹಾಗಿಲ್ಲ? ಏನು ಕನಸು ಬಿದ್ದಿತ್ತು ? "

—ಎಂದು ಕೇಳಿದಳು ತುಂಟತನದ ನಗು ನಗುತ್ತ.

" ನೀನೇನು ಮಾಡಿ ಹೇಳಕ್ಕ. ತಮಾಷೆ ಮಾಡು. ಇಲಿಗೆ ಪ್ರಾಣ ಸಂಕಟ, ಬೆಕ್ಕಿಗೆ ಚೆಲ್ಲಾಟ."

" ಹೂ. ಅದೇ ನಾನೂ ಕೇಳಿದ್ದು, ಈ ಬೆಕ್ಕು ಯಾವ ಇಲೀ ಜೊತೇಲಿ ಚೆಲ್ಲಾಟವಾಡ್ತಾ ಇತ್ತೂಂತ."

" ಇಲ್ಲ ಕಣಕ್ಕಾ. ರಾತ್ರಿ ಎಲ್ಲಾ, ಏನಂದ್ರೂ ನಿದ್ದೆ ಬರಲಿಲ್ಲ. ಯಾಕೋ ಕೆಟ್ಟ ಕನಸು. ಅದೆ ಸಾಲದೂಂತ ಹನುಮಕ್ಕನೂ ತನ್ನ

ರಾಮಾಯಣ ಷುರುಮಾಡಿಬಿಟ್ಟಿದ್ದಳು ರಾತ್ರಿ ಎಲ್ಲಾ. ಅದೇನು ಹುಚ್ಚು ಕೂಗು ನಮ್ಮವ್ವಾ, ಒಂದ್ಗಳಿಗೇನೂ ನಿದ್ರೆ ಮಾಡ್ಲಿಕ್ಕೆ ಬಿಡಲಿಲ್ಲ."

—ಎಂದವಳು ಇದ್ದಕಿದ್ದ ಹಾಗೇ ಸದ್ದು ಕೇಳಿ, ಕಿವಿನಿಮಿರಿಸಿ ಆಲಿಸಿ, ಅಂಗಳಕ್ಕೆ ಓಡಿದಳು. ಅರೆಗಳಿಗೆಯಲ್ಲೇ ಅವಳು ಅಂಗಳದಿಂದಲೇ "ಕಸ್ತೂರಣ್ಣಾ ಬೇಗ ಬಾ....ಬೇಗ ಬಾ" ಎಂದು ಕೂಗಿದುದು ಕೇಳಿ ಬಂತು. ಕಸ್ತೂರಿನಾಯಕ ಮಾಡುತ್ತಿದ್ದ ಊಟವನ್ನು ಅಲ್ಲಿಗೇ ನಿಲ್ಲಿಸಿ, ಕೈಯ್ಯನ್ನು ತೊಳೆಯದೆ ಅಂಗಳಕ್ಕೆ ಓಡಿದ.

ಅಂಗಳದಲ್ಲಿ ಗಿರಿಜಾ ದೂರದಲ್ಲಿ ಕಾಣುವ ದುರ್ಗದ ಬೆಟ್ಟಗಳತ್ತ ಬೆದರಿದ ಮೋರೆಮಾಡಿ ನೋಡುತ್ತಿದ್ದಳು. ಅವಳೇನನ್ನು ನೋಡುತ್ತಿರ ಬಹುದೆಂದು ಕಸ್ತೂರಿನಾಯಕನೂ ಅತ್ತಕಡೆಯೇ ಮೈಯೆಲ್ಲಾ ಕಣ್ಣಾಗಿ ನೋಡಿದ. ಇದ್ದಕಿದ್ದಹಾಗೇ ದೂರದ ಗುಡುಗಿನಂತೆ ಫಿರಂಗಿ ಹಾರಿದ ಸದ್ದು ಅಸ್ಪಷ್ಟವಾಗಿ ಕೇಳಿ ಬಂದು, ದಟ್ಟವಾದ ಹೊಗೆ ಗುಡ್ಡದ ಹೃದಯ ದಿಂದ ಮೇಲೇರಿ ಮುಗಿಲಿನಲ್ಲಿ ಹರಡಿದುದು ಕಾಣಿಸಿತು.

"ಗಿರಿಜಾ ಏನೋ ಘಾತ ಆದಂಗೆ ಕಾಣಸ್ತದೆ"

—ಎಂದವನೇ ಕಸ್ತೂರಿನಾಯಕ ಒಳಗೆ ನುಗ್ಗಿ ಕತ್ತಿಯನ್ನು ತಂದು, ಹೊರಡಲು ಸಿದ್ಧವಾಗಿದ್ದ ಕುದುರೆಯನ್ನೇರಿ 'ಗಂಗಾ ಬತ್ತೀನಿ' ಎಂದು ಹೇಳಿದವನೇ ಮನೆಯತ್ತ ತಿರುಗಿಯೂ ನೋಡದೆ, ಕುದುರೆಯ ಮೋರೆಯ ಮೇಲೆ ಲಗಾಮಿನಿಂದ ಹೊಡೆದ. ಕುದುರೆ ವೇಗವಾಗಿ, ನಾಗಾಲೋಟದಲ್ಲಿ ದುರ್ಗದತ್ತ ಓಡಿತು. ಒಂದು ಗಳಿಗೆ ಎನ್ನುವುದರೊಳ ಗಾಗಿ, ಕುದುರೆ ಕಾಣದಾಗಿ, ಅದರ ಖುರಪುಟದ ಸದ್ದೂ ಕೇಳದಂತಾಗಿ ಹೋಯಿತು.

ಕಸ್ತೂರಿನಾಯಕನ ಕೂಗನ್ನು ಕೇಳಿದ ಗಂಗವ್ವ ಏನಾಯಿತೊ ಎಂದು ಅಂಗಳಕ್ಕೆ ಓಡಿಬರುವುದರೊಳಗಾಗಿ, ಕಸ್ತೂರಿನಾಯಕ ಕಾಣ ದಾಗಿದ್ದ. ಗಿರಿಜೆ ಗರಬಡಿದವಳಂತೆ ದುರ್ಗದ ಬೆಟ್ಟದ ಸಾಲಿನತ್ತ ನೋಡುತ್ತಾ ನಿಂತಿದ್ದಳು—ಬಿಟ್ಟ ಕಣ್ಣು, ಬಿಟ್ಟ ಬಾಯಿ ಬಿಟ್ಟ ಹಾಗೇ ಬಿಟ್ಟು. ಅವಳ ಮೈ ಬಿರುಗಾಳಿಗೆ ಸಿಲುಕಿದ ತರಗೆಲೆಯಂತೆ ಕಂಪಿಸು ತ್ತಿತ್ತು. ಗಿರಿಜೆ ನೋಡುತ್ತಿದ್ದ ಕಡೆಯೇ ಗಂಗವ್ವನೂ ಕಣ್ಣರಳಿಸಿ ನೋಡಿದಳು—

ಬೆಳಗಿನ ಬಿಸಿಲಿನಲ್ಲಿ ನೀಲಿಯ ತೆರೆ ಹೊದ್ದ ದುರ್ಗದ ಬೆಟ್ಟಗಳ ಹೃದಯದಿಂದ ' ಢಾಂ ' ಎಂಬ ಸದ್ದು ಮೂಡಿ ಬಂದು ಗಾಳಿಯಲ್ಲಿ ಕರಗಿ, ಅಸ್ಪಷ್ಟವಾಗಿ ಕೇಳಿಸಿತು. ಮತ್ತೊಮ್ಮೆ ಹೊಗೆ ಎದ್ದು ಮುಗಿಲನ್ನು ತಬ್ಬಿತು.

ಬೆದರಿದ ಹಕ್ಕಿಗಳಂತೆ ಒಬ್ಬರನ್ನೊಬ್ಬರು ತಬ್ಬಿ ಅತ್ತಕಡೆಯೇ ನೋಡುತ್ತಿದ್ದ ಗಿರಿಜೆ–ಗಂಗವ್ವ ಇಬ್ಬರೂ ಸಾಲು ಗುಂಡಿನೇಟಿನಂತೆ ಹತ್ತಿರದಲ್ಲೇ ಕೇಳಿಬರುವ, ಪ್ರಚಂಡ ವೇಗದಿಂದ ಓಡಿ ಬರುವ ಕುದುರೆಯ ಖುರಪುಟಗಳ ಸದ್ದನ್ನು ಕೇಳಿ, ಆ ಸದ್ದು ಬಂದತ್ತ ನೋಡಿದರು. ನೋಡುತ್ತಿದ್ದ ಹಾಗೇ ಗಂಗವ್ವ ಚಿಟಾರನೆ ಚೀರಿ ಕೆಳಗುರುಳಿದಳು. ರಕ್ತದಲ್ಲಿ ಕಡೆದ ವಿಗ್ರಹದಂತೆ ಕತ್ತಿ ಧರಿಸಿ ಬಂದ ವೀರಣ್ಣನನ್ನು ಕಂಡು ಗಿರಿಜೆಯೂ ಗಾಬರಿಯಾದಳು. ವೀರಣ್ಣ ಅಂಗಳಕ್ಕೆ ಬಂದವನೇ, ಕುದುರೆಯನು ಲಗಾಮು ಎಳೆದು ನಿಲ್ಲಿಸಿ,

" ಗಿರಿಜಾ....ಕಸ್ತೂರಣ್ಣ ಎಲ್ಲಿ? " ಎಂದು ಕೇಳಿದ.

" ದುರ್ಗಕ್ಕೆ ಹೋದರು. ಏನಾಯಿತು....ಅಲ್ಲಿ ಏನಾಯಿತು....? "

—ಆತುರ–ಭೀತಿಯಿಂದ ಏದುತ್ತಾ ಕೇಳಿದಳು ಗಿರಿಜೆ.

" ಆ....ಹೋಗೇ ಬಿಟ್ಟನೇ....ಗಿರಿಜಾ........ಅದೆಲ್ಲಾ ಹೇಳೋಕೆ ನನಗೆ ಪುರುಸೊತ್ತಿಲ್ಲ. ನಾನು ಬರೋವರೆಗೂ ಅತ್ತಿಗೆ ಪಕ್ಕ ಬಿಟ್ಟು ಕದಲ ಬೇಡ "

—ಎಂದು ಹೇಳಿದವನೇ, ಓಟದ ಆಯಾಸಕ್ಕೆ ಬುರುಗು ಕಾರುತ್ತಿದ್ದ ಕುದುರೆಯನ್ನು ಹಾಗೇ ತಿರುಗಿಸಿ ದುರ್ಗದತ್ತ ಓಡಿಸಿದ. ಗಿರಿಜಾ ಹಾಗೇ ನೆಲಕ್ಕೆ ಕುಸಿದಳು.

೧೧

ಕುದುರೆಯ ಪಕ್ಕವನ್ನು ಮೊಳಕಾಲುಗಳಿಂದ ಒತ್ತಿ ಹಿಡಿದು, ಅದರ ಕತ್ತಿನುದ್ದಕ್ಕೂ ಮೈ ಚಾಚಿ, ಗಾಳಿವೇಗದಲ್ಲಿ ಕುದುರೆಯನ್ನು ದುರ್ಗದತ್ತ ಓಡಿಸಿದ ಕಸ್ತೂರಿನಾಯಕ. ಅವನ ಕಣ್ಣು, ದೂರದಲ್ಲಿ ಕಾಣುವ, ಬತೇರಿ, ಕೋಟೆಸಾಲು, ಕೊತ್ತಲಗಳ ಕಿರೀಟವನ್ನು ಧರಿಸಿದ ದುರ್ಗದ ಬೆಟ್ಟದ ಸಾಲಿನಲ್ಲಿ ಕೀಲಿಸಿತ್ತು. ಅವನ ಓಟದ ದಾರಿಯಲ್ಲಿ ಗಿಡ ಮರಗಳು

ಕುದಿದವರಂತೆ ಗಿರ್ರೆಂದು ತಿರುಗಿ, ಹಿಂದಾಗಿ ಮರೆಯಾದುವು. ಗೋಣೂರಿನಿಂದ ದುರ್ಗಕ್ಕೆ ಒಂದೇ ಹಾರು ಹಾರಿದಂತೆ ಕಸ್ತೂರಿನಾಯಕ ದುರ್ಗದ ಬಳಿಸೇರಿದ. ಅವನು ರಂಗಯ್ಯನ ಬಾಗಿಲ ಬಳಿ ಸೇರುವ ವೇಳೆಗೆ, ತೆರೆದ ಬಾಗಿಲ ಬಳಿ ಕಾವಲವರನ್ನು ಕಾಣದೆ, ಪೇಟೆಯಲ್ಲಿ ಮೇಲು ದುರ್ಗದತ್ತ ಓಡುತ್ತಿದ್ದ ಜನಗಳನ್ನು ಕಂಡು, ಅವನ ಹೃದಯವೇ ಹಾರಿದಂತಾಯಿತು."

ಎಷ್ಟು ಜನ ! ಎಷ್ಟು ಜನ! ದುರ್ಗದಲ್ಲಿ ಅಷ್ಟೊಂದು ಜನರಿರಬಹುದೆಂದೂ ಕಸ್ತೂರಿನಾಯಕ ಊಹಿಸಿರಲಿಲ್ಲ. ನೀರು ನುಗ್ಗಿದ ಗೂಡಿನಿಂದ ಕಿಕ್ಕಿರಿದು ಹೊರಬಂದು ಹರಿವ ಇರುವೆಗಳ ಸಾಲಿನಂತಿತ್ತು ಬೀದಿಯಲ್ಲಿ ಹರಿವ ಜನ. ಅಷ್ಟು ಜನ ತುಂಬಿ, ಗಜಿಬಿಜಿಯಾಗಿದ್ದರೂ ಗಾಳಿಯಲ್ಲಿ ಏನೋ ಅಶುಭ ಭೀತಿ ಬೆರೆತು, ದುರ್ಗಕ್ಕೆ ಮಸಣಕಳೆಯನ್ನು ತಂದಿತು. ಅಂಗಡಿ, ಮುಂಗಟ್ಟು, ಮನೆಗಳ ಬಾಗಿಲು ಮುಚ್ಚಿ, ಅರೆತೆರೆದ ಕಿಟಕಿಗಳಿಂದ ಹೆದರಿಸುವ ವಸ್ತುವನ್ನು ನೋಡುವ ಮಕ್ಕಳಂತೆ ಎಷ್ಟೋ ಜನ ಭೀತಿತುಂಬಿದ ಕಣ್ಣುಗಳಿಂದ ಇಣಿಕಿ ನೋಡುತ್ತಿದ್ದರು.

ಅತ್ತಿಂದಿತ್ತ, ಇತ್ತಿಂದತ್ತ ದಿಕ್ಕು ತಪ್ಪಿ ಓಡುತ್ತಿತ್ತು ಜನತೆ; ಹುಚ್ಚಾಗಿ ಕೂಗಿ ಹುಯ್ಯಲಿಡುತ್ತಿತ್ತು. ಗದ್ದಲ ಕಂಡು ಏನೋ ಕುತೂಹಲದಿಂದ ದೊಡ್ಡವರೊಂದಿಗೆ ಬೀದಿಗೆ ನುಗ್ಗಿದ ಮಕ್ಕಳುಮರಿಗಳನ್ನು ಕಾಣದೆ, ಕಾಲಿಗೆ ಸಿಕ್ಕವರನ್ನು ತುಳಿಯುತ್ತ, ಅಡ್ಡಲಾದವರನ್ನು ಪಕ್ಕಕ್ಕೆ ತಳ್ಳುತ್ತಾ, ಯಾರ ಕಿರಿಚಾಟ, ಅರಚಾಟಗಳೂ ಒಬ್ಬರ ಕಿವಿಗೂ ಬೀಳದೆ ನುಗ್ಗುತ್ತಿದ್ದರು.

ಈ ಗದ್ದಲದೊಂದಿಗೆ ಕೆಳದುರ್ಗದಲ್ಲಿ ಅಲ್ಲಲ್ಲಿದ್ದ ಬತೇರಿಗಳಿಂದ ಮೇಲು ದುರ್ಗದತ್ತ ಧಾವಿಸುತ್ತಿದ್ದ ಸೈನಿಕರ ಕುದುರೆಗಳ ನುಗ್ಗಾಟ ಅವುಗಳ ಖುರಪುಟದ ಧ್ವನಿಯೂ ಹತ್ತಾರು ಕುದುರೆಗಳು ಧೂಳುಕವಿಸಿ ಗುಂಪಿನಲ್ಲಿ ನುಗ್ಗಿದಾಗ, ಜನ ತಮ್ಮ ಮೇಲೇ ಮೃತ್ಯುಕವಿದು ಬಂದಿತೇನೋ ಎಂಬಂತೆ ಚೀರುವರು; ಬಯ್ಯುವರು; ಶಪಿಸುವರು.

ಇದರ ನಡುವೆ ಆಗಾಗ ಮೇಲು ದುರ್ಗದಲ್ಲಿ ಹಾರುತ್ತಿದ್ದ ಫಿರಂಗಿಯ ಭಯಂಕರ ಢಂಕಾರ ಕೇಳಿದಾಗ, ಓಡುವವರು ತಟಕ್ಕನೆ ನಿಂತು

ಓಡುತ್ತಿದ್ದ ದಿಕ್ಕು ಬದಲಿಸಿ ಓಡುವರು; ತಮಗೇ ಗುಂಡಿನೇಟು ತಗುಲಿದಂತೆ ಕೂಗುವರು.

ಈ ಕೋಲಾಹಲದಲ್ಲಿ, ದಿಕ್ಕು ತಪ್ಪಿದ ಓಟದಲ್ಲಿ ಯಾರನ್ನು ಕೇಳಬೇಕು, ಯಾರಿಗೆ ಯಾರು ಹೇಳಬೇಕು? ತಮ್ಮ ಕೂಗು ವಿನಾ, ಇನ್ನೊಬ್ಬರ ಮಾತು ಬೇಕಿಲ್ಲದ ಆ ಹೊತ್ತಿನಲ್ಲಿ ಕೋಟಿ ಕಿವಿಗಳಿದ್ದೂ ಕಿವುಡು, ಕೋಟಿ ಕಣ್ಣುಗಳಿದ್ದೂ ಕುರುಡು.

ಓಡುವ ಜನರ ಜೊತೆಯಲ್ಲೇ ತಾನೂ ಕುದುರೆಯನ್ನು ಓಡಿಸುತ್ತಾ ಕೇಳಿದ—

" ಏನಾಯಿತು? ಏನು ಅನಾಹುತವಾಯಿತು? "

"ದಳವಾಯಿಗಳು ಓಲಗದಲ್ಲಿ ಓಬಣ್ಣನಾಯಕರ ಕೊಲೆಮಾಡಿರಂತೆ"

—ಎಂದು ಹೇಳಿದ ಒಬ್ಬ ನಿಂತು ಮಾತನಾಡುವುದಕ್ಕೂ ಹೊತ್ತಿಲ್ಲದೆ, ಸಾವು ಬೆನ್ನಟ್ಟಿದವನಂತೆ ಓಡುತ್ತಾ.

" ನಾಗತಿಯವರು ಹೊಂಡದಲ್ಲಿ ಬಿದ್ದು ಸತ್ತರಂತೆ "

—ಎಂದು ಓಡಿದ ಮತ್ತೊಬ್ಬ.

ತುಂಬಿದ ಓಲಗದಲ್ಲಿ ನಾಯಕರ ಕೊಲೆಯಾಯಿತು, ನಾಗತಿಯವರು ಹೊಂಡದಲ್ಲಿ ಬಿದ್ದು ಸತ್ತರು!—ಅದನ್ನು ಕೇಳಿ ಕಸ್ತೂರಿನಾಯಕನ ಹೃದಯ ಬಿರುಗಾಳಿಗೆ ಸಿಕ್ಕಿದಂತೆ ಕಂಪಿಸಿತು. ಕುದುರೆ ಓಡುತ್ತಲೇ ಇತ್ತು.

ಉತ್ಸವಾಂಬಾ ದೇವಾಲಯದ ಬಳಿ ಬರುವಾಗ ನೂರಾರು ಕೊರಲುಗಳು ಅದೇ ಕೂಗು ಕೂಗುತ್ತ ಹುಚ್ಚು ಹಿಡಿದವರಂತೆ, ಮೇಲು ದುರ್ಗದತ್ತ ಓಡುತ್ತಿರುವುದು ಕಾಣಿಸಿತು.

ಒಂದು ಗಳಿಗೆ, ಹೀಗಿಲ್ಲದಿರಬಹುದು, ಜನ ಹುಚ್ಚು ಕೂಗುತ್ತಿರಬಹುದು ಎನಿಸಿತು. ಸಿದ್ದಯ್ಯನ ಬಾಗಿಲ ಕಡೆಯಿಂದ ಬರುತ್ತಿದ್ದ ಸೈನಿಕನೊಬ್ಬನನ್ನು ತಡೆದು, ಕತ್ತಿಯನ್ನು ಝುಳಪಿಸುತ್ತಾ ಹುಚ್ಚಾಗಿ ಕೇಳಿದ—

" ಸುಳ್ಳು ಹೇಳಬೇಡ. ಏನಾಯಿತು ಹೇಳು."

ಅವನ ಭಯಂಕರ ಮುಖಮುದ್ರೆ, ಕೈಯಲ್ಲಿ ಝುಳಪಿಸುವ ಬಿಚ್ಚುಗತ್ತಿಯನ್ನು ಕಂಡು ಸೈನಿಕನ ಎದೆಯೂ ನಡುಗಿ ನಾಲಗೆಯಲ್ಲಿ ದ್ರವಬತ್ತಿ ಮಾತಾಡಲಾಗದೆ ತೊದಲಿದ.

" ಬೇಗ, ಬೇಗ ಹೇಳು ನಾಯಿ "

—ಎಂದು ಅಬ್ಬರಿಸಿದ ಕಸ್ತೂರಿನಾಯಕ.

" ಮು....ಮು....ಮು.... ದ್ದಣ್ಣನ .....ಕ....ಕಡೆಯವರು....ನಾ....ಯಕರನ್ನು ಕೊಲೆಮಾಡಿದರು...."

" ನಿಜವೇ ? "

—ಮೈಯಶಕ್ತಿಯನ್ನೆಲ್ಲಾ ಬಿಟ್ಟು ಕೂಗಿ ಕೇಳಿದ ಕಸ್ತೂರಿನಾಯಕ.

" ನಿಜ....ಉಚ್ಚಂಗಮ್ಮನಾಣೆ. "

ಆ ಮಾತು ಕೇಳುತ್ತಿದ್ದಂತೆಯೇ ಕಸ್ತೂರಿನಾಯಕನ ಅಬ್ಬರವೆಲ್ಲಾ ಒಮ್ಮೆಲೆ ಕುಸಿದು ಹೋಯಿತು. ಕ್ರೋಧ ಮಾಯವಾಗಿ, ದುಃಖದ ಬಿರುಗಾಳಿ ಬೀಸಿತು. ಉನ್ಮತ್ತ ಶೋಕ ಅವನ ಮೈಯನ್ನು ಹಿಡಿದು ಝೋಂಪಿಸಿತು. ಪೆಟ್ಟುತಿಂದ ಕಾಡ ಪಶುವಿನಂತೆ ಕೊಸಕ್ಕನೆ ದೇವಾಲಯ ದತ್ತ, ಉನ್ಮತ್ತನೇತ್ರಗಳಿಂದ ನೋಡುತ್ತಾ ಚೀರಿದ.

" ದುರ್ಗಿ........ ದುರ್ಗಿ........ ದುರ್ಗಿ........ ನಿನಗೆ ನನ್ನ ನಾಯಕರ ನೆತ್ತರೇ ಬೇಕಾಗಿತ್ತೆ ? ನೆತ್ತರು ಬೇಕೇ ನಿನಗೆ........ರಕ್ತದಾಹವೇ ನಿನಗೆ....ಕುಡಿ....ಕುಡಿ....ಎಷ್ಟು....ರಕ್ತ ಕುಡಿಯುತ್ತೀಯೋ ಕುಡಿ.... ನಾಯಕರ ಜೊತೆಗೆ ನನ್ನ ರಕ್ತವನ್ನೂ ಕುಡಿ, ತೃಪ್ತಳಾಗು ರಣದುರ್ಗಿ. "

—ಎಂದು ಚೀರುತ್ತಾ, ದೇವಾಲಯದ ಮಹಾದ್ವಾರದ ಬಾಗಿಲ ಸಂದಿಗೆ ಕೈಯಲ್ಲಿದ್ದ ಕತ್ತಿಯನ್ನು ಸಿಕ್ಕಿಸಿ, ಹತ್ತು ಹೆಜ್ಜೆ ಹಿಂದೆ ಸರಿದು, ಒಂದೇ ಹಾರಿಗೆ ಕತ್ತಿಯ ಮೇಲೆ ಬಿದ್ದ. ಹರಿತವಾದ ಕತ್ತಿ ಅವನ ಹೃದಯವನ್ನು ಕತ್ತರಿಸಿ, ಬೆನ್ನಲ್ಲಿ ಹೊರಬಂದು ಛಿಲ್ಲೆಂದು ರಕ್ತಕಾರಿತು. ಕಸ್ತೂರಿನಾಯಕನ ದೇಹ, ಕತ್ತಿಗೆ ಸಿಕ್ಕಿ ತೂಗಾಡುತ್ತಾ ಕಾಲುಗಳನ್ನು ಝಾಡಿಸುತ್ತಾ ಹೊಯ್ದಾಡಿತು.

" ಅಣ್ಣಾ....ಅಣ್ಣಾ....ಓ....ಅಣ್ಣಾ....! "

—ಎಂದು ಕುದುರೆಯ ಮೇಲೆ ಕುಳಿತಿದ್ದಂತೆಯೇ ಕೂಗಿಕೊಂಡು ಓಡಿಬಂದ ವೀರಣ್ಣ, ಕತ್ತಿಗೆ ಜೋತುಬಿದ್ದ ಅಣ್ಣನ ದೇಹವನ್ನು ಕಂಡು–

" ಅಯ್ಯೋ ಅಣ್ಣಾ........! "

–ಎಂದು ಚೀರಿ, ಕುದುರೆಯ ಮೇಲೆ ಕುಳಿತಿದ್ದಂತೆಯೇ ಕೆಳಗುರುಳಿದ.

ಮಿಂಚಿನ ವೇಗದಲ್ಲಿ ನಡೆದ ಈ ಘೋರವನ್ನು ಕಂಡ ಜನತೆ, ನುಡಿಸತ್ತು ಕಣ್ಣರಳಿಸಿ ನೋಡಿತು. ನೋಡುತ್ತಲೇ ಇತ್ತು. ನೋಡು

ವವರು ನೋಡುತ್ತಿದ್ದರು, ಓಡುವವರು ಓಡುತ್ತಿದ್ದರು. ಹುಚ್ಚುಹಿಡಿದಂತೆ ಜನ "ಹೋ" ಎಂದು ಚೀರುತ್ತಿತ್ತು.

೧೨

ಮಧ್ಯಾಹ್ನದ ಊಟಕ್ಕೆಂದು, ಕೊಯಿಲಾಗುತ್ತಿದ್ದ ಹೊಲದಿಂದ ಮನೆಗೆ ಬಂದ ಪಾಪನಾಯಕ ಅಂಗಳದಲ್ಲಿ ಕಡೆದಿದ್ದ ಭೀತಿಯ ವಿಗ್ರಹಗಳಂತೆ ಕುಳಿತಿದ್ದ ಗಂಗೆ, ಗಿರಿಜೆಯರನ್ನು ಕಂಡು ಗಾಬರಿಯಾದ.

"ಏನಾಯಿತು ಗಿರಿಜಾ ?"

—ಅವನ ಮಾತಿಗೆ ಉತ್ತರ ಕೊಡಲಾಗದೆ ಗಿರಿಜಾ, ಮೌನವಾಗಿ ದುರ್ಗದತ್ತ ಕೈತೋರಿಸಿದಳು. ಪಾಪನಾಯಕನೂ ಅತ್ತ ನೋಡಿದ. ಮುಪ್ಪಿನ ಮಂಕು ಕವಿದ ಅವನ ಕಣ್ಣುಗಳಿಗೆ ಏನೂ ಕಾಣಲಿಲ್ಲ. ಅಸ್ಪಷ್ಟವಾದ ಜನರ ಕೂಗಿನ ಸದ್ದು ಮಾತ್ರ ನೆರೆತುಂಬಿ ಹರಿದ ಹೊಳೆಯ ಸದ್ದಿನಂತೆ ಕೇಳಿಸಿತು.

"ಅದೇನು ಸದ್ದು? ಅಪ್ಪಯ್ಯ ಎಲ್ಲಿ? ಗಂಗವ್ವ ಏಕೆ ಹಿಂಗೆ ಕೂತಿದಾಳೆ?"

ಗಳಿಗೆ ಗಳಿಗೆಗೆ ಕಾರಣವರಿಯದೆಯೇ ಎದೆಯಲ್ಲಿ ಉಕ್ಕುತ್ತಿದ್ದ ಗಾಬರಿಯನ್ನು ಸಹಿಸಲಾರದೆ, ಮೂಲೆ ಮೂಲೆಯಾಗಿ ಪ್ರಶ್ನೆಯನ್ನು ಕೇಳಿದ ಪಾಪನಾಯಕ. ಆದರೆ ಅವನ ಪ್ರಶ್ನೆಗಳಿಗೆ ಯಾರೂ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಉತ್ತರ ಹೇಳಿದರೆ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಪಾಪನಾಯಕನೂ ಇರಲಿಲ್ಲ. ಅವನೂ ಅಂಗಳದಲ್ಲಿ ಕುಸಿದು ಅವರೊಂದಿಗೆ ಕುಳಿತ.

ವೈಶಾಖಮಾಸದ ಉರಿ ಬಿಸಿಲು, ಎದೆಗೆಡಿಸುವ ಮೌನವನ್ನು ಹೊದ್ದು ಮಲಗಿದ ಬಯಲನ್ನು ನೆಕ್ಕುತ್ತಿತ್ತು.

ಇದ್ದಕ್ಕಿದ್ದಂತೆಯೇ ಮೌನವನ್ನು ಸೀಳಿ ಕೇಳ ಬಂದಿತು, ಹನುಮಪ್ಪನ ಉನ್ಮತ್ತ ವಿಕಾರ ನಗು ಬೆರೆತ ಹಾಡು—

ದಂಡಿನಾ ಜೊತೆಗ್ಹೋದ ನನರಾಯ ಮನೆಗಿನ್ನು ಬರಲಿಲ್ಲ
ಎಲ್ಲವನೆ ಹೇಳೆ ಪಂಜರದ ಗಿಳಿಯಕ್ಕ ॥
ಪಂಜರದ ಗಿಳಿಯಕ್ಕ ಮಾತಾಡೆ, ಎಲ್ಲವನೆ ನನ ರಾಯ
ದುರ್ಗದಲೊ ಸ್ವರ್ಗದಲ್ಲೋ ॥

ಅವಳ ಹಾಡನ್ನು ಕೇಳಿ, ಕೇಳಿದವರ ಎದೆ ಭಯದಿಂದ ನಡುಗಿತು. ಗಿರಿಜೆಯ ಎದೆಯಲ್ಲಿ ಕವಿದ ಭೀತಿ, ಸಿಟ್ಟಾಗಿ ಉಕ್ಕಿ—

"ಹಾಳ್ಮುಂಡೆ. ಹಾಡು ಹೇಳಾಕೆ ಇದೇನೇ ಹೊತ್ತು? ಅಪಶಕುನದ ಗೂಬೆ."

—ಎಂದು ಗದರಿಸುತ್ತಾ, ದೂರದ ಹೊಂಗೆಯ ಮರದ ನೆರಳಿನಲ್ಲಿ ಮಣ್ಣಿನಲ್ಲಿ ಹೊರಳಾಡುತ್ತಿದ್ದ ಹನುಮವ್ವನತ್ತ ಕಲ್ಲು ತೆಗೆದುಕೊಂಡು, ಬೀರಿದಳು. ವೇಗವಾಗಿ ಚಿಮ್ಮಿದ ಕಲ್ಲು ಹನುಮವ್ವನ ಹಣೆಗೆ ಬಡಿದು, ಅವಳ ಹಣೆಯಿಂದ ರಕ್ತ ಚಿಮ್ಮಿತು. ನೋವಿನಿಂದ ಹುಚ್ಚಾಗಿ ಚೀರಿದ ಹನುಮವ್ವ, ಮರುಗಳಿಗೆಯೇ ಅದನ್ನು ಮರೆತು, ನೋವಿನಿಂದ ಮತ್ತಷ್ಟು ವಿಕಾರವಾದ ಧ್ವನಿಯಲ್ಲಿ ನಗುತ್ತಾ—

ಜರಿಯಶಲ್ಯವ ಹೊದ್ದು ಜೋಡಿ ವೀಳ್ಯವ ಮೆದ್ದು
ಗೆದ್ದು ಬರುತೀನಂತ ಮಡದೀಗೆ ಸರದಾರ ನುಡಿದಾ ।
ಸರದಾರ ನುಡಿದ, ಕುದುರೆಯ ಬೆನ್ನೇರಿ ನಡೆದಾ ।
ಸರದಾರ ನುಡಿದ, ಸರದಾರ ನಡೆದಾ
ಗುಂಡಿನ ಸದ್ದಾಗಿ ಗಾಳೀಲಿ ಗಾಳ್ಯಾಗಿ ಆಡಡಿ ಹೋದಾ ।

—ಎಂದು ಹಾಡುತ್ತಾ ಎತ್ತಲೋ ಓಡಿ ಹೋದಳು. ಒಂದು ಗಳಿಗೆ ಅವಳ ಹಾಡಿನ ದನಿ, ನಗುವಿನ ಸದ್ದು ಗಾಳಿಯಲ್ಲಿ ತೇಲಿ ಕರಗಿ ಹೋಯಿತು. ಮತ್ತೆ ಭಯಂಕರ ಮೌನ ಬಯಲನ್ನು ಆವರಿಸಿತು. ಆ ಮೂವರೂ, ಗಳಿಗೆಗಳಿಗೆಗೆ ಎದೆಯ ತಿದಿಯನ್ನು ಮತ್ತಷ್ಟು ವೇಗವಾಗಿ ಒತ್ತುವ ಭೀತಿಯಲ್ಲಿ ಬೆಂಡಾಗುತ್ತಾ ಕುಳಿತಿದ್ದವರು ದೂರದಲ್ಲಿ ಕೇಳಿ ಬಂದ ಕುದುರೆಯ ಸದ್ದನ್ನು ಕೇಳಿ, ಹುಲಿಯ ವಾಸನೆ ಹಿಡಿದ ಚಿಗರಿಯಂತೆ ಕಣ್ಣರಳಿಸಿ ನೋಡಿದರು. ಕುಳಿತಿದ್ದ ಗಿರಿಜಾ ಆತುರದಲ್ಲಿ ಸಿಡಿದು ನಿಂತು ಸದ್ದು ಬರುತ್ತಿದ್ದ ಕಡೆ ನೋಡಿದಳು.

ದೂರದಲ್ಲಿ ಕುದುರೆಯೊಂದು ಬರುತ್ತಿತ್ತು. ಆ ಕುದುನೆಯ ಬಣ್ಣದಿಂದಲೇ ಗಿರಿಜೆ ಅದು ವೀರಣ್ಣನ ಕುದುರೆಯೆಂದು ಗುರುತಿಸಿದಳು. ತನ್ನ ತೊಡೆಯ ಮೇಲೆ ಏನನ್ನೋ ಮಲಗಿಸಿಕೊಂಡು, ಒಂದು ಕೈಯಲ್ಲಿ ಅದನ್ನು ಮತ್ತೊಂದು ಕೈಯಲ್ಲಿ ಲಗಾಮನ್ನು ಹಿಡಿದು ನಿಧಾನವಾಗಿ ಕುದುರೆಯನ್ನು ನಡಸಿಕೊಂಡು ಬರುತ್ತಿದ್ದ ಆ ವೀರಣ್ಣನನ್ನು ಕಂಡು ಗಿರಿಜೆಯ

ಎದೆ ಡವಡವ ಬಡಿದುಕೊಳ್ಳಲಾರಂಭಿಸಿತು. ಅಲ್ಲಿಗೆ ಓಡಿ ಹೋಗಿ ಅದೇನೋ ನೋಡಬೇಕು ಎಂದಳು. ಆದರೆ ನೆಲಕ್ಕೆ ಬೆಸೆದಂತೆ ಬಿಗಿದಿತ್ತು ಅವಳ ಕಾಲು. ತಾನಾಗಿಯೇ ಬಿರಿದ ಬಾಯ ಮೇಲೆ ಅಂಗೈಯನ್ನು ಒತ್ತಿ ನೋಡುತ್ತಲೇ ನಿಂತಳು.

ನಿಧಾನವಾಗಿ ನಡೆದು ಕುದುರೆ ಅಂಗಳಕ್ಕೆ ಬಂದಿತು. ತೊಡೆಯ ಮೇಲಿದ್ದುದನ್ನು ಹೆಗಲ ಮೇಲೆ ಹೊತ್ತುಕೊಂಡು ವೀರಣ್ಣ ಕುದುರೆಯಿಂದ ಕೆಳಗಿಳಿದ. ಅವರಣ್ಣ ಕಸ್ತೂರಿನಾಯಕ ಅವನ ಹೆಗಲ ಮೇಲೆ ಜೋಲು ಬಿದ್ದಿದ್ದ. ಅವನ ಎದೆಯನ್ನಿರಿದ ಕತ್ತಿ ಬೆನ್ನಲ್ಲಿ ಹೊರಬಂದು ಬಿಸಿಲಿನಲ್ಲಿ ಹೊಳೆಯುತ್ತಿತ್ತು. ಕಚ್ಚಿದ ಹಲ್ಲುಗಳ ಸಂದಿನಿಂದ ಜೋಲು ಬಿದ್ದ ನಾಲಗೆಯಿಂದ ಇನ್ನೂ ರಕ್ತ ಹನಿಹನಿಯಾಗಿ ತೊಟ್ಟಿಕ್ಕುತ್ತಿತ್ತು.

ಅದನ್ನು ಕಂಡ ಗಂಗವ್ವ ಒಂದೇ ಒಂದು ಬಾರಿ ಮುಗಿಲು ಹರಿಯುವಂತೆ ಚೀರಿದಳು. ಸೂರಿನ ನೆರಳಿನಲ್ಲಿ ಸರಿದು ಕುಳಿತಿದ್ದ ಪಾಪನಾಯಕ “ನನ್ನ ಸಂಸಾರಾನ ಒಗ್ಗಾಲಿ ಮಾಡಿದೆಯಾ ಶಿವನೇ” ಎಂದು ಚೀರಿ ಗೋಡೆಗೆ ಹಣೆಯನ್ನು ಘಟ್ಟಿಸಿದ.

ಗಿರಿಜೆ ನೋಡುತ್ತಲೇ ಇದ್ದಳು. ಬಿರಿಯುವಂತೆ ಅರಳಿದ ಅವಳ ಕಣ್ಣಲ್ಲಿ ಬಿಸಿಲು ತುಂಬುತ್ತಿತ್ತು. ನೋಡುತ್ತಲೇ ಇದ್ದಳು. ನೋಡ ನೋಡುತ್ತಾ ಬಿಸಿಲಿನಲ್ಲಿಯೂ ಅವಳ ಕಣ್ಣಲ್ಲಿ ಕತ್ತಲೆ ತುಂಬಿತು.

ಪ್ರಕಟನೆಗಳು

ಪ್ರಕಟವಾಗಿವೆ

ಕಂಬನಿಯ ಕುಯಿಲು (ಎರಡನೆಯ ಮುದ್ರಣ) — ತ. ರಾ. ಸು.

*ಜೀವನದಿ — ಅ. ನ. ಕೃ.

*ಓದಿದ ಹುಡುಗಿ — ನರೇಂದ್ರಬಾಬು

*ಬನಶಂಕರಿ — ನಿರಂಜನ

*ಮುತ್ತೈದೆ — ಕೃಷ್ಣಮೂರ್ತಿ ಪುರಾಣಿಕ

ಹಿಂದಿರುಗಿ ಬರಲಿಲ್ಲ — ಕೋ. ಚೆನ್ನಬಸಪ್ಪ

ಗೃಹಲಕ್ಷ್ಮಿ (ಎರಡನೆಯ ಮುದ್ರಣ) — ಅ. ನ. ಕೃ.

ತಿರುಗುಬಾಣ — ತ. ರಾ. ಸು.

ರಕ್ತರಾತ್ರಿ (ಎರಡನೆಯ ಮುದ್ರಣ)— ತ. ರಾ. ಸು.

ಮಿಸ್ ಲೀಲಾವತಿ — ಶ್ರೀನಿವಾಸರಾವ್ ಕೊರಟಿ

ಜೇವರಿನ ಬೆಲೆ — ಕೃಷ್ಣಮೂರ್ತಿ ಪುರಾಣಿಕ

ಸೌಭಾಗ್ಯ — ನಿರಂಜನ

ಅವಳೋ! ಇವಳೋ!— ದಕ್ಷಿಣಾಮೂರ್ತಿ

ಕೊನೇ ನಮಸ್ಕಾರ—ನಿರಂಜನ

ಅಚ್ಚಿನಲ್ಲಿ

ಮನಸೋತ ಮನದನ್ನೆ — ಕೃಷ್ಣಮೂರ್ತಿ ಪುರಾಣಿಕ

*ಪ್ರತಿಗಳು ಮುಗಿದಿವೆ.



ತ. ರಾ. ಸು.

ಮನೆಗೆ ಬಂದ ಮಹಾಲಕ್ಷ್ಮಿ, ರಕ್ತತರ್ಪಣ, ಬೆಂಕಿಯ ಬಲೆ, ಹಂಸಗೀತೆ, ನೃಪತುಂಗ, ಬಿಡುಗಡೆಯ ಬೇಡಿ ಮುಂತಾದ ಕಾದಂಬರಿಗಳನ್ನು ಬರೆದು ಸುಪ್ರಸಿದ್ಧರಾಗಿರುವ ಶ್ರೀ ತ.ರಾ.ಸು. ಅವರು ೧೯೨೦ ರಲ್ಲಿ ಜನಿಸಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ ರಾಗಿದ್ದ ದಿ. ತಳುಕಿನ ವೆಂಕಣ್ಣಯ್ಯನವರ ಮನೆತನಕ್ಕೆ ಸೇರಿದ ಇವರಿಗೆ ಚಿಕ್ಕವಯಸ್ಸಿನಲ್ಲೇ ಸಾಹಿತ್ಯ ಶಕ್ತಿ ಅಂಕುರಿಸಿತು.

ಭಾವಗರ್ಭಿತವಾದ ಭಾಷೆ, ಸ್ವಾರಸ್ಯವಾದ ವರ್ಣನೆ, ಸಂಭಾ ಷಣೆ, ಎಂತಹ ಸನ್ನಿವೇಶವನ್ನಾದರೂ ಆತ್ಮೀಯತೆಯಿಂದ ಚಿತ್ರಿಸ ಬಲ್ಲ ನೊನೆಚಾದ ಶೈಲಿ, ತ. ರಾ. ಸು. ಅವರಿಗೆ ಸಹಜವಾಗಿ ಸಾಧಿಸಿವೆ.

ಸಾಹಿತ್ಯ ಸೃಷ್ಟಿಯಲ್ಲಿಯೇ ಸದಾ ಆಸಕ್ತಿವಹಿಸಿ ದುಡಿಯುತ್ತಿ ರುವ ಶ್ರೀ ತ. ರಾ. ಸು. ಅವರಿಂದ ಇನ್ನೂ ಅನೇಕ ಅತ್ಯುತ್ತಮ ಕೃತಿಗಳನ್ನು ಕನ್ನಡಿಗರು ನಿರೀಕ್ಷಿಸಬಹುದು.